ದಾಸಪಂಥ ಮತ್ತು ಚೈತನ್ಯಪಂಥ

_ಒಂದು ತೌಲನಿಕ ಅಧ್ಯಯನ

ಪಿಹೆಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯ,
ಹಂಪಿ.
ಇಲ್ಲಿಗೆ ಸಾದರಪಡಿಸಿದ ಸಂಶೋಧನಾ ಮಹಾಪ್ರಬಂಧ.

ಸಂಶೋಧಕರು

ಕಬ್ಬಿನಾಲೆ ಬಾಲಕೃಷ್ಣ ಭಾರದ್ವಾಜ

ಮಾರ್ಗದರ್ಶಕರು

ಪ್ರೊ|| ಎ. ವಿ. ನಾವಡ

ವಿಶ್ರಾಂತ ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦೧೨

ನೋಂದಣಿ ಸಂಖ್ಯೆ : ಕೆ.ಟಿ.ಎಸ್.ಎಂ-೦೦೦೬೬ ; ದಿನಾಂಕ : ೨೯.೧೨.೨೦೦೬

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನಾಕೇಂದ್ರ,

ಬಲ್ಮಠ, ಮಂಗಳೂರು-೫೭೫೦೦೧.

ದಾಸಪಂಥ ಮತ್ತು ಚೈತನ್ಯಪಂಥ

–ಒಂದು ತೌಲನಿಕ ಅಧ್ಯಯನ

ಪಿಹೆಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯ,
ಹಂಪಿ.

ಇಲ್ಲಿಗೆ ಸಾದರಪಡಿಸಿದ ಸಂಶೋಧನಾ ಮಹಾಪ್ರಬಂಧ.

ಸಂಶೋಧಕರು

ಕಬ್ಬಿನಾಲೆ ಬಾಲಕೃಷ್ಣ ಭಾರದ್ವಾಜ

ಮಾರ್ಗದರ್ಶಕರು

ಪ್ರೊ॥ ಎ. ವಿ. ನಾವಡ.
ವಿಶ್ರಾಂತ ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾನಿಲಯ,ಹಂಪಿ.

ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦೧೨

ನೋಂದಣಿ ಸಂಖ್ಯೆ : ಕೆ.ಟಿ.ಎಸ್.ಎಂ–೦೦೦೭೭ ; ದಿನಾಂಕ : ೨೯. ೧೨. ೨೦೦೭.

ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾಕೇಂದ್ರ,

ಬಲ್ಮಠ, ಮಂಗಳೂರು--೫೭೫೦೦೧.

ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಪಿಹೆಚ್.ಡಿ ಪದವಿಗಾಗಿ ಸಾದರಪಡಿಸಿದ 'ದಾಸಪಂಥ ಮತ್ತು ಚೈತನ್ಯಪಂಥ –ಒಂದು ತೌಲನಿಕ ಅಧ್ಯಯನ' ಎಂಬ ಶೀರ್ಷಿಕೆಯ ಈ ಸಂಪ್ರಬಂಧವು ನನ್ನ ಸ್ವತಂತ್ರ ಕೃತಿಯಾಗಿದ್ದು, ವಿಶ್ಲೇಷಣೆ ಮತ್ತು ಅಧ್ಯಯನದ ಫಲೋದಯವಾಗಿದೆ. ಮಂಗಳೂರು ತಿಯೋಲಾಜಿಕಲ್ ಸಂಶೋಧನಾಕೇಂದ್ರದಲ್ಲಿ ಪ್ರೊ. ಎ. ವಿ. ನಾವಡ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೊಮಾ ಅಥವಾ ತತ್ಸಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ, ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢೀಕರಿಸುತ್ತೇನೆ.

ಕಬ್ಬಿನಾಲೆ ಬಾಲಕೃಷ್ಣ ಭಾರದ್ವಾಜ

ಸಂಶೋಧಕರು.

ದಿನಾಂಕ : ೨೦. ೧೨. ೨೦೧೨

ಸ್ಥಳ : ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ,

ಬಲ್ಮಠ, ಮಂಗಳೂರು–೫೭೫೦೦೧.

ಯೋಗ್ಯತಾ ಪತ್ರ

ಕಬ್ಬಿನಾಲೆ ಬಾಲಕೃಷ್ಣ ಭಾರದ್ವಾಜ ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ 'ದಾಸಪಂಥ ಮತ್ತು ಚೈತನ್ಯಪಂಥ–ಒಂದು ತೌಲನಿಕ ಅಧ್ಯಯನ' ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಪಿ.ಹೆಚ್.ಡಿ ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಪ್ರಬಂಧವು ಸಂಶೋಧಕರ ಸ್ವತಂತ್ರ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲಸ್ವರೂಪವಾಗಿದೆ. ಇವರು ಸಂಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಯಾವುದೇ ಪದವಿಗಾಗಲೀ ಅಥವಾ ಇನ್ನಿತರ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲ.

ದಿನಾಂಕ: ೨೦. ೧೨. ೨೦೧೨

ಸ್ಥಳ : ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರ.

ಬಲ್ಮಠ, ಮಂಗಳೂರು– ೫೭೫೦೦೧.

ಪ್ರೊ. ಎ. ವಿ. ನಾವಡ

ಸಂಶೋಧನಾ ಮಾರ್ಗದರ್ಶಕರು.

ಪುಟ ತೆರೆದಾಗ.....

ಅಧ್ಯಾಯ : ೪

ಅಧ್ಯಾಯ : ೧

ಅಧ್ಯಯನದ ಪರಿಗ್ರಹಿಕೆ

೧.೧ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವಿಧಾನ.

ಗುರು ಬಕುತಿಬೇಕು, ಹಿರಿಯರ ಕರುಣವಿರಬೇಕು,
ಹರಿಕಥೆಗಳ ನಿತ್ಯ ಕೇಳುತ ಇರಬೇಕು,
ವಿರಕುತಿಬೇಕು, ವಿಷ್ಣುವಿನಾರಾಧನೆ ಬೇಕು,
ಪರಮಂತ್ರ ಜಪಬೇಕು, ತಪಬೇಕು ಪರಗತಿಗೆ,
ಪರಿಪರಿ ವ್ರತಬೇಕು, ಸಿರಿ ಹಯವದನನ
ಪರಮಾನುಗ್ರಹ ಬೇಕು ವಿಷಯನಿಗ್ರಹ ಬೇಕು ॥ –ಶ್ರೀವಾದಿರಾಜರು

ದೇಶದ ಸಾಧುಸಂತರು, ಮಹಾತ್ಮರು, ಸುಭಾಷಿತ ರಚಿತರಾದಿಯಾಗಿ ಹೇಳಿದ್ದು ಇದನ್ನೇ. ದಾರಿ ತೋರದವನು ದಾರಿ ತಿಳಿದವನಲ್ಲಿ ಕೇಳುತ್ತಾನೆ. ದಾರಿಯನ್ನು ತಿಳಿದವನು ತಿಳಿಯದವನಿಗೆ ಮಾರ್ಗದರ್ಶನವನ್ನು ನೀಡಿ ಮುಂದೆ ಹೋಗುವಂತೆ ಮಾಡುತ್ತಾನೆ. ಇದನ್ನೇ 'ಅನುಶಾಸನ ಶ್ರುತಿ'ಯೆಂದು ಪ್ರಾಚೀನರು ಹೇಳಿದರು. ಅನುಭಾವಿಗಳು, ಮಹಾತ್ಮರುಗಳೆಲ್ಲ ಬದುಕುವುದು, ಬಾಳುವುದು, ಚಿಂತನೆ ನಡೆಸುವುದು, ಕೃತಿ ರಚಿಸುವುದು, ಕೀರ್ತನೆ ಹಾಡುವುದು ಲೋಕಹಿತಕ್ಕಾಗಿ, ಲೋಕೋದ್ಧಾರಕ್ಕಾಗಿ. ಅನುಭಾವದ ಅಪೇಕ್ಷೆಯಿದ್ದವರು ಅನುಭಾವಿಗಳೊಂದಿಗೆ ದಾರಿಯನ್ನು ಕೇಳಿಕೊಂಡು ಜೊತೆಯಾಗಿ ಮುನ್ನಡೆಯುತ್ತಾರೆ. ಆ ಮೂಲಕವಾಗಿ ಲೌಕಿಕದಲ್ಲಿ ಅಲೌಕಿಕವನ್ನು ಕಾಣುವ ಪ್ರಯತ್ನವನ್ನು ಮಾಡುತ್ತಾರೆ. ಅದಕ್ಕೆ ಪೂರಕವಾದ ಪರಿಶ್ರಮದಿಂದ ಭಕ್ತಿಪಂಥವನ್ನು ಕಟ್ಟುತ್ತಾರೆ; ಜೊತೆಗೆ ಬೆಳೆಸುತ್ತಾರೆ. ಮುಕ್ತಿಯನ್ನು ಕಾಣಲು ತಾತ್ವಿಕ ಹೋರಾಟವನ್ನೂ ನಡೆಸುತ್ತಾರೆ. ಹೀಗೆ ಭಕ್ತಿಪಂಥವನ್ನು ಕಟ್ಟಿ, ತಾತ್ವಿಕ ನಿಲುವಿನೊಂದಿಗೆ ಸಮಾಜವನ್ನು ಉದ್ಧರಿಸಿದ ಪಂಥಗಳು ಭಾರತದ ನೆಲದಲ್ಲಿ ಅನಾದಿಯಿಂದಲೂ ಮುಂದುವರಿದುಕೊಂಡು ಬಂದಿವೆ. ಈ ನೆಲೆಯಲ್ಲಿ ದಕ್ಷಿಣಭಾರತದಲ್ಲಿ ಕರ್ನಾಟಕದ ದಾಸಪಂಥ ಮತ್ತು ಉತ್ತರಭಾರತದಲ್ಲಿ ಬಂಗಾಳದ ಚೈತನ್ಯಪಂಥಗಳೆಂಬ ಎರಡು ವೈಷ್ಣವಪಂಥಗಳು ಪ್ರಮುಖವಾಗುತ್ತವೆ.

ಪ್ರಸ್ತುತ ಉಭಯಪಂಥಗಳ ತುಲನಾತ್ಮಕ ವಿವೇಚನೆ ನನ್ನದು. ಇವೆರಡು ಪಂಥಗಳು ಶ್ರೀಹರಿ ಸರ್ವೋತ್ತಮತ್ವವನ್ನು ಸಾರಲುಹೊರಟಿದ್ದರೂ, ದಾಸಪಂಥವು ಚೈತನ್ಯಪಂಥಕ್ಕಿಂತ ಮೊದಲಿನದು. ಅಂದರೆ ದಾಸಪಂಥವು ಸುಮಾರು ೧೪ನೇ ಶತಮಾನದಿಂದ ಪ್ರಾರಂಭವಾಗುತ್ತದೆ. ಕೆಲವರು ಇದರ ಪ್ರಾಚೀನತೆಯನ್ನು ನರಹರಿತೀರ್ಥರಿಂದ ತಿಳಿಯುವುದು ಸೂಕ್ತವೆನ್ನುತ್ತಾರೆ. ಆದರೆ ನರಹರಿತೀರ್ಥರ ಮೂರು ರಚನೆಗಳನ್ನು ಪರಿಶೀಲಿಸಿದ ವಿದ್ವಾಂಸರು ವಿಶೇಷವಾಗಿ ಶ್ರೀನಿವಾಸ ಹಾವನೂರರು "ನರಹರಿತೀರ್ಥರ ರಚನೆಗಳನ್ನು ಒಪ್ಪುವುದು ಸಾಧ್ಯವಿಲ್ಲವೆಂದೂ ಅವುಗಳ ಭಾಷಿಕ ರಚನೆಗಳು ಅರ್ವಾಚೀನವೆಂದೂ ಬರೆಯುತ್ತಾರೆ.

ನರಹರಿತೀರ್ಥರು ಶ್ರೀಪಾದರಾಜರಿಗಿಂತ ನೂರು ವರ್ಷಗಳಷ್ಟು ಹಿಂದಿನವರಾದ್ದರಿಂದ, ದಾಸಸಾಹಿತ್ಯದ ಪ್ರಾಚೀನತೆಯನ್ನು ವೈಭವೀಕರಿಸುವ ದೃಷ್ಟಿಯಿಂದಲೋ ಏನೋ ಆ ಹಾಡುಗಳ ಸ್ವರೂಪ ಎಂಥದ್ದೆಂದು ಯೋಚಿಸದೆ ನರಹರಿತೀರ್ಥರೇ ಪ್ರಥಮ ಹರಿದಾಸರೆಂದು ಹೇಳುವುದು ವಾಡಿಕೆಯಾಗಿ ಬಿಟ್ಟಿತು. ನ್ಯಾಯೋಚಿತವಾಗಿ ಶ್ರೀಪಾದರಾಜರೇ ದಾಸಪಂಥದ ಆದ್ಯರು" ಎನ್ನುತ್ತಾರೆ.[೧] ಈ ಪಂಥಕ್ಕೆ ಸಮಾನವಾದ ವೈಷ್ಣವಪಂಥವೆನಿಸಿದ ಚೈತನ್ಯಪಂಥವು ಬಂಗಾಳದ ನೆಲದಲ್ಲಿ ಸುಮಾರು ೧೫ ನೇ ಶತಮಾನದಲ್ಲಿ ಹುಟ್ಟಿ, ಬೆಳೆದುಕೊಂಡು ಬಂದಿತು. ಈ ಎರಡೂ ಪಂಥಗಳು ವೈಷ್ಣವ ಪಂಥಗಳೆನಿಸಿ, ಭಗವದ್ಗೀತೆಯಲ್ಲಿ ಚಿಗುರೊಡೆದ ವೈದಿಕಸಂದೇಶವನ್ನು ಸರ್ವಸಮಾನವಾಗಿ ಸ್ವೀಕರಿಸಿದವು. ಅಲ್ಲದೆ ನಾಮಸಂಕೀರ್ತನ, ನಾಮಸ್ಮರಣ, ನಾಮಮಹಾತ್ಮ್ಯ, ಸಮೂಹ ವೃಂದಗಾನ, ಜನಮಿಲನ, ತಾಳವಾದ್ಯಸಂಗಮದ ಮೂಲಕವಾಗಿ ವ್ಯಷ್ಟಿಯಿಂದ ಸಮಷ್ಟಿಯ ಕಡೆಗೆ ಸಂಚರಿಸಿದ್ದು ಮಾತ್ರವಲ್ಲದೆ, ವಿಶ್ವಾತ್ಮಕವಾದ ಅನುಭೂತಿ ದರ್ಶನವನ್ನು ತೋರಿದವು. ಆಧ್ಯಾತ್ಮಿಕ ಭಕ್ತಿಪರಂಪರೆಯಲ್ಲಿ ಈ ಪಂಥಗಳು ನೀಡಿದ ತರ್ಕಶುದ್ಧಾತ್ಮಕ ತತ್ತ್ವಜ್ಞಾನ, ಸೂಕ್ಷ್ಮರೀತಿಯ ನೀತಿಮೀಮಾಂಸೆಯಿಂದ ಮೂಡಿಸಿದ ನಿರ್ಮಲ ವಾತಾವರಣವು ಭಾರತೀಯ ಭಕ್ತಿಪರಂಪರೆಗಳ ಬೆಳವಣಿಗೆಯಲ್ಲಿ ಮಹತ್ವಪೂರ್ಣವಾದುದು.

ಈ ಎರಡು ಪಂಥಗಳಲ್ಲಿ ನಮ್ಮ ನಾಡಿನ ಜನತೆಗೆ ಮೊದಲು ಪರಿಚಯವಾದುದು ದಾಸಪಂಥವೇ ಹೊರತು ಚೈತನ್ಯಪಂಥವಂತೂ ಅಲ್ಲ. ಇದಕ್ಕೆ ಕಾರಣವೆಂದರೆ ದಾಸಪಂಥವು ಕನ್ನಡನೆಲದಲ್ಲಿ ಹುಟ್ಟಿಬೆಳೆದು ಸಾಮಾಜಿಕವಾಗಿ, ಆಧ್ಯಾತ್ಮಿಕವಾಗಿ ಪರಿಚಯವಾದ ರೀತಿ. ಇದರ ಪರಿಣಾಮವೆಷ್ಟೆಂದರೆ, ಮಾನವನು ತನಗೊದಗಿದ ಬವಣೆಯನ್ನು ತೊಲಗಿಸಲು ದಾಸಕೀರ್ತನೆಗಳನ್ನೇ ಭಜಿಸುತ್ತಿದ್ದನು. ದಿನಬೆಳಗು ಹಾಗೂ ಮುಸ್ಸಂಜೆಯಲ್ಲಿ ದಾಸಕೀರ್ತನೆಗಳನ್ನು ಹಾಡುವುದು ಅವನ ದಿನಚರಿಯಾಗಿತ್ತು. ಹಾಗಾಗಿ ಶ್ರೀಪಾದರಾಯರಿಂದ ಹಿಡಿದು ಕನಕ, ಪುರಂದರ, ವಾದಿರಾಜ, ರಾಘವೇಂದ್ರತೀರ್ಥರಾದಿಯಾಗಿ ನೂರಾರು ದಾಸಕೀರ್ತನೆಗಳ ಪರಿಚಯ ಕನ್ನಡನಾಡಿನ ಜನರಿಗೆ ಸುಲಭವಾಗಿಯೇ ತಿಳಿದಿತ್ತು. ಅಷ್ಟೇ ಅಲ್ಲದೆ ಸಮಾಜದ ಬಹುವರ್ಗಕ್ಕೆ ತಾಳಗಳಲ್ಲಿ ಹಿಡಿತ, ರಾಗಪರಿಜ್ಞಾನ, ಸಾಹಿತ್ಯದ ಸ್ಪಷ್ಟತೆ, ಛಂದೋವಿವೇಕವಲ್ಲದೆ ಇನ್ನೂ ಹಲವು ಸಾಹಿತ್ಯಾಂಶಗಳು ಪರಿಚಿತವಾಗಿದ್ದುದಕ್ಕೆ ದಾಸಕೀರ್ತನೆಯ ಪ್ರಭಾವವೇ ಕಾರಣವೆನ್ನಬಹುದು.

ಉತ್ತರದ ಚೈತನ್ಯಪಂಥವು ದಾಸಪಂಥಕ್ಕಿಂತ ನಂತರದಲ್ಲಿ ಹುಟ್ಟಿದರೂ ಅದು ಕಾಣುವ ತಾತ್ವಿಕನೆಲೆ ಮಾತ್ರ ದಾಸಪಂಥದ ತಾತ್ವಿಕತೆಗೆ ಹತ್ತಿರವಾಗಿಯೇ ಇತ್ತು. ದಾಸಪಂಥವು ಕರ್ನಾಟಕದ ನೆಲದಿಂದಾಚೆ ತನ್ನ ಪ್ರಭಾವವನ್ನು ಬೀರಿದಂತೆ, ಬಂಗಾಳದಲ್ಲಿ ಹುಟ್ಟಿದ ಚೈತನ್ಯಪಂಥವೂ ಕನ್ನಡದ ನೆಲದಲ್ಲಿ ತನ್ನ ಪ್ರಭಾವವನ್ನು ಬೀರಿತು. ದಾಸಪಂಥವು ಸ್ವೀಕರಿಸಿಕೊಂಡ ಮಾಧ್ವತತ್ತ್ವಚಿಂತನೆಯನ್ನು ಚೈತನ್ಯಪಂಥವು ಸ್ವೀಕರಿಸಿಕೊಂಡಿತು. ಮೊದಲಿಗೆ ಇದು ದ್ವೈತತತ್ತ್ವಾಧಾರವಾಗಿ ಮುನ್ನಡೆದರೂ ಮುಂದೆ ಅದು ತನ್ನ ತತ್ತ್ವಾನ್ವೇಷಣೆಯಲ್ಲಿ 'ಅಚಿಂತ್ಯಾಭೇದಾಭೇದ'ವೆಂದು ಹೇಳಹೊರಟಿತು. ಈ ಮೂಲಕ ತಾತ್ವಿಕ ಜಗತ್ತಿಗೊಂದು

'ಅಚಿಂತ್ಯಾಭೇದಾಭೇದ'ವೆಂಬ ಹೊಸ ತತ್ವಸಿದ್ಧಾಂತವೊಂದು ಸೃಷ್ಟಿಯಾಯಿತು. ದ್ವೈತದ ಹೆಜ್ಜೆಯಲ್ಲೇ ಸಾಗುತ್ತಿದ್ದ ಚೈತನ್ಯಪಂಥವು ಹೊಸದಾದ ತಾತ್ವಿಕತೆಯನ್ನು ಪಡೆದುಕೊಂಡಿರುವುದು ನನ್ನ ಅಧ್ಯಯನಕ್ಕೊಂದು ಮುಖ್ಯ ಕಾರಣವಾಯಿತು.

ಮೊದಲು ನನಗೆ ಅಧ್ಯಯನಾಸಕ್ತಿ ಅರಳಿದ್ದು ದಾಸಕೀರ್ತನೆಗಳಲ್ಲಿ. ಅನಂತರ ಚೈತನ್ಯಸಿದ್ಧಾಂತದಲ್ಲಿ. ಹಾಗಾಗಿ ದಾಸಕೀರ್ತನೆಗಳ ಕುರಿತಾಗಿ ಮೊದಲು ಪ್ರಸ್ತಾವಿಸಬೇಕಾಗುತ್ತದೆ.

ಕನ್ನಡಿಗರು ದಾಸಕೀರ್ತನೆಗಳನ್ನು ತಮ್ಮ ಬದುಕಿನೊಂದಿಗೆ ಹಂಚಿಕೊಂಡವರು. ಅದರ ಜಾತ್ಯತೀತ ಕಲ್ಪನೆಯನ್ನು ಮೆಚ್ಚಿಕೊಂಡವರು. ಆ ಕಾಲದಲ್ಲಿ ಮೇಲ್ವರ್ಗಕ್ಕೆ ಸೀಮಿತವಾಗಿದ್ದುದು ಸಂಸ್ಕೃತ ಮಂತ್ರಗಳು ಮಾತ್ರ. ಆದರೆ ಆ ಮಂತ್ರಗಳನ್ನೇ ಆಧರಿಸಿ ಕನ್ನಡಕೀರ್ತನೆಗಳನ್ನಾಗಿ ರಚಿಸಿದವರು ದಾಸವರೇಣ್ಯರು. ದಾಸರು ಕಂಡುಕೊಂಡ ಸ್ವಸ್ಥಸಮಾಜದ ಕಲ್ಪನೆಯೇ ಇದರ ಹಿಂದಿರುವ ಉದ್ದೇಶ. ಶ್ರೀಮಧ್ವಾಚಾರ್ಯರು ದ್ವಾದಶಮೂರ್ತಿಗಳನ್ನು ಉದ್ದೇಶಿಸಿ ನಾಲ್ಕು ಮಾತ್ರಾಗಣಗಳಲ್ಲಿ ರಚಿಸಿದ 'ಕೇಶವ ಕೇಶವ ಶಾಸಕವಂದೇ, ಪಾಶಧರಾರ್ಚಿತ ಶೂರಪರೇಶ'ವೆಂಬ ಛಂದೋರಚನೆಗೆ ಸಮಾನವಾಗಿ ದಾಸಕುಲದ ಕನಕದಾಸರು 'ಈಶ ನಿನ್ನ ಚರಣ ಭಜನೆ ಆಶೆಯಿಂದ ಮಾಡುವೆನು' ಎಂದು ಮೂರು ಮಾತ್ರೆಗಳಿಂದ ೨೪ ಮೂರ್ತಿಗಳನ್ನು ಸಂಕೀರ್ತಿಸಿದುದೇ ಇದಕ್ಕೆ ಉತ್ತಮ ಉದಾಹರಣೆ. ಇಂತಹ ಸಾದೃಶ್ಯ ವೈದೃಶ್ಯವೆನಿಸುವ ಸಾಹಿತ್ಯವಿಚಾರಗಳಲ್ಲಿ ಮೊದಲಿನಿಂದಲೂ ಉತ್ಸುಕನಾಗಿದ್ದವನು ನಾನು. ಹಾಗಾಗಿ ದಾಸಕೀರ್ತನೆಗಳಲ್ಲಿ ಕಾಣಸಿಗುವ ಕೆಲವೊಂದು ಗೊಂದಲಗಳು ಇಕ್ಕಟ್ಟಿನಲ್ಲಿದ್ದರೂ ಅವು ನನಗೆ ಪ್ರಿಯವಾಗುತ್ತಿದ್ದವು. ಅಂತಹ ಗೊಂದಲಗಳಲ್ಲಿ ಕೀರ್ತನೆಗಳ ಪಾಠಭೇದಗಳೂ ಒಂದು. ಇಂತಹ ರಚನೆಗಳು ದಾಸಸಾಹಿತ್ಯದಲ್ಲಿ ಅಲ್ಲಲ್ಲಿ ಗೋಚರವಾಗಿದ್ದು, ಇವೇ ನನ್ನ ಅಧ್ಯಯನಕ್ಕೆ ಹೆಚ್ಚಿನ ಪ್ರಚೋದನೆಯನ್ನು ನೀಡಿದೆಯೆಂದರೂ ತಪ್ಪಲ್ಲ. ಉದಾಹರಣೆಗಾಗಿ ಕನಕದಾಸರ ಒಂದರಂತೆ ಇನ್ನೊಂದಿರುವ ಕೀರ್ತನೆಯನ್ನು ಗಮನಿಸಬಹುದು.

ಕೀರ್ತನೆ ೧.

ಹರಿ ನಿಮ್ಮ ಪದಕಮಲ । ನಿರುತ ಧ್ಯಾನದಿನೆನಗೆ
ದೊರಕಿತೆ ಗುರು ಸೇವೆ ಹರಿಯೇ ॥
ಗುರು ಮಂತ್ರ ಮೂಲ ಸ । ದ್ಗುರುಮೂರ್ತಿ ನೀನಾಗಿ
ಕರೆಯ ಸೇರಿಸಿದೆ ಶ್ರೀಹರಿಯೆ ॥

....

ದೊರೆತನವ ಬಿಡಿಸಿ ಸು । ಸ್ಥಿರ ಮಾರ್ಗ ತೋರಿಸಿದೆ
ನರ ಮಾತ್ರದವನೆನಗೆ ಹರಿಯೆ ॥
ಗರುವದೊಳಗಿಹನೆಂದು । ಅರಿತು ತವದಾಸರಿಗೆ
ಇರದೆ ಅಡಿಯಾಗಿಸಿದೆ ಹರಿಯೆ ॥

....

ನೀರ ಸಂಗವ ಬಿಟ್ಟು । ಆಣಿ ಮುತ್ತಾದಂತೆ
ತೋರಿಸಿದೆ ತವಪಾದ ಹರಿಯೆ ॥
ಆರಿಗಂಜೆನು ನಾನು । ಅಧಿಕಪುರಿ ಕಾಗಿನೆಲೆ
ಸಿರಿಯಾದಿ ಕೇಶವನೆ ದೊರಿಯೆ ॥

ಈ ಕೀರ್ತನೆಯು ೯ ಚರಣಗಳಿಂದ ಕೂಡಿದೆ. ಅದರೆ ಇದೇ ರೀತಿಯಲ್ಲಿರುವ ಇವರ ಇನ್ನೊಂದು ಕೀರ್ತನೆ ೫ ಚರಣಗಳಿಂದ ಕೂಡಿದ್ದು ಹಲವು ಪ್ರಶ್ನೆಗಳಿಗೆ ಎಡೆಮಾಡಿ ಕೊಡುತ್ತದೆ.

ಕೀರ್ತನೆ ೨.

ಹರಿ ನಿನ್ನ ಪದಕಮಲ । ಕರುಣದಿಂದಲಿ ಎನಗೆ
ದೊರಕಿತೇ ಗುರು ಸೇವೆ ಹರಿಯೇ ॥
ಗುರು ಮಂತ್ರ ಮೂಲ ಸ– । ದ್ಗುರು ಮೂರ್ತಿ ನೀನಾಗಿ
ಬಳಿಕ ಸೇರಿಸಿದೆ ಹರಿಯೇ ॥

....

ದೊರೆತನವ ಬಿಡಿಸಿ ಸು– । ಸ್ಥಿರ ಮಾರ್ಗವನೆ ತೋರಿ
ಪರಿಪಾಲಿಸಿದೆ ಎನ್ನ ಹರಿಯೇ ।
ದುರುಳತನದಲಿ ಜನರ ಪರಿಪರಿ ಬಾಧಿಸುತ
ಸೂರೆ ಪರಿಹಾರವಾಯಿತೀ ಪರಿಯೆ ॥
ನೀರು ಶುಕ್ತಿಯ ಸೇರಿ । ಘೋರ ಮುತ್ತಾದ ಪರಿ
ಸೇರಿಸೋ ನಿನ್ನಂಘ್ರಿ ಹರಿಯೆ ॥
ಆರಿಗಂಜುವನಲ್ಲ । ಅಧಿಕಪುರಿ ಕಾಗಿನೆಲೆ–
ಯಾದಿ ಕೇಶವರಾಯ ಹರಿಯೇ ॥

ಈ ಎರಡು ಕೀರ್ತನೆಗಳು ಬೇರೆಬೇರೆಯಾದರೂ ಎರಡರಲ್ಲೂ ಸಾಮ್ಯತೆಯಿರುವುದು ಅಚ್ಚರಿಯನ್ನು ಮೂಡಿಸುತ್ತವೆ. ದಾಸರ ಬದುಕಿನ ಪರಿವರ್ತನೆಯ ಚಿತ್ರಣವಿದ್ದರೂ, ಪಾಠಾಂತರಗಳಲ್ಲಿ ಅಶುದ್ಧಿಯೇ ಮುಖ್ಯವಾಗಿ ಕಂಡುಬರುತ್ತದೆ. ಆದರೂ ಇಂತಹ ಇನ್ನಷ್ಟು ಪಾಠಭೇದಗಳು ಇವರ ಕೀರ್ತನೆಗಳಲ್ಲಿ ಲಭ್ಯವಾಗಲು ಸಾಧ್ಯ.

ಗೋವಿಂದ ಗೋವಿಂದ ಎನ್ನಲರಿಯದೆ ವೃಥಾ
ನೋವಿಂದ ಭಂಗವ ಪಡುವುದುಚಿತವೆ ॥

....

ವೇದೋಕ್ತ ಪೂಜೆಯಲಿ ತೃಪ್ತಿ ಪಡಿಸದಿರೆ
ಆದುದೇನದರಿಂದ ಫಲವಾವುದು ।
ನಾದವನು ಕೇಳ್ದ ಹರಿಣದಂದದಿ ಕೆಡದೆ ಮಧು–
ಸೂದನನ ನಾಮಸ್ಮರಣೆಯ ಮಾಡು ಮರುಳೆ ॥

ಈ ಕೀರ್ತನೆಯಲ್ಲಿ ಇಲ್ಲಿ ಬರುವ ಮೊದಲ ಚರಣದ ಪ್ರಥಮಾರ್ಧವು ಮುಂದಿನ ಕೆಲವೊಂದು ರಚನೆಗಳಲ್ಲಿ ಅಲ್ಪಸ್ವಲ್ಪ ಮಾರ್ಪಾಡಿನೊಂದಿಗೆ ಅಲ್ಲಲ್ಲಿ ಗೋಚರವಾಗಲು ಸಾಧ್ಯ.

" ವೇದೋಕ್ತ ಪೂಜೆಯಲಿ ತೃಪ್ತಿಪಡಿಸಿದರೆ ನಿಮಗೇ–
ನದರಿಂದ ಫಲವಾಹುದಯ್ಯಾ"
" ವೇದೋಕ್ತ ಪೂಜೆಯಲಿ ತೃಪ್ತಿಪಟ್ಟರೆ ನೀವು
ಅದರಿಂದ ಫಲವೇನು ಪೇಳಿರಯ್ಯಾ"
" ವೇದೋಕ್ತ ಪೂಜೆಯಲಿ ತೃಪ್ತಿಪಡಿಸದಿರೆ
ಆದುದೇನದರಿಂದ ಫಲವಾವುದು"

ಇವೆಲ್ಲದರಲ್ಲೂ ನಾವು ಕಾಣುವ ಮಾರ್ಪಾಡು ಅಲ್ಪವಾದರೂ ಕೀರ್ತನೆಯ ಸ್ವರೂಪದಲ್ಲಿ ಏಕತೆಯಿದೆ. ಪ್ರಾಯಶಃ ಕಂಠಪಾಠದ ದೋಷದಿಂದಲೋ ಅಥವಾ ಮುದ್ರಣದ ದೋಷದಿಂದಲೋ ಇಂತಹ ವ್ಯತ್ಯಾಸಗಳು ನೆರವೇರಿದ್ದಿರಬಹುದೆಂದು ಊಹಿಸಿಕೊಳ್ಳಬಹುದು. ಇಂತಹ ಪಾಠಭೇದವಿರುವ ಇನ್ನಷ್ಟು ಕೀರ್ತನೆಗಳು ಶೋಧಕರಿಗೆ ದಾಸಕೃತಿಗಳಲ್ಲಿ ಸಿಗಲುಸಾಧ್ಯ. ಆದರೂ ಇಲ್ಲಿಯ ಸಾಹಿತ್ಯದ ಆಂತರ್ಯದಲ್ಲಿ ಹರಿಸರ್ವೋತ್ತಮತ್ವ ಹಾಗೂ ದ್ವೈತದ ಛಾಯೆಯು ಬಲವಾಗಿ ಹರಡಿಕೊಂಡಿರುವುದರಿಂದ ಇದಕ್ಕೆ ಸಮಾನವಾದ ಇನ್ನೊಂದು ವೈಷ್ಣವಪಂಥವನ್ನು ತೌಲನಿಕವಾಗಿ ಶೋಧಿಸಬೇಕೆಂಬ ಅಪೇಕ್ಷೆ ನನಗುಂಟಾಯಿತು. ಆ ನೆಲೆಯಲ್ಲಿ ನನಗೆ ಗೋಚರಿಸಿದ್ದು ಚೈತನ್ಯಪಂಥ; ಬಂಗಾಳದ ಗೌಡೀಯಪಂಥ.

ಚೈತನ್ಯಸಾಹಿತ್ಯದ ಶೋಧನೆಯಲ್ಲಿ, ದಾಸಪಂಥದಲ್ಲಿ ತೋರುವ ಹರಿಸರ್ವೋತ್ತಮತ್ವ, ಪಂಚಭಾವಗಳು, ಹರಿನಾಮ ಸಂಕೀರ್ತನೆ, ಸಾಮಾಜಿಕ ಕಳಕಳಿ, ಗುರುಶಿಷ್ಯ ಪರಿಕಲ್ಪನೆ, ಶಾರೀರಿಕ ಚಿಂತನೆ ಹಾಗೂ ಆತ್ಮವಿಮರ್ಶೆಯಿಂದ ಕೂಡಿದ ಅನೇಕ ವಿಚಾರಗಳು ಸರಿಸಮಾನವಾಗಿಯೇ ತೋರುತ್ತವೆ. ಅಂತೆಯೇ ಬೂಟಾಟಿಕೆಯ ವಿಚಾರದಲ್ಲೂ ಕೂಡ. ದಾಸಭಾವನೆಗಳಿಗೆ ಸಮಾನವಾಗಿ ಚೈತನ್ಯರೂ ಕೂಡ ಶಾಂತಿಪುರದ ರಘುನಾಥದಾಸರಿಗೆ ವೈರಾಗ್ಯದ ವಿಚಾರವನ್ನು ಪ್ರಸ್ತಾಪಿಸಲು ಮುಂದಾಗುತ್ತಾರೆ.[3]

ಆದರೆ ದಾಸಪಂಥವು ಕೃಷ್ಣನನ್ನು ಅವತಾರಪುರುಷನೆಂದು ಹೇಳಲು ಹೊರಟರೆ ಚೈತನ್ಯಪಂಥವು ಕೃಷ್ಣನನ್ನು ಅವತಾರಪುರುಷನೆಂದು ಹೇಳಲು ನಿರಾಕರಿಸಲು ಮುಂದಾಗುತ್ತದೆ. ಇಲ್ಲಿಂದ ಅಧ್ಯಯನದ ಆಸಕ್ತಿ ನನ್ನಲ್ಲಿ ಹೆಚ್ಚಾದಂತೆ, ಎರಡೂ ಪಂಥಗಳಲ್ಲಿ ದ್ವೈತತತ್ತ್ವದ ಪ್ರತಿಪಾದನೆಯೇ ಮೂಲ ಉದ್ದೇಶವಾಗಿತ್ತೇ ? ಅಲ್ಲಿ ಅದ್ವೈತದ ಚಿಂತನೆ ನಡೆದಿರಲಿಲ್ಲವೇ ? ಬಂಗಾಳದ ಚೈತನ್ಯಪಂಥ ಕಂಡ ರಾಧೆಯ ಪರಿಕಲ್ಪನೆಯು ಕರ್ನಾಟಕದ ದಾಸಪಂಥದಲ್ಲಿ ಏಕೆ ತಿರಸ್ಕೃತವಾಯಿತೆಂಬ ಜಿಜ್ಞಾಸೆ, ಅಲ್ಲದೆ ಸಾಹಿತ್ಯರಚನೆಯ ಛಂದಸ್ಸಿನ ವಿಚಾರಗಳನ್ನೊಳಗೊಂಡಂತೆ ಇನ್ನೂ ಅನೇಕ ತಾತ್ವಿಕ ವಿಚಾರಗಳು ನನ್ನನ್ನೇ ಪ್ರಶ್ನಿಸಲು ಮುಂದಾಯಿತು. ಆದುದರಿಂದ ಈ ಎರಡು ಪಂಥಕ್ಕೆ ಸಂಬಂಧಿಸಿದಂತೆ ಅವುಗಳ ಆಳ, ವಿಸ್ತಾರ, ದೇಶದ ಒಳ ಹಾಗೂ

ಹೊರಗಿನ ಸಂಕೀರ್ತನಾಚಳುವಳಿ ಮತ್ತು ಜನಸ್ಪಂದನವನ್ನು ಕುರಿತು ಅಧ್ಯಯನವನ್ನು ನಡೆಸಲು ಉದ್ದೇಶಿಸಿದೆ. ಈ ನೆಲೆಯಲ್ಲಿ ಅಧ್ಯಯನಕ್ಕೊಂದು ಸ್ವರೂಪವನ್ನು ಸಿದ್ಧಪಡಿಸುವ ದೃಷ್ಟಿಯಲ್ಲಿ ನಾಡಿನ ಹಲವು ವಿದ್ವಾಂಸರುಗಳೊಂದಿಗೆ ಚರ್ಚಿಸಿದ್ದೇನೆ. ಆ ಮೂಲಕವಾಗಿ ಅಧ್ಯಯನದ ವಿಧಾನ ಹಾಗೂ ಅಧ್ಯಾಯಗಳ ವಿಂಗಡಣೆಯನ್ನು ಮಾಡಿದ್ದೇನೆ.

೧.೨: ಅಧ್ಯಯನದ ವಿನ್ಯಾಸ

ಇಲ್ಲಿಯ ಪಂಥಗಳೆರಡರ ಅಧ್ಯಯನದ ವಿನ್ಯಾಸವು ಅವುಗಳೆರಡರ ಅಧ್ಯಯನಾನಂತರದಲ್ಲಿ ನನ್ನೊಂದಿಗೆ ಕಲ್ಪಿತವಾದವುಗಳು. ಅಧ್ಯಯನಕ್ಕಾಗಿ ನಾಡಿನ ಹಲವಾರು ಗ್ರಂಥಾಲಯಗಳನ್ನು ಹಾಗೂ ನಾಡಿನ ಬಹುಶ್ರುತ ವಿದ್ವಾಂಸರುಗಳನ್ನು ಸಂಪರ್ಕಿಸಿಕೊಂಡು ತಾತ್ತ್ವಿಕವಾಗಿ ಸಂಭಾಷಿಸಿ, ನಂತರ ಪಂಥಗಳೆರಡರ ತೌಲನಿಕ ಸಂಶೋಧನಾ ಪ್ರಬಂಧಕ್ಕೆ ಅಧ್ಯಾಯಗಳ ಆಕೃತಿ ನಿರ್ಮಾಣವನ್ನು ಮಾಡಿದ್ದೇನೆ.

ಈ ಮಹಾಸಂಪ್ರಬಂಧದಲ್ಲಿ ಒಟ್ಟು ಎಂಟು ಅಧ್ಯಾಯಗಳ ನಿರ್ಮಾಣವಿದೆ. ಮೊದಲನೆಯ ಅಧ್ಯಾಯವನ್ನು **ಅಧ್ಯಯನದ ಪರಿಗ್ರಹಿಕೆ**ಯಾಗಿ ಸ್ವೀಕರಿಸಿ, ಆ ಮೂಲಕ ತೌಲನಿಕ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವಿಧಾನ, ವಿನ್ಯಾಸ ಹಾಗೂ ಅಧ್ಯಯನ ನಡೆದು ಬಂದದಾರಿ ಮತ್ತು ಅಧ್ಯಯನದ ವಿಶಿಷ್ಟತೆಯ ಕುರಿತಾಗಿ ಚರ್ಚಿಸಲು ಮುಂದಾಗಿದ್ದೇನೆ. ಎರಡನೆಯ ಅಧ್ಯಾಯದಲ್ಲಿ, **ಭಾರತೀಯ ಭಕ್ತಿಪರಂಪರೆಯ ಉಗಮ ಮತ್ತು ವಿಕಾಸ**ದಲ್ಲಿ ಪುರಾತನದಲ್ಲಿ ಭಕ್ತಿ, ವೈದಿಕಸಾಹಿತ್ಯದಲ್ಲಿ ಪ್ರಕೃತಿಭಕ್ತಿ, ಭಾರತೀಯ ಭಕ್ತಿಯಲ್ಲಿ ಪುರಾಣಸಿದ್ಧಾಂತಗಳು ಮತ್ತು ವೇದಾಂತಗಳು, ಭಕ್ತಿಪಂಥದ ಮಧ್ಯಕಾಲೀನ ಬೆಳವಣಿಗೆ (ವಜ್ರಯಾನ, ನಾಥಪಂಥ, ಕಾಪಾಲಿಕಪಂಥ, ಶಾಕ್ತಪಂಥ, ವಲ್ಲಭಪಂಥ, ವಾರಕರಿಪಂಥ), ವಚನಸಾಹಿತ್ಯದಲ್ಲಿ ಭಕ್ತಿಯ ಪರಿಕಲ್ಪನೆ, ತತ್ತ್ವಪದಸಾಹಿತ್ಯ, ದ್ರಾವಿಡಭಾಷೆಗಳಲ್ಲಿ ಭಕ್ತಿ ಮತ್ತು ಮರಾಠಿಸಂತ ಸಾಹಿತ್ಯದಲ್ಲಿ ಭಕ್ತಿ–ಈ ಎಲ್ಲಾ ವಿಚಾರವಾಗಿ ವಿವೇಚಿಸಲು ನಿರ್ಧರಿಸಿದ್ದೇನೆ. ಅಧ್ಯಾಯ ಮೂರರಲ್ಲಿ **ದಾಸಪಂಥ – ಉಗಮ ಮತ್ತು ವಿಕಾಸದ** ಹಿನ್ನೆಲೆಯಲ್ಲಿ, ದಾಸಪಂಥದ ಉಗಮದ ಪೂರ್ವ ಸೂಚನೆ, ಉಗಮ ಮತ್ತು ಬೆಳವಣಿಗೆ ಹಾಗೂ ಸಾಹಿತ್ಯೋದ್ದೇಶ, ದಾಸಪಂಥದಲ್ಲಿ ಮಹಿಳಾಸಾಹಿತ್ಯ, ಪ್ರಾಥಮಿಕ ಸಾಮಾಜಿಕ ಸ್ಥಿತಿಗತಿಗಳು, 'ದ್ವೈತಸಿದ್ಧಾಂತ'ದ ಪ್ರತಿಪಾದನೆ–ದಾಸಸಾಹಿತ್ಯದ ಗುರಿಯೇ?, ಕೀರ್ತನೆಗಳಲ್ಲಿ ಭಕ್ತಿಸ್ವರೂಪ (ಶ್ರವಣ, ಸ್ಮರಣ, ಕೀರ್ತನ, ಪಾದಸೇವನೆ, ವಂದನೆ, ಅರ್ಚನೆ, ದಾಸ್ಯ, ಸಖ್ಯ, ವಾತ್ಸಲ್ಯ ಮತ್ತು ಆತ್ಮನಿವೇದನಾಭಕ್ತಿ), ಸಮಾಜದರ್ಶನ ಮತ್ತು ಮೌಲ್ಯಗಳು (ಹೊಲೆತನ ಮತ್ತು ಜಾತಿಪದ್ಧತಿ, ಕೀರ್ತನೆಗಳಲ್ಲಿ ಬೂಟಕತನ, ಧರ್ಮಸಾಮರಸ್ಯ, ಗೂಢಾರ್ಥಪ್ರೇರಿತ ಕೀರ್ತನೆಗಳು), ದಾಸಸಾಹಿತ್ಯ ಮತ್ತು ಕನ್ನಡಪ್ರೇಮ, ಹರಿಸರ್ವೋತ್ತಮತ್ವಕ್ಕಾಗಿ ಶಿವಾರಾಧನೆ, ಸಾಹಿತ್ಯದಲ್ಲಿ ಲಾಲಿಪದಗಳ ಲಾಲಿತ್ಯ ಈ ಮೊದಲಾದ ವಿಷಯಾಧ್ಯಯನದ ಪ್ರಯತ್ನಕ್ಕೆ ಮುಂದಾಗಿದ್ದೇನೆ. ನಾಲ್ಕನೆಯ ಅಧ್ಯಾಯವು **ಚೈತನ್ಯಪಂಥದ ಉಗಮ ಮತ್ತು ವಿಕಾಸ**ಕ್ಕೆ ಸಂಬಂಧಿಸಿದುದು. ಇಲ್ಲಿ ಚೈತನ್ಯ ಮಹಾಪ್ರಭುಗಳ ಅವತರಣಪೂರ್ವದ ಸಾಮಾಜಿಕ ಸ್ಥಿತಿಗತಿಯನ್ನು ವಿವೇಚಿಸಿ, ಆ ಪಂಥದ ಉಗಮ ಮತ್ತು ಬೆಳವಣಿಗೆಯಲ್ಲಿ

ಸಂತಪರಂಪರೆಯ ಸಾಧನೆಯನ್ನು ಪರಿಶೀಲಿಸಲಾಗಿದೆ. ಜೊತೆಗೆ ಚೈತನ್ಯರ ಬಾಲ್ಯ, ಸಂಸಾರ, ಆಧ್ಯಾತ್ಮ ಮತ್ತು ಸಂನ್ಯಾಸ ಜೀವನ, ಷಡ್‌ಗೋಸ್ವಾಮಿಗಳ ಹಾಗೂ ಅನುಭಾವಿಗಳ ಭಕ್ತಿ–ಕೃತಿ–ಬೋಧೆ, ಚೈತನ್ಯ ಕುರಿತ ಹಾಗೂ ರಚಿತ ಸಾಹಿತ್ಯ ಸಂದೇಶಗಳು(ಶ್ರೀಚೈತನ್ಯ ಕೀರ್ತನೆ, ಶಿಕ್ಷಾಷ್ಟಕ, ಶ್ರೀಚೈತನ್ಯ ಚರಿತಾಮೃತ, ಗುರ್ವಾಷ್ಟಕ) ದಕ್ಷಿಣಭಾರತದಲ್ಲಿ ಚೈತನ್ಯರ ಸಂಕೀರ್ತನಾಯಾತ್ರೆ, ಚೈತನ್ಯ ಮಹಾಪ್ರಭುಗಳು ಅದ್ವೈತಿಗಳೇ ? ಎನ್ನುವ ತಾರ್ಕಿಕ ವಿಚಾರ, ಚೈತನ್ಯಪಂಥದಲ್ಲಿ ತಾತ್ತ್ವಿಕತೆ (ಅಚಿಂತ್ಯಾಭೇದಾಭೇದ ವೇದಾಂತ, ಶರಣಾಗತಿ ಮತ್ತು ಭಕ್ತಿಸೇವೆ, ನಿರಾಕಾರದ ಖಂಡನೆ; ಸ್ವರೂಪಾಕಾರದ ಮಂಡನೆ, ದೇವೋತ್ತಮ ಪರಮಪುರುಷ ಪರಿಕಲ್ಪನೆ), ವರ್ತಮಾನದಲ್ಲಿ ಚೈತನ್ಯಪಂಥದ ಬೆಳವಣಿಗೆ (ಇಸ್ಕಾನ್ ಸ್ಥಾಪನೆ, ಇಸ್ಕಾನಿನ ಸಾಮಾಜಿಕ ಕಳಕಳಿ, ಬಡವರ ಪಾಲಿಗೆ 'ಅಕ್ಷಯ ಪಾತ್ರೆ', ಗೋ ಸಂರಕ್ಷಣೆ, ಸಾವಯವ ಕೃಷಿಗೆ ಆದ್ಯತೆ)ಯ ಕುರಿತು ಅಧ್ಯಯನ ನಡೆಸಿದ್ದೇನೆ. ಐದನೆಯ ಅಧ್ಯಾಯದಲ್ಲಿ **ದಾಸಪಂಥ ಮತ್ತು ಚೈತನ್ಯಪಂಥಗಳಲ್ಲಿ ಸಾದೃಶ್ಯ ಶೋಧ** ಎಂಬ ವಿಚಾರದಲ್ಲಿ ವ್ಯಕ್ತಿನಿಷ್ಠ ಸಾಮ್ಯ, ಹರಿನಾಮ ಸಂಕೀರ್ತನೆ, ಪಂಚಭಾವಗಳು(ದಾಸ್ಯಭಾವ, ಸಖ್ಯಭಾವ, ವಾತ್ಸಲ್ಯಭಾವ, ಮಧುರಭಾವ, ಶಾಂತಭಾವ), ಹರಿಸರ್ವೋತ್ತಮತ್ವ, ಸಾಮಾಜಿಕ ಕಳಕಳಿ, ಗುರುಶಿಷ್ಯ ಪರಿಕಲ್ಪನೆ, ಆತ್ಮವಿಮರ್ಶೆಯ ಅನಾವರಣ, ಶಾಕಪಾಕ ಪದಾರ್ಥ ವಿಚಾರ, ಶಾರೀರಿಕ ಚಿಂತನೆ, ಪವಾಡಗಳು ಇತ್ಯಾದಿಯಾಗಿ ವಿವೇಚಿಸಲಾಗಿದೆ. **ದಾಸಪಂಥ ಮತ್ತು ಚೈತನ್ಯಪಂಥಗಳಲ್ಲಿ ವೈದೃಶ್ಯ ಶೋಧ** ಎಂಬ ವೈಚಾರಿಕತೆಯು ಆರನೆಯ ಅಧ್ಯಾಯದಲ್ಲಿದೆ. ಅಲ್ಲಿ ಪಂಥಗಳೆರಡರ ತಾತ್ತ್ವಿಕ ವ್ಯತ್ಯಾಸಗಳು, ಪಂಚತತ್ತ್ವ ಪರಿಕಲ್ಪನೆ, ಕೃಷ್ಣ ಅವತಾರಿಯಲ್ಲ, ರಾಧಾಮಾಧವ ಪ್ರೇಮ, ದೇವೋನ್ಮಾದ, ಪುರಾಣಕಥೆ ಮತ್ತು ಪ್ರಹೇಳಿಕೆಗಳು, ಕ್ಷೇತ್ರದರ್ಶನ ಕೀರ್ತನೆಗಳು, ಸಮಾಜ–ಮಹಿಳೆ ಮತ್ತು ಭಕ್ತಿ, ಸಾಹಿತ್ಯದಲ್ಲಿ ಛಂಧಸ್ಸು, ವ್ಯಾಕರಣವಿಚಾರಗಳು, ಪ್ರಕೃತಿಪ್ರೇಮ ಮತ್ತು ಆರಾಧನೆ, ಸಮಾಧಿ ಸಂಸ್ಕಾರಗಳು, ಭಾಷೆ ಮತ್ತು ಸಾಹಿತ್ಯ, ಸಂಸಾರ ನಿಂದನೆ, ಉಡುಗೆ–ತೊಡುಗೆಗಳು, ಶಾಪ ಮತ್ತು ಆತ್ಮಹತ್ಯೆ, ಜನ್ಮಜಾತಕ ಹಾಗೂ ಲೋಕನಿರ್ಯಾಣ ದಾಖಲೆಗಳ ಕುರಿತಾಗಿ ಅಧ್ಯಯನ ನಡೆಸಿದ್ದೇನೆ. ಅಧ್ಯಾಯ ಏಳರ **ಸಮಾಪನ**ದಲ್ಲಿ ಭಾರತೀಯ ಭಕ್ತಿ ಚಳುವಳಿಯಲ್ಲಿ ಈ ಉಭಯ ಪಂಥಗಳು ದಕ್ಷಿಣೋತ್ತರಭಾರತವನ್ನು ಬೆಸೆದಿರುವ ಕುರಿತಾಗಿ, ವಿವರಿಸಿದ್ದೇನೆ. ಕೊನೆಯ **ಅನುಬಂಧ**ದಲ್ಲಿ ಅಧ್ಯಯನಕ್ಕೆ ಪೂರಕವಾಗಿ ಒದಗಿದ ಉಭಯ ಪಂಥಗಳ ಚಿತ್ರದಾಖಲೆಗಳು, ಪರಾಮರ್ಶನ ಗ್ರಂಥಗಳು ಹಾಗೂ ಲೇಖನಗಳ ವಿವರಣೆಯನ್ನು ನೀಡಿದ್ದೇನೆ.

೧.೩ : ಅಧ್ಯಯನ ನಡೆದು ಬಂದ ದಾರಿ

ಭಾರತೀಯ ಭಕ್ತಿಸಾಹಿತ್ಯದಲ್ಲಿ ದಾಸಪಂಥ ಮತ್ತು ಚೈತನ್ಯಪಂಥಗಳೆರಡು ದಕ್ಷಿಣ ಹಾಗೂ ಉತ್ತರಭಾರತಕ್ಕೆ ಸಂಬಂಧಿಸಿದವು. ಈ ಎರಡೂ ಪಂಥಗಳ ಕುರಿತು ಪ್ರತ್ಯೇಕವಾದ ಸಂಶೋಧನಾಧ್ಯಯನಗಳು ಸಾಹಿತ್ಯಲೋಕದಲ್ಲಿ ವಿಶೇಷವಾಗಿ ನಡೆದಿದ್ದರೂ ತೌಲನಿಕವಾದ ಅಧ್ಯಯನ ನಡೆಯಲಿಲ್ಲ. ಆದರೆ ಇತ್ತೀಚೆಗೆ ಬೆಂಗಳೂರಿನ ಇಸ್ಕಾನ್ ಸಂಸ್ಥೆಯು ದಾಸಪಂಥ ಮತ್ತು ಚೈತನ್ಯಪಂಥಗಳ ಅಧ್ಯಯನಕ್ಕೆ ಸಂಬಂಧಪಟ್ಟಂತೆ ನಡೆಸಿದ ವಿಚಾರಗೋಷ್ಠಿಗಳು ಒಂದು ರೀತಿಯಲ್ಲಿ ಆರೋಗ್ಯಪೂರ್ಣ ಬೆಳವಣಿಗೆಯೆಂದೇ ಭಾವಿಸಬೇಕು.

ಚೈತನ್ಯಪಂಥಕ್ಕೆ ಸಂಬಂಧಿಸಿದಂತೆ ಉತ್ತರಭಾರತದ ವಿಶ್ವವಿದ್ಯಾಲಯಗಳು ಹೆಚ್ಚಿನ ಅಧ್ಯಯನಕ್ಕೆ ಪ್ರೋತ್ಸಾಹವನ್ನು ನೀಡಿದವು. ಕರ್ನಾಟಕದಲ್ಲಿ ಕನಕದಾಸ ಸಂಶೋಧನಾ ಕೇಂದ್ರ, ಕನಕದಾಸ ಅಧ್ಯಯನ ಪೀಠಗಳಲ್ಲದೆ ಹಲವಾರು ದಾಸರುಗಳ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳು ಜನ್ಮತಾಳುತ್ತಿರುವುದು ಸಂತಸದ ವಿಚಾರ. ಅಲ್ಲದೆ ಇಲ್ಲಿಯ ಬಹುತೇಕ ವಿದ್ಯಾಲಯಗಳ ಕೃಪಾಶ್ರಯದಲ್ಲಿ ದಾಸಸಾಹಿತ್ಯಕ್ಕೆ ಸಂಬಂಧಿಸಿದ ಸಂಶೋಧನಾಧ್ಯಯನ ಪ್ರಬಂಧಗಳು ಮಂಡಿತವಾಗಿವೆ. ಅವುಗಳಲ್ಲಿ ಕೆಲವನ್ನು ಮಾತ್ರ ಸಾಂಕೇತಿಕವಾಗಿ ನೆನಪಿಸಿಕೊಳ್ಳುತ್ತೇನೆ.

೧. ಪ್ರಸನ್ನವೆಂಕಟದಾಸರು ಮತ್ತು ಕೃತಿಗಳು– ಲೇಖಕರು: ಡಾ. ಎ. ಟಿ. ಪಾಟೀಲ.
ಆರ್. ಎಸ್. ಪಂಚಮುಖಿ ಅವರ ಮಾರ್ಗದರ್ಶನದಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಪಿಹೆಚ್.ಡಿ ಪದವಿಯನ್ನು ಪಡೆದ ಮೊದಲ ನಿಬಂಧ. ಸುಮಾರು ೩೫೬ ಪುಟಗಳಲ್ಲಿ ಈ ನಿಬಂಧವು ಮೂಡಿಬಂದಿದೆ.

೨. ಶ್ರೀ ಜಗನ್ನಾಥದಾಸರು'– ಲೇಖಕರು: ಡಾ. ಕೆ. ಎಂ. ಕೃಷ್ಣರಾವ್.
ಈ ನಿಬಂಧವು ಶ್ರೀ. ಆರ್. ಎಸ್. ಪಂಚಮುಖಿ ಅವರ ಮಾರ್ಗದರ್ಶನದಲ್ಲಿ ಸಿದ್ಧಗೊಂಡು ಮೈಸೂರು ವಿಶ್ವವಿದ್ಯಾಲಯದಿಂದ ಪಿಹೆಚ್.ಡಿ ಪದವಿಯನ್ನು ಪಡೆದಿದೆ.

೩. ಕರ್ನಾಟಕದ ಹರಿದಾಸರು'(ವಿಮರ್ಶಾತ್ಮಕ ಅಧ್ಯಯನ)–ಲೇಖಕರು:ಡಾ.ಹೆಚ್. ಕೆ. ವೇದವ್ಯಾಸಾಚಾರ್ಯ.
ಆರ್. ಎಸ್. ಪಂಚಮುಖಿಯವರ ಮಾರ್ಗದರ್ಶನದಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ ಪಿಹೆಚ್.ಡಿ ಪದವಿಯನ್ನು ಪಡೆದ ನಿಬಂಧ.

೪. ಪ್ರಸಾದ ಯೋಗ' (ಶ್ರೀ ಪುರಂದರದಾಸರ ಜೀವನ–ಕೃತಿಗಳು) ಲೇಖಕರು: ಡಾ. ವ. ಅ. ದಿವಾಣಜಿ.
ಡಾ .ರಂ. ಶ್ರೀ.ಮುಗಳಿ ಅವರ ಮಾರ್ಗದರ್ಶನದಲ್ಲಿ ಪೂನಾ ವಿಶ್ವವಿದ್ಯಾಲಯದಿಂದ ಪಿಹೆಚ್.ಡಿ. ಪದವಿ ಪಡೆದ ಕೃತಿ.

೫. ಶ್ರೀ ವಿಜಯದಾಸರು'–ಲೇಖಕರು: ಡಾ. ಕೆ. ಗೋಕುಲನಾಥ್.
ಡಾ. ಜಿ .ವರದರಾಜರಾಯರ ಮಾರ್ಗದರ್ಶನದಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಪಿಹೆಚ್.ಡಿ. ಪದವಿಯನ್ನು ಪಡೆದ ಕೃತಿ.

೬. 'ಹರಿದಾಸರ ಭಕ್ತಿಸ್ವರೂಪ'–ಲೇಖಕರು: ಡಾ. ಟಿ. ಎನ್. ನಾಗರತ್ನ.
ಡಾ. ಜಿ. ವರದರಾಜರಾಯರ ಮಾರ್ಗದರ್ಶನದಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಪಿಹೆಚ್.ಡಿ. ಪದವಿಯನ್ನು ಪಡೆದ ಕೃತಿ.

೭. ಮುತ್ತು ಬಂದಿದೆ ಕೇರಿಗೆ (ಕನಕದಾಸರು: ಸಾಂಸ್ಕೃತಿಕ ಅಧ್ಯಯನ)ಲೇಖಕರು: ಡಾ. ಎನ್. ಸುರೇಶ್ ನಾಗಲಮಡಿಕೆ.

ಡಾ. ಅನಂತ ಪದ್ಮನಾಭರಾವ್ ಅವರ ಮಾರ್ಗದರ್ಶನದಲ್ಲಿ ಹಂಪಿ ವಿಶ್ವವಿದ್ಯಾಲಯದಿಂದ ಪಿಹೆಚ್.ಡಿ ಪದವಿಯನ್ನು ಪಡೆದ ಕೃತಿ.

೪. ಹರಿದಾಸಸಾಹಿತ್ಯ-ಶ್ರೀಮದ್ಭಾಗವತ_ಋಣ ಮತ್ತು ವೃದ್ಧಿ. ಲೇಖಕರು: ಶ್ರೀಮಾನಕರಿ ಶ್ರೀನಿವಾಸಾಚಾರ್ಯ. ಪ್ರೊ. ಎ. ವಿ. ನಾವಡ ಅವರ ಮಾರ್ಗದರ್ಶನದಲ್ಲಿ ಹಂಪಿ ವಿಶ್ವವಿದ್ಯಾಲಯದಿಂದ ಪಿಹೆಚ್.ಡಿ ಪದವಿಯನ್ನು ಪಡೆದ ಕೃತಿ.

ಇಷ್ಟೇ ಅಲ್ಲದೆ ದಾಸಸಾಹಿತ್ಯದ ಬೆಳವಣಿಗೆಗೆ ಸಂಬಂಧಿಸಿದಂತೆ ಹಲವು ವಿಮರ್ಶಾಗ್ರಂಥಗಳು, ಸಂಗ್ರಹ ಕೀರ್ತನೆಗಳು ಸೇರಿಕೊಂಡಿವೆ. ಅವುಗಳಲ್ಲಿ ಕೆಲವು ಇಂತಿವೆ.

ಕರ್ನಾಟಕದ ದಾಸಸಾಹಿತ್ಯ (ಲೇಖಕರು: ಶ್ರೀ . ರಾ. ಸ್ವಾ. ಪಂಚಮುಖಿ), ಹರಿಭಕ್ತಿಸುಧೆ (ಲೇಖಕರು: ರಂಗನಾಥ ರಾಮಚಂದ್ರ ದಿವಾಕರ), ಹರಿದಾಸ ಹೃದಯ (ಲೇಖಕರು: ಡಾ. ಜಿ. ವರದರಾಜ ರಾವ್), ದಾಸಸಾಹಿತ್ಯ: ದ್ವಿತೀಯ ಘಟ್ಟದ ಸಾಧನೆ ಹಲವು ಲೇಖಕರ ಉಪನ್ಯಾಸಗಳ ಸಂಕಲನ. ಹರಿದಾಸ ಸಾಹಿತ್ಯ ಸಮೀಕ್ಷೆ (ಸಂ-ಡಾ. ಜಿ. ವರದರಾಜ ರಾವ್), ಕನಕೋಪನಿಷತ್ತು (ವಿದ್ಯಾವಾಚಸ್ಪತಿ ಬನ್ನಂಜೆ ಗೋವಿಂದಾಚಾರ್ಯ), ದಾಸಸಾಹಿತ್ಯ ದರ್ಶನ (ಸಂ. ಎಚ್ಚೆಸ್ಕೆ),

ಸಾವಿರಾರು ಕೀರ್ತನೆಗಳು (ಸಂ. ಪ್ರೊ. ಎ. ವಿ. ನಾವಡ ; ಡಾ. ಗಾಯತ್ರಿ ನಾವಡ), ಶ್ರೀ ವಾದಿರಾಜರ ದೀರ್ಘ ಕೃತಿಗಳು (ಸಂ. ಡಾ. ಟಿ. ಎನ್. ನಾಗರತ್ನ), ಶ್ರೀ ಕರ್ಣಾಟ ಭಕ್ತ ವಿಜಯ (ಬೇಲೂರು ಕೇಶವದಾಸರು), ಭಾರತೀಯು ಇತಿಹಾಸ ಪುರಾಣಗಳು (ಪ್ರೊ. ಕೆ. ಎಸ್. ನಾರಾಯಣಾಚಾರ್ಯ), ಆನ್ವಯಿಕ ದಾಸಸಾಹಿತ್ಯ (ಡಾ. ವಾಸುದೇವ ಅಗ್ನಿಹೋತ್ರಿ), ಶ್ರೀ ಜಗನ್ನಾಥದಾಸರ ಕೃತಿಗಳು (ಸಂ. ಡಾ. ಟಿ. ಎನ್. ನಾಗರತ್ನ), ದಾಸಸಾಹಿತ್ಯ ಶಬ್ದಶಿಲ್ಪ (ಡಾ. ಎಸ್. ಎಸ್. ಅಂಗಡಿ), ಶ್ರೀ ಪ್ರಸನ್ನವೆಂಕಟದಾಸರ ಭಾಗವತ (ಸಂ. ಟಿ. ಕೆ. ಇಂದುಬಾಯಿ), ಶ್ರೀ ವ್ಯಾಸರಾಯರು-ಜೀವನ ಮತ್ತು ಕೃತಿಗಳ ಸಮೀಕ್ಷೆ (ಡಾ. ಕೆ. ಗೋಕುಲನಾಥ), ಶ್ರೀ ವೈಷ್ಣವ ಹರಿದಾಸ ಸಾಹಿತ್ಯ (ಪ್ರೊ. ನಾ. ಗೀತಾಚಾರ್ಯ), ಉಡುಪಿಯ ಕೃಷ್ಣ ದಾಸರು ಕಂಡಂತೆ (ಸಂ. ಬನ್ನಂಜೆ ಗೋವಿಂದಾಚಾರ್ಯ), ಕನಕ ಚಿಂತನ (ಸಂ. ಪ್ರತಾಪಚಂದ್ರ ಶೆಟ್ಟಿ, ಹಳ್ನಾಡ್ ಮತ್ತು ಡಾ. ಬಿ. ಶಿವರಾಮ ಶೆಟ್ಟಿ), ಪುರಂದರದಾಸರ ಕೀರ್ತನೆಗಳು, ಸಂಪುಟ-೩ (ಸಂ.ಡಾ. ಬಸವರಾಜ ಸಬರದ). ಇನ್ನೂ ಮೊದಲಾದವು.

೧.೪ : ಅಧ್ಯಯನದ ವಿಶಿಷ್ಟತೆ

ದಾಸಪಂಥ ಮತ್ತು ಚೈತನ್ಯಪಂಥಗಳು ದೇಶದ ತಾತ್ವಿಕತೆಯ ವಿಚಾರದಲ್ಲಿ ಸಾಕಷ್ಟು ಪ್ರಭಾವ ಬೀರಿದವುಗಳು. ಇವುಗಳ ಒಳಶೋಧನೆಯಲ್ಲಿ ಮೂಡಿಬರುವ ತತ್ತ್ವಜಿಜ್ಞಾಸೆಯು ಅಧ್ಯಯನಾಸಕ್ತಿಯನ್ನು ಹೆಚ್ಚಿಸುತ್ತದೆ. ಮಾತ್ರವಲ್ಲದೆ ಅಲ್ಲಿಯ ಕೆಲವೊಂದು ವಿಚಾರದಲ್ಲಿ ಪ್ರತ್ಯೇಕವಾದ ಸಂಶೋಧನೆಯು ಅಗತ್ಯವೆನಿಸುತ್ತದೆ. ಆದರೂ ತೌಲನಿಕ ಚಿಂತನೆಗೆ ಪೂರಕವಾಗಿ ಕೆಲವೊಂದು ತಾತ್ವಿಕವಾದ ವೈಚಾರಿಕ ವೈಶಿಷ್ಟ್ಯವನ್ನು ಇಲ್ಲಿ ವಿವರವಾಗಿ ಶೋಧಿಸುವ ಪ್ರಯತ್ನವನ್ನು ಮಾಡಿದ್ದೇನೆ.

ಅಧ್ಯಯನದ ಮೊದಲಲ್ಲಿ ಭಕ್ತಿಯ ಬೇರುಗಳನ್ನು ಪೂರ್ವೇತಿಹಾಸದಲ್ಲಿ ಹುಡುಕುತ್ತಾ ಹೋದಂತೆ ದೈವೋಪಾಸನೆಯಲ್ಲಿ ಏಕರೂಪತೆಯಿರಲಿಲ್ಲವೆಂಬುದನ್ನು ಮನಗಂಡಿದ್ದೇನೆ. ಈ ನೆಲೆಯಲ್ಲಿ ಕರ್ನಾಟಕದ ಶಿವಶರಣರ ಮತ್ತು ಹರಿದಾಸರ ಎರಡು ಆಂದೋಲನಗಳು ಮುಖ್ಯ ಪಾತ್ರವಹಿಸುತ್ತವೆ. ಶಿವಶರಣರದು ವೈದಿಕಧರ್ಮದ ವಿರುದ್ಧದ ಪ್ರತಿಭಟನೆಯಾದರೆ, ವೈದಿಕಧರ್ಮದ ಪುನರುತ್ಥಾನದ ಆಶಯದಲ್ಲಿ ಹರಿದಾಸ ಆಂದೋಲನ ಹುಟ್ಟಿತೆಂಬ ಎ. ವಿ. ನಾವಡರ ಮಾತಿನಲ್ಲಿ ಸತ್ಯವಿದೆ.[೩] ಈ ಮಧ್ಯೆ ಕನ್ನಡನೆಲದಲ್ಲಿ ತತ್ವಪದಗಳ ಮೂಲಕವಾಗಿ ಜೀವಸತ್ವವನ್ನು ಧಾರೆಯೆರೆದವರು ೧೨ನೇ ಶತಮಾನದ ವಚನಕಾರರೆಂಬ ತೀರ್ಮಾನವಿದೆ. ಆದರೆ ಅದಕ್ಕಿಂತ ಮುಂಚಿತವಾಗಿಯೇ ನಿಜಗುಣ ಶಿವಯೋಗಿಗಳು ತತ್ವಾರ್ಥವನ್ನು ಸಾಹಿತ್ಯರೂಪದಲ್ಲಿ ಬಳಸಿಕೊಂಡಿದ್ದಾರೆಂದು, ಅವರ ಪದಗಳೇ ಸಾಕ್ಷಿ ಹೇಳುತ್ತವೆಂಬುದನ್ನು ಇಲ್ಲಿ ಉಲ್ಲೇಖಿಸಿದ್ದೇನೆ.

ದಾಸಸಾಹಿತ್ಯವನ್ನು ಅಭ್ಯಸಿಸಿದ ಅನೇಕರು ದಾಸಪಂಥದ ಉದ್ದೇಶವು ದ್ವೈತಸಿದ್ಧಾಂತದ ಪ್ರತಿಪಾದನೆಯೇ ಹೊರತು ಬೇರೇನಲ್ಲ ಎಂದರು.[೪] ಜಿ. ವರದರಾಜ ರಾವ್‌ರವರು ತಮ್ಮ 'ಹರಿದಾಸಸಾಹಿತ್ಯ ಸಾರ'ವೆಂಬ ಸಂಶೋಧನಾಕೃತಿಯಲ್ಲಿ ಕ್ರಾಂತಿಪ್ರಿಯರಾದ ವಚನಕಾರರಂತೆಯೇ ಸಂಪ್ರದಾಯ ನಿಷ್ಠರಾದ ಹರಿದಾಸರು ಕ್ರಿ. ಶ. ಹದಿನೈದನೆಯ ಶತಮಾನದಿಂದ ಮೊದಲ್ಗೊಂಡು, ಶ್ರೀಮಧ್ವಾಚಾರ್ಯರು ಹೇಳಿದ ದ್ವೈತಸಿದ್ಧಾಂತವನ್ನೂ.....ಬೆಳಕಿಗೆ ತಂದರು' ಎನ್ನುತ್ತಾರೆ. ಆದರೆ ಕೀರ್ತನೆಗಳಲ್ಲಿ ದ್ವೈತಸಿದ್ಧಾಂತದ ಪ್ರತಿಪಾದನೆಯೇ ಅದರ ಉದ್ದೇಶವಲ್ಲವೆಂಬುದು ನನ್ನ ಅನಿಸಿಕೆ. ಅವರ ಭಕ್ತಿಪೂಜೆಯಲ್ಲಿ ಶಿವ, ಪಾರ್ವತಿ, ಹನುಮಂತ ಮೊದಲಾದ ದೇವರ ಆರಾಧನೆಯೂ ನಡೆದಿದೆ. ಜೊತೆಗೆ ಆ ದೇವರುಗಳನ್ನು ಜಾನಪದೀಯವಾಗಿ ಕೊಂಡಾಡಿದ್ದೂ ಇದೆ. ಅವರಲ್ಲಿ ಸ್ವಸ್ಥಸಮಾಜವನ್ನು ಕಟ್ಟುವ ಉದ್ದೇಶವಿದ್ದುದರಿಂದ ಇಂತಹ ಸಾಹಿತ್ಯರಚನೆಯ ಅನಿವಾರ್ಯತೆ ದಾಸರಿಗಿತ್ತೆಂಬುದು ನನ್ನ ಗ್ರಹಿಕೆ.

ಚೈತನ್ಯಪಂಥ ಮತ್ತು ದಾಸಪಂಥಗಳು ಹುಟ್ಟುವ ಸಂದರ್ಭದಲ್ಲಿ ಆಯಾಯ ಪ್ರದೇಶಗಳ ರಾಜಕೀಯ ಮತ್ತು ಸಾಮಾಜಿಕ ಸ್ಥಿತಿಗತಿಗಳು ಪೂರಕವಾಗಿರಲಿಲ್ಲವೆನ್ನುವುದು ಚಾರಿತ್ರಿಕವಾದ ಸತ್ಯ. ಈ ನೆಲೆಯಲ್ಲಿ ದಾಸಪಂಥವು ಸ್ವಸ್ಥಸಮಾಜದ ದೃಷ್ಟಿಯಿಂದ ಸಾಹಿತ್ಯದ ಮೂಲಕವಾಗಿ ಸಮಾಜವನ್ನು ತಿದ್ದುವ ಪ್ರಯತ್ನವನ್ನು ಮಾಡಿತು. ಈ ಸಂದರ್ಭದಲ್ಲಿ ಹರಿದಾಸಪಂಥದಲ್ಲಿ ಮಹಿಳೆಯರು ಕೂಡ ಪಾತ್ರವಹಿಸಿ, ಸಾಹಿತ್ಯ ನಿರ್ಮಾಣದಲ್ಲಿ ತೊಡಗಿಕೊಂಡರು. ಆದರೆ ಇಂತಹ ಸ್ವಸ್ಥಸಮಾಜಕ್ಕೆ ಚೈತನ್ಯಪಂಥದಲ್ಲಿ ಸ್ತ್ರೀಯರು ಒಮ್ಮತವನ್ನು ಸೂಚಿಸಿದ್ದರೂ, ಅವರಿಂದ ಸಾಹಿತ್ಯ ನಿರ್ಮಾಣ ಮಾತ್ರ ಅಷ್ಟೇನು ನಡೆದಿಲ್ಲವೆಂದೇ ಹೇಳಬೇಕು.

ಪಂಥಗಳೆರಡರ ಭಕ್ತಿಕೀರ್ತನೆಗಳಲ್ಲಿ ಸಾದೃಶ್ಯವಾಗಿ ತೋರುವುದು ಪಂಚಭಾವಗಳು. ಆದರೆ ಅವುಗಳೆರಡಲ್ಲಿ ಭಾಷಾಪ್ರೇಮ ಮಾತ್ರ ಎದ್ದುತೋರುವುದು ದಾಸಕೀರ್ತನೆಗಳಲ್ಲಿ ಎನ್ನಬೇಕು. ಅಲ್ಲದೆ ವ್ಯಾಕರಣಾಂಶಗಳಲ್ಲೂ ಕೂಡ ಚೈತನ್ಯಸಾಹಿತ್ಯಕ್ಕಿಂತ ದಾಸಸಾಹಿತ್ಯವು ವಿಶಿಷ್ಟತೆಯನ್ನು ಪಡೆದುಕೊಳ್ಳುತ್ತದೆ. ಹಾಗಾಗಿ ಆ ಕುರಿತಾದ ಶೋಧ ಪ್ರಯತ್ನವನ್ನು ಇಲ್ಲಿ ತೋರಿಸಲು ಮುಂದಾಗಿದ್ದೇನೆ.

ತೌಲನಿಕ ವಿವೇಚನೆಯ ವಿಶಿಷ್ಟತೆಗಳಲ್ಲಿ ಚೈತನ್ಯರು ಅದ್ವೈತಿಗಳೆನ್ನುವ ವಿಚಾರ ಮುಖ್ಯವಾದುದು. ಇದಕ್ಕೆ ಕಾರಣವೆಂದರೆ, ದ್ವೈತಿಗಳಾದ ಚೈತನ್ಯರು ಶಾಂಕರಪಂಥದ ಅದ್ವೈತಿ ಗುರುಗಳೊಬ್ಬರಿಂದ ಸಂನ್ಯಾಸವನ್ನು ಸ್ವೀಕರಿಸಿದುದು. ವಾಸ್ತವದಲ್ಲಿ ಗುರುವು ಯಾವ ಪಂಥದಲ್ಲಿದ್ದುಕೊಂಡು ತನ್ನ ಶಿಷ್ಯನಿಗೆ ಸಂನ್ಯಾಸದೀಕ್ಷೆಯನ್ನು ನೀಡುತ್ತಾನೋ, ಶಿಷ್ಯನೂ ಕೂಡ ಆ ಪಂಥದ ಅನುಯಾಯಿಯಾಗಿ, ಆ ತತ್ವಸಿದ್ಧಾಂತವನ್ನು ಒಪ್ಪಿಕೊಂಡು ಮುನ್ನಡೆಯುತ್ತಾನೆ. ಆದರೆ ಇಲ್ಲಿ ಹಾಗಾಗದಿರುವುದೇ ವಾದವಿವಾದಕ್ಕೆ ಕಾರಣವಾಗುತ್ತದೆ. ಈ ನೆಲೆಯಲ್ಲಿ ಅದ್ವೈತಿಗಳಿಂದ ಸಂನ್ಯಾಸದೀಕ್ಷೆಯನ್ನು ಸ್ವೀಕರಿಸಿಕೊಂಡ ಚೈತನ್ಯರು ದ್ವೈತಿಗಳಾಗಿಯೇ ಇದ್ದುಕೊಂಡು ತತ್ವಸಿದ್ಧಾಂತದ ಮಂಡನೆಯಲ್ಲಿ ಹೇಗೆ ಗಮನಸೆಳೆಯುತ್ತಾರೆಂಬುದನ್ನು ಇಲ್ಲಿ ವಿವರವಾಗಿ ಕಂಡುಕೊಳ್ಳಲು ಪ್ರಯತ್ನಿಸಿದ್ದೇನೆ.

ದಾಸಪಂಥವು ಕೃಷ್ಣನನ್ನು ಮುಖ್ಯವಾಗಿ ನೋಡುವುದೇ ಅವತಾರಪುರುಷನೆಂಬ ಕಲ್ಪನೆಯಿಂದ. ಅವರು ಬಾಲಕೃಷ್ಣನನ್ನು ಚಿತ್ರಿಸುವಾಗ ಮಾತ್ರ ಆತ ಮಾನವನಾಗುತ್ತಾನೆ. ಆದರೆ ಚೈತನ್ಯಪಂಥವು ಕೃಷ್ಣನನ್ನು ಅವತಾರಪುರುಷನಾಗಿ ನೋಡದಿರುವುದೇ ಇಲ್ಲಿಯ ಮುಖ್ಯ ವೈಶಿಷ್ಟ್ಯ. ಅಲ್ಲದೆ, ದಾಸರ ಪಾಲಿಗೆ ಕೃಷ್ಣನ ರಾಸಲೀಲೆಯು ಮುಖ್ಯವಾಗಿ ಗೋಪಿಕೆಯರೊಂದಿಗೆ ನೆರವೇರುತ್ತದೆ. ಇಲ್ಲಿ ರಾಧೆಯ ವಿಚಾರವಾಗಿ ದಾಸಶ್ರೇಷ್ಠರುಗಳೆಲ್ಲ ಹೆಚ್ಚಾಗಿ ಮೌನವನ್ನು ತಾಳುತ್ತಾರೆ.* ಜಿ. ವರದರಾಜ ರಾವ್ ಅವರ ದಾಸಕೀರ್ತನ ಹುಡುಕಾಟದಲ್ಲಿ 'ಕನಕದಾಸರು, 'ಯಾದವರಾಯ ಬೃಂದಾವನದೊಳು ವೇಣುನಾದವ ಮಾಡುತಿರೆ ರಾಧೆ ಮುಂತಾದ ಗೋಪಿಯರೆಲ್ಲ ಮಧುಸೂದನ ನಿಮ್ಮನು ಸೇವಿಸುತಿರೆ' ಎಂದು ಮೊದಲುಮಾಡಿ ಶ್ರೀಕೃಷ್ಣನ ಕೊಳಲಿನ ಗಾನದ ವೈಖರಿಯನ್ನು ವರ್ಣಿಸುವಲ್ಲಿ ರಾಧೆಯ ಹೆಸರನ್ನು ಸ್ಪಷ್ಟವಾಗಿ ಹೇಳಿರುವುದನ್ನೂ ಹೀಗೆಯೇ ವಿಜಯದಾಸರು 'ಕಾದನು ವತ್ಸವ ಹರಿ ಕಾದನಾ, ವೇದವೇದ್ಯ ಸಾಧುವಿನುತ ರಾಧಿಕಾರಮಣ ಕೃಷ್ಣ' ಎಂದು ರಾಧೆಯ ಹೆಸರು ಎರಡೇ ಎರಡುಕಡೆ ಪ್ರಸ್ತಾವಾಗಿರುವುದನ್ನು ಗಮನಿಸಿದ್ದಾರೆ. ಈ ರಚನೆಗಳನ್ನು ಹೊರತು ಪಡಿಸಿದರೆ ದಾಸಪಂಥದಲ್ಲಿ ರಾಧೆಯ ವಿಚಾರ ಎಲ್ಲೂ ಪ್ರಸ್ತಾಪವಾಗುವುದಿಲ್ಲ. ಆದರೆ ಚೈತನ್ಯಪಂಥದ ಸಾಹಿತ್ಯದಲ್ಲಿ, ತತ್ವದಲ್ಲಿ ರಾಧೆಯೇ ಮುಖ್ಯಭೂಮಿಕೆಯನ್ನು ಪಡೆಯುತ್ತಾಳೆ. ಅಲ್ಲಿ ಕೃಷ್ಣನನ್ನು ಪಡೆಯುವ ಪ್ರಯತ್ನವೊಂದು ರಾಧೆಯ ಮೂಲಕವಾಗಿಯೇ ನಡೆಯುತ್ತದೆ. ಹಾಗಾಗಿ ಚೈತನ್ಯಪಂಥದಲ್ಲಿ 'ರಾಧಾಮಾಧವ ಪ್ರೇಮ'ವೆಂಬುದೇ ಮುಖ್ಯ ವಿಚಾರವಾಗುತ್ತದೆ. ಭಕ್ತನು ರಾಧೆಯಾಗಿ ಕೃಷ್ಣನಲ್ಲಿ ಪ್ರೇಮಭಕ್ತಿಯನ್ನು ತೋರಿಸುವ ವಿಧಾನ ಮತ್ತು ಆತನನ್ನು ಪಡೆಯುವ ಭಕ್ತಿತಂತ್ರವೊಂದು ಚೈತನ್ಯಪಂಥದ ತಾತ್ವಿಕತೆಯಲ್ಲಿ ಎದ್ದು ತೋರುವ ಅಂಶ. ಈ ಅಪೂರ್ವ ಪ್ರೇಮಭಕ್ತಿಯು ದಾಸಪಂಥದಲ್ಲಿ ಇಲ್ಲವಾಗುವುದನ್ನು ಮತ್ತು ಚೈತನ್ಯಪಂಥದಲ್ಲಿ ಅದುವೇ ಮುಖ್ಯವಾಗುವುದನ್ನು ನನ್ನ ಈ ಪ್ರಬಂಧದಲ್ಲಿ ತೋರಿಸಿದ್ದೇನೆ.

ಚೈತನ್ಯಪಂಥವು ಉಳಿದ ಪಂಥಕ್ಕಿಂತ ವಿಶಿಷ್ಟವೆನಿಸುವುದೇ ಶರಣಾಗತಿ ಮತ್ತು ಭಕ್ತಿಸೇವೆಯೆಂಬ ತತ್ವದಿಂದ. ದಾಸಪಂಥದಲ್ಲಿ ಶರಣಾಗತಿ ಇದ್ದರೂ ಅಲ್ಲಿ ಅದುವೇ ಪ್ರಾಮುಖ್ಯವಲ್ಲ. ಆದರೆ ಚೈತನ್ಯಪಂಥದಲ್ಲಿ

ಶರಣಾಗತಿಯಿಂದಲೇ ಮುಕ್ತಿ ಪ್ರಾಪ್ತಿಯೆಂಬುದು ಪ್ರಮುಖವಾದ ತತ್ವವಾದ. ಜೊತೆಗೆ ಅದ್ವೈತ ಗುರುಗಳಿಂದ ಸಂನ್ಯಾಸ ಸ್ವೀಕರಿಸಿದ ಚೈತನ್ಯರು ಭಗವಂತನ ನಿರಾಕಾರವನ್ನು ಖಂಡಿಸಿ, ಆತನ ಸಾಕಾರವನ್ನು ಮಂಡಿಸುವ ಮೂಲಕ ಶಾಂಕರ ತತ್ವಕ್ಕೆ ವಿರುದ್ಧವಾದ ತತ್ವಚಿಂತನೆಯನ್ನು ನಡೆಸುತ್ತಾರೆ. ಈ ಶೋಧನೆಯೊಂದು ಪ್ರಬಂಧದ ವಿಶಿಷ್ಟತೆಗಳಲ್ಲೊಂದು ಎಂದು ನಾನು ಭಾವಿಸಿದ್ದೇನೆ.

ಎರಡು ಪಂಥಗಳ ಸಾಹಿತ್ಯ ಚಿಂತನೆಯಲ್ಲಿ ಛಂದಸ್ಸಿನ ಪ್ರಸ್ತಾವನೆ ಮುಖ್ಯವೆನಿಸುತ್ತದೆ. ದಾಸಪಂಥದ ಛಂದೋಬದ್ಧ ಸಾಹಿತ್ಯಕ್ಕೆ ಚೈತನ್ಯಪಂಥದ ಛಂದೋಸಾಹಿತ್ಯವನ್ನು ಹೋಲಿಸಿ ನೋಡಿದರೆ, ವೈವಿಧ್ಯಮಯ ಸ್ವರೂಪದ ಛಂದೋಬದ್ಧ ಸಾಹಿತ್ಯವಿರುವುದು ದಾಸಕೀರ್ತನೆಗಳಲ್ಲಿ. ಚೈತನ್ಯಸಾಹಿತ್ಯದಲ್ಲಿ ಕೇವಲ ದ್ವಿಪದಿ ಛಂದೋರೂಪಗಳನ್ನು ಬಿಟ್ಟರೆ ಉಳಿದ ವೈವಿಧ್ಯತೆಗಳು ತೋರಿಬರುವುದಿಲ್ಲ. ಅಲ್ಲದೆ ಅಂತ್ಯಪ್ರಾಸವೊಂದನ್ನು ಬಿಟ್ಟರೆ ಇತರ ಪ್ರಾಸ ವೈವಿಧ್ಯತೆಗಳಿಗೂ ಅಲ್ಲಿ ಸ್ಥಾನವಿಲ್ಲ. ದಾಸಕೀರ್ತನೆಗಳಲ್ಲಾದರೆ, ಕವಿ ಜಿಹ್ವಾಬಂಧನದ (ಸಿಂಹ, ಗಜ, ಹಯ, ಶರಭ, ವೃಷಭ ಹಾಗೂ ಅಜ) ಪ್ರಾಸಗಳು, ಕವಿರಾಜಮಾರ್ಗದ (ವಿನುತ, ಶಾಂತ, ವರ್ಗ, ಸಮೀಪ, ಅನು ಹಾಗೂ ಅಂತ್ಯ) ಪ್ರಾಸಗಳು, ಅಲ್ಲದೆ, ಪರ್ಯಾಯ ಪದಾಂತ್ಯ, ಉಭಯ ಪದಾಂತ್ಯ, ಮಧ್ಯ–ಅಂತ್ಯ, ಆದಿ–ಮಧ್ಯ–ಅಂತ್ಯ, ಆದಿ–ಮಧ್ಯ, ವಿಶಿಷ್ಟಾಂತ್ಯ, ದ್ವ್ಯಕ್ಷರಾದಿ, ಸ್ವ್ಯಕ್ಷರಾಂತ, ತ್ರ್ಯಕ್ಷರಾಂತ, ಒಳ, ಅಂತರ್‌ಅಂತ್ಯಪ್ರಾಸಗಳು ಅತಿಯಾಗಿ ಆವರಿಸಿವೆ.

ಚೈತನ್ಯಸಾಹಿತ್ಯದಲ್ಲಿ ತೋರದ ವಡಿಪ್ರಸ್ತಾಪವೂ ದಾಸಕೀರ್ತನೆಗಳಲ್ಲಿ ಅಡಗಿದೆ. ಸ್ವರಪ್ರಧಾನವಡಿ, ಸ್ವರಮೈತ್ರಿವಡಿ, ಏಕವರ್ಣವಡಿ, ಸ್ವರವರ್ಣವಡಿ, ಸಮ್ಮಿಶ್ರವಡಿ, ವರ್ಗವಡಿ, ಸರಸವಡಿ, ಸಂಯುಕ್ತಾಕ್ಷರವಡಿ ಈ ಮೊದಲಾದವುಗಳು ಕೀರ್ತನೆಗಳ ಆಂತರಿಕ ಚೆಲುವನ್ನು ಹೆಚ್ಚಿಸಿದೆ. ಇಷ್ಟೇ ಅಲ್ಲದೆ, ಆರ್ಯಾಸವಾಯಿ, ಭೋಗಾರ್ಧ ಷಟ್ಪದಿ, ಶರಷಟ್ಪದಿ, ಉತ್ಸಾಹ, ಮಂದಾನಿಲ ಹಾಗೂ ಲಲಿತರಗಳೆಗಳು ಮಾತ್ರಾಛಂದಸ್ಸಿನ ಮೂಲಕವಾಗಿಯೂ, ಸೊಬಗಿನ ಸೋನೆ, ಅಂಶಷಟ್ಪದಿ, ಕಿರುಸೀಸಪದ್ಯ, ಸಾಂಗತ್ಯ, ಛಂದೋವತಂಸ ಮೊದಲಾದ ಅಂಶಗಣಾತ್ಮಕ ಛಂದೋರೂಪಗಳು ದಾಸಕೀರ್ತನೆಗಳಲ್ಲಿ ಅಡಕವಾಗಿ ಚೈತನ್ಯಸಾಹಿತ್ಯದ ಛಂದೋರೂಪಕ್ಕಿಂತ ವೈಶಿಷ್ಟ್ಯತೆಯನ್ನು ಪಡೆದಿರುವುದನ್ನು ಹುಡುಕಿದ್ದೇನೆ.

ಇನ್ನು ಹೇಳಲೇಬೇಕಾದುದು ಉಭಯ ಪಂಥಗಳಲ್ಲಿ ಸಿಗುವ ಪವಾಡಗಳ ಕುರಿತಾಗಿ. ಪರಸ್ಪರ ಪಂಥಗಳಲ್ಲಿ ಕಾಣಸಿಗುವ ಪವಾಡಗಳ ಸತ್ಯಾಸತ್ಯತೆಯ ಕುರಿತಾಗಿ ಸಂಶೋಧನೆಯನ್ನು ನಡೆಸುವುದು ಮತ್ತು ಅದನ್ನು ವೈಜ್ಞಾನಿಕ ನೆಲೆಯಲ್ಲಿ ಅರ್ಥೈಸುವುದು ಈ ಪ್ರಬಂಧದ ಉದ್ದೇಶವಲ್ಲ. ಇಲ್ಲಿ ನಾನು ಸಾಹಿತ್ಯ ವಿದ್ಯಾರ್ಥಿಯಾಗಿ ಪವಾಡಕಥೆಗಳ ಸಮತೋಲನವನ್ನಷ್ಟೇ ಮಾಡಲು ಹೊರಟಿದ್ದೇನೆ. ಹೀಗೆ ಹೊರಟಾಗ, ಪವಾಡಗಳ ಹಿಂದೆಯೊಂದು ತಾತ್ವಿಕದೃಷ್ಟಿಯೊಂದು ಗಮನಕ್ಕೆ ಬರುತ್ತದೆ. ಇಲ್ಲಿಯ ಪವಾಡಗಳಲ್ಲಿ, ಅಲೌಕಿಕ ಜನನ, ಆರ್ತರ ರಕ್ಷಣೆ, ವ್ಯಕ್ತಿತ್ವದ ಮಹಿಮೆ, ಧರ್ಮಸೂಕ್ಷ್ಮದ ವಾದವಿವಾದಗಳು, ಸತ್ತದೇಹಕ್ಕೆ ಮರುಜೀವ ನೀಡುವುದು, ಸ್ಥಗಿತಗೊಂಡ ರಥವನ್ನು ಸಂಕೀರ್ತನೆಯ ಮೂಲಕವಾಗಿ ಚಲಿಸುವಂತೆ ಮಾಡುವುದು...ಇಂತಹ

ಹಲವಾರು ಅಚ್ಚರಿಯ ವಿಚಾರಗಳು ಸಿಗಲು ಸಾಧ್ಯ. ಆದರೆ ಇದರ ಸತ್ಯಾಸತ್ಯತೆಯ ಕುರಿತು ವಿಚಾರಿಸದೆ, ಅದರ ಹಿಂದಿರುವ ಹರಿಸರ್ವೋತ್ತಮತ್ವವನ್ನು ಮತ್ತು ಲೋಕೋಪಕಾರದ ದೃಷ್ಟಿಯನ್ನು ಮಾತ್ರ ಕಂಡಿರಿಸುವ ಉದ್ದೇಶವು ನನ್ನದಾಗಿದೆ.

*****

ಒಟ್ಟಿನಲ್ಲಿ, ಈ ಎರಡು ಪಂಥಗಳು ವೈಷ್ಣವ ಪಂಥಗಳಾದರೂ ಅವು ಹುಟ್ಟಿಕೊಂಡು ಬಂದ ಭೂಭಾಗ ಮಾತ್ರ ಬೇರೆಬೇರೆ. ಅಂತೆಯೇ ಅಲ್ಲಿಯ ನಾಗರಿಕತೆ, ಭಾಷೆ ಎಲ್ಲವೂ ಬೇರೆಯಾಗುತ್ತದೆ. ಹಾಗಾಗಿ ಇಲ್ಲಿಯ ಅಧ್ಯಯನಕ್ಕೆ ಪಂಥಗಳ ತಾತ್ವಿಕ ಪರಿಣಿತಿಯೊಂದು ಮಾತ್ರ ಸಾಲದಾಗುತ್ತದೆ. ಬಹುಮುಖೀ ಅಧ್ಯಯನದ ಅಗತ್ಯ ಮುಖ್ಯವಾಗುತ್ತದೆ. ಆದುದರಿಂದ ಅದಕ್ಕೆ ಪೂರಕವಾದ ವಿಶಾಲ ಅಧ್ಯಯನ, ಕಣ್ಮುಂದೆ ಸಂಭವಿಸುತ್ತಿರುವ ಬದಲಾವಣೆಗಳನ್ನು ಗಮನಿಸುವ ಸೂಕ್ಷ್ಮತೆ, ರಾಜಕೀಯ ಪ್ರಜ್ಞೆಯಲ್ಲಿ ಅವನ್ನು ಅರ್ಥಮಾಡಿಕೊಳ್ಳುವ ಜೀವಂತಿಕೆ ಇವೆಲ್ಲ ಬೇಕಾಗುತ್ತದೆಂಬ ರಹಮತ್ ತರೀಕೆರೆಯವರ ಮಾತನ್ನು[೬] ಹಾಗೂ 'ಸಂಶೋಧನೆಯು ನಿರ್ವಾತದಲ್ಲಿ ನಡೆಯುವ ಪ್ರಕ್ರಿಯೆಯಲ್ಲ; ಯಾವುದೋ ಒಂದು ಚಾರಿತ್ರಿಕ ಘಟ್ಟದಲ್ಲಿನ ಸಾಮಾಜಿಕ ಪರಿಸರದಲ್ಲಿ ನಡೆಯುವ ಪ್ರಕ್ರಿಯೆ'[೭] ಎನ್ನುವ ಎಂ. ಚಂದ್ರ ಪೂಜಾರಿಯವರ ಮಾತನ್ನು ಇಲ್ಲಿ ಒಪ್ಪಿಕೊಳ್ಳಬೇಕಾಗುತ್ತದೆ.

ಇಲ್ಲಿಯ ದಾಸಪಂಥ ಹಾಗೂ ಚೈತನ್ಯಪಂಥಗಳೆರಡು ಆಧ್ಯಾತ್ಮಿಕವಾದವುಗಳು. ಅವುಗಳೆರಡರಲ್ಲಿಯೂ ಸಾದೃಶ್ಯವೂ ಇದೆ; ವೈದೃಶ್ಯವೂ ಇದೆ. ಇಲ್ಲಿ ದೇಹವನ್ನು ಆಧಾರ ಮಾಡಿಕೊಂಡು ಮಾನವಕಲ್ಯಾಣ ಕಾರ್ಯಗಳನ್ನು ಮಾಡುವುದರಲ್ಲೇ ಪ್ರತಿಯೊಬ್ಬ ಅನುಭಾವಿಯೂ ನಿರತನಾಗುತ್ತಾನೆ. ಐಹಿಕದೇಹವು ಕೊನೆಯಲ್ಲಿ ಇಲ್ಲವಾಗತಕ್ಕದ್ದೆಂದೂ ಆದರೆ ಆಧ್ಯಾತ್ಮಿಕ ಆತ್ಮವು ಚಿರಂತನವಾಗಿರುತ್ತೆಂದೂ ನಂಬುತ್ತದೆ. ಈ ನೆಲೆಯಲ್ಲಿ ದಾಸಪಂಥವು ಸಾಕು ಮನುಜಜನ್ಮವೆಂದು ಹಾಡಿದರೆ, ಚೈತನ್ಯಪಂಥವು ಲೌಕಿಕದಲ್ಲೇ ಕೃಷ್ಣನು ಸಿಗುವುದಿದ್ದರೆ ಮುಕ್ತಿಯೇ ಬೇಡವೆಂದು ಹೇಳಲು ಮುಂದಾಗುತ್ತದೆ. ಆದರೂ ಪರಸ್ಪರ ಪಂಥಗಳ ಸಾಹಿತ್ಯ ರಚನೆಗಳಲ್ಲಿ ಕಂಡುಬರುವ ಹೊಲೆತನ, ಜಾತಿಪದ್ಧತಿ, ಬೂಟಕತನ, ಅನ್ಯಧರ್ಮಗಳ ನಡುವಣ ಸಾಮರಸ್ಯ, ತತ್ವಪದಗಳು, ಭಾಷಾಪ್ರೇಮಗಳೆಲ್ಲವು ಇಲ್ಲಿ ಸಮಾಜದರ್ಶನ ಮತ್ತು ಮೌಲ್ಯಗಳಾಗಿ ಪ್ರತಿನಿಧಿಸುತ್ತವೆ. ಆಶ್ರಮಗಳಲ್ಲೊಂದಾದ ಸಂನ್ಯಾಸವು ಮೂಲದಲ್ಲಿದ್ದ ನಿಬಂಧನೆಗಳನ್ನು ದಾಟಿಕೊಂಡು ಹೇಗೆ ಸಾಮಾಜಿಕರ ಏಳಿಗೆಗೆ ಸ್ಪಂದಿಸಬಹುದೆಂದು ಹೇಳಿಕೊಡುತ್ತದೆ.[೮] ಲೌಕಿಕಕ್ಕೆ ಸಂಬಂಧಿಸಿದಂತೆ ತೋರುವ ಶಾಕಪಾಕಪದಾರ್ಥಗಳು, ಪ್ರಕೃತಿಪ್ರೇಮ ಆರಾಧನೆ, ಜನಪದ ಬಾಷೆ, ಸಂಸಾರ ನಿಂದನೆ, ಗುರುಶಿಷ್ಯ ಪರಿಕಲ್ಪನೆ ಮುಂತಾದ ವಿಚಾರಗಳಲ್ಲಿಯೂ ಅಲೌಕಿಕದ ಕಲ್ಪನೆಗಳನ್ನು ಕಟ್ಟಿಕೊಳ್ಳುತ್ತದೆ. ಮುಖ್ಯವಾಗಿ ಉಭಯಪಂಥಗಳೆರಡು ವೈಷ್ಣವಪಂಥಗಳಾಗಿ ದಕ್ಷಿಣೋತ್ತರಭಾರತವನ್ನು ಬೆಸೆದ ಬಗೆಯನ್ನು ನಾನಿಲ್ಲಿ ಕಂಡಿರಿಸುವ ಪ್ರಯತ್ನ ಮಾಡಿದ್ದೇನೆ.

ಅಧ್ಯಾಯ :೧ ಅಡಿಟಿಪ್ಪಣಿ

೧. ಈ ಪರಿಯ ಸೊಬಗು/ ದಾಸಸಾಹಿತ್ಯದ ಅಧ್ಯಯನ: ಐತಿಹಾಸಿಕ ಪರಿಶೀಲನೆ, ಪು ಸಂ–೨೯೦.

೨. ಚೈತನ್ಯ ಚರಿತಾಮೃತ, ಪು ಸಂ–೫೩೬

ಬೂಟಾಟಿಕೆಯನ್ನು ಬಯಲಿಗೆಳೆಯುವ ಪ್ರಯತ್ನದಲ್ಲಿ ಎರಡು ಪಂಥಗಳ ಪಾತ್ರವೂ ಪ್ರಧಾನವಾಗುತ್ತದೆ. ಈ ಕುರಿತಾಗಿ ದಾಸಸಾಹಿತ್ಯದಲ್ಲಂತೂ ಹೆಚ್ಚಾದ ಉದಾಹರಣೆಗಳು ಸಿಗುತ್ತವೆ. ದಾಸಭಾವನೆಗಳಿಗೆ ಸಮಾನವಾಗಿ ಚೈತನ್ಯರೂ ಕೂಡ ಶಾಂತಿಪುರದ ರಘುನಾಥ ದಾಸರಿಗೆ ವೈರಾಗ್ಯದ ವಿಚಾರವನ್ನು ಪ್ರಸ್ತಾಪಿಸಲು ಮುಂದಾಗುತ್ತಾರೆ. ಅವರು ನಿಜವಾದ ವೈರಾಗ್ಯವು ಮರ್ಕಟ ವೈರಾಗ್ಯ ಅಥವಾ ಫಲ್ಗು ವೈರಾಗ್ಯದಂತೆ ನಾನಾ ಪರಿವೇಶಗಳಿಗೆ ಒಳಗಾಗುವುದಿಲ್ಲ ಎನ್ನುತ್ತಾರೆ.

ಮರ್ಕಟ ವೈರಾಗ್ಯ ನಾ ಕರ ಲೋಕ ದೇಖಾಇಾ ।ಯಥಾಯೋಗ್ಯ ವಿಷಯ ಭುಞ್ಜ ಅನಾಸಕ್ತ ಹೈಇಾ ॥

–ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೧೬, ಶ್ಲೋಕ ೨೩೮, ಪು: ೫೩೬

ಮರ್ಕಟವು ಬಟ್ಟೆಬರೆಗಳನ್ನು ತೊಡಲು ಒಪ್ಪದೆ ಕಾಡಿನಲ್ಲಿ ನಗ್ನವಾಗಿಯೇ ಇದ್ದು ವೈರಾಗ್ಯವನ್ನು ಪ್ರದರ್ಶಿಸುತ್ತದೆ. ಆದರೆ ಅದು ಹತ್ತಾರು ಹೆಣ್ಣು ಕೋತಿಗಳೊಂದಿಗೆ ಓಡಾಡುತ್ತಾ ಇಂದ್ರಿಯಾನಂದವನ್ನು ಅನುಭವಿಸುವುದರಲ್ಲೇ ನಿರತರಾಗಿರುತ್ತವೆ. ಹಾಗಾಗಿ, ವೈರಾಗ್ಯವು ತಾತ್ಕಾಲಿಕಕ್ಕಲ್ಲ; ಅದು ಬದುಕಿನುದ್ದಕ್ಕೂ ಇರಬೇಕು. ಸದ್ಯಕ್ಕೆ ಇಹಲೋಕದ ಸುಖವನ್ನು ಅನುಭವಿಸಿರಿ. ಆದರೆ ಆ ಸುಖಕ್ಕೆ ಅಂಟಿಕೊಳ್ಳಬೇಡಿರೆಂದು ಚೈತನ್ಯರು ಎಚ್ಚರಿಕೆಯನ್ನು ನೀಡುತ್ತಾರೆ.

೩. ಅರಿವಿನ ಕುರುಹು, ಪುಟ ಸಂ–೬೨.

೪. ಹರಿದಾಸಸಾಹಿತ್ಯ ಸಾರ, ಪುಟ ಸಂ–೨.

೫. ಹರಿದಾಸಸಾಹಿತ್ಯ ಸಾರ, ಪುಟ ಸಂ–೧೫೩.

೬. ಕನ್ನಡ ಸಂಶೋಧನೆ–ತಾತ್ವಿಕ ವಿಚಾರ, ಪುಟ ಸಂ–೬೫.

೭. ಸಮಾಜ ಸಂಶೋಧನೆ, ಪುಟ ಸಂ–೫೬.

೮. ಚೈತನ್ಯ ಚರಿತಾಮೃತ, ಮಧ್ಯಲೀಲಾ, ಪುಟ ಸಂ–೭೮

ಸಂನ್ಯಾಸಿಗಳು ಶೂದ್ರರ ಮನೆಯಲ್ಲಿ ತಂಗುವ ಹಾಗಿಲ್ಲ. ಆದರೆ ಗೌಡೀಯ ಪಂಥದ ಚೈತನ್ಯ ಪ್ರಭುಗಳು ಚಂದ್ರಶೇಖರನೆಂಬ ಶೂದ್ರನ ಮನೆಯಲ್ಲಿ ತಂಗುತ್ತಾರೆ. ಐನೂರು ವರ್ಷಗಳ ಹಿಂದೆ ಬಂಗಾಳದಲ್ಲಿ ಬ್ರಾಹ್ಮಣ ದಂಪತಿಗೆ ಹುಟ್ಟಿದವನನ್ನು ಮಾತ್ರ ಬ್ರಾಹ್ಮಣನೆಂದು ಒಪ್ಪಿಕೊಳ್ಳಲಾಗುತ್ತಿತ್ತು. ಅಂದರೆ ಇತರ ಯಾವುದೇ ಜಾತಿಯಲ್ಲಿ ಹುಟ್ಟಿದವರು ಅಬ್ರಾಹ್ಮಣರಾಗುತ್ತಿದ್ದರು. ಇಲ್ಲಿಯ ಚಂದ್ರಶೇಖರನೆಂಬ ಗುಮಾಸ್ತನು 'ಕಾಯಸ್ಥ'ವೆನ್ನುವಂತ ಜಾತಿಯಲ್ಲಿ ಹುಟ್ಟಿದ್ದರೂ ಆತ ಶೂದ್ರನೆನ್ನುವಂತ ಹೆಸರಿಗೆ ಒಳಗಾಗಿದ್ದನು. ಆ ಕಾಲದಲ್ಲಿ ಅಲ್ಲಿಯ ವೈಶ್ಯರು, ಸುವರ್ಣವಣಿಕರು, ವೈದ್ಯರುಗಳೆಲ್ಲರು ಶೂದ್ರರೆಂದೇ

ಪರಿಗಣಿಸಲಾಗಿತ್ತು. ಆದರೆ ಈ ನೆಲೆಯಲ್ಲಿ ಬ್ರಾಹ್ಮಣನೆಂಬ ಶಬ್ದಕ್ಕೆ ಹೊಸ ವ್ಯಾಖ್ಯಾನವನ್ನು ನೀಡಿದವರು ಚೈತನ್ಯರೆಂದುಕೊಳ್ಳಬೇಕು. ಅವರ ಪ್ರಕಾರ ಬ್ರಾಹ್ಮಣ್ಯವು ಹುಟ್ಟಿನಿಂದಲ್ಲ. ಅದು ಪಾಲನೆಯಿಂದ ಎನ್ನುವುದು ಚೈತನ್ಯರ ನಿಲುವು. ಹಾಗಾಗಿ ಅವರು ಬಂಗಾಳದಲ್ಲಿ ಅಂದಿನ ಕೃತಕ ನೀತಿಗಳನ್ನು ಒಪ್ಪದೆಹೋದದ್ದು ದೊಡ್ಡ ಸುಧಾರಣೆ ಎಂದೇ ಭಾವಿಸಬೇಕು. ಅಲ್ಲದೆ, ವೈಶ್ಯರು, ಸುವರ್ಣವಣಿಕರು ಹಾಗೂ ವೈದ್ಯರೆಲ್ಲರೂ ಯಜ್ಞೋಪವೀತ ಧಾರಣೆಯನ್ನು ಆರಂಭಿಸಿದುದು ಆ ಕಾಲದ ಕ್ರಾಂತಿಯುಕ್ತ ಬದಲಾವಣೆಯೆನ್ನಬೇಕು.

ಬಂಗಾಳದಲ್ಲಿ ಅದೆಷ್ಟೋ ಕುಟುಂಬಗಳು ಬ್ರಾಹ್ಮಣರಾಗಿ ಬಂದಿಲ್ಲದಿದ್ದರೂ ಅವರು ಅನಂತರದಲ್ಲಿ ದೀಕ್ಷೆಯನ್ನು ಪಡೆದು, ವೈಷ್ಣವ ತಂತ್ರಗಳ ಮೂಲಕವಾಗಿ ಯಜ್ಞೋಪವೀತ ಧಾರಣೆಯನ್ನು ಮಾಡಿಕೊಂಡು ಬ್ರಾಹ್ಮಣರೆನಿಸಿಕೊಂಡರು. ಅಂತೆಯೇ ಆಚಾರ್ಯಕಾರ್ಯವನ್ನು ನಿರ್ವಹಿಸಿದರು. ಚೈತನ್ಯಪಂಥದಲ್ಲಿ ಬರುವ ಠಾಕೂರ ರಘುನಂದನ, ಆಚಾರ್ಯ ಠಾಕೂರ ಕೃಷ್ಣದಾಸ, ನವನೀ ಹೋಡ, ರಸಿಕಾನಂದ ದೇವ ಮೊದಲಾದವರೆಲ್ಲ ಉಪನಯನ ಸಂಸ್ಕಾರಕ್ಕೊಳಗಾಗಿ ಬ್ರಾಹ್ಮಣರಾದವರೆನ್ನುವುದು ಒಪ್ಪಿಕೊಳ್ಳಬೇಕಾದ ವಿಚಾರ.

****

ಅಧ್ಯಾಯ : ೨

ಭಾರತೀಯ ಭಕ್ತಿಪಂಥದ ಉಗಮ ಮತ್ತು ವಿಕಾಸ

ಭಾರತೀಯ ಭಕ್ತಿಮಾರ್ಗಕ್ಕೆ ಬಹಳ ಪುರಾತನವಾದ ಇತಿಹಾಸ ಉಂಟು. ಅದರ ಬೇರುಗಳನ್ನು ವೈದಿಕಸಾಹಿತ್ಯದಲ್ಲೇ ಗುರುತಿಸಬಹುದು. ಇಲ್ಲಿ ಭಯ, ಸಂದೇಹ, ಪ್ರೇಮ, ಶ್ರದ್ಧೆ, ವಿಶ್ವಾಸ, ಗೌರವಗಳು ಮಾನವೀಯ ಆಧಾರದ ಮೇಲೆ ದೈವಕಲ್ಪನೆಯಲ್ಲಿ ಭಕ್ತಿಮಾರ್ಗವಾಗಿ ರೂಪುಗೊಂಡಿತು. ಭಕ್ತಿಮಾರ್ಗದ ಬಿತ್ತರಕ್ಕಾಗಿಯೇ ರಾಮಾಯಣ, ಮಹಾಭಾರತ ಮತ್ತು ಪಂಚರಾತ್ರ ಎಂಬೀ ಇತಿಹಾಸ ಗ್ರಂಥಗಳು ಮತ್ತು ಹದಿನೆಂಟು ಪುರಾಣಗಳು ರೂಪುಗೊಂಡವು. ರಾಮಾಯಣದಲ್ಲಿ ಆಂಜನೇಯನೇ ಭಕ್ತಿಮಾರ್ಗದ ಮೂಲಪುರುಷನಾಗಿ, ಮಹಾಭಾರತದಲ್ಲಿ ಭೀಮಾರ್ಜುನ ಭೀಷ್ಮಾದಿಗಳೆಲ್ಲ ಭಕ್ತಿಮಾರ್ಗದ ಆದರ್ಶಪುರುಷರಾಗಿ ಕಂಡರೆ, ಪಂಚರಾತ್ರದಲ್ಲಿ ಅರ್ಚನಾವಿಧಾನವೇ ಭಕ್ತಿಪರಂಪರೆಯ ಇತಿಹಾಸವಾಗಿ ತೋರುತ್ತದೆ. ಮುಖ್ಯವಾಗಿ ದೈವಾರಾಧನೆ ಎಂಬುದು ಪ್ರಾಚೀನವಾದುದು. ಆ ಆರಾಧನೆಯು ಎಲ್ಲೆಲ್ಲಿ ನಡೆದಿದೆಯೋ, ಯಾವ ಕಾಲದಲ್ಲಿ ನಡೆದಿದೆಯೋ ಅಲ್ಲಲ್ಲಿ ಭಕ್ತಿಯು ಇತ್ತೆಂಬುದು ಒಪ್ಪಬೇಕಾದ ವಿಚಾರ. ಹಾಗೆಯೇ ಧರ್ಮವೂ ಕೂಡ. ಭಕ್ತಿ ಮತ್ತು ಧರ್ಮಗಳು ಎಂದೆಂದಿಗೂ ಪೂರಕ ಹಾಗೂ ಸಮ್ಮಿಶ್ರ. ಭಕ್ತಿ ಇಲ್ಲದೆ ಆರಾಧನೆ ಇಲ್ಲ. ಆರಾಧನೆ ಇಲ್ಲದೆ ಭಕ್ತಿಯೂ ಇಲ್ಲ.

ಭಕ್ತಿ ಎಂಬುದು 'ಭಜ್' ಎಂಬ ಧಾತುವಿನಿಂದ ಹುಟ್ಟಿದೆ. ಇದು ಸೇವೆ ಎಂಬ ಅರ್ಥದೊಂದಿಗೆ, 'ಭಜತಿ–ಭಜತೇ' ಎಂಬ ರೂಪವನ್ನು ಪಡೆದುಕೊಂಡು, ಆರಾಧಿಸು, ಅನುಭವಿಸು, ಉಪಾಸನೆ ಮಾಡು, ಉಪಚರಿಸು, ಕೃಪೆದೋರು, ಅನುಗ್ರಹಿಸು ಎಂಬಂತೆ ಹಲವು ಅರ್ಥಗಳನ್ನು ನೀಡುತ್ತದೆ. ಹಾಗಾಗಿ ಭಕ್ತಿಯಿಂದ ಭಜಿಸಬೇಕಾದದ್ದು ದೇವರನ್ನು. ಇಲ್ಲಿ 'ದೇವರು' ಎಂಬುದನ್ನು ಕರ್ಮಪದವನ್ನಾಗಿಸಿಕೊಂಡ ಮಾನವ ಪ್ರಜ್ಞಾವಂತನಾಗಲು ಬಯಸುತ್ತಾನೆ.

ದೈಹಿಕಪೋಷಣೆ ಮತ್ತು ರಕ್ಷಣೆಗಾಗಿ ಅಶನವಸನ ವಸತಿಗಳು ಪೂರೈಕೆಯಾದ ಅನಂತರ ಪ್ರಜ್ಞಾವಂತ ಮನುಷ್ಯನಿಗೆ ಸತ್ಯಜಿಜ್ಞಾಸೆಯೊಂದು ಕಾಡಲಾರಂಭಿಸಿರಬೇಕು. ಜೈವಿಕವಾಗಿ ತೋರಿಬರುವ ಜನನಮರಣಾದಿಗಳು ಆತನನ್ನು ಅಂತರ್ಮುಖಿಯನ್ನಾಗಿಸಿತು. ಈ ಸಂದರ್ಭದಲ್ಲಿ, ನಾನು ಯಾರು ?, ಜನನಕ್ಕಿಂತ ಮೊದಲು ಏನು ?, ಎಲ್ಲಿಂದ ಹೇಗೆ ಮತ್ತು ಏಕೆ ಈ ಪ್ರಪಂಚಕ್ಕೆ ಬಂದೆ ?, ಮರಣ ಎಂದರೇನು ? ಮರಣದ ಆಚೆ ಏನಿದೆ ? ಅಥವಾ ಮರಣವೇ ಕೊನೆಯ ಅವಸ್ಥೆಯೇ ?, ಶೂನ್ಯ ಎಂದರೇನು ?, ಪ್ರಪಂಚದ ಆಗಮನ ಎಲ್ಲಿಂದ ? ಪ್ರಪಂಚದ ಸೃಷ್ಟತೆ ಏನು?, ಪ್ರಪಂಚದ ಕರ್ತೃ ಯಾರು ?, ಆತನ ಉದ್ದೇಶ ಮತ್ತು ಸ್ವರೂಪವೇನು ?, ಈ ಪ್ರಪಂಚಕ್ಕೂ, ಜೀವಿಗೂ ಮತ್ತು ನನಗೂ ಇರುವ ಸಂಬಂಧವೇನು ?, ಮಾನವ ಜನುಮದ ಉದ್ದೇಶ ಏನು ?, ಅದರ ಈಡೇರಿಕೆ ಎಂಬುದು ಹೇಗೆ ?.....ಹೀಗೆ, ಹಲವಾರು ಪ್ರಶ್ನೆಗಳು ಚೇತನಾಶೀಲನಾದ ಮಾನವನನ್ನು

ಕಾಡಲಾರಂಭಿಸಿತು. ಈ ನಿಟ್ಟಿನಲ್ಲಿ ತನಗಿಂತ ಭಿನ್ನವಾದ, ಅಸಾಧ್ಯವಾದ ಶಕ್ತಿಯೊಂದನ್ನು ಭಗವಂತನೆಂದು ಕರೆಯಲಾರಂಭಿಸಿದನು. ತನ್ನ ಇಷ್ಟಾರ್ಥಕ್ಕಾಗಿ, ತನ್ನನ್ನು ಮರೆತು ಚಿಂತಿಸಲು ಪ್ರಾರಂಭಿಸಿದನು. ಕಾಲಾನಂತರದಲ್ಲಿ ಈ ಚಿಂತನ ಕ್ರಮವನ್ನೇ ಭಕ್ತಿ ಎಂದು ಕರೆಯಲು ಸಮಾಜವು ಮುಂದಾಯಿತು. ಹಾಗಾಗಿ ಭಕ್ತಿಯ ಇತಿಹಾಸವು ಪೂರ್ವಕ್ಕೆ ಸರಿಯಿತು. ಭಾವಾತೀತವಾದ ಭಕ್ತಿಯು ಎಲ್ಲೆ ಮೀರಿ ಮುನ್ನಡೆಯಿತು.

೨.೧ ಪುರಾತನದಲ್ಲಿ ಭಕ್ತಿ

ಆರ್ಯರ ಆಗಮನವಾಗುವುದರ ಮೂಲಕ ಬಂದ ವೇದ ಉಪನಿಷತ್ತುಗಳಿಗೂ ಹಿಂದೇಯೇ ಭಾರತದಲ್ಲಿ ಭಕ್ತಿಪಂಥ ಇತ್ತೆಂಬುದು ವಿದ್ವಾಂಸರ ಅಭಿಪ್ರಾಯ. ಕ್ರಿ.ಪೂ.ಒಂದನೆಯ ಶತಮಾನದಷ್ಟು ಹೊತ್ತಿಗೆ ಜನರು ಮೊದಲನೆಯ ತೀರ್ಥಂಕರನಾದ ಋಷಭದೇವನನ್ನು ಪೂಜಿಸುತ್ತಿದ್ದರೆಂಬುದಕ್ಕೆ ಆಧಾರಗಳಿವೆಯೆಂದು ಎಸ್. ರಾಧಾಕೃಷ್ಣನ್ ಅವರು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.[೧]

ಭಾರತೀಯ ಭಕ್ತಿಪಂಥದಲ್ಲಿ ತ್ರಿಮೂರ್ತಿಗಳೆನಿಸಿದ ಬ್ರಹ್ಮ, ವಿಷ್ಣು ಮತ್ತು ಶಿವರಿಗೆ ಮುಖ್ಯಸ್ಥಾನವಿದ್ದರೂ ಅವರಲ್ಲಿ ಹೆಚ್ಚು ಆರಾಧನೆಗೆ ಒಳಗಾದವರೆಂದರೆ ವಿಷ್ಣು ಮತ್ತು ಶಿವ ಇಬ್ಬರು ಮಾತ್ರ. ಪ್ರಾಚೀನ ಕಾಲದಿಂದಲೂ ನಾನಾ ಪಂಥಗಳು ಹರಿಸಿದ ಭಕ್ತಿರಸದಲ್ಲಿ ವಿಷ್ಣುಭಕ್ತಿ ಮತ್ತು ಶಿವಭಕ್ತಿರೂಪಗಳೇ ಹೆಚ್ಚು ಪ್ರಾಚೀನ. ಇದಕ್ಕೆ ಕ್ರಿ.ಪೂ. ಮೂರನೇ ಶತಮಾನದ 'ಹಾಥಿಗುಂಪ ಶಾಸನ'[೨] ಮತ್ತು ಮೊಹೆಂಜೊದಾರೊ ಕಣಿವೆಯಲ್ಲಿ ಸಿಕ್ಕಿರುವ ಲಿಂಗರೂಪಗಳು[೩] ಆ ಪ್ರದೇಶದ ಭಕ್ತಿ ಆರಾಧನೆಗೆ ಪ್ರಾಚೀನ ಸಾಕ್ಷಿಗಳಾಗಿ ನಿಲ್ಲುತ್ತವೆ. ಆದರೆ ಈ ಭಕ್ತಿ ಆರಾಧನೆ ನಡೆದ ನಿರ್ಧಿಷ್ಟ ಪ್ರದೇಶದ ಕುರಿತಾಗಿಯೂ, ಅಲ್ಲದೆ ಅದರ ವಿಧಿವಿಧಾನದ ಕುರಿತಾಗಿಯೂ ಸ್ಪಷ್ಟವಾದ ಉಲ್ಲೇಖವು ಯಾವ ವಿದ್ವಾಂಸರ ಕೃತಿಯಲ್ಲೂ ಲಭ್ಯವಿಲ್ಲ. ಕ್ರಿ.ಪೂ ನಾಲ್ಕನೇ ಶತಮಾನದ ಮೆಗಸ್ತನೀಸನ ಬರವಣಿಗೆಗಳಲ್ಲಿ ಮೂರ್ತಿಪೂಜೆಯ ಉಲ್ಲೇಖವಿದೆ.[೪] ಕ್ರಿ.ಶ. ಐದನೇ ಶತಮಾನದಲ್ಲೂ ತ್ರೈಕೂಟ ಅರಸ ದಹ್ರಸೇನ ಹಾಗೂ ಗುಪ್ತರಾಜರು ಭಾಗವತಪಂಥವನ್ನೂ, ವಲ್ಲಭೀರಾಜರು ವೈಷ್ಣವಪಂಥವನ್ನೂ ಅವಲಂಬಿಸಿದ್ದರೆಂದು ಇತಿಹಾಸ ಹೇಳುತ್ತದೆ.[೫] ಒಟ್ಟಿನಲ್ಲಿ ಪ್ರಾಚೀನ ಭಾರತದ ಭಕ್ತಿರೂಪ ಹರಿಪರವಾದುದು; ಹರಪರವಾದುದು; ಹರಿಹರ ಪರವಾದುದು. ಏನಿದ್ದರೂ ಇವೆಲ್ಲ ಮಾನವನ ಬೌದ್ಧಿಕಪ್ರಜ್ಞೆಯಿಂದ ಮೂಡಿಬಂದವುಗಳು. ಪ್ರಾಚ್ಯದಲ್ಲಿ ಎಲ್ಲೆಲ್ಲಿ ಆರಾಧನೆ ನಡೆದಿದೆಯೋ, ಮತ್ತು ಯಾವ ಕಾಲದಲ್ಲಿ ಆರಾಧನೆ ನಡೆದಿದೆಯೋ ಅಲ್ಲಿ ಭಕ್ತಿ ಇತ್ತೆಂಬುದು ಒಪ್ಪಬೇಕಾದ ವಿಚಾರ. ಇಲ್ಲಿ ಉಪಾಸನೆಗೈದಿರುವ ವಿಷ್ಣುಪಂಥವನ್ನು 'ವೈಷ್ಣವಪಂಥ'ವೆಂದು ಕರೆದರೂ ಪ್ರಾಚೀನ ಕಾಲದಲ್ಲಿ ಈ ಶಬ್ದಪ್ರಯೋಗ ಆಗಿರುವುದು ತೋಚುತ್ತಿಲ್ಲ. 'ವೈಷ್ಣವ' ಎನ್ನುವ ಪದಪ್ರಯೋಗ ಪ್ರಥಮಬಾರಿಗೆ ಕಾಣಿಸಿಕೊಳ್ಳುವುದೇ[೬] ಮಹಾಭಾರತದ ಕೊನೆಯಲ್ಲಿ.[೭] ಅಂದರೆ ಕ್ರಿ.ಶ. ಸುಮಾರು ಐದನೆಯ ಶತಮಾನದ ಕಾಲದಲ್ಲಿ. ಆದುದರಿಂದ ಅಲ್ಲಿಯವರೆಗೆ ವಿಷ್ಣುವು ಯಾವುದೇ ಒಂದು ಪ್ರತ್ಯೇಕವಾದ ಪಂಥಕ್ಕೆ ಮೀಸಲಾಗಿ ಆರಾಧನೆಗೆ ಒಳಪಟ್ಟಿಲ್ಲವೆಂಬುದು ಗಮನಾರ್ಹವಾದ ವಿಚಾರ.

ಆದರೆ ಭಕ್ತಿಯ ಇತಿಹಾಸವು ಕೇವಲ ಕ್ರಿಸ್ತಶಕೆಗೆ ಮೀಸಲಾಗದೆ ಅದು ಕ್ರಿಸ್ತಪೂರ್ವದಲ್ಲೂ ಪ್ರಭಾವ ಬೀರಿತ್ತೆಂದು ಸೂಕ್ತಾಧಾರಗಳಿಂದ ತಿಳಿಯಲುಸಾಧ್ಯ. ಮೆಸೊಪೊಟೋಮಿಯಾದ ಟೈಗ್ರಿಸ್ ಮತ್ತು ಯೂಫ್ರೆಟಿಸ್ ನದಿಗಳ ಉಗಮಸ್ಥಾನದಲ್ಲಿ ನೆಲೆಗೊಂಡಿದ್ದ ಕ್ರಿ.ಪೂ. ಸುಮಾರು ೫೦೦೦ ವರ್ಷಗಳಷ್ಟು ಹಳೆಯ ಸಂಸ್ಕೃತಿಯ ತುರಾನಿಯನ್ ಜನಾಂಗವೊಂದಕ್ಕೆ ಸಂಬಂಧಿಸಿದ ವಿವರಗಳು ಅಧ್ಯಯನ ಮೂಲಕ ಬೆಳಕಿಗೆ ಬಂದಿವೆ. ಇವುಗಳಲ್ಲಿ ಇಟ್ಟಿಗೆಗಳ ಮೇಲೆ ಕೊರೆಯಲಾಗಿರುವ ಉಲ್ಲೇಖಗಳೂ ಸೇರಿವೆ. ಇವುಗಳ ಪ್ರಾಚೀನತೆಯನ್ನು ದೃಷ್ಟಿಯಲ್ಲಿರಿಸಿಕೊಂಡು ಇವುಗಳನ್ನು 'ಖಾಲ್ಡಿಯನ್‌ವೇದ'ಗಳೆಂದು ಕರೆಯಲಾಗಿದೆ.[೮] ಇಲ್ಲಿನ ಅನೇಕ ಅಂಶಗಳಲ್ಲಿ ವೇದಗಳಲ್ಲಿನ ವಿವರಣೆಗಳಿಗೂ ಖಾಲ್ಡಿಯನ್‌ನ ವಿವರಣೆಗಳಿಗೂ ಸಾಮ್ಯವಿರುವುದು ಕಂಡುಬರುತ್ತದೆ. ಅಲ್ಲಿಯೂ ಇಂದ್ರನಂಥ ದೇವತೆಯ ಉಲ್ಲೇಖವಿದೆ. ಸಾಹಸಕಾರ್ಯಗಳಲ್ಲಿಯೂ ಸಾಮ್ಯವಿದೆ.[೯] ಋಗ್ವೇದದಲ್ಲಿ ಅನೇಕ ದೇವತೆಗಳು ಆರಾಧನೆಗೆ ಒಳಪಟ್ಟಿರುವಂತೆಯೇ ಅದರ ಪೂರ್ವದಲ್ಲಿ ಸಿಂಧೂನದಿಯ ತೀರದಲ್ಲಿಯೂ ಈ ಬಗೆಯ ಉಪಾಸನೆಯು ಇದ್ದಿತ್ತೆಂಬುದನ್ನು ಸರ್. ಜಾನ್. ಮಾರ್ಷಲ್‌ರವರು ಸಮರ್ಥಿಸಿಕೊಳ್ಳುತ್ತಾರೆ. ಇದರಿಂದ ಭಕ್ತಿಯ ಹರಹು ಸಿಂಧೂ ನಾಗರಿಕತೆಯತ್ತ ಸಾಗುತ್ತದೆ. ಶಿವ ಹಾಗೂ ಪಾರ್ವತೀ ವಿಗ್ರಹಗಳು, ನಾಗರು, ವೃಕ್ಷದೇವತೆ, ಶಿಲಾಪೂಜೆ, ಲಿಂಗಪೂಜೆಗಳು ಮೊಹೆಂಜೊದಾರೋವಿನಲ್ಲೂ ನಡೆದಿತ್ತು ಎನ್ನುವುದಕ್ಕೆ ಪ್ರಮಾಣಗಳು ಲಭ್ಯವಿರುವುದರಿಂದ ಭಕ್ತಿಯ ಇತಿಹಾಸವನ್ನು ಹೀಗೂ ಕಾಣಬಹುದಾಗಿದೆ. ಒಟ್ಟಿನಲ್ಲಿ ಪ್ರಾಚೀನ ಭಕ್ತಿಸ್ವರೂಪದ ಅಧ್ಯಯನವು ಬಹುಮುಖೀ ಅಧ್ಯಯನವಾಗುತ್ತದೆ. ಮುಖ್ಯವಾಗಿ ಒಂದೇರೂಪದ ದೈವಾರಾಧನೆಯು ಅಲ್ಲಿರಲಿಲ್ಲವೆಂಬುದು ಅಧ್ಯಯನದಿಂದ ತಿಳಿಯುವ ವಿಚಾರ.

೨.೨ ವೈದಿಕ ಸಾಹಿತ್ಯದಲ್ಲಿ ಪ್ರಕೃತಿ ಭಕ್ತಿ

ಭಾರತೀಯರಿಗೆ ತಮ್ಮ ಧರ್ಮಸಂಸ್ಕೃತಿಯ ಮೌಲ್ಯವನ್ನು ತಿಳಿಯಲು ವೈದಿಕಸಾಹಿತ್ಯವೇ ಪ್ರಮುಖವಾದುದು. ಆದರೆ ಇದರ ನಿರ್ದಿಷ್ಟ ರಚನಾಕಾಲ ಸ್ಪಷ್ಟವಾಗಿಲ್ಲ. ಕೆಲವೊಂದು ವಿದ್ವಾಂಸರು ಕ್ರಿ. ಪೂ. ೧೦೦೦ ದಲ್ಲಿ ಋಗ್ವೇದವು ರಚನೆಯಾಗಿದ್ದಿರಬಹುದೆಂದು ಭಾವಿಸಿದರೆ, ಬಾಲಗಂಗಾಧರ ತಿಲಕರಂತಹ ವಿದ್ವಾಂಸರು ಇದರ ಪ್ರಾಚೀನತೆಯನ್ನು ಕ್ರಿ.ಪೂ. ೪೦೦೦ ದಿಂದ ೬೦೦೦ ವರ್ಷಗಳಷ್ಟು ಸನಾತನವೆಂದು ಭಾವಿಸಿದ್ದುಂಟು.[೧೦] ಆದರೆ ಋಗ್ವೇದದ ಅಧ್ಯಯನದ ಅಧಾರದಲ್ಲಿ ಗಮನಿಸಿದರೆ, ಇದು ಕ್ರಿ.ಪೂ.೧೦೦೦ಕ್ಕಿಂತಲೂ ಮೊದಲು ರಚನೆಗೊಂಡು ಕಾಲಾಂತರದಲ್ಲಿ ಹೊಸರೂಪವನ್ನು ಪಡೆಯಿತು ಎಂದು ಕೊಳ್ಳಬಹುದು.

ವೇದ ಎಂದರೆ ಜ್ಞಾನ ಎಂದರ್ಥ. ಪರಾತ್ಪರ ಶಕ್ತಿಯನ್ನು ತೋರಿಸುವ ದೈವಿಕಜ್ಞಾನವೆಂದೂ ಕರೆಯಬಹುದು. ಅದು ಮೊದಲಿಗೆ ವೇದ್ಯವಾದುದು ಋಗ್ವೇದದಲ್ಲಿ. ಆದರೆ ಕಾಲಾನಂತರದಲ್ಲಿ ಯಜುರ್ವೇದ ಮತ್ತು ಸಾಮವೇದಗಳು ಜನಿಸುವ ಮೂಲಕ ವೇದಗಳಲ್ಲಿ ಮೂರು ವಿಧಗಳನ್ನು ಕಾಣುವಂತಾಯಿತು. ಹೀಗೆ ಒಗ್ಗೂಡಿಕೊಂಡ ಈ ಮೂರು ವೇದಗಳಿಗೆ 'ತ್ರಯೀ'ಎಂದು ಕರೆಯಲಾಯಿತು.[೧೧] ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ವಾಸ್ತವದಲ್ಲಿ ಕರೆಯಲಾಗುವ 'ಅಥರ್ವ'ವೇದವು ಬಹಳಕಾಲದ ನಂತರದಲ್ಲಿ ರೂಪುಗೊಂಡು,

ಪೂರ್ವದಲ್ಲಿದ್ದ ವೇದಗಳೊಂದಿಗೆ ಐಕ್ಯವಾಗಿ 'ಚತುರ್ವೇದ'ವೆಂದೆನಿಸಿತು. ಆದರೆ ಪೂರ್ವವೇದಗಳಾದ ಋಗ್ವೇದ, ಯಜುರ್ವೇದ, ಸಾಮವೇದಗಳೊಂದಿಗೆ ಮಾಟ, ಮಂತ್ರ, ಯಂತ್ರಗಳೆಂಬ ಲೌಕಿಕವಿದ್ಯೆಯ ಅಥರ್ವವೇದವು ಸೇರಬೇಕಾದಲ್ಲಿ ಒಂದಷ್ಟು ಗೊಂದಲಗಳು ಆಗಿದ್ದಿರಬಹುದೆಂದು ಊಹಿಸಬೇಕಾಗುತ್ತದೆ. ಈ ವೇದಗಳನ್ನು ಯಾಸ್ಕ, ಆಪಸ್ತಂಭ ಮೊದಲಾದವರು ಸಂಹಿತೆ ಮತ್ತು ಬ್ರಾಹ್ಮಣಗಳೆಂದು ವಿಂಗಡಿಸಿದರೂ ಕಾಲಭವಿಷ್ಯದಲ್ಲಿ ಸಂಹಿತೆ, ಬ್ರಾಹ್ಮಣ, ಅರಣ್ಯಕ ಹಾಗೂ ಉಪನಿಷತ್ತುಗಳೆಂಬ ರೂಪದಲ್ಲಿ ನಿಖರವಾಗಿ ನೆಲೆನಿಂತಿತು. ಸಂಹಿತೆಗಳಲ್ಲಿ ವೇದಮಂತ್ರಗಳು, ಬ್ರಾಹ್ಮಣಗಳಲ್ಲಿ ಮೂಲಮಂತ್ರ ವ್ಯಾಖ್ಯಾನಗಳೂ, ಅರಣ್ಯಕಗಳಲ್ಲಿ ಯಜ್ಞಯಾಗಾದಿಗಳ ಅಂತರಾರ್ಥ ವಿವೇಚನೆ ಹಾಗೂ ಉಪನಿಷತ್ತುಗಳಲ್ಲಿ ಪಾರಮಾರ್ಥಿಕ ತತ್ವಜಿಜ್ಞಾಸೆಗಳು ಕಾಲಾಂತರದಲ್ಲಿ ಪ್ರತಿಪಾದಿತವಾಯಿತು.

ಋಗ್ವೇದವು ಭಕ್ತಿಪಾರಮ್ಯವನ್ನು ಸಾರುವ ಪ್ರಾಚೀನ ವೈದಿಕಸಾಹಿತ್ಯ. ಇಲ್ಲಿ ಭಕ್ತಿಯ ಮೂಲಕ ಉಪಾಸ್ಯನಾಗುವ ದೇವತೆ ಕೇವಲ ಓರ್ವನಲ್ಲ. ಇದರಲ್ಲಿ ಅನೇಕ ದೇವರ ಕಲ್ಪನೆಯಿದೆ. ಬೆಂಕಿಗಾಗಿ ಅಗ್ನಿದೇವ, ಮಳೆಗಾಗಿ ಪರ್ಜನ್ಯ, ಗಾಳಿಗಾಗಿ ವಾಯುದೇವ, ಉಷಾದೇವೀ ಸೂಕ್ತಗಳು ಇಲ್ಲಿ ಲಭ್ಯ.[೧೩] ಈ ವೇದವು ಕೇವಲ ಒಬ್ಬರ ರಚನೆಯಲ್ಲ. ಅದು ಹಲವು ಕಾಲಗಳಿಗೆ ಸಂಬಂಧಿಸಿ, ಹಲವರ ಕೈಚಳಕದಿಂದ ಕೂಡಿರುವಂತಹುದು. ಅದರಲ್ಲಿರುವ ಕೆಲವು ಭಾಗಗಳನ್ನಾದರೂ ಆರ್ಯರು ಪಂಜಾಬ್‌ಪ್ರಾಂತ್ಯಕ್ಕೆ ಬಂದು ನೆಲಸುವುದಕ್ಕೆ ಮೊದಲೇ ರಚಿಸಿರಬೇಕೆಂಬುದು ವಿದ್ವಾಂಸರ ನಿಲುವು.

ವೇದಗಳ ಮೊದಲಿಗೆ ಅನೇಕ ದೇವತೆಗಳ ಉಪಾಸನೆ ನಡೆದಿದ್ದರೂ ಇಂದ್ರ, ವರುಣ, ಅಗ್ನಿ ಮೊದಲಾದ ದೇವತೆಗಳನ್ನೇ ಮುಖ್ಯವಾಗಿ ಆರಾಧಿಸಿದವರು ವೇದಕಾಲೀನರು. ಅವರು ವರುಣ, ಮಿತ್ರ, ಸವಿತೃ ಮೊದಲಾದ ದೇವತೆಗಳು ಸ್ವರ್ಗದ ದೇವತೆಗಳೆಂದೂ, ಇಂದ್ರ, ವಾಯು, ಪರ್ಜನ್ಯರನ್ನು ಆಕಾಶದ ದೇವತೆಗಳೆಂದೂ ಮತ್ತು ಪೃಥ್ವಿ, ಅಗ್ನಿ, ಸೋಮ ಮೊದಲಾದವರನ್ನು ಭೂಮಿಯ ದೇವತೆಗಳೆಂದೂ ಅಂದಿನ ಜನತೆ ಸ್ವೀಕರಿಸಿದರು.[೧೪] ಈ ಮೂಲಕವಾಗಿ ವೇದಕಾಲದ ಜನತೆಯಲ್ಲಿ ಪ್ರಾಕೃತಿಕ ಉಪಾಸನಾಕ್ರಮವೊಂದು ಆಚರಣೆಯಲ್ಲಿತ್ತೆಂದು ತಿಳಿಯಬೇಕಾಗುತ್ತದೆ. ಮಾತ್ರವಲ್ಲದೆ ಆ ಪದ್ಧತಿಯು ಸಿಂಧೂಸಂಸ್ಕೃತಿಯಿಂದ ಜನ್ಯವಾದುದೆಂದೂ, ಪೂಜಾಕ್ರಮವು ಆರ್ಯಪರಂಪರೆಯಿಂದ ಬಂದುದೆಂದೂ ಭಾವಿಸುವಂತಾಯಿತು. ಪ್ರಾಯಶಃ ಸಿಂಧೂತೀರದ ವಿಶಾಲವಾದ ಬಯಲುಪ್ರದೇಶ, ಉತ್ತರದಲ್ಲಿ ಹಿಮರಾಶಿಯ ಗಂಭೀರನಿಲುವು ಆರ್ಯರ ಪ್ರಕೃತಿ ಆರಾಧನೆಗೆ ಅಥವಾ ಪ್ರೇಮೋಪಾಸನೆಗೆ ಕಾರಣವಿರಬಹುದು. ಅಂದಿನ ಆರ್ಯಋಷಿಯೊಬ್ಬ ಉಷಃಕಾಲದ ಸೌಂದರ್ಯವನ್ನು ಸವಿಯಲು ಮೂಡಣದಿಕ್ಕಿನ ಉಷಾದೇವಿಗಾಗಿ ತನ್ನ ಗವಿಯ ಬಾಗಿಲುಗಳನ್ನು ತೆರೆದು ಆರಾಧನೆ ನಡೆಸುತ್ತಾನೆ.[೧೫] ಈ ಕಾಲದ 'ಅಲ್ಪಸ್ತವ ಸೂಕ್ತ'ವೂ ಕೂಡ ಆತ್ಮ ಹಾಗೂ ಪರಮಾತ್ಮರ ವಿಷಯವನ್ನು ನಿರೂಪಿಸುವಲ್ಲಿ ಪ್ರಕೃತಿ ಚಿಂತನೆಗೆ ಒಳಗಾಗುತ್ತದೆ. ಪರಸ್ಪರ ಗೆಳೆಯರಾದ ಪಕ್ಷಿದ್ವಯಗಳು ಒಂದೇ ಮರದ ಮೇಲೆ ವಾಸಿಸುತ್ತಿದ್ದರೂ ಒಂದು ಪಕ್ಷಿ ಮಾತ್ರ ಅಂಜೂರ ಫಲವನ್ನು ಭಕ್ಷಿಸುತ್ತಿರುತ್ತದೆ. ಇನ್ನೊಂದು ಪಕ್ಷಿಯು

ತಟಸ್ಥವಾಗಿಯೇ ಇರುತ್ತದೆ. ಇಲ್ಲಿ ಜೀವಾತ್ಮವೆಂಬ ಹಕ್ಕಿ ಸುಖದು:ಖಗಳೆಂಬ ಹಣ್ಣನ್ನು ತಿನ್ನುತ್ತಿದ್ದರೂ, ಪರಮಾತ್ಮನೆಂಬ ಹಕ್ಕಿಮಾತ್ರ ಫಲವನ್ನು ತಿನ್ನದೆ, ತಿನ್ನುವ ಹಕ್ಕಿಯನ್ನು ನೋಡುತ್ತಿರುತ್ತದೆ.[೧೫] ಸ್ವಾರಸ್ಯವೆಂದರೆ, ಅತೀ ಪುರಾತನದ ಭಕ್ತಿಕಲ್ಪನೆಯಲ್ಲಿ ದ್ವೈತಸಿದ್ಧಾಂತದ ಛಾಯೆಯೊಂದು ಕಾಣಿಸಿಕೊಳ್ಳುತ್ತದೆ. ಇಲ್ಲಿಯ ಋಷಿಗೆ ಅನಾದಿತತ್ವದ ಸಂದೇಹವೊಂದು ಕಾಡಲಾರಂಭಿಸಿರಬೇಕು. ಇದಕ್ಕಾಗಿ ಆತನು ಅಂತರ್ಮುಖಿಯಾಗಿ ಸೃಷ್ಟಿಯ ಮೂಲ ಮತ್ತು ಅನಂತರದ ಬೆಳವಣಿಗೆಯ ಕುರಿತು ಗಾಢವಾಗಿ ಚಿಂತಿಸಲು ತೊಡಗಿರಬೇಕು.

ಅನಾದಿಕಾಲದ ವೈದಿಕಚಿಂತನೆಯಲ್ಲಿ ಮುಖ್ಯವಾಗಿ ತಿಳಿಯುವುದೇನೆಂದರೆ ಹಲವು ದೇವರುಗಳ ಹಿಂದೆ ಏಕದೇವೋಪಾಸನೆ. ಸಮಷ್ಟಿ ದೇವತೆಗಳನ್ನೆಲ್ಲಾ ಒಂದಾಗಿ ಕಾಣುವುದರ ಮೂಲಕ ಮಹಾಶಕ್ತಿತ್ವವನ್ನು ಕಂಡುಕೊಳ್ಳುತ್ತಾರೆ. ಇಷ್ಟಾಗಿಯೂ ಪ್ರಕೃತಿಯನ್ನೇ ಆರಾಧಿಸುವ ಈ ಆರ್ಯರು ತಮ್ಮ ಉದ್ಯೋಗ ಪರಿಕರಣಗಳಲ್ಲೂ ದೈವತ್ವವನ್ನು ಕಾಣುತ್ತಾರೆ. ಅವರಿಗೆ ಸೋಮರಸ ತೆಗೆಯುವ ಶಿಲೆಯಲ್ಲೂ ದೈವವಿದೆ. ಕೃಷಿಪರಿಕರಗಳಾದ ನೇಗಿಲು, ಗುದ್ದಲಿಯಲ್ಲೂ ದೈವವಿದೆ.

ಪ್ರಾಚೀನರು ದೈವಶಕ್ತಿಯನ್ನು ಪುರುಷಶಕ್ತಿಯೆಂದೇ ಭಾವಿಸಹತ್ತಿದರು. ಅವರೇ ಹೇಳುವಂತೆ, ಪ್ರಾಚೀನರ ಪುರುಷದೈವಸ್ವರೂಪಕ್ಕೆ ಸಾವಿರ ತಲೆಗಳು, ಸಾವಿರ ಕಣ್ಣುಗಳು, ಸಾವಿರ ಕಾಲುಗಳು. ಈತನೇ ಈ ಭೂಮಿಯನ್ನು ಎಲ್ಲಾ ಕಡೆಯಿಂದಲೂ ವ್ಯಾಪಿಸಿದ್ದಾನೆ. ಅಲ್ಲದೆ ಹತ್ತುಅಂಗುಲದಷ್ಟು ಹೆಚ್ಚಾಗಿ ಬೆಳೆದಿದ್ದಾನೆ.[೧೬] ಹೀಗೆ ಸೃಷ್ಟಿಯ ಹಿಂದೆಯೂ ಪುರುಷಪ್ರಕೃತಿ, ಸೃಷ್ಟಿಯ ಮುಂದೆಯೂ ಪುರುಷಪ್ರಕೃತಿ. ಈ ಸೃಷ್ಟಿಯನ್ನು ಮಹಾಯಜ್ಞವಾಗಿ ಕಾಣುವಕ್ರಿಯೆ ಪ್ರಾಚೀನದಲ್ಲೇ ನಡೆದಿತ್ತೆಂಬುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಸೃಷ್ಟಿಚಿಂತನೆಗೆ ಮೊದಲ ಮೂರು ವೇದಗಳು ಮೌನ ತಾಳಿರುವಾಗ, ಆ ಕುರಿತಾದ ಗಹನವಾದ ಚರ್ಚೆಯನ್ನು ನಡೆಸಿದ್ದು ಅಥರ್ವವೆಂಬುದು ಗಮನಾರ್ಹವಾದ ವಿಚಾರ.

ವೇದಗಳಲ್ಲಿ ಹಾಸುಹೊಕ್ಕಾಗಿರುವ ಮುಖ್ಯವಿಚಾರವೆಂದರೆ ಪಶುಬಲಿಯ ಉಲ್ಲೇಖ. ವಾಸ್ತವದಲ್ಲಿ ವೇದಗಳನ್ನೇ ಅವಲಂಬಿಸಿರುವ ನಾವುಗಳು ಪಶುಬಲಿಯ ಬದಲು ಪಿಷ್ಟಪಶುಯಾಗವೆಂಬ ಸಾಂಕೇತಿಕ ಕಲ್ಪನೆಯನ್ನು ಅನುಸರಿಸಿಕೊಂಡು ಬಂದಿರುವುದನ್ನು ನಾವು ಸ್ಮರಿಸಿಕೊಳ್ಳಬೇಕು. ಪ್ರಾಚೀನದ 'ಸ್ಮೃತಿ ಮುಕ್ತಾಫಲ'ದ 'ಶ್ರಾದ್ಧದ್ರವ್ಯ ಪ್ರಕರಣ'ವು ಕಲಿಯುಗದ ಬ್ರಾಹ್ಮಣರಿಗೆ ಮಾಂಸಾಹಾರ ನಿಷಿದ್ಧವೆನ್ನುತ್ತದೆ. ಅಲ್ಲದೆ ಇತರ ವರ್ಗಕ್ಕೂ ಕೆಲವೊಂದು ಸೂಚನೆಯನ್ನು ಅದು ನೀಡಲು ಮುಂದಾಗುತ್ತದೆ. ಮುಖ್ಯವಾಗಿ ಇದು ಪ್ರಾಚೀನ ವೈದಿಕರಿಗೆ ವೇದವು ನೀಡಿದ ಕಿವಿಮಾತು. ಇಲ್ಲಿಯ ಬ್ರಾಹ್ಮಣನಿಗೆ ಸಸ್ಯಾಹಾರವೇ ವಿಹಿತ. ಆದರೆ ಯಜ್ಞಯಾಗದ ಪಶುಬಲಿಯು ಇಲ್ಲಿ ಸತ್ಕ್ರಿಯೆಯಾಗಿ ಪರಿಣಮಿಸುತ್ತದೆ. ಯಜ್ಞದ ಪಶುಬಲಿಯ ವಿಚಾರವು ಆ ಪಶುವಿಗೆ ಪ್ರಾಪ್ತವಾಗುವ ಸದ್ಗತಿಯೆಂಬ ಭಾವನೆಯು ಹಿಂದಿನವರದ್ದು. ಈ ವಿಚಾರವು ಮಹಾಭಾರತದ ಮೋಕ್ಷಧರ್ಮದಲ್ಲೂ ಪ್ರಸ್ತಾಪವಾಗುತ್ತದೆ. ಅಲ್ಲಿಯ ಮುನಿಗಳೆಲ್ಲಾ ಪಿಷ್ಟಯಾಗವನ್ನೇ ಸರಿಯೆಂದು ವಾದಿಸುತ್ತಾರೆ. ಆದರೆ, ದೇವತೆಗಳೆಲ್ಲಾ ಪ್ರಾಣಿಬಲಿಗಾಗಿ ಹಾತೊರೆದರು. ಆಗ ಉಪರಿಚರವಸುವು ಮಧ್ಯಸ್ಥಿಕೆವಹಿಸಿ, ದೇವತೆಗಳ

ಬೇಡಿಕೆಯು ಸರಿಯೆಂದು ತೀರ್ಪುನೀಡಿದ. ಕುಪಿತರಾದ ಮುನಿಗಳು ಉಪರಿಚರವಸುವನ್ನು ಶಪಿಸಿದರು. ಪರಿಣಾಮವಾಗಿ, ಉಪರಿಚರವಸುವು ಸ್ವರ್ಗದಿಂದ ಕೆಳಗೆಬಿದ್ದ. ನಂತರದಲ್ಲಿ ಪಿಷ್ಟಪಶುವನ್ನು ಬೆಂಬಲಿಸುವುದೇ ಅಥವಾ ಪ್ರಾಣಿಬಲಿಯನ್ನು ಬೆಂಬಲಿಸುವುದೇ ಎಂಬ ಪ್ರಶ್ನೆ ಮೂಡಿತು. ಪಿಷ್ಟಪಶು ರಚನೆಯಲ್ಲೂ ಧಾನ್ಯಗಳ ಹಿಂಸೆ ಅಡಗಿದ್ದರಿಂದ ಅಹಿಂಸೆಯನ್ನೇ ಪರಮಧರ್ಮವೆಂದು ಭಾವಿಸಿದ್ದ ಭಕ್ತಿಪಂಥಕ್ಕೆ ಇಲ್ಲಿ ಧಕ್ಕೆಯಾಯ್ತು. ಈ ನಿಟ್ಟಿನಲ್ಲಿ ಪಂಚಸೂನಾಪ್ರಾಯಶ್ಚಿತ್ತಾರ್ಥವಾಗಿ ವೈಶ್ವದೇವಹೋಮವೆಂಬ ಧಾರ್ಮಿಕವಿಧಿ ಆಚರಣೆಯಲ್ಲಿ ಬಂತು. ಹೀಗೆ, ವೇದ, ಮನುಸ್ಮೃತಿ, ಬ್ರಹ್ಮಸೂತ್ರಗಳನ್ನು ಭಕ್ತಿಯ ಸರಹದ್ದಿನಲ್ಲಿ ಪ್ರಮಾಣವೆಂದು ನಂಬಿದವರು ವೈದಿಕಯುಗದವರು.

೨.೩ ಭಾರತೀಯ ಭಕ್ತಿಯಲ್ಲಿ ಪುರಾಣ ಸಿದ್ಧಾಂತಗಳು ಮತ್ತು ವೇದಾಂತಗಳು

ಪ್ರಾಚೀನ ಭಕ್ತಿಸ್ವರೂಪದ ಮೂಲ ಉದ್ದೇಶವೊಂದೇ ಆಗಿದ್ದರೂ ಆಯಾಯ ಸೈದ್ಧಾಂತಿಕ ವಿಶೇಷತೆಗಳಿಂದಾಗಿ ಭಿನ್ನವಾದ ನಿಲುವುಗಳು ಭವಿಷ್ಯದಲ್ಲಿ ಕಾಣಲಾರಂಭಿಸಿದವು. ಇದಕ್ಕೆ ಭಕ್ತಿಪಾರಮ್ಯವನ್ನು ಸಾರುವ ಕ್ಷೇತ್ರಗಳು, ಶಾಸನಗಳು, ಕೃತಿಗಳು ಮುಖ್ಯಾಧಾರವಾಗಿ ನಿಲ್ಲುತ್ತವೆ. ಇದರಲ್ಲಿ ಎಷ್ಟೋ ಆಕರ ಕೃತಿಗಳ ಕಾಲನಿರ್ಣಯದಲ್ಲಿ ತೊಡಕಿರಬಹುದು. ಆದರೂ ಕೆಲವೊಂದು ಕೃತಿಗಳು ಪ್ರತಿಪಾದಿಸಿದ ಶಾಸ್ತ್ರಸಿದ್ಧಾಂತಗಳು ಮತ್ತು ಶಾಸ್ತ್ರವೇದಾಂತಗಳ ಸ್ವರೂಪವನ್ನು ಇಲ್ಲಿ ಉಲ್ಲೇಖಿಸುವಂತಹುದು ಭಕ್ತಿಯ ಉಗಮ ಮತ್ತು ವಿಕಾಸದ ಅಧ್ಯಯನದ ದಾರಿಯಲ್ಲಿ ಮುಖ್ಯವಾಗುತ್ತದೆ.

ಭಗವದ್ಗೀತೆಯು ಭಕ್ತಿಯೋಗಕ್ಕೊಂದು ಶ್ರೇಷ್ಠವಾದ ಮೀಮಾಂಸೆ. ದೇಹವು ತನ್ನ ಕಲ್ಮಷವನ್ನು ತೊರೆದು, ಶ್ರೀಮನ್ನಾರಾಯಣನನ್ನೇ ಸರ್ವಸ್ವವೆಂದು ನಂಬುವ ಭಾವನೆಯು ಸಾಧಕನಲ್ಲಿ ಮೂಡಿದಾಗ ಮಾತ್ರ ಅವನು ಶ್ರೇಷ್ಠ ಭಕ್ತನಾಗುತ್ತಾನೆಂದು ಭಗವದ್ಗೀತೆಯು ಹೇಳುತ್ತದೆ. ಈ ಮೂಲಕವಾಗಿ ಹುಟ್ಟಿದ ಭಕ್ತಿಯೇ ಕರ್ಮ ಹಾಗೂ ಜ್ಞಾನ ಯೋಗಕ್ಕೆ ಪ್ರಾಣಸಂಚಾರವನ್ನು ದೊರಕಿಸಿಕೊಡುತ್ತದೆ. ಇಲ್ಲಿ ಆತನಿಗೆ ಲೌಕಿಕದ ಹಂಗು ಕಾಡದೆ ಸ್ಥಿತಪ್ರಜ್ಞನಾಗಿರುತ್ತಾನೆ. ಇಲ್ಲಿ ಭಕ್ತನೋರ್ವನು ಪಡೆಯುವುದು ಕೇವಲ ಬ್ರಾಹ್ಮೀಸ್ಥಿತಿಯನ್ನು.

ಪತ್ರಮ್ ಪುಷ್ಪಮ್ ಫಲಮ್ ತೋಯಂ ಯೋ ಮೇ ಭಕ್ತ್ಯಾಪ್ರಯಚ್ಛತಿ ।
ತದಹಮ್ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ ॥[೧೬]

ಭಕ್ತನ ಪೂಜಾಸಕ್ತಿಗೆ ಮೆಚ್ಚಿದ ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೀಗೆ ಹೇಳುತ್ತಾನೆ. 'ಯಾರು ನನಗೆ ಭಕ್ತಿಯಿಂದ ಪತ್ರೆಯನ್ನಾಗಲೀ, ಹೂವನ್ನಾಗಲೀ, ಹಣ್ಣನ್ನಾಗಲೀ ಅಥವಾ ಅದಾವುದೂ ಇಲ್ಲದಿದ್ದಾಗ ಕೇವಲ ನೀರನ್ನಾದರೂ ಸಮರ್ಪಿಸುತ್ತಾರೆಯೋ ಅದನ್ನು ನಾನು ಪ್ರೀತಿಯಿಂದ ಸ್ವೀಕರಿಸುತ್ತೇನೆ' ಎಂದು. ಇಲ್ಲಿ ಭಕ್ತಿಯಿಂದ ಮಾಡುವ ಪೂಜೆ ಬಲುಮುಖ್ಯ. ಅದು ಎಷ್ಟೇ ಸರಳರೂಪವಾದರೂ ಅದನ್ನು ತಾನು ಸ್ವೀಕರಿಸುತ್ತೇನೆಂಬುದು ಭಗವಂತನ ನಲ್ನುಡಿ. ಅಂತೆಯೇ ಭಕ್ತನಿಗೆ ಸಮರ್ಪಣಾಭಾವವೆಂಬುದು ಬೇಕಾಗುತ್ತದೆ. ಸಮರ್ಪಣೆಯ ನಂತರದಲ್ಲಿ ಸ್ವೀಕೃತಿ.

ಹಾಗಾಗಿ ಮೊದಲು ಭಕ್ತ, ನಂತರದಲ್ಲಿ ಭಗವಂತ. ಈ ನೆಲೆಯಲ್ಲಿಯೇ ದಾಸರು 'ಮಲಗಿ ಪಾಡಿದರೆ ಕುಳಿವ, ಕುಳಿತರೆ ನಲಿವ, ನಲಿದರೆ ಒಲಿವ'ನೆಂದಿರ ಬೇಕು. ಒಟ್ಟಿನಲ್ಲಿ ಭಕ್ತನ ಭಕ್ತಿಗೆ ಭಗವಂತನಲ್ಲಿ ರಿಯಾಯಿತಿಯೇ ಹೆಚ್ಚಾಗಿ ಕಾಣಿಸುತ್ತದೆ.

ಭಾಗವತವು ಭಗವಂತ ಮತ್ತು ಭಕ್ತನ ಭಕ್ತಿಚರಿತೆ. ಭಕ್ತಿಯು ಪದ್ಧತಿಯಾಗಿ, ಪಂಥವಾಗಿ ವಿಕಾಸಗೊಂಡಾಗ ಭಾಗವತವೆಂಬ ಧರ್ಮವು ಹುಟ್ಟಿಕೊಂಡಿತು. ಇಲ್ಲಿ ಕೃಷ್ಣನ ಅವತಾರಲೀಲೆಗಳೇ ಮುಖ್ಯವಾಗಿ ತೋರಿಬಂದರೂ ಹರಿಭಕ್ತರ ಸಾಧನೆ ಹಾಗೂ ಸಿದ್ಧಿಗಳ ಕುರಿತು ಅದು ವಿಶೇಷವಾಗಿ ತಿಳಿಸಿಕೊಡುತ್ತದೆ. ಅಲ್ಲದೆ, ಭಕ್ತನ ಲಕ್ಷಣಗಳು, ಆತ್ಮ ಹಾಗೂ ಪರಮಾತ್ಮನ ಸಂಬಂಧ, ಚತುರ್ಯೋಗಗಳು, ಸಾಂಖ್ಯದರ್ಶನ, ಭಗವದಾರಾಧನೆಯ ಕ್ರಮವನ್ನು ತಿಳಿಸಲು ಮುಂದಾಗುತ್ತದೆ. 'ಸಾಂಕೇತ್ಯಂ ಪಾರಿಹಾಸ್ಯಂ ವಾ..... ಅಶೇಷಾಘಹರಂ ವಿದುಃ'[೧೮] ಎಂಬಲ್ಲಿ ಪರಮಾತ್ಮನ ನಾಮಸ್ಮರಣೆಯು ಲೌಕಿಕ ಕಿಲುಬನ್ನು ತೊಳೆಯುತ್ತದೆನ್ನುತ್ತದೆ ಭಾಗವತ. ಆದರೆ ಹಿಂದೂಧರ್ಮದ ಉಪಾಸನೆಯ ಸ್ವರೂಪವು ಇಲ್ಲಿಗೆ ನಿಲ್ಲುವುದಿಲ್ಲ. ಇಲ್ಲಿ ಭಕ್ತನು ಭಗವಂತನ ಸ್ಫುರದ್ರೂಪವನ್ನು ಮೂರ್ತವಾಗಿರಿಸಿಕೊಂಡು ಧ್ಯಾನಿಸಲು ಹೊರಡುತ್ತಾನೆ. ಆತನಿಗೆ ವಿಷ್ಣುವಿನ ಮೂರ್ತರೂಪದಲ್ಲಿ 'ಪ್ರಸನ್ನವಾದ ಮುಖ, ತಾವರೆಯ ಎಸಳಿನಂತಹ ಮೋಹಕ ನಯನಗಳು, ಮನೋಹರ ಕಪೋಲ, ವಿಸ್ತಾರವಾಗಿ ವಿರಾಜಿಸುವ ಲಲಾಟ, ಚೆಲುವಾದ ಕುಂಡಲಗಳಿಂದ ಭೂಷಣವಾದ ಸಮಾನ ಶ್ರವಣದ್ವಯಗಳು, ಶಂಖವನ್ನು ಹೋಲುವ ಕತ್ತು, ಜೊತೆಗೆ ಶ್ರೀವತ್ಸ ಮಚ್ಚೆಯಿಂದ ಕೂಡಿದ ವಿಶಾಲವಾದ ವಕ್ಷಸ್ಥಲ'ಗಳೆಲ್ಲವು ಗೋಚರವಾಗುತ್ತದೆ.

ಭಾರತೀಯ ಭಕ್ತಿಚರಿತ್ರೆಯಲ್ಲಿ ಮಹಾಭಾರತಕ್ಕೊಂದು ವಿಶಿಷ್ಟಸ್ಥಾನ. ಭಾರತಯುದ್ಧಕಾಲದಲ್ಲಿ ತನ್ನನ್ನು ಚಕ್ರಪಾಣಿಯಾಗಿ ಸಂಹರಿಸಲು ಬಂದ ಶ್ರೀಕೃಷ್ಣನಿಗೆ ಶರಣಾಗತಿಯಾದ ಭೀಷ್ಮನು ಆತ್ಮನಿವೇದಾನಾಸಕ್ತಿಯನ್ನು ತೋರಿಸುತ್ತಾನೆ. 'ಏಹ್ಯೇಹಿ ದೇವೇಶ ಜಗನ್ನಿವಾಸ..... ರಥೋತ್ತಮಾತ್ ಸರ್ವ ಶರಣ್ಯ ಸಂಖ್ಯೆ'[೧೯] ದೇವರ ದೇವನೆ ಜಗನ್ನಿವಾಸನೆ, ಬಾರಯ್ಯ ಬಾ. ಚಕ್ರಪಾಣಿಯೇ ನಿನಗೆ ನಮಸ್ಕಾರ. ಜಗದೊಡೆಯನೆ, ಸರ್ವಾಶ್ರಯನೇ.... ಈ ಯುದ್ದದಲ್ಲಿ ನನ್ನನ್ನು ರಥದಿಂದ ಕೆಡವಿಬಿಡು' ಎಂಬುದು ಭೀಷ್ಮನ ಪ್ರಾರ್ಥನೆ. ಅಲ್ಲದೆ ಇದು ಆತ್ಮನಿವೇದನೆಯಾದರೂ ಭೀಷ್ಮಭಕ್ತಿ, ಭೀಷ್ಮನ ಭಕ್ತಿ.

ಶಿವಮಹಿಮ್ನಸ್ತೋತ್ರವೆಂಬುದು ಪ್ರಾಚೀನಕೃತಿ. ಇಲ್ಲಿಯ ಸ್ತುತಿಪದ್ಯವೊಂದು ವಿಶಿಷ್ಟವೆನಿಸುತ್ತದೆ. ಇಲ್ಲಿಯ ಮೂಲವಸ್ತು ಭಗವಂತನೆ. ನೀಲಾಚಲದಷ್ಟು ಮಸಿಯನ್ನು ಸಾಗರವೆಂಬ ಮಸಿಕುಡಿಕೆಯಲ್ಲಿ ಹಾಕಿ, ಸುರತರುವೆಂಬ ಕಲ್ಪತರುವಿನ ಕೊಂಬೆಯನ್ನೇ ಲೇಖನಿಯನ್ನಾಗಿ ಸ್ವೀಕರಿಸಿ, ಪೃಥ್ವಿಯನ್ನೇ ಕಾಗದವನ್ನಾಗಿ ಬಳಸಿಕೊಂಡು ಶಾರದೆಯೇ ಸರ್ವಕಾಲದಲ್ಲಿಯೂ ಬರಹಕ್ಕೆ ಒಳಗಾಗಿದ್ದರೂ ನಿನ್ನ ಮಹಿಮಾತಿಶಯದ ಎಲ್ಲೆಯನ್ನು ಸಮೀಪಿಸಲಾಗುವುದಿಲ್ಲ[೨೦] ಎಂದು ಶಿವನ ಕುರಿತಾಗಿ ಭಕ್ತಿಭಾವವನ್ನು ಪ್ರಕಟಿಸುತ್ತದೆ.

ಭಾರತೀಯ ಭಕ್ತಿಯ ಇತಿಹಾಸದಲ್ಲಿ ವೇದಗಳು ಯಜ್ಞಗಳ ಉಪಾಸನೆಯಲ್ಲಿಯೇ ನಿರತವಾದವು. ಇದರಿಂದ ಆತ್ಮತತ್ವದರ್ಶನವು ಹಾಗೆಯೇ ಉಳಿಯಿತು. ಈ ದೆಸೆಯಲ್ಲಿ ಜೀವನದ ಪೂರ್ಣದರ್ಶನವನ್ನು ನೀಡಲು ಉಪನಿಷತ್ತುಗಳು ಮುಂದಾದವು. ಹಿಂಸಾಮೂಲವಾದ ಯಜ್ಞಯಾಗಗಳಿಂದ ಬರುವ ಫಲವು ಸ್ವಲ್ಪಮಾತ್ರವೆಂದು ಬಗೆದ ಉಪನಿಷತ್ತುಗಳು ಹಿಂಸೆಯೇ ಪುನರ್ಜನ್ಮಕ್ಕೆ ಕಾರಣವೆಂದು ಹೇಳಲು ಮುಂದಾಯಿತು. ಯಜ್ಞದ ಕಲ್ಪನೆಯನ್ನು ಉಪನಿಷತ್ತುಗಳು ಬಳಸಿಕೊಂಡರೂ ಅದಕ್ಕೆ ವ್ಯಾಪಕಾರ್ಥವನ್ನು ಕಲ್ಪಿಸಿದವು. ಇಲ್ಲಿ ಉಪನಿಷತ್ತುಗಳು ಅಲ್ಪವಾದುದನ್ನು ನಾಶಗೊಳಿಸುತ್ತಾ, ಅನಂತವನ್ನು ಒಪ್ಪಿಕೊಳ್ಳುತ್ತಾಹೋದವು. ಉಪನಿಷತ್ತಿನ ಹೆಸರೇ ಸೂಚಿಸುವಂತೆ, 'ಉಪ' ಅಂದರೆ ಅಜ್ಞಾನವನ್ನು, 'ನಿ' ಎಂದರೆ ಸಂಪೂರ್ಣವಾಗಿ, 'ಸತ್' ಎಂದರೆ ನಾಶಗೊಳಿಸುವುದು[೨೧] ಎನ್ನುವ ಸತ್ಯ ದೃಢವಾಯಿತು. ಆದುದರಿಂದಲೇ ಭಾರತೀಯ ಜೀವನದರ್ಶನದಲ್ಲಿ ಉಪನಿಷತ್ತುಗಳ ಪಾತವ್ರ ಮಹತ್ತರವಾದುದು. ಅದು ಧರ್ಮ, ಸಾಹಿತ್ಯ, ಸಂಸ್ಕೃತಿ ಕಲೆಗಳನ್ನು ಆವರಿಸಿತು. ಭಾರತೀಯ ಆಧ್ಯಾತ್ಮಕ್ಕೆ ಉಪನಿಷತ್ತುಗಳೇ ಮುಖ್ಯವಾಯಿತು.

ಭಕ್ತಿಯಲ್ಲಿ ಆತ್ಮನಿವೇದನದ ಕೊನೆಯ ಹೆಜ್ಜೆಯೇ ತನ್ಮಯಾಸಕ್ತಿ. ಇಲ್ಲಿ ಭಕ್ತಿತನ್ಮಯತೆಯಿಂದಲೇ ಮುಕ್ತಿಗಾಗಿ ನಿವೇದಿಸುವ, ಮತ್ತು ಆ ಮೂಲಕ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳುವ ದಾರಿಯನ್ನು ಮುಂಡಕೋಪನಿಷತ್ತು ನೀಡುತ್ತದೆ. 'ಇಲ್ಲಿ ಪ್ರಣವಸ್ವರೂಪಿಯಾದ ಓಂಕಾರವೇ ಧನುಸ್ಸು ಎನಿಸುತ್ತದೆ. ಆತ್ಮವೆಂಬುದೇ ಬಾಣವಾಗುತ್ತದೆ. ಇಲ್ಲಿ ಬ್ರಹ್ಮವೇ ಲಕ್ಷ್ಯ ಅಥವಾ ಗುರಿ. ಅದು ಪ್ರಮತ್ತನಾಗದೆ ಬಾಣವನ್ನು ಹೊಡೆಯಬೇಕು. ಬಾಣದಂತೆಯೇ ತನ್ಮಯನೂ ಆಗಬೇಕು'.[೨೨] ಮುಂಡಕೋಪನಿಷತ್ತು ಹೇಳುವ ತನ್ಮಯತೆಗೆ ಏಕಾಗ್ರತೆ ಬೇಕಾಗುತ್ತದೆ. ಏಕಾಗ್ರಚಿತ್ತದ ಧ್ಯಾನದಿಂದ ಮಾತ್ರ ಸಿದ್ಧಿಸಾಧ್ಯವೆಂಬುದು ಈ ಉಪನಿಷತ್ತಿನ ಸಾರ.

ಹಿಂದೂಭಕ್ತಿಪರಂಪರೆಯಲ್ಲಿ ಆಳ್ವಾರರ ಕೃತಿಗಳು ಮುಖ್ಯವೆನಿಸುತ್ತವೆ. 'ಮುಕುಂದಮಾಲಾಸ್ತೋತ್ರ'ವೆಂಬ ಕುಲಶೇಖರಾಳ್ವಾರರ ಕೃತಿಯಲ್ಲಿ ದಾಸ್ಯಭಾವದ ಪ್ರತಿಪಾದನೆಯೇ ಹರಡಿಕೊಂಡಿದೆ. 'ಮಧುಕೈಟಭರ ಶತ್ರುವೇ, ನನ್ನ ಜನ್ಮಕ್ಕೆ ನಿನ್ನ ಅನುಗ್ರಹ ಮಾತ್ರಫಲ. ನಾನು ನಿನ್ನ ಭೃತ್ಯನ ಭೃತ್ಯನ ಪರಿಚಾರಕನ ಸೇವಕನ ಸೇವಕನ ದಾಸನ ದಾಸ. ಹೇ ಲೋಕನಾಥ, ನಿನ್ನ ಸ್ಮರಿಸುತಿಹೆ'[೨೩] ಎನ್ನುವಲ್ಲಿ ದಾಸ್ಯವೇ ಭಕ್ತಿಯ ಜೀವಾಳವಾಗಿಬಿಟ್ಟಿದೆ. ಈ ಕಲ್ಪನೆಯಿಂದಲೇ ಕರ್ನಾಟಕದ ದಾಸರು ತಮ್ಮ ರಚನೆಯಲ್ಲಿ 'ದಾಸದಾಸರ ಮನೆಯ ದಾಸಿಗರಮಗ ನಾನು' ಎಂದು ಹೇಳಿಕೊಂಡಿರುವುದನ್ನು ನೆನಪಿಸಿಕೊಳ್ಳಬಹುದು.

ಭಾರತೀಯ ಧಾರ್ಮಿಕಸಾಹಿತ್ಯದಲ್ಲಿ ನಾರದೀಯ ಭಕ್ತಿಸೂತ್ರವೆಂಬ ಕೃತಿಯು ಮಹತ್ತರವಾದುದು. ಇದು ಸಂಗೀತಶಾಸ್ತ್ರಕ್ಕೆ ಸಂಬಂಧಿಸಿದ 'ಸಂಗೀತ ಮಕರಂದ'ದ ನಂತರದ ಕೃತಿ. ನಾರದರ ಎರಡನೆಯ ಕೃತಿಯಾದ ಭಕ್ತಿಸೂತ್ರವು ಭಕ್ತಿಮಾರ್ಗಕ್ಕೆ ಸಂಬಂಧಿಸಿದುದಾಗಿದೆ.[೨೪] ಇಲ್ಲಿ ಧರ್ಮೋಪದೇಶಗಳು ಎಂಬತ್ತನಾಲ್ಕು ಸೂತ್ರರೂಪಗಳಾಗಿ ಮೈತಳೆದಿವೆ. ಸುಮಾರು ಹನ್ನೆರಡನೇ ಶತಮಾನದಲ್ಲಿ ರಚಿಸಿರಬಹುದಾದ ಈ ಗ್ರಂಥದ

ಕರ್ತೃ ಯಾರೆಂದು ಇಂದಿಗೂ ತಿಳಿಯದಿರುವ ವಿಚಾರ. ಇಲ್ಲಿ ಶಾಂಡಿಲ್ಯ ಭಕ್ತಿಸೂತ್ರಗಳಂತೆ ಕಠಿಣತೆಯಿಲ್ಲ; ಇರುವುದು ಕೇವಲ ಸರಳತೆ. ನಾರದರ ಭಕ್ತಿಸೂತ್ರದ ನಿರ್ವಚನವೇ ಹೇಳುವಂತೆ,

ಅಲ್ಪಾಕ್ಷರಮಸಂದಿಗ್ಧಂ ಸಾರವದ್ವಿಶ್ವತೋ ಮುಖಮ್ ।
ಅಸ್ತೋಭಮನ ವದ್ಯಂ ಚ ಸೂತ್ರವಿದೋ ವಿದು: ॥[೨೫]

ಅಂದರೆ ಕನಿಷ್ಟ ಅಕ್ಷರಗಳನ್ನುಳ್ಳ, ಸೂಕ್ತಾರ್ಥವನ್ನು ಕೊಡುವ, ಸರ್ವವಿಚಾರ ಗ್ರಾಹ್ಯವಾದ ಸೂತ್ರವಿದೆಂದು ಈ ಕೃತಿಯು ಸಾರುತ್ತದೆ. ಪ್ರಾಯಶಃ ಅಲ್ಪಾಕ್ಷರ ಪ್ರಯೋಗವೆನ್ನುವುದು ಪ್ರಾಚೀನಕಾಲದ ಅವಧಾರಣೆಯ ತಂತ್ರಗಾರಿಕೆಯೂ ಇದ್ದಿರಬಹುದು. ಇಲ್ಲಿಯ ಸೂತ್ರಗಳಿಂದ ವ್ಯಕ್ತವಾಗುವ ವಿಚಾರವೇನೆಂದರೆ, ಇಲ್ಲಿ ವಾದವಿವಾದಗಳಿಗೆ ಅವಕಾಶಗಳಿಲ್ಲ. ಭಕ್ತಿಸಾಧನೆಯೇ ಪ್ರಧಾನವಿಷಯವಾಗಿ ಪರಿಣಮಿಸುತ್ತದೆ. ಕವಿಯೇ ಹೇಳುವಂತೆ, ‘ವಾದೋ ನಾವಲಂಭ್ಯಃ’[೨೬] ಭಕ್ತನಾದವನು ಚರ್ಚೆಯನ್ನು ಅವಲಂಬಿಸಬಾರದು ಎನ್ನುತ್ತಾನೆ. ಭಗವದನುಭವದಿಂದ ತರ್ಕಯುಕ್ತಿ ನಶಿಸುತ್ತದೆಂದೂ, ತರ್ಕವೇ ಪ್ರಧಾನವಾದರೆ ಬ್ರಹ್ಮವು ಪ್ರಾಪ್ತಿಯಾಗದೆಂದೂ ಕೃತಿಗಾರನ ವಿಶ್ಲೇಷಣೆ. ಅಂದರೆ, ಭಗವತ್ ತತ್ವವನ್ನರಿಯಲು ವೈಚಾರಿಕತೆಗೆ ತೊಡಗಬಾರದೆಂಬ ಅರ್ಥವಲ್ಲ. ವಿಚಾರವಿನಿಮಯವು ಶ್ರುತಿಸಮ್ಮತವಾದರೆ, ವಾದವಿವಾದಗಳು ಶ್ರುತಿಬಾಹಿರವಾಗಿ ನಡೆಯುತ್ತವೆ ಎಂಬುದು ಗೋಚರವಾಗುವ ಅಂಶ. ಇದರಿಂದಾಗುವ ಸ್ಪಷ್ಟ ತಿಳುವಳಿಕೆಯೆಂದರೆ, ಶ್ರುತಿಸಮ್ಮತವಾದ ತಾರ್ಕಿಕತೆಯನ್ನು ವೇದಾಂತವು ಒಪ್ಪುತ್ತದೆ ಎನ್ನುವುದು.

ನಾರದೀಯ ಭಕ್ತಿಸೂತ್ರದ ಪ್ರಕಾರ ಭಗವಂತನ ಸಾಕ್ಷಾತ್ಕಾರವೇ ಮಾನವ ಬಾಳ್ವೆಯ ಅಂತಿಮಗುರಿ. ಭಗವಂತನೇ ಹೃದಯವಾಸಿ ಹಾಗೂ ಅಂತರ್ಯಾಮಿ. ನಾರದಮಹರ್ಷಿಗಳು ಇದನ್ನೇ ‘ಸಾ ತ್ವಸ್ಮಿನ್ ಪರಮ ಪ್ರೇಮರೂಪಾ’[೨೭] ಎಂದು ಕರೆಯುತ್ತಾರೆ. ಈ ಸೂತ್ರದ ಪ್ರಕಾರ ಭಕ್ತಿಯೆಂಬುದು ಲೌಕಿಕ ವಿಷಯವಾದ ಪ್ರೇಮವಲ್ಲ. ಅದು ‘ಇವನಲ್ಲಿ’ ಪರಮ ಪ್ರೇಮರೂಪ. ಇಲ್ಲಿ ‘ಇವನಲ್ಲಿ’ ಎಂಬ ಪದದೊಂದಿಗೆ ಇನ್ನೆರಡು ಪದಗಳನ್ನು ಗಮನಿಸಬೇಕು. ‘ಇವನಲ್ಲಿ’ ಎಂಬುದು ಸರ್ವನಾಮವಾದರೆ, ‘ಪರಮ’ ಮತ್ತು ‘ರೂಪ’ವೆಂಬೆರಡು ಪದಗಳು ಅನುಕ್ರಮವಾಗಿ ಗುಣವಾಚಕ ಹಾಗೂ ವಿಶೇಷಣಗಳಾಗಿ ತೋರಿವೆ. ಇಲ್ಲಿ ಸರ್ವನಾಮವೆಂದರೆ ಸಕಲವೂ ಎಂದರ್ಥ. ಬ್ರಹ್ಮವಸ್ತುವೇ ಎಲ್ಲವೂ ಆಗಿರುವುದರಿಂದ ಅದನ್ನು ‘ತತ್’ ಎಂದು ಪ್ರಾಚೀನರು ಕರೆದರು. ಆ ತತ್‌ರೂಪವೇ ಅಂತರ್ಯಾಮಿಯಾಗಿ ನಮ್ಮಲ್ಲಿ ನೆಲೆಸಿದುದರಿಂದ ಅದನ್ನು ‘ಇದಮ್’ಎಂಬುದಾಗಿಯೂ ಸೂಚಿಸಿದರು. ‘ಅಸ್ಮಿನ್’ ಎಂಬುದು ‘ಇದಮ್’ ಶಬ್ದದ ಸಪ್ತಮೀರೂಪ. ಅಂದರೆ ‘ಇವನಲ್ಲಿ’ ಎಂದರ್ಥ. ಆದುದರಿಂದ, ನಮ್ಮ ಹೃದಯದಲ್ಲಿಯೇ, ನಮ್ಮ ಅಂತರ್ಯಾಮಿಯಾಗಿಯೇ ಇರುವ ಪರಮಾತ್ಮನಲ್ಲಿ ನಾವು ತೋರುವ ಪರಮಪ್ರೇಮವೇ ‘ಭಕ್ತಿ’ಎಂದು ನಾರದೀಯ ಭಕ್ತಿಸೂತ್ರವು ವ್ಯಾಖ್ಯಾನಿಸುತ್ತದೆ.

ನಾರದರ ಪ್ರಕಾರ ಭಕ್ತಿಗೆ ಎರಡು ರೂಪ. ೧. ಪರಾಭಕ್ತಿ. ೨. ಅಪರಾಭಕ್ತಿ. ಒಂದನೆಯದು ಗುರಿಯಾಗಿ ಪರಿಣಮಿಸಿದರೆ, ಇನ್ನೊಂದು ಗುರಿಯನ್ನು ಪಡೆಯುವ ಸಾಧನವಾಗುತ್ತದೆ.

ನಾರದೀಯ ಭಕ್ತಿಸೂತ್ರವು ಹೇಳುವಂತೆ, ಭಗವಂತನ ಸಾಕ್ಷಾತ್ಕಾರದಲ್ಲಿ ಸಿಗುವ ಪರಮಾನಂದದ ಅಭಿವ್ಯಕ್ತಿಯು ಪರಾಭಕ್ತಿಯಾಗುತ್ತದೆ. ಇಲ್ಲಿ ಆನಂದಮಯವಿದೆ. ಭವಿಷ್ಯದಲ್ಲಿ ಕೈವಲ್ಯಸಿದ್ಧಿಯಿದೆ. ಪರಾಭಕ್ತಿಯ ಕುರಿತಾಗಿ ಭಾಗವತವು ಹೀಗೆ ಹೇಳುತ್ತದೆ.

ನ ಪಾರಮೇಷ್ಟ್ಯಂ ನ ಮಹೇಂದ್ರಧಿಷ್ಣ್ಯಮ್ ನ ಸಾರ್ವಭೌಮಮ್ ನ ರಸಾಧಿಪತ್ಯಮ್ ।
ನ ಯೋಗಸಿದ್ಧೀರಪುನರ್ಭವಮ್ ವಾ ಮಯ್ಯರ್ಪಿತಾತ್ಮೇಚ್ಛತಿ ಮದ್ವಿನಾನ್ಯತ್ ॥[೨೮]

ನನ್ನಲ್ಲಿ ಭಕ್ತನು ತನ್ನ ಮನಸ್ಸನ್ನು ಪೂರ್ಣವಾಗಿ ಒಪ್ಪಿಸಿದ ಮೇಲೆ ಆತನಿಗೆ ಪರಮೇಶ್ವರನ ಸ್ಥಾನವಾಗಲಿ, ಇಂದ್ರ ಸ್ಥಾನವಾಗಲೀ, ಭೂಲೋಕ ಸಾರ್ವಭೌಮ ಪದವಿಯಾಗಲೀ ಅಥವಾ ಮೋಕ್ಷವನ್ನೇ ಆಗಲೀ ಆತ ಬಯಸುವುದಿಲ್ಲ. 'ಭಜತಾಂ ಭಗವಾನ್ ಮುಕುಂದೋ ಮುಕ್ತಿಮ್ ದದಾತಿ ಕರ್ಹಿಚಿನ್ನ ಹಿ ಭಕ್ತಿ ಯೋಗಮ್'[೨೯] ತನ್ನನ್ನು ಭಜಿಸಿದವನಿಗೆ ಮುಕ್ತಿ ಯೋಗವನ್ನಾದರೂ ಕೊಟ್ಟಾನು, ಆದರೆ ಭಕ್ತಿಯೋಗವನ್ನು ಮಾತ್ರ ಕೊಡನು ಎಂದು ಭಾಗವತವು ಹೇಳುತ್ತದೆ. ಅಪರಾ ಅಂದರೆ ಗೌಣೀಭಕ್ತಿಯು ಇತರ ಭಕ್ತಿರೂಪಗಳಿಂದ ಸುಲಭಸಾಧ್ಯ. ಹೃದಯದ ಸಹಜಪ್ರೀತಿಯನ್ನು ಭಗವಂತನ ಕಡೆಗೆ ತಿರುಗಿಸುವ ಇದರ ರೀತಿ ನಿಜಕ್ಕೂ ವಿಶಿಷ್ಟ. ವಿಪುಲಪ್ರಮಾಣದ ಸಹಾಯವಿಲ್ಲದೆಯೇ ಪರಮಾನಂದವನ್ನು ಪಡೆಯುವಂತಹುದು ಇದರ ಮುಖ್ಯಗುಣ.

ನಾರದರು ಗೌಣೀಭಕ್ತಿಗೆ ತ್ರಿಗುಣಗಳನ್ನು ಕ್ರೋಢೀಕರಿಸಿಕೊಂಡು, ಗುಣಾವಲಂಬಿಯೆಂದು ಕರೆಯುತ್ತಾರೆ. ಅದಕ್ಕಾಗಿ ಅವರು,

ಭಕ್ತಿಯೋಗೋ ಬಹುವಿಧೋ ಮಾರ್ಗೈರ್ಭಾಮಿನೀ ಭಾವ್ಯತೇ ।
ಸ್ವಭಾವ ಗುಣ ಮಾರ್ಗೇಣ ಪುಂಸಾಂ ಭಾವೋ ವಿಭಿದ್ಯತೇ ॥[೩೦]

ಇಲ್ಲಿ ಹಿಂಸೆ, ಸೋಗು, ಕೋಪ ಮೊದಲಾದವುಗಳ ಪ್ರೇರಣೆಗೊಳಗಾಗಿ ಏರ್ಪಡುವ ಭಕ್ತಿಯು ತಾಮಸವಾಗಿಯೂ, ವಿಷಯ, ಯಶಸ್ಸು, ಐಶ್ವರ್ಯವನ್ನು ಬಯಸಿ ಅರ್ಚಿಸುವ ಭಕ್ತಿ ರಾಜಸವಾಗಿಯೂ, ಪ್ರಾರಬ್ಧಕರ್ಮವನ್ನು ಬಯಸಿ, ಕರ್ಮಫಲವನ್ನು ಪರಮಪುರುಷನಲ್ಲಿ ಅರ್ಪಣೆ ಮಾಡುವ ಭಕ್ತಿಯನ್ನು ಸಾತ್ವಿಕವಾಗಿಯೂ ನಾರದರು ಕಂಡಿರಿಸಿದ್ದಾರೆ.

ಚತುರ್ವಿಧಾ ಭಜಂತೇ ಮಾಂ ಜನಾಃಸ್ಸುಕೃತಿನೋರ್ಜುನ: ।
ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನಿ ಚ ಭರತರ್ಷಭ ।
ತೇಷಾಂ ಜ್ಞಾನೀ ನಿತ್ಯ ಯುಕ್ತ ಏಕಭಕ್ತಿರ್ವಿಶಿಷ್ಯತೇ ॥[೩೧]

ಶ್ರೀಕೃಷ್ಣನು ಅರ್ಜುನನಿಗೆ ಭಗವದ್ಗೀತೆಯಲ್ಲಿ ಹೇಳುವಂತೆ, ಆರ್ತ, ಜಿಜ್ಞಾಸು, ಅರ್ಥಾರ್ಥಿ ಮತ್ತು ಜ್ಞಾನಿ ಎಂಬ ನಾಲ್ಕು ಬಗೆಯ ಭಕ್ತರು ನನ್ನನ್ನು ಪೂಜಿಸುತ್ತಾರೆ. ಅವರಲ್ಲಿ ನಿತ್ಯನಿಷ್ಠೆ ಹಾಗೂ ಏಕಭಕ್ತಿಯುಳ್ಳ ಜ್ಞಾನಿಯೇ

ಶ್ರೇಷ್ಠನೆನ್ನುತ್ತಾನೆ. ಆರ್ತನು ತೊಂದರೆಗೆ ಸಿಲುಕಿಕೊಂಡು ದೀನನಾಗುತ್ತಾನೆ. ಅರ್ಥಾರ್ಥಿಂ ... ಬಯಸುವವನಾಗಿರುತ್ತಾನೆ. ಜಿಜ್ಞಾಸುವು ಪಾರಮಾರ್ಥಿಕ ತತ್ವವನ್ನರಿಯಲು ಹಂಬಲಿಸುತ್ತಾನೆ. ... ಸತ್ಯವನ್ನು ತಿಳಿದವನೇ ಜ್ಞಾನಿ ಎಂದೆನಿಸಿಕೊಳ್ಳುತ್ತಾನೆ. ಆದರೆ ಈ ಜ್ಞಾನಿ ಪರಾಭಕ್ತಿ ಸಂಪನ್ನನಾದುದರಿಂದ ಗೌಣಭಕ್ತ ಸಂಕುಲಕ್ಕೆ ಸೇರುವುದಿಲ್ಲ.

ದಾಸಸಾಹಿತ್ಯದಲ್ಲೂ ಈ ಕುರಿತಾದ ಉದಾಹರಣೆಗಳು ಸಾಕಷ್ಟಿವೆ. ಅಲ್ಲಿಯ ಆರ್ತಭಕ್ತಿಗೆ ಗಜೇಂದ್ರ, ದ್ರೌಪದಿಯರು, ಜಿಜ್ಞಾಸೆಗೆ ಉದ್ಧವರುಗಳೇ ದೃಷ್ಟಾಂತರಾಗಿ ತೋರುತ್ತಾರೆ. ನಾರದರು ಕೂಡ ತಮ್ಮ ಭಕ್ತಿಸೂತ್ರದಲ್ಲಿ ಏಕಾದಶ ಭಕ್ತಿಗಳನ್ನು ತಿಳಿಸಿಕೊಡುತ್ತಾರೆ. ಅವುಗಳೆಂದರೆ, ೧. ಗುಣಮಹಾತ್ಮ್ಯಾಸಕ್ತಿಭಕ್ತಿ (ಭಗವಂತನ ಮಹಿಮಾತಿಶಯಕ್ಕೆ ಆಕರ್ಷಿತನಾಗುವುದು. ಉದಾ:- ವಾಲ್ಮೀಕಿ, ವ್ಯಾಸ, ಶುಕ, ನಾರದ) ೨. ರೂಪಾಸಕ್ತಿಭಕ್ತಿ (ಭಗವಂತನ ಮನೋಹರ ರೂಪಕ್ಕೆ ಆಕರ್ಷಿತನಾಗುವುದು. ಉದಾ:- ದಂಡಕಾರಣ್ಯದ ಋಷಿಗಳು, ಬೃಂದಾವನದ ಗೋಪಿಕೆಯರು), ೩. ಪೂಜಾಸಕ್ತಿ ಭಕ್ತಿ (ಭಗವಂತನ ಪೂಜೆಯಲ್ಲೇ ಆನಂದ ಪಡೆಯುವುದು. ಉದಾ:- ಅಂಬರೀಷ) ೪. ಸ್ಮರಣಾಸಕ್ತಿ ಭಕ್ತಿ (ಭಗವಂತನ ಸ್ಮರಣೆಯಲ್ಲೇ ಪರಮಾನಂದ ಹೊಂದುವುದು. ಉದಾ:-ಪ್ರಹ್ಲಾದ), ೫. ದಾಸ್ಯಾಸಕ್ತಿ ಭಕ್ತಿ (ಭಗವಂತನಲ್ಲಿ ದಾಸ್ಯತ್ವ ಪಡೆಯುವುದು. ಉದಾ:-ಹನುಮಂತ, ಗರುಡ), ೬. ಸಖ್ಯಾಸಕ್ತಿಭಕ್ತಿ (ಭಗವಂತನನ್ನು ಗೆಳೆಯನನ್ನಾಗಿ ಸೇವಿಸುವುದು. ಉದಾ:-ಅರ್ಜುನ, ಉದ್ಧವ, ಕುಚೇಲ), ೭. ವಾತ್ಸಲ್ಯಾಸಕ್ತಿಭಕ್ತಿ (ಭಗವಂತನನ್ನು ಮಗುವಾಗಿ ಕಾಣುವುದು. ಉದಾ:-ಯಶೋದೆ, ವಸುದೇವ_ದೇವಕಿ), ೮. ಕಾಂತಾಸಕ್ತಿಭಕ್ತಿ (ಭಗವಂತನನ್ನು ಪತಿಯಂತೆ ಪ್ರೀತಿಸುವುದು. ಉದಾ:-ಸೀತೆ, ರುಕ್ಮಿಣಿ), ೯. ಆತ್ಮನಿವೇದನಾಸಕ್ತಿಭಕ್ತಿ (ಭಗವಂತನಿಗೆ ಆತ್ಮಸಮರ್ಪಣೆ ಮಾಡುವುದು. ಉದಾ:-ವಿಭೀಷಣ, ಬಲಿ), ೧೦. ತನ್ಮಯತಾಸಕ್ತಿಭಕ್ತಿ (ಭಗವಂತನನ್ನು ಧ್ಯಾನದಿಂದಲೇ ಒಲಿಸಿಕೊಳ್ಳುವುದು. ಉದಾ:- ಶೌನಕ, ಸನತ್ಕುಮಾರ), ೧೧. ಪರಮ ವಿರಹಾಸಕ್ತಿಭಕ್ತಿ (ಭಗವಂತನ ಅಗಲಿಕೆಯಿಂದ ಯಾತನಾಭಕ್ತಿ. ಉದಾ:-ಗೋಕುಲದ ಗೋಪಿಕೆಯರಲ್ಲಿ) ಹೀಗೆ ಭಕ್ತಿಯ ವಿರಾಟ್‌ಸ್ವರೂಪದಲ್ಲಿ ನಾರದರು ಪ್ರತಿಪಾದಿಸುವುದು ಎಂಬತ್ತನಾಲ್ಕು ಸೂತ್ರಗಳನ್ನು. ಆ ಮೂಲಕವಾಗಿಯೇ ಭಕ್ತಿಸಾರದ ವಿರಾಡ್‌ದರ್ಶನವನ್ನು ಮಾಡಿಸುತ್ತಾರೆ. ಅವರ ಪ್ರಕಾರ ಶೀಘ್ರ ಫಲವನ್ನು ಕೊಡುವ ಮೋಕ್ಷ ಮಾರ್ಗವೇ ಭಕ್ತಿ. ಭಾರತೀಯ ಭಕ್ತಿಸ್ವರೂಪದಲ್ಲಿ ನಾರದ ಪ್ರಣೀತವಾದ ಭಕ್ತಿಸೂತ್ರಕ್ಕೆ ವಿಶಿಷ್ಟವಾದ ಸ್ಥಾನವಿದೆ.

ನಾರದರ ಭಕ್ತಿಸೂತ್ರದಂತೆಯೇ, ಶಾಂಡಿಲ್ಯಮಹರ್ಷಿಗಳ ಭಕ್ತಿವಿಚಾರಗಳೇ 'ಶಾಂಡಿಲ್ಯ ಭಕ್ತಿಸೂತ್ರ'ವಾಗಿ ಪರಿಣಮಿಸಿತು. ಇಲ್ಲಿ ಶಾಂಡಿಲ್ಯರು ನೂರು ಭಕ್ತಿಸೂತ್ರಗಳನ್ನು ಶಾಸ್ತ್ರವನ್ನಾಗಿ ಜಿಜ್ಞಾಸೆ ಮಾಡುತ್ತಾರೆ. ನಾರದರು ಹೇಳಿರುವ ಸೂತ್ರವೊಂದಕ್ಕೆ ಸಂವಾದಿಯಾಗಿಯೇ ಸೂತ್ರವೊಂದನ್ನು ರಚಿಸಿ ಭಕ್ತಿಯ ಲಕ್ಷಣಗಳನ್ನು ಪ್ರಸ್ತಾಪಿಸುತ್ತಾರೆ. ಸಮ್ಮಾನ, ಬಹುಮಾನ, ಪ್ರೀತಿ, ವಿರಹ, ಇತರ ವಿಚಿಕಿತ್ಸೆ, ಮಹಿಮಾಖ್ಯಾತಿ, ಭಗವಂತನಿಗಾಗಿ ಪ್ರಾಣಧಾರಣೆ, ಅವನಿಗೆ ಮೀಸಲೆಂದೆಂಬ ಭಾವನೆ, ಸರ್ವವೂ ಭಗವಂತನೆಂಬ ಭಾವನೆ, ಭಗವಂತನಿಗೆ

ಪ್ರತಿಕೂಲವಾಗಿ ನಡೆಯದಿರುವುದು–ಇವು ಭಕ್ತನಲ್ಲಿರಬೇಕಾದ ಭಕ್ತಿಯ ಲಕ್ಷಣಗಳೆಂದು ಶಾಂಡಿಲ್ಯರು ಅಭಿಪ್ರಾಯ ಪಡುತ್ತಾರೆ. ಇಲ್ಲಿ ಸಮ್ಮಾನವೆಂದರೆ ಗೌರವಿಸುವುದು, ಬಹುಮಾನವೆಂದರೆ ಅತಿಯಾದ ಗೌರವ, ವಿಚಿಕಿತ್ಸೆಯೆಂದರೆ ಭಗವಂತನನ್ನುಳಿದು ಉಳಿದುದೆಲ್ಲವನ್ನು ಸಂಶಯದಿಂದ ಗಮನಿಸುವುದು, ಮಹಿಮಾಖ್ಯಾತಿಯೆಂದರೆ ಭಗವಂತನ ಮಹಿಮೆಯನ್ನು ಬಣ್ಣಿಸುವುದು, ತದರ್ಥಪ್ರಾಣಧಾರಣವೆಂದರೆ ಭಗವಂತನಿಗಾಗಿಯೇ ಬದುಕುವುದು, ಅಪ್ರತಿಕೂಲ್ಯವೆಂದರೆ ಭಗವಂತನ ಇಚ್ಛೆಗೆ ವಿರುದ್ಧವಾಗಿ ವರ್ತಿಸದಿರುವುದೆಂದೇ ಭಾವಿಸಬೇಕು. ಇಲ್ಲಿ ಭಗವಂತನು ನಿತ್ಯನಾಗಿ, ಸ್ವತಂತ್ರನಾಗಿ ಜಗತ್ತನ್ನು ಸೃಷ್ಟಿಸುತ್ತಾನೆ. ಚಿತ್‌ಸ್ವರೂಪವನ್ನು ಜೀವನು ಪಡೆದುಕೊಂಡಿದ್ದರೂ ಆತ ಈಶ್ವರನಿಂದ ಅಭೇದ. ಹಾಗಾಗಿಯೇ ಆತ ಸಂಸಾರವೆಂಬ ಬಂಧನಕ್ಕೊಳಗಾಗುತ್ತಾನೆ. ಇಲ್ಲಿಯ ಚಿತ್ತಶುದ್ಧಿಕ್ಕೋಸ್ಕರವಾಗಿ ಪರಾ ಮತ್ತು ಗೌಣೀ ಎಂಬ ಎರಡು ರೀತಿಯ ಭಕ್ತಿಯನ್ನು ಶಾಂಡಿಲ್ಯ ಭಕ್ತಿಸೂತ್ರವು ಮುಖ್ಯವಾಗಿ ನಿರ್ದೇಶಿಸುತ್ತದೆ.[೩೨]

ವೇದಾಂತ ಶಾಸ್ತ್ರಗಳು

ವೇದಾಂತವೆಂಬುದು ವೇದಗಳಿಂದ ಹುಟ್ಟಿಬಂದ ಇನ್ನೊಂದು ದಾರ್ಶನಿಕ ಪದ್ಧತಿ. ಹೆಸರೇ ಸೂಚಿಸುವಂತೆ ಇದು ವೇದಗಳ ಅಂತ್ಯಭಾಗ. ಉಪನಿಷತ್ತುಗಳಿಂದ ಹುಟ್ಟಿದ ತತ್ವಜ್ಞಾನದ ಪ್ರತಿಪಾದನೆ. ಈ ಕುರಿತಾಗಿ ಬಂದ ಮೊದಲ ಗ್ರಂಥವೆಂದರೆ ಬಾದರಾಯಣರು ಬರೆದ 'ವೇದಾಂತಸೂತ್ರ' ಅಥವಾ 'ಬ್ರಹ್ಮಸೂತ್ರ'ವೆಂಬ ಕೃತಿ. ಆದರೆ ಇದರ ಕಾಲದಲ್ಲಿ ಸ್ಪಷ್ಟತೆಯಿಲ್ಲ. ಆದರೂ ಇದು ಗೂಢಾರ್ಥದಿಂದ ಹಾಗೂ ಗಾಢಾರ್ಥದಿಂದ ಕೂಡಿರುವಂತಹುದು. ತಾತ್ವಿಕಾರ್ಥವನ್ನು ಪಡೆದಿರುವಂಥದ್ದು. ಈ ಬ್ರಹ್ಮಸೂತ್ರಕ್ಕೆ ಭಾಷ್ಯವನ್ನು ಬರೆದವರು ಒಟ್ಟು ಇಪ್ಪತ್ತಮೂರು ಮಂದಿ. ಅವರಲ್ಲಿ ಕೊನೆಯ ಮೂವರು ಅವತಾರಪುರುಷರಾದ ಆಚಾರ್ಯತ್ರಯರು.[೩೩]

ಈ ವೇದಾಂತದಲ್ಲಿ, ಶಂಕರಾಚಾರ್ಯರ 'ಅದ್ವೈತ ವೇದಾಂತ', ರಾಮಾನುಜಾಚಾರ್ಯರ 'ವಿಶಿಷ್ಟಾದ್ವೈತ ವೇದಾಂತ' ಹಾಗೂ ಮಧ್ವಾಚಾರ್ಯರ 'ದ್ವೈತ ವೇದಾಂತ' ಎಂಬವುಗಳು ಮುಖ್ಯವಾದವುಗಳು. ಇದರಲ್ಲಿ ಶಂಕರಾಚಾರ್ಯರದ್ದು ಮಾಯಾವಾದದ ವೇದಾಂತ. ಅವರು ಅಂತಿಮ ಸತ್ಯವನ್ನೇ 'ಬ್ರಹ್ಮ'ವೆಂದು ಕರೆದರು. ಅದರಲ್ಲೇ ಯಥಾರ್ಥತೆಯನ್ನು ಕಂಡರು. ಬ್ರಹ್ಮ ಮತ್ತು ಆತ್ಮವನ್ನು ಒಂದೇ ಎಂದು ವಾದಿಸಿದರು. ಭೌತಿಕವನ್ನು 'ಮಾಯಾ' ಎಂದು ವ್ಯಾಖ್ಯಾನಿಸಿದರು. ಈ ಸಿದ್ಧಾಂತವನ್ನು ಶಂಕರಾಚಾರ್ಯರಿಗಿಂತ ಪೂರ್ವದಲ್ಲಿಯೇ, ಅವರ ಗುರುಗಳ ಗುರುಗಳೆನಿಸಿದ ಗೌಡಪಾದರು ಪ್ರತಿಪಾದಿಸಿದ್ದರೆಂದು ಹೇಳಲಾಗುತ್ತದೆ.[೩೪]

ಅದ್ವೈತವೆಂದರೆ ಎರಡಿಲ್ಲದಿರುವಂತಹುದು; ದ್ವಂದ್ವ ಇಲ್ಲದಿರುವುದು ಎಂದರ್ಥ. ಬ್ರಹ್ಮ ಅಥವಾ ಕೇವಲ ಜ್ಞಾನದ ಹೊರತು ಉಳಿದೆಲ್ಲವು ಮಿಥ್ಯವೆಂಬುದು ಇದರ ತತ್ವಾರ್ಥ. ಆತ್ಮವನ್ನು ಕುರಿತು ನಿಜವಾದ ಜ್ಞಾನವನ್ನು ಪಡೆಯುವುದೇ ಮನುಷ್ಯನಿಗೆ ಮೋಕ್ಷದಾಯಕವಾದುದೆಂಬುದು ಇದರ ಅಭಿಮತ. ಬ್ರಹ್ಮಸೂತ್ರಕ್ಕೆ ಆಚಾರ್ಯರ

ವ್ಯಾಖ್ಯಾನಗಳ ಪ್ರಭಾವ ಹೆಚ್ಚಾದಂತೆ, ಅದ್ವೈತದ ದೃಷ್ಟಿಕೋನವನ್ನು ತಿರಸ್ಕರಿಸುವ ಪಂಥಗಳು ಕ್ರಮೇಣ ಹುಟ್ಟಲಾರಂಭಿಸಿದವು. ಆತ್ಮ ಮತ್ತು ಬ್ರಹ್ಮದ ಸಂಬಂಧದ ಕುರಿತಾಗಿ ಪರಸ್ಪರ ತಾತ್ವಿಕಸಂಘರ್ಷಗಳು ಹುಟ್ಟಿಕೊಂಡವು. ಇಲ್ಲಿಯವರೆಗೆ ಶೈವಪಂಥವೊಂದು ಸಾಮಾಜಿಕವಾಗಿ ಮುಂದುವರಿದರೂ, ಮುಂದಕ್ಕೆ ಜನಗಳ ದೈವವಿಶ್ವಾಸಕ್ಕೆ ಸರಿಯಾಗಿ ಪುರಾಣಪುರುಷನಾದ ವಿಷ್ಣುವೇ ಪರಮದೈವವೆಂದು ಒಪ್ಪುವಂತಾಯಿತು. ಈ ನಿಟ್ಟಿನಲ್ಲಿ ರಾಮಾನುಜ, ನಿಂಬಾರ್ಕ, ಮಧ್ವ, ವಲ್ಲಭ, ಚೈತನ್ಯ ಮೊದಲಾದವರುಗಳು ಮುಖ್ಯರಾದರು.

ವೈಷ್ಣವಧರ್ಮಪ್ರಚಾರಕ್ಕೆ ಶ್ರೀರಾಮಾನುಜಾಚಾರ್ಯರು ಪ್ರಥಮಾಚಾರ್ಯರು; ನಾಂದಿಪುರುಷರು. ಆದರೆ ಇವರು ಪ್ರತಿಪಾದಿಸಿದುದು ಕೇವಲ ವೈಷ್ಣವ ಧರ್ಮವಲ್ಲ. ಅದು ಶ್ರೀವೈಷ್ಣವಧರ್ಮ. ಅಲ್ಲಿಯ ಆಳ್ವಾರರಿಗೆ ಇದೊಂದು ದಾರ್ಶನಿಕ ತಳಹದಿ. ಬ್ರಹ್ಮಸೂತ್ರಕ್ಕೆ ವ್ಯಾಖ್ಯಾನ ರೂಪವಾದ 'ಶ್ರೀಭಾಷ್ಯ'ವನ್ನು ಬರೆದು ವಿಶಿಷ್ಟಾದ್ವೈತವನ್ನು ಹೊಸದಾಗಿ ರೂಪಿಸಿದರು. ಇಲ್ಲಿ ಶ್ರೀಮನ್ನಾರಾಯಣನು ಆದ್ಯದೇವತೆಯಾಗಿದ್ದರೂ ಅವನೊಂದಿಗೆ ಶ್ರೀಸಂಪನ್ನೆಯಾದ ಲಕ್ಷ್ಮೀದೇವಿಯೂ ಇರುತ್ತಾಳೆ. ಆದುದರಿಂದಲೇ ಅದು ಶ್ರೀವೈಷ್ಣವ ಧರ್ಮ. ಗುರುಪರಂಪರೆಯಲ್ಲಿ ಆಕೆಗೆ ಗುರುಸ್ಥಾನ. ಇದೇ ಕಲ್ಪನೆಯಿಂದ ಧಾರ್ಮಿಕ ವಿಧಾನಗಳ ಮಂಡಲ ರಚನೆಗಳಲ್ಲಿ ಗುರುಸ್ಥಾನವೆಂದು ಹೇಳಲ್ಪಡುವಲ್ಲಿ 'ಶ್ರೀ' ಎಂಬ ಸಂಸ್ಕೃತಾಕ್ಷರದ ಉಲ್ಲೇಖವು ಕಂಡು ಬಂದಿರುವುದು. ಇಲ್ಲಿ ಶ್ರೀಲಕ್ಷ್ಮಿಯೇ ಮಾನವ ಪಾಪಕರ್ಮದ ಪ್ರಾಯಶ್ಚಿತ್ತಕ್ಕೆ, ದೈವೀಕಟಾಕ್ಷಕ್ಕೆ ಪ್ರತೀಕಳಾಗುವಳು. ಆದುದರಿಂದಲೇ ಈ ಮತದಲ್ಲಿ 'ಓಂ ನಮೋ ನಾರಾಯಣಾಯ', 'ಶ್ರೀಮನ್ನಾರಾಯಣಾಯ ಚರಣೌ ಶರಣಂ ಪ್ರಪದ್ಯೇ.....' 'ಸರ್ವ ಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ಅಹಂ ತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ'[೩೫] ಎಂಬ ಶ್ಲೋಕ ಮೂಲಕವಾಗಿ ಉಪದೇಶ ನಡೆಯುತ್ತದೆ. ತತ್ವ ಸಿದ್ಧಾಂತವೇನೇ ಇದ್ದರೂ ಈ ಕುರಿತಾದ ಆಧಾರಗಳು ತೀರಾ ಕಡಿಮೆಯೆಂದೇ ಹೇಳಬೇಕು.[೩೬]

ವಿಶಿಷ್ಟಾದ್ವೈತಸಿದ್ಧಾಂತಕ್ಕೆ ಹೊಯ್ಸಳರ ಕಾಲದಲ್ಲಿ ರಾಜಮರ್ಯಾದೆ ಸಿಕ್ಕಿದರೂ ಕಾಲಕ್ರಮೇಣದಲ್ಲಿ ಅದರ ಸೈದ್ಧಾಂತಿಕತೆಯು ಸಾಮಾಜಿಕವಾಗಿ ಹಿನ್ನಡೆಯನ್ನು ಕಾಣಲಾರಂಭಿಸಿತು. ಆ ಸಂದರ್ಭದಲ್ಲಿ ಉಡುಪಿಜಿಲ್ಲೆಯ ಪಾಜಕಕ್ಷೇತ್ರದಲ್ಲಿ ಜನಿಸಿದ ಶ್ರೀಮಧ್ವಾಚಾರ್ಯರು (೧೨೩೮–೧೩೧೭) ದ್ವೈತಸಿದ್ಧಾಂತದ ಪ್ರತಿಪಾದನೆಯನ್ನು ಮಾಡಿ ಹೊಸ ಧಾರ್ಮಿಕಕ್ರಾಂತಿಗೆ ನಾಂದಿಹಾಡಿದರು. ಅಂತೆಯೇ ಉಡುಪಿಯನ್ನು ಮಾಧ್ವಪಂಥದ ಕೇಂದ್ರವನ್ನಾಗಿ ಮಾಡಿದರು. 'ಹರಿಯೇ ಪರಮತತ್ತ್ವ, ಜಗತ್ತು ಸತ್ಯ, ಜೀವಾತ್ಮರೆಲ್ಲ ಪರಮಾತ್ಮನ ದಾಸರುಗಳು. ಅವರಲ್ಲಿ ಸ್ವಭಾವಕ್ಕನುಗುಣವಾಗಿ ಉಚ್ಚನೀಚರೆಂಬ ಭೇದಗಳಿವೆ. ಪರಿಶುದ್ಧವಾದ ಭಕ್ತಿಯೇ ಪಾರಮಾರ್ಥಿಕಕ್ಕೆ ಸಾಧನ'ವೆಂದು ಹೇಳಿ, ಆ ಸಿದ್ಧಾಂತಕ್ಕೆ ದ್ವೈತಸಿದ್ಧಾಂತವೆಂದು ನಾಮಕರಣ ಮಾಡಿದರು. ಶಂಕರಾಚಾರ್ಯರು ಬ್ರಹ್ಮವೊಂದೇ ಸತ್ಯ, ಉಳಿದುದೆಲ್ಲಾ ಮಿಥ್ಯವೆಂದು ಹೇಳಿ ಅದ್ವೈತವನ್ನು ರೂಪಿಸಿದರೆ, ರಾಮಾನುಜರು

ಅದ್ವಿತೀಯವಾದ ಬ್ರಹ್ಮವು ವಿಶಿಷ್ಟವಾದುದೆಂದು ವಾದಿಸಿ ವಿಶಿಷ್ಟಾದ್ವೈತವನ್ನು ಪ್ರತಿಪಾದಿಸಿದರು. ಆದರೆ ಅದ್ವೈತ ಮತ್ತು ವಿಶಿಷ್ಟಾದ್ವೈತಕ್ಕಿಂತಲೂ ಭಿನ್ನವಾಗಿ ಮಧ್ವಾಚಾರ್ಯರು ದ್ವೈತಸಿದ್ಧಾಂತವನ್ನು ಪ್ರಕಟಿಸಿದರು.

ದ್ವೈತವೆಂದರೆ, ಅದ್ವೈತವಲ್ಲದ ಸಿದ್ಧಾಂತ. ಎರಡು ತತ್ವಗಳನ್ನು ಹೇಳುವ ಸಿದ್ಧಾಂತ. ಸರ್ವಸ್ವತಂತ್ರವೆನಿಸಿದ ಬ್ರಹ್ಮ ಹಾಗೂ ಪರತಂತ್ರವೆನಿಸಿದ ಜೀವ ಜಡಗಳೆರಡು ಬೇರೆಬೇರೆ ತತ್ವವನ್ನಾಧರಿಸಿದುದೆಂಬುದೇ ಈ ಮಾತಿನ ಅರ್ಥ. ಅಂತೆಯೇ ಬ್ರಹ್ಮ, ಜೀವ, ಜಡ ಇದರೊಂದಿಗೆ ಭೇದವನ್ನು ಗುರುತಿಸುವುದೇ ಮಧ್ವಾಚಾರ್ಯರ ಮುಖ್ಯಧ್ಯೇಯ. ಜೀವ–ದೇವ ಭೇದ, ಜಡ–ದೇವ ಭೇದ, ಜೀವ–ಜೀವ ಭೇದ, ಜಡ–ಜಡ ಭೇದ ಹಾಗೂ ಜೀವ–ಜಡ ಭೇದ. ಇದನ್ನೇ ಪಂಚಭೇದಗಳೆಂದು ಕರೆದರು. ಹಾಗಾಗಿ ಇದು ಭೇದವೇ ಸತ್ಯವೆನ್ನುವ ಸಿದ್ಧಾಂತವೂ ಹೌದು. ಒಟ್ಟಿನಲ್ಲಿ ಜೀವದ ಅಲ್ಪಶಕ್ತಿ ಹಾಗೂ ದೇವನ ಅನಂತ ಶಕ್ತಿಗಳ ಅಂತರವನ್ನು ಮಧ್ವಾಚಾರ್ಯರು ಸಮರ್ಥಿಸಿದರು. ಅದ್ವೈತವು ಜ್ಞಾನಕ್ಕೆ ಒತ್ತುನೀಡಿದರೆ, ವಿಶಿಷ್ಟಾದ್ವೈತವು ಭಕ್ತಿಗೆ ಒತ್ತುನೀಡಿತು. ಭಕ್ತಿಯ ಬೂಟಾಟಿಕೆ ಜ್ಞಾನವನ್ನು ತುಳಿಯಲು ಯತ್ನಿಸಿದಾಗ ಹದಿಮೂರನೆಯ ಶತಮಾನದ ಮೊದಲಭಾಗದಲ್ಲಿ ಹುಟ್ಟಿಕೊಂಡು ಬಂದ ದ್ವೈತವು ಜ್ಞಾನವಿಲ್ಲದ ಭಕ್ತಿಯನ್ನು ಕುರುಡೆಂದೂ, ಭಕ್ತಿಯಿಲ್ಲದ ಜ್ಞಾನವನ್ನು ಶುಷ್ಕವೆಂದು ಹೇಳಿ, ಅವೆರಡರ ಸಾಂಗತ್ಯವನ್ನು ಭಕ್ತಿಮಾರ್ಗವೆಂದು ಪ್ರತಿಪಾದಿಸಿತು. ಒಟ್ಟಿನಲ್ಲಿ ಭಾರತೀಯ ಭಕ್ತಿಪಂಥದ ವಿಕಾಸದಲ್ಲಿ ಆಚಾರ್ಯತ್ರಯರ ವೇದಾಂತವು ಬಲುಮುಖ್ಯವೆನಿಸುತ್ತದೆ.

ಒಟ್ಟಿನಲ್ಲಿ ಭಾರತೀಯ ಜನಜೀವನದ ಮುಂದೆ ಶಾಶ್ವತವಾದ ಜೀವನಮೌಲ್ಯಗಳನ್ನು ಶಾಸ್ತ್ರ ಪುರಾಣೇತಿಹಾಸ ಸಿದ್ಧಾಂತ ಮತ್ತು ವೇದಾಂತಗಳು ಮಂಡಿಸಿದವು. ವೇದಾಂತಗಳು ತಾತ್ವಿಕಜಿಜ್ಞಾಸೆಯ ರೂಪವನ್ನು ನಿರೂಪಿಸಿದರೆ ಪುರಾಣಸಿದ್ಧಾಂತಗಳು ರಸಮಯ ಸಾಹಿತ್ಯದ ಸಮಪಾಕವಾಗಿ ಜನತೆಯನ್ನು ಮುಟ್ಟಿದವು. ಪುರಾತನದ ಲಿಂಗರೂಪೀ ಆರಾಧನೆಗಳು ರಾಮಾಯಣ ಮಹಾಭಾರತದ ಪ್ರಭಾವದಿಂದಾಗಿ ಸಲ್ಪಮಟ್ಟಿಗೆ ಹಿಮ್ಮುಖವಾದವು. ಪರಿಣಾಮವಾಗಿ ಯುಗಪುರುಷರುಗಳಾದ ರಾಮ, ಕೃಷ್ಣರು ಆರಾಧನೆಗೊಳಗಾದರು. ಈ ಕಾಲದಲ್ಲಿ ರುದ್ರ–ಶಿವ–ಲಿಂಗ ಕಲ್ಪನೆಗಳು ಪರಿವರ್ತಿತವಾಯಿತು. ರಾಮನು ರಾಮೇಶ್ವರದಲ್ಲಿ ಲಿಂಗವನ್ನು ಪೂಜಿಸಿದ್ದು, ಮಹಾಭಾರತದಲ್ಲೂ ಶಿವೋಪಾಸನೆ ನಡೆದಿರುವಂತಹುದು ಬಹುದೇವೋಪಾಸನೆಯ ಸಾಮರಸ್ಯಕ್ಕೆ ಉದಾಹರಣೆಯಾಗುತ್ತದೆ. ಇದನ್ನೇ ಪುರಾಣ ಹಾಗೂ ವೇದಾಂತಗಳು ಸಾಮಾಜಿಕ ಪ್ರಗತಿಗಾಗಿ ಸೂಚ್ಯವಾಗಿಯೇ ಹೇಳಿದವೆನ್ನಬೇಕು.

೨.೪ ಭಕ್ತಿಪಂಥದ ಮಧ್ಯಕಾಲೀನ ಬೆಳವಣಿಗೆ

ಮಧ್ಯಕಾಲೀನ ಪಂಥಗಳೆಲ್ಲ ಮುಖ್ಯವಾಗಿ ಗುರುಪಂಥಗಳಾಗಿ ತೋರುವಂತವು. ಆ ಪ್ರಾಚೀನ ಕಾಲದಲ್ಲೂ ಗುರುವು ಶಿಷ್ಯನ ಹಳೆಯ ಹೆಸರನ್ನು ತೆಗೆದು ಹೊಸ ನಾಮಕರಣವನ್ನು ಮಾಡಿ, ಹೊಸ ಜೀವನಕ್ರಮದ ದೀಕ್ಷೆಯನ್ನು ವಿಧಿಸುವ ಕ್ರಮಗಳನ್ನು ಇಲ್ಲಿಯ ಪಂಥಗಳಲ್ಲಿ ಕಾಣುತ್ತೇವೆ. ಕಾಪಾಲಿಕದೀಕ್ಷೆ, ಜೋಗಿದೀಕ್ಷೆ, ದತ್ತದೀಕ್ಷೆ ಈ ಮೊದಲಾದವುಗಳೆಲ್ಲ ಮೇಲಿನ ವಿಚಾರಗಳಿಂದ ಹೊರತಾದುದೇನೂ ಅಲ್ಲ.

ವಿಶೇಷವೆಂದರೆ, ಅಂದಿನ ಕಾಲದ ದೀಕ್ಷೆಯು ಯುವಜನಾಂಗಕ್ಕೆ ಮಾತ್ರವಲ್ಲದೆ ಗೃಹಸ್ಥಾಶ್ರಮಿಗಳಿಗೂ ಸಲ್ಲುತ್ತಿತ್ತು. ಇಲ್ಲಿ ನಾಥಪಂಥದ ದೀಕ್ಷೆಯನ್ನು ಸ್ವೀಕರಿಸುವ ಗೃಹಸ್ಥನಿಗೆ 'ಔಷಡ್' ಎಂದು ಕರೆಯುವ ಕ್ರಮವನ್ನು ನೆನಪಿಸಿಕೊಳ್ಳಬಹುದು. ಯೌವನದಲ್ಲಿ ದೀಕ್ಷೆ ಸ್ವೀಕರಿಸುವವರಿಗೆ ಹನ್ನೆರಡನೇ ವರ್ಷವು ಸಂಕ್ರಮಣಕಾಲವಾಗಿತ್ತು. ಈ ರೀತಿಯಲ್ಲಿ ದೀಕ್ಷಾಕಂಕಣರಾದವರಿಗೆ 'ಯೋಗಿ'ಗಳೆಂದು ಕರೆದರು. ವರ್ತಮಾನದ ಸಂನ್ಯಾಸಿಗಳಂತೆ, ಪ್ರಾಚೀನಕಾಲದಲ್ಲೂ ಕೇಶಮುಂಡನ, ಮಂತ್ರೋಪದೇಶ, ಭಸ್ಮಧಾರಣೆ ಮೊದಲಾದವುಗಳು ವಿಧಿನಿಯಮಗಳಾಗಿಯೇ ನಡೆದುಕೊಂಡು ಬಂದಿರುವುದನ್ನು ಪ್ರಾಚೀನ ಕೃತಿಗಳು ಹೇಳಲಾರಂಭಿಸಿದವು.

ಮಧ್ಯಕಾಲೀನ ಪಂಥದಲ್ಲಿ ಆಚರಣೆಯಲ್ಲಿದ್ದ ವಾಮಾಚಾರದ ಮಾಂಸ, ಮದ್ಯ, ಮತ್ಸ್ಯ ಮತ್ತು ಮೈಥುನ ಗಳು ಕಾಲಕ್ರಮದಲ್ಲಿ ಮೂಡಿಬಂದ ವೀರಶೈವ ಪಂಥಗಳಲ್ಲಿ ಕಡೆಗಣಿಸಲ್ಪಟ್ಟವು. ಅಲ್ಲಿಯ ತನಕ ನಡೆದುಕೊಂಡು ಬಂದ ಇತರ ಪಂಥಗಳ ಯೋಗಸಾಧನೆ ಹಾಗೂ ದರ್ಶನಗಳ ವಿರುದ್ಧ ಚೆನ್ನಬಸವಣ್ಣ, ಅಲ್ಲಮ ಮೊದಲಾದ ಶರಣಸಂತರು ಪ್ರತಿರೋಧಿಸಿದರು. ಅದಕ್ಕೆ 'ಅಂಗ ಜಂಗುಳಿಗಳೆಲ್ಲಾ ಅಶನಕ್ಕೆ ನೆರೆದರು ಲಿಂಗದ ಹವಣನಿವರೆತ್ತ ಬಲ್ಲರು?', 'ಕೊಂಕಣ ದ್ವೀಪದಲ್ಲೊಂದು ಕಪಿ ಹುಟ್ಟೀತ್ತು ತಪವ ಮಾಡಿ ಸಪ್ತಋಷಿಯರ ನುಂಗಿತ್ತು' ಮೊದಲಾದ ವಚನ ರಚನೆಗಳೇ ಅವರ ಮೂದಲಿಕೆಗೆ ಸಾಕ್ಷಿಯಾಗುತ್ತದೆ. ಈ ಕಾರಣದಿಂದಲೋ ಏನೋ ಮಹಾರಾಷ್ಟ್ರದಲ್ಲಿ ನಾಥಪಂಥದ ಚಟುವಟಿಕೆ ಬೆಳೆದಂತೆ ಕರ್ನಾಟಕದಲ್ಲಿ ಆ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ಇದಕ್ಕೆ ರಹಮತ್ ತರೀಕೆರೆಯವರು, 'ಸಮುದಾಯಗಳ ಸಾಮಾಜಿಕ ಆರ್ಥಿಕ ಆಧ್ಯಾತ್ಮಿಕ ಸಮಾನತೆಯನ್ನು ಪ್ರತಿಪಾದಿಸುವ ಶರಣ ಚಳುವಳಿಯು ಒಂದು ಪರ್ಯಾಯವಾಗಿ ಮೂಡಿ ಜನಪ್ರಿಯತೆ ಪಡೆದಿದ್ದು' ಕಾರಣವೆನ್ನುತ್ತಾರೆ.[೩೭] ಆದರೆ ವಚನಕಾರ ವಿರೋಧವೆನ್ನುವಂತಹುದು ನಾಥರು ಮತ್ತು ಕಾಪಾಲಿಕರ ಪಾಲಿಗೆ ಹಿನ್ನಡೆಯನ್ನು ತಂದೊಡ್ಡಿದ್ದಂತು ಸತ್ಯ. ಅದಕ್ಕಾಗಿ ಅವರು ಶರಣಧರ್ಮದ ಪ್ರವೇಶವಿಲ್ಲದ ಕಣಿವೆ ಕಂದರಗಳ ಜಾಗಗಳಿಗೆ ಸೀಮಿತಗೊಂಡರೆಂದು ರಹಮತ್ ತರೀಕೆರೆಯವರು ಅಭಿಪ್ರಾಯಪಡುತ್ತಾರೆ.[೩೮]

ಒಟ್ಟಿನಲ್ಲಿ ಮಧ್ಯಕಾಲದಲ್ಲಿ ಮೂಡಿಬಂದ ಕಾಪಾಲಿಕ, ನಾಥ ಮೊದಲಾದ ಪಂಥಗಳೇ ಇರಲಿ, ಶರಣರ ವೀರಶೈವಪಂಥಗಳೇ ಇರಲಿ, ಇವುಗಳೆಲ್ಲವು ಆಂತರಂಗಿಕ ಕಲ್ಪನೆಯಲ್ಲಿ ಶೈವಪಂಥಗಳೇ ಆಗಿದ್ದವೆನ್ನುವುದನ್ನು ನಾವು ಗಮನಿಸಬೇಕು. ಹನ್ನೆರಡನೇ ಶತಮಾನದ ವೀರಶೈವ ವಚನಗಳಲ್ಲಿ ಇತರ ಪಂಥಗಳ ಕುರಿತು ಸಂಘರ್ಷ ತೋರಿದ್ದರೂ ಅದನ್ನು ದಾಯಾದಿಕಲಹವೆಂದು ವಿವೇಚಿಸಬೇಕು. ಆದರೂ ಮಧ್ಯಕಾಲೀನ ಇತರ ಪಂಥಗಳಲ್ಲಿ ಕಾಣುವ 'ಸ್ತ್ರೀ ವಶೀಕರಣ, ಮಾಂಸಾಹಾರ, ವಾಮಾಚಾರದ ಅನೈತಿಕ ಮೌಲ್ಯಗಳ ಕುರಿತಾಗಿ ಶರಣಸಂತರಲ್ಲಿ ಕಟುವಾದ ವಿರೋಧವಿತ್ತೆಂಬುದಂತೂ ಸತ್ಯ. ಪುರಾತನದಿಂದ ಬಂದ ನಾಥ, ಕಾಪಾಲಿಕ, ಶಾಕ್ತ, ಕೌಳ ಮೊದಲಾದ ಪಂಥಗಳೆಲ್ಲ ಕಾಲಗತಿಯಲ್ಲಿ ಹಿನ್ನಡೆಯನ್ನು ಸಾಧಿಸಿದವು. ಆದರೆ ಇವುಗಳಲ್ಲಿದ್ದ ಕೆಲವೊಂದು ದರ್ಶನಗಳನ್ನು ವೀರಶೈವಪಂಥವೊಂದಲ್ಲದೆ, ನಂತರದಲ್ಲಿ ಹುಟ್ಟಿದ ಹೊಸ ಪಂಥಗಳು

ಅನುಕರಿಸಲಾರಂಭಿಸಿದವು. ನಾಥರು ಆಸೀನರಾಗುತ್ತಿದ್ದ ವ್ಯಾಘ್ರಚರ್ಮವು ಹನ್ನೆರಡನೇ ಶತಮಾನದ ನಂತರದ ಬಂದ ಯತಿಪರಂಪರೆಯಲ್ಲಿ ಅನುಸರಣೆಗೊಂಡಿರಬೇಕು. ಕಾಪಾಲಿಕರುಗಳು ಧರಿಸುತ್ತಿದ್ದ ತ್ರಿಶೂಲವು ಯತಿಪರಂಪರೆಯ ಬ್ರಹ್ಮದಂಡವಾಗಿ ರೂಪುಗೊಂಡಿರಬೇಕು.

ಕರ್ನಾಟಕದ ಧಾರ್ಮಿಕ ಬದುಕಿನ ಮೇಲೆ ಪರಿಣಾಮ ಬೀರಿದ ಪಂಥಗಳು ಹಲವು. ಅವುಗಳಲ್ಲಿ ನಾಥ, ಕಾಪಾಲಿಕ, ಶಾಕ್ತ, ಕೌಳ, ಕಾಳಾಮುಖ, ವಜ್ರಯಾನ ಮೊದಲಾದ ಪಂಥಗಳು ತಮ್ಮದೇ ಆದ ತಾತ್ವಿಕ ಆದರ್ಶಗಳನ್ನು ಹೊಂದಿಕೊಂಡು ಪ್ರಭಾವವನ್ನು ಬೀರಿದವು. ಇವುಗಳಲ್ಲಿ ನಾಥಪಂಥವು ಮೊದಲಿಗೆ ಹೊರದೇಶಗಳಲ್ಲಿ ಹೆಚ್ಚಿನ ಪ್ರಭಾವ ಬೀರಿ, ಅನಂತರದಲ್ಲಿ (೧೧ನೇ ಶತಮಾನ) ಭಾರತದಲ್ಲಿ ಹರಡಿಕೊಂಡಿರುವುದನ್ನು ಜಾರ್ಜ್‌ವೆಸ್ಟರ್ನ್‌ಬ್ರಿಗ್ಸ್‌ನ ಬರಹಗಳಲ್ಲಿ ನೋಡಬಹುದಾಗಿದೆ.

೨.೪ (ಅ) ವಜ್ರಯಾನ

ಬೌದ್ಧಧರ್ಮದಲ್ಲಿ ಕವಲುದಾರಿಯನ್ನು ಕಂಡ ಹೀನಯಾನ ಮತ್ತು ಮಹಾಯಾನಗಳು ಕ್ರಿ.ಶ. ಎಂಟರಿಂದ ಕರ್ನಾಟಕದಲ್ಲಿ ನೆಲೆಸಿತ್ತೆಂದು ಕೆಲವೊಂದು ಬರಹಗಳು ಹೇಳಿದರೆ, ಇನ್ನೂ ಕೆಲವು ಬರಹಗಳು ಕ್ರಿ.ಶ. ಎರಡನೇ ಶತಮಾನದಿಂದಲೇ ಕರ್ನಾಟಕದಲ್ಲಿದ್ದುವೆಂದು ಹೇಳುತ್ತವೆ. ಆದರೆ ಹೀನಯಾನದ ನಾಸ್ತಿಕವಾದ, ಅನಾತ್ಮಕವಾದ ಹಾಗೂ ವಿರಕ್ತವಾದಗಳು ವ್ಯಕ್ತಿಯ ನಿರ್ವಾಣಕ್ಕೆ ಕೊಡುವ ಪ್ರಾಧಾನ್ಯವನ್ನೂ, ಮಹಾಯಾನದ ಸಾಮೂಹಿಕ ಬಿಡುಗಡೆಯ ಯೋಗಸಾಧನೆಯನ್ನೂ ವಿರೋಧಿಸಿದ ಭಿಕ್ಷುಗಳು 'ವಜ್ರಯಾನ' ಎಂಬಂತಹ ಹೊಸ ಪಂಥದ ಸೃಷ್ಟಿಗೆ ಕಾರಣರಾದರು. ಸುಮಾರು ಎಂಟನೇ ಶತಮಾನದಿಂದ ಹದಿನೈದನೇ ಶತಮಾನದ ತನಕ ಕರ್ನಾಟಕದಲ್ಲಿ ಕಂಡು ಬರುವ ಈ ವಜ್ರಯಾನವು ಬನವಾಸಿ, ಶ್ರೀಶೈಲ, ಕೋಳಿವಾಡ, ಕದ್ರಿ ಮೊದಲಾದ ಸ್ಥಳಗಳಲ್ಲಿ ತನ್ನ ಪ್ರಭಾವವನ್ನು ಪಸರಿಸಿತು.

ವಜ್ರಯಾನದ ದರ್ಶನಕೃತಿಯೆನಿಸಿದ 'ಮಂಜುಶ್ರೀ ಕಲ್ಪ'ದಲ್ಲಿ 'ವಜ್ರ' ಎಂಬ ಪದಕ್ಕೆ 'ದೃಢತೆ' ಎಂದು ಅರ್ಥವಿಸಲಾಗಿದೆ. ಶರೀರವನ್ನು ತನ್ನೆಲ್ಲಾ ಅನುಭವಕ್ಕೆ ಕೇಂದ್ರವಾಗಿರಿಸಿ, ವಜ್ರದಂತೆ ದೃಢಪಡಿಸುವುದರ ಮೂಲಕ ಸಾಧನೆಗೆ ತೊಡಗುವುದು ವಜ್ರಯಾನದ ಮುಖ್ಯ ತತ್ವವಾಗಿದೆ. ಇಲ್ಲಿ ವ್ಯಕ್ತಿಯ ಮನಸ್ಸು ವೀರ್ಯ, ಬಿಂದು ಹಾಗೂ ಉಸಿರುಗಳ ಮೇಲೆ ಯೌಗಿಕವಾಗಿ ನಿಯಂತ್ರಣವನ್ನು ಸಾಧಿಸುವುದೇ ಮುಖ್ಯವಾಗಿರುತ್ತದೆ. ಸಾಧಕರಿಗೆ ಅಂತಿಮಸುಖವನ್ನು ನೀಡುವ ಯೋಗ, ಮುದ್ರೆ, ಸಮಾಧಿಯ ಕುರಿತು ಬೌದ್ಧಧರ್ಮವು ಪ್ರಸ್ತಾಪಿಸಿದರೆ, ಇಲ್ಲಿ ಬರುವ ಮುದ್ರೆಯು ಸ್ತ್ರೀ ಸಂಯೋಗದಲ್ಲಿದೆ ಎಂದು ವಜ್ರಯಾನವು ವಾದಿಸುತ್ತದೆ. 'ಮಹಾಮುದ್ರಾ'ಎಂಬಲ್ಲಿಗೆ ಸ್ತ್ರೀ ಎಂದು ಅರ್ಥವನ್ನು ಕಲ್ಪಿಸಿ, ಮಹಾಮುದ್ರೆಯಿಲ್ಲದೆ ಮಹಾಸುಖವಿಲ್ಲ; ಮಹಾಸುಖವಿಲ್ಲದೆ ಕೈವಲ್ಯವಿಲ್ಲ ಎಂಬ ಸಿದ್ಧಾಂತಕ್ಕೆ ವಜ್ರಯಾನವು ಬರುತ್ತದೆ. ಈ ತತ್ವಾಸತ್ವದಿಂದಲೇ ಶಕ್ತಿ ಆರಾಧನೆಯ ಜೊತೆಗೆ ಯೋಗಿನಿಯರ ಪ್ರವೇಶವೂ ಆಗುತ್ತದೆ.

ವಜ್ರಯಾನವು ಹೆಣ್ಣನ್ನು 'ಪ್ರಜ್ಞೆ'ಎಂದೂ, ಗಂಡನ್ನು 'ಉಪಾಯ'ವೆಂದೂ, ಈ ಎರಡರ ಸಂಯೋಗವೇ 'ನಿರ್ವಾಣ'ವೆಂದೂ ನಂಬುತ್ತದೆ. ಈ ಕಲ್ಪನೆಯೇ ಕಾಲಘಟ್ಟದಲ್ಲಿ ಮುಂದುವರಿದು, ಶಿವ ಹಾಗೂ ಶಕ್ತಿಯರ ರೂಪವನ್ನು ಪಡೆದು, ವಜ್ರಯಾನವು ಶೈವಪಂಥವಾಗಿ ಹೊಸ ರೂಪ ಪಡೆಯುತ್ತದೆ. ಇದಕ್ಕೆ ಕದ್ರಿಯ ಮಂಜುನಾಥನ ದೇವಾಲಯವೇ ಉತ್ತಮ ಉದಾಹರಣೆಯಾಗಿದೆ.

೨.೪ (ಅ) ನಾಥ ಪಂಥ

ಮಧ್ಯಕಾಲೀನ ಬೆಳವಣಿಗೆಯಲ್ಲಿ ನಾಥಪಂಥದ ಪ್ರಭಾವ ಮಹತ್ತರವಾದುದು. ಈ ಕುರಿತು ಹೆಚ್ಚು ಮಾಹಿತಿಯನ್ನು ನೀಡುವ ಕೃತಿಯೆಂದರೆ ರಹಮತ್ ತರೀಕೆರೆ ಅವರ 'ಕರ್ನಾಟಕದ ನಾಥಪಂಥ'. ಈ ಪಂಥವು ಯೋಗ ಪ್ರಧಾನವಾದ ಗುರುಪಂಥವಾದರೂ, ಇದಕ್ಕೆ ಕಪಾಲಮತ, ಸಿದ್ಧಮತ, ಸಿದ್ಧಮಾರ್ಗ, ಅವಧೂತಮತ, ಗೋರಖಪಂಥಗಳೆಂಬ ಇನ್ನಿತರ ಹೆಸರುಗಳೂ ಲಭ್ಯವಾಗಿದೆ. ಈ ಪಂಥದಲ್ಲಿ 'ಯೋಗ' ಎಂದರೆ 'ಮಿಲನ' ಎಂದರ್ಥ. ಜಾತಿ ಕಟ್ಟುಪಾಡುಗಳನ್ನು ಮೀರಿದ ಗುರುಶಿಷ್ಯರ ಮಿಲನಕ್ರಿಯೆ ಈ ಪಂಥದ ವಿಶೇಷತೆ. ಪ್ರಾಯಶಃ ಇಂತಹ ಮಿಲನಕ್ರಿಯೆಯಿಂದಲೇ ಸೂಫಿ ಹಾಗೂ ದತ್ತಪಂಥಗಳು ನಾಥಪಂಥದಿಂದ ಹುಟ್ಟಿಕೊಂಡಿರಬಹುದು.

ಪಠ್ಯಗಳ ಶೋಧನೆಯಲ್ಲಿ ನಾಥವು ಶೈವಾಧೀನ. ಭೈರವನೇ ಈ ಪಂಥದವರಿಗೆ ಆರಾಧ್ಯದೈವ. ಸಾಧಾರಣವಾಗಿ ನಾಥಕ್ಷೇತ್ರಗಳು ಬೆಟ್ಟದ ಮೇಲೆಯೇ ಕಾಣಿಸಿಕೊಳ್ಳುತ್ತವೆ. ಇದಕ್ಕೆ ಕರ್ನಾಟಕದ ನಾಥಕೇಂದ್ರಗಳಾಗಿರುವ ಕದ್ರಿ, ಚಂದ್ರಗುತ್ತಿ ಕ್ಷೇತ್ರಗಳೇ ಉದಾಹರಣೆಗಳು. ತೀರ ಅವೈದಿಕ ಹಾಗೂ ಯೌಗಿಕ ತಾಂತ್ರಿಕ ಪಂಥವಾದ ನಾಥವು ವೈದಿಕಪಂಥದೊಂದಿಗೆ ವೈಷಮ್ಯವನ್ನು ಸಾಧಿಸಿತು. ವೈದಿಕಪಂಥದ ಉತ್ತಮ ಹಾಗೂ ಅಧಮವೆಂಬ ವರ್ಣಾಶ್ರಮಕಲ್ಪನೆಯನ್ನು, ದೇವರು, ಆತ್ಮ ಹಾಗೂ ಸ್ವರ್ಗ, ನರಕಗಳ ತಾತ್ವಿಕಸಿದ್ಧಾಂತವನ್ನು ನಾಥಪಂಥವು ಒಪ್ಪದೇ ಹೋಯಿತು. ಸ್ವಸ್ಥಸಮಾಜವನ್ನು ಕಾಪಾಡುವ ನೆಲೆಯಲ್ಲಿ ಬಹಿಷ್ಕೃತರಾದ ಕೆಳವರ್ಗದ ಜನತೆಗೆ ಸಹಪಂಕ್ತಿ ಭೋಜನಕ್ಕೆ ಒತ್ತಾಯಿಸಿತು. ಹೀಗಿದ್ದರೂ 'ನಾಥ'ರು ವೈರಾಗಿಗಳು. ಕನಿಷ್ಟ ಉಡುಗೆಯೊಂದಿಗೆ ಪಾಳುಬಿದ್ದ ದೇವಾಲಯ, ಗಿರಿಗುಹೆಗಳಲ್ಲಿ ಜೀವಿಸಿ, ಹಸಿವಿಗಾಗಿ ಭಿಕ್ಷಾನ್ನವನ್ನು ಸ್ವೀಕರಿಸುವವರು. ಸಂಸಾರದ ಹಂಗನ್ನು ತೊರೆದು ಚಾರಣದಲ್ಲಿಯೇ ಬಹುಕಾಲವನ್ನು ಕಳೆದವರು. ಆದುದರಿಂದಲೇ ಇವರ ತಾತ್ವಿಕ ನಿಲುವು ಬ್ರಹ್ಮಚರ್ಯ ಹಾಗೂ ಸಂನ್ಯಾಸದ ಕಡೆಗೆ.

ಯಾವುದೇ ಒಂದು ಪಂಥದ ತತ್ವಾದರ್ಶಗಳು ಸಾರ್ವಕಾಲಿಕವಾಗಿರುವುದಿಲ್ಲ. ಅದರ ಸಿದ್ಧಾಂತ ಮತ್ತು ಆಚರಣೆಗಳು ಕಾಲಘಟ್ಟದಲ್ಲಿ ಉಂಟಾಗುವ ಸನ್ನಿವೇಶಗಳಿಗೆ ಅನುಸಾರವಾಗಿ ಬದಲಾಗಬೇಕಾಗುತ್ತದೆ. ಕೆಲವೊಂದು ತತ್ವಗಳು ಸಡಿಲಗೊಂಡು, ಇನ್ನೂ ಕೆಲವು ಬದಲಾವಣೆಗೊಂಡು, ಮತ್ತೂ ಕೆಲವು ಹೊಸದಾಗಿ ಸೇರ್ಪಡೆಯಾಗುತ್ತದೆ. ಈ ಕ್ರಿಯೆಗೆ ನಾಥಪಂಥವೇನೂ ಹೊರತಾಗಿಲ್ಲ. ಇದರ ಪರಿಣಾಮವಾಗಿಯೇ ನಾಥಪಂಥವು ಹನ್ನೆರಡು ಶಾಖೆಗಳನ್ನು ಕಂಡುಕೊಂಡು ಹೊಸರೂಪ ಪಡೆದು 'ಬಾರಾಪಂಥ'ಎಂದೆನಿಸಿತು.

ವಿಶೇಷವೆಂದರೆ, ಮಹಾರಾಷ್ಟ್ರ ಮತ್ತು ಬಂಗಾಲಗಳಲ್ಲಿ ಈ ಪಂಥವು ವೈಷ್ಣವೀಕರಣಗೊಂಡಿತು. ಆದರೆ, ಕರ್ನಾಟಕದಲ್ಲಿ ಮಾತ್ರ ಶೈವರೂಪದಲ್ಲೇ ಉಳಿಯಿತು. ಯಾವ ಗೋರಖನಿಂದ ನಾಥಪಂಥವು ಉಚ್ಛ್ರಾಯಮಟ್ಟಕ್ಕೇರಿತೋ, ಅವನ ಕಾಲಾನಂತರದಲ್ಲಿ ಆ ಪಂಥವು ಇನ್ನಷ್ಟು ವಿಭಜನೆಗೊಂಡಿತು.

ನಾಥಪಂಥವು 'ಬ್ರಹ್ಮಾಂಡದ ಪ್ರತಿರೂಪವಾಗಿ ಮಾನವ ಶರೀರವೆಂಬ' ಪಿಂಡಾಂಡವಿದೆ ಎನ್ನುತ್ತದೆ. ಆದಕಾರಣ ಮಾನವರೆಲ್ಲರೂ ವಿಶ್ವರೂಪಿಗಳೇ ಆಗುತ್ತಾರೆ. ಪಾರಮಾರ್ಥಿಕವೆಂಬ ಚೈತನ್ಯವು ಮಾನವನಲ್ಲಿ ಅಡಗಿದೆ ಎನ್ನುವುದು ಇದರ ಅಭಿಮತ. ಆದುದರಿಂದ ನಾಥವು ದ್ವೈತವೂ ಅಲ್ಲ; ಅದ್ವೈತವೂ ಅಲ್ಲ. ಅದು ದ್ವೈತಾದ್ವೈತಗಳಿಗೂ ಅತೀತವಾಗುತ್ತದೆ. ಇದನ್ನು ಗೋರಖನು 'ದ್ವೈತಾದ್ವೈತ ವಿವರ್ಜಿತ'ವೆಂದು ಕರೆಯುತ್ತಾನೆ.[೩೯] ಎರಡರ ಭಿನ್ನ ಸ್ವರೂಪವನ್ನು ದ್ವೈತವು ಪ್ರತಿಪಾದಿಸಿದರೆ, ಭಿನ್ನತೆಯ ಎರಡು ವಿಚಾರಗಳನ್ನು ಮತ್ತೆ ಒಂದಾಗಿಸುವ ತತ್ವವನ್ನು ಅದ್ವೈತವು ಸಾರುತ್ತದೆ. ಅಚಿಂತ್ಯಾತತ್ವವನ್ನು ಚೈತನ್ಯಪಂಥ ತಿಳಿಹೇಳಿದರೆ, ಅದ್ವಯವೆನಿಸಿದ ನಾಥಪಂಥಕ್ಕೆ ಯೋಗ ಸಾಧನೆಯು ನೆರವಾಗಿ ವ್ಯಕ್ತಿ ಮತ್ತು ಚೈತನ್ಯಗಳೆರಡು ಬೇರೆಯಲ್ಲವೆಂದು ವ್ಯಾಖ್ಯಾನಿಸುತ್ತದೆ. ಶರೀರದಲ್ಲಿ ಸುಪ್ತವಾಗಿರುವ ಕುಂಡಲಿನಿ ಶಕ್ತಿಯು ಸಹಸ್ರಾರದಲ್ಲಿರುವ ಶಿವನನ್ನು ಹೊಂದಿಕೊಳ್ಳುವುದಕ್ಕೆ ಮೋಕ್ಷವೆಂದು ಈ ನಾಥಪಂಥವು ಹೇಳಲು ಮುಂದಾಗುತ್ತದೆ.

೨.೪ (ಇ) ಕಾಪಾಲಿಕ ಪಂಥ

ಪ್ರಾಚೀನ ಪಂಥವೆನಿಸಿದ ಕಾಪಾಲಿಕವು ಶೈವಾಧೀನವಾದುದು. ಹಾಲರಾಜನ 'ಗಾಥಾ ಸಪ್ತಶತೀ'ಯಲ್ಲಿ (ಕ್ರಿ.ಶ. ೨ನೇ ಶತಮಾನ) ಕಾಪಾಲಿಕರ ಕುರಿತಾದ ಉಲ್ಲೇಖವಿರುವುದರಿಂದ ಈ ಪಂಥವು ನಾಥಪಂಥಕ್ಕಿಂತಲೂ ಪ್ರಾಚೀನತೆಯನ್ನು ಪಡೆದುಕೊಂಡಿದ್ದು, ಮುಂದೆ ಅದು ನಾಥದೊಂದಿಗೆ ಲೀನವಾಗಿರಬಹುದು. ಕಲ್ಹಣನ 'ರಾಜ ತರಂಗಿಣಿ'ಯು ಶ್ರೀಶೈಲದಲ್ಲಿದ್ದ ಕಾಪಾಲಿಕರನ್ನು ನೆನಪಿಸುವುದರಿಂದ ಶ್ರೀಶೈಲವೇ ಅವರ ಪ್ರಧಾನ ಕೇಂದ್ರವಾಗಿದ್ದಿರಲೂ ಬಹುದು.

ಕಾಪಾಲಿಕರು ಕಠಿಣವ್ರತನಿಷ್ಠರು. ಆದುದರಿಂದಲೇ ಅವರಿಗೆ 'ಮಹಾವ್ರತಿಗಳು'ಎನ್ನುವುದುಂಟು. ಸೋಮ ಸಿದ್ಧಾಂತವು ಅವರ ದಾರ್ಶನಿಕಪಥ್ಯವಾದುದರಿಂದ 'ಸೋಮ ಸಿದ್ಧಾಂತಿ'ಗಳೆಂದು ಕೆಲವು ಕೃತಿಗಳು ಉಲ್ಲೇಖಿಸಿದ್ದೂ ಉಂಟು. ವಿಶೇಷವೆಂದರೆ, ಕಾಪಾಲಿಕರ ವಿಚಾರಗಳು ಅವರ ದರ್ಶನಕೃತಿಗಳಿಂದ ಮತ್ತು ಅವರ ವಿರೋಧಿ ಪಂಥದ ಹೇಳಿಕೆಗಳಿಂದ ಹೆಚ್ಚಾಗಿ ತಿಳಿಯುವುದು.

ಶಿವನು ಕಾಪಾಲಿಕರ ಆರಾಧ್ಯಮೂರ್ತಿ. ಹಾಗಾಗಿ ಓರ್ವ ಕಾಪಾಲಿಕ ಸಂತನು ತಲೆಬುರುಡೆಯೊಂದನ್ನು ಕೈಯಲ್ಲಿ ಹಿಡಿದು, ಮೂಳೆಹಾರವನ್ನು ಕೈಯಲ್ಲಿ ಧರಿಸಿ, ಜಟಾಧಾರಿಯಾಗಿ, ತ್ರಿಶೂಲದೊಂದಿಗೆ ಭಿಕ್ಷಾನ್ನವನ್ನು ಸ್ವೀಕರಿಸುವುದು ಆತನ ದಿನಚರಿ. ಕರ್ಣಕುಂಡಲ, ಜನಿವಾರ, ಭಸ್ಮಧಾರಣೆ ಆತನಿಗೆ ಕಡ್ಡಾಯ. ಸಾಮಾನ್ಯವಾಗಿ ಕಾಪಾಲಿಕರ ಆಚರಣೆಗಳೆಲ್ಲ ರಾತ್ರಿಯಲ್ಲೇ ನಡೆಯುತ್ತಿದ್ದವು. ನರಬಲಿ ಕೊಡುವುದು, ನರಮಾಂಸ ಹಾಗೂ

ಸೋಮರಸ ಸ್ವೀಕರಿಸುವುದು, ಪರಸ್ತ್ರೀ ವಶೀಕರಣ ಇವೆಲ್ಲವುಗಳು ಅವರ ಆಚರಣೆಯಲ್ಲಿ ಬಂದವುಗಳು. ಆದರೆ ಅವರ ಆಚರಣೆಗಳಲ್ಲಿ ಮುಖ್ಯವಾದುದೆಂದರೆ, ಶವಸಂಸ್ಕಾರದ ವಿಚಾರ.[೪೦] 'ಇವರಲ್ಲಿ ಶವಸಂಸ್ಕಾರದ ಹನ್ನೊಂದನೆಯ ದಿನ ಸಮಾಧಿಯ ಮೇಲೆಯೇ ಮಾಂಸಸೇವನೆ ಮಾಡುವ ಆಚರಣೆಯೂ ಇತ್ತೆಂದು' ರಹಮತ್ ತರೀಕೆರೆಯವರು ತಮ್ಮ ಕೃತಿಯಲ್ಲಿ ಅಭಿಪ್ರಾಯಪಡುತ್ತಾರೆ. ಕಾಪಾಲಿಕನು ಕೆಲವೊಮ್ಮೆ ತನ್ನನ್ನೇ ಶಿವನೆಂದು ತಿಳಿದುಕೊಳ್ಳುವ ತಾತ್ವಿಕತೆಗೆ ಒಳಗಾಗುತ್ತಿದ್ದನು. ಶಿವ ಹಾಗೂ ಶಕ್ತಿರೂಪಗಳು ಕೂಡಿಕೊಳ್ಳುವ ತಾತ್ವಿಕ ವಿಚಾರವನ್ನು ಕಾಪಾಲಿಕನೋರ್ವ ತನ್ನ ಇಂದ್ರಿಯಾಚರಣೆಯಲ್ಲೂ ತಂದುಕೊಂಡನು. ಸ್ತ್ರೀಭೋಗದಲ್ಲಿ ವಿಷಯಾಸಕ್ತಿಯನ್ನು ಹೊರಚೆಲ್ಲುವುದೇ ಪರಮಾನಂದ ಮೋಕ್ಷವೆಂಬುದು ಕಾಪಾಲಿಕರ ಕಲ್ಪನೆಯಾಗಿತ್ತು. ಆದರೂ ಅವರು ಶ್ಮಶಾನವಾಸಿಗಳೇ ಹೊರತು ಗೃಹವಾಸಿಗಳಲ್ಲ.

೨.೪ (ಈ) ಶಾಕ್ತ ಅಥವಾ ಶಕ್ತಿಪಂಥ.

ಶಾಕ್ತದ ಮೂಲರೂಪ ಶಕ್ತಿ. ಇಲ್ಲಿ 'ಶಕ್ತಿ' ಎಂದರೆ 'ಸ್ತ್ರೀ' ಎಂದರ್ಥ. ಪ್ರಾಚೀನದಿಂದಲೂ ಈ ಶಕ್ತಿಯನ್ನು 'ಪ್ರಕೃತಿ' ಎಂಬಂತೆ ಅರ್ಥೈಸಲಾಗಿತ್ತು. ಜಗತ್ತಿನ ಸಮಸ್ತ ಚಲನೆಗಳಲ್ಲೂ ಶಕ್ತಿರೂಪದ ರಹಸ್ಯವೊಂದು ಅಡಕವಾಗಿತ್ತು. ಆದುದರಿಂದಲೇ 'ಶಿವೋಪಿ ಶಕ್ತಿ ರಹಿತ: ಕರ್ತು ಶಕ್ತೋ ನ ಕಿಂಚನ'ವೆಂಬ ವ್ಯಾಖ್ಯಾನ ರಚನೆಯಾಯಿತು. ಶಕ್ತಿಯ ದೈವೀರೂಪವೇ ಶಿವೆಯಾಗಿ, ಪುರುಷನೇ ಶಿವನಾಗಿ ಕಾಣುವ ಪರಿಯೊಂದು ಮುಂದುವರಿಯಿತು. ಇದರಿಂದ ಶಿವೆಯನ್ನು ಅರ್ಥಾತ್ ಶಕ್ತಿಯನ್ನು ಆರಾಧಿಸಿಕೊಂಡು ಬಂದವರೇ 'ಶಾಕ್ತ'ರು ಎನಿಸಿಕೊಂಡರು.

ಶಾಕ್ತಪಂಥಕ್ಕೆ ಕೇರಳವೇ ಮುಖ್ಯತಾಣ.[೪೧] ಅಲ್ಲಿಯ ಭಗವತೀ ಆರಾಧನೆಯು ಶಾಕ್ತಪಂಥದ ಸಮರ್ಥನೆಗೆ ಹೆಚ್ಚು ನೆರವಾಗುತ್ತದೆ. ಮಲಯಾಳ ಪ್ರಾಂತದ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯು, ಚಕ್ರಪೂಜೆಯಂತಹ ತಂತ್ರನಿಷ್ಠ ಧಾರ್ಮಿಕ ಆಚರಣೆಗಳು ಶಾಕ್ತರ ಶಕ್ತಿಆರಾಧನೆಗೆ ಮತ್ತು ಕ್ಷೇತ್ರನಿರ್ಣಯಕ್ಕೆ ಹೆಚ್ಚು ಸಹಕಾರಿಯಾಗುತ್ತವೆ. ಇವರ ತಂತ್ರ ರೂಪದಲ್ಲಿ ದಕ್ಷಿಣಾಚಾರಗಳೆನಿಸಿದ ಆಸನ, ಜಪ, ತಪಗಳೆನಿಸಿದ ಸಾತ್ವಿಕ ಆಚರಣೆಗಳು, ಹಾಗೂ ವಾಮಾಚಾರಗಳೆನಿಸಿದ ಮಾಂಸ, ಮದ್ಯ, ಮತ್ಸ್ಯ, ಮುದ್ರಾ ಹಾಗೂ ಮೈಥುನಗಳೆಂಬ ಪಂಚಮಕಾರಗಳೆಂಬ ಆಚಾರವರ್ಗಗಳಿವೆ. ವಾಮಾಚಾರದಲ್ಲಿ ಶಾಕ್ತರಿಗೆ ಸ್ತ್ರೀಸಂಭೋಗವೇ ಹೆಚ್ಚು ಮುಖ್ಯವಾದುದು. ಇದರಲ್ಲೇ ಅವರ ಪಾರಮಾರ್ಥಿಕ ಸಾಯುಜ್ಯ. ಇಲ್ಲಿ ಹೆಣ್ಣಿನ ಅಂಗಾಂಗಗಳಲ್ಲೂ ಶಕ್ತಿಸ್ವರೂಪಿಯ ಅವಾಹನೆ ಹಾಗೂ ಆರಾಧನೆಗಳನ್ನು ಅವರು ಕಾಣಬಯಸುತ್ತಾರೆ. ಅದುವೇ ಅವರ ಪಾಲಿಗೆ ಶಕ್ತಿಪೀಠವೆಂಬ ಕಲ್ಪನೆ. ಇವರ ತಂತ್ರಾರಾಧನೆಗೆ ಮುಖ್ಯ ಭಾಗವಾದ ಚಕ್ರಪೂಜೆಯು ಯೋನಿಪೂಜೆಯೆಂದೇ ಗ್ರಹಿತವಾಗುತ್ತದೆ.

ಚುಂಚನಗಿರಿಯಲ್ಲಿ ಕಬಂದಮ್ಮ, ಲುಂಕೆಮಲೆಯ ತುಪ್ಪದಮ್ಮ, ಚಂದ್ರಗುತ್ತಿಯ ಗುತ್ತೆಮ್ಮ, ಕದ್ರಿಯ ಮರುಳು ಧೂಮಾವತಿ, ಸವದತ್ತಿಯ ಎಲ್ಲಮ್ಮ ಇವಲ್ಲದೆ ಇನ್ನೂ ಮೊದಲಾದ ಶಾಕ್ತಪಂಥ ಕ್ಷೇತ್ರಗಳು ಕರ್ನಾಟಕದಲ್ಲಿ ಸಿಗುತ್ತವೆ. ಒಟ್ಟಿನಲ್ಲಿ ಶಕ್ತಿಯಿಲ್ಲದೆ ಶಿವನಿಲ್ಲ. ಶಿವನಿಗೆ ಶಕ್ತಿಯೇ ಎಲ್ಲ. ಹಾಗಾಗಿ ಶಿವನು ಶಕ್ತಿಗೆ ನಿತ್ಯಾಧೀನ.

೨.೪ (ಊ) ವಲ್ಲಭ ಪಂಥ

ಭಾರತೀಯ ಭಕ್ತಿಪಂಥಗಳಲ್ಲಿ ವಲ್ಲಭಪಂಥವು ಇತರ ವೈಷ್ಣವ ಪಂಥಗಳಷ್ಟೇ ಮಹತ್ವಪೂರ್ಣ. ಇದನ್ನು 'ಪುಷ್ಠಿಪಂಥ' 'ಪುಷ್ಠಿಮಾರ್ಗ' ಎಂಬುದಾಗಿಯೂ ಕರೆದದ್ದುಂಟು. ಇದರ ಪ್ರವರ್ತಕರಾದವರು ಶ್ರೀ ವಲ್ಲಭಾಚಾರ್ಯರು (ಕ್ರಿ.ಶ. ೧೪೭೭-೧೫೩೨). ಇವರ ತಂದೆತಾಯಿಯರು ಆಂಧ್ರದವರು. ವಲ್ಲಭರು ಮಾತ್ರ ದೂರದ ಕಾಶಿಗೆ ಹೋಗಿ ನೆಲೆಸಿ ವೈಷ್ಣವತತ್ವವನ್ನೇ ಅವಲಂಬಿಸಿ ಪಂಥಸೃಷ್ಟಿಗೆ ಕಾರಣರಾದರು. ಈ ವಲ್ಲಭಪಂಥದಲ್ಲಿ ಶ್ರೀಕೃಷ್ಣನೇ ಆರಾಧ್ಯದೈವ. ಅವನ ಸಾಕ್ಷಾತ್ಕಾರಕ್ಕಾಗಿ ಇರುವ ಮಾರ್ಗವೆಂದರೆ ಭಕ್ತಿಮಾತ್ರ. ಶ್ರೀಕೃಷ್ಣಾವತಾರ ನಡೆದುದೇ ಪತಿತರ ಪಾವನೋದ್ಧಾರಕ್ಕಾಗಿ ಎಂಬುದು ವಲ್ಲಭಪಂಥದ ಅಭಿಮತ. ಈ ಕಾರಣದಿಂದಾಗಿ ಭಕ್ತನ ಅನುಭಾವಕಲ್ಪನೆಯು ಸಮರ್ಪಣಾಭಾವದಿಂದ ಕೂಡಿರುತ್ತದೆ. ಇಲ್ಲಿಯ ಕೃಷ್ಣಾರ್ಪಣ ಕಲ್ಪನೆಯೇ ಮುಕ್ತಿಗೆ ಮುಕ್ತಮಾರ್ಗವಾಗಿದೆ.[೪೨]

ವಲ್ಲಭಪಂಥವು ಅದ್ವೈತದ ಮಾಯಾತತ್ತ್ವದಿಂದೊದಗುವ ಮಿಥ್ಯೆಯನ್ನು ನಿರಾಕರಿಸಿ, ಉಳಿದುದನ್ನು ಸ್ವೀಕರಿಸುತ್ತದೆ. ಇಲ್ಲಿ ಈಶ್ವರ ಹಾಗೂ ಜೀವ ಜಗತ್ತುಗಳು ಸತ್ಯವಾಗುತ್ತವೆ. ಅವುಗಳಲ್ಲಿ ಅಭೇದ. ಹಾಗಾಗಿ ಶ್ರೀಕೃಷ್ಣನೇ ಪರಬ್ರಹ್ಮ ಸ್ವರೂಪನಾಗಿ, ಜೀವಜಡಗಳೆಲ್ಲಾ ಅವನ ಅಭಿವ್ಯಕ್ತಿಯಾಗಿ ತೋರಿಬರುತ್ತದೆ. ಒಟ್ಟಿನಲ್ಲಿ ಶ್ರೀಕೃಷ್ಣನೊಂದಿಗೆ ಅಂತರ್ಯಾಮಿ, ಜೀವ ಹಾಗೂ ಜಗತ್ತುಗಳೆಲ್ಲವೂ ಸೇರಿಕೊಂಡು ಭೇದವನ್ನು ಕಡೆಗಣಿಸುತ್ತವೆ. ಅಭೇದವನ್ನು ಸೃಷ್ಟಿಸುತ್ತವೆ.

ವಲ್ಲಭಪಂಥದ ಮುಖ್ಯವೈಶಿಷ್ಟ್ಯವೆಂದರೆ, ಭಕ್ತನು ಸಂಸಾರಿಯಾಗಿದ್ದುಕೊಂಡೇ ಕೃಷ್ಣನಾಮದ ಉಪಾಸನೆಯನ್ನು ಅನುಷ್ಠಾನಕ್ಕೆ ತರಬಹುದು. ಪ್ರಾಯಶಃ ಬಹಳಷ್ಟು ಪಂಥಗಳು ಸಂಸಾರವನ್ನು ಲೊಳಲೊಟ್ಟೆಯೆಂದೇ ಬಣ್ಣಿಸಿದರೆ, ಈ ಪಂಥವು ಮುಕ್ತಿಸಾಧನೆಗೆ ಸಂಸಾರವೊಂದು ತೊಡಕಲ್ಲವೆಂದು ಹೇಳುತ್ತದೆ. ಶ್ರೀರಾಮಾನುಜಾಚಾರ್ಯರು ಶ್ರೀಮನ್ನಾರಾಯಣನೊಂದಿಗೆ ಶ್ರೀಲಕ್ಷ್ಮೀದೇವಿಯನ್ನು ಆರಾಧಿಸಿದರೆ, ವಲ್ಲಭಾಚಾರ್ಯರು ಶ್ರೀಕೃಷ್ಣನೊಂದಿಗೆ ರಾಧೆಯನ್ನು ಕಾಣುತ್ತಾರೆ. ಇಲ್ಲಿ ರಾಧಾದೇವಿಯು ಶ್ರೀಕೃಷ್ಣನ ಅತ್ಮಶಕ್ತಿಯ ರೂಪ. ಅಲ್ಲದೆ ಅಭಿನ್ನತೆಯನ್ನು ಕಲ್ಪಿಸಿಕೊಟ್ಟಿದ್ದು ಭಕ್ತಿಪಂಥಕ್ಕೆ ವಲ್ಲಭಪಂಥ ಕೊಟ್ಟ ವಿಶೇಷ ಕೊಡುಗೆ. ಇಲ್ಲಿ ಕೃಷ್ಣನಿಗೂ ಪೂಜೆಯಿದೆ; ರಾಧಾದೇವಿಗೂ ಪೂಜೆಯಿದೆ. ಒಟ್ಟಿನಲ್ಲಿ ಇದೊಂದು ಮಾಧುರ್ಯಭಾವಯುಕ್ತ ಉಪಾಸನೆ.

೨.೫ ವಚನ ಸಾಹಿತ್ಯದಲ್ಲಿ ಭಕ್ತಿಯ ಪರಿಕಲ್ಪನೆ

ಭಾರತೀಯ ಭಕ್ತಿಚಳುವಳಿಯ ಮಧ್ಯಕಾಲೀನ ಬೆಳವಣಿಗೆಯಲ್ಲಿ ವಚನಸಾಹಿತ್ಯದ ಪಾತ್ರವು ಪ್ರಧಾನವಾದುದು. ಸಂಸ್ಕೃತದಲ್ಲಿ ಸ್ತೋತ್ರ ಸಾಹಿತ್ಯದಂತೆಯೇ ಕನ್ನಡದಲ್ಲಿ ವಚನಸಾಹಿತ್ಯವು ಮುಖ್ಯವಾಗುತ್ತದೆ. ಅದು ವೀರಶೈವರ ಯುಗ. ವೀರಶೈವರಿಗೆ ಸಾಹಿತ್ಯ ನಿರ್ಮಾಣ ಮುಖ್ಯವಾಗಿರಲಿಲ್ಲ. ಅವರಿಗೆ ಹೊಸ ಸಮಾಜದ ನಿರ್ಮಾಣವು ಅಗತ್ಯವಾಗಿತ್ತು. ಅದಕ್ಕಾಗಿ ತಮ್ಮ ಲೋಕಾನುಭವವನ್ನು ಸರಳವಾಗಿ ಜನತೆಯ ಮುಂದಿಟ್ಟರು. ಇಲ್ಲಿಯ ಲೋಕಾನುಭವದ ಅನುಭಾವ ಅಭಿವ್ಯಕ್ತಿಗಳು 'ವಚನ'ಗಳೆಂದೇ ಕರೆಯಲ್ಪಟ್ಟವು. ಅನುಭಾವ ಗದ್ಯಕ್ಕೆ ಕಾವ್ಯಕಲ್ಪನೆಯು ಸೇರಿಕೊಂಡು ಆ ವಚನಗಳೆಲ್ಲ ಸುಂದರ ಆಧ್ಯಾತ್ಮಿಕ ಭಾವಗೀತೆಗಳಾಗಿ ಮೂಡಿಬಂದವು. ಈ ಕಾಲದಲ್ಲಿ ನೂರಾರು ಅನುಭಾವಿಗಳು ವಚನಯುಗವನ್ನು ಶ್ರೀಮಂತಗೊಳಿಸಿದ್ದಾರೆ.

ವಚನಯುಗವು ಹುಟ್ಟುವ ಕಾಲಕ್ಕಾಗಲೇ ಸಮಾಜವು ಅಂತಸ್ತು, ಜಾತಿ, ಕಸುಬುಗಳ ಕಲ್ಪನೆಯಿಂದ ಸಂಪೂರ್ಣವಾಗಿ ಹದಗೆಟ್ಟಿತ್ತು. ಈ ನೆಲೆಯಲ್ಲಿ 'ವಚನ ಚಳುವಳಿಯ ಪ್ರಧಾನ ಅಂಶವಾಗಿ ರೂಪುಗೊಂಡ ಅನುಭಾವ ಹಾಗೂ ಭಕ್ತಿಯ ಸ್ವರೂಪಗಳು ಮನುಷ್ಯನ ಅಸ್ತಿತ್ವದ ಬಗ್ಗೆ ಹೊಸ ಅಂಶಗಳನ್ನು ರೂಪಿಸಲು ಪ್ರಯತ್ನಿಸಿದವು ಎಂದೇ ಹೇಳಬೇಕು. ಹೀಗಾಗಿ ಕರ್ನಾಟಕದ ಚರಿತ್ರೆಯಲ್ಲಿ ಹಿಂದೆ ಕಾಣದ ವ್ಯಕ್ತಿಯ ಬಗೆಗಿನ ಕಾಳಜಿಗಳು ಮೊದಲಬಾರಿಗೆ ಆ ಕಾಲದಲ್ಲಿ ವ್ಯಕ್ತವಾದವು.'[೪೩]

ವಚನಸಾಹಿತ್ಯದಲ್ಲಿ ಕಂಡ ಭಕ್ತಿಯ ಪರಿಕಲ್ಪನೆಯು ಅಂದಿನ ಸಾಮಾಜಿಕ ಪರಿಸ್ಥಿತಿಗೆ ಅಗತ್ಯವಾಗಿತ್ತು. ಇಲ್ಲಿ ವಚನಸಾಹಿತ್ಯದ ಬಸವಣ್ಣ, ಅಕ್ಕ, ಅಲ್ಲಮರುಗಳೆಲ್ಲ ಸಮಕಾಲೀನರಾಗಿ, ಅನುಭಾವಿಗಳಾಗಿ ಬದುಕಿದರು. ಆದರೂ "ಸಮಕಾಲೀನರೆನ್ನಬಹುದಾದ ಬಸವ, ಅಕ್ಕಮಹಾದೇವಿ, ಅಲ್ಲಮ–ತಾವು ಜೀವನವನ್ನು ಬದುಕಿದ ಹಾಗೂ ಗ್ರಹಿಸಿಕೊಂಡ ನೆಲೆಗಳು ಪ್ರಧಾನವಾಗಿ ಬೇರೆಬೇರೆ ಪಾತಳಿಯವು. ಬಸವ ಹಾಗೂ ಅಕ್ಕನ ವಚನಗಳಲ್ಲಿ ಈ ವಿಧಾನ ಬದುಕನ್ನು ಭಿನ್ನಭಿನ್ನ ನೆಲೆಗಳಲ್ಲಿ ಶೋಧಿಸುವ ಸ್ವರೂಪದ್ದು. ಅಲ್ಲಮನ ಹುಡುಕಾಟ ಪ್ರಧಾನವಾಗಿ 'ಅನುಭಾವ' ಎಂದು ಹೇಳಬಹುದಾದ ನೆಲೆಯದ್ದು. ಆದ್ದರಿಂದಲೇ ಇವರೆಲ್ಲರೂ ಬದುಕಿನ ಸಂಕೀರ್ಣ ಸ್ವರೂಪದ ವಿಶಿಷ್ಟ ನೆಲೆಗಳನ್ನು ವಚನಗಳ ಅಧ್ಯಯನದಿಂದ ಗುರುತಿಸಬಹುದಾಗಿದೆ."[೪೪] ಎಂದು ಬಸವರಾಜ ಕಲ್ಗುಡಿಯವರು ವಿಶ್ಲೇಷಿಸುತ್ತಾರೆ.

ವಚನಗಳು ಜ್ಞಾನ, ಕರ್ಮ ಹಾಗೂ ಭಕ್ತಿಯ ಮೂಲಕ ಯೋಗಸಾಧನವಾಗಿಯೂ ಪ್ರವಹಿಸಿತು. ಇಲ್ಲಿಯ ಭಕ್ತಿಬೀಜವು ಬಾಹ್ಯಕರ್ಮಗಳಲ್ಲಿ ಮೊಳಕೆಯೊಡೆದು ವಾಚಕಕರ್ಮರೂಪದಿಂದ ಬೆಳೆಯುತ್ತದೆ. ಆ ಮೂಲಕ ಸರ್ವಾರ್ಪಣಾಭಾವಕ್ಕೆ ಮುಂದಾಗುತ್ತದೆ. ವಚನಸಾಹಿತ್ಯದ ಅನುಭಾವಿಗಳೆನಿಸಿದ ಬಸವಣ್ಣನವರು ತನ್ನ ಯೋಗಕ್ಷೇಮವನ್ನೆಲ್ಲಾ ಭಗವಂತನಿಗೆ ಅರ್ಪಿಸಿ 'ಎನ್ನ ನಾಮಕ್ಷೇಮ ನಿಮ್ಮದಯ್ಯಾ, ಎನ್ನ ಹಾನಿವೃದ್ಧಿ ನಿಮ್ಮದಯ್ಯಾ, ಎನ್ನ ಮಾನಾಪಮಾನ ನಿಮ್ಮದಯ್ಯಾ' ಎಂದು ಕೇಳಿಕೊಳ್ಳುತ್ತಾರೆ. ಅಲ್ಲದೆ, 'ತಂದೆ ನೀನು, ತಾಯಿ

ನೀನು, ಬಂಧು ನೀನು, ಬಳಗ ನೀನು, ನೀನಲ್ಲದೆ ಮತ್ತಾರೂ ಇಲ್ಲವಯ್ಯಾ, ಕೂಡಲಸಂಗಮದೇವಾ ಹಾಲಲದ್ದು, ನೀರಲದ್ದು' ಎನ್ನುವಲ್ಲಿ ಭಕ್ತನ ದೃಢವಿಶ್ವಾಸವನ್ನು ಎದ್ದುತೋರಿಸಿಕೊಡುವ ಬಸವಣ್ಣನವರ ಸರ್ವಾರ್ಪಣಭಾವವು ಮುಖ್ಯವಾಗುತ್ತದೆ. ಅವರ 'ತೊರೆಯ ಮೀವಣ್ಣಗಳಿರಾ; ತೊರೆಯ ಮೀವ ಸ್ವಾಮಿಗಳಿರಾ.....ಬರುತೊರೆ ಹೋಹುದು ಕೂಡಲಸಂಗಮದೇವಾ' ಎಂಬ ಸಮಾಜಮುಖೀ ವಚನವು ಮೇಲ್ನೋಟಕ್ಕೆ ಪುರಂದರದಾಸರ 'ಉದರವೈರಾಗ್ಯವಿದು' ಎಂಬ ಕೀರ್ತನೆಯನ್ನು ನೆನಪಿಸಿದರೂ, ಅದು ಭಕ್ತಿಯ ಎತ್ತರವನ್ನು ಸೂಚಿಸುತ್ತದೆ. ಅಲ್ಲದೆ ಸಾಮಾಜಿಕ ವಿಡಂಬನೆಯನ್ನು ತೋರುವ ಕ್ರಮವು ಅಂದಿನ ವಚನಸಾಹಿತ್ಯದ ವಿಶೇಷತೆಗಳಲ್ಲೊಂದೆಂದು ನಾವು ಭಾವಿಸಿಕೊಳ್ಳಬೇಕು. ಪ್ರಾಯಶಃ ಇಂತಹ ಕಾಲಘಟ್ಟದಲ್ಲೇ ಇದ್ದ ಜೇಡರದಾಸಿಮಯ್ಯನೂ ಕೂಡ 'ಇಂದಿಗೆಂತು, ನಾಳಿಂಗೆಂತೆಂತು ಚಿಂತಿಸಲೇಕೆ? ತಂದಿಕ್ಕುವ ಶಿವಂಗೆ ಬಡತನವೇ' ಎನ್ನುವಲ್ಲಿ ಮೇಲಿನ ಚಿಂತನೆಯನ್ನೇ ಮಾಡಿರಸಿರಬೇಕು.

ವಚನಸಾಹಿತ್ಯದಲ್ಲಿಕಾಣುವಂತಹುದು ಚಿತ್ತಶುದ್ಧವೆನಿಸಿದ ಕಾಯಕದ ಭಕ್ತಿ. ಇವರ ಪ್ರಕಾರ 'ಕಾಯಕ'ವೆಂದರೆ ಕೇವಲ ಶರೀರಶ್ರಮವಲ್ಲ. ಅದು ಶ್ರೇಷ್ಠಮನೋಧರ್ಮದಿಂದ ಮಾಡುವ ದೈವೀಕಾರ್ಯ ಎಂಬುದು ಅವರ ಅಭಿಮತ. ಹಾಗಾಗಿಯೇ ಇಲ್ಲಿಯ ಕಾಯಕಕಲ್ಪನೆಯು ಕನ್ನಡ ವಿಚಾರಪ್ರಪಂಚಕ್ಕೆ ಹೊಸ ಕೊಡುಗೆಯಾಗುತ್ತದೆ. ಇಲ್ಲಿಯ ಬಹಳಷ್ಟು ಅನುಭಾವಿಗಳ ಹೆಸರಿನ ಹಿಂದೆ ಅವರ ವೃತ್ತಿಸೂಚಕ ವಿಶೇಷಣವು ಎದ್ದುತೋರುತ್ತದೆ. ಈ ನೆಲೆಯಲ್ಲಿ ಬಸವರಾಜ ಕಲ್ಗುಡಿಯವರು "ವಚನಗಳಲ್ಲಿ ಕಾಯಕದ ಸಂಬಂಧಗಳ ಬಗ್ಗೆ ವಿವರಗಳು ಹೆಚ್ಚು ದೊರೆಯುವುದಿಲ್ಲವಾದರೂ, ಕಾಯಕದ ಉಲ್ಲೇಖ ಬಂದ ಕಡೆಗಳಲ್ಲೆಲ್ಲ ಅದು ಭಿನ್ನಭಿನ್ನ ವೃತ್ತಿಯನ್ನು ಕೈಕೊಂಡ ಜನರ ಕಾಯಕವೆಲ್ಲವೂ ಮೌಲ್ಯಾತ್ಮಕವಾಗಿ ಒಂದೇ ಎನ್ನುವ ದಷ್ಟಿಯಿಂದ ನಿರೂಪಿತವಾಗಿದೆ."ಎಂದು ಅಭಿಪ್ರಾಯಪಡುತ್ತಾರೆ. [*] ಈ ಕಾಲದ ಭಕ್ತನಿಗೆ ಶಿವನೇ ಒಮ್ಮತದ ದೇವನು. ಹಾಗಾಗಿ ಅವನು ಶಿವಭಕ್ತನು. ಆ ದೇವನು ಮಹಾದೇವ, ಹರ, ಶಿವ, ಮಹೇಶ್ವರ, ರುದ್ರ ಇತ್ಯಾದಿ ಹೆಸರಿನ ಮೂಲಕ ಭಕ್ತನಲ್ಲಿ ಪ್ರಯೋಗಕ್ಕೊಳಗಾದನು. ಇಲ್ಲಿಯ ಭಕ್ತನಿಗೆ ಇಂದು ನಾಳೆಯ ಚಿಂತೆ ಬಾಧಿಸುವುದಿಲ್ಲ. ಶೈವನಾಮವೇ ದಿವ್ಯಸಂಪತ್ತಾದುದರಿಂದ ಅಲ್ಲಿಯ ಶರಣನು ಎಂದೆಂದೂ ಬಡವನಾಗುವುದಿಲ್ಲ. ಆತನ ಭಕ್ತಿಕಾಯಕದಲ್ಲಿ ಆಶೆಯ ಕೊಳೆಯಿಲ್ಲ. ಹಾಗಾಗಿ ಆತನ ಭಕ್ತಿಯು ನಿರ್ಮಲವೂ, ಲಿಂಗಶುದ್ದವೂ ಆಗಿ ಏಕದೇವೋಪಾಸನೆ ಅಥವಾ ಶಿವೋಪಾಸನೆಯಲ್ಲಿಯೇ ಮುಳುಗಿರುತ್ತದೆ. ಪ್ರಾಯಶ: ಈ ರೀತಿಯ ಭಕ್ತಿಭಾವ ಇತರ ಪಂಥಗಳಲ್ಲಿ ತೀರಾ ವಿರಳವೆನ್ನಬಹುದು.

ಶರಣರ ಮೈಮನಸ್ಸುಗಳ ತನ್ಮಯತೆಯಲ್ಲಿ ಶಿವಪಾರಮ್ಯವೇ ಇರುವುದರಿಂದ ಅಲ್ಲಿ ಆಶೆಯ ಸುಳಿವಿರುವುದಿಲ್ಲ. ಆಶೆಯಿದ್ದಲ್ಲಿ ಶಿವಭಕ್ತಿ ಸುಳಿಯುವುದಿಲ್ಲ. ಆದುದರಿಂದಲೇ ಲಕ್ಕಮ್ಮನ ಮುಖ್ಯ ವಚನವೊಂದು 'ಆಶೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೇ ಅಯ್ಯಾ? ಎಂದು ಪ್ರಶ್ನಿಸುತ್ತದೆ. ಆಕೆಯು ಕಾಣುವ

ಶುದ್ಧಭಕ್ತನಿಗೆ 'ಎತ್ತನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು'. ಮೋಳಿಗೆಯ ಮಾರಯ್ಯನಿರಬಹುದು, ಚೆನ್ನಬಸವಣ್ಣನಿರಬಹುದು ಅಥವಾ ಇನ್ನಿತರ ಶರಣರಿರಬಹುದು. ಅವರೆಲ್ಲರ ಭಕ್ತಿಯ ರೀತಿಯೆಂದರೆ, ಕಾಯಕವನ್ನು ಪೂರೈಸಿ ಕೈಲಾಸಕ್ಕೆ ಹೋಗುವಂತಹುದು. ಇದೇ ಅವರ ಶಿವಭಕ್ತಿ, ಶಿವಾದ್ವೈತಭಕ್ತಿ. 'ಕೈಲಾಸವೆಂಬ ಭವಸಾಗರವನೊಲ್ಲೆ'ನೆಂಬ ಮಾರಯ್ಯನ ಭಾವದಲ್ಲಿಯೂ ಇಂತಹ ಮುಖ್ಯ ಗುರುತುಗಳನ್ನು ಕಾಣಲುಸಾಧ್ಯ. ಅವನು ಹೇಳುವ 'ಗುರುಸೇವೆ ಮಾಡಿದರೆ ಇಹದಲ್ಲಿ ಸುಖ, ಲಿಂಗಸೇವೆಯ ಮಾಡಿದರೆ ಪರದಲ್ಲಿ ಸುಖ, ಜಂಗಮಸೇವೆಯ ಮಾಡಿದರೆ ಇಹಪುರವೆಂಬುಭಯ ನಾಸ್ತಿ' ಎಂಬ ವಚನವೇ ಕಾಯಕದ ಸಾಲದ ನಿರೂಪಣೆಗೆ ಸಾಕ್ಷಿಯಾಗಿ ನಿಲ್ಲುತ್ತದೆ. ಇಲ್ಲಿ ಜಂಗಮ ದಾಸೋಹದ ನಿಷ್ಠೆಯಿದೆ. ಹೀಗಾಗಿ ಇದೊಂದು ಅಂತರಂಗ ಶುದ್ಧವಾದ ಭಕ್ತಿ ಎನ್ನಬೇಕು.

ಶರಣಸಾಹಿತ್ಯದ ಭಕ್ತಿಯಲ್ಲಿ ಶ್ರದ್ಧೆಗೂ ಮೊದಲ ಮಣೆಯಿದೆ. ಆ ಮೂಲಕವಾಗಿಯೇ ಅವರು ಶಿವಭಕ್ತಿಯನ್ನು ತೋರಿದರು; ಕೈವಲ್ಯಸಿದ್ದಿಯನ್ನು ಪಡೆದರು. ಇದಕ್ಕೆ ಪ್ರೇರಕವಾದುದು ಕ್ರಿಯಾಶಕ್ತಿ, ಧ್ಯಾನಶಕ್ತಿ ಮತ್ತು ಬುದ್ಧಿಶಕ್ತಿಗಳು. ಭಗವಂತನ ಸಾಕ್ಷಾತ್ಕಾರಕ್ಕಾಗಿ ಜ್ಞಾನ, ಕರ್ಮ, ಭಕ್ತಿ, ಸ್ಥಿರ, ಧ್ಯಾನ, ನಿಃಸಂಶಯ ಆತ್ಮಜ್ಞಾನ, ಉತ್ಕಟ ಅನನ್ಯಭಕ್ತಿ, ನಿಷ್ಕಾಮ ಪರಾರ್ಥಕರ್ಮ ಹಾಗೂ ಏಕಾಗ್ರಚಿತ್ತಗಳನ್ನು ಅಂದಿನ ವಚನಕಾರರು ತಮ್ಮ ಮುಖ್ಯ ಲಕ್ಷಣವನ್ನಾಗಿ ಪಡೆದುಕೊಂಡರು. ಅವರು 'ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನದಲ್ಲ: ಅದು ಜಗಕ್ಕಿಕ್ಕಿದ ವಿಧಿ' ಎನ್ನುವಲ್ಲಿ ನನ್ನದೆನ್ನುವ ಅಹಂಕಾರವನ್ನು ಸುಲಭದಲ್ಲಿ ತ್ಯಜಿಸುವ ಯೋಚನೆಯನ್ನು ಮಾಡುತ್ತಾರೆ. ಅವರಿಗೆ ಎಲ್ಲಿಲ್ಲದ ಸಿರಿತನ ಗುಹೇಶ್ವರ ಲಿಂಗದಲ್ಲೇ ಕಾಣುತ್ತದೆ. ದೇಹ, ಜೀವ, ಬುದ್ಧಿ, ಧನಗಳಾಚೆಗೆ ಅಖಂಡವಾದ ಒಂದು ಆತ್ಮವಸ್ತುವಿದೆಯೆಂಬ ಕಲ್ಪನೆ ಅವರ ಪಾಲಿನದ್ದು. ಅದನ್ನೇ ಅವರು ಪೂರ್ಣಜ್ಞಾನವೆಂದು ತಿಳಿದರು. ಬಸವೇಶ್ವರರಂತೂ ಪರತತ್ವಕ್ಕಾಗಿ 'ಆಧಾರ ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೆ ಎಂಬ ಷಡುಚಕ್ರದೊಳಗಿನ ದಳವರ್ಣ ಅಕ್ಷರದೇವತೆ ಶಕ್ತಿಭಕ್ತಿ ಸಾದಾಖ್ಯಂಗಳನ್ನು ದೇವನಲ್ಲವೆಂದು ಹೇಳಿದರು. ಅವನನ್ನು ವಾಚಾತೀತ, ವರ್ಣಾತೀತ, ಅಕ್ಷರಾತೀತವಾಗಿ ಕಂಡು ಭಕ್ತಿಯನ್ನು ಹೊಸದಾಗಿ ಅರ್ಥೈಸಿದರು. ಹೀಗೆ ಮುಂದುವರಿದ ವಚನಕಾಲದ ಭಕ್ತಿಯು ಸಾಮಾಜಿಕ ಡಾಂಭಿಕತೆಯ ಭಕ್ತಿಯನ್ನು ಮೂದಲಿಸಲು ಪ್ರಾರಂಭಿಸಿತು. ಸಾರ್ವತ್ರಿಕವಾಗಿ ಹೊಸಕಲ್ಪನೆಯ ಧಾರ್ಮಿಕ ಕ್ರಾಂತಿಯೊಂದು ಟಿಸಿಲೊಡೆದುದು ಇಲ್ಲಿಯೇ ಎನ್ನಬೇಕು.

ವಚನಕಾರರಿಗೆ ಕಲ್ಲದೇವರು ದೇವರಲ್ಲ, ಮಣ್ಣದೇವರೂ ದೇವರಲ್ಲ. ಮರ ಹಾಗೂ ಪಂಚಲೋಹದ ದೇವರನ್ನು ಅವರು ನಂಬುವವರಲ್ಲ. ಸೇತುಬಂಧ, ರಾಮೇಶ್ವರ, ಗೋಕರ್ಣ, ಕಾಶಿ, ಕೇದಾರ ಮುಂತಾದ ಅಷ್ಟಾಷಷ್ಠಿ ಪುಣ್ಯತೀರ್ಥಗಳ ದೇವರನ್ನೂ ಅವರು ಒಪ್ಪುವುದಿಲ್ಲ. ಈ ಕಲ್ಪನೆಯಿಂದಲೇ ಬಸವಣ್ಣನವರು, 'ತನ್ನ ತಾನರಿದು ತಾನಾರೆಂದು ತಿಳಿದಡೆ ತಾನೇ ದೇವ ನೋಡಾ, ಅಪ್ರಮಾಣ ಕೂಡಲಸಂಗಮದೇವಾ' ಎನ್ನುತ್ತಾರೆ.

ಇಲ್ಲಿ ಬಸವಣ್ಣನವರ ಕಲ್ಪನೆಯ ಭಗವಂತ ಅಂದಿನ ವಾಸ್ತವಕ್ಕಿಂತ ದೂರವಾಗುತ್ತಾನೆ. ಭವಿಷ್ಯತ್ತಿನಲ್ಲಿ ಹೊಸ ವಾಸ್ತವವೊಂದನ್ನು ಕಟ್ಟುವ ಇವರ ಕಲ್ಪನೆಯು ಸಾಮಾಜಿಕ ಕಳಕಳಿಯನ್ನು ತೋರಿಸುತ್ತದೆ. ಮುಖ್ಯವಾಗಿ ಇಲ್ಲಿಯ ಶರಣರಿಗೆ ಭಗವಂತನು ಶುದ್ಧಚೈತನ್ಯಸ್ವರೂಪನಾಗುತ್ತಾನೆ. ನಮ್ಮ ಉಪಾಧಿಗಳನ್ನೆಲ್ಲ ಕಳೆದರೆ ಆತನು ನಮಲ್ಲಿಯೇ ಇದ್ದುಬಿಡುತ್ತಾನೆ ಎಂಬುದು ವಚನಕಾರರ ನಿಲುವು. ಈ ಚಿಂತನೆಯನ್ನೇ ಅನುಸರಿಸಿ ಅಂಬಿಗರ ಚೌಡಯ್ಯನೂ ಕೂಡ ಪರತತ್ವದ ಜ್ಞಾನಾರ್ಜನೆಗೆ ಆತ್ಮಾನುಭವ ಅಗತ್ಯನ್ನುತ್ತಾನೆ. ಆತ್ಮನಿಂದಲೇ, ಆತ್ಮನಲ್ಲಿಯೇ ಪರಮಾತ್ಮನನ್ನು ಕಾಣತಕ್ಕದ್ದು ಹಾಗೂ ಅನುಭವಿಸತಕ್ಕದ್ದು ಎನ್ನುತ್ತಾನೆ. ಹಾಗಾಗಿಯೇ 'ನರನ ಮುಟ್ಟಿ ಓಲೈಸಿದಲ್ಲಿ ಪರಿಪರಿಯ ಪದಂಗಳುಂಟು, ಪರಶಿವಮೂರ್ತಿಯನರಿದಲ್ಲಿ ಇಹಪರದಲ್ಲಿ ಪರಮಸುಖವುಂಟು' ಎನ್ನುವಲ್ಲಿ ಪರತತ್ವದ ಇರವನ್ನು ಕಂಡುಕೊಳ್ಳುತ್ತಾನೆ. ಇಂತಹ ಪರತತ್ವಾರ್ಥ ಸ್ವೀಕಾರಕ್ಕೆ ಜ್ಞಾನವು ಆಂತರಿಕವಾಗಿ ಬೆಳೆಯಬೇಕು. ಈ ಜ್ಞಾನದೀಪ ಒಳಗಿನ ಕತ್ತಲೆಯನ್ನು ಪೂರ್ತಿಯಾಗಿ ಕಳೆದರೆ ಆತ್ಮಜ್ಞಾನವು ಪೂರ್ತಿಯಗಿ ಹರಡಿತೆಂದರ್ಥ."[೪೬] ಈ ದೃಷ್ಟಿಯಿಂದಲೇ 'ಎಲೆ ಮನವೇ, ನೀ ನಿನ್ನ ನಿಜವ ತಿಳಿದಡೆ, ಆ ನಿನ್ನ ನಿಜವ ಹೇಳುವೆ'ನೆಂದು ಪಾರಮಾರ್ಥಿಕ ವ್ಯಾಖ್ಯಾನವನ್ನು ಒಪ್ಪಿ, 'ದೇಹಭಾವವಳಿದಲ್ಲದೆ ಜೀವಭಾವವಳಿಯದು, ಜೀವಭಾವವಳಿದಲ್ಲದೆ ಭಕ್ತಿಭಾವವಳವಡದು'ಎನ್ನುವ ಸತ್ಯಾಂಶವನ್ನು ಕಂಡುಕೊಳ್ಳುತ್ತಾರೆ. ಭಕ್ತಿಭಾವದ ಅರಿವಿಗಾಗಿ, ಅರಿವಿನ ಕುರುಹುಗಾಗಿ, ಕುರುಹು ನಷ್ಟದಿಂದ ಹಿಂಗುವ ಮಾಯೆಗಾಗಿ ವಚನಕಾರರು ಕಾಯುತ್ತಾರೆ.

ಸರ್ವಜೀವರ ಧ್ಯೇಯವೂ ಮುಕ್ತಿಯೇ. ಆದರೆ ಅದರ ಸಾಕ್ಷಾತ್ಕಾರ ಸತ್ಯಪ್ರಾಪ್ತಿಯಿಂದ. ಈ ಸತ್ಯಸಾಕ್ಷಾತ್ಕಾರಕ್ಕೆ ಆತ್ಮಜ್ಞಾನವೆಂದು ಕೆಲವರು ಕರೆದರು. ಆದರೆ ಈ ಆತ್ಮಜ್ಞಾನದ ಪ್ರಾಪ್ತಿಯು ಶುದ್ಧಬುದ್ಧಿಯಿಂದೆಂಬುದು ವಚನಕಾರರ ಅಭಿಪ್ರಾಯ. ಜ್ಞಾನವು ಬುದ್ಧಿಕಾರ್ಯಕ್ಕೆ ಪ್ರಚೋದಿಸಿದರೆ, ಭಕ್ತಿಯು ಭಾವಕಾರ್ಯಕ್ಕೆ ಪ್ರಚೋದಿಸುತ್ತದೆ. ಅಂತರಂಗದ ಶುದ್ಧತೆಯಿಂದ ಪರಮಾತ್ಮನಲ್ಲಿ ನಿರ್ಹೇತುಕ ಭಾವದಿಂದ ಪ್ರೇಮ ತಲ್ಲೀನನಾಗುವುದೇ ಭಕ್ತಿ ಎನಿಸುವುದು. ಇದು ಶರಣರು ಕಂಡ ಭಕ್ತಿಯ ಗುಣಾತ್ಮಕ ಅಂಶ.

ಭಕ್ತಿಮಾರ್ಗದಲ್ಲಿ ಭಕ್ತನಿಗೆ ಭಗವಂತನು, ತಂದೆ ತಾಯಿ, ಬಂಧು ಬಳಗ, ಒಡೆಯ ಹಾಗೂ ಸಖನಾಗಬಲ್ಲ. ಭಕ್ತಿಪಾರಮ್ಯದ ಒರೆಗಲ್ಲಿಗೆ ತನ್ನನ್ನು ತಾನು ಚಚ್ಚಿಕೊಂಡ ವಚನಕಾರನು, ವೇದವೆಂಬುದು ಓದಿನ ಮಾತೆಂದೂ, ಶಾಸ್ತ್ರವನ್ನು ಸಂತೆಯಸುದ್ದಿಯೆಂದೂ ಭಾವಿಸಲು ಮುಂದಾಗುತ್ತಾನೆ. ಪುರಾಣ, ತರ್ಕಗಳನ್ನು ಗಾಳಿಯಲ್ಲಿ ತೂರಿಬಿಡಲು ಹೇಳುತ್ತಾನೆ. ಈ ನೆಲೆಯಲ್ಲಿ ಬಸವಣ್ಣನವರಂತೂ 'ಕರಿ ಘನ ಅಂಕುಶ ಕಿರಿದೆನ್ನಬಹುದೆ, ಅಯ್ಯಾ ?.......ನಿಮ್ಮ ಕೃಪೆಯ ಘನವ ನೀವೆ ಬಲ್ಲಿರಿ' ಎನ್ನುತ್ತಾ, ದೈವೀಕೃಪೆಯೇ ಘನವೆಂದು ವಾದಿಸಲು ಉಪಮಾದಿಗಳನ್ನೇ ಬಳಸುತ್ತಾರೆ.

ವಚನಕಾರರಿಗೆ ಭಗವಂತನನ್ನು ಕಾಣುವ ತವಕ. ಕಂಡರಂತೂ ಅವರಿಗೆ ಅನಂತಸುಖ. ಅದಕ್ಕಾಗಿ, ಅಷ್ಟಕೋಟಿರೋಮಂಗಳನ್ನು ಕಂಗಳಾಗಿ ನೋಡಲು ತವಕಿಸುತ್ತಾರೆ. ಅಲ್ಲದೆ ಭಕ್ತಿಯಲ್ಲೇ ಮಾನಸಪೂಜೆಯನ್ನು

ಕೈಗೊಳ್ಳುತ್ತಾರೆ. ಹಾಗಾಗಿಯೇ ಅವರಿಗೆ ವೇದ, ತರ್ಕ, ಪುರಾಣ, ಶಾಸ್ತ್ರಗಳೆಲ್ಲಕ್ಕಿಂತಲೂ ಭಕ್ತಿಯು ಪ್ರತ್ಯಕ್ಷ ಫಲದಾಯಿ. ಅದ್ವೈತ, ಬ್ರಹ್ಮ ಇವೆಲ್ಲವುಗಳು ಶರಣರಿಗೆ ಕೇವಲ ಶಬ್ದರೂಪ. ಆದರೆ ಭಕ್ತಿಯ ಆಲಿಂಗನದಲ್ಲಿ ಪರಮಪಾವನವಾದ ಜೀವನದ ಹಾದಿ ಸುಲಭವಾಗಿಯೇ ಅವರಿಗೆ ಗೋಚರವಾಗುತ್ತದೆ.

ಸೃಷ್ಟಿಗೆ ಹುಟ್ಟಿದ ಶಿಲೆ, ಕಲ್ಲು ಕುಟಿಕಂಗೆ ಹುಟ್ಟಿದ ಮಾರುತಿ
ಮಂತ್ರಕ್ಕೆ ಅಂಗವಾಯಿತಲ್ಲಾ !
ಈ ಮೂವರಿಗೆ ಹುಟ್ಟಿದ ಮಗನ ಲಿಂಗವೆಂದು ಕೈ ವಿಡಿದ
ಅಚ್ಚವ್ರತಗೇಡಿಗಳನೇನೆಂಬೆ ಗುಹೇಶ್ವರಾ ?[೪೭]

ಇಲ್ಲಿಯ ಪ್ರಭುದೇವರ ಟೀಕೆಯಲ್ಲಿ, ನಿಜಲಿಂಗವು ಶುದ್ಧ ಚೈತನ್ಯಸ್ವರೂಪವನ್ನು ಪಡೆಯುತ್ತದೆ. ಇವರು ಹೇಳುವ ಶಿಲಾಲಿಂಗವು ಕೇವಲ ಪ್ರತೀಕವಾಗಿ ನಿಲ್ಲುತ್ತದೆ. 'ಕಲ್ಲು ದೇವರೆಂದು ಪೂಜಿಸುವರು, ಆಗದು ಕಾಣಿರೋ.... ಮುಂದೆ ಹುಟ್ಟುವ ಕೂಸಿಂಗೆ ಇಂದು ಮೊಲೆಯ ಕೊಡುವಂತೆ, ಗುಹೇಶ್ವರಾ!'ಎನ್ನುವಲ್ಲಿ ಪ್ರತೀಕವು ಕೇವಲ ಕುರುಹಾಗಿ ಪರಿಣಮಿಸುತ್ತದೆ. ಲಿಂಗಕ್ಕೆ ಮುಖ್ಯತೆಯಿಲ್ಲ. ಮೂರ್ಖನಾದವನು ಮಾತ್ರ ಕುರುಹನ್ನು ದೇವರೆಂದು ಭಾವಿಸುತ್ತಾನೆ. ಇಲ್ಲಿ ಕಲ್ಲು, ಮಣ್ಣು, ಗಿಡಗಳೆಲ್ಲ ದೇವರಾಗಲು ಸಾಧ್ಯವಿಲ್ಲವೆಂಬುದು ವಚನವಾಣಿ. ದೇವರು ಚೈತನ್ಯನೂ, ಅದೃಶ್ಯನೂ, ಸ್ವರೂಪನೂ, ನಿರಾಕಾರನೂ ಆಗಬಲ್ಲ. ಆ ಗುಡಿ, ಈ ಗುಡಿಗಳೆಂಬ ಕಲ್ಪನೆಯಲ್ಲಿ ಮನೋಕ್ಲೇಶಸಿದ್ಧಿ ಮಾತ್ರ. ಆದುದರಿಂದ ದೇಹವೇ ದೇಗುಲ, ಆತ್ಮನೇ ಪರಮಾತ್ಮವೆಂಬುದು ವಚನತತ್ವ. 'ಭಕ್ತಿಯುಕ್ತಿಯನಾರು ಬಲ್ಲರು ? ಬಲ್ಲವರನಾರನೂ ಕಾಣೆ. ತನ್ನ ಮರೆದು, ಇದಿರ ಹರಿದು ಇರಬಲ್ಲಡೆ, ಆತ ಭಕ್ತ'ನೆಂಬುದು ಪ್ರಭುದೇವರ ಭಕ್ತಿಸೂಕ್ತ. ಆದರೆ ಬಸವಣ್ಣನವರು ತಮ್ಮ ಅಸಾಧಾರಣವಾದ ಭಕ್ತಿಯಲ್ಲಿ ವಿರುದ್ಧವಾದಂತಹುದು ಸಮವಾಗಬಲ್ಲುದು ಎನ್ನುತ್ತಾರೆ. ಇದಕ್ಕೆ ಅವರಲ್ಲಿರುವ ಭಕ್ತಿಯಲ್ಲಿ ಅವರಿಗಿರುವ ದೃಢತೆ, ನಂಬಿದ ಭಗವಂತನಲ್ಲಿರುವ ವಿಶ್ವಾಸವೇ ಇದಕ್ಕೆ ಕಾರಣವಾಗುತ್ತದೆ.

ನೀನೊಲಿದರೆ ಕೊರಡು ಕೊನರುವುದಯ್ಯಾ
ನೀನೊಲಿದರೆ ಬರಡು ನಯವಹುದಯ್ಯಾ
ನೀನೊಲಿದರೆ ವಿಷವೆಲ್ಲ ಅಮೃತವಹುದಯ್ಯಾ
ನೀನೊಲಿದರೆ ಸಕಲ ಪದಾರ್ಥವು ಇದಿರಲ್ಲಿಪ್ಪವು ಕೂಡಲಸಂಗಮದೇವಾ ॥[೪೮]

ಇಲ್ಲಿಯ ಕಲ್ಪನೆಯಲ್ಲಿರುವುದು ಅಪರೂಪದ ಸತ್ಯ. ಈ ಮೂಲಕ ಭಕ್ತಿಯ ರಹಸ್ಯವೊಂದು ಮನವರಿಕೆಯಾಗುತ್ತದೆ. ಆ ರಹಸ್ಯವಿರುವುದು ಭಗವತ್ಪ್ರೇಮದ ಮೈಮರೆಯುವಿಕೆಯಲ್ಲಿ. ಈ ಭಕ್ತಿಯಲ್ಲಿ ದೃಢತೆಯಿದೆ; ನಿಷ್ಠೆಯೂ ಇದೆ. ಅಂತೆಯೇ ಧೀರಭಕ್ತಿ, ದೃಢನಿಷ್ಠೆ ಜೊತೆಗೆ ದೈನ್ಯತೆಯ ಪರಿಪಾಕವೂ ಇಲ್ಲಿ ಕಾಣಲು ಸಾಧ್ಯವಾದರೆ,–

ಚಕೋರಕೆ ಚಂದ್ರಮನ ಬೆಳಕಿನ ಚಿಂತೆ
ಅಂಬುಜಕೆ ಭಾನುವಿನ ಬರುವಿಕೆಯ ಚಿಂತೆ
ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ
ಎನಗೆ ನಮ್ಮ ಕೂಡಲಸಂಗಮದೇವನೊಲಿವ ಚಿಂತೆ "

ಎಂಬಲ್ಲಿ ಬಸವಣ್ಣನವರ ಕಾವ್ಯಭಕ್ತಿಯ ಭಾವಧಾರೆಯಲ್ಲಿ ಪ್ರತಿಮಾಶಕ್ತಿಯೇ ಹರಿಯುತ್ತದೆ. ಅವರಿಗೆ ಭಗವಂತನ ನೆನಪೆನ್ನುವುದೇ ಉದಯಕಾಲ. ಒಂದು ದೃಷ್ಟಿಯಲ್ಲಿ ಇದು ನಿಸ್ಸೀಮಭಕ್ತನ ಭಕ್ತಿಭಾವಧಾರೆಯೂ ಕೂಡ. ಅಂತರಾರ್ಥ ಚಿಂತನೆಯಲ್ಲಿ ಸಂಪೂರ್ಣವಾದ ಐಕ್ಯಾನುಭವವೇ ಇಲ್ಲಿಯ ಭವಿಷ್ಯೋದ್ದೇಶವಾದರೂ, ವಾಸ್ತವದಲ್ಲಿ ಮಾತ್ರ ದೀನನಾಗಿ ಕೂಡಲಸಂಗಮನ ಸೇವನೆಯನ್ನು ಮಾಡಲು ಹೊರಡುತ್ತಾರೆ. ಅದಕ್ಕಾಗಿಯೇ ತನ್ನ ಕಾಯವನ್ನು ದಂಡಿಗೆಯನ್ನಾಗಿ, ಶಿರವನ್ನು ಸೋರೆಕಾಯಿಯನ್ನಾಗಿ, ತನ್ನ ದೇಹದ ನರಗಳನ್ನು ತಂತಿಯನ್ನಾಗಿ, ಬೆರಳನ್ನು ಕಡ್ಡಿಯನ್ನಾಗಿ ಮಾಡಲು ಮುಂದಾಗುತ್ತಾರೆ. ಇದೊಂದು ರೀತಿಯಲ್ಲಿ ಆತ್ಮನಿವೇದನದ ಭಕ್ತಿರೂಪವನ್ನು ತೋರಿಸುತ್ತದೆ. ಇಲ್ಲಿ ಆತ್ಮಾರ್ಪಣೆಯಿದೆ. ಹೀಗಾದರೆ ಮಾತ್ರ ಭಕ್ತಿಯ ಹೃದಯದಲ್ಲಿ ಪರಮಾತ್ಮನು ಬಂದು ನೆಲಸುತ್ತಾನೆ. ಇದೇ ಬಸವೇಶ್ವರರು ಕಂಡ ಅದ್ವೈತಭಕ್ತಿ, ಸಮರಸಭಕ್ತಿ. ಇದೇ ತತ್ವವನ್ನು ಅಕ್ಕಮಹಾದೇವಿಯೂ ಕೂಡ ಅನುಮೋದಿಸುತ್ತಾಳೆ.

ತನು ನಿಮ್ಮ ರೂಪಾದ ಬಳಿಕ ಆರಿಗೆ ಮಾಡುವೆ ?
ಮನ ನಿಮ್ಮ ರೂಪಾದ ಬಳಿಕ ಆರ ನೆನೆವೆ ?
ಪ್ರಾಣ ನಿಮ್ಮ ರೂಪಾದ ಬಳಿಕ ಆರನಾರಾಧಿಸುವೆ ?
ಅರಿವು ನಿಮಲ್ಲಿ ಸ್ವಯವಾದ ಬಳಿಕ ಆರನರ್ಚಿಸುವೆ ?ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮಿಂದ ನೀವೆ ಯಾರಿಗಾಗಿ, ನಿಮ್ಮನೇ ಅರಿವುತಿರ್ದೆನು. "

ಎನ್ನುವ ಭಕ್ತಿಯೋಗದಲ್ಲಿ ತಾನೂ ಕೂಡ ಅದ್ವೈತಭಕ್ತಿಯನ್ನು ಕಂಡುಕೊಳ್ಳುತ್ತಾಳೆ.

ಮುಕ್ತಿಸಾಧನಗಳಲ್ಲಿ ಕರ್ಮವೂ ಒಂದು. ಆದರೆ 'ಕರ್ಮವೆಂಬುದರ ಶಬ್ದಾರ್ಥ ಮಾತ್ರ ವ್ಯಾಪಕವಾದುದು. ಕರ್ಮವು ಭಕ್ತಿ, ಧ್ಯಾನ, ಏಕಾಗ್ರತೆ.... ಇವೆಲ್ಲವನ್ನು ಒಳಗೊಂಡಿರುವುದು ಮಾತ್ರವಲ್ಲದೆ, ಕರ್ಮಕ್ಕೆ ವಿರುದ್ಧವೆನಿಸಿದ ನಿದ್ರೆ, ವಿಶ್ರಾಂತಿಗಳೂ ಕರ್ಮಾಧೀನ. ಜ್ಞಾನ ಮತ್ತು ಭಕ್ತಿಯು ಅನುಕ್ರಮವಾಗಿ ಬುದ್ಧಿ ಮತ್ತು ಭಾವನೆಯನ್ನು ಅವಲಂಬಿಸಿರುವಂತೆ, ಕರ್ಮವು ಕ್ರಿಯಾಶಕ್ತಿ ಅಥವಾ ಸಂಕಲ್ಪಶಕ್ತಿಯನ್ನು ಅವಲಂಬಿಸಿದೆ. ನಿರ್ದೋಷ, ನಿರೀಕ್ಷಣೆ, ಶುದ್ಧ ತರ್ಕ, ಏಕಾಗ್ರತೆಗಳು ಶುದ್ಧಜ್ಞಾನದಲ್ಲಿ ಅಡಕವಗಿರುವಂತೆ, ದೃಢ, ಅನನ್ಯ, ಅಹೇತುಕ ಪ್ರೇಮವು ಭಕ್ತಿಮಾರ್ಗಕ್ಕೆ ಮುಖ್ಯವಾಗಿರುತ್ತದೆ. ಆದರೆ ಇಲ್ಲಿಯ ಮುಕ್ತಕರ್ಮಕ್ಕೆ ನಿರ್ಮಲ ನಿರ್ಣಯಶಕ್ತಿ, ನಿಷ್ಕಾಮತೆ, ನಿರಂಹಂಕಾರ, ಉತ್ಸಾಹ ಭರಿತವಾದ ಕರ್ಮಶಕ್ತಿಯೇ ಅವಶ್ಯವೆಂದು ವಚನಸಾಹಿತ್ಯವು ಸಮರ್ಥಿಸುತ್ತದೆ.

ವಚನಕಾರರು ಹೇಳುವ ಕರ್ಮವು ಸಾಧಕನನ್ನು ಬಂಧಕನನ್ನಾಗಿಸದೆ ಮುಕ್ತನನ್ನಾಗಿ ಮಾಡುತ್ತದೆ. ಅದನ್ನೇ ಅವರು 'ಯೋಗಯುಕ್ತ ಕರ್ಮ' ವೆಂದು ಹೇಳಿದರು.[೫೧] ಇಲ್ಲಿ ದೇಹಾಪೋಷಣೆ ಅಗತ್ಯ. ಹಾಗಾಗಿ ಅದು ಕರ್ಮಾದೀನ. ಅಡುಗೆ, ಊಟವಿಲ್ಲದಿದ್ದರೆ ಕರ್ಮವು ಶೂನ್ಯ. ಆದುದರಿಂದ ಜೀವಕ್ಕೆ ಮತ್ತು ಜೀವನಕ್ಕೆ ಕರ್ಮವೆಂಬುದು ಮುಖ್ಯ. ಇಲ್ಲಿ ಕ್ರಿಯೆಯಿಂದಲೇ ಸಿದ್ಧಿಪ್ರಾಪ್ತಿ. ಗತಿಮತಿ, ಕರಣಗಳೆಲ್ಲವು ಕರ್ಮೋದ್ದಿಶ್ಯವಾಗಿರಲೇಬೇಕು. ಆದುದರಿಂದಲೇ ಬಸವಣ್ಣನವರು, 'ಕರ್ಮವೆಂಬ ಅಂಕದೊಡನೆ ತೊಡರಿದೆ, ಕೆಡಹುವೆನಂಕವ'ವೆನ್ನುತ್ತಾರೆ. ಆದರೆ ಇಲ್ಲಿಯ ವಚನದಲ್ಲಿ ನಾವು ಕಾಣುವುದು ವೀರಭಕ್ತನ ಭಾಷೆಯನ್ನು. ಸಾವೆಂಬುದು ಸನ್ನಿಹಿತವಾದರೂ ಕರ್ತವ್ಯಕರ್ಮವನ್ನು ಬಿಡೆನೆಂಬುದು ಅವರ ಕರ್ಮಭಾಷೆಯಾಗಿ ನಿಲ್ಲುತ್ತದೆ.

ವಚನಗಳಲ್ಲಿ ಪ್ರತಿಪಾದಿತವಾಗಿರುವ ಭಕ್ತಿಸ್ವರೂಪದಲ್ಲಿ ಧ್ಯಾನಯೋಗವೂ ಒಂದು. ಆದರೆ ಅದಕ್ಕೆ ಚಿತ್ತಸಮಯಬೇಕು. ಇದು ಆಕಾರ ಮತ್ತು ವಿಕಾರಗಳಲ್ಲಿ ವ್ಯವಹರಿಸುತ್ತಲೇ ಇರುತ್ತದೆ. ಇಲ್ಲಿ ಧ್ಯಾನಯೋಗಿಯಾದವನು ನಾದ, ಬಿಂಧು, ಜ್ಯೋತಿ, ಅಮೃತ, ಓಂಕಾರ........ಹೀಗೆ ಯಾವುದಾದರೊಂದು ಪ್ರತೀಕವನ್ನಿಟ್ಟುಕೊಂಡು ಧ್ಯಾನಸಿದ್ಧನಾಗುತ್ತಾನೆ. ಈತನ ಅಂತರಂಗದಲ್ಲಿ ಬೆಳಗುವ ಜ್ಯೋತಿಯು ಸರ್ವಜ್ಯೋತಿಗಳಿಗೆ ಪರಾಶ್ರಯವಾಗಿ, ಒಳ ಹೊರಗನ್ನು ತೆರಹಿಲ್ಲದೆ ವ್ಯಾಪಿಸುತ್ತದೆ. ಅಲ್ಲದೆ ಜ್ಯೋತಿರ್ಲಿಂಗವನ್ನು ನೆನೆದು ಸುಖಿಯಾಗುತ್ತದೆ. ಆಶೆ, ರೋಷ, ಹರುಷಾದಿಗಳೆಂಬ ಶರಣೇಂದ್ರಿಯಂಗಳನ್ನು ಮುಟ್ಟದೆ, ತನುಮನ ಶುದ್ಧಿಗಾಗಿ ಬ್ರಹ್ಮಚರ್ಯೆ, ದಯೆ, ಕ್ಷಮೆ, ದಾನ, ಸತ್ಯ, ಅಕಲ್ಪತೆ, ಅಹಿಂಸೆ, ಆಸ್ತೇಯ, ಮಾಧುರ್ಯ ಮತ್ತು ದಮೆಗಳೆಂಬ ಯಮನಿಯಮಗಳ ಮೂಲಕವಾಗಿ ಆಚಾರ ಶಿವಾಚಾರವನ್ನು ಮಾಡುತ್ತದೆ. ಆದರೆ ಇದು ಧ್ಯಾನಯೋಗಕ್ಕೆ ಮಾತ್ರ ಮೀಸಲಲ್ಲ. ಇಲ್ಲಿಯ ಸಮಗ್ರಭಕ್ತಿಕಲ್ಪನೆಯು ಮಧ್ಯಕಾಲೀನ ವಚನಸಾಹಿತ್ಯದ್ದು. ವಂಚನೆಯಿಲ್ಲದ ಭಾವಶುದ್ಧತೆಯೇ ಇಲ್ಲಿಯ ಮುಖ್ಯ ಆಸ್ತಿಯೆನ್ನಬಹುದು.

ಒಟ್ಟಿನಲ್ಲಿ ವಚನಕಾರರು ಭಕ್ತಿಯ ಭಾವೋನ್ಮಾದದಲ್ಲಿ ಬಳಸುವ ಒಂದೊಂದು ದೃಷ್ಟಾಂತವೂ ಒಂದೊಂದು ಆಕೃತಿಯನ್ನು ಪಡೆಯುತ್ತದೆ. ಅದಕ್ಕೆ ಅವರ ಲೋಕನಿರೀಕ್ಷೆಯೇ ಕಾರಣವಾಗಿರುತ್ತದೆ. ಆ ನಿರೀಕ್ಷೆಯಿಂದ ಹೊರಡುವ ಪ್ರತಿಯೊಂದು ದೃಷ್ಟಾಂತವು ಉಪಮೆಗಳ ಮೂಲಕವಾಗಿಯೋ ಅಥವಾ ಗಾದೆಗಳಾಗಿಯೋ ವ್ಯವಹರಿಸುತ್ತವೆ. ಅದಕ್ಕೆ ಉದಾಹರಣೆಯೆಂಬಂತೆ, 'ಅಂದಣವನೇರಿದ ಸೊಣಗನಂತೆ, ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ ತಳಿರ ಮೇಯಿತ್ತು, ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ, ಹಾವತೋರಿ ಹವಿಯ ಬೇಡುವಂತೆ, ಸಂಸಾರವೆಂಬ ಸರ್ಪ, ಮುರನೇರಿದ ಮರ್ಕಟನಂತೆ, ಬೆಲ್ಲವತಿಂದ ಕೋಡಗದಂತೆ, ಕಬ್ಬತಿಂದ ನರಿಯಂತೆ, ಕಾಂಚನವೆಂಬ ನಾಯಿ, ಕರಿಯು ಕನ್ನಡಿಯೊಳಡಗಿದಂತಯ್ಯ, ಗರುಡನ ಕಂಡು ಸರ್ಪ ಧರೆಗಿಳಿದಂತೆ, ಕೊಯ್ದ ಮೂಗಿಗೆ ಕನ್ನಡಿಯ ತೋರುವಂತೆ, ಮಾವಿನ ಕಾಯೊಳಗೊಂದು ಎಕ್ಕೆಯಕಾಯಿ, ಕತ್ತಲೆ ನುಂಗಿದ ದೀಪದ ಬೆಳಕಿನಂತೆ' ಮೊದಲಾದ ಉಪಮಾಲಂಕಾರಗಳೂ, ಆವ ಹಾವಾದರೇನು ವಿಷವೊಂದೆ, ಆನೆಯ ಮೇಲೆ ಹೋಹವನ ಶ್ವಾನ ಕಚ್ಚಬಲ್ಲುದೆ, ಹಾಲಲದ್ದು ನೀರಲದ್ದು,

ಹೆಂಡದ ಮಡಕೆಯ ಹೊರಗೆ ತೊಳೆವಂತೆ, ಕಾಗೆ ಒಂದಗುಳ ಕಂಡರೆ ಕರೆಯದೆ ತನ್ನ ಬಳಗವನ್ನು, ಬಡವನ ಕೋಪ ಅವುಡಿಗೆ ಮೃತ್ಯು, ಓಡುವಾತ ಲೆಂಕನಲ್ಲ ಬೇಡುವಾತ ಭಕ್ತನಲ್ಲ' ಈ ಮೊದಲಾದ ಗಾದೆಗಳೂ ವಚನಕಾರರ ಸ್ವಯಂ ಪ್ರತಿಭೆಗೆ ಸಾಕ್ಷಿ. ಮುಖ್ಯವಾಗಿ ವಚನಕಾಲದ ಭಕ್ತಿಯು ಧ್ವನಿರಮ್ಯತೆಯನ್ನು ಪಡೆದುಕೊಂಡು ಸಾಹಿತ್ಯದಲ್ಲೂ ಮುಖ್ಯವಾಗುತ್ತದೆ.

೨.೬ ತತ್ತ್ವಪದ ಸಾಹಿತ್ಯ

ಜನಜೀವನವನ್ನು ಹಸನುಗೊಳಿಸಿದ ಹಲವು ಸಾಹಿತ್ಯಗಳಲ್ಲಿ ಕನ್ನಡದ ತತ್ತ್ವಸಾಹಿತ್ಯವೂ ಒಂದು. ಇದು ಅನುಭಾವಿಗಳಿಂದ ರಚಿತವಾಯಿತು. ಅಂತರಂಗದ ಅರಿವಿನ ಮೂಲಭೂತವಾದ ತತ್ತ್ವವನ್ನು ಪ್ರತಿಪಾದಿಸುವ ಪದಗಳಿಗೆ ತತ್ವಪದಗಳೆಂದು ಕರೆಯಲಾಯಿತು.

ಶರಣರ ವಚನಸಾಹಿತ್ಯವೇ ತತ್ವಸಾಹಿತ್ಯವೆಂದು ಕೆಲವರು ಕರೆದುದುಂಟು. ಆದರೆ ಇಲ್ಲಿ ಅಡಕವಾದ ಗಂಭೀರ ಮತ್ತು ಗೂಢಭಾಷೆಯು ಜನಸಾಮಾನ್ಯರಿಗೆ ಸುಲಭವಾಗಿ ತಲುಪದೆ ಹೋಯಿತು. ಈ ದೆಸೆಯಲ್ಲಿ ಅಂತರಂಗದ ತತ್ವಾರ್ಥವನ್ನು ಸುಲಭವಾಗಿ ರಚಿಸಿ ಹಾಡಿದ್ದು ನಿಜಗುಣ ಶಿವಯೋಗಿ ಎಂಬ ಸನ್ಯಾಸಿಗಳು. ಹಾಗಾಗಿ ನಿಜಗುಣರನ್ನೇ ತತ್ವಸಾಹಿತ್ಯದ ಆದ್ಯರೆಂದು ಕರೆಯಬೇಕಾಗುತ್ತದೆ.

ತತ್ವಪದಗಳೆಂದರೆ ಅನುಭಾವಗೀತೆಗಳ ಸಂಕಲನ. ಅಂತರಂಗದ ಅನುಭವಗಳು, ಭಾವನೆಗಳಿಗೆ ಅನುರೂಪವಾದ ರಾಗಗಳು, ಪದವಿನ್ಯಾಸದ ಮಾಧುರ್ಯ, ಪ್ರಾಸದ ಚೆಲುವೆಲ್ಲ ತತ್ವಸಾಹಿತ್ಯದಲ್ಲಿ ಅನ್ಯಾದೃಶವಾಗಿ ನಿಲ್ಲುತ್ತವೆ. ಇಲ್ಲಿ ತ್ರಿಕರಣಗಳೆನಿಸುವ ದೇಹ, ಮಾತು ಮತ್ತು ಮನಸ್ಸುಗಳಲ್ಲಿ ತಪಸ್ಸು ಏರ್ಪಾಡಾಗಬೇಕಾಗುತ್ತದೆ. ಮೊದಲು ಶಿವಪರವಾಗಬೇಕಾದದ್ದು ಮನಸ್ಸು. ಅನಂತರದಲ್ಲಿ ದೇಹ ಮತ್ತು ಮಾತು. ಈ ದೆಸೆಯಲ್ಲಿಯೇ ಪೂರ್ವ ಅನುಭಾವಿಗಳೊಬ್ಬರು 'ಮನವೆಂಬ ಗಿಳಿಯನೊಯ್ಯಾರದೊಳೋವಿ ಮೆಲ್ಲನೆ ಮುದ್ದು ನುಡಿಗಲಿಸೆಲೆ ಮಾನಿನಿ' ಎನ್ನುವ ಮೂಲಕ ಮನಸ್ಸನ್ನು ಗಿಳಿಗೆ ಹೋಲಿಸಿದ್ದಾರೆ. ಆ ಮನಸ್ಸು ಶಿವಶಿವ ಎಂದೋದುವುದನ್ನು ಕಲಿಯಬೇಕೆನ್ನುವಲ್ಲಿ ಒಂದಿಷ್ಟು ಸಾಂಕೇತಿಕತೆ ಅಡಗುತ್ತದೆ. ತತ್ವಪದಗಳ ಪರಂಪರೆಯಲ್ಲಿ ನಿಜಗುಣರ ಅನಂತರದಲ್ಲಿ ಅನುಭಾವಿಯಾಗಿ ಕಂಡುಬಂದವರು ಮುಪ್ಪಿನ ಷಡಕ್ಷರಿಗಳು. ಅವರ 'ಸುಭೋಧಸಾರ'ವೆಂಬ ಕೃತಿಯು,

ಮಾಯೆ ನೀನತಿ ಚೆಲುವು ಕಾಯ ಮುನ್ನವೆ ಚೆಲುವು
ಹೇಯವಾಯಿತು ಒಳಗನರಿತ ಬಳಿಕ ॥ –ಮುಪ್ಪಿನ ಷಡಕ್ಷರಿ

ಎನ್ನುವ ಮೂಲಕ ಮಾಯೆಯ ಆಕರ್ಷಣೆಯನ್ನು ಮತ್ತು ನಶ್ವರತೆಯ ಕಟುಸತ್ಯವನ್ನು ತಿಳಿಸಿಕೊಡುತ್ತದೆ. ಅವರ ಅಧ್ಯಾತ್ಮದಲ್ಲಿ ಅನುಭಾವದ ಸಂಚಾರ ಅದ್ಭುತವಾದುದು. 'ಎನ್ನ ಕಾಯವು ನಿನಗೆ ಉನ್ನತಾಲಯವಾಯಿತಿನ್ನೆನಗೆ

ಭಯವುಂಟೆ ಎಲೆ ಲಿಂಗವೇ' ಎಂಬಲ್ಲಿ ಭಗವಂತನಿಗೋಸ್ಕರವಾಗಿ ದೇಹವನ್ನೇ ಶಿವಾಲಯುವನ್ನಾಗಿಸಲು ಹೊರಡುತ್ತಾರೆ ಷಡಕ್ಷರಿಯವರು.

ಎನ್ನ ಕಾಲೆರಡು ಉನ್ನತದ ಕಂಬವೈ
ಎನ್ನ ಒಡಲೇ ನಿಮಗೆ ದೇವಾಲಯ ।
ಎನ್ನ ತೋಳುಗಳೆರಡು ಉನ್ನತದ ಮದನ ಕೈ
ಎನ್ನ ಶಿರ, ಸೌವರ್ಣ ಕಲಶವಯ್ಯಾ ॥[೩೩] –ಮುಪ್ಪಿನ ಷಡಕ್ಷರಿ

ಇಲ್ಲಿಯ ಸರಳತೆಯೇ ಸಾಮಾನ್ಯರನ್ನು ಮುಟ್ಟುವಲ್ಲಿ ಯಶಸ್ಸಾಗುತ್ತದೆ. ಷಡಕ್ಷರಿಯವರ ನಂತರದಲ್ಲಿ ತತ್ವಸಾಹಿತ್ಯವನ್ನು ಬೆಳೆಸಿದವರಲ್ಲಿ ಚಿದಾನಂದ ಅವಧೂತರು (ಕ್ರಿ.ಶ. ೧೭೦೦), ಸರ್ಪಭೂಷಣ ಶಿವಯೋಗಿಗಳು (ಕ್ರಿ.ಶ. ೧೭೯೫–೧೮೩೯), ಮೈಲಾರ ಬಸವಲಿಂಗ ಶರಣರು ಮುಖ್ಯರು. ಆದರೆ ನಿಜಗುಣರ ಅನುಭಾವುಕತೆಯ ಕಠಿಣ ದಾರಿಯಲ್ಲಿ ಜಾನಪದ ಕಲ್ಪನೆಯನ್ನು ಹೊಸದಾಗಿ ಕಂಡಿರಿಸಿದವರೆಂದರೆ ಸಂತ ಶಿಶುನಾಳ ಷರೀಫರೆನ್ನಬೇಕಾಗುತ್ತದೆ.

ತತ್ವಸಾಹಿತ್ಯ ಸಮೀಕ್ಷೆಯಲ್ಲಿ ತತ್ವಪದ ನಿರ್ಮಾಣಕ್ಕೆ ಜೀವನದ ಅತಿ ಕಿರಿದಾದ ಘಟನೆಗಳೇ ಮುಖ್ಯವಾಗಿ ಬಿಡುತ್ತದೆ. ಇದಕ್ಕೊಂದು ಉತ್ತಮ ಉದಾಹರಣೆಯೆಂದರೆ 'ಅಳಬ್ಯಾಡ ತಂಗಿ ಅಳಬ್ಯಾಡ' ಎನ್ನುವ ಷರೀಫರ ರಚನೆ. ಮದುವೆಯಾದ ಮದುಮಗಳನ್ನು ಗಂಡನ ಮನೆಗೆ ಕಳುಹಿಸಿಕೊಡುವಾಗ, ಆ ಹೆಣ್ಣುಮಗಳು ಅಳಲು ಮುಂದಾಗುತ್ತಾಳೆ. ಆಕೆಯನ್ನು ಸಮಾಧಾನಿಸುವ ರೀತಿಯಲ್ಲೇ ಪ್ರಾರಂಭವಾಗುವ ಈ ಪದವು 'ನಿನ್ನ ಕಳುಹ ಬಂದವರೆಲ್ಲ ಉಳುಹಿ ಕೊಂಬುವರೇನ' ಎನ್ನುವಲ್ಲಿ ಲೌಕಿಕಯಾತ್ರೆಯ ನಶ್ವರತೆಯನ್ನು ತೋರಿಸುವ ಅಧ್ಯಾತ್ಮದ ಚಿಂತನೆಗೆ ಒಳಗಾತ್ತದೆ.

ತತ್ವಪದದ ವಿಶೇಷತೆಯೆಂದರೆ, ಸತಿಪತಿಭಾವದಲ್ಲೂ ಮಧುರಭಕ್ತಿಯನ್ನು ಚೆಲ್ಲುತ್ತದೆ. ಇದಕ್ಕೆ ಷರೀಫರ 'ಎಲ್ಲರಂತಲ್ಲ ನನ ಗಂಡ' ಎಂಬ ಪದವೇ ಉತ್ತಮ ಉದಾಹರಣೆ.

ಕಾಂತೆ ಕೇಳೇ ಕರುಣ ಗುಣದಿಂದ । ಎನ
ಗಿಂಥ ಪುರುಷನು ಬಂದು ದೊರಕಿದ ಪುಣ್ಯ ಫಲದಿಂದ । ಎ
ನ್ನಂತರಂಗದ
ಕಾಂತ ಶ್ರೀಗುರುನಾಥ ಗೋವಿಂದ । ಶಿಶುನಾಳದಿಂದ ॥
ಕಾಂತೆ ಬಾರೆಂತೆಂದು ಕರೆದೇ
ಕಾಂತ ಮಂದಿರದೊಳಗೆ ಒಯ್ದು
ಭ್ರಾಂತಿ ಭವ ದುರಿತವನು ಪರಿಹರಿಸಿ
ಚಿಂತೆಯನು ಮರೆಸಿ–
ಎಲ್ಲರಂತವನಲ್ಲ...॥[೩೪] –ಶಿಶುನಾಳ ಷರೀಫರು

ಒಟ್ಟಿನಲ್ಲಿ ಪ್ರಾಸ, ಭಾವ, ಕಲ್ಪನೆ ಹಾಗೂ ಅನುಬಾವದ ಆಳದಲ್ಲಿ ತತ್ವಸಾಹಿತ್ಯವು ಭಾರತೀಯ ಭಕ್ತಿಚರಿತ್ರೆಯಲ್ಲಿ ಮುಖ್ಯವೆನಿಸುತ್ತದೆ.

೨.೭ ದ್ರಾವಿಡ ಭಾಷೆಗಳಲ್ಲಿ ಭಕ್ತಿ

ಭಾರತದಲ್ಲಿ ಭಕ್ತಿಪರಂಪರೆಯಲ್ಲಿ ದ್ರಾವಿಡಭಾಷಾವರ್ಗದ ಸ್ಥಾನ ಮುಖ್ಯವಾಗುತ್ತದೆ. ಆರ್ಯಭಾಷೆಗಳನ್ನು ಸಂಸ್ಕೃತಜನ್ಯವೆನ್ನುವಂತೆ, ದ್ರಾವಿಡ ಭಾಷೆಗಳನ್ನು ಕೆಲವರು ಸಂಸ್ಕೃತಜನ್ಯವೆಂದು ಹೇಳುವವರಿದ್ದಾರೆ. ಅದೇನೇ ಇದ್ದರೂ ಪಂಚದ್ರಾವಿಡಗಳೆನಿಸಿರುವ ತಮಿಳು, ಕನ್ನಡ, ತೆಲುಗು, ಮಲಯಾಳಂ ಮತ್ತು ತುಳುಭಾಷೆಗಳನ್ನು ಆಡುವ ಪ್ರಾಂತ್ಯದಲ್ಲಿ ಪುರಾತನದಿಂದ ಆವರಿಸಿರುವ ಭಕ್ತಿರೂಪವೊಂದು ಮುಖ್ಯವಾಗುತ್ತದೆ.

ಪಂಚದ್ರಾವಿಡ ಭಾಷೆಗಳಲ್ಲಿ ತಮಿಳುಭಾಷೆಗೆ ಮೊದಲಮಣೆ. ಇಲ್ಲಿಯ ಭಕ್ತಿಸ್ವರೂಪದ ಅಧ್ಯಯನಕ್ಕೆ ಆಳ್ವಾರರ ಪಾಶುರಗಳೇ ಮುಖ್ಯ ಆಕರ. ಇವರ ಭಕ್ತಿಕೀರ್ತನೆಗಳಿಗೆ ಪ್ರಬಂಧಗಳೆಂಬ ಹೆಸರು ರೂಢಿಯಲ್ಲಿ ಬಂದಿದೆ. ಅಲ್ಲದೆ 'ದ್ರಾವಿಡವೇದ', 'ದ್ರಾವಿಡೋಪನಿಷತ್ತು'ಗಳೆಂದೂ ಇವನ್ನು ಕರೆದುದುಂಟು. ಆಳ್ವಾರರು ಎಂದರೆ 'ಆಳವಾಗಿ ಮುಳುವಾಗಿರುವವರು' ಎಂಬರ್ಥ.[೫೫] ದೈವಿಕಕಡಲಲ್ಲಿ ಮುಳುಗಿ ತಳಸ್ಪರ್ಶ ಮಾಡಿದವರೆಂಬ ವಿವರಣೆಯನ್ನು ಕೆಲವರು ನೀಡಿದ್ದಿದೆ. ಸಾಧಾರಣವಾಗಿ ತಮಿಳರಲ್ಲಿ ಭಗವದನುಗ್ರಹಕ್ಕೆ ಪಾತ್ರನಾದ ಅನುಭಾವೀ ಸಂತನನ್ನು 'ಆಳ್ವಾರ' ನೆಂಬ ಹೆಸರಿನಲ್ಲಿ ಕರೆಯುವುದು ರೂಢಿ. ಆದರೂ ಶ್ರೀವೈಷ್ಣವರಲ್ಲಿ ಆಳ್ವಾರರೆಂದು ಕರೆಯಲು ಮಾನ್ಯರಾದವರು ಕೇವಲ ಹತ್ತು-ಹನ್ನೆರಡು ಮಂದಿಮಾತ್ರ. ಆದರೆ ಇವರುಗಳು ಬೇರೆಬೇರೆ ಜಾತಿ, ಕಾಲ, ವೃತ್ತಿಗೆ ಸಂಬಂಧಿಸಿದವರು. ಅವರಿಗೆ ಭಕ್ತಿಯ ಭಾವುಕತೆಯಲ್ಲಿ ಜಾತಿಯು ಮೌನವಾಗುತ್ತದೆ. ಆದರೂ ಅವರ ಕವಿತಾಶಕ್ತಿಯಲ್ಲಿ ಕಾಣುವುದು ಅದ್ಭುತವಾದ ವಿಷ್ಣುಭಕ್ತಿಯೆಂಬುದು ಮುಖ್ಯವಾದುದು.

ಈ ಆಳ್ವಾರರ ಕಾಲ ಕ್ರಿ.ಪೂ. ೪೨೦೩ ರಿಂದ ಕ್ರಿ.ಪೂ. ೨೭೦೬ ವರೆಗೆ.[೫೬] ಆದರೆ ಈ ಹೇಳಿಕೆಗೆ ಸಮರ್ಪಕವಾದ ಆಧಾರವಿಲ್ಲ. ಕ್ರಿ.ಶ. ೭ ರಿಂದ ಕ್ರಿ.ಶ. ೯ ನೇ ಶತಮಾನದವರೆಗೆ ಎಂಬುದು ಕೆಲವು ವಿದ್ವಾಂಸರ ಅಭಿಪ್ರಾಯ. ಚೈತನ್ಯಪಂಥ, ದಾಸಪಂಥಗಳಂತೆ ಹರಿಸರ್ವೋತ್ತಮತ್ವವೇ ಇವರ ಪಾಶುರ ರಚನೆಗಳ ಮೂಲವಸ್ತು. ಜಾತಿ, ಮತ, ಲಿಂಗ ಭೇದವಿಲ್ಲದ ಈ ಆಳ್ವಾರರುಗಳಲ್ಲಿ ಮಧುರಕವಿ, ಪೆರಿಯಾಳ್ವಾರ್ ಮತ್ತು ತೊಂಡರಡಿಪ್ಪೊಡಿ ಎಂಬ ಮೂವರು ಆಳ್ವಾರರುಗಳು ಪ್ರಸಿದ್ಧರು.

ಪೊಯ್ಗೈ, ಪೂದತ್ತ ಮತ್ತು ಪೇಯ್ ಎಂಬ ಮೂವರು ಆಳ್ವಾರರುಗಳು ತಮಿಳು ಸಂತರುಗಳಲ್ಲಿ ಮುಖ್ಯರಾದರೂ ಇವರ ಕುರಿತು ಹೆಚ್ಚಿನ ವಿವರಗಳಿಗೆ ಪ್ರಮಾಣಗಳ ಕೊರತೆಯಿದೆ. ಆದರೂ ಈ ಮೂವರುಗಳೂ ಪುಷ್ಪಸಂಜಾತರೆಂದು ಇರುವ ದಾಖಲೆಗಳು ತಿಳಿಯಪಡಿಸುತ್ತವೆ.' ಪೊಯ್ಗೈ ಆಳ್ವಾರರು ಕಾಂಚೀಪುರದ ದೇವಾಲಯದ ತಟಾಕವೊಂದರ ಸ್ವರ್ಣಕಮಲದಲ್ಲಿ ಜನಿಸಿದರೆಂದೂ, ಪೂದತ್ತರು ಮಹಾಬಲಿಪುರದ ಮಾಧವೀಪುಷ್ಪದಲ್ಲಿ ಜನ್ಮವನ್ನು ತಾಳಿದರೆಂದೂ, ಪೇಯಾಳ್ವಾರರು ಮೈಲಾಪುರದ ಕೆರೆಯ

ಕೆಂದಾವರೆಯಲ್ಲಿ ಸೃಜಿಸಿದರೆಂದೂ ಹೇಳಲಾಗುತ್ತದೆ. ಈ ಮೂವರು ಆಳ್ವಾರರು ರಚಿಸಿದ 'ಅಂತಾದಿ'ಗಳೆಂಬ ಪಾಶುರಗಳು 'ವೇಣ್ಬಾ'ವೆಂಬ ಛಂದಸ್ಸಿನಿಂದ ಕೂಡಿದ್ದು, ಪರಾಭಕ್ತಿಯ ಮೂಲಕವಾಗಿ ಭಗವಂತನನ್ನು ಅಂತರ್‌ದೃಷ್ಟಿಯಿಂದ ಹೊಗಳಿದ್ದಾರೆ.

ವೈಯಂ ತಗಳಿಯೂವಾರ್ ಕಡಲೇ ನೆಯ್ಯಾಗ
ವೆಯ್ಯ ಕದಿರೋನ್ ವಿಳಕ್ಕಾಗ ಶೆಯ್ಯ
ಶುಡರಾ ಯಾನಡಿಕ್ಕೇ ಶೂಟ್ಟಿನೇನ್ ಶೊನ್ ಮಾಲೈ
ಇಡರಾ ನೀ ವೇ ಯೆನು ॥[೩೭]

ಇದು ಪೊಯ್ಗೈ ಆಳ್ವಾರರು ಕಂಡಿರುವ ಪ್ರಕೃತಿಪೂಜೆ. ಇಲ್ಲಿ 'ವಿಶ್ವವೇ ಹಣತೆಯಾಗಿ, ಶರಧಿಯೇ ತುಪ್ಪವಾಗಿ ದೀಪಕ್ಕೆ ಆಧಾರ ವಾಗುತ್ತದೆ. ಹಣತೆಗೆ ದೀಪವನ್ನು ಬೆಳಗಿಸುವಾತ ಸೃಷ್ಟಿಕರ್ತನಾಗುತ್ತಾನೆ'. ಇದು ಪೊಯ್ಗೈ ಆಳಾರರ ಪ್ರಾಕೃತಿಕ ಆರಾಧನೆಯಾದರೆ ಪೂದತ್ತಾಳ್ವಾರರು ತಮ್ಮ 'ತಿರುವಂದಾದಿ' ಪಾಶುರದಲ್ಲಿ ಅಂತಸ್ಸತ್ವ ಪೂಜೆಯನ್ನು ಕೈಗೊಳ್ಳುತ್ತಾರೆ.

ಅನ್ಬೇ ತಗಳಿಯಾ ಆರ್ವಮೇ ನೆಯ್ಯಾಗ
ಇನ್ಬುರುಗಿ ಶೆನ್ದೈಯಿಡು ತಿರಿಯಾ ನನ್ಬುರುಗಿ
ಜ್ಞಾನ ಚ್ಚುಡರ್ ವಿಳಕ್ಕೇತ್ತಿನೇನ್ ನಾರಣಮ್ಕಿ
ಜ್ಞಾನತ್ತಮಿರ್ ಪುರಿನ್ದ ನಾನ್ ॥[೩೮]

ಇಲ್ಲಿ ಭಕ್ತಿಯ ಹಣತೆಯನ್ನು ಹಚ್ಚಿ, ಆ ಮೂಲಕ ದಿವ್ಯಸ್ವರೂಪವನ್ನು ಆಳ್ವಾರರು ಕಂಡಿದ್ದಾರೆ. ಮೂರನೆಯವರಾದ ಪೇಯಾಳ್ವಾರರದು ಭಕ್ತಿಭಾವದ ಅನುಭೂತಿ. ಅವರ ಭಕ್ತಿದೃಷ್ಟಿಯ ದಿವ್ಯಸೃಷ್ಟಿ ಅವರ ರಚನೆಗಳಲ್ಲಿ ಗೋಚರವಾಗಲು ಸಾಧ್ಯ.

ತಿರುಕ್ಕಣ್ಡೇನ್ ಪೊನ್ ಮೇನಿ ಕಣ್ಡೇನ್ ತಿಗಮಿಮ್
ಅರುಕ್ಕವಣಿನಿ ಮುಂ ಕಣ್ಡೇನ್ ಶೆರಕ್ಕಿಳರುಮ್
ಪೊನ್ನಾ ಕಣ್ಡೇನ್ ಪುರಿಶ ಕಣ್ಡೇನ್
ಏನ್ನಾವಿವಣ್ಣನ್ ಪಾಲಿನ್ನು ॥ [೩೯]

ಇಲ್ಲಿ ವಿಶ್ವದ ಅನೇಕ ಮುಖಗಳನ್ನು ವಿಷ್ಣುವಿನಲ್ಲಿ ಕಾಣುವ ಚೆಲುವಾದ ಪ್ರಯತ್ನವೊಂದು ನಿರ್ಮಾಣವಾಗಿದೆ. ಆಳ್ವಾರರು ಕಾಣದ ದೈವತ್ವದ ಕಲ್ಪನೆಯಲ್ಲಿ ದಿವ್ಯಾನುಭೂತಿಯಿದ್ದರೆ, ಕನ್ನಡದ ವಿದ್ವಾಂಸರಾದ ಮಾಸ್ತಿಯವರು ಈ ಕುರಿತು ಮಾಡಿದ ಭಾಷಾಂತರದಲ್ಲಿ ಗೇಯತೆಯ ರಚನಾವಿನ್ಯಾಸ ನಿರ್ಮಾಣವಾಗಿದೆ.[೪೦]

ದಾಸಸಾಹಿತ್ಯದಂತೆಯೇ ಪಾಶುರಗಳಲ್ಲೂ ನಾವು ಕಾಣುವುದು ಶ್ರೀಹರಿಯ ದಿವ್ಯದರ್ಶನ. ಶ್ರೀಕೃಷ್ಣನ ಜನ್ಮ, ಗೊಲ್ಲತಿಯರಿಂದ ಮಜ್ಜನ, ಲಾಲಿಹಾಡುಗಳು, ಮಾತೃವಾತ್ಸಲ್ಯಗೀತೆ, ನೀಲಕೃಷ್ಣನ ಅಂಬೆಗಾಲಾಟ... ಇವೆಲ್ಲವೂ ಇಲ್ಲಿಯ ಸೊಗಸಾದ ರಚನೆಗಳು. ಇದಕ್ಕೆ ಪೆರಿಯಾಳ್ವಾರರ ಅಥವಾ ಶ್ರೀವಿಷ್ಣುಚಿತ್ತರ

'ತಿರುಪ್ಪಲ್ಲಾಂಡು' ಕೃತಿಯ 'ಪಲ್ಲಾಂಡು ಪಲ್ಲಾಂಡು ಪಲ್ಲಾಯಿರತ್ತಾಂಡು ಪಲಕೋಟಿ ನೂರಾಯಿರಮುಂ, ಮಲ್ಲಾಂಡ ತಿಣ್‌ತೋಳ್ ಮಣಿವಣ್ಣಾವುನ್ ಶೆವ್ವಿಡಿ ಶೆವ್ವಿ ತಿರುಕ್ಕಾಪ್ಪು'(ಭಗವಂತನೇ, ನಿನಗೆ ಮಂಗಳವು. ಮಲ್ಲರನ್ನು ಸೋಲಿಸಿದ ನಿನ್ನ ತೋಳ್ಬಲಕ್ಕೆ ಮಂಗಳವು, ನೀನು ಸಹಸ್ರ ಕೋಟಿ ವರ್ಷಗಳವರೆಗೆ ಸುಖವಾಗಿರು. ಕೆಂಪು ವರ್ಣದ ನಿನ್ನ ಪಾದಗಳಿಗೆ ರಕ್ಷೆಯಿರಲಿ) ರಚನೆಯು ಉದಾಹರಣೆಯಾಗಿ ನಿಲ್ಲುತ್ತದೆ. ಇಂತಹ ರಚನೆಗಳು ಇಷ್ಟಕ್ಕೇ ನಿಲ್ಲುವುದಿಲ್ಲ.

ಅಡಿಯೋ ಮೋಡುಂ ನಿನ್ನೋಡುಂ ಪಿರವಿನ್ರಿ ಯಾಯಿರಂ ಪಲ್ಲಾಂಡು ।
ವಡಿವಾಯ್ ನಿನ್ವಲ ಮಾರ್ಪಿನಿಲ್ವಾಳ್ ಕಿನ್ರ ಮಂಗೆಯುಂ ಪಲ್ಲಾಂಡು ॥

ವಡಿವಾರ್ ಶೋದಿ ಪಲತ್ತುರೆಯುಂ ಶುಡರಾಳಿಯುಂ ಪಲ್ಲಾಂಡು ।
ಪಡೆ ಪ್ಪೋರ್ ಪುಕ್ಕು ಮುಳುಂಗುಂ ಅಪ್ಪಾಂಚ ಜನ್ನಿಯಮುಂ ಪಲ್ಲಾಂಡು ॥

–ಶ್ರೀವಿಷ್ಣುಚಿತ್ತರ 'ತಿರುಪ್ಪಲ್ಲಾಂಡು' ಕೃತಿ

(ಶೇಷಭೂತರಾದ ನಮಗೂ ಶೇಷಿಯಾದ ನಿನಗೂ ಸಂಬಂಧ ವೃದ್ಧಿಸಲಿ. ನಿನ್ನ ಹೃದಯವಾಸಿನಿಯಾದ ಶ್ರೀಲಕ್ಷ್ಮೀ ದೇವಿಗೆ ಮಂಗಳವು. ನಿನ್ನ ಕೈ ಧಾರಣೆ ಮಾಡಿದ ಪಾಂಚಜನ್ಯ, ಸುದರ್ಶನಕ್ಕೆ ಮಂಗಳವು.)

ಭಕ್ತಿಯ ಪಾಶುರಗಳು ಇನ್ನಷ್ಟು ವಿಸ್ತೃತಗೊಳ್ಳುತ್ತವೆ. ಅದೆಷ್ಟೋ ಪಾಶುರಗಳು ಅದರ ರಚನೆ ಮತ್ತು ಗೇಯವಿನ್ಯಾಸದಲ್ಲಿ ದಾಸಸಾಹಿತ್ಯವನ್ನು ಹೋಲುತ್ತವೆ. 'ಜೋಜೋ ಶ್ರೀಕೃಷ್ಣ ಪರಮಾನಂದ', ಮಂಗಳಕೀರ್ತನೆಗಳಲ್ಲಿ ಬರುವ 'ಬಲಿಯೊಳು ದಾನವ ಬೇಡಿದಗೆ_ಆ ಮಹಾಕ್ಷತ್ರಿಯರ ಗೆಲಿದವಗೆ' ಎಂಬ ಮೊದಲಾದ ಸಾಲುಗಳು ಪಾಶುರಗಳನ್ನು ನೆನಪಿಸುತ್ತವೆ. ಆದರೂ ಇಲ್ಲಿಯ ಪಾಶುರಗಳಲ್ಲಿ ಎದ್ದುತೋರುವ ಅಂಶವೆಂದರೆ, ಪಂಚಸಂಸ್ಕಾರಗಳು. ೧. ತಾಪ_ಚಕ್ರಾಂಕನ, ೨. ಪುಂಡ್ರ_ದ್ವಾದಶ ನಾಮಧಾರಣೆ, ೩. ನಾಮ_ಆಚಾರ್ಯರಿಟ್ಟ ಹೆಸರು, ೪. ಮಂತ್ರ_ದ್ವಯ, ಚರಮ, ಮೂಲಮಂತ್ರಗಳ ಉಪದೇಶ, ೫. ಯಾಗ_ಭಗವದಾರಾಧನೆ. ಇದನ್ನು ಆಚಾರ್ಯರ ಮೂಲಕ ಹೊಂದುವವರು 'ವೈಷ್ಣವ'ರೆಂದು ಪ್ರಾಚೀನ ತಮಿಳರ ಅಭಿಪ್ರಾಯ. ಇದನ್ನು ಮೊದಲು ತೋರಿಸಿಕೊಟ್ಟವರು ವಿಶ್ವಕ್ಸೇನರೆಂಬುದು ತಮಿಳರ ಅಭಿಮತ.

ಪಾಶುರಗಳ ತತ್ವಾದರ್ಶ : ಪರಮದೇವನೇ ಪರಮಪುರುಷನೆಂಬ ತಾತ್ವಿಕವಾದ ವಿಚಾರ ಪಾಶುರಗಳದ್ದು. ಜೀವಾತ್ಮರೆಲ್ಲ ಭಗವಂತನ ಆಸ್ತಿಯೆಂಬ ಪ್ರಾಚೀನಕಲ್ಪನೆ ಪಾಶುರಕ್ಕೂ ಬಂದಿಳಿಯಿತು. ಇವರಿಗೆ ಭಗವಂತನೇ ವಿಘ್ನನಿವಾರಕ ಹಾಗೂ ಮಾರ್ಗದರ್ಶಿ. ಭಕ್ತಿಸಾರರ 'ತಿರುಚ್ಛಂದವಿರುತ್ತಮ್'ಎಂಬ ೧೨೦ ಪಾಶುರಗಳ ದೀರ್ಘಪ್ರಬಂಧದ ಮೊದಲ ಪದ್ಯವೊಂದು ತಾತ್ವಿಕವಾಗಿ ಹೀಗೆ ವಿವೇಚನೆ ನಡೆಸುತ್ತದೆ.

ಪೂನಿಲಾಯ ವೈನ್ದುಮಾಯ್ ಪುನರ್ಕಣಿನ್ವನಾನ್ರು ಮಾಯ್
ತೀನಿಲಾಯ ಮೂನ್ರುಮಾಯ್ ಚಿರನ್ದ ಕಾಲಿರಣ್ಡುಮಾಯ್

ಮೀನಿಲಾಯ ದೊನ್ರುಮಾಯ್ ಮೆಯ್ಯಿನೋಡು ಪೊಯ್ಯುಮಾಯ್
ಊರೆಡೋಶೈಯಾಯವೈನ್ದುಮ್ ಆಯಮಾಯಮಾಯನೇ ॥[೬೦]

ಭೂಮಿಯಲ್ಲಿ ಐದಾಗಿ (ಪೃಥ್ವೀ ಗುಣಪಂಚಕ_ಶಬ್ದ, ಸ್ಪರ್ಶ, ರೂಪ, ರಸ ಹಾಗೂ ಗಂಧ), ಜಲದಲ್ಲಿ ನಾಲ್ಕಾಗಿ (ಶಬ್ದ, ಸ್ಪರ್ಶ, ರೂಪ ಮತ್ತು ರಸ), ಅಗ್ನಿಯಲ್ಲಿ ಮೂರಾಗಿ (ಶಬ್ದ, ಸ್ಪರ್ಶ ಹಾಗೂ ರೂಪ), ವಾಯುವಿನಲ್ಲಿ ಎರಡಾಗಿ (ಶಬ್ದ, ಸ್ಪರ್ಶ), ಆಕಾಶದಲ್ಲಿ ಒಂದಾಗಿ (ಶಬ್ದ ಮಾತ್ರ)...ಇವೆಲ್ಲವುಗಳಿಂದಲೂ ಭಿನ್ನತೆಯನ್ನು ಕಂಡುಕೊಂಡು ಅರಿಯ ಬಲ್ಲವರು ಯಾರು? ಎಂಬ ತಾತ್ವಿಕಪ್ರಶ್ನೆ ಈ ಪಾಶುರದಲ್ಲಿದೆ. ಇಂತಹ ಸೂಕ್ಷ್ಮರೀತಿಯ ತಾತ್ವಿಕ ವಿಚಾರಗಳೇ ಇಲ್ಲಿಯ ವಿಶೇಷತೆ. ಇಂತಹ ತತ್ವವೇತ್ತ ರಚನೆಗಳು ದಾಸಸಾಹಿತ್ಯದಲ್ಲೂ ಲಭ್ಯ.

ಪಾಶುರಗಳಲ್ಲಿ ಹರಿಸರ್ವೋತ್ತಮತ್ವ : ತಮಿಳುಪಾಶುರಗಳ ರಚಯಿತರು ಶ್ರೀಹರಿಯನ್ನೇ ನಂಬಿ ಬದುಕಿದವರು. ಹಾಗಾಗಿಯೇ ಪಾಶುರಗಳು ಶ್ರೀಹರಿಯ ದಶಾವತಾರಗಳ ವರ್ಣನೆಗಳು. ಭಕ್ತಿಸಾರರು, ವಿಷ್ಣುಚಿತ್ತರು, ಗೋದಾದೇವಿ ಮೊದಲಾದವರಿಂದ ಹಿಡಿದು ಶ್ರೀರಾಮಾನುಜಾಚಾರ್ಯರ ತನಕವೂ ಪಾಶುರಗಳ ರಚನೆಗಳು ಶ್ರೀಹರಿ ಸರ್ವೋತ್ತಮತ್ವದಿಂದಲೇ ಕೂಡಿರುವಂತಹುದು.

ಇನಿಯರುನ್ದೇನ್ ಈಶರ್ಕುಂ ನಾನ್ಮುಗರ್ಕುಂ ದೆಯ್ವಮ್
ಇನಿಯರನ್ದೇನ್ ಎಂಪ್ಬೆರುಮಾನ್ ಉನ್ನೈ ಇನಿಯರುನ್ದೇನ್
ಕಾರಣನ್ನೀ ಕತ್ತವೈನೀ ಕರ್ಪವೈನೀ ನಲ್ಕಿರಿಶೈ
ನಾರಣನ್ನೀ ನನ್ಗರನ್ದೇನ್ ನಾನ್ ॥ -ಭಕ್ತಿಸಾರರು

ಇದು ಭಕ್ತಿಸಾರರ 'ನಾನ್‌ಮುಕನ್ ತಿರುವಂದಾದಿ'ಯಲ್ಲಿ ಹರಿಸರ್ವೋತ್ತಮತ್ವದ ಪ್ರತಿಪಾದನೆ. ಇಲ್ಲಿ ಬ್ರಹ್ಮ ಹಾಗೂ ಶಿವರನ್ನು ನಾರಾಯಣನಿಂದಲೇ ಸೃಷ್ಟಿಯಾದವರೆನ್ನುತಾರೆ'. ನನ್ನ ಸ್ವಾಮಿಯಾದ ನಾರಾಯಣನೇ, ನೀನು ಶಿವನಿಗೂ ಬ್ರಹ್ಮನಿಗೂ ದೇವನೆಂದೂ, ಜಗತ್ತಿಗೆ ಕಾರಣನೆಂದೂ ತಿಳಿಯಿತು. ಮುಂದೆ ನನಗೆ ತಿಳಿಯುವ ಸರ್ವವಸ್ತುವೂ ನಿನಗೆ ಸೇರಿದುದೆಂದು ಅರಿತೆ. ನೀನು ಅತಿಮಾನುಷನೆಂಬುದು ಕೊನೆಗೂ ತಿಳಿಯಿತೆನ್ನುತ್ತದೆ. ಹೀಗೆ ತೊಂಬತ್ತಾರು ಪಾಶುರದಿಂದ ಕೂಡಿದ 'ತಿರುವಂದಾದಿ'ಯು ಹರಿಯೊಬ್ಬನನ್ನೇ ಪರದೈವವೆಂದು ತಿಳಿಸುವಲ್ಲಿ ಯಶಸ್ಸಾಗುತ್ತದೆ.

ತೊಂಡರಡಿಪ್ಪೊಡಿ ಆಳ್ವಾರರ 'ತಿರುಪ್ಪಳ್ಳಿ ಎಳುಚ್ಚಿ' ಎಂಬ ಹತ್ತು ಪಾಶುರಗಳ ಸಂಕಲನದಲ್ಲಿ ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀರಂಗನನ್ನು ನಿದ್ದೆಯಿಂದೆಬ್ಬಿಸುವ ಪ್ರಭಾತಸ್ತೋತ್ರವಿದೆ. ಅಲ್ಲಿ ಹರಿಯನ್ನೇ ಸರ್ವೋತ್ತಮನೆಂದು ಕಂಡುಕೊಂಡು, ಆ ಮೂಲಕವಾಗಿ ಮುಕ್ತಿಯ ಬೇಡಿಕೆಯನ್ನು ಇಡುತ್ತಾರೆ.

ಕಡಿಮಲರ್‌ಕ್ಕಮಲನ್ಗಳ್ ಮಲರ್ನ್ದನವಿವೈಯೋ
ಕದಿರವನ್ ಕನ್ನೈ ಕಡಲ್ ಮುಳೈತ್ತನನಿವನೋ

ತುಡಿಯಿಡೈಯಾರ್ ಶುರಿಕುರಲ್ ಪೀಳೆನ್ದುದರಿ
ತುಹಿಲುಡಿತ್ತೇರೆನರ್ ಶೂಳ್‌ಪುನಲರಂಗಾ
ತೊಡೈಯೊತ್ತ ತುಳಬಮುಮ್ ಕೂಡೈಯುಮ್ ಪೊಲಿನ್ದು
ತೋನಿರಯ ತೋಳ್ ತೊಣ್ಡರಡಿಪ್ಪೊಡಿಯೆನ್ನುಮ್
ಅಡಿಯನ್ನೇ ಅಳಿಯನೆನರರುಳಿ ಉನ್ನಡಿಯಾಕ್ಕು
ಅಳ್ ಪಡುತಾಯ್ ಪಳ್ಳಿಯಲುನ್ದರುಳಾಯೇ ॥ –ತೊಂಡಿರಪ್ಪೊಡಿ ಆಳ್ವಾರರು

ಪರಿಮಳಿಪ ತಾವರೆಗಳು ಅರಳಿವೆ. ಮೂಡಣ ಸಮುದ್ರದಿಂದ ಸೂರ್ಯನು ಮೇಲೆದ್ದಿದ್ದಾನೆ. ತೆಳುಶರೀರದ ನಾರಿಯರೆಲ್ಲಾ ನದಿಯಲ್ಲಿ ಮಿಂದು, ತಲೆಕೂದಲ ನೀರನ್ನು ಹಿಂಡಿ, ಶುಭ್ರವಸ್ತ್ರವನ್ನುಟ್ಟು ನದಿಯಿಂದ ಮೇಲೆ ಬಂದಿದ್ದಾರೆ. ತುಳಸಿ ಮಾಲೆಯನ್ನು ಹಿಡಿದ ಹೆಂಗಳೆಯರೆಲ್ಲಾ ಶ್ರೀರಂಗನಾಥನನ್ನು ನಿದ್ದೆಯಿಂದೇಳುವಂತೆ ಪ್ರಾರ್ಥಿಸುವ ಚಿತ್ರಣ ಇಲ್ಲಿದೆ. ಈ ಸುಪ್ರಭಾತ ಪಾಶುರವು ತಮಿಳುನಾಡಿನ ಶ್ರೀವೈಷ್ಣವ ದೇವಾಲಯಗಳಲ್ಲಿ ಪ್ರಾತಃಕಾಲದಲ್ಲಿ ಹಾಡುವ ಸಂಪ್ರದಾಯವಾಗಿ ಇಂದಿಗೂ ಉಳಿದುಕೊಂಡು ಬಂದಿದೆ.

ಪೆರಿಯಾಳ್ವಾರ(ಶ್ರೀವಿಷ್ಣುಚಿತ್ತರು)ರ ತಿರುಮೊಳಿಯಲ್ಲಿ, ತಾನು ಯಶೋದೆಯ ಪಾತ್ರವನ್ನು ವಹಿಸಿ, ಸರ್ವೋತ್ತಮನಾದ ಶ್ರೀಹರಿಯನ್ನು ದಿವ್ಯಬಾಲಕನನ್ನಾಗಿ ಕಾಣುವ ಪ್ರಯೋಗವಿದೆ. ಇದು ಒಂದು ರೀತಿಯಲ್ಲಿ ಚೈತನ್ಯಪಂಥದ 'ಅಚಿಂತ್ಯಾಭೇದಾಭೇದ ತತ್ವ'ವನ್ನು ನೆನಪಿಸುತ್ತದೆ.

ಪನಿಕ್ಕಲಿಲ್ ಪಳ್ಳಿ ಕೋಳ್ಳೈ ಪಲಹವಿಟ್ಟು ಓಡಿವನ್ದೇನ್
ಮಕ್ಕಡಿಲಿಲ್ ವಾಲವಲ್ಲ ಮಾಯಮಣಾಳನಮ್ಬೀ
ತನಿಕ್ಕಡಲೇ ತನಿಚ್ಚುಡರೇ ತನಿಯುಲಹೇಯೆನ್ನನ್ನು
ಉನಕ್ಕಿಡ ಮಾಯಿರುಕ್ಕ ಎನ್ನೈ ಉನಕ್ಕು ಉರಿತ್ತಾಕ್ಕನ್ನೈಯೇ ॥ –ಶ್ರೀ ವಿಷ್ಣುಚಿತ್ತರು

ಸರ್ವೋತ್ತಮನಾದ ಶ್ರೀರಂಗನಿಗೆ ಆಳ್ವಾರರ ಭಕ್ತಿಪ್ರಧಾನವಾದ ಜೋಗುಳದ ಹರಕೆ ಇಲ್ಲಿ ನೆರವೇರುತ್ತದೆ. ಇಲ್ಲಿ ಲಾಲಿ ಹಾಡಿನ ಪರಾಕಾಷ್ಠತೆ ಎಷ್ಟೆಂದರೆ, ಭಗವಂತನು ಕ್ಷೀರಸಾಗರವನ್ನು ತ್ಯಜಿಸಿ, ತನ್ನ ಹೃದಯಮಂಟಪವನ್ನು ಪ್ರವೇಶಿಸಿ ಅನುಗ್ರಹಿಸುತ್ತಿದ್ದಾನೆ ಎಂಬ ದಿವ್ಯಕಲ್ಪನೆ ಆಳ್ವಾರರದ್ದು.

ಕೈಯುಮ್ ಕಾಲುಮ್ ನಿಮಿರ್ತುಕ್ಕಡಾರ ನೀರ್
ಪೈಯ ವಾಟ್ಟಿಪ್ಪಶುಮ್ ಶಿರುಮಞ್ಞಳಾಲ್
ಐಯನಾವರಿತ್ತಾಳುಕ್ಕನ್ನಾಗ್ಲಿಡ
ವೈಯವೇಲುಮ್ ಕಣ್ಣಾಳ್ ಪಿಳ್ಳೈವಾಯುಳೇ ॥ –ಶ್ರೀ ವಿಷ್ಣುಚಿತ್ತರು

ಇಲ್ಲಿ ಆಳ್ವಾರರು ಯಶೋದೆಯಾಗಿ ಬಾಲಕೃಷ್ಣನನ್ನು ಸ್ನಾನ ಮಾಡಿಸುವ ಕಲ್ಪನೆ ನಿಜಕ್ಕೂ ಅದ್ಭುತವಾದುದು. ದಾಸಪಂಥ ಹಾಗೂ ಚೈತನ್ಯಪಂಥಗಳಲ್ಲಿ ನಡೆದಿರುವ ಏಕದೇವೋಪಾಸನೆಯಲ್ಲದೆ ಅನ್ಯಪಾತ್ರ ನಿರ್ವಹಣೆಯಲ್ಲಿ ದೊರಕುವ ದಿವ್ಯಾನುಭವವೂ ಇಲ್ಲಿ ವಿಶೇಷವಾಗುತ್ತದೆ.

ಪಾಶುರಗಳ ಅಧ್ಯಯನದಲ್ಲಿ ಗಮನಸೆಳೆಯುವ ವಿಚಾರವೆಂದರೆ ಗೋದಾದೇವಿಯ [illegible] ರು. ಸಾಕುಪುತ್ರಿಯಾದ ಈಕೆಯು ವಟಪತ್ರಶಾಯಿಗೆ ಮನಸೋತು, ಆತನನ್ನೇ ವರಿಸಿಕೊ [illegible] ಗರ್ಭಗೃಹದಲ್ಲೇ ಅಂತರ್ಧಾನಳಾದವಳು. ಇವಳ 'ತಿರುಪ್ಪಾವೈ' ಎಂ [illegible] ಪ್ರಬಂಧವು ಗೋಪೀಪ್ರೇಮಪೂರಿತವಾದುದು. ಚೈತನ್ಯಪಂಥದಲ್ಲಿಲ್ಲದ, ದಾಸಸಾಹಿತ್ಯದಲ್ಲಿ ವಿಶೇಷವಾಗಿ ಗಮನಸೆಳೆದ ಗೋಪೀಗೋಪಾಲಕ ಪ್ರೇಮವು ಪಾಶುರಗಳ ಮೂಲಕ ಹರಿದು ಬಂದಿರುವುದು ಗಮನಿಸತಕ್ಕ ಅಂಶ.

ಶಿತ್ತಂ ಶಿರುಕ್ಕಾಲೇವನ್ದುನ್ನೈಚ್ಚೇವಿತ್ತು ಉನ್
ಪೊತ್ತಿ ಮರೈಯಡಿಯೇ ಪೋತ್ತುಂ ಪೊರುಳ್ ಕೇಳಾಯ
ಪೆತ್ತಂ ಮೇಯ್ತುಣ್ಣುಂ ಕುಲತ್ತಿಲ್ ಪಿರನ್ದು ನೀ
ಎತ್ತೈಕ್ಕುಮೇಳೇಳ್ ಪಿರವಿಕ್ಕುಂ ಉನ್ತನ್ನೋ
ಡುತ್ತೋಮೇಯಾವೋಮ್ ಉನಕ್ಕನಾಮಾಳ್ಚೆಯ್ವೋಮ್
ಮತ್ತೈನಂ ಕಾಮಂಗಳ್ ಮತ್ತೆಲೋರೆಂಬಾವಾಯ್ ॥ –ತಿರುಪ್ಪಾವೈ ಪ್ರಬಂಧ

ಗೊಲ್ಲಕುಲದಲ್ಲಿ ಹುಟ್ಟಿದ ಕೃಷ್ಣನನ್ನು ಅಂತರಂಗ ಸೇವೆಯ ಮೂಲಕವಾಗಿ ಸರ್ವೋತ್ತಮನಾಗಿ ಕಾಣುವ ಪ್ರಯತ್ನವೊಂದು ಇಲ್ಲಿ ನಡೆದಿದೆ. ಇಲ್ಲಿ ಗೋದೆಯ ಕೃಷ್ಣಭಕ್ತಿಯ ಪ್ರಚೋದನೆಯಿಂದ ಇತರ ತರುಣಿಯರು ಕೂಡ ಕೃಷ್ಣಭಕ್ತಿಗೆ ಒಳಗಾಗಿ ಗೋಪಿಕೆಯರಾಗಿ ಬಿಡುತ್ತಾರೆ.

ಭಾರತೀಯ ಭಕ್ತಿಸಿದ್ಧಾಂತದಲ್ಲಿ ದಕ್ಷಿಣಭಾರತೀಯ ಭಕ್ತಿಕಲ್ಪನೆಯು ಉತ್ತರಭಾರತದ ಭಕ್ತಿಸಿದ್ಧಾಂತಕ್ಕಿಂತ ತೀರಾಭಿನ್ನ. ಉತ್ತರಭಾರತದಲ್ಲಿ ಕಾಣುವ ತತ್ವಾದರ್ಶಗಳು ದಕ್ಷಿಣಭಾರತೀಯರಿಗೆ ಒಗ್ಗೂಡದ ವಿಚಾರ. ದಕ್ಷಿಣಭಾರತದ ಭಕ್ತಿಪರಂಪರೆಯಲ್ಲಿ ತ್ರಿಗುಣ ಭಕ್ತಿ, ನವವಿಧ ಭಕ್ತಿ, ಏಕಾದಶ ಭಕ್ತಿ...ಹೀಗೆ ಭಕ್ತಿಯ ಭಾವುಕತೆಗೆ ಸರಿಯಾಗಿ ಭಕ್ತಿಯ ವಿಧಗಳಲ್ಲಿ ಏರಿಳಿತಗಳನ್ನು ಕಾಣುತ್ತೇವೆ. ಆದರೂ ಬಂಗಾಳದಲ್ಲಿ ಹುಟ್ಟಿಕೊಂಡ ಚೈತನ್ಯಪಂಥದ ತತ್ವಾದರ್ಶಗಳಿಗೆ ಇದು ಭಿನ್ನಸ್ವರೂಪಗಳೇನೂ ಅಲ್ಲ. ದಾಸಪಂಥದಲ್ಲಿ ಕಾಣಸಿಗುವ ದಾಸ್ಯಭಾವವು ತಮಿಳಿನ ಪಾಶುರಗಳಲ್ಲಿ ಮುಖ್ಯ ಜೀವಾಳವಾಗುತ್ತದೆ. ಅಂತೆಯೇ ಮಧುರಕವಿ ಹಾಗೂ ಗೋದಾದೇವಿಯರ ಪಾಶುರಗಳಲ್ಲಿ ಕಾಣಸಿಗುವ ಮಧುರಭಾವಗಳು ಚೈತನ್ಯಪಂಥದ ಅಚಿಂತ್ಯಾಭೇದಾಭೇದ ಸಿದ್ಧಾಂತವನ್ನು ಪ್ರತಿನಿಧಿಸುತ್ತದೆ. 'ತಿರುವಂದಾದಿ' ಪಾಶುರಗಳಲ್ಲಿ ಕಾಣುವ ಭಗವಂತನ ಆಂತರಿಕ ದರ್ಶನ ದಾಸಸಾಹಿತ್ಯದಲ್ಲಿ ಪುರಂದರದಾಸರೂ ಕಂಡಿರಿಸಿದ್ದಾರೆ. 'ಕಣ್ಣಿನೊಳಗೆ ನೋಡೋ ಹರಿಯ ಒಳಗಣ್ಣಿನೊಳಗೆ ನೋಡೋ'(ಪುರಂದರದಾಸ), 'ಅಂತರಂಗದ ಕದವು ತೆರೆಯಿತು'(ವಿಜಯದಾಸ)...ಹೀಗೆ ನೋಡಿದರೆ ತೌಲನಿಕ ವಿವೇಚನೆ ಹೆಚ್ಚಾಗುತ್ತಾ ಹೋಗುತ್ತದೆ. ಏನೇ ಇದ್ದರೂ ಭಾರತದ ಭಕ್ತಿಸ್ವರೂಪದ ವಿರಾಟ್‌ದರ್ಶನವನ್ನು ಕಂಡಾಗ ದಕ್ಷಿಣಭಾರತವೇ ಭಕ್ತಿಯ ತವರೂರೆನ್ನುವ 'ಭಾಗವತ'ದ ಮಾತು ಮಾತ್ರ ಸತ್ಯವೆನಿಸುತ್ತದೆ.

ತೆಲುಗು ಭಾಷೆಯಲ್ಲಿ ೧೫ ಮತ್ತು ೧೬ ನೆಯ ಶತಮಾನಗಳು ಭಕ್ತಿಸಾಹಿತ್ಯದ ಶಕೆ ಎನ್ನಬಹುದು. ಅನ್ನಮಾಚಾರ್ಯರು ಇಲ್ಲಿಯ ಭಕ್ತಿಸಾಹಿತ್ಯದ ಶಕಪುರುಷ. ಇವರು ಸುಮಾರು ೩೨.೦೦೦ ಭಕ್ತಿ ಸಂಕೀರ್ತನೆಗಳನ್ನು ರಚಿಸಿದ್ದರೆಂದು ಹೇಳಲಾಗುತ್ತದೆ. ಇವರು ಮೂಲತ: ಸ್ಮಾರ್ತರಾಗಿದ್ದು, ನಂತರದಲ್ಲಿ ವಿಶಿಷ್ಟಾದ್ವೈತಿಗಳಾದರು. ಇವರ ರಚನೆಗಳಲ್ಲಿ ಬಹುಪಾಲು ವಾತ್ಸಲ್ಯಭಕ್ತಿಯುತವಾದುದು. ಸಂಕೀರ್ತನೆಗಳನ್ನೆಲ್ಲ ವೆಂಕಟೇಶನಿಗೆ ಅರ್ಪಿಸಿ, ವೈಷ್ಣವ ಧರ್ಮಾವಲಂಬಿಯಾಗಿ, ಅನ್ನಮಯ್ಯರಾಗಿದ್ದವರು ಅನ್ನಮಾಚಾರ್ಯರಾದರು.[೬೨]

ಅನ್ನಮಚಾರ್ಯರಲ್ಲಿದ್ದುದು ವಿಷ್ಣುಭಕ್ತಿ. ಅಂತೆಯೇ ತೆಲುಗುಸಾಹಿತ್ಯದಲ್ಲೂ ನಾವು ಕಾಣುವುದು ವಿಷ್ಣುಭಕ್ತಿಯೇ ಹೊರತು ಬೇರೆಯಲ್ಲ. ಅನ್ನಮಾಚಾರ್ಯರು ತಮ್ಮದೊಂದು ಕೀರ್ತನೆಯಲ್ಲಿ 'ಮೂರು ಮೂರ್ತಿಗಳಲ್ಲಿ ವಿಷ್ಣು ಒಬ್ಬನೆಂದು ದುರ್ಜನರು ಹೇಳುವರು. ಬ್ರಹ್ಮನು ಈತನ ಪಾದವನ್ನು ತೊಳೆದನು. ಶಿವನು ತನ್ನ ಶಿರದಲ್ಲಿ ವಿಷ್ಣುವಿನ ಪಾದವನ್ನು ಧರಿಸಿದನು' ಎಂದು ಹೇಳುವಲ್ಲಿ ಹರಿಸರ್ವೋತ್ತಮತ್ವವನ್ನು ಪ್ರತಿಪಾದಿಸುತ್ತಾರೆ.

ತೆಲುಗಿನ ಭಕ್ತಿಸಾಹಿತ್ಯದಲ್ಲಿ ಅನ್ನಮಾಚಾರ್ಯರ ನಂತರದಲ್ಲಿ ಬರುವ ದೊಡ್ಡ ಹೆಸರೆಂದರೆ ಭದ್ರಾಚಲ ರಾಮದಾಸರದ್ದು (೧೬೨೦-೧೬೮೦). ಭಕ್ತಿಸಂಕೀರ್ತನೆಯಲ್ಲಿ ಇವರ ಮುಖ್ಯಸಾಧನೆ ಎಂದರೆ ಸಂಗೀತಲೋಕಕ್ಕೆ 'ಆನಂದಭೈರವಿ'ಯೆಂಬ ರಾಗವನ್ನು ಮೊದಲು ಪರಿಚಯಿಸಿದ್ದು. 'ಪಲುಕೇ ಬಂಗಾರ ಮಾಯೆನೇ ಕೋದಂಡ ಪಾಣೀ', 'ರಾಮ ನಾಮಮೇ ಜೀವನಮು', 'ರಾಮು ನಿವಾರಮು ಮಾಕೇಮಿ ವಿಚಾರಮು' ಇವೆಲ್ಲವು ಇವರ ಆನಂದಭೈರವಿಯ ರಚನೆಗಳು.

ತೆಲುಗಿನ ಇತರ ಮೂವರು ಮುಖ್ಯಸಂಕೀರ್ತನಾಕಾರರೆಂದರೆ ತ್ಯಾಗರಾಜರು, ಶ್ಯಾಮಾಶಾಸ್ತ್ರಿಗಳು ಹಾಗೂ ಮುತ್ತುಸ್ವಾಮಿ ದೀಕ್ಷಿತರು. ತ್ಯಾಗರಾಜರಂತೂ ಶ್ರೀರಾಮನನ್ನೇ ದೈವವನ್ನಾಗಿಸಿಕೊಂಡು ೭೨ ಮೇಳಕರ್ತ ರಾಗಗಳಲ್ಲಿ ಭಕ್ತಿಪ್ರಧಾನವಾದ ಕೀರ್ತನೆಗಳನ್ನು ರಚಿಸಿದವರು. ಶೃಂಗಾರದಲ್ಲೇ ಭಕ್ತಿಯನ್ನು ಬೆಳೆಸಿದವರು. ಇವರ ಹೆಚ್ಚಿನ ರಚನೆಗಳು ತೋರಿಬರುವುದು ನೀಲಾಂಬರಿ, ನವರೋಜು, ಧನ್ಯಾಸಿ, ನಾದನಾಮಕ್ರಿಯೆ, ಶಂಕರಾಭರಣ, ಯಮುನಾಕಲ್ಯಾಣಿ ಮೊದಲಾದ ರಾಗಗಳಲ್ಲಿ. ಆದರೂ ರಚನಾವಸ್ತುವಿನಲ್ಲಿ ಹರಿಭಕ್ತಿಯೇ ಪ್ರಧಾನವಾಗಿರುವುದು ಕಂಡುಬರುತ್ತದೆ.

ಪ್ರಾಚೀನ ತುಳುವರಲ್ಲಿ ಕಾಣುವ ಭಕ್ತಿಸ್ವರೂಪವನ್ನು ಆ ಕಾಲದಲ್ಲಿ ರಚಿತವಾದ ಗದ್ಯಪದ್ಯಗಳಿಂದ ಕೂಡಿದ ತುಳುಕಾವ್ಯಗಳು ಹೇಳುತ್ತವೆ. ಈ ದೆಸೆಯಲ್ಲಿ ತುಳುಕಾವ್ಯಗಳಾದ 'ದೇವೀಮಹಾತ್ಮೆ', 'ಮಹಾಭಾರತೊ', 'ಶ್ರೀಭಾಗವತೊ', 'ಕಾವೇರಿ', 'ಹರಿಶ್ಚಂದ್ರ ಕಾವ್ಯೊ' ಈ ಮೊದಲಾದ ಕೃತಿಗಳು ಗಮನಾರ್ಹವಾದವುಗಳು. ದೇವೀಮಹಾತ್ಮೆಯು ಗದ್ಯಕೃತಿಯಾಗಿದ್ದು ಕನ್ನಡದ ವಡ್ಡಾರಾಧನೆಯನ್ನು ಹೋಲುವಂತಹುದು. ಇಲ್ಲಿಯ ಸಾಹಿತ್ಯರಚನೆಯಲ್ಲಿ ಆಡುಮಾತಿನ ಚೆಲುವಿದೆ. ಅಲ್ಲದೆ ಕಥಾವಾಚನದ ಮೂಲಕ ದೇವಿಯ ಆರಾಧನೆ ನಡೆಯುತ್ತಿತ್ತೆಂದು ಭಾವಿಸಬಹುದಾಗಿದೆ. ಪ್ರಾಯಶ: ಇಂದಿನ ವೈದಿಕ ವಿಧಿವಿಧಾನದ

ಹೋಮಹವನದ ಮಂಡಲರಚನೆಗಳಲ್ಲಿ ತುಳುಲಿಪಿಯ 'ಶ್ರೀ'ಕಾರವನ್ನು ಬರೆಯುವ ಕ್ರಮವು ಪ್ರಾಚೀನ ಕರಾವಳಿಯ ಪೂಜಾಪಳೆಯುಳಿಕೆಯೆಂದು ಭಾವಿಸಿಕೊಳ್ಳಬಹುದು. ಆದರೂ ಪ್ರಾಚೀನ ತುಳುವರ 'ತುಳು ಸಪ್ತಶತೀ'ಪಾರಾಯಾಣದಲ್ಲಿ ಕಂಡುಬರುವ ಮುಖ್ಯವಿಚಾರವೆಂದರೆ, ಅವರಲ್ಲಿ ಆಚರಣೆಯಲ್ಲಿದ್ದುದು ಶಕ್ತಿ ಆರಾಧನೆ ಎಂಬುದು.

ಸಂಸ್ಕೃತಭಾಷೆಯ ಪಾರಾಯಣಕೃತಿಯಾದ 'ಸಪ್ತಶತೀ'ಯ ಸುಂದರ ಅನುವಾದ ರೂಪವೆಂದರೆ ಅದು ತುಳು ದೇವೀಮಹಾತ್ಮೆ.[೬೩]

ದಿವಾಂಧಾಃ ಪ್ರಾಣಿನಃ ಕೇಚಿತ್ ರಾತ್ರಾವಂಧಾಸ್ತಥಾಪರೇ ।
ಕೇಚಿದ್ದಿವಾ ತಥಾರಾತ್ರೌ ಪ್ರಾಣಿನಸ್ತುಲ್ಯದೃಷ್ಟಯಃ ॥[೬೪] ೧-೪೮

ತುಳು ದೇವೀ ಮಹಾತ್ಮೆಯಲ್ಲಿ,-

ಶಿಲು ಜೀವರಾಶಿಕುಳು ದಿವ್ರೊಂಟ್‌ಪ್ಪ ಅಂಧೇರ್ಕುಳು ಆಸ್ದ್‌ನವು
ಶಿಲು ಜೀವರಾಶಿಕುಳು ರಾತ್ರಿಟ್‌ಪ್ಪಂಧೇರ್ಕುಳಾಸ್ದ್‌ನವ
ಅಂಚನೆ ಬೇತೆಲ ಶಿಲು ಪ್ರಾಣಿಕುಳು ದಿವ್ರೊಂಟ್‌ಲ ರಾತ್ರಿಟ್‌ಲ
ಸಮಾನೊ ಮಾಸ್ದ್‌ಳ್ಳಂಚೆತ್ತೀ ದೃಷ್ಟಿಕುಳುಳ್ಳವು ॥ -ಪಳಂತುಳುಕಾವ್ಯ-೮.

-ಜೀವರಾಶಿಗಳಲ್ಲಿ ಕೆಲವು ಜೀವಿಗಳಿಗೆ ಹಗಲು ಕಣ್ಣು ತೋರುವುದಿಲ್ಲ, ಇನ್ನೂ ಕೆಲವು ಜೀವಿಗಳಿಗೆ ರಾತ್ರಿ ಕಣ್ಣು ತೋರುವುದಿಲ್ಲ. ಆದರೆ ಕೆಲವೊಂದು ಪ್ರಾಣಿಗಳಿಗೆ ಹಗಲು ಮತ್ತು ರಾತ್ರಿ ಸಮಾನವಾಗಿರುತ್ತವೆ.

ಸಂಸ್ಕೃತದ 'ಸಪ್ತಶತೀ'ಯಲ್ಲಿ,-

ಯಾದೇವಿ ಸರ್ವಭೂತೇಷು ವಿಷ್ಣುಮಾಯೇತಿ ಶಬ್ದಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮ: ॥ -೫-೧೪

ಎಂಬಲ್ಲಿ ನಮಸ್ಕಾರವು ಸಂಸ್ಕೃತ ಶಬ್ದರೂಪದಲ್ಲಿ ತೃತೀಯಾವರ್ತನೆಯಾಗಿ ಕಂಡು ಬಂದಿದ್ದರೆ, ಅದರ ತುಳು ರೂಪವಾದ ತುಳು ದೇವೀಮಹಾತ್ಮೆಯಲ್ಲಿ ಅದೇ ಕಾವ್ಯಸೌಂದರ್ಯ ಪುನರ್‌ಸೃಷ್ಟಿಯಾಗಿದೆ.

ಜಾಸ್ದೊಳ್ತಿ ಶೋಭೀಪ್ಪಿ ದುರ್ಗಾದೇವಿಯಾಸ್ದ್‌ನಾರ್ ಸಕಲ ಜೀವ ರಾಶಿಕ್‌ಳೆಟ್‌ಪ್ಪಕ್
ವಿಷ್ಣು ಮಾಯೇಂದಿಂಚ ಪಣ್ಪೋವೊಣ್‌ಪ್ಣಾರೆಕಾವ
ನಮಸ್ಕಾರೊ ನಮಸ್ಕಾರೊ ನಮಸ್ಕಾರೊ ॥ -ಪಳಂತುಳುಕಾವ್ಯ-೯.

ಇಲ್ಲಿಯ ತುಳುರಚನೆಗಳಲ್ಲಿ ನಮಗೆ ಮನದಟ್ಟಾಗುವುದೇನೆಂದರೆ ಕಥಾವಾಚನ ರೂಪ. ವರ್ತಮಾನದ ಸತ್ಯನಾರಾಯಣ ವ್ರತ ಕಥೆ, ಶನ್ಯೈಶ್ಚರವ್ರತ ಕಥೆಯನ್ನು ನೆನಪಿಸುತ್ತದೆ. ಆದರೂ ಪ್ರಾಚೀನರು ಕಂಡುಕೊಂಡ ಧಾರ್ಮಿಕ ಜೀವನದ ಭಕ್ತಿರೂಪವು ಕಥಾಚರಣೆಯ ಮೂಲಕವಾಗಿಯೂ ಅಸ್ತಿತ್ವದಲ್ಲಿತ್ತೆಂಬುದು ಮುಖ್ಯವಾಗುತ್ತದೆ.

ಅರುಣಾಬ್ಜ ಕವಿಯ ತುಳು 'ಮಹಾಭಾರತೊ' ಸುಮಾರುಪಾಲು ಹದಿನಾಲ್ಕನೆಯ ಶತಮಾನದ ಕೊನೆಯಲ್ಲಿ ರಚಿತವಾದದ್ದು. ಅಂಶಷಟ್ಪದ, ತೋಟಕವೃತ್ತ, ಮಲ್ಲಿಕಾಮಾಲೆ ಮೊದಲಾದ ಛಂದೋ ಮಿಶ್ರರೂಪಗಳಿಂದ ರಚಿತವಾದ ಕಾವ್ಯಕ್ಕೆ ಕುಮಾರವ್ಯಾಸನ ಪ್ರೇರಣೆ ಇರುವ ಸಾಧ್ಯತೆ ಹೆಚ್ಚು.

ಶಾರದೇಂದು ನಿಭಾಸ್ಯೆ
ಕ್ಷೀರಾರ್ಣವ ವಿಶುದ್ಧೇ
ವಾರಿಜಾಸನ ಕಿಷ್ಟ ಪ್ರಿಯೆ ಕಲ್ಯಾಣಿ ।
ಭಾರತಾಮೃತೊಮೆನ್ಕೀ
ಸಾರೊಮೆನ್ಕ್‌ರೆಚೇಪೆರ
ಈರ್ ನೃತ್ತಿಪ್ರೊಡೆನ್ನಾ ಮುಖ ರಂಗಂಟ್ ॥[೬೫] –ಮಹಾಭಾರತೊ ೧–೪

(ಚಂದ್ರಮುಖಿಯೂ ಶ್ವೇತವಸನೆಯೂ ಆದ ಬ್ರಹ್ಮನರಾಣಿ ಶಾರದಾಂಬೆಯು ಭಾರತಾಮೃತವೆಂಬ ಕಾವ್ಯ ರಚಿಸುವುದಕ್ಕಾಗಿ ನನ್ನ ಮುಖರಂಗದಲ್ಲಿ ನರ್ತಿಸಬೇಕು.)

ಅರುಣಾಬ್ಜನ ಮಾತಿನಲ್ಲಿ ಮತ್ತು ಕುಮಾರವ್ಯಾಸ ಹೇಳುವ 'ಶಾರದೆಯೆ ನರ್ತಿಸುಗೆ ನಲಿದೊಲಿದೆನ್ನ ಜಿಹ್ವೆಯಲಿ' ಎಂಬ ಮಾತಿನಲ್ಲಿ ಸಾಮ್ಯವನ್ನು ಗುರುತಿಸಬಹುದಾಗಿದೆ. ಕಾವ್ಯದಲ್ಲಿ ತೋರಿಬರುವ 'ಸಂಗೀಪಂತೆ ಅನಂತರೆಂಗ ಬುದ್ಧಿತವಾ' ಎಂಬ ವಾಕ್ಯೋಕ್ತಿಯು ಪ್ರಾಚೀನ ತುಳುವರ ಸತ್ಸಂಗವನ್ನು ಪ್ರತಿನಿಧಿಸುತ್ತದೆ.

ವಿಷ್ಣುತುಂಗನ 'ಶ್ರೀಭಾಗವತೋ' 'ಸ್ಟ' ಧ್ವನಿಮಾ ಮತ್ತು 'ಱಳಾ'ಕ್ಷರ ಪ್ರಯೋಗದೊಂದಿಗೆ ಮೂಡಿದ ಧಾರ್ಮಿಕ ಕೃತಿ. ಇದರಲ್ಲಿ ಹೇಳಲಾದಂತೆ ಪುರಾತನರ ಪರಬ್ರಹ್ಮ ಸ್ತುತಿ ಇಂತಿದೆ.

ಜನ್ಮಾದಿ ಕುಳಾಯಿ ತ್ರಿಸರ್ಗೋಮಿನೀ ಅರ್ಥಾದಿಸ್ವರಜ್ಞೇ
ಬ್ರಹ್ಮಾದಿ ಕವೀಶ್ವರ ಸೂರಿಕುಳೂ ತನಿ ಪಿನ್ಕಿ ಪ್ರಕಾರೊ
ನಿರ್ಮಿೀತೆರ್ ವಾರಿತ ತೇಜದ್ಯಶಂ ಮೃತ್ಪಿಂಡ ಪ್ರಕಾರೊ
ನಾಮ್ನಾಯ ನಿರಸ್ತಕುಹಚ್ಛಕ ಸತ್ಯ ಪರಾತ್ಮಕ್‌ವಂದೇ॥[೬೬] –ಶ್ರೀಭಾಗವತೊ ೧–೧–೧

(ಆಕಾಶಾದಿ ಕಾರ್ಯಗಳಲ್ಲಿ ಸರ್ವಜ್ಞರಾದ ಬ್ರಹ್ಮಾದಿ ದೇವತೆಗಳೂ, ಪಂಡಿತರೂ, ಜ್ಞಾನಿಗಳೂ ತನ್ನನ್ನು ತಿಳಿಯುವಂತೆ, ಸರ್ವಜ್ಞನಾದ ಯಾವ ಪರಮಾತ್ಮನು ಪೃಥ್ವಿ ಅಪ್ ತೇಜಗಳಿಂದ ಸೃಷ್ಟಿ ಸ್ಥಿತಿ ಲಯಗಳಾಗಿರುವ ಸತ್ವ ರಜ ತಮಗಳನ್ನು ನಿರ್ಮಿಸಿದನೋ, ಆ ಸ್ವರೂಪ ಜ್ಞಾನದಿಂದ ಮಾಯಾತೀತನಾಗಿರುವ ಸತ್ಯಸ್ವರೂಪನೂ ಪರವಸ್ತುವೂ ಜ್ಞಾನರೂಪಿಯೂ ಆದ ಭಗವಂತನಿಗೆ ವಂದಿಸುತ್ತೇನೆ.)

ಪುರಾತನ ತುಳುವರ ಈ ಸ್ತುತಿ 'ಜನ್ಮಾದ್ಯಸ್ಯ ಯತೋನ್ವಯಾ' ಭಾಗವತ ಶ್ಲೋಕದ ಅನುವಾದವಾಗಿದೆ. ಪೃಥ್ವಿ, ಅಪ್, ತೇಜಮಯನಾದ ಮಾಯಾತೀತ ಭಗವಂತನಿಗೆ ನಮಸ್ಕರಿಸುವ ಕ್ರಮವೊಂದು ಪ್ರಾಚೀನ ತುಳುವರಲ್ಲೂ ಇತ್ತು. ಒಟ್ಟಿನಲ್ಲಿ ಶ್ರೀಭಾಗವತೋ ಕೃತಿಯು ತುಳುವರ ಸಾಹಿತ್ಯದಲ್ಲಿ ಮತ್ತು ಅವರ ಧಾರ್ಮಿಕ ಬದುಕಿನಲ್ಲಿ ಮುಖ್ಯವಾಗುತ್ತದೆ. ಇದರ ನಂತರದಲ್ಲಿ ಅಪೂರ್ಣ ಶೈವಕೃತಿಯಾಗಿ ತೋರಿಬಂದುದು 'ಕಾವೇರಿ'.

ಗಂಗೆ ಶುಭರಂಗೆ ಭವಸಂಗೆ ಗುಣತುಂಗೆ ।
ಮಂಗಲ ಮಹಾಂಗೆ ಸರ್ವಾಂಗ ಕುಲನಂಗೆ ।

ತುಂಗಗಿರಿ ಶೃಂಗೆ ಭವ ಭಂಗೆ ಜನರಂಗೆ ।
ಅಂಗಜಪಿತಾಂಗುಲಿ ಸುಸಂಗಮೆ ನಮಸ್ತೆ ॥[೬೭]

ಇದು ತುಳು ಜನರ ದೈವಸ್ತುತಿ ಹಾಗೂ ನಿತ್ಯಸ್ತುತಿ. ಅವರು ತಮ್ಮ ಜೀವನದಲ್ಲಿ ಸತ್ಯ, ಜ್ಞಾನ, ಶಾಂತಿ, ದಮೆ, ದ್ವೈತ ಹಾಗೂ ಅದ್ವೈತಭಾವ ಮೊದಲಾದವುಗಳೆಲ್ಲವನ್ನು ತಮ್ಮ ಬದುಕಿನಲ್ಲಿ ಕಂಡುಕೊಂಡವರೆಂಬುದನ್ನು ಈ ಸ್ತುತಿಪದ್ಯವು ತಿಳಿಸಿಕೊಡುತ್ತದೆ. ತುಳುಜನರ ಧಾರ್ಮಿಕತೆಯನ್ನು 'ಕಾವೇರಿ'ಕಾವ್ಯವು, 'ಸತ್ಯೊಂಕುಳು ತೀರ್ಥೊನೆ ಜ್ಞಾನ ಮಹಾದಯೆ ಶಾಂತಿಲ ತೀರ್ಥೊ, ನಿತ್ಯೊದಮೆ ಪಂಡಿತ ಸಂಗತಿಲಾ ಸರ್ವದ್ವಯ ಭಾವ್ರೋ'ಎನ್ನುವ ಮೂಲಕ ಪರಿಚಯಿಸಿ ಕೊಡುತ್ತದೆ. ಈ ಹಿಂದೆ ಗಮನಿಸಿದ ಶ್ರೀಭಾಗವತೊ, ಮಹಾಭಾರತೊ, ದೇವಿ ಮಹಾತ್ಮೆ, ಕಾವೇರಿ ಮೊದಲಾದ ಕೃತಿಗಳಲ್ಲಿ ಹರಿಹರರ ಆರಾಧನೆ ಮತ್ತು ಶಕ್ತಿಆರಾಧನೆಯನ್ನು ಸಮಾನವಾಗಿಯೇ ಕಾಣುತ್ತೇವೆ. ಮುಖ್ಯವಾಗಿ ಗಮನಿಸಬೇಕಾದ ವಿಚಾರವೆಂದರೆ, ಪ್ರಾಚೀನ ತುಳುವರ ಸಾಮಾಜಿಕ ಜೀವನದಲ್ಲಿ ಶಿವ, ವಿಷ್ಣು ಹಾಗೂ ದುರ್ಗಾರಾಧನೆಗಳು ಅಸ್ತಿತ್ವದಲ್ಲಿತ್ತೆಂಬುದು ಮುಖ್ಯವಾಗುತ್ತದೆ.

೨.೮ ಮರಾಠಿ ಸಂತ ಸಾಹಿತ್ಯದಲ್ಲಿ ಭಕ್ತಿ

ಮರಾಠಿ ಸಂತ ಪರಂಪರೆಯು ಮುಖ್ಯವಾಗಿ ಬೆಳೆದದ್ದು ಮಹಾರಾಷ್ಟ್ರದಲ್ಲಿ. ಆದುದರಿಂದ ಭಕ್ತಿಪಂಥಕ್ಕೆ ಮಹಾರಾಷ್ಟ್ರದ ಕೊಡುಗೆ ಅನನ್ಯವಾದದ್ದು. ಇಲ್ಲಿ ಹಲವಾರು ಭಕ್ತಿಪಂಥಗಳು ಹುಟ್ಟಿ ಬೆಳೆದಿದ್ದರೂ ವಾರಕರಿಪಂಥಕ್ಕೆ ವಿಶಿಷ್ಟವಾದ ಸ್ಥಾನವಿದೆ. ಮರಾಠಿಯಲ್ಲಿ 'ವಾರಕರಿ' ಎಂದರೆ ಮತ್ತೆಮತ್ತೆ ಯಾತ್ರೆ ಮಾಡುವವರು ಎಂದರ್ಥ. 'ವಾರಕರಿ'ಯ ಅನುಯಾಯಿಗಳು ವರ್ಷಕ್ಕೆ ನಾಲ್ಕು ಬಾರಿ ಪುಣ್ಯಯಾತ್ರೆಯನ್ನು ಕೈಗೊಳ್ಳುತ್ತಾರೆ. ಆದರೂ ಅವುಗಳಲ್ಲಿ ಎರಡಾವರ್ತಿ ಅಂದರೆ ಅಷಾಢ ಮತ್ತು ಕಾರ್ತೀಕ ಮಾಸಗಳ ಏಕಾದಶಿಯಂದು ಪಂಢರಾಪುರಕ್ಕೆ ಕಾಲ್ನಡಿಗೆಯಿಂದಲೇ ಯಾತ್ರೆ ಹೋಗುವುದು ಹೆಚ್ಚು ವಿಶೇಷ. ಕುತ್ತಿಗೆಗೆ ತುಳಸೀಮಾಲೆಯನ್ನು ಹಾಕಿಕೊಂಡು, ಪ್ರತಿ ಭಜನಾಮಂಡಲಿಯಲ್ಲಿ ಒಬ್ಬನು ದಿಂಡಿಯನ್ನು ಹಿಡಿದುಕೊಂಡು, ನಾಮಸ್ಮರಣೆಯನ್ನು ಮಾಡುತ್ತಾ, ಹಾಡುತ್ತಾ, ತಾಳಕ್ಕೆ ತಕ್ಕಂತೆ ಹೆಜ್ಜೆಯನ್ನು ಹಾಕುತ್ತಾ, ದೇಹಾಯಾಸವನ್ನು ಮರೆತು ಕುಣಿದುಕೊಂಡು ಪಂಢರಾಪುರಕ್ಕೆ ಹೋಗುವ ಈ ಯಾತ್ರೆಗೆ 'ವಾರಿ' ಎಂಬುದಾಗಿ ಕರೆಯುತ್ತಾರೆ. ಭಕ್ತರು ಭಕ್ತಿ ಮೂಲಕವಾಗಿ ಕೈಗೊಳ್ಳುವ ಈ ಸಂಚಾರಕ್ಕೆ 'ವಾರಕರಿ' ಸಂಚಾರ ಎಂಬ ಹೆಸರು ರೂಢಿಯಲ್ಲಿ ಬಂತು.

ಮರಾಠೀ ಸಂತ ಪರಂಪರೆ

ಸಂತರು	ಕಾಲ
ಜ್ಞಾನೇಶ್ವರ	(೧೨೭೫-೧೨೯೬)
ನಿವೃತ್ತಿನಾಥ (ಜ್ಞಾನೇಶ್ವರರ ಅಣ್ಣ ಮತ್ತು ಗುರು)	(೧೨೭೩-೧೨೯೭)
ಸೋಪಾನ (ಜ್ಞಾನೇಶ್ವರರ ಸಹೋದರ)	(೧೨೭೪-೧೨೯೬)

ಮುಕ್ತಾಬಾಯಿ (ಜ್ಞಾನೇಶ್ವರರ ತಂಗಿ)	(೧೨೭೯-೧೨೯೭)
ನಾಮದೇವ	(೧೨೭೦-೧೩೫೦)
ಗೋರ ಕುಂಬಾರ	(೧೨೬೭-೧೩೧೭)
ನರಹರಿ ಸೋನಾರ	(೧೩ ನೇ ಶತಮಾನ)
ಸೇನಾನ್ಹಾವಿ	(೧೩ ನೇ ಶತಮಾನ)
ಪರಿಸಾ ಭಾಗವತ	(?)
ಆನಾನಾಯಿ	(?)
ಚೋಖಾಮೇಳಾ	(೧೩೩೮-?)
ಭಾನುದಾಸ	(?)
ಏಕನಾಥ	(೧೫೩೩-೧೫೯೯)
ಕನ್ಹೋಪಾತ್ರ	(?)
ಬಹಿಣಾಬಾಯಿ ಸೀಯೂರಕರ್	(೧೬೨೯-೧೭೦೦)
ತುಕಾರಾಮ	(೧೬೦೮-೧೬೪೯)
ಸಂತಾಜಿ ತೇಲಿ ಜನನದೆ (ತುಕಾರಾಮನ ಸ್ನೇಹಿತ)	(?)
ದಾಮಾಜಿ ಪಂತ	(೧೫ ನೇ ಶತಮಾನ)
ನೀಳೋಬಾ	(೧೭-೧೮ ನೇ ಶತಮಾನ ?)
ರಮಾವಲ್ಲಭ ದಾಸ	(೧೬೦೯-೧೬೬೮)

ಇವರುಗಳು ವಾರಕರಿಪಂಥವನ್ನು ಮುನ್ನಡೆಸಿದವರು. ಇವರೆಲ್ಲರಿಗೂ ಪಂಢರಾಪುರದ ವಿಠ್ಠಲನೇ ಆರಾಧ್ಯದೇವತೆ. ಹಾಗಾಗಿ ಈತನನ್ನೇ ಆರಾಧಿಸಿಕೊಂಡು ವಾರಕರಿಸಂಪ್ರದಾಯವನ್ನು ಬಲಪಡಿಸಿದರು.[೬೮] 'ದೇವರೇ ಪರಮಸತ್ಯ'ವೆಂದು ಪ್ರತಿಪಾದಿಸುವ ವಾರಕರಿಪಂಥವು ಹದಿಮೂರನೆಯ ಶತಮಾನದಿಂದ ಹದಿನೆಂಟನೆಯ ಶತಮಾನದವರೆಗೆ ಸಾಮಾಜಿಕವಾಗಿ ಅಗಾಧವಾದ ಪರಿಣಾಮವನ್ನು ಬೀರಿತು. ಈ ಕಾಲದಲ್ಲಿ ಜಾತಿವೈಷಮ್ಯವನ್ನು ಕಡೆಗಣಿಸಿ ಸರ್ವಜನರೂ ಸಮಾನರೆಂದು ವಾದಿಸಿತು. ತ್ಯಾಗ, ಸರಳತೆ, ಇಂದ್ರಿಯ ನಿಗ್ರಹ, ಸಹಬಾಳ್ವೆ, ಅನುಕಂಪ ಮೊದಲಾದ ನೀತಿಯುಕ್ತ ವಿಚಾರಗಳಿಗೆ ಮನ್ನಣೆಯನ್ನೀಡಿತು. ಪರಸ್ಪರ ನಮಸ್ಕರಿಸುವುದರ ಮೂಲಕ ಭಗವಂತನಿಗೆ ಸಲ್ಲಿಸುವ ಗೌರವಾರ್ಪಣೆಯನ್ನು ಆ ಜನತೆಯು ಒಪ್ಪಿಕೊಳ್ಳಲು ಮುಂದಾಯಿತು. ಕೆಳವರ್ಗದವರ ಜೀವನಮೌಲ್ಯವನ್ನು ಉದ್ಧರಿಸುವ ವಾರಕರಿಪಂಥದ ಕಲ್ಪನೆಯು ಅಂದಿನ ಸ್ಥಿತಿಗತಿಗಳಲ್ಲಿ ದೊಡ್ಡ ಸವಾಲಾಗಿ ಪರಿಣಮಿಸಿತು. ಆದರೂ ಸರ್ವಸಮಾನವಾದ ಜನಸ್ಪಂದನ ಚಿಂತನೆಯನ್ನು ವಾರಕರಿಪಂಥವು ಸ್ವೀಕರಿಸಿಕೊಂಡೇ ಮುಂದುವರಿಯಿತು.

ವಾರಕರಿಸಾಹಿತ್ಯದ ವಿಶೇಷತೆಯೆಂದರೆ ದೀರ್ಘವಲ್ಲದ ಕಿರುಪದ್ಯರಚನೆಗಳು ಮತ್ತು ಸರಳಶೈಲಿಗಳು. ಆದುದರಿಂದಲೇ ಈ ಸಾಹಿತ್ಯ ಪ್ರಕಾರ ಜನತೆಯ ಬಾಯಿಗೊಂದು ಹರಿಪಾಠವಾಯಿತು. ಅವರು ರಚಿಸಿದ ನಾಮಸಂಕೀರ್ತನೆಗಳು ಇಂದಿಗೂ ಪ್ರಚಲಿತವಿದ್ದು, ಅಂದಿನ ಜನತೆಯ ಆಧ್ಯಾತ್ಮದ ಪರಿಚಯವನ್ನು ಅದು ಮಾಡಿಕೊಡುತ್ತದೆ. ವಾರಕರಿ ಸಂತರು ವಿಠೋಬನ ಭಕ್ತಿಯಲ್ಲಿ ರಚಿಸಿದ ಕಿರುಕೀರ್ತನೆಗಳಿಗೆ 'ಅಭಂಗ'ಗಳೆಂದು ಕರೆದದ್ದು ಮಾತ್ರವಲ್ಲದೆ, ಅವರಲ್ಲಿ ಇಂದಿಗೂ ಜಾತ್ಯತೀತ ಕಲ್ಪನೆಯ ಅಭಂಗಪೂಜೆ ನಡೆಯುವುದನ್ನು ನಾವು ಕಾಣಬಹುದು. ಜ್ಞಾನೇಶ್ವರ, ನಾಮದೇವ, ಏಕನಾಥ, ಜಾನಾಬಾಯಿ, ತುಕಾರಾಮ, ಸಕ್ಕೂಬಾಯಿ, ಗೋರ ಕುಂಬಾರ ಮೊದಲಾದವರೆಲ್ಲ ಈ ಅಭಂಗಕೀರ್ತನೆಗಳನ್ನು ರಚಿಸಿ, ಅಭಂಗಪೂಜೆಯನ್ನು ನಡೆಸಿದವರೆ. ಇವರೊಂದಿಗೆ ಶೈವನಾಗಿದ್ದ ವಿಶೋಭ ಖೇಚರ, ಕ್ಷೌರಿಕನಾದ ಸೇನ, ಸೋನೆಗಾರ ನರಹರಿ, ನರ್ತಕಿ ಕನ್ಹೋಪಾತ್ರ, ಮುಸಲ್ಮಾನನಾಗಿದ್ದ ಶೇಖ್‌ಅಹಮ್ಮದ್, ಭಾನುದಾಸ ಮೊದಲಾದವರೆಲ್ಲಾ ಅಭಂಗಗಳನ್ನು ರಚಿಸಿ, ವಾರಕರಿಪಂಥದ ಮುನ್ನಡೆಗೆ ಕೈಜೋಡಿಸಿದ್ದವರುಗಳು.[೧೯]

ಮರಾಠಿ ಸಂತಪರಂಪರೆಯಲ್ಲಿ ಜ್ಞಾನೇಶ್ವರರ ಹೆಸರಿಗೆ ಆದ್ಯತೆ ಹೆಚ್ಚು. ಇಲ್ಲಿ ಮರಾಠೀ ಸಂತಪರಂಪರೆಯನ್ನು ನಾಮದೇವರು ವಿಸ್ತರಿಸಿದರೆ, ಏಕನಾಥರು ಅದರ ಪುನರ್ಜೀವನಕ್ಕೆ ನಾಂದಿ ಹಾಡಿದರು.

ಸಂತ ಕೃಪಾ ಝೂಲಿ । ಇಮಾರತ ಫಳಾ ಆಲಿ ।
ಜ್ಞಾನದೇವ ಘಾತಲಾ ಪಾಯ । ಉಭಾರಿಲೆ ದೇವಾಲಯಾ ।
ನಾಮ ತಯಾಚಾ ಕಿಂಕರ । ತೆಣೆರೆಚಿಲೆ ಆವಾರ ।
ಜನಾರ್ದನ ಏಕನಾಥ । ಖಾಂಬ ದಿಲಾ ಭಾಗವತ ।
ತುಕಾ ಜಾಲಾಸಿ ಕಳಸ । ಭಜನ ಕರಾ ಸಾವಕಾಶ
ಬಹೇಣಿ ಫಡಕತಿ ಧ್ವಜಾ । ನಿರೋಪಣ ಕೆಲ ವ್ರೋಜಾ ।[೨೦]

ಇದು ಮರಾಠಿ ಸಂತಪರಂಪರೆಯನ್ನು ಹೇಳುವ ಬಹಿಣಾಬಾಯಿ (ಸಂತ ತುಕಾರಾನರ ಶಿಷ್ಯೆ)ಯ ಅಭಂಗ. ಇಲ್ಲಿ ಭಕ್ತಿ ಮಂದಿರಕ್ಕೆ ಸಂತರು ಹಾಕುವ ಅಡಿಪಾಯವಿದೆ; ನಿರ್ಮಾಣ ಕಾರ್ಯವಿದೆ. ಜೊತೆಗೆ ಮುಂದುವರಿಸಿದ ತತ್ವಜ್ಞಾನದ ಹೊಳಪಿದೆ. ಎಲ್ಲಕ್ಕಿಂತ ಮುಖ್ಯವಾಗಿ ಭಾಗವತ ಧರ್ಮದ ಪ್ರಚಾರವಿದೆ.

ಇಲ್ಲಿ ಸಮಸ್ತ ಸಂತರಿಗೂ ಆರಾಧ್ಯದೈವನಾದವನು ಪಂಢರಾಪುರದ ವಿಠಲ. ಆ ವಿಠಲನಿಗಾಗಿಯೇ ಮರಾಠಿ ಸಂತರ ಯಾತ್ರೆ ನಡೆಯುತ್ತದೆ. ಅವನ ದರ್ಶನಕ್ಕಾಗಿಯೇ ಚಂದ್ರಭಾಗೆಯಲ್ಲಿ ಮೀಯುತ್ತಾರೆ. ಅಲ್ಲದೆ, ವರ್ಣಭೇದವನ್ನು ದಾಟುತ್ತಾರೆ. ಭಕ್ತಿಯಿಂದ ಪಂಢರಾಪುರ ಮಹಾತ್ಮೆ, ವಿಠಲನ ವರ್ಣನೆ, ಕೃಷ್ಣನ ಬಾಲಲೀಲೆಗಳು, ಜ್ಞಾನೋಪದೇಶ ಇವೇ ಮೊದಲಾದವುಗಳನ್ನು ತಮ್ಮ ಅಭಂಗಗಳಲ್ಲಿ ರಚಿಸಿ, ಹಾಡುತ್ತಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯವೆಂದರೆ, ಪಂಢರಾಪುರದ ವಿಠಲನಲ್ಲಿ ತೋರಿಸಿದ ಭಕ್ತಿಯಲ್ಲಿ ಕರ್ನಾಟಕದ ದಾಸಪರಂಪರೆ ಮತ್ತು ಮಹಾರಾಷ್ಟ್ರದ ಸಂತಪರಂಪರೆಯದ್ದು ಸಮಾನಪಾಲು ಎನ್ನಬೇಕು.

ಧಾರ್ಮಿಕ ಸಂಗಮ ಕ್ಷೇತ್ರಗಳು : ಮರಾಠಿ ಸಂತರು ತಮ್ಮ ಧಾರ್ಮಿಕ ಕ್ಷೇತ್ರವನ್ನು ಕೇವಲ ಪಂಢರಾಪುರಕ್ಕೆ ಮಾತ್ರ ಮೀಸಲಾಗಿರಿಸದೆ, ಇತರ ಕ್ಷೇತ್ರಗಳಲ್ಲೂ ಹಬ್ಬಿಸಿದ್ದರು. ಅವುಗಳಲ್ಲಿ ಕೊಲ್ಹಾಪುರದ ಮಹಾಲಕ್ಷ್ಮೀ, ತುಳಜಾಪುರದ ಭವಾನಿ ಅಂಬೆಜೋಗಾಯಿ, ಜ್ಯೋತಿ ಬಾ, ಜೇಜೂರಿಯ ಖಂಡೋಬಾ, ಪರಳೀವೈಜನಾಥ, ಸೊನ್ನಲಿಗೆಯ ಸಿದ್ಧರಾಮೇಶ್ವರ, ನರಸೋಬವಾಡಿಯ ದತ್ತಾತ್ರೇಯ, ಶಿಂಗಣಾಪುರದ ಶನೀಶ್ವರ, ಶಿರಡಿಯ ಸಾಯಿಬಾಬಾ ಮಂದಿರಗಳು ಮುಖ್ಯವಾದವುಗಳು. ಈ ಎಲ್ಲಾ ಸ್ಥಳಗಳಲ್ಲಿ ಭಕ್ತಿಭಾವದಿಂದ ಕೂಡಿದ ಅಭಂಗಗಳನ್ನು ರಚಿಸಿ, ದೈವೀಸಾನ್ನಿಧ್ಯಕ್ಕಾಗಿ ಹಾತೊರೆದರು. ಸಾಮಾಜಿಕ ಸ್ವಾಸ್ಥ್ಯಕ್ಕಾಗಿ ಪ್ರಾರ್ಥಿಸಿದರು.

ಮರಾಠಿ ಸಂತರ ಅಭಂಗಗಳಲ್ಲಿ ಭಕ್ತಿ : ಮರಾಠಿಸಂತರಿಗೆ ಧಾರ್ಮಿಕಕ್ಷೇತ್ರಗಳು ಹಲವಾರಿದ್ದರೂ, ಅವರು ತಮ್ಮ ಅಭಂಗಗಳಲ್ಲಿ ಹೆಚ್ಚಾಗಿ ಸ್ತುತಿಸಿರುವುದು ಪಂಢರಾಪುರದ ವಿಠ್ಠಲನನ್ನು. ಆದರೂ ಆ ಸ್ತುತಿಯಲ್ಲಿರುವ ಮತ್ತೊಂದು ವಿಶೇಷತೆಯೆಂದರೆ ಅಲ್ಲಿಯ ವಿಠಲನನ್ನು ಕನ್ನಡದ ವಿಠ್ಠಲನೆಂದು ಅವರು ಕಂಡುಕೊಂಡ ಪರಿ. ಸಂತ ಶ್ರೇಷ್ಠರಾದ ಜ್ಞಾನೇಶ್ವರರೇ ತಮ್ಮ ಅಭಂಗದಲ್ಲಿ ಪಂಢರಾಪುರದ ವಿಠ್ಠಲನು ಕರ್ನಾಟಕದವನೆಂದು ಭಕ್ತಿಯ ಭರದಲ್ಲಿ ಹೇಳಿಕೊಂಡಿದ್ದಾರೆ

ಪಾಂಡುರಂಗ ಕಾಂತಿ ದಿವ್ಯ ತೇಜ ಝುಳಕತಿ ।
ರತ್ನಕೀಳ ಫಾಂಕತಿ ಪ್ರಭಾ । ಅಗಣಿತ ಲಾಮ್ಯಾ ತೇಜ
ಪುಂಜಾಳಲೆ । ನ ವರ್ಣವೆ ತೇಥಿಜಿ ಶೋಭಾ ।
ಕಾನಡಾ ಹೊ ವಿಠಲ ಕರ್ನಾಟಕು । ತ್ಯಾಂನೇ ಮಜಲಾವಿಲೆ ವೇಧಿ ।[೬]

ಕರ್ನಾಟಕದ ವಿಠ್ಠಲನು ಮರಾಠಸಂತನಾದ ಜ್ಞಾನೇಶ್ವರರಿಗೆ ಒಲಿದವನು. ಹಾಗಾಗಿ ವಿಠ್ಠಲನ ಚೆಲುವಿಗೆ ಮನಸೋತ ಜ್ಞಾನೇಶ್ವರರು ಕನ್ನಡದಲ್ಲೂ ಕೃತಿಯನ್ನು ರಚಿಸಿದ್ದರೆಂದು ತಿಳಿದುಬರುತ್ತದೆ. ಆದುದರಿಂದ ಜ್ಞಾನೇಶ್ವರರದ್ದು ಕೇವಲ ಮರಾಠಿ ಭಕ್ತಿಯಾಗಿರದೆ, ಕನ್ನಡದಲ್ಲೂ ಆ ಭಕ್ತಿಸುಧೆ ಅವರಿಂದ ಹರಿದಿದೆ ಎಂದು ಭಾವಿಸಿಕೊಳ್ಳಬೇಕು.

ಆಶಾನಿಕೆಲೆ ಚಿಕನಾಮಾತು । ಕಾರಲೆ ಧಸಿಗೆ
ಮರುಳಾದನೆ । ಚಲುವಾನೆ ಚಲುವನೆ
ಫಂಡರಿರಾಯ ಚಲುವಾನೆ । ಎಲ್ಲೆ ದೌನರ್ಕವಾನೆ ।
ಪುಂಡಲುಕನೇ ಭಕ್ತಿ ಬಂದಾ । ರಖುಮಾದೇವಿವರ ವಿಠಲುನೆ ।[೭]

ಹೀಗೆ, ಜ್ಞಾನೇಶ್ವರರ ಅಭಂಗಗಳ ರಚನೆಯಲ್ಲಿ ಕೇವಲ ವಿಠಲಭಕ್ತಿಯು ಮಾತ್ರ ಗೋಚರವಾಗದೆ ಕನ್ನಡಭಾಷಾಭಿಮಾನವೂ ಅಲ್ಲಿ ತೋರಿರುವುದು ವಿಶೇಷ. ಇವರ ನಂತರದಲ್ಲಿ ವಿಶೋಬಾಖೇಚರರದ್ದು ಮುಖ್ಯಹೆಸರು. ಇವರು ವೀರಶೈವ ಸಂತಕವಿಗಳೆನ್ನುವುದು ಗಮನಿಸಬೇಕಾದ ವಿಚಾರ. ಅವರ ಮುಖ್ಯಕೃತಿ 'ಷಟ್‌ಸ್ಥಲ'. ತಮ್ಮ ಕೃತಿಯಲ್ಲಿ ಲಿಂಗ ಹಾಗೂ ಅಂಗದ ಐಕ್ಯದ ಕುರಿತಾಗಿ ಜೀವಶಿವೈಕ್ಯವನ್ನು ಹೇಳಿ, ವೀರಶೈವ ಶರಣ ಭಕ್ತಿಯನ್ನು ತೋರಿಸಿ ಕೊಟ್ಟಿದ್ದಾರೆ.

ಕಾಶಿಯೇ ಕನೋಜಾ ದ್ವಾರಕೆ ಗುಜರು
ಕಾನಡಾ ವಿಠಲ ಪಂಢರಿಯೇ ॥[೭೩]

ಇದು ನಾಮದೇವರ ಗಾಥಾದಲ್ಲಿ ಬರುವ ಮಾತು. ಸಂತ ನಾಮದೇವರು ಹೇಳುವಂತೆ ಕನೋಝು ಪ್ರಾಂತ್ಯದ ಕಾಶಿಯಂತೆ, ಗುಜರಾತಿನ ದ್ವಾರಕೆಯಂತೆ, ಕರ್ನಾಟಕದ ಪಂಢರಿಯ ವಿಠಲ. ಇಲ್ಲಿ ನಾಮದೇವರಲ್ಲಿ ಕಾಣುವುದು ಎರಡು ರೀತಿಯ ಭಕ್ತಿಯನ್ನು. ಒಂದು ವಿಠ್ಠಲನ ಕುರಿತ ಭಕ್ತಿಯಾದರೆ, ಇನ್ನೊಂದು ಕನ್ನಡನಾಡಿನ ಕುರಿತಾದ ಭಕ್ತಿ.

ಕಾನಡಾ ವಿಠಲವ್ರೋ ಉಭಾಭಿವರೇ ತೀರಿ
ನಾಮ ಬರವೇ ರೂಪ ಬರವೆ
ದರ್ಶನ ಬರವೇ ಕಾನಡಿಯಾ ॥

ಭೀಮಾತೀರದಲ್ಲಿ ನಿಂತ ವಿಠ್ಠಲನ ಚೆಲುವಾದ ರೂಪವನ್ನು ಭಕ್ತಿಯ ಪರಾಕಾಷ್ಠೆಯಲ್ಲಿ ಕಾಣುವ ಮನಸ್ಸು ನಾಮದೇವರದು. ಆದರೆ ಈ ರೀತಿಯ ಭಾವಸಮಾಧಿಗೆ ಒಳಗಾದವರಲ್ಲಿ ಏಕನಾಥನೂ ಒಬ್ಬ. ವಿಠಲನ ಕುರಿತಾಗಿ ಭಕ್ತಿಯ ಭಾವಾವೇಶಕ್ಕೆ ಒಳಗಾಗಿ ಏಕನಾಥನ ಸಂತವಾಣಿ ಈ ರೀತಿ ಹರಿಯುತ್ತದೆ.

ಕಾನಡಾ ವಿಠಲ ಕಾನಡಾ ವಿಠಲ । ಕಾನಡಾ ವಿಠಲ ವಿಚೆವರಿ
ಕಾನಡಾ ವಿಠಲ ನಾಮೆ ಬರವಾ । ಕಾನಡಾ ವಿಠಲ ಹೃದಯಿ ಧ್ಯಾವಾ ।
ಕಾನಡಾ ವಿಠಲ ರೂಪೆ ಸಾವಳಾ । ಕಾನಡಾ ವಿಠಲ ಪಾಹಿಲಾ ಡೊಳಾ ।
ಕಾನಡಾ ವಿಠಲ ಚಂದ್ರ ಭಾನೇ ತಟಿ । ಕಾನಡಾ ವಿಠಲ ಪಹಾವಾ ಉಠಾಉರಿ ।
ಕಾನಡಾ ವಿಠಲ ಕಾನಡಾ ಬೊಲೆ । ಕಾನಡ್ಯಾ ವಿಠಲೇ ಮನ ವೆಧಿಯಲೆ ।
ವೇದಿಯನೆ ಮನ ಕಾನಡಿಯಾನೇ ಮಾಝೆ । ಏಕಾಜನಾರ್ದನಿ ದುಜೆನಾಠವೇಚೆ ॥[೭೪]

ಮರಾಠಾಸಂತರ ಹೆಚ್ಚಿನ ಸ್ತುತಿಗಳೆಲ್ಲವು ಪಂಢರಾಪುರದ ವಿಠಲನ ಕುರಿತಾಗಿ. ಆದರೆ ಇಲ್ಲಿಯ ವಿಠ್ಠಲನು ಕನ್ನಡದವನು. ಒಂದು ಕಾಲದಲ್ಲಿ ಪಂಢರಾಪುರವು ಕರ್ನಾಟಕಕ್ಕೆ ಸೇರಿದ್ದುದೇ ಇದಕ್ಕೆ ಕಾರಣ. ಆದರೆ ಮಹಾರಾಷ್ಟ್ರದಲ್ಲಿ ಹುಟ್ಟಿದ ಶ್ರೀಸಮರ್ಥ ರಾಮದಾಸರು ವಿಠ್ಠಲನ ಕುರಿತಾಗಿ ಮಾತ್ರ ಭಕ್ತಿಯನ್ನು ಹರಿಸದೆ, ಕನ್ನಡಮಾತೆಯ ಕುರಿತಾಗಿಯೂ ಕೈಯನ್ನು ಮುಗಿದಿದ್ದಾರೆ.

ಜಯದೇವಿ ಜಯದೇವಿ ಜಯವೇದ ಮಾತೆ ।
ಹಾಟಕ ಕರನಾಟಕ ಕರುಣಾ ಕಲ್ಲೋಳಿ ॥ –ಶ್ರೀರಾಮದಾಸರು

ಪ್ರಾಯಶಃ ಇದೊಂದು ಅಪೂರ್ವ ಕಲ್ಪನೆ. ಕನ್ನಡದ ಜನರನ್ನು ರಕ್ಷಿಸೆಂದು ಹೊರನಾಡ ಸಂತನೋರ್ವ ಆಶಿಸುವ ಕ್ರಮ ಮಾತ್ರದಲ್ಲಿ ನಿಜಕ್ಕೂ ವಿಶೇಷವಾಗಿದೆ. ಜಾತಿಯಲ್ಲಿ ಮುಸಲ್ಮಾನರಾದರೂ ಜೀವನದಲ್ಲಿ ಪ್ರಚಾರ ಮಾಡಿದ್ದು ಹಿಂದೂಧರ್ಮತತ್ವ. 'ತಾಮಸವನ್ನು ತ್ಯಜಿಸಿ ದಾಸರ ಪ್ರೇಮವನ್ನು ಬಯಸಿ ಭೂಮಿಯೊಳು ಶ್ರೀರಾಮ

ರಹೀಮನೆಂದು ನೇಮಿಸಿಕೊಂಡ ನಿಸ್ಸೀಮಕುಲ ನಂದು' ಎನ್ನುವ ಬಡೇಸಾಹೇಬರಲ್ಲಿ ಸಮನ್ವಯದೃಷ್ಟಿಯನ್ನು ಕಂಡುಕೊಳ್ಳುತ್ತಾರೆ ಟಿ. ಎನ್. ನಾಗರತ್ನ ಅವರು.[೬೫]

ಮರಾಠಿ ಭಕ್ತಿ ಸಾಹಿತ್ಯವು ಕೇವಲ ಸಂತರಿಂದ ಮಾತ್ರ ಶ್ರೀಮಂತವಾದುದಲ್ಲ. ಅಲ್ಲಿಯ ಭಕ್ತಿಸಾಹಿತ್ಯದಲ್ಲಿ ಇತರ ಸಂಪ್ರದಾಯಗಳ ಭಾವಪ್ರಪಂಚವಿದೆ. ಆದುದರಿಂದಲೇ ಅಲ್ಲಿಯ ಭಕ್ತಿಸಾಹಿತ್ಯವು ಹೆಚ್ಚು ಶ್ರೀಮಂತ. ಅದಕ್ಕೆ ಶ್ರೀಸರಸ್ವತಿ ಗಂಗಾಧರರು ರಚಿಸಿದ 'ಶ್ರೀಗುರುಚರಿತ್ರೆ' ಶ್ರೀವಾಸುದೇವಾನಂದ ಸರಸ್ವತಿಯವರ 'ದತ್ತ ಮಹಾತ್ಮೆ', ದತ್ತ ಅವಧೂತ ಸಂಪ್ರದಾಯದ ಶ್ರೀಪಂತ ಮಹಾರಾಜ ಬಾಳೆಕುಂದ್ರಿಯವರು ರಚಿಸಿದ 'ದತ್ತ ಪ್ರೇಮಲಹರಿ', ಸಂತ ರಾಜಾರಾಮರ 'ಬ್ರಹ್ಮಾನಂದಲಹರಿ' ಮೊದಲಾದ ಕೃತಿಗಳು ಸಾಕ್ಷಿಯಾಗಿ ನಿಲ್ಲುತ್ತವೆ. ಏನಿದ್ದರೂ ಭಾರತೀಯ ಭಕ್ತಿಪರಂಪರೆಗೆ ಮರಾಠಿ ಸಂತರ ಕೊಡುಗೆ ನೆನಪಿನಲ್ಲುಳಿಯುವಂತಹುದು.

*****

ಒಟ್ಟಿನಲ್ಲಿ, ಭಾರತೀಯ ಭಕ್ತಿಪಂಥವು ನೂರಾರು ಮತಧರ್ಮಗಳ ತವರು. ಸರ್ವಮತಧರ್ಮಗಳ ಸಾಮೂಹಿಕ ಭಕ್ತಿಸ್ವರೂಪವೇ ಭಾರತೀಯ ವಿರಾಡ್‌ಭಕ್ತಿರೂಪ. ಇಲ್ಲಿ ಒಂದು ಇನ್ನೊಂದರ ಕುರಿತು ಸಹಮತವನ್ನು ಬೀರುತ್ತದೆ; ಸಹಾನುಭೂತಿಯನ್ನೂ ತೋರಿಸುತ್ತದೆ. ಆದುದರಿಂದಲೇ ಕಾಶೀಯಾತ್ರೆಗೆ ಹೊರಟ ವಿದ್ಯಾರಣ್ಯರು(ಕ್ರಿ.ಶ.೧೩೩೬) ಮಾರ್ಗ ಮಧ್ಯದಲ್ಲಿ ಜಯತೀರ್ಥರನ್ನು ಭೇಟಿಯಾಗಿ ಸನ್ಮಾನ ಮಹೋತ್ಸವವನ್ನು ನೆರವೇರಿಸಿದುದು.[೬೬] ಇದು ನಿಜವಾದ ಭಾರತೀಯ ಪರಂಪರೆಯ ವಿದ್ಯಾಭಿಮಾನ. ಈ ಕಲ್ಪನೆಯಿಂದಲೇ ಸೋಮನಾಥನಂತಹ ಮಹಾಕವಿಗೆ ಅಸಾಧಾರಣವಾದ ಸನ್ಮಾನವನ್ನು ವ್ಯಾಸರಾಯರು ಮಾಡಿದುದು. ವೈಷ್ಣವಪಂಥವು ಶೈವಪಂಥಗಳಲ್ಲಿ ಭಿನ್ನತೆಯನ್ನು ತೋರಿದ್ದರೂ, ಆಯಾಯ ಮತಧರ್ಮಗಳ ಪಾಂಡಿತ್ಯವನ್ನು ಪುರಸ್ಕರಿಸುವ, ಸಮ್ಮತಿಸುವ ವಾತಾವರಣ ನಮ್ಮ ನೆಲದ್ದು. ಹಾಗಾಗಿ ಇಂತಹ ವಿಶಿಷ್ಟ ಬಗೆಯ ಭಿನ್ನತೆಗಳು ಆಯಾಯ ಮತಧರ್ಮದಲ್ಲಿರಬೇಕು. ಈ ಭಿನ್ನತೆಗಳೇ ಭಾರತೀಯ ಸಂಸ್ಕೃತಿಯ ಸೌಂದರ್ಯವಾಗಿರುವುದರಿಂದ ಪರಸ್ಪರ ಧರ್ಮಗಳು ಭಿನ್ನತೆಯನ್ನು ಉಳಿಸಿಕೊಂಡು, ಪರಸ್ಪರ ಮತಧರ್ಮವನ್ನು ಗೌರವಿಸಬೇಕು. ಭಾರತೀಯರ ಒಟ್ಟು ವಿವೇಚನೆಯಲ್ಲಿ ಧರ್ಮಸಮನ್ವಯತೆಯೇ ಮುಖ್ಯವಾಗಿ ತೋರಬೇಕು. ಅಂತಹ ಸಮನ್ವಯಗುಣ ನಮ್ಮ ನೆಲದಗುಣವೂ ಕೂಡ. ಆದುದರಿಂದಲೇ ಆಚಾರ್ಯ ಶಂಕರರ ಅದ್ವೈತಪೀಠ, ಶ್ರೀರಾಮಾನುಜರ ವಿಶಿಷ್ಟಾದ್ವೈತಾಶ್ರಯ, ಮಧ್ವಾಚಾರ್ಯರಿಂದ ದ್ವೈತಸಿದ್ಧಾಂತ ಸ್ಥಾಪನೆ...ಇವೆಲ್ಲವೂ ಈ ಮಣ್ಣಿನ ಸಮನ್ವಯ ಸಂಸ್ಕೃತಿಯ ಗುಣಗಳೆನ್ನುವುದರಲ್ಲಿ ಎರಡು ಮಾತಿಲ್ಲ. ಈ ನಿಟ್ಟಿನಲ್ಲಿ ನಮ್ಮ ನಾಡಿನ ಧರ್ಮದರ್ಶಕ್ಕೆ ಬೇಲೂರಿನ ಶಾಸನವೊಂದು ಕನ್ನಡಿಯಾಗಿ ನಿಲ್ಲುತ್ತದೆ.[೬೭] ಇಲ್ಲಿ ಶಿವ, ವಿಷ್ಣು, ಜಿನ, ಬುದ್ಧ ಮೊದಲಾದವರೆಲ್ಲ ಬಿತ್ತರಿಸಿದ ಚೈತನ್ಯ ಶಕ್ತಿರೂಪ ಲೋಕಕ್ಕೊಂದೇ ಎಂಬ ಆದರ್ಶತತ್ವವನ್ನು ನಾವಿಲ್ಲಿ ಮನಗಾಣಬೇಕು. ಚಾಲುಕ್ಯ ದೊರೆ ವಿಜಯಾದಿತ್ಯನ ಕಾಲದಲ್ಲಿ ಸ್ಥಾಪಿಸಲ್ಪಟ್ಟ ಬ್ರಹ್ಮ, ವಿಷ್ಣು, ಶಿವ ಮೂರ್ತಿಗಳ ಕುರಿತ ಬಾದಾಮಿ ಶಾಸನದ ಪ್ರಸ್ತಾಪ,[೬೮] ರಾಜಮಾತೆಯಾದ ವಿನಯಾವತಿಯು ವಾತಾಪಿ(ಬಾದಾಮಿ)ಯಲ್ಲಿ ನಿರ್ಮಿಸಿದ ತ್ರಿಮೂರ್ತಿ

ದೇವಾಲಯ, ‘ಶಿವ–ವಿಷ್ಣು’ಗಳಿಬ್ಬರನ್ನೂ ಸ್ತುತಿಮಾಡುವ ರಾಷ್ಟ್ರಕೂಟ ಶಾಸನ ಶ್ಲೋಕಗಳು, ಬ್ರಹ್ಮ_ವಿಷ್ಣು_ಶಿವರನ್ನು ಆಧರಿಸಿದ, ತ್ರೈಪುರುಷ ದೇವಾಲಯದ ರಚನೆಯನ್ನು ಸಾರುವ ಕ್ರಿ.ಶ.೧೦ ನೆಯ ಶತಮಾನದ ಸಾಲೂಟಗಿ ಶಾಸನ...[೭೯] ಇವುಗಳೆಲ್ಲ ಭಾರತೀಯ ಧಾರ್ಮಿಕ ಸಹಿಷ್ಣುತೆಗೆ ಮತ್ತು ಸಮನ್ವಯತೆಗೆ ಸಾಕ್ಷಿ ಒದಗಿಸುತ್ತವೆ. ಇಷ್ಟೇ ಅಲ್ಲದೆ, ಹೊಯ್ಸಳ ರಾಜನಾದ ೨ನೇ ನರಸಿಂಹ ದಂಡನಾಯಕನು ಹರಿಹರರ ಸಮನ್ವಯತೆಗಾಗಿ ಹರಿಹರ ಮೂರ್ತಿಯನ್ನು ಪ್ರತಿಷ್ಠಾಪಿಸಿದನೆಂದು ದಾವಣಗೆರೆಯ ಶಾಸನ ಸಾಹಿತ್ಯ ತಿಳಿಸಿಕೊಡುತ್ತದೆ.[೮೦]

ಭಾರತೀಯ ಭಕ್ತಿಸಂಸ್ಕೃತಿಯನ್ನು ಮೊದಲಿನಿಂದ ಇಂದಿನತನಕ ಗಮನಿಸಿದಾಗ ನಮಗೆ ಎದ್ದು ಕಾಣುವ ಅಂಶಗಳೆಂದರೆ, ‘ಸಂಸ್ಕೃತಿ–ಸಮನ್ವಯತೆ’, ಭಾರತೀಯ ಭಕ್ತಿಜ್ಞಾನಕರ್ಮಗಳಲ್ಲಿ ಸಮನ್ವಯ, ಲೌಕಿಕ ಅಲೌಕಿಕಗಳಲ್ಲಿ ಸಮನ್ವಯ, ಪ್ರಾಚೀನ ಅರ್ವಾಚೀನಗಳಲ್ಲಿ ಸಮನ್ವಯ, ವ್ಯಕ್ತಿ ಪರಿಸರದಲ್ಲಿ ಸಮನ್ವಯ; ಧರ್ಮಗಳಲ್ಲಿ ಹಾಗೂ ಪಂಥ ಪಂಥಗಳಲ್ಲಿ ಸಮನ್ವಯ, ಏಕತೆಯಿಂದ ಹಿಡಿದು ಅನೇಕತೆಯವರೆಗೂ ಸಮನ್ವಯ. ಹೀಗೆ ಎಲ್ಲ ಹಂತಗಳಲ್ಲೂ ಹೊಂದಾಣಿಕೆಯನ್ನು ಮಾಡಿಕೊಳ್ಳುವ ಭೂಮಿ ನಮ್ಮದು.

ಇಲ್ಲಿಯ ಭಕ್ತಿಪರಂಪರೆಯ ವಿಶಿಷ್ಟರೂಪವು ಕೇವಲ ಆರ್ಯರದ್ದಲ್ಲ. ದ್ರಾವಿಡರದ್ದೂ ಅಲ್ಲ. ಅಥವಾ ಇತರ ಮೂಲ ನಿವಾಸಿಗಳದ್ದೂ ಅಲ್ಲ. ಆದುದರಿಂದ ಭಾರತೀಯ ಭಕ್ತಿರೂಪ ಶಿಷ್ಟವೂ ಹೌದು; ದೇಸೀ ಕಲ್ಪನೆಯೂ ಹೌದು. ಈ ನಿಟ್ಟಿನಲ್ಲಿಯೇ ಅದು ಸುಂದರ ಸಾಮರಸ್ಯದಿಂದ ಸಾಕಾರಗೊಂಡಿರುವಂತಹುದು. ಇಲ್ಲಿ ಸಮನ್ವಯತೆ ಇದೆ ; ಸತ್ಯದ ಜಿಜ್ಞಾಸೆಯಿದೆ ; ಜೊತೆಗೆ ಆದರ್ಶವೂ ಇದೆ.

****

ಅಧ್ಯಾಯ : ೨. ಅಡಿ ಟಿಪ್ಪಣಿಗಳು

೧. Indian Philosophy , Volume 1,Page 237.

೨. ದಾಸಸಾಹಿತ್ಯ ದರ್ಶನ, ಪುಟ ಸಂ–೫೧೫

೩. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ ಸಂ–೨೧.

೪. ದಾಸಸಾಹಿತ್ಯ ದರ್ಶನ, ಪುಟ ಸಂ–೫೧೫

೫. ದಾಸಸಾಹಿತ್ಯ ದರ್ಶನ, ಪುಟ ಸಂ–೫೧೫

೬. ಮರಾಠೀ_ ಹಿಂದೀ ಕೃಷ್ಣ ಕಾವ್ಯ ಕಾ ತುಲನಾತ್ಮಕ ಅಧ್ಯಯನ : ರ.ಶಾ.ಕೇಲಕರ. ಪುಟ ಸಂ–೧೬

೭. ಮಹಾಭಾರತ : ೧೮. ೬. ೯೭. ಪುಟ ಸಂ–೫೬೧,

೮. ಶ್ರೀಕೃಷ್ಣ ಕಥೆಯ ಉಗಮ ಮತ್ತು ವಿಕಾಸ, ಪುಟ ಸಂ–೧.

೯. ಶ್ರೀಕೃಷ್ಣ ಕಥೆಯ ಉಗಮ ಮತ್ತು ವಿಕಾಸ .ಸಂ.ಡಾ. ಪ್ರಧಾನ ಗುರುದತ್ತ. ಪುಟ ಸಂ–೦೧

೧೦. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ ಸಂ–೨೫

೧೧. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ ಸಂ–೨೫

೧೨. A History of Indian philosophy, Vol-1,page 10.

೧೩. ಋಗ್ವೇದ ಸೂಕ್ತ, ೧. ೧೬೪. ೪೬/ ಶ್ರೀಕೃಷ್ಣ ಕಥೆಯ ಉಗಮ ಮತ್ತು ವಿಕಾಸ, ಪುಟ ಸಂ–೦೫.

ಇಂದ್ರಂ ಮಿತ್ರಂ ವರುಣಮಗ್ನಿಮಾಹುರಥೋ ದಿವ್ಯಃ ಸ ಸುಪರ್ಣೋ ಗುರುತ್ಮಾನ್ ।
ಏಕ ಸದ್ವಿಪ್ರಾ ಬಹುದಾ ವದನ್ತ್ಯಗ್ನಿಂ ಯಮಂ ಮಾತರಿಶ್ವಾನ ಮಾಹು: ॥

೧೪. ಋಗ್ವೇದ ಒಂದು ಅಧ್ಯಯನ, ಪುಟ ಸಂ–೩೫೩.

ಅಸ್ಥುರು ಚಿತ್ರಾ ಉಷಸ: ಪುರುಸ್ತಾನ್ಮಿತಾ ಇವ ಸ್ವರವೋಧ್ವರೇಷು ।
ವ್ಯೂ ವ್ರಜಸ್ಯ ತಮಸೋ ದ್ವಾರೋಚ್ಛನ್ತೀರವುಂಚ್ಛುಚಯ: ಪವಕಾ: ॥

೧೫. ಋಗ್ವೇದ ಒಂದು ಅಧ್ಯಯನ, ಪುಟ ಸಂ–೧೨೦.

ದ್ವಾ ಸುಪರ್ಣಾ ಸಂಯುಜಾ ಸಖಾಯ ಸಮಾನಂ ವೃಕ್ಷಂ ಪರಿಷಸ್ವಜಾತೇ ।
ತಯೋರನ್ಯಃ ಪಿಪ್ಪಲಂ ಸ್ವಾದತ್ತ್ಯನಶ್ನನ್ನನ್ಯೋ ಅಭಿ ಚಾಕಶೀತಿ ॥

೧೬. ಪುರುಷ ಸೂಕ್ತ, ಪುಟ ಸಂ–೯.

ಸಹಸ್ರ ಶೀರ್ಷಾ ಪುರುಷ: ಸಹಸ್ರಾಕ್ಷ: ಸಹಸ್ರಪಾತ್ ।
ಸ ಭೂಮಿಂ ವಿಶ್ವತೋ ವೃತ್ವಾತ್ಯತ್ತಿಷ್ಠದ್ದಶಾಂಗುಲಂ ॥

೧೭. ಭಗವದ್ಗೀತಾ–ಯಥಾರೂಪ, ಅಧ್ಯಾಯ ೯, ಶ್ಲೋಕ ೨೬, ಪುಟ ಸಂ–೪೪೯.

೧೮. ಶ್ರೀಮದ್ಭಾಗವತ(ಶ್ರೀ ಹರಿಕಥಾಮೃತ ಸಿಂಧು) ಪುಟ ಸಂ–೪೩೧.

ಸಾಂಕೇತ್ಯಂ ಪಾರಿಹಾಸ್ಯಂ ವಾಸ್ತೋಭಂ ಹೇಲನಮೇವ ವಾ ।
ವೈಕುಂಠ ನಾಮ ಗ್ರಹಣಂಅಶೇಷಾಘಹರಂ ವಿದುಃ ॥ ೬–೨–೧೪, ೧೫.

೧೯. ಮಹಾಬಾರತ, ಭೀಷ್ಮಪರ್ವ, ೫೯, ೯೬-೯೭, ಪುಟ ಸಂ-೩೮೭.

ಏಹ್ಯೇಹಿ ದೇವೇಶ ಜಗನ್ನಿವಾಸ ನಮೋಸ್ತುತೇ ಮಾಧವ ಚಕ್ರಪಾಣೇ ।
ಪ್ರಸಹ್ಯ ಮಾಂ ಪಾತಯ ಲೋಕನಾಥ ರಥೋತ್ತಮಾತ್ ಸರ್ವ ಶರಣ್ಯಾ ಸಂಖ್ಯೆ ॥

೨೦. ಶಿವಮಹಿಮ್ನ ಸ್ತೋತ್ರ_೩೨, ಪುಟ ಸಂ-೭೮.

ಅಸಿತ ಗಿರಿಸಮಂ ಸ್ಯಾತ್ಕಜ್ಜಲಂ ಸಿಂಧ ಪಾತ್ರೇ ಸುರತರುವರಶಾಖಾ ಲೇಖನೀ ಪತ್ರಮುರ್ವೀ ।
ಲಿಖಿತಿಯದಿ ಗೃಹೀತ್ವಾ ಶಾರದಾ ಸರ್ವಕಾಲಂ ತದಪಿ ತವ ಗುಣಾನಾಮೀಶ ಪಾರಂ ನ ಯಾತಿ ॥

೨೧. The Cultural Heritage of India. Vol-1-4, Page-81.

೨೨. ಮುಂಡಕೋಪನಿಷತ್ತು, ಪುಟ ಸಂ-೪೩.

ಪ್ರಣವೋ ಧನುಃ ಶರೋ ಹ್ಯಾತ್ಮಾ ಬ್ರಹ್ಮ ತಲ್ಲಕ್ಷ್ಯ ಮುಚ್ಯತೇ ।
ಅ ಪ್ರಮತ್ತೇನ ವೇದ್ಧವ್ಯಂ ಶರವತ್ತನ್ಮಯೋ ಭವೇತ್ ॥ ೨. ೨. ೪.

೨೩. ಮುಕುಂದಮಾಲಾ ಸ್ತೋತ್ರ(೨೭), ಪುಟ ಸಂ-೨೪

ಮಜ್ಜನ್ಮನಃ ಫಲಮಿದಮ್ ಮಧುಕೈಟಭಾರೇ ಮತ್ಪ್ರಾರ್ಥನೀಯ ಮದನುಗ್ರಹ ಏಷ ಏವ ।
ತ್ವದ್ಭೃತ್ಯ ಭೃತ್ಯ ಪರಿಚಾರಕ ಭೃತ್ಯ ಭೃತ್ಯ ಭೃತ್ಯಸ್ಯ ಭೃತ್ಯ ಇತಿ ಮಾಂ ಸ್ಮರ ಲೋಕನಾಥ ॥

೨೪. ನಾರದೀಯ ಭಕ್ತಿಸೂತ್ರ, ಪ್ರಸ್ತಾವನೆ, ಪುಟ ಸಂ-೧೨.

ಅಥರ್ವವೇದದ ೫,೧೯,೯,೧೨.೪.೧೬-ಸೂತ್ರಗಳಲ್ಲಿ ನಾರದರನ್ನು ದ್ರಷ್ಟಾರರೆಂದು ಹೇಳಿದೆ. ಛಾಂದೋಗ್ಯ ಉಪನಿಷತ್ತಿನ ಭೂಮಿ ವಿದ್ಯೆ, ಅಧ್ಯಾಯ ೭ ರಲ್ಲಿ ನಾರದರನ್ನು ಸನತ್ಕುಮಾರರ ಶಿಷ್ಯರೆಂದು ಹೇಳಲಾಗಿದೆ.

೨೫. ನಾರದೀಯ ಭಕ್ತಿಸೂತ್ರ, ಪ್ರಸ್ತಾವನೆ, ಪುಟ ಸಂ-೧೩.

೨೬. ನಾರದೀಯ ಭಕ್ತಿಸೂತ್ರ, ಸೂತ್ರ ೭೪, ಪುಟ ಸಂ-೭೫.

೨೭. ನಾರದೀಯ ಭಕ್ತಿಸೂತ್ರ, ಸೂತ್ರ ೨, ಪುಟ ಸಂ-೩.

೨೮. ಶ್ರೀಮದ್ಭಾಗವತಮ್ _೧೧. ೧೪. ೧೪, ಪುಟ ಸಂ- ೬೭೬.

೨೯. ಶ್ರೀಮದ್ಭಾಗವತಮ್- ೫. ೬. ೧೮, ಪುಟ ಸಂ-೫೩೨

೩೦. ಶ್ರೀ ಮದ್ಭಾಗವತಮ್/ಕಪಿಲೋಪದೇಶ, ೩. ೨೯. ೭. , ಪುಟ ಸಂ-೨೫೧.

೩೧. ಭಗವದ್ಗೀತಾ-ಯಥಾರೂಪ, ಅಧ್ಯಾಯ ೭, ಶ್ಲೋಕ ೧೬/೧೭, ಪುಟ ಸಂ-೩೫೯.

೩೨. ಶಾಂಡಿಲ್ಯ ಭಕ್ತಿಸೂತ್ರ (೪೪) ಪುಟ ಸಂ-೧೭.

'ಸಮ್ಮಾನ_ಬಹುಮಾನ_ಪ್ರೀತಿ_ವಿರಹ_ಇತರ ವಿಚಿಕಿತ್ಸಾ_ಮಹಿಮಾ ಖ್ಯಾತಿ_ತದರ್ಥ ಪ್ರಾಣ ಸ್ಥಾನ_ತದೀಯತಾ_ಸರ್ವ ತದ್ಭಾವ_ಅಪ್ರತಿ ಕೂಲ್ಯಾದೀನಿ ಚ ಸ್ಮರಣೇಭ್ಯೋ ಬಾಹುಲ್ಯಾತ್ ॥

೩೩. ಪೂರ್ಣಪ್ರಜ್ಞ ಪ್ರಶಸ್ತಿ, ಪುಟ ಸಂ-೨,೩.

ಶಂಕರಾಚಾರ್ಯರು ಶಿವನ ಅವತಾರವೆಂದೂ, ರಾಮಾನುಜಾಚಾರ್ಯರು ಆದಿಶೇಷನ ಅವತಾರವೆಂದೂ,

ಮಧ್ವಾಚಾರ್ಯರು ಮಾರುತಿಯ ಅವತಾರವೆಂದೂ ರೂಢಿಯಲ್ಲಿರುವ ನಂಬಿಕೆಯನ್ನು ಪ್ರೊ॥ ಸಾ.ಕೃ ರಾಮಚಂದ್ರ ರಾಯರು ಇಲ್ಲಿ ನಮೂದಿಸಿರುತ್ತಾರೆ.

೩೪. ಭಾರತೀಯ ದರ್ಶನಗಳು–ಡಾ. ದೇಬಿಪ್ರಸಾದ ಚಟ್ಟೋಪಾಧ್ಯಾಯ, ಪುಟ ಸಂ–೯೭.

೩೫. ಭಗವದ್ಗೀತಾ_ಯಥಾರೂಪ, ಅಧ್ಯಾಯ ೧೮, ಶ್ಲೋಕ ೬೬, ಪುಟ ಸಂ–೭೮೦.

೩೬. ಕನ್ನಡ ಸಾಹಿತ್ಯ ಚರಿತ್ರೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ಪುಟ ಸಂ–೧೫೧.

ಶ್ರೀವೈಷ್ಣವ ಸಿದ್ಧಾಂತಕ್ಕೆ ವಿಷಯವನ್ನು ಒದಗಿಸಬಲ್ಲ ಶಾಸನಗಳ ಸಂಖ್ಯೆ ಕರ್ನಾಟಕದಲ್ಲಿರುವುದು ತೀರಾ ಕಡಿಮೆ. ಸ್ವಲ್ಪಮಟ್ಟಿಗೆ ಶ್ರೀವೈಷ್ಣವರ ಪ್ರಭಾವವನ್ನು ತಿಳಿಸುವ ಶಾಸನವೆಂದರೆ ಬುಕ್ಕನ ಶಾಸನ.

೩೭. ಕರ್ನಾಟಕದ ನಾಥಪಂಥ, ಪುಟ ಸಂ–೯೮

೩೮. ಕರ್ನಾಟಕದಲ್ಲಿ ನಾಥಪಂಥ, ಪುಟ ಸಂ–೯೯.

೩೯. ಕರ್ನಾಟಕದಲ್ಲಿ ನಾಥಪಂಥ, ಪುಟ ಸಂ–೨೩.

೪೦. ಕರ್ನಾಟಕದ ನಾಥಪಂಥ, ಪುಟ ಸಂ–೫೯.

೪೧. ಕರ್ನಾಟಕದ ನಾಥಪಂಥ, ಪುಟ ಸಂ–೮೦.

೪೨. ಭಾರತೀಯ ಸಂಸ್ಕೃತಿ ದರ್ಶನ, ಪುಟ–೨೮೮.

೪೩. ಅನುಭಾವ : ಸಾಂಸ್ಕ ತಿಕ ಸಮಸ್ಯೆ ಮತ್ತು ಹುಡುಕಾಟ, ಪುಟ ಸಂ–೧೫೨.

೪೪. ಅನುಭಾವ : ಸಾಂಸ್ಕ ತಿಕ ಸಮಸ್ಯೆ ಮತ್ತು ಹುಡುಕಾಟ, ಪುಟ ಸಂ–೪೨.

೪೫. ಅನುಭಾವ : ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ. ಪುಟ ಸಂ–೨೦೩.

೪೬ ವಚನಶಾಸ್ತ್ರರಹಸ್ಯ, ಪ್ರ–೧೯೩೬, ಪುಟ ಸಂ–೧೩೪.

೪೭. ಅಲ್ಲಮಪ್ರಭುವಿನ ವಚನಗಳು, ವ ಸಂ ೧೨೭, ಪುಟ ಸಂ–೭೧

೪೮. ಬಸವಣ್ಣನವರ ವಚನಗಳು, ವ ಸಂ ೪೫, ಪುಟ ಸಂ–೪೮.

೪೯. ಬಸವಣ್ಣನವರ ವಚನಗಳು, ವ ಸಂ ೨೨೩, ಪುಟ ಸಂ–೧೬೨.

೫೦. ಅಕ್ಕಮಹಾದೇವಿಯ ವಚನಗಳು, ವ ಸಂ ೩೩೦, ಪುಟ ಸಂ–೧೫೬.

೫೧. ವಚನಶಾಸ್ತ್ರರಹಸ್ಯ, ಪುಟ ಸಂ–೯೩

೫೨. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ ಸಂ– ೩೮೬.

೫೩. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ ಸಂ– ೩೮೭.

೫೪. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ ಸಂ–೪೦೨.

೫೫. ದಾಸಸಾಹಿತ್ಯ ದರ್ಶನ, ಪುಟ ಸಂ–೫೮೮.

೫೬ ದಾಸಸಾಹಿತ್ಯ ದರ್ಶನ, ಪುಟ ಸಂ–೫೮೮.

೫೭. ದಾಸಸಾಹಿತ್ಯ ದರ್ಶನ, (ಆಳ್ವಾರರು ಮತ್ತು ಹರಿದಾಸರು), ಪುಟ ಸಂ–೫೮೯.

೫೮. ದಾಸಸಾಹಿತ್ಯ ದರ್ಶನ, (ಆಳ್ವಾರರು ಮತ್ತು ಹರಿದಾಸರು), ಪುಟ ಸಂ–೫೯೦.

೫೯. ದಾಸಸಾಹಿತ್ಯ ದರ್ಶನ, (ಆಳ್ವಾರರು ಮತ್ತು ಹರಿದಾಸರು), ಪುಟ ಸಂ–೫೯೦.

೬೦. ದಾಸಸಾಹಿತ್ಯ ದರ್ಶನ. (ಮಾಸ್ತಿಯವರ ಭಾಷಾಂತರ) ಪುಟ.ಸಂ : ೫೯೧.

ಭಕ್ತಿಯೇ ಹಣತೆ ಮನದಾಸೆಯೇ ನೆಯ್ಯಾಗಿ । ಆನಂದ ಅರುಗಿ ಭಾವವೇ ವರ್ತಿಯಾಗಿರಲು
ಬೆಳಗಿ ಹಚ್ಚಿದೆನರಿವ ಸೊಡರ ಆತುಮ ಕರಗಿ । ತಿಳಿವೀವ ತಮಿಳರಿತ ನಾನು ನಾರಾಯಣಗೆ ॥
ಸಿರಿಯನ್ನು ಕಂಡೆನು ಹೊನ್ನೋಡಲಕಂಡೆನು । ತೊಳೆವ ಸೂರ್ಯನ ತೆರೆದ ಚೆಲು ಹೊಗರ ಕಂಡೆನು
ಕಣದೆ ಹೊಳೆಯುವ ಹೊನ್ನಚಕ್ರ ಮುರಿಶಂಖವನು ।ಕಡಲ ಬಣ್ಣದ ನನ್ನ ಹರಿಯ ಬಳಿಕಂಡೆ ॥

೬೧. ದಾಸಸಾಹಿತ್ಯ ದರ್ಶನ, (ಆಳ್ವಾರರು ಮತ್ತು ಹರಿದಾಸರು), ಪುಟ ಸಂ–೫೯೨.

(ಭಕ್ತಿಸಾರರ 'ತಿರುಚ್ಚಂದವಿರುತ್ತಮ್'ಪಾಶುರದ ೧ನೇ ಪದ್ಯ).

೬೨. ದಾಸಸಾಹಿತ್ಯ ದರ್ಶನ–ಹರಿದಾಸರು ಮತ್ತು ತೆಲುಗು ಕೀರ್ತನಕಾರರು, ಪುಟ ಸಂ–೫೪೫.

ನರಹರಿ ಕೀರ್ತನೆ ಮಾಡಿದ ನಾಲಗೆ ಪರನುತಿಸದು. ಮುರಹರನ ಪದಗಳಿಗೆರಗಿದ ಶಿರ ಪರರ ವಂದಿಸದು...ಎಂದು ಹಾಡಿದ ಅನ್ನಮಾಚಾರ್ಯರನ್ನು ನರಸಿಂಹರಾಯನು ಸೆರೆಮನೆಗೆ ಕಳುಹಿಸಿದನಂತೆ. ಈ ಸಂದರ್ಭದಲ್ಲಿ ಭಕ್ತಿಯಿಂದಲೇ ಕೀರ್ತನೆಯನ್ನು ಹಾಡಿದ ಅನ್ನಮಾಚಾರ್ಯರು ದೈವಾನುಗ್ರಹಕ್ಕೆ ಒಳಗಾಗಿ ಸಂಕೋಲೆಗಳಿಂದ ಬಿಡಿಸಿಕೊಂಡರಂತೆ ಎಂಬ ಪ್ರತೀತಿಯಿದೆ.

೬೩. ಪಳಂತುಳುಕಾವ್ಯ, ಪುಟ ಸಂ–೧.

ವಿಷ್ಣುತುಂಗನ ತುಳುಭಾಗವತೊ–ಇದು ತಾಡವಾಲೆ ಪ್ರತಿಯ ಮೂಲಕ ಕಾಸರಗೋಡಿನ ತೆಂಕಿಲ್ಲಾಯರ ಮನೆಯಲ್ಲಿ ದೊರಕಿತು. ಸಾರಸ್ವತಲೋಕಕ್ಕೆ ಪರಿಚಯಿಸಿದ್ದು ಸಂಶೋಧಕ, ವಿದ್ವಾನ್ ವೆಂಕಟರಾಜ ಪುಣಿಂಚಿತ್ತಾಯ ಅವರು.

೬೪. ಸಂಸ್ಕೃತ ಸಪ್ತಶತೀ ೧–೪೮ (ಪಳಂತುಳು ಕಾವ್ಯ, ಪುಟ ಸಂ–೮)

೬೫. ಮಹಾಭಾರತೊ, ೧–೪. (ಪಳಂತುಳು ಕಾವ್ಯ, ಪುಟ ಸಂ–೨೧)

೬೬. ಶ್ರೀಭಾಗವತೋ_೧_೧_೧. (ಪಳಂತುಳು ಕಾವ್ಯ, ಪುಟ ಸಂ–೫೬)

೭೭. ಕಾವೇರಿ, ೭_೩೬. (ಪಳಂತುಳು ಕಾವ್ಯ, ಪುಟ ಸಂ–೭೭)

೬೮. ಭಕ್ತಿ ವೇದಾಂತ ದರ್ಶನ, ಸಂಪುಟ ೬, ಸಂಚಿಕೆ ೩, ಜುಲೈ ೨೦೦೮, ಪುಟ ಸಂ–೧೩.

ಈಗಿರುವ ವಿಶೇಷತೆಯೆಂದರೆ, ಪ್ರಾಚೀನ ಸಂತರ ಮೂಲ ಗ್ರಾಮಗಳಿಂದ ಅವರ ಪಾದುಕೆಗಳನ್ನು ಪಲ್ಲಕ್ಕಿಯಲ್ಲಿರಿಸಿ ಮೆರವಣಿಗೆಯೊಂದಿಗೆ ಒಯ್ಯುವ ಸಂಪ್ರದಾಯವನ್ನು ತುಕಾರಾಮನ ಕಿರಿಯ ಮಗ ನಯನ ಮಹಾರಾಜ ೧೬೮೫ ರಲ್ಲಿ ಪ್ರಾರಂಭಿಸಿದನು. ೧೮೨೦ ರಲ್ಲಿ ತುಕಾರಾಮನ ಪೀಳಿಗೆಯವರು

ಈ ಕ್ರಮವನ್ನು ಇನ್ನಷ್ಟು ಬದಲಾವಣೆಯೊಂದಿಗೆ ಮುಂದುವರಿಸಿದರು. ಇಂದಿಗೂ ಕೂಡ ಯಾತ್ರೆಗಳ ನಡವಳಿಕೆಗಳಲ್ಲಿ ಪಂಥರಾಪುರಕ್ಕೆ ತಲುಪುವ ಪಲ್ಲಕ್ಕಿಗಳ ಸಂಖ್ಯೆ ಸುಮಾರು ೪೦ ಇರಬಹುದು.

೬೯. ಭಾರತೀಯ ಸಂಸ್ಕೃತಿ ದರ್ಶನ, ಪು ಸಂ–೨೮೮.

ಗೊಂದಲದ ವಿಚಾರ: ಹಂಪೆಯ ವಿಜಯ ವಿಠ್ಠಲನೂ ಹಾಗೂ ಪಂಡರಾಪುರದ ವಿಠೋಬನೂ ಒಂದೇ ಎನ್ನುವ ಕಲ್ಪನೆ ಕರ್ನಾಟಕದಲ್ಲಿಅನಾದಿಯಿಂದಲೂ ಇದೆ. ಕೆಲವರ ಪ್ರಕಾರ, ಪಂಥರಾಪುರದ ದೇವಾಲಯಕ್ಕೆ ಅನ್ಯ ಧರ್ಮೀಯರ ದಾಳಿಯ ಸಂಚು ನಡೆದದ್ದರಿಂದ ವಿಜಯನಗರದ ಕೃಷ್ಣದೇವರಾಯನು ಆ ದೇವರನ್ನು ಹಂಪೆಗೆ ಸ್ಥಳಾಂತರಿಸಿದ. ಕಾಲಾನಂತರದಲ್ಲಿ ವಾರಕರಿ ಸಂಪ್ರದಾಯದ ಏಕನಾಥರ ಮುತ್ತಜ್ಜನೆನಿಸಿದ ಭಾನುದಾಸನೆಂಬ ಭಕ್ತನು ಹಂಪೆಯಿಂದ ವಿಠ್ಠಲನನ್ನು ಮತ್ತೆ ಪಂಥರಾಪುರಕ್ಕೆ ಕೊಂಡೊಯ್ದು ನೆಲೆಗೊಳಿಸಿದನೆಂಬ ಪ್ರತೀತಿಯೂ ಇದೆ. ಈ ವಿಚಾರಕ್ಕೆ ಭಾನುದಾಸನ ಅಭಂಗವೊಂದು ಅಧಾರವಾಗಿ ನಿಲ್ಲುತ್ತದೆ.

ಜರೀ ಹೇ ಆಕಾಶ ವರ ಪಡೋ ಪಾಹೇ । ಬ್ರಹ್ಮಗೋಲ ಭಂಗ ಜಾಯ್ ॥
ವಡವಾನಲ ತ್ರಿಭುವನ ಕಾಯ್ । ತರೀ ಮೀ ತುಝೀಚ್ ವಾಸ ಪಾಹೀನ ಗಾ ವಿಠೋಬಾ ॥
(ಆಕಾಶವೇ ಮೇಲೆ ಬಿದ್ದರೂ ಸರಿ, ಬ್ರಹ್ಮಾಂಡ ಚೂರು ಚೂರಾದರೂ ಸರಿ, ಮೂಲೋಕ ಬೆಂಕಿ ಹತ್ತಿ ಉರಿದರೂ ಸರಿ, ನಾ ನಿನ್ನನೇ ಹೊಂದುವೆ ವಿಠೋಬಾ).ಇದನ್ನು'ಭಕ್ತಿಭಾರತಿ'ಕೃತಿಯೂ ಸಮರ್ಥಿಸುತ್ತದೆ.(ಪುಟ ಸಂ–೮೧)

೭೦. ಶಾಲಿನಿ ಚಾವಡೆಕರ, ಸಂತ ಬಹಿಣಾ ಬಾಯಿ ಗಾಥಾ, ಪುಟ. ಸಂ–೬೧ .

೭೧. ಗೀತಾ ಪ್ರೆಸ್. ಗೋರಖಪುರ. ಶ್ರೀ ಸಕಲ ಸಂತವಾಣಿ–೧–೨೦೦೮. ಪುಟ ಸಂ–೧೧೦.

೭೨. ಗೀತಾ ಪ್ರೆಸ್. ಗೋರಖಪುರ. ಶ್ರೀ ಸಕಲ ಸಂತವಾಣಿ–೧–೨೦೦೮. ಪುಟ ಸಂ–೧೦.

೭೩. ರಾ. ಸತ್ಯನಾರಾಯಣ. ಪುಂಡರೀಕಮಾಲಾ–೧೯೮೯. ಪುಟ ಸಂ–೧೨.

೭೪. ಗೀತಾ ಪ್ರೆಸ್. ಗೋರಖಪುರ. ಶ್ರೀ ಸಕಲ ಸಂತವಾಣಿ, ಪುಟ ಸಂ–೯೨.

೭೫. ಡಾ. ಟಿ. ಎನ್. ನಾಗರತ್ನ, ಶ್ರೀರಾಮದಾಸರ ಕೃತಿಗಳು, (ಪೀಠಿಕೆ) ಪುಟ ಸಂ–೧೪.

೭೬ ಶ್ರೀ ಕರ್ನಾಟಕ ಭಕ್ತ ವಿಜಯ, ಪುಟ ಸಂ–೪೯.

ಕಾಶೀ ಯಾತ್ರೆಯಲ್ಲಿದ್ದ ಅದ್ವೈತಿ ವಿದ್ಯಾರಣ್ಯರು ದ್ವೈತ ಸಂಪ್ರದಾಯದ ಜಯತೀರ್ಥಾಚಾರ್ಯರನ್ನು ಭೇಟಿಯಾಗಿ, ಸಂಭಾಷಣೆಯಲ್ಲಿ ನಿರತರಾದರು. ವೇದ ಭಾಷ್ಯಾಕಾರರಾದ ವಿದ್ಯಾರಣ್ಯರ ಕುರಿತು ಅಪಾರ ಗೌರವವಿದ್ದ ಜಯತೀರ್ಥ (ಟೀಕಾಚಾರ್ಯರು)ರು, ತಮ್ಮ ರಚನೆಯ ಪ್ರಮಾಣ ಲಕ್ಷಣಗ್ರಂಥವನ್ನು ತಾವು ಗಮನಿಸಬೇಕೆಂದು ಹೇಳಿ, ತಮ್ಮ ಕೃತಿಯನ್ನು ನೀಡಿದರು. ಜಯತೀರ್ಥರ ವ್ಯಾಖ್ಯಾನವನ್ನು ಗಮನಿಸಿದ ವಿದ್ಯಾರಣ್ಯರು ನನ್ನ ಕಾಶೀಯಾತ್ರೆಯು ಪೂರ್ಣವಾಯಿತೆಂದು ಹೇಳಿ, ಆಚಾರ್ಯರನ್ನು ಆನೆಯ ಮೇಲೆ ಕೂರಿಸಿ ಮಹೋತ್ಸವ ಮಾಡಿದರು.

೭೭. Karnataka inscriptions-vol -1. Page -47.

ಯಂ ಶೈವಾಸ್ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ ।
ಬೌದ್ಧಾ ಬುದ್ಧ ಇತಿ ಪ್ರಮಾಣ ಪಟವ: ಕರ್ತೇತಿ ವೈಯ್ಯಾಯಿಕಾ: ॥
ಅರ್ಹನ್ನಿತ್ಯಥ ಜೈನ ಶಾಸನ ರತಾ: ಕರ್ಮೇತಿ ಮಿಮಾಂಸಕಾ: ।
ಸೋಯಂ ವ್ರೋ ವಿಧಧಾತು ವಾಂಛಿತ ಫಲಂ ಶ್ರೀಕೇಶವೇಶಸ್ಸದಾ ॥

೭೮. Karnataka inscriptions-vol 1 Badami No.2, page-51.

೭೯. Epigraphia Indica, vol-14, page-66.

೮೦. ಶಾಸನಪದ್ಯಮಂಜರಿ, ನಂ ೨೪೭, ರಾ. ನರಸಿಂಹಾಚಾರ್ಯ, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು,–೧೯೭೫.

ಸಂದ ಶಿವಂಗೆ ವಿಷ್ಣುವಿನ ರೂಪಮದಾದುದು, ವಿಷ್ಣುವಿಂಗೆ ಪೆಂ ।
ಪೊಂದಿ ನೆಗಳ್ತೆವೆತ್ತ ಶಿವರೂಪವದಾದುದು ವೇದವಾಕ್ಯದಿಂ ।
ದೆಂದದನೆಯ್ದೆ ನಿಶ್ಚಯಿಸುವಂತಿರೆ ಕೂಡಲೊಳೇಕ ಮೂರ್ತಿಯಿಂ ।
ನಿಂದ ಜಗನ್ನುತ ಹರಿಹರಂ ಪರಿರಕ್ಷಿಸುರ್ಕೆ ಧಾತ್ರಿಯಂ ॥

****

ಅಧ್ಯಾಯ : ೩

ದಾಸಪಂಥ–ಉಗಮ ಮತ್ತು ವಿಕಾಸ

ದಾಸನೆಂತಾಗುವೆನು ಧರೆಯೊಳಗೆ ನಾನು ।
ವಾಸುದೇವನಲಿ ಲೇಶ ಬಕುತಿಯ ಕಾಣೆ ॥ –ಪುರಂದರದಾಸರು

ಕರ್ನಾಟಕದ ಧಾರ್ಮಿಕ ಸಾಂಸ್ಕೃತಿಕ ಇತಿಹಾಸದಲ್ಲಿ ದಾಸಪಂಥದ ಸ್ಥಾನವು ವಿಶಿಷ್ಟವಾದುದು. ಸಹಸ್ರಾರು ವರ್ಷಗಳಿಂದ ಭಾರತೀಯ ಪರಂಪರೆಯಲ್ಲಿ ಹರಿದುಬಂದ ಜೀವನಮೌಲ್ಯಗಳನ್ನು ಜನಭಾಷೆಯ ಮೂಲಕ ವರ್ಣನಾತ್ಮಕವಾಗಿ ಜನತೆಗೆ ಮುಟ್ಟಿಸಿ, ಅವರ ಮನೋವಿಕಾಸಕ್ಕೆ ಕಾರಣೀಭೂತವಾದುದು ಕರ್ನಾಟಕದ ಹರಿಕೀರ್ತನಾಪಂಥ; ಅದುವೇ ದಾಸಪಂಥ. ಈ ಪಂಥವು ನಡೆದುಕೊಂಡು ಬಂದ ದಾರಿ, ಅಲ್ಲಿ ಮೂಡಿಬಂದ ದಾಸೋತ್ತಮರ ಅನುಭಾವೀ ವಿಚಾರಧಾರೆ, ದ್ವೈತಸಿದ್ಧಾಂತದ ಸಾರಬೋಧೆ, ಸಮಾಜದರ್ಶನ ಹಾಗೂ ಧರ್ಮಸಾಮರಸ್ಯ ಎಲ್ಲವೂ ಅನುಪಮ. ಅಂತೆಯೇ ಅಧ್ಯಯನಯೋಗ್ಯವಾದುದು.

೩.೧ ದಾಸಪಂಥ ಉಗಮದ ಪೂರ್ವ ಸೂಚನೆ

'ಸತತಂ ಕೀರ್ತಯಂತೋ ಮಾಂ ಯತಂತಶ್ಚ ದೃಢವ್ರತಾ: । ನಮಸ್ಯಂತಶ್ಚ ಮಾಂ ಭಕ್ತ್ಯಾ ನಿತ್ಯ ಯುಕ್ತಾ ಉಪಾಸತೇ'[೧] ಎಂದು ಭಗವದ್ಗೀತೆಯೇ ಹೇಳುವಂತೆ, ಭವಿಷ್ಯದಲ್ಲಿ ಕೀರ್ತನಪಂಥವೊಂದು ಹುಟ್ಟಿ, ಮುಂದಿನ ಧಾರ್ಮಿಕಕ್ರಾಂತಿಗೆ ಕಾರಣವಾಗುತ್ತದೆಂಬ ಮಾತು ಇಲ್ಲಿ ಸತ್ಯವಾಗಿದೆ. ಈ ಶ್ಲೋಕಕ್ಕೆ ಹಿಂದೂ ಪಂಚಾಂಗದ ಪ್ರಕಾರ ೫೦೦೦ ವರ್ಷಗಳಷ್ಟು ಕಾಲಸರಿಯಿತು. ಪಾಶ್ಚಾತ್ಯರ ಪ್ರಕಾರ ಕೇವಲ ೩೦೦೦ ವರ್ಷಗಳಷ್ಟು ಕಾಲ ನಡೆದುಹೋಯಿತು. ಅಲ್ಲದೆ ವಿಷ್ಣುಪುರಾಣವೂ ಕೂಡ ಮುಂದಿನ ಯುಗದಲ್ಲಿ ವೀಣಾದಿವಾದ್ಯಗಳನ್ನು ಹಿಡಿದು ನನ್ನನ್ನು ನಿತ್ಯಕೀರ್ತನೆಯೊಂದಿಗೆ ಉಪಾಸನೆ ಮಾಡುತ್ತಾರೆ ಎನ್ನುವ ಮೂಲಕ ಮುಂದಿನ ದಾಸಸಂಕೀರ್ತನೆಗೆ ನಾಂದಿಯನ್ನು ಹಾಡಿತು.[೨] ಜೊತೆಗೆ ಪದ್ಮಪುರಾಣದಲ್ಲೂ ಕೀರ್ತನೆಯ ಸುಳಿವೊಂದು ಗೋಚರವಾಗುತ್ತದೆ.[೩] ವಿಶೇಷವೆಂದರೆ ಪ್ರಾಚೀನ ರಾಜಕಾರಣ ಕಾರ್ಯದಲ್ಲೂ ಸಂಕೀರ್ತನೆಯ ಪ್ರಭಾವ ಅಲ್ಲಲ್ಲಿ ಮೇಳೈಸಿರುವುದು ಗಮನಕ್ಕೆ ಬರುತ್ತದೆ.[೪]

ಹೀಗೆ ದಾಸಪಂಥವೆಂಬ ಕೀರ್ತನಸಂಪ್ರದಾಯವೊಂದು ಭವಿಷ್ಯದಲ್ಲಿ ಜನ್ಮತಾಳುತ್ತದೆಂಬ ಪ್ರಾಚೀನ ಪುರಾಣಗಳ ಮಾತು ಸತ್ಯವಾದುದು, ಸತ್ಯವಾಯಿತು. ಅಂತೆಯೇ ಇಲ್ಲಿಯ ದಾಸರುಗಳು ಕಾಲಿಗೆ ಗೆಜ್ಜೆಕಟ್ಟಿ, ತಾಳ ತಂಬೂರಿಯನ್ನು ಕೈಯಲ್ಲಿ ಹಿಡಿದುಕೊಂಡು ಹರಿಸಂಕೀರ್ತನೆಯನ್ನು ನಡೆಸುತ್ತಾರೆ. ಬೀದಿಬೀದಿಗಳಲ್ಲಿ ತಿರುಗಿ ಹರಿನಾಮ ಸಂಕೀರ್ತನೆಯ ಮಹತ್ವವನ್ನು ಸಾರುತ್ತದೆ. ಜಾತಿಮತ ಪಂಗಡಗಳೆನ್ನದೆ ಸಾಮೂಹಿಕವಾಗಿ ಮಾನವೋದ್ಧಾರದ ಮಂತ್ರವನ್ನು ಬಿತ್ತರಿಸುತ್ತಾರೆ. ಅಹಂಕಾರವನ್ನು ತೋರುತ್ತಿದ್ದ ಆಳರಸರನ್ನು ತಿದ್ದಲು ಮುಂದಾಗುತ್ತದೆ. ಬೂಟಕತನದಿಂದ ಕೂಡಿದ ಮಡಿಕಲ್ಪನೆಯನ್ನು ಅಲ್ಲಗಳೆಯುತ್ತದೆ. ಸಾಮಾಜಿಕವಾದ ಎಲ್ಲಾ ಸಮಸ್ಯೆಗಳಿಗೂ ಹರಿನಾಮಸಂಕೀರ್ತನೆಯೊಂದೇ ಉತ್ತರವೆನ್ನುತ್ತದೆ. ಹೀಗೆ ಸಾಮಾಜಿಕ ಸಾಮರಸ್ಯದ

ಧಾರ್ಮಿಕಕ್ರಾಂತಿಯಾಗಿ ದಾಸಪಂಥವು ಮೂಡಿಬರುತ್ತದೆ. ಪ್ರಾಚೀನ ಪುರಾಣಗಳು ನುಡಿದ ಭವಿಷ್ಯವಾಣಿಯೊಂದು ಈ ಮೂಲಕ ಸತ್ಯವಾಗುತ್ತದೆ.

೩.೨ ದಾಸಪಂಥದ ಉಗಮ, ಬೆಳವಣಿಗೆ ಹಾಗೂ ಸಾಹಿತ್ಯೋದ್ದೇಶ

ಕರ್ನಾಟಕದ ಕೀರ್ತನಾಪರಂಪರೆಯ ಪ್ರಾಚೀನತೆಯು ಶ್ರೀಮಧ್ವಾಚಾರ್ಯರಿಂದಲೇ ಪ್ರಾರಂಭವಾದುದು ಎಂಬ ಮಾತೊಂದಿದೆ. ಇದಕ್ಕೆ ಅವರು ರಚಿಸಿದ 'ದ್ವಾದಶ ಸ್ತೋತ್ರ'ವೇ ಮುಖ್ಯಪ್ರೇರಣೆಯೆಂದು ಹೇಳಲಾಗುತ್ತಿದೆ. ಆದರೂ ಈ ಹೇಳಿಕೆಯನ್ನು ಪೂರ್ಣವಾಗಿ ಒಪ್ಪುವಂತಿಲ್ಲ. ಯಾಕೆಂದರೆ 'ದ್ವಾದಶ ಸ್ತೋತ್ರವು' ಸಂಸ್ಕೃತ ಕೃತಿ. ಕರ್ನಾಟಕದ ದಾಸಕುಲದ ಕೀರ್ತನಾಭಕ್ತಿಯೆಂಬುದು ಕನ್ನಡದ ಭಕ್ತಿ. ಆದುದರಿಂದ ಪೂರ್ವದ ಹಳಗನ್ನಡದ ಹಾಡುಗಬ್ಬ ಹಾಗೂ ತಮಿಳಿನ ದಿವ್ಯಪ್ರಬಂಧಗಳೆಸಿದ 'ತೇವಾರಂ' ಸಾಹಿತ್ಯದ ಪ್ರೇರಣೆಯು ದಾಸಸಾಹಿತ್ಯಕ್ಕೆ ಆಗಿದ್ದಿರಬಹುದು. ಆದರೂ ದಾಸಪಂಥದ ಆದ್ಯರಾದ ಶ್ರೀಪಾದರಾಯರು ಮತ್ತು ನಂತರದ ದಾಸಪರಂಪರೆಯು ತಮ್ಮ ಧಾರ್ಮಿಕಕ್ರಾಂತಿಗೆ ಮಧ್ವಾಚಾರ್ಯರ ಭಕ್ತಿಮಾರ್ಗವನ್ನು ಅನುಸರಿಸಿದುದು ಮಾತ್ರ ಸತ್ಯ. ಶ್ರೀಮಧ್ವಾಚಾರ್ಯರನ್ನು ಇಲ್ಲಿಯ ಕೀರ್ತನಸಾಹಿತ್ಯಕ್ಕೆ ಮುಖ್ಯರನ್ನಾಗಿ ಸ್ವೀಕರಿಸಿದಾಗ ನಮಗೆ ಸಿಗುವ ಗುರುಪರಂಪರೆಯನ್ನು ಭಾಗವತ ಸಂಪ್ರದಾಯವೆಂದೇ ಭಾವಿಸಿಕೊಳ್ಳಬೇಕಾಗುತ್ತದೆ. ಅಲ್ಲದೆ ಈ ವಿಚಾರವನ್ನು ಬೆಟಗೇರಿ ಕೃಷ್ಣಶರ್ಮ ಮತ್ತು ಬೆಟಗೇರಿ ಹುಚ್ಚರಾಯರು ಸಂಪಾದಿಸಿದ 'ಶ್ರೀಪುರಂದರ ಸಾಹಿತ್ಯ–೧ 'ಪೂಜಾತತ್ವ' ಕೃತಿಯೂ ಕೂಡ ಸಮರ್ಥಿಸಿಕೊಳ್ಳುತ್ತದೆ.[*]

ಅಧ್ಯಯನದ ದೃಷ್ಟಿಯಿಂದ ದಾಸಸಾಹಿತ್ಯವನ್ನು ಅನೇಕ ವಿದ್ವಾಂಸರು ಹಲವು ರೀತಿಯಲ್ಲಿ ವಿಂಗಡಿಸಿದ್ದಾರೆ. ಅವುಗಳಲ್ಲಿ ಕೆಲವರ ಅಭಿಪ್ರಾಯ ಇಂತಿದೆ.

೧.ರಾ.ಸ್ವಾ. ಪಂಚಮುಖಿಯವರ ಪ್ರಕಾರ ೪ ಘಟ್ಟಗಳು (ಹರಿದಾಸ ಸಾಹಿತ್ಯ ಎಂಬ ಗ್ರಂಥದಲ್ಲಿ).

೧. ಮಧ್ವಾಚಾರ್ಯರ ಕಾಲದಲ್ಲಿ ಅವರ ಶಿಷ್ಯ ಸಂಘವು ನರಹರಿತೀರ್ಥರ ನೇತೃತ್ವದಲ್ಲಿ ರಚನೆಗೊಂಡ ಕೀರ್ತನಾಸಾಹಿತ್ಯ.

೨. ಕೃಷ್ಣದೇವರಾಯನ ಕಾಲದಲ್ಲಿ ಪುರಂದರದಾಸ, ಕನಕದಾಸ ಹಾಗೂ ವ್ಯಾಸರಾಯರ ನೇತೃತ್ವದಲ್ಲಿ ಅಭಿವ್ಯಕ್ತಿಗೊಳಿಸಿದ ಕೀರ್ತನಾಸಾಹಿತ್ಯ.

೩. ವಿಜಯದಾಸರು ಮತ್ತು ಇತರ ದಾಸವೃಂದದವರು ರಚಿಸಿದ ಕೀರ್ತನಾಸಾಹಿತ್ಯ.

೪. ಪ್ರಾಣೇಶ – ಗುರು ಪ್ರಾಣೇಶ ಮೊದಲಾದ ದಾಸರು ರಚಿಸಿದ ಕೀರ್ತನಾಸಾಹಿತ್ಯ.

೨. ಹೆಚ್. ಕೆ. ವೇದವ್ಯಾಸಾಚಾರ್ಯರ ೪ ವಿಂಗಡಣೆಗಳು (ಕರ್ನಾಟಕದ ಹರಿದಾಸರು ಎಂಬ ಗ್ರಂಥದಲ್ಲಿ)

೧. ಆರಂಭ ಕಾಲ

೨. ಉನ್ನತಿಯ ಕಾಲ

೩. ವಿಸ್ತಾರ ಕಾಲ

೪. ಅವನತಿಯ ಕಾಲ

೩. ಕೆ. ಜಿ. ಶಾಸ್ತ್ರಿಯವರ ವಿಂಗಡಣೆ (ದಾಸ ಸಾಹಿತ್ಯ–ದ್ವಿತೀಯ ಘಟ್ಟದ ಹಿನ್ನೆಲೆ ಎಂಬ ಗ್ರಂಥದಲ್ಲಿ)

೧. ನರಹರಿತೀರ್ಥರಿಂದ ಪುರಂದರ, ಕನಕದಾಸರ ಘಟ್ಟ

೨. ವಿಜಯದಾಸರ ನಂತರದ ಘಟ್ಟ

೪. ತಿಪ್ಪೇರುದ್ರಸ್ವಾಮಿಯವರ ಪ್ರಕಾರ (ಕರ್ನಾಟಕ ಸಾಂಸ್ಕೃತಿಕ ಸಮೀಕ್ಷೆ ಎಂಬ ಗ್ರಂಥದಲ್ಲಿ).

೧. ಪುರಂದರ ಯುಗ

೫. ಆರ್. ಜಿ. ಗುಡಿಯವರ ೪ ವಿಂಗಡಣೆಗಳು (ದಾಸ ಸಾಹಿತ್ಯ–ಸೈದ್ಧಾಂತಿಕ ಅಧ್ಯಯನ ಎಂಬ ಗ್ರಂಥದಲ್ಲಿ).

೧. ಶ್ರೀಪಾದರಾಜರ ಪೂರ್ವಯುಗ (ಕ್ರಿ.ಶ. ೮೭೯– ೧೪೫೦)

೨. ಶ್ರೀಪಾದರಾಜರ ಯುಗ (ಕ್ರಿ.ಶ.೧೪೫೧–ಕ್ರಿ.ಶ. ೧೫೬೫)

೩. ವಿಜಯದಾಸರ ಯುಗ (ಕ್ರಿ.ಶ. ೧೫೫೬–ಕ್ರಿ.ಶ. ೧೮೦೯)

೪. ಶಿಷ್ಯ–ಪ್ರಶಿಷ್ಯರು (ಕ್ರಿ.ಶ. ೧೮೧೦–ಈವರೆಗೆ)

೬. ಕೆ. ಗೋಕುಲನಾಥರ ವಿಂಗಡಣೆ (ಆಧುನಿಕ ದಾಸ ಸಾಹಿತ್ಯ ಎಂಬ ಗ್ರಂಥದಲ್ಲಿ)

೧. ಶ್ರೀಪಾದರಾಜರ ಯುಗ

೨. ವಿಜಯದಾಸರ ಯುಗ

೩. ತಂದೆ ಮುದ್ದುಮೋಹನ ವಿಠಲರ ಯುಗ

ಹೀಗೆ ಅನೇಕರು ದಾಸಸಾಹಿತ್ಯಾಧ್ಯಯನ ದೃಷ್ಟಿಯಿಂದ ಈ ಪ್ರಕಾರವನ್ನು ಹಲವು ರೀತಿಯಲ್ಲಿ ವಿಂಗಡಿಸಿದರು.

ದಾಸಪಂಥದ ನಿಜವಾದ ಪರಂಪರೆ ಶ್ರೀಪಾದರಾಯ(೧೪೦೪–೧೫೦೨)ರಿಂದಲೇ ಮೊದಲುಗೊಳ್ಳುತ್ತದೆ. ಪೀಠಾಧಿಪತಿಗಳಾಗಿದ್ದರೂ ಕನ್ನಡದಲ್ಲಿ ಸ್ವಂತ ಕೃತಿಗಳನ್ನು ರಚಿಸಿದ ಹಿರಿಮೆ ಇವರದು. ಆದುದರಿಂದಲೇ ಅವರು ಹರಿದಾಸ ಪಿತಾಮಹರಾಗುತ್ತಾರೆ. ಆ ನಂತರದಲ್ಲಿ ಬಂದ ನೂರಾರು ದಾಸರುಗಳು ಶ್ರೀಪಾದರಾಯರು ನೀಡಿದ ಮಾಧ್ವ ಸಿದ್ಧಾಂತವನ್ನು ಸ್ವೀಕರಿಸಿಕೊಂಡಿತು. ಆ ಮೂಲಕವಾಗಿ ಸ್ವಸ್ಥಸಮಾಜವನ್ನು ಕಟ್ಟಲುಹೊರಟಿತು. ಪ್ರಾಯಶಃ ಆ ಕಾಲಕ್ಕೆ ಇದು ಹೊಸ ಬೆಳವಣಿಗೆಯಾಗಿರಬೇಕು. ಇವರ ತಾತ್ವಿಕತೆಯಲ್ಲಿ ಶ್ರೀಹರಿಯೇ ಸರ್ವೋತ್ತಮನಾಗಿ, ಜಗತ್ತು ಪಾರಮಾರ್ಥಿಕ ಸತ್ಯವಾಗಿ, ಭೇದವೂ ಕೂಡ ಪಾರಮಾರ್ಥಿಕ ಸತ್ಯ ಮತ್ತು ನಿತ್ಯವಾಗಿ, ಜೀವಗಣಗಳೆಲ್ಲವು ಶ್ರೀಹರಿಯ ಅನುಚರರಾಗಿ, ನಿತ್ಯತಾರತಮ್ಯವುಳ್ಳವರಾಗಿ ತೋರುತ್ತಾರೆ. ಇಲ್ಲಿ ಸ್ವರೂಪ ಸುಖಾನುಭವವೇ ಮುಕ್ತಿಯಾಗಿಯೂ, ಪರಿಶುದ್ಧವಾದ ಭಕ್ತಿಯೇ ಮುಕ್ತಿಗೆ ಸಾಧನವಾಗಿಯೂ ಪರಿಣಮಿಸುತ್ತದೆ. ಕರ್ನಾಟಕದ ದಾಸಕುಲ ಈ ಮಾರ್ಗದಲ್ಲೇ ನಡೆಯುತ್ತದೆ. ಲೌಕಿಕದ ಆಡಂಬರದಲ್ಲಿ ಆಸಕ್ತಿಯನ್ನು ಕಳೆದುಕೊಂಡ

ದಾಸರು ನಾಡಿನ ಉದ್ದಗಲದಲ್ಲಿ ತಿರುಗಾಡುತ್ತಾರೆ. ಶರಣರು ವಚನಪದ್ಧತಿಯನ್ನು ರೂಪಿಸಿಕೊಂಡಂತೆ, ದಾಸಕುಲವು ತಾವು ಪಡೆದ ಅನುಭವಗಳನ್ನು ಹಾಡುಗಳ ರೂಪದಲ್ಲಿ ಜನರ ಎದುರಿಗಿಡುತ್ತಾರೆ.

ಹರಿದಾಸಸಾಹಿತ್ಯದಲ್ಲಿ ಶ್ರೀಪಾದರಾಜರ ನಂತರದಲ್ಲಿ ತೋರುವ ದೊಡ್ಡ ಹೆಸರೆಂದರೆ ವ್ಯಾಸರಾಯರದ್ದು. ಇವರು ಭಕ್ತಿಕೀರ್ತನೆಗಳಿಗೆ ಒಂದು ಸೈದ್ಧಾಂತಿಕತೆಯನ್ನು ನೀಡಿದ್ದು ಮಾತ್ರವಲ್ಲದೆ ಶ್ರೀವಾದಿರಾಜ(೧೪೮೦–೧೬೦೦)ರನ್ನು ದಾಸಸಾಹಿತ್ಯಕ್ಕೆ ಕೊಡುಗೆಯಾಗಿ ನೀಡಿದ್ದು ಗಮನಾರ್ಹವಾದ ವಿಚಾರ. ತನ್ಮೂಲಕವಾಗಿ ರೂಪುಗೊಂಡ ವ್ಯಾಸಕೂಟವನ್ನು ದಾಸಕೂಟದೊಂದಿಗೆ ನಡೆಸಿದ ಕೀರ್ತಿ ಇವರಿಗೆ ಸಲ್ಲಬೇಕು.

ದಾಸಪಂಥದಲ್ಲಿ ಪುರಂದರದಾಸರದ್ದು ಹಿರಿಸ್ಥಾನ. ಅವರು ತಮ್ಮ ಗುರುಗಳಿಂದಲೇ 'ದಾಸರೆಂದರೆ ಪುರಂದರದಾಸರಯ್ಯಾ' ಎಂದು ಹೇಳಿಸಿಕೊಂಡವರು. ಇವರ ಕೃತಿಗಳು ಸತ್ವದಲ್ಲಿ, ಸಂಖ್ಯೆಯಲ್ಲಿ ಮತ್ತು ಸಂಗೀತ ಗುಣಗಳಲ್ಲಿ ಮಹತ್ತಾದುದು. ಲೌಕಿಕ ಮತ್ತು ಪಾರಮಾರ್ಥಿಕಗಳೆರಡರಲ್ಲಿಯೂ ಸಮನ್ವಯತೆಯನ್ನು ಸಾಧಿಸಿ 'ಈಸಬೇಕು ಇದ್ದು ಜೈಸಬೇಕು' ಎನ್ನುವ, 'ಮಾನವಜನ್ಮ ದೊಡ್ಡದು' ಎಂಬ ಸಂದೇಶವನ್ನು ಸಾರುವ ಇವರ ಅಸಂಖ್ಯ ರಚನೆಗಳು ಸಾಹಿತ್ಯಕ್ಷೇತ್ರಕ್ಕೆ ವಿಶೇಷವಾದುದು. ಇವರ ಸಮಕಾಲೀನರಾದ ಕನಕದಾಸರಂತೂ ನಿರ್ಧಿಷ್ಟ ಮತಪ್ರಚಾರಕ್ಕೆ ಒಳಗಾಗದೆ 'ಕುಲಕುಲಕುಲವೆಂದು ಹೊಡೆದಾಡದಿರಿ'ಯೆಂಬ ಜಾತ್ಯತೀತಕಲ್ಪನೆಯನ್ನು ಬೀರಿದವರು. ಲೋಕಾನುಭವ ಮತ್ತು ಜನಪದ ಸೊಗಡುಗಳೇ ಅವರ ಭಕ್ತಿಕೀರ್ತನೆಗಳ ಚೆಲುವು.

ಪುರಂದರದಾಸ ಹಾಗೂ ಕನಕರ ಸಮಕಾಲೀನರಾಗಿ ವೈಕುಂಠದಾಸರು ಮತ್ತು ಪುರಂದರದಾಸರ ಮಕ್ಕಳು ಕೀರ್ತನಾಸಾಹಿತ್ಯವನ್ನು ರಚಿಸಿದರೂ ಅನಂತರದ ಒಂದು ಶತಮಾನದ ಅವಧಿಯಲ್ಲಿ ದಾಸಸಾಹಿತ್ಯವು ರಚನೆಯಾದಂತೆ ತೋರುವುದಿಲ್ಲ.[೬] ಅನಂತರದಲ್ಲಿ ದಾಸಸಾಹಿತ್ಯ ಮರುಜೀವಗೊಂಡುದುದು ವಿಜಯದಾಸ (೧೬೮೨–೧೭೭೩)ರಿಂದ ಎನ್ನಬೇಕು. ಈ ಕಾಲದಲ್ಲೇ ಆದಿಲ್‌ಶಾಹಿಯ ಆಸ್ಥಾನದ ಅಧಿಕಾರಿಯಾಗಿದ್ದ ಕಾಖಂಡಕಿ ಮಹೀಪತಿದಾಸರು (೧೬೧೧–೧೬೮೧) ವೈರಾಗಿಗಳಾಗಿ ಹರಿದಾಸರಾದರು. ಇವರ ಮಗನಾದ ಮಹೀಪತಿ ಕೃಷ್ಣದಾಸರು ತಂದೆಯ ದಾರಿಯನ್ನೇ ಹಿಡಿದರು. ರಾಜಕೀಯ ಹಾಗೂ ಸಾಮಾಜಿಕವಾಗಿ ದಾಸಸಾಹಿತ್ಯವು ಬೀಳುತ್ತಿರುವಾಗ ಕಾಖಂಡಕಿಯ ಈ ಅಪ್ಪ ಮಕ್ಕಳೇ ದಾಸಸಾಹಿತ್ಯಕ್ಕೆ ಹೊಸ ಜೀವಕೊಟ್ಟರು. ಇದೇ ಕಾಲಕ್ಕೆ ಸಂಬಂಧಿಸಿದಂತೆ ಮಂತ್ರಾಲಯದ ಶ್ರೀರಾಘವೇಂದ್ರತೀರ್ಥರು, ಬಾಗಲಕೋಟೆಯ ಪ್ರಸನ್ನವೆಂಕಟದಾಸ (೧೬೮೦–೧೭೫೨)ರು ದಾಸಪಂಥಕ್ಕೆ ಶಕ್ತಿಯನ್ನು ತುಂಬಿದರು.

'ಭಕ್ತಿಯಲ್ಲಿ ಭಾಗಣ್ಣ'ನೆಂದೇ ಜನಪ್ರಿಯರಾಗಿದ್ದ ಗೋಪಾಲದಾಸ(೧೭೨೨–೧೮೬೫)ರು ದಾಸಪಂಥದ ಉತ್ತರಾರ್ಧದವರು. ಇವರ ನಂತರದಲ್ಲಿ ದಾಸಕುಲದಲ್ಲಿ ಕಾಣುವ ದೊಡ್ಡ ಹೆಸರೆಂದರೆ ಜಗನ್ನಾಥದಾಸ (೧೭೨೮–೧೮೦೯) ಅವರದು. ಸುಳ್ವಾಲಿಗಳನ್ನು ರಚಿಸಿದುದು ಇವರ ವಿಶಿಷ್ಟತೆ. ಸಾಹಿತ್ಯಕ್ಷೇತ್ರಕ್ಕೆ ಇವರ ದೊಡ್ಡ ಕೊಡುಗೆಯೆಂದರೆ ಒಂದು ಸಾವಿರ ಭಾಮಿನೀಷಟ್ಪದಿಯಿಂದ 'ಹರಿಕಥಾಮೃತಸಾರ'ವೆಂಬ ಕೃತಿಯನ್ನು ಬರೆದದ್ದು. ದಾಸಕುಲ ಸಂಘಟನೆಗಾಗಿ ನೂರಾರು ಶಿಷ್ಯರಿಗೆ ದಾಸದೀಕ್ಷೆಯನ್ನು ನೀಡಿದುದು ಅವರ ದಾಸಸಾಹಿತ್ಯದ

ಕಾಳಜಿಯನ್ನು ತೋರಿಸುತ್ತದೆ. ಇವರ ನಂತರದಲ್ಲಿ ಇವರ ಶಿಷ್ಯರಾದ ಪ್ರಾಣೇಶವಿಠಲ, ಶ್ರೀದವಿಠಲ, ಅಭಿನವ ಜನಾರ್ದನವಿಠಲರು, ಶ್ರೀಮೋಹನದಾಸರು, ತುಪಾಕಿ ವೆಂಕಟರಮಣಾಚಾರ್ಯರು, ಪಾವಂಜೆ ಲಕ್ಷ್ಮೀನಾರಣಪ್ಪ ಉರಗಾದ್ರಿದಾಸವಿಠಲರು, ಬಾಗೇಪಲ್ಲಿ ಶೇಷದಾಸರು ಮೊದಲಾದವರು ದಾಸಪರಂಪರೆಯನ್ನು ಮುನ್ನಡೆಸಿದರು.

ಹರಿಭಕ್ತಿಯನ್ನು ಸಾರಲುಹೊರಟ ದಾಸಶ್ರೇಷ್ಠರಿಗೆಲ್ಲ ಮುಖ್ಯವಾದ ಒಂದು ಉದ್ದೇಶವಿತ್ತು. ಅವರಲ್ಲಿ ಅಧ್ಯಾತ್ಮಿಕವಾದ ಮತ್ತು ಸಮಾಜಮುಖಿಯಾದ ಚಿಂತನೆ ಹರಡಿತ್ತು. ಸ್ವಸ್ಥಸಮಾಜಕ್ಕಾಗಿ ವೈದಿಕಧರ್ಮದ ಮೂಲತತ್ವಗಳೆಲ್ಲವನ್ನು ಕೀರ್ತನಾಲಹರಿಯಾಗಿಸಿ ಸಮಾಜದ ಮುಂದಿಟ್ಟರು. ಅವರಿಗಾಗಿ ತಮ್ಮ ಹಾಡುಗಳ ರೂಪದಲ್ಲಿ ದೇವರನ್ನು 'ನಿರಾಕಾರನಲ್ಲ' ಎಂದರು. ಅಂತೆಯೇ ಅವನು ಬಲುದೂರದವನಲ್ಲವೆಂದು ಹೇಳಿದರು. ಇವರುಗಳು ಕೀರ್ತಿಸುವ ದೇವರನ್ನು ಜನತೆಯ ನಡುವೆಯೇ ಮೆರೆಯಿಸಿದರು. ತಮ್ಮ ಮನದಾಳದ ಮಾತುಗಳನ್ನೇ ಆ ಭಗವಂತನಿಂದ ಆಡಿಸಿದರು. ಆದುದರಿಂದ ಜನಸಮುದಾಯಕ್ಕೆ ಭಗವಂತ ನೆರೆಮನೆಯವನಂತೆ ಪರಿಚಿತನಾದ. ಭಕ್ತ ತಂದೆಗೆ ಆತ ಮಗುವಾದ. ಭಕ್ತ ಮಗುವಿಗೆ ಆತ ತಂದೆಯೂ ಆದ. ನಿಷ್ಕಲ್ಮಷ ಶಿಷ್ಯನಿಗೆ ಗುರುವಾದ. ಸುಂದರ ಕನ್ಯೆಯನ್ನು ಪ್ರೀತಿಸಿ ಮದುವೆಯಾದ. ಅಲ್ಲಿ ಆ ಭಗವಂತ ಅಳಿಯನೂ ಆದ. ಹೀಗೆ ಭಕ್ತಸಂಕುಲಕ್ಕೆ ಆತ ಬಂಧಿಯಾಗಿ ಪರಿಣಮಿಸಿದ.

'ಹರಿನಾರಾಯಣ ಹರಿನಾರಾಯಣ ಹರಿನಾರಾಯಣ ಎನುಮನವೆ'ಎಂದು ಹಾಡಿದ ಕರ್ನಾಟಕದ ದಾಸರು ಭಗವಂತನನ್ನು ಕನ್ನಡದಲ್ಲಿ ಕಂಡರು. ಅವರಲ್ಲಿ ಅನೇಕ ದಾಸರುಗಳು ವಂಶಪಾರಂಪರ್ಯದಿಂದ ಬಂದ ತಮ್ಮ ಧನ ದ್ರವ್ಯರಾಶಿಯನ್ನು ಭಗವಂತನಿಗೂಪ್ಪಿಸಿ ಬ್ರಹ್ಮಸಾಕ್ಷಾತ್ಕಾರ ಪಡೆದರು. ಇನ್ನೂ ಕೆಲವರು ತಮ್ಮ ಸಂಪತ್ತಿನಿಂದ ದೇಶೋದ್ದಾರ ಮಾಡಿದರು. ಹಲವರು ರಾಜ್ಯಾಧಿಕಾರವನ್ನು ತ್ಯಜಿಸಿ, ಸಮಾಜಮುಖಿಯಾದರು. ಆನೇಕರು ಪಂಡಿತೋತ್ತಮರಾಗಿದ್ದರೂ ಸಮಾಜಸೇವೆಗೆ ಕಂಕಣತೊಟ್ಟು ಸಾಮಾಜಿಕ ಕಾಳಜಿಯಲ್ಲಿ ಮೆರೆದರು. ಜಾತಿಮತ ದ್ವೇಷಗಳನ್ನು ದಾಟಿ ಸಮದರ್ಶಿಗಳಾದರು. ಹಲವು ರಾಜ್ಯಗಳ ರಾಜಕಾರಣದಲ್ಲಿ ಒಳಪ್ರವೇಶಿಸಿದರು. ಆ ಮೂಲಕ ಏಕಮುಖೀಸಮಾಜವನ್ನು ಕಟ್ಟಿದರು. ಹಿಂದೂಸ್ತಾನದಲ್ಲಿ ಹಿಂದುತ್ವ ಸಂಘಟನೆಯೊಂದಿಗೆ ಶುದ್ಧತ್ವವನ್ನು ತೋರಿದರು. ಹಿಂದೂ ಮುಸಲ್ಮಾನರ ನಡುವೆ ಸಾಮಾಜಿಕ ಸಾಮರಸ್ಯವನ್ನು ಬೆಸೆದರು. ವಿಶ್ವವ್ಯಾಪಿಯಾಗುವ, ಸರ್ವಾಪ್ತವಾಗುವ ಆಸ್ತಿಕ ತತ್ವೋಪದೇಶವನ್ನು ಮಾಡಿದರು. ಪರಮಾವಧಿಯ ದಯೆಯನ್ನು, ಆಚರಣೆಗಳಲ್ಲಿ ಆದರ್ಶವನ್ನು ಸಮಾಜಕ್ಕೆ ನೀಡಿದರು.

ಇಲ್ಲಿಯ ದಾಸರು ನಿಂತಲ್ಲೇ ನಿಂತು ಕೀರ್ತನೆಗಳನ್ನು ರಚಿಸಿದವರಲ್ಲ. ಪ್ರೌಢವಾದ ಕೃತಿಗಳು ಅವರಿಗೆ ಬೇಕಾಗಿಯೂ ಇರಲಿಲ್ಲ. ರಾಜಕೀಯ ವಿಪ್ಲವದಿಂದ ಸಮಾಜ ಸೊರಗಿ ಹೋಗಿದ್ದರಿಂದ ಸಮಾಜದಲ್ಲಿ ಸಾಮರಸ್ಯವನ್ನು ಸ್ಥಾಪಿಸುವುದು ಅವರ ಮೂಲ ಉದ್ದೇಶವಾಗಿತ್ತು. ಹೊರನೋಟಕ್ಕೆ ಭಿಕ್ಷೆಯನ್ನು ಸ್ವೀಕರಿಸುವಂತೆ ತೋರುತ್ತಿದ್ದರೂ ಭಿಕ್ಷೆಯನ್ನು ಹಾಕಲು ಬಂದವನಿಗೆ ಆಧ್ಯಾತ್ಮದ ಭಿಕ್ಷೆಯನ್ನು ದಾಸರೇ ನೀಡುತ್ತಿದ್ದರು. ಅನ್ನ, ಅರ್ಥ, ಅಖಿಲ ವೈಭವವನ್ನು ಜನರ ಉದ್ಧಾರಕ್ಕಾಗಿ ಕಳೆಯಲು ಕೀರ್ತನೆಗಳನ್ನು ರಚಿಸಿ ಹಾಡಿದರು. 'ಆರೇನು

ಮೂಡುವರು ಆರಿಂದಲೇನಹುದು ಪೂರ್ವಜನ್ಮದ ಕರ್ಮ ಹಣೆಯಲಿ ಬರೆದುದಕೆ' ಎನ್ನುವಂತಹ ತತ್ವವನ್ನು ಕೀರ್ತನೆಗಳಲ್ಲಿ ತುಂಬಿಸಿದರು. ಹೀಗೆ ದಾಸಸಾಹಿತ್ಯವು ಅಜ್ಞಾನ ಅಹಂಕಾರಗಳ ಮೈಲಿಗೆಯನ್ನು, ಎಲ್ಲವನ್ನು ಬಲ್ಲೆನೆಂಬ ಅಹಂಕಾರದ ಆಡಂಬರವನ್ನು ಅಲ್ಲಗಳೆದು, ಕುಟಿಲ ಕುಹಕ ಕುಪಿತಗಳನ್ನು ಬಿಡದೆ ಮಾಡುವ ಆಚರಣೆಗಳನ್ನು ಕಳೆದುಹಾಕಿ ಬೆಳೆಯುತ್ತದೆ. ಸಮಾಜಕ್ಕೆ ಗುಣಶೀಲಗಳನ್ನೂ ನೈತಿಕಜೀವನದ ಹಿನ್ನೆಲೆಯನ್ನೂ ಒದಗಿಸಿಕೊಟ್ಟು, ಧರ್ಮಸಮಾನತತ್ವಗಳಿಂದ ಸಮಾಜವನ್ನು ತಿದ್ದುವಂತೆ ಮಾಡಿತು. ಒಟ್ಟಿನಲ್ಲಿ ದಾಸಪಂಥದ ಹೋರಾಟವನ್ನು ಒಂದು ತಾತ್ವಿಕ ಹೋರಾಟವೆಂದು ನಾವು ಗ್ರಹಿಸಬೇಕಾಗಿದೆ.

೩.೨ (ಅ) ದಾಸಪಂಥದ ಬೆಳವಣಿಗೆಯಲ್ಲಿ ಮಹಿಳಾಸಾಹಿತ್ಯ

೧೫೦೦ ವರ್ಷಗಳ ದೀರ್ಘವಾದ ಇತಿಹಾಸವಿರುವ ಕನ್ನಡಸಾಹಿತ್ಯದಲ್ಲಿ ಮಹಿಳಾದನಿಯೊಂದು ಮೊದಲು ಕೇಳಿದ್ದರೆ ಅದು ವಚನಯುಗದಲ್ಲಿ ಎನ್ನಬೇಕು. ಈ ಕಾಲದಿಂದ ವೈದಿಕಧರ್ಮವೊಂದು ಸಂಧಿಗ್ಧತೆಯಲ್ಲಿ ಸಿಲುಕಲು, ಅನಂತರದಲ್ಲಿ ಹುಟ್ಟಿಬಂದ ದಾಸಪಂಥವು ವೈದಿಕಧರ್ಮವನ್ನು ಪರಿಷ್ಕರಿಸಿ, ಪುನಃ ಕಟ್ಟುವ ಆಶಯವನ್ನು ಪಡೆದುಕೊಂಡಿತು. ವೈದಿಕಧರ್ಮವು ಪಡೆದುಕೊಂಡಿದ್ದ ಸಂಕೀರ್ಣತತ್ವಕ್ಕೆ ಬದಲಾಗಿ ಸರಳವಾದ ಭಕ್ತಿಸ್ವರೂಪವನ್ನು ದಾಸಪಂಥವು ಕೊಟ್ಟಿತು. ಅಲ್ಲದೆ, ಸಂಸ್ಕೃತಕ್ಕೆ ಬದಲಾಗಿ ಕನ್ನಡ, ಭಾಗವತ ತತ್ವಪ್ರತಿಪಾದನೆ, ವೇದಮಂತ್ರಗಳಿಗೆ ಬದಲಾಗಿ ಕನ್ನಡ ಸಂಕೀರ್ತನೆಗಳ ರಚನೆ, ಮಠಮಂದಿರಗಳ ಭಗವಂತನನ್ನು ಬಯಲಲ್ಲಿ ಕಾಣುವ ಪ್ರಯತ್ನ.....ಹೀಗೆ ಸಮಾಜಮುಖಿ ಚಿಂತನೆಯನ್ನು ದಾಸಪಂಥವು ಮಾಡಿತು. ಮುಖ್ಯವಾಗಿ ದಾಸಪಂಥದ ಹೋರಾಟವು ತಾತ್ವಿಕವಾದದ್ದು. ಅದರ ಹುಡುಕಾಟವು ಹೊಸ ಬದುಕಿನದ್ದು. ಹೀಗೆ ಸಮಾಜದರ್ಶನಕ್ಕಾಗಿ ಮೂಲಭೂತವಾದಿಗಳ ಕಿಲುಬನ್ನು ತೊಳೆಯಲು ಹೊರಟ ದಾಸಪಂಥದಲ್ಲಿ ಮಹಿಳೆಯೊಬ್ಬಳ ಸಮಾಜಮುಖಿ ಬದುಕು ಮತ್ತು ಸಾಹಿತ್ಯರಚನೆ ಮುಖ್ಯಪಾತ್ರವಹಿಸುತ್ತದೆ.

ದಾಸಪಂಥದ ಮೊದಲ ಹರಿದಾಸರೆಲ್ಲ ಕಾಲಿಗೆ ಗೆಜ್ಜೆಯನ್ನು ಕಟ್ಟಿಕೊಂಡು, ಗೋಪಾಲಬುಟ್ಟಿಯನ್ನು ಹಿಡಿದುಕೊಂಡು ಊರೂರು ಸುತ್ತಿರಬಹುದು. ಆದರೆ 'ಮಹಿಳಾದಾಸಸಾಹಿತ್ಯವು ಪುರುಷಹರಿದಾಸರ ರಚನೆಗಳಂತೆ ಹಾಡಿ ಕುಣಿದಲ್ಲಿ, ಕುಣಿದು ಹಾಡಿದಲ್ಲಿ ಹುಟ್ಟಿದವುಗಳಲ್ಲ. ಇಂತಹ ಪಾಲ್ಗೊಳ್ಳುವಿಕೆ ಅಂದಿನ ಪರಿಸರದಲ್ಲಿ ಮಹಿಳೆಯ ಜೈವಿಕ ಹಾಗೂ ಕೌಟುಂಬಿಕ ನೆಲೆಯಲ್ಲಿ ತೊಡಕಿನದಾಗಿತ್ತು ಕೂಡ. ಅಕ್ಕ, ಮೀರಾರಂತವರು ಭಾರತೀಯ ಸಮಾಜದ ಕೌಟುಂಬಿಕ ಚೌಕಟ್ಟನ್ನು ಪ್ರಶ್ನಿಸುವ ಮೂಲಕ ಹೊಸ ವ್ಯವಸ್ಥೆಯನ್ನು ಬಯಸಿದರೆ, ಮಹಿಳಾದಾಸರು ಕೌಟುಂಬಿಕ ಚೌಕಟ್ಟನ್ನು ಒಪ್ಪಿಕೊಂಡೇ ಹೊಸ ಅಸ್ತಿತ್ವದ ಹುಡುಕಾಟದಲ್ಲಿ ತೊಡಗಿದರು' ಎಂದು ಗಾಯತ್ರಿ ನಾವಡ ಅವರು ಅಭಿಪ್ರಾಯಪಡುತ್ತಾರೆ.[೭]

ದಾಸಚಳುವಳಿಯಲ್ಲಿ ಪುರಂದರದಾಸ, ಕನಕದಾಸ ಹಾಗೂ ವಾದಿರಾಜರ ಕಾಲವು ಮೊದಲ ಹಂತದ್ದು. ಮಹಿಳಾದಾಸ ಪರಂಪರೆಯು ಎರಡನೆಯ ಹಂತದ್ದು. ಇಲ್ಲಿ ಮೊದಲ ಹಂತದ ಚಳುವಳಿಯ ಪ್ರಭಾವವು ಮಹಿಳಾದಾಸ ಪರಂಪರೆಗೆ ಆಗಿದ್ದಿರಬಹುದು. ಈ ನೆಲೆಯಲ್ಲಿ, ಗಾಯತ್ರಿ ನಾವಡ ಅವರು ತಮ್ಮ ಲೇಖನದಲ್ಲಿ

'ಪುರಂದರದಾಸರ ಹೆಂಡತಿ ಮತ್ತು ಮಗಳು ಕೃತಿರಚನೆ ಮಾಡಿದ್ದಾರೆ ಎಂಬ ಹೇಳಿಕೆ ಇದೆಯಾದರೂ ದಾಖಲೆ ಸಿಕ್ಕಿಲ್ಲ. ಬಹುಶಃ ಈ ಕಡೆ ಒಂದಷ್ಟು ಶೋಧನೆಯ ಪ್ರಯತ್ನಗಳು ನಡೆದರೆ ಮಹಿಳಾದಾಸ ಇತಿಹಾಸಕ್ಕೆ ಹೊಸದಿಕ್ಕು ಮೂಡುತ್ತದೆ' ಎಂದು ಬರೆಯುವಲ್ಲಿ ಸತ್ಯಾಂಶವಿದೆ.[೮]

ಒಟ್ಟಿನಲ್ಲಿ ಶ್ರೀಪಾದರಾಜರ ಕಾಲದಿಂದ ವಿಕಾಸಗೊಂಡು ಹಾಗೂ ವ್ಯಾಸರಾಯರ ಕಾಲದಿಂದ ಪುಷ್ಟಿಗೊಂಡ ದಾಸಪಂಥದಲ್ಲಿ ಮಹಿಳಾದಾಸರ ಪಾಲ್ಗೊಳ್ಳುವಿಕೆಯೊಂದು ಹೊಸತಾದ ಮುತ್ತು ಅಗತ್ಯವಾದ ಬೆಳವಣಿಗೆ. ಇಲ್ಲಿ ಗಲಗಲಿಯ ಅವ್ವ, ಹರಪನಹಳ್ಳಿ ಭೀಮವ್ವ, ಹೆಳವನಕಟ್ಟೆ ಗಿರಿಯಮ್ಮ ಇನ್ನೂ ಹಲವರಿಂದ ದಾಸಸಾಹಿತ್ಯದ ಬೆಳವಣಿಗೆಯಾಗುವುದರೊಂದಿಗೆ ಮಹಿಳಾಶಕೆಯೊಂದು ಆರಂಭಗೊಳ್ಳುತ್ತದೆ. ಜೊತೆಗೆ ಭಾಗವತ, ರಾಮಾಯಣ, ಮಹಾಭಾರತ, ಕಾವ್ಯಪುರಾಣಗಳನ್ನು ಹಿನ್ನೆಲೆಯಾಗಿರಿಸಿಕೊಂಡ ಅಭಿವ್ಯಕ್ತಿಯಲ್ಲಿ ಅನನ್ಯತೆಯನ್ನು ಸಾಧಿಸುತ್ತಾರೆ.

ಕೊಪ್ಪಳ ತಾಲೂಕಿನ ಭೋಗಪುರದ ಶಾನುಭೋಗರ ಮಗಳಾಗಿ ಹುಟ್ಟಿದ ಗಲಗಲಿ ಅವ್ವ, ತನ್ನ ಹನ್ನೆರಡನೆಯ ವಯಸ್ಸಿನಲ್ಲಿ ವಿಜಾಪುರಜಿಲ್ಲೆಯ ಗಲಗಲಿಯ ಮುದ್ಗಲಾಚಾರ್ಯರನ್ನು ಮದುವೆಯಾಗುತ್ತಾರೆ.[೯] ಮದುವೆಯಾದ ಎಂಟು ದಿನಗಳಲ್ಲಿ ಗಂಡನನ್ನು ಕಳೆದುಕೊಂಡು, ನಂತರದಲ್ಲಿ ಮಲಮಕ್ಕಳಿಂದ ಪಾಠಪ್ರವಚನವನ್ನು ಹೇಳಿಸಿಕೊಂಡು, ಪಾಂಡಿತ್ಯವನ್ನೂ ಗಳಿಸುತ್ತಾರೆ. ಇವರ ರಚನೆಗಳಲ್ಲಿ 'ಮುಯ್ಯದ ಪದಗಳು, ಮೋರೆಗೆ ನೀರುತಂದ ಹಾಡು, ಶೃಂಗಾರ ತಾರತಮ್ಯ, ಬೀಗರ ಹಾಡುಗಳು' ಮುಖ್ಯವಾದವುಗಳು. ಇವುಗಳಲ್ಲಿ ಕೆಲವು ದೀರ್ಘಗೀತೆಗಳು, ಕೆಲವೊಂದು ವಿನೋದಗೀತೆಗಳು ಜೊತೆಗೆ ಸಂಪ್ರದಾಯದ ಗೀತೆಗಳು ಸೇರಿಕೊಂಡು ೨೬೬ ಹಾಡುಗಳನ್ನು ರಚಿಸಿದ್ದಾರೆ.

'ಭೀಮೇಶಕೃಷ್ಣ'ನೆಂಬ ಅಂಕಿತದಿಂದ ಸಾಹಿತ್ಯರಚನೆ ಮಾಡಿದ ಹರಪನಹಳ್ಳಿ ಭೀಮವ್ವನವರದ್ದು ದಾಸಸಾಹಿತ್ಯದಲ್ಲಿ ವಿಶಿಷ್ಟಸ್ಥಾನ. ಹೊಸಪೇಟೆ ತಾಲೂಕಿನ ನಾರಾಯಣ ದೇವರಕೆರೆ ಇವರ ಹುಟ್ಟೂರು. ಕೀರ್ತನೆ, ಉಗಾಭೋಗ, ಸುಳಾದಿಗಳಲ್ಲದೆ ೧೪೩ ಪುಟ್ಟಹಾಡುಗಳನ್ನು ರಚಿಸಿದ ಪ್ರತಿಭೆ ಇವರದ್ದು. ಇತರ ಮುಖ್ಯ ದಾಸರುಗಳ ಕೀರ್ತನೆಗಳಲ್ಲಿರುವ ಪಂಚಭಾವಗಳು, ಲೋಕಾನುಭವದ ಕೀರ್ತನೆಗಳ ನೆರಳು ಇವರ ರಚನೆಗಳಲ್ಲೂ ಹರಡಿದೆ.

ಅಮ್ಮ ನೀ ಕರೆತಾರೆ ಅರವಿಂದನಯನ । ಒಮ್ಮಾದರೂ ಬಾರ ನಮ್ಮನೆಗೆ ॥
ಬ್ರಹ್ಮನ ಪಡೆದನಗಮ್ಯಮಹಿಮನೆ ತಾ । ಕಾಮ್ಯಾರ್ಥ ಕರೆವ ಶ್ರೀ ರಮ್ಮೆರಮಣನ ॥

....

ಬತ್ತಲೆ ತಿರುಗುವನಿತ್ತಬರುವನ್ಹಾಗೆ । ವಸ್ತ್ರವ ಕೊಟ್ಟು ನಮ್ಮ ತ್ತಿಲೆ ಹರಿಯ ॥
ಖಡ್ಗ ಪಿಡಿದು ಕಲಿಗಳ ಕೊಲ್ಲಲ್ಹೋಗುವ । ಬಿದ್ದು ಪಾದಾರವಿಂದಕ್ಕೆರಗಿ ಭೀಮೇಶಕೃಷ್ಣನ ॥

–ಹರಪ್ಪನಹಳ್ಳಿ ಭೀಮವ್ವ

ಇಂತಹ ವಾತ್ಸಲ್ಯ ಭರಿತವಾದ ಕೀರ್ತನೆಗಳಿಗೆ ಹೆಸರಾದ ಹರಪ್ಪನಹಳ್ಳಿ ಭೀಮವ್ವನವರಲ್ಲಿ ನಾವು ಕಾಣುವುದು ವಿಶೇಷವಾದ ಕಾವ್ಯಶಕ್ತಿ. ಅವರ 'ಆರತಿ ಬೆಳಗಬನ್ನಿರೆ, ಆರತಿಯ ಬೆಳಗಬನ್ನಿರೆ ಪಾರ್ವತಿದೇವಿಯರಿಗೆ', ಆಲದೆಲೆಯಮ್ಯಾಲೆ ಮಲಗಿದ್ದಾದಿಕೇಶವನ ನೋಡಬನ್ನಿರಾಲದೆಲೆಯಮ್ಯಾಲೆ ಕೃಷ್ಣ' ಮೊದಲಾದ ರಚನೆಗಳು ಆಧ್ಯಾತ್ಮಿಕ ಅನುಭೂತಿಯನ್ನು ಸೂಚಿಸುವಂತವು. ಅಲ್ಲದೆ, 'ದೇವೇಂದ್ರನ ದೇವಕಿತನಯಳು ಏನೇನು ಬಯಸಿದಳು'ಎಂಬ ಸೀಮಂತದ ಕೀರ್ತನೆ, 'ಬ್ಯಾಗೆ ಬರುವೇನೆಂದು ಸಾಗಿ ಮಧುರಿಗೆ ಹೋದ, ಹಾಲುಮಾರಲು ಪೋದೆವಮ್ಮ' ಮೊದಲಾದ ಕೀರ್ತನೆಗಳು ದೇಸೀಕಲ್ಪನೆಯಿಂದ ಕೂಡಿರುವುದಲ್ಲದೆ, ಸಾಮಾಜಿಕ ಬದುಕನ್ನು ನಿರ್ದೇಶಿಸುವಂತಹುದು.

'ಹೆಳವನಕಟ್ಟೆ ರಂಗ' ಎಂಬ ಮುದ್ರಿಕೆಯಿಂದ ಕೀರ್ತನೆಗಳನ್ನು ರಚಿಸಿದ ಹೆಳವನಕಟ್ಟೆ ಗಿರಿಯಮ್ಮ ಜನಿಸಿದ್ದು ರಾಣಿಬೆನ್ನೂರಿನಲ್ಲಿ. ಭೀಷ್ಮಪ್ಪ ಜೋಯಿಸರ ಮಗಳಾಗಿ, ತಿಪ್ಪರಸನೆಂಬುವವನೊಂದಿಗೆ ಮದುವೆಯಾದರೂ ವೈವಾಹಿಕ ಜೀವನದಿಂದ ವಿಮುಖರಾಗಿ, ವಿರಾಗಿಣಿಯಾಗಿ ಬಾಳಿದವರು. ಬಾಲ್ಯದಿಂದಲೂ ಭಗವದ್ಭಕ್ತಿಯಿಂದ ಬೆಳೆದವರು. ಗೋಪಾಲದಾಸರ ಸಮಕಾಲೀನರಾಗಿ, ಮಂತ್ರಾಲಯದ ಯತಿ ಸುಮತೀಂದ್ರರ ಆಶೀರ್ವಾದಕ್ಕೊಳಗಾಗಿ ಆಧ್ಯಾತ್ಮಿಕವಾಗಿ ಗುರುತಿಸಿಕೊಂಡವರು. ಕೇವಲ ೪೧ ಸಣ್ಣಕೀರ್ತನೆಗಳನ್ನು ರಚಿಸಿದ್ದಲ್ಲದೆ, 'ಬ್ರಹ್ಮಕೊರವಂಜಿ, ಕೃಷ್ಣಕೊರವಂಜಿ, ಲವಕುಶರ ಕಾಳಗ, ಉದ್ಧಾಲಕನ ಹಾಡು' ಮೊದಲಾದ ಕಥನಕಾವ್ಯಗಳನ್ನೂ, 'ಚಂದ್ರಹಾಸಚರಿತೆ, ಸೀತಾಕಲ್ಯಾಣ'ವೆಂಬ ಸಾಂಗತ್ಯ ಕಾವ್ಯಗಳನ್ನೂ ರಚಿಸಿದ ಹಿರಿಮೆ ಇವರದ್ದು.

ಗಿರಿಯಮ್ಮನ ರಚನೆಗಳಲ್ಲಿ ನಾವು ಹೆಚ್ಚಾಗಿ ಕಾಣುವುದು ವಾತ್ಸಲ್ಯಭಕ್ತಿಯನ್ನು. ಭಗವಂತನನ್ನು ತನ್ನ ಮಗುವೆಂದೇ ಭಾವಿಸಿ, ಮುದ್ದಿಸಿದ ರೀತಿ ಈಕೆಯ ಕೀರ್ತನೆಗಳಲ್ಲಿ ಎದ್ದುತೋರುವ ಅಂಶ. 'ಕರೆದಳು ತನ್ನ ಮಗನ ಯಶೋದೆ', 'ತಾರಮ್ಮ ಶ್ರೀರಂಗಧಾಮನ, ತಂದು ತೋರಮ್ಮ...', 'ಬಾರಾನ್ಯಾತಕೆ ನೀರೆ ನೀ ಕರೆತಾರೆ ಸುಗುಣ ಗಂಭೀರನಾ' ಈ ಮೊದಲಾದ ಕೀರ್ತನೆಗಳು ದಾಸಸಾಹಿತ್ಯದ ಮೊದಲ ರಚನೆಗಳಿಗೆ ಸಮಾನವಾಗಿ ನಿಲ್ಲುವವು. ಇವರ ರಚನೆಗಳನ್ನು ಪರಿಶೀಲಿಸಿದಾಗ ಸರಳತೆಯೊಂದಿಗೆ ದೇಸೀಛಂದಸ್ಸಿನ ಲಯವೊಂದು ಎದ್ದುತೋರುತ್ತದೆ. ಜನಸಾಮಾನ್ಯರಿಗಾಗಿಯೇ ಕೃತಿಯನ್ನು ರಚಿಸಲು ಹೊರಟ ಇವರಿಗೆ ಕಾವ್ಯಾಲಂಕಾರಗಳು ಬೇಕಾಗಿರಲಿಲ್ಲ. ಸಮಾಜದ ಡೊಂಕನ್ನು ತಿದ್ದುವ ಉದ್ದೇಶದಿಂದ ಸಮಕಾಲೀನ ಆಚಾರವಿಚಾರಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಿದರು.

ದಾಸಚಳುವಳಿಯಲ್ಲಿ ಮಹಿಳಾದಾಸರುಗಳ ಸಂಖ್ಯೆ ಇಷ್ಟಕ್ಕೇ ನಿಲ್ಲುವುದಿಲ್ಲ. ಇವರುಗಳಲ್ಲದೆ, ಕೃಷ್ಣಾತೀರದ ಚೆರುಕುಪಲ್ಲಿಯ ಚೆ.ರಾ. ಚೆಲ್ಲಮ್ಮ (೧೮೫೦), ಉತ್ತರಕನ್ನಡದ ಗೋಕರ್ಣದವಳಾದ ಗಣಪಕ್ಕ (೧೮೭೦), ಹುಬ್ಬಳ್ಳಿಯ ಬಾಲವಿಧವೆಯಾದ ಸುಂದರಾಬಾಯಿ (೧೮೭೫), ಗೋಕರ್ಣದ ವೈದಿಕಮನೆತನದಿಂದ

ಬಂದ ಪನ್ನಿ ಲಕ್ಷ್ಮೀಬಾಯಿ (೧೮೮೦), ಸಾಗರದ ಶಾಂತಿಬಾಯಿ (೧೮೮೦) ಈ ಮೊದಲಾದರು ಕೀರ್ತನೆಗಳನ್ನು ರಚಿಸುವುದರ ಮೂಲಕ ವೈಷ್ಣವ ಭಕ್ತಿಪಂಥದ ಪರಂಪರೆಯನ್ನು ಮುಂದುವರಿಸಿದರು. ಆದರೂ ಈ ಕವಯತ್ರಿಯರ ಹೆಚ್ಚಿನ ರಚನೆಗಳು ಕಥನಗೀತೆಯ ಮೂಲಕ ಮೂಡಿಬಂದವುಗಳು.

ದಾಸಸಾಹಿತ್ಯದಲ್ಲಿ ಮಹಿಳಾಪರಂಪರೆ ಇನ್ನೂ ಮುಂದುವರಿಯುತ್ತದೆ. ಈ ನೆಲೆಯಲ್ಲಿ ಉಡುಪಿಯ ವಾದಿರಾಜ ಮಠದ ಗಿರಿಬಾಲೆ, ಮೈಸೂರಿನ ವಿದ್ಯಾರಣ್ಯಪುರದ ಜೀವೂಬಾಯಿ, ಬೆಂಗಳೂರು ಚಾಮರಾಜಪೇಟೆಯ ರಾಜಾಮಣಿಯವರು ಮುಖ್ಯರು. ಆದರೆ ಅವರ ರಚನೆಗಳು ಸಿಗುತ್ತಿಲ್ಲ. ಅಂತೆಯೇ ಅನೇಕ ಮಹಿಳಾದಾಸರ ವಿವರಗಳು ಬೆಳಕಿಗೆ ಬಾರದಿರುವುದು ಬೇಸರದ ವಿಚಾರ. ಈ ಎಲ್ಲಾ ವಿಚಾರಗಳ ಹಿನ್ನೆಲೆಯಲ್ಲಿ ಮಹಿಳೆಯರು 'ಸತ್ಯ ಮತ್ತು ಸಂಖ್ಯೆಯಲ್ಲಿ ಮಹಿಳಾದಾಸರು ಬೆರಳೆಣಿಕೆಯಲ್ಲಿದ್ದಾರೆ ಎಂಬ ಅರ್ಧಸತ್ಯವನ್ನು ಬದಿಗಿಟ್ಟು, ಇಡಿಯ ದಾಸಸಂಸ್ಕೃತಿಯ ಪ್ರಕ್ರಿಯೆಯಲ್ಲಿ ಮಹಿಳೆಯರ ಸ್ಥಾನವನ್ನು ಗುರುತಿಸುವ ಮತ್ತು ಗೌರವಿಸುವ ಮೂಲಕ ಮಹಿಳಾಚರಿತ್ರೆಗೆ ನ್ಯಾಯ ತಂದುಕೊಡಬೇಕಾಗಿದೆ' ಎಂಬ ಗಾಯತ್ರಿ ನಾವಡರ ಹೇಳಿಕೆಯನ್ನು ಎಲ್ಲರೂ ಒಪ್ಪಬೇಕಾಗುತ್ತದೆ.[೧೦]

ಒಟ್ಟಿನಲ್ಲಿ ದಾಸಚಳುವಳಿಯ ಬೆಳವಣಿಗೆಯಲ್ಲಿ ಮಹಿಳಾ ಹಾಗೂ ಪುರುಷದಾಸರ ಸಹಭಾಗಿತ್ವವು ಅನಿವಾರ್ಯವಾಗಿತ್ತು. ಹೀಗೆ ಮುಂದುವರಿದ ನೂರಾರು ದಾಸರುಗಳಿಲ್ಲಿ ಅನುಭಾವಿಗಳಾಗಿ ಸಾಹಿತ್ಯರಚನೆ ಮಾಡಿದರು. ಆದರೂ ಕೆಲವು ದಾಸರುಗಳ ಹೆಸರುಗಳು ಇದೀಗ ಮನೆಮಾತಾಗಿಯೇ ಉಳಿದಿದೆ. ಅದೆಷ್ಟೋ ದಾಸರುಗಳ ರಚನೆಗಳು ನಮ್ಮೆದುರಿಗೆ ಇಲ್ಲವಾಯಿತು. ೧೯೯೫ರಲ್ಲಿ ಪೇಜಾವರ ಶ್ರೀಗಳು ದಾಸಕೀರ್ತನೆಗಳ ಅಧಿಕೃತವಾದ ಸಂಕಲನದ ವಿಚಾರವನ್ನು ಸರಕಾರದ ಮುಂದೆ ಇರಿಸಿದ್ದರ ಪ್ರಕಾರ, ಸರಕಾರವು ೫೦ ಸಂಪುಟಗಳನ್ನೇನೋ ೨೦೦೩ ರಲ್ಲಿ ಹೊರಡಿಸಿತು. ಅದರಲ್ಲಿ ೧೪೦ ಜನ ಹರಿದಾಸರ ೧೫ ಸಾವಿರ ಹಾಡುಗಳಿದ್ದರೂ ಅದು ಸಮಗ್ರವಾಗದೆ ಹೋಯಿತು. ಈ ನೆಲೆಯಲ್ಲಿ ಸಧ್ಯದಲ್ಲಿ ದೊರಕುವ ಕೆಲವು ದಾಸರ ಕಾಲನಾಮ ದೇಶಸೂಚಿಯನ್ನು ಮಾತ್ರ ಇಲ್ಲಿ ನೀಡಲು ಪ್ರಯತ್ನಿಸಿದ್ದೇನೆ.

ದಾಸಪಂಥದ ಬೆಳವಣಿಗೆಯಲ್ಲಿ ಲಭ್ಯವಿರುವ ಪ್ರಮುಖ ದಾಸರುಗಳ ಕಾಲ ನಾಮ ದೇಶ ಸೂಚಿ

ಕ್ರ.ಸಂ.	ಹರಿದಾಸರು	ಮೂಲ ನಾಮ	ಅಂಕಿತ ನಾಮ	ದೀಕ್ಷಾ ಗುರುಗಳು	ಸ್ಥಳ	ಕಾಲ
೧	ಶ್ರೀಪಾದರಾಯರು	ಲಕ್ಷ್ಮಿ ನಾರಾಯಣ	ರಂಗವಿಠಲ	ಸ್ವರ್ಣವರ್ಣ ತೀರ್ಥರು	ಅಬ್ಬೂರು (ಚನ್ನಪಟ್ಟಣ)	೧೪೦೪–೧೫೦೨
೨	ವ್ಯಾಸರಾಯರು	ಯತಿರಾಜ	ಸಿರಿಕೃಷ್ಣ/ ಮುದುಕೃಷ್ಣ	ಶ್ರೀಬ್ರಹ್ಮಣ್ಯ ತೀರ್ಥರು	ಬನ್ನೂರು	೧೪೪೭–೧೫೩೯
೩	ವಾದಿರಾಜರು	ಭೂವರ/ ಭೂವರಾಹ	ಹಯವದನ	?	ಹೂವಿನ ಕೆರೆ /ಕುಂದಾಪುರ	೧೪೮೦–೧೬೦೦
೪	ಪುರಂದರದಾಸರು	ಶ್ರೀನಿವಾಸ ನಾಯಕ	ಪುರಂದರವಿಠಲ	ಶ್ರೀ ವ್ಯಾಸರಾಯ	ಪುರಂದರಗಡ (ಪುಣೆ)	೧೪೮೦–೧೫೬೪

೫	ವೈಕುಂಠ ದಾಸರು	ಕೇಶವ	ವೈಕುಂಠದರಸ, ವೈಕುಂಠ ರಮಣ	?	ಬೇಲೂರು	?
೬	ಕನಕದಾಸರು	ತಿಮ್ಮಪ್ಪ ನಾಯಕ	ಕಾಗಿನೆಲೆ ಆದಿಕೇಶವ	ಶ್ರೀ ವ್ಯಾಸರಯರು	ಕಾಗಿನೆಲೆ	೧೫೦೮–೧೬೦೬
೭	ರಾಘವೇಂದ್ರ ತೀರ್ಥರು	ವೆಂಕಣ್ಣ ಭಟ್ಟ	?	?	?	?
೮	ಪ್ರಸನ್ನವೆಂಕಟ ದಾಸರು	ವೆಂಕಪ್ಪಯ್ಯ	ಪ್ರಸನ್ನ ವೇಂಕಟ	ಶ್ರೀನಿವಾಸ (ಸ್ವಪ್ನದಲ್ಲಿ)	ಬಾದಾಮಿ	೧೬೦೮–೧೭೫೨
೯	ಕಾಖಂಡಕಿ ಮಹಿಪತಿರಾಯರು	ಮಹೀಪತಿ ದಾಸ	ಮಹೀಪತಿ	ಭಾಸ್ಕರಸ್ವಾಮಿ (ಸಾರವಾಡ)	ಕಾಖಂಡಕಿ	೧೬೧೧–೧೬೮೧
೧೦	ಕಾಖಂಡಕಿ ಕೃಷ್ಣರಾಯರು	ಕೃಷ್ಣ ದಾಸ	ಮಹಿಪತಿನಂದನ/ ಮಹಿಪತಿ	ಮಹಾಪತಿ ರಾಯರು	ಕಾಖಂಡಕಿ	
೧೧	ವಿಜಯದಾಸರು	ದಾಸಪ್ಪ	ವಿಜಯ ವಿಠಲ	ಪುರಂದರದಾಸರು	ಚಿಪ್ಪಗಿರಿ	೧೬೮೩–೧೭೫೫
೧೨	ಗಲಗಲಿ ಅವ್ವನವರು	?	ರಮಾಬಾಯಿ/ ರಾಮೇಶ	?	ಭೋಗಾಪುರ (ಕೊಪ್ಪಳ)	೧೬೯೫–?
೧೩	ಗೋಪಾಲದಾಸರು	ಭಾಗಣ್ಣ	ಗೋಪಾಲವಿಠಲ /ವೆಂಕಟಕೃಷ್ಣ	ವಿಜಯ ರಾಯ	ಉತ್ತನೂರು	೧೭೨೨–೧೭೬೫
೧೪	ಜಗನ್ನಾಥದಾಸರು	ಶ್ರೀನಿವಾಸಾ ಚಾರ್ಯ ವಿಠಲ	ಜಗನ್ನಾಥ ವಿಠಲ	ಪಾಂಡುರಂಗ	ಮಾನ್ವಿ	೧೭೨೮–೧೮೦೯
೧೫	ಶ್ರೀಶ ಪಾಣೇಶ	ರಾಮದಾಸ	ಪ್ರಾಣೇಶ ವಿಠಲ	ಪ್ರಾಣೇಶ ದಾಸ	ಲಿಂಗಸಗೂರು	೧೮೦೭–೧೮೯೨
೧೬	ಶ್ರೀ ಪ್ರಾಣೇಶ ದಾಸರು	ಯೋಗೀಂದ್ರ	ಪ್ರಾಣೇಶ ವಿಠಲ	ಜಗನ್ನಾಥ ದಾಸ	ಲಿಂಗಸಗೂರು	೧೭೩೬–೧೮೨೨
೧೭	ಹೆಳವನಕಟ್ಟೆ ಗಿರಿಯಮ್ಮ	ಗಿರಿಯಮ್ಮ	ಹೆಳವನ ಕಟ್ಟೆರಂಗ	ಹೆಳವನ ಕಟ್ಟೆರಂಗ	ಕೋಮಾರನ ಹಳ್ಳಿ	೧೭೫೦–?
೧೮	ಹರಪನಹಳ್ಳಿ ಭೀಮವ್ವ	ಭೀಮವ್ವ	ಭೀಮೇಶ ಕೃಷ್ಣ	ನಾರದಮುನಿ	ಹರಪನಹಳ್ಳಿ	೧೮೨೨–೧೯೦೩
೧೯	ವೇಣುಗೋಪಾಲ ದಾಸರು	ತಿಮ್ಮಣ್ಣ	ವೇಣುಗೋಪಾಲ ವಿಠಲ	ವಿಜಯ ದಾಸರು	?	?
೨೦	ಅಣ್ಣಾವಧೂತರು	?	ವಿಠಲ ವ್ಯಾಸ	?	ಸವಣೂರು	?
೨೧	ಸುರಪುರದ ಆನಂದ ದಾಸರು	?	ಕಮಲೇಶ ವಿಠಲ	ಶ್ರೀಶವಿಠಲಲ	ಪರವಿ	೧೮೦೦–?
೨೨	ಮೊದಲಕಲ್ಲು ಶೇಷದಾಸರು	ಶೇಷದಾಸ	ಗುರುವಿಜಯ ವಿಠಲ	ವಿಜಯದಾಸ	ಮೊದಲಕಲ್ಲು	೧೮೦೬–೧೮೮೫
೨೩	ರಾಮದಾಸರು	ಬಡೇ ಸಾಹೇಬ	ರಾಮ/ಶ್ರೀರಾಮ	ರಾಮಾವಧೂತ	ಜೋಳದಡಗಿ (ದೇವದುರ್ಗ)	೧೮ ನೇ ಶತಮಾನ.....?
೨೪	ವಾಸುದೇವ ವಿಠಲರು	ವೆಂಕಟ ರಾಮಾಚಾ	ವಾಸುದೇವ ವಿಠಲ	ಪ್ರಾಣದೇವರು	ಐಜಿ (ರಾಯಚೊರು)	೧೭೦೪–?
೨೫	ಗುರುಜಗನ್ನಾಥ ವಿಠಲರು	ಸ್ವಾಮಿ ರಾಯ	ಗುರುಜಗನ್ನಾಥ ವಿಠಲ	ಗೋಪಾಲ ದಾಸರು	ಕೋಸಗಿ (ಕರ್ನೂಲು)	೧೮೪೧–೧೯೩೦

೨೬	ಶ್ರೀದವಿಠಲ ದಾಸರು	ದಾಸಪ್ಪ	ಶ್ರೀದ ವಿಠಲ	ಜಗನ್ನಾಥದಾಸ	ಕರ್ಜಗಿ	೧೭೪೧–೧೮೨೦
೨೭	ಶ್ರೀಮೋಹನ ದಾಸರು	ಮೋಹನ	ಮೋಹನ ವಿಠಲ	ವಿಜಯ ದಾಸರು	ಚಿಪ್ಪಗಿರಿ	೧೭೨೮–೧೭೫೧
೨೮	ತುಪಾಕಿ ವೆಂಕಟರಮಣಾಚಾ–ರ್ಯರು		ವೆಂಕಟಗಿರಿ/ ಮಹಾಗಿರಿ	ವೆಂಕಜಗನ್ನಾಥ ದಾಸರು	(ಮೈಸೂರು) ತಪಾಕಿ	೧೮೧೦–೧೮೯೫
೨೯	ಪಾವಂಜೆ ಲಕ್ಶ್ಮೀನಾರಣಪ್ಪ		ಲಕ್ಷ್ಮಿನಾರಾಯಣ		ಮೂಲ್ಕಿ (ದಕ್ಷಿಣ ಕನ್ನಡ)	೧೮೫೪–೧೯೨೪
೩೦	ಶ್ರೀ.ಉರಗಾದ್ರಿ ದಾಸವಿಠಲ ದಾಸರು	ಶ್ರೀನಿವಾಸ ರಾಯರು	ಉರಗಾದ್ರಿವಾಸ ವಿಠಲ	ವಿಜದಾಸವರ್ಯ	ಮಳವಳ್ಳಿ	೧೮೭೧–?
೩೧	ಶ್ರೀ.ಬಾಗೇಪಲ್ಲಿ ಶೇಷದಾಸರು	ಶೇಷಣ್ಣ	ಶ್ರೀ ಶೇಷವಿಠಲ (ಪ್ರಾಣನಾಥ ವಿಠಲ)		ಇರಕಸಂದ್ರ ದೇವರಾಯನದುರ್ಗ	
೩೨	ಶ್ರೀ.ಅಸ್ಕಿಹಾಳ ಗೋವಿಂದದಾಸರು	ಗೋವಿಂದ	ಸಿರಿ ಗೋವಿಂದವಿಠಲ		ಸುರಪುರ	೧೮೮೯–೧೯೧೭
೩೩	ಶ್ರೀ.ಹನುಮೇಶ ವಿಠಲರು	ಹನುಮನ್ತ ರಾಯರು	ಹನುಮೇಶ ವಿಠಲ	ಸತ್ಯಜ್ಞಾನ ತೀರ್ಥ ಉತ್ತರಾದಿಮಠ	ಹಾವನೂರು	೧೯೪೧ ಮರಣ)?
೩೪	ಶ್ರೀವಿದ್ಯಾಪ್ರಸನ್ನ ತೀರ್ಥರು	ವೆಂಕಟ ನರ ಸಿಂಹ ಚಾರ್ಯ	ಪ್ರಸನ್ನ	?	ತೆಕ್ಕಲೂರು	೧೮೯೯–?
೩೫	ಶ್ರೀಗೋಕಾವಿ ಅನಂತಾಚಾರ್ಯ	?	ಅನಂತಾದ್ರೀಶ		ಗೋಕಾವಿ	೧೯ನೇ ಶತಮಾನ
೩೬	ಶ್ರೀಗುರುಗೋವಿಂದ ವಿಠಲ ದಾಸರು	?	ಗುರುಗೋವಿಂದ ವಿಠಲ	ಮೋಹನ ವಿಠಲದಾಸ	ಮೈಸೂರು	೧೮೯೪–೧೯೯೩
೩೭	ಶ್ರೀನರಸಿಂಹ ವಿಠಲ ದಾಸ	ನರಸಿಂಹ ದಾಸ	ನರಸಿಂಹ ವಿಠಲ	ಪುರಂದರ ದಾಸರು	ಭಾಗ್ಯವಾಡ	೧೬೮೫–೧೭೬೫
೩೮	ಶ್ರೀವ್ಯಾಸ ವಿಠಲ ದಾಸ	ಕಲ್ಲೂರು ಸುಬ್ಬಣ್ಣ ದಾಸ	ವ್ಯಾಸ ವಿಠಲ	ಶ್ರೀವೇಣು ಗೋಪಾಲ ದಾಸ	ಕಲ್ಲೂರು	೧೭೭೫–
೩೯	ಶ್ರೀಗುರು ಪ್ರಾಣೇಶ ವಿಠಲ ದಾಸ	ವೇಂಕಟ ದಾಸ	ಗುರು ಪ್ರಾಣೇಶ ವಿಠಲ	ಪಾಂಡುರಂಗ	ಮಾನ್ವಿ	೧೭೨೮–೧೮೦೯

ಇವರೆಲ್ಲರ ಸಾಹಿತ್ಯ ರಚನೆಗಳನ್ನು ಇತರ ಸಾಹಿತ್ಯಕ್ಕೆ ಹೋಲಿಸಿ ನೋಡಿದರೆ ವ್ಯಕ್ತವಾಗುವ ಮುಖ್ಯ ಅಂಶವೆಂದರೆ ವಾಕ್‌ಪರಂಪರೆ. ಇಲ್ಲಿ ಕೃತಿರೂಪವಾಗಿ ಉಳಿದಿರುವ ಕೀರ್ತನೆಗಳ ರಚನೆಗಳಿಗಿಂತಲೂ ಆಸ್ತಿಕರ ಬಾಯಲ್ಲಿ ಉಳಿದುಕೊಂಡಿರುವ ಕೀರ್ತನೆಗಳೇ ಹೆಚ್ಚೆಂದು ನಾವು ಭಾವಿಸಿಕೊಳ್ಳಬೇಕಾಗುತ್ತದೆ. ಅದರೂ ದಾಸಸಾಹಿತ್ಯವು ಅನುಭವಗಳ ಹಿನ್ನಲೆಯಲ್ಲಿ ಸ್ವಯಂಪ್ರೇರಿತವಾಗಿ ಸೃಷ್ಟಿಯಾದುದು. ಜನತೆಯ ಮಾತುಗಳೇ ಕೀರ್ತನಾರೂಪದಲ್ಲಿ ರಾಗತಾಳ ಮಿಶ್ರವಾಗಿ ಮೂಡಿಕೊಂಡು ಬಂದವುಗಳು. ಜಡರೂಪವಾಗಿದ್ದ ಸಾಮಾಜಿಕ ವಿಚಾರಕ್ಕೆ ಚಲನಶೀಲತೆಯನ್ನು ತಂದು ಕೊಟ್ಟವು.

೩.೨ (ಅ) : ಪ್ರಾಥಮಿಕ ಸಾಮಾಜಿಕ ಸ್ಥಿತಿಗತಿಗಳು.

ಕರ್ನಾಟಕದ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಇತಿಹಾಸದಲ್ಲಿ ಹರಿದಾಸ ಪರಂಪರೆಯ ಕಾಲವು ವಿಶಿಷ್ಟವಾದುದು. ಅಲ್ಲಿ ಹಿಂದೂ ರಾಜಮಹಾರಾಜರ ಪ್ರಾಬಲ್ಯ ಮತ್ತು ದೌರ್ಬಲ್ಯಗಳೂ ಇವೆ. ಮುಸಲ್ಮಾನ ದೊರೆಗಳ ಅಟ್ಟಹಾಸದ ದಾಳಿಗಳೂ ಇವೆ.

ಕಾಲಗತಿಯಲ್ಲಿ ನೋಡಿದರೆ ಹರಿದಾಸರ ಆರಂಭದ ಕಾಲವು ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಕಾಲ. ಸಂಗಮ, ಸಾಳುವ, ತುಳು, ಹಾಗೂ ಅರವೀಡು ವಂಶಗಳಿಂದ ವಿಜಯನಗರವು ಆಳಿಸಿಕೊಂಡ ಕಾಲ. ದಾಸಪರಂಪರೆಯನ್ನು ನೋಡಿದರೆ ಸಾಳುವ ವಂಶದಿಂದ ತನ್ನ ನಿಖರ ಹೆಜ್ಜೆಯನ್ನಿಟ್ಟಕಾಲವದು. ಸಾಳುವ ವಂಶದಿಂದ ಬಂದ ನರಸಿಂಹರಾಯನು ಚಂದ್ರಗಿರಿಯ ಅಧಿಪತಿಯಾಗಿದ್ದನು. ಜೊತೆಗೆ ಪಂಡಿತನೂ ವಿದ್ಯಾಪೋಷಕನೂ ಆಗಿದ್ದನು. ಇವನು ಮುಳಬಾಗಿಲಿನಲ್ಲಿ ವಿದ್ಯಾಕೇಂದ್ರವೊಂದನ್ನು ಪ್ರತಿಷ್ಠಾಪಿಸಿ, ಶ್ರೀಪಾದರಾಯರನ್ನು ಅದರ ಮುಖ್ಯಸ್ಥರನ್ನಾಗಿ ಮಾಡಿದನು. ೧೪೮೬ ರಲ್ಲಿ ವಿಜಯನಗರದ ವಿರೂಪಾಕ್ಷನನ್ನು ಬದಿಗೊತ್ತಿದ ಸಾಳುವನರಸಿಂಹನು ಚಂದ್ರಗಿರಿಯ ವಿದ್ಯಾಕೇಂದ್ರಕ್ಕೆ ಶ್ರೀಪಾದರಾಯರನ್ನು ಆಹ್ವಾನಿಸಲು ಮುಂದಾದನು. ಆದರೆ ಶ್ರೀಪಾದರಾಯರು ವೃದ್ಧಾಪ್ಯದ ನೆಪವೊಡ್ಡಿ ಒಲ್ಲೆನೆಂದರು. ಆದರೆ ಆ ವಿದ್ಯಾಪೀಠಕ್ಕೆ ವ್ಯಾಸರಾಜರನ್ನು ಗುರುವಾಜ್ಞೆ ನೀಡಿ ನಿಯುಕ್ತಿಗೊಳಿಸಿದರು. ಸಾಳುವ ನರಸಿಂಹನ ನಂತರ ತುಳುವದೊರೆ ತಮ್ಮರಾಯನು ಪಟ್ಟಕ್ಕೆ ಬರಲು, ಆತನ ಅನುಭವದಿಂದ ಸಾಮ್ರಾಜ್ಯ ಕಂಪಿಸಿತು. ಮುಂದೆ ವಿಜಯನಗರವೇ ರಾಜಧಾನಿಯಾಗಿ, ವ್ಯಾಸರಾಯರು ರಾಜಗುರುಗಳಾದರು. ಮುಂದಿನ ದಿನಗಳಲ್ಲಿ ಕೃಷ್ಣದೇವರಾಯನ ಆಳ್ವಿಕೆಯು ವಿಜಯನಗರದಲ್ಲಿ ಸುವರ್ಣಾಧ್ಯಾಯವನ್ನು ಮೂಡಿಸಲು, ವ್ಯಾಸರಾಯರ ಧಾರ್ಮಿಕ ನೀತಿಗಳೂ ಪರಿಣಾಮ ಬೀರಿದವು. ಇದಕ್ಕೆ ಕನ್ನಡನಾಡಿನ ಇತಿಹಾಸವು ಮಾತ್ರ ಸಾಕ್ಷಿಯಾಗಿರದೆ ಅಂದಿನ ವಿದೇಶೀ ಪ್ರವಾಸಿಗರ ಅಭಿಪ್ರಾಯಗಳೂ ಸಾಕ್ಷಿಯಾಗಬಲ್ಲವು.[೧೧]

ವಿಜಯನಗರ ಸಾಮ್ರಾಜ್ಯದ ಕಾಲವು ಹರಿದಾಸರಿಗೆ ಉತ್ತಮ ಕಾಲವಾದರೆ, ಕೃಷ್ಣದೇವರಾಯನ ಕಾಲವು ವಿಜಯನಗರಕ್ಕೆ ಉತ್ತಮಕಾಲ. ಆದರೂ ಆತನ ಕಾಲದಲ್ಲಿ ಕನ್ನಡನಾಡು ಕಂಡ ಆಕ್ರಮಣದಲ್ಲಿ ಮುಸಲ್ಮಾನರದ್ದು ಮುಖ್ಯಪಾಲು. ತನ್ನ ಸಂಕಷ್ಟದಲ್ಲಿ ಅರಸನು ವ್ಯಾಸರಾಯರ ಆಧ್ಯಾತ್ಮಿಕ ಬೆಂಬಲದಿಂದ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದನು. ಈತನ ನಂತರದಲ್ಲಿ ಬಂದ ಅಚ್ಚುತರಾಯನ ಆಳ್ವಿಕೆಯಲ್ಲೂ ವ್ಯಾಸರಾಯರಿಗೆ ರಾಜಗುರುಪೀಠದ ಮನ್ನಣೆಯು ಮುಂದುವರೆದಿತ್ತು.

ಅಂದಿನ ಸಮಾಜದಲ್ಲಿ ಚಾತುರ್ವರ್ಣ್ಯ ಪದ್ಧತಿಯು ರೂಢಿಯಲ್ಲಿತ್ತು. ಸ್ತ್ರೀಯರು ಪೂಜ್ಯನೀಯರಾಗಿದ್ದರೂ ದೇವದಾಸೀಪದ್ಧತಿಯು ಸಾಮಾಜಿಕವಾಗಿ ರೂಢಿಯಲ್ಲಿತ್ತು. ಏಕಪತ್ನಿತ್ವವು ಜನಸಾಮಾನ್ಯರಲ್ಲಿ ಇದ್ದರೂ ಮುಖ್ಯವಾಗಿ ರಾಜನು ಮಾತ್ರ ಬಹುಪತ್ನೀವಲ್ಲಭನಾಗಿದ್ದನು. ಆರ್ಥಿಕ ಪರಿಸ್ಥಿತಿಯಲ್ಲಿ ಸುಭದ್ರತೆ ನೆಲೆಸಿತ್ತು.

ಯುರೋಪ್ ಮತ್ತು ಪರ್ಷಿಯಾದೇಶಗಳ ಸಂಪರ್ಕವು ಭಾರತಕ್ಕಿದ್ದುದರಿಂದ ಇಲ್ಲಿಗೆ ಧನಸಂಪತ್ತು ದೊರಕಿತ್ತಲ್ಲದೆ ಪ್ರಾಮಾಣಿಕವಾದ ವ್ಯಾಪಾರವೂ ನಡೆಯುತ್ತಿತ್ತು.

ವಿಜಯನಗರದರಸರಲ್ಲಿ ಮೆಚ್ಚಬೇಕಾದುದು ಜಾತ್ಯತೀತವಾದ ಸಾಮಾಜಿಕ ಕಲ್ಪನೆ. ಮುಸ್ಲಿಮರ ದಾಳಿಗಳಿಂದ ಹಿಂದೂಧರ್ಮವು ಛಿದ್ರಗೊಂಡಿದ್ದರೂ ವಿಜಯನಗರದ ಅರಸರುಗಳು ಧರ್ಮಸಹಿಷ್ಣುಗಳಾಗಿದ್ದರು. ಹಿಂದೂ ಜನಗಳಿಗಿದ್ದ ಹಕ್ಕುಗಳು ಜೈನ, ಕ್ರಿಶ್ಚಿಯನ್ ಮತ್ತು ಮುಸ್ಲಿಮರಿಗೂ ಸಮಾನವಾಗಿ ದೊರಕುವಂತಿತ್ತು. ಜೈನರಿಗೆ ಬಸದಿ, ಕ್ರೈಸ್ತರಿಗೆ ಇಗರ್ಜಿ, ಮುಸ್ಲಿಮರಿಗೆ ಮಸೀದಿಗಳನ್ನು ನಿರ್ಮಿಸಿಕೊಟ್ಟು ಧಾರ್ಮಿಕಸಾಮರಸ್ಯಕ್ಕೆ ಪಾತ್ರರಾಗಿದ್ದರು. ಇದೆಲ್ಲದಕ್ಕೂ ಮುಖ್ಯ ಕಾರಣಕರ್ತರೆಂದರೆ ಗುರುಗಳಾದ ವ್ಯಾಸರಾಯರೆಂದೇ ಭಾವಿಸಬೇಕು. ಕೃಷ್ಣದೇವರಾಯನ ನಂತರದಲ್ಲಿ ಅಚ್ಯುತರಾಯ, ಸದಾಶಿವ ರಾಯರುಗಳು ಆಳ್ವಿಕೆಯನ್ನು ಯಥಾಪ್ರಕಾರವಾಗಿ ಮುಂದುವರಿಸಿದರೂ ರಾಮರಾಯನ ಆಳ್ವಿಕೆಯಲ್ಲಿ ಮಾತ್ರ ವಿಜಯನಗರವು ಪತನದಂಚಿನಲ್ಲಿ ಸಾಗಿತು. ಸದಾಶಿವರಾಯನ ಕಾಲದಿಂದಲೇ ವಿಜಯನಗರವು ಶತ್ರುಗಳ ವಿಧ್ವಂಸಕಕೃತ್ಯಕ್ಕೆ ಒಳಗಾದುದರಿಂದ ದಾಸವರೇಣ್ಯರಾದ ಪುರಂದರದಾಸರು ಹಂಪೆಯನ್ನು ಬಿಟ್ಟು ಹೊರಟು ಹೋದರು.

ವಿಜಯನಗರದಿಂದ ಪ್ರಾರಂಭವಾದ ಮಹಮ್ಮದೀಯ ದಾಳಿ ಮತ್ತು ದಬ್ಬಾಳಿಕೆಗಳು ಮುಂದಿನ ದಿನಗಳಲ್ಲಿ ವಿಜಾಪುರವನ್ನು ಆಕ್ರಮಿಸಿತು. ಇಲ್ಲಿ ಮುಸಲ್ಮಾನರು ತಮ್ಮ ರಾಜ್ಯಸ್ಥಾಪನೆ ಮಾಡಲು ಹೊರಟಿದುದು ದಾಸಶ್ರೇಷ್ಠರಾದ ಮಹೀಪತಿದಾಸರ ಕಾಲದಲ್ಲಿ. ಆಗಲೇ ಕನ್ನಡದ ಮುಖ್ಯಭಾಗಗಳಲ್ಲಿ ಪರ್ಶಿಯನ್, ಉರ್ದು, ಮರಾಠಿ ಭಾಷೆಗಳು ಬಾಯೂರಿದ್ದವು. ಮುಸಲ್ಮಾನರು ತೋರಿಸಿದ ಸಂಪತ್ತಿನಾಸೆಗೆ ಕೆಲವು ಹಿಂದೂಜನಗಳು ಮರುಳಾಗಿ ಮತಾಂತರಗೊಂಡರು. ಈ ಸಂದಿಗ್ಧತೆಯ ಸಮಯದಲ್ಲಿ ಹಿಂದೂಧರ್ಮದಲ್ಲಿ ಶಾಂತಿಸ್ಥಾಪನೆಗೆ ಹೆಣಗಾಡಿದವರೆಂದರೆ ಹರಿಕೀರ್ತನಕಾರರು. ಆದರೆ ಈ ಸ್ಥಿತಿ ಹೀಗೆಯೇ ಮುಂದುವರಿಯಲಿಲ್ಲ. ಮುಂದಿನ ದಿನಗಳಲ್ಲಿ ದಾಸಪಂಥದ ವರ್ಚಸ್ಸಿಗೆ ಕೆಲವು ಮುಸಲ್ಮಾನರು ಆಕರ್ಷಿತರಾಗಲು, ಇನ್ನೂ ಕೆಲವರು ವಿರೋಧಿಗಳಾಗಿಯೇ ಮುಂದುವರಿದರು. ಈ ನಿಟ್ಟಿನಲ್ಲಿ ಮುಸಲ್ಮಾನ ದೊರೆಗಳಿಂದ ಸಂಮ್ಮಾನಿತರಾದ ವ್ಯಾಸರಾಯರನ್ನೂ, ಸಂತಸಂನ್ಯಾಸಿಗಳನ್ನು ಪರೀಕ್ಷಿಸಲು ಬಂದ ಮುಸಲ್ಮಾನ ದೊರೆಗಳ ಸೊಕ್ಕನ್ನು ಅಡಗಿಸಿದ ಶ್ರೀರಾಘವೇಂದ್ರ ಸ್ವಾಮಿಗಳ ಚರಿತ್ರೆಯನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು.

ಬಿಜಾಪುರವನ್ನು ಆಳುತ್ತಿದ್ದ ಬಾದಷಹರ ಕಾಲದಲ್ಲಿ ಕೆಲವೊಂದು ಹುದ್ದೆಗಳಲ್ಲಿ ಹಿಂದೂ ಜನರಿದ್ದರು. ಅವರುಗಳಲ್ಲಿ, ಆದವಾನಿಯ ದಿವಾನನಾಗಿದ್ದ ವೆಂಕಣ್ಣ, ಬಸಾಲತ್‌ಜಂಗನ ಕಾಲದಲ್ಲಿ ಆದವಾನಿಯ ತಹಸೀಲ್ದಾರನಾಗಿದ್ದ ರಾಘವೇಂದ್ರರಾಯರು, ಇವನ ಕಾಲದಲ್ಲೇ ದಿವಾನನಾಗಿದ್ದ ತಿಮ್ಮಣ್ಣದಾಸ ಹೀಗೆ ಇಂತಹ ಹಲವು ಹೆಸರುಗಳನ್ನು ಪಟ್ಟಿ ಮಾಡಬಹುದು. ತಿಮ್ಮಣ್ಣದಾಸರ ಮಗನಾದ ವಾಸಪ್ಪನಿಗೆ ಬಸಾಲತ್‌ಜಂಗನು ತನ್ನ ಮಗಳನ್ನು ಕೊಟ್ಟು ವಿವಾಹಮಾಡಿಸಿದುದು ಅಂದಿನ ಮುಸಲ್ಮಾನ ಹಾಗೂ ಹಿಂದೂದ್ವೇಷಕ್ಕೆ ಕಾರಣವಾಗಿಬಿಡುತ್ತದೆ. ಇಂತಹ ಭಯಪೂರಿತವಾದ ವಾತಾವರಣ ಜಗನ್ನಾಥದಾಸರ ಕಾಲದಲ್ಲೂ

ಮುಂದುವರಿಯಿತು. ಆಗ ಮೈಸೂರನ್ನು ಆಳುತ್ತಿದ್ದವನು ಹೈದರನ ಮಗ ಟಿಪ್ಪುಸುಲ್ತಾನ. ಅಲ್ಲದೆ ಸಮಗ್ರ ಕರ್ನಾಟಕವು ಬಹುಪಾಲು ಖಾನರು, ಪಠಾನರು, ಸುಲ್ತಾನರಿಂದ ಆಡಳಿತಕ್ಕೊಳಪಟ್ಟಿತ್ತು. ಇಷ್ಟೇ ಅಲ್ಲದೆ ಮರಾಠಿಗರ ಆಕ್ರಮಣ ಒಂದು ಕಡೆಯಾದರೆ ಇನ್ನೊಂದು ಕಡೆ ಬ್ರಿಟಿಷರ ಹೊಂಚುಗಾರಿಕೆ. ಒಟ್ಟಿನಲ್ಲಿ ಆತಂಕಕಾರಿ ಬೆಳವಣಿಗೆ. ಕನ್ನಡದ ನೆಲಕ್ಕಂತೂ ಅದು ಸಂಕಷ್ಟದ ಕಾಲ. ಇಂತಹ ಕಾಲದಲ್ಲಿ ಜನತೆಯಲ್ಲಿ ಆವರಿಸುವುದು ಒಂದು ರೀತಿಯ ಗೊಂದಲ. ಇದನ್ನೇ ಬಸವರಾಜ ಕಲ್ಗುಡಿಯರು ದ್ವಂದ್ವ ಎಂದು ಕರೆದರು. ಅವರ ಪ್ರಕಾರ "ಈ ಮನುಷ್ಯನನ್ನು ಆವರಿಸಿದ ದ್ವಂದ್ವ ಇದೆಯಲ್ಲ–ಅದು ಮುಖ್ಯವಾಗಿ ಅವನ ಹುಡುಕಾಟವಾಗಿರುವಂತೆ, ತನ್ನ ಈ ಬದುಕೊಂದು ವಿಷಮವಾಗಿರುವುದನ್ನು, ಅನಾರೋಗ್ಯಕರವಾಗಿರುವುದನ್ನೂ ಪರೋಕ್ಷವಾಗಿ, ಆದರೆ ಸ್ಪಷ್ಟವಾಗಿ ತಿಳಿಸುತ್ತದೆ. ತನ್ನ ಅಸ್ತಿತ್ವದಲ್ಲಿ ಉಂಟಾದ ವಿಷಮತೆ, ಅದನ್ನು ನಿವಾರಿಸುವ ಹುಡುಕಾಟ ಇವುಗಳ ದ್ವಂದ್ವ ಅವನ ಸಮಸ್ಯೆಯ ಮುಖ್ಯ ಲಕ್ಷಣವಾಗುತ್ತದೆ."[೧೨] ಇಂತಹ ಸಂಧಿಗ್ಧತೆಯಲ್ಲೂ ವೈರಾಗ್ಯ ಮೂಡಿ ದಾಸಾಂದೋಲನಕ್ಕೆ ಅಂದಿನ ಜನ ಪ್ರವೇಶಿಸಿರಬಹುದು. ಒಟ್ಟಿನಲ್ಲಿ, ಅಂದಿನ ಮಧ್ಯಕಾಲೀನ ಸಂದರ್ಭದಲ್ಲಿ ಸಾಮಾಜಿಕವಾಗಿ ಜಾಗೃತಿಯನ್ನು ಮೂಡಿಸಿ, ಸುಸ್ಥಿತಿಯನ್ನು ಕಾಪಾಡುವಲ್ಲಿ ಹರಿದಾಸರ ಸಾಧನೆಯು ನಿಜಕ್ಕೂ ಸ್ಮರಣೀಯವಾದುದು.

ಹದಿಮೂರನೆಯ ಶತಮಾನದಿಂದ ಮುಂದೆ ಸಾಗಿದ ಹರಿದಾಸಸಾಹಿತ್ಯ ಹತ್ತೊಂಬತ್ತನೆಯ ಶತಮಾನದಲ್ಲೂ ಮುಂದುವರಿಯಿತು. ಈ ಶತಮಾನವು ಹರಿದಾಸಪಂಥದಲ್ಲಿ ಅತೀಹೆಚ್ಚು ದಾಸರುಗಳು ಉದಯಿಸಿದ್ದ ಕಾಲ. ಆದರೆ ಪರಿಸ್ಥಿತಿಯ ಏರುಪೇರುಗಳಿಂದ ಬ್ರಾಹ್ಮಣವರ್ಗವು ವೈದಿಕಸಂಪ್ರಾದಾಯವನ್ನು ಬಿಡಬೇಕಾಯಿತು. ವ್ಯವಸಾಯವನ್ನು ಒಪ್ಪಿಕೊಳಬೇಕಾಯಿತು. ಬ್ರಿಟಿಷರ ತೊಂದರೆ, ಸಣ್ಣಸಂಸ್ಥಾನಗಳ ಆಡಳಿತ, ಮೊದಲನೆಯ ಹಾಗೂ ಎರಡನೆಯ ಮಹಾಯುದ್ಧಗಳ ಪರಿಣಾಮ, ಮಿಷನರಿಗಳು ಪ್ರಾರಂಭಿಸಿದ ಆಂಗ್ಲ ಶಿಕ್ಷಣಕ್ರಮ, ಮುಸಲ್ಮಾನ ಮತ್ತು ಕ್ರಿಶ್ಚಿಯನ್ನರಿಂದ ಮತಾಂತರ ಕಾರ್ಯಗಳು, ಬಡತನ, ಅನಕ್ಷರತೆ, ಮೂಢನಂಬಿಕೆ, ಜಾತೀಯತೆ..... ಹೀಗೆ ಹಲವು ವಿಚಾರಗಳು ದಾಸಪಂಥಕ್ಕೆ ಆತಂಕಕಾರಿಯಾಗಿ ಬೆಳೆದವು.

೩.೩ 'ದ್ವೈತ ಸಿದ್ಧಾಂತ' ದ ಪ್ರತಿಪಾದನೆ–ದಾಸ ಸಾಹಿತ್ಯದ ಗುರಿಯೇ ?

ಕರ್ನಾಟಕದ ಹರಿದಾಸಸಾಹಿತ್ಯವು ಭಾರತೀಯತತ್ತ್ವವನ್ನು ಪ್ರತಿಪಾದಿಸಿತು. ಈ ಹಿಂದೆ ನಮ್ಮ ನಾಡಿನ ಶಿವಶರಣರೂ ಕೂಡ ತಮ್ಮ ಸಾಹಿತ್ಯದೊಂದಿಗೆ ಹಿಂದೂಧರ್ಮದ ದೀರ್ಘಕಾಲದ ಉದಾತ್ತತತ್ವಗಳನ್ನು ಸಮಾಜಕ್ಕೆ ಮುಟ್ಟಿಸಿದ್ದರು. ಅಂತೆಯೇ ತಮಿಳುನಾಡಿನಲ್ಲಿ ಇದೇ ಕೆಲಸವನ್ನು ನಾಯನ್ಮಾರರೂ, ಆಳ್ವಾರರೂ ಜನಭಾಷೆಯಲ್ಲಿ ತೊಡಿಕೊಂಡಿದ್ದರು. ಆದರೆ ಇಲ್ಲಿ ಮನಗಾಣಬೇಕಾದ ಅಂಶವೆಂದರೆ, ಕರ್ನಾಟಕದ ಶಿವಶರಣರು ಹಾಗೂ ತಮಿಳು ನಾಡಿನ ನಾಯನ್ಮಾರರು ಶಿವಭಕ್ತರಾದರೆ, ಕರ್ನಾಟಕದ ದಾಸವರೇಣ್ಯರು ಹಾಗೂ ತಮಿಳುನಾಡಿನ ಆಳ್ವಾರರು ವಿಷ್ಣುಭಕ್ತರೆಂಬುದು ಮುಖ್ಯಸಂಗತಿ. ಶರಣಸಾಹಿತ್ಯವು ಷಟ್‌ಸ್ಥಳವನ್ನು ಪ್ರತಿಪಾದಿಸಿ, ಶಿವತತ್ವವನ್ನು ಪ್ರತಿಪಾದಿಸಿದರೆ, ಕರ್ನಾಟಕದ ದಾಸಪಂಥವು ದ್ವೈತಸಿದ್ಧಾಂತವನ್ನು ಪ್ರತಿಪಾದಿಸಿದರೂ,

ಶಿವಮಹಾತ್ಮೆಯನ್ನೂ ಸಾರಿತು. ಇದಕ್ಕೆ ಕಾರಣ 'ಶ್ರೀಹರಿಸರ್ವೋತ್ತಮತ್ವ'ದ ಸಮರ್ಥನೆಯನ್ನು ಶಿವಸಂಬಂಧಿತ ಕೀರ್ತನೆಗಳ ಮೂಲಕ ಮಂಡಿಸಬೇಕೆಂಬ ಉದ್ದೇಶ ದಾಸಕುಲದ್ದು. ಹಾಗಾಗಿ ಹರಿಸೇವೆಗಾಗಿ ಶಿವಸ್ತುತಿಯನ್ನು ಸ್ವೀಕರಿಸುತ್ತಾರೆ ದಾಸಕುಲಜರು. 'ರುದ್ರಗೆ ಹರಿರೂಪವಿಲ್ಲಾ ಇದು ಪುಸಿಯಲ್ಲಾ' ಎನ್ನುವಲ್ಲಿ ಮಧ್ವಮತದ ಅನುಯಾಯಿಯಾದ ವಿಜಯದಾಸರು ಹರಿಹರರಿಬ್ಬರನ್ನೂ ಸಮಾನರೆಂದು ಕಾಣದೆ ವೈಷ್ಣವತ್ವಕ್ಕೆ ವಿಶೇಷತೆಯನ್ನು ಕಲ್ಪಿಸಿ ಕೊಡುತ್ತಾರೆ.

ಶಿವನ ನೋಡಿರೋ ಇಂದು ಸ್ತವನ ಮಾಡಿರೋ ।
ತವಕದಿಂದ ತಿಳಿದು ಅವಗುಣಂಗಳ ತೊರೆದು ನಿತ್ಯ ॥ ಪ ॥
ನಮಿಸಿ ಒರಲಿ ಬೇಡಿ ಭವದಿ ಮಮತೆ ಓಡಿಸಿ ಭಕುತಿಯಿಂದಲಿ
ರಮೆಯರಸ ವಿಜಯವಿಠ್ಠಲನ್ನ ಶಮದಮೆಯಿಂದ ಪೂಜಿಪ ಧೀರ ॥ -ವಿಜಯದಾಸರು.

ವಿಜಯದಾಸರಿಗೆ 'ಶಶಿಧರ ಹರಿರೂಪದೊಳೂ ಕೂಡುವನೇ'? ಎಂಬ ಪ್ರಶ್ನೆಯನ್ನು ಹಾಕಿಕೊಂಡು, ಹರಿರೂಪದೊಳು ಕೂಡುವುದಿಲ್ಲವೆಂಬ ಉತ್ತರವನ್ನೇ ಕಂಡುಕೊಳ್ಳುತ್ತಾರೆ. ಆದುದರಿಂದ ಅವರ ಪಾಲಿಗೆ ಶಿವನು 'ರಮೆಯರಸ ವಿಜಯವಿಠಲನ್ನ ಶಮೆದಮೆಯಿಂದ ಪೂಜಿಪಧೀರ'ನಾಗುತ್ತಾನೆ. ಶಿವಸತಿ ಪಾರ್ವತಿಯು 'ರಮೆಯರಸನ ಪದಕಮಲ ಮಧುಪೆ'ಯಾಗಿ ಪರಿಣಮಿಸುತ್ತಾಳೆ. ಒಟ್ಟಿನಲ್ಲಿ ಮಧ್ವಮತನಿಷ್ಠೆಗಾಗಿ ಶಿವನಲ್ಲಿ ಸಹಾಯ ಕೇಳುತ್ತಾರೆ ವಿಜಯದಾಸರು. ಕನಕದಾಸರ ಹಲವು ಶಿವಕೀರ್ತನೆಗಳು ಒಂದು ರೀತಿಯಲ್ಲಿ ಪೂರ್ಣವಾದ ಹರಿಕೀರ್ತನೆಯಾಗಿಯೇ ತೋರುತ್ತದೆ. ಮುಕ್ತಿಪ್ರದನಾದ ಶ್ರೀನಾರಾಯಣನನ್ನು ಒಲಿಸಿಕೊಳ್ಳಬೇಕಾದರೆ, ಮನಸ್ಸೆಂಬುದು ನಾರಾಯಣನನ್ನು ಸ್ಮರಿಸಬೇಕು. ಅದಕ್ಕಾಗಿ ಮನೋನಿಯಾಮಕನಾದ ಶಿವನ ನೆರವುಬೇಕು. ಈ ನಿಟ್ಟಿನಲ್ಲಿ ಪ್ರಾಣತತ್ವದ ಅನಂತರದ ಗುರುಸ್ಥಾನದಲ್ಲಿ ನೆಲೆಗೊಳ್ಳುವ ಶಿವನನ್ನು ಕನಕದಾಸರು, 'ಜವನಬಾಧೆಯ ನೀವು ಜಯಿಸಬೇಕಾದರೆ, ಸುವಿಮಲ ಮುಕ್ತಿಯ ಪಡೆಯಬೇಕಾದರೆ, ತತ್ತ್ವಪತಿ ಆದಿಕೇಶವನ ಕೂಡಬೇಕಾದರೆ ಶಿವ ಶಿವ ಶಿವ ಎನ್ನಿರೋ' ಎನ್ನುತ್ತಾರೆ. ಆದರೆ ದಾಸಸಾಹಿತ್ಯದ ರಚನೆಯಲ್ಲಿ ಪೂರಕಾಂಶಗಳೇನೇ ಇದ್ದರೂ ಅದು ಸಮರ್ಥಿಸುವುದು ದ್ವೈತಸಿದ್ಧಾಂತವೆಂಬುದಂತೂ ಸ್ಪಷ್ಟ. 'ಬಿಡಿಬಿಡಿ ಸಂದೇಹವನ್ನು ಪೊಡವಿ ಮುನುಜರೆಲ್ಲ । ಒಡೆಯನೊಬ್ಬನೆ ಜಗಕೆ ರಂಗವಿಠಲ' ಎಂದು ಶ್ರೀಪಾದರಾಯರು ತಮ್ಮ ಕೀರ್ತನೆಯಲ್ಲಿ ಪ್ರಶಂಸಿಸಿರುವುದು ದ್ವೈತತತ್ತ್ವದ ಆಧಾರದಿಂದ. ಆದರೆ ಇಂತಹ ರಚನೆಗಳಿಗೆ ದಾಸಪಂಥದ ಉಗಮದಲ್ಲಿದ್ದ ಶ್ರೀಮಧ್ವಾಚಾರ್ಯರ ತತ್ತ್ವ ಪ್ರಭಾವವೇ ಮುಖ್ಯಕಾರಣ.

ಶ್ರೀ ಮನ್ಮಧ್ವಮತೇ ಹರಿಃ ಪರತರಃ ಸತ್ಯಂ ಜಗತ್ ತತ್ವತೋ
ಭೇದಃ ಜೀವಗಣಾಃ ಹರೇರನುಚರಾಃ ನೀಚೋಚ್ಚ ಭಾವಂಗತಾಃ
ಮುಕ್ತಿರ್ನೈಜ ಸುಖಾನುಭೂತಿರಮಲಾ ಭಕ್ತಿಶ್ಚ ತತ್ಸಾಧನಂ
ಹ್ಯಕ್ಷಾದಿ ತ್ರಿತಯಂ ಪ್ರಮಾಣಮಖಿಲಾಮ್ನಾಯೈಕ ವೇದ್ಯೋ ಹರಿಃ ॥-ವ್ಯಾಸರಾಜರು

ಇದು ಶ್ರೀವ್ಯಾಸರಾಯರ ಆಶುರಚನೆ. ಇದಕ್ಕೆ 'ಪ್ರಮೇಯ ನವರತ್ನಮಾಲಾ' ಎಂಬ ಹೆಸರಿದೆ. ಇವರು ದ್ವೈತತತ್ವದ ಪ್ರಮುಖ ಪ್ರಮೇಯಗಳನ್ನು ಶಾರ್ದೂಲವಿಕ್ರೀಡಿತ ಛಂದೋಬಂಧದಲ್ಲಿ ಹೇಳಿದ್ದು ಮಾತ್ರವಲ್ಲದೆ, ಅದರಲ್ಲಿರುವ ತಾತ್ವಿಕತೆಯನ್ನು ಕೀರ್ತನೆಯ ರಚನೆಯಲ್ಲಿ ಅಡಕವಾಗಿಸುವಂತೆ ಇತರರಿಗೆ ಪ್ರೇರಣೆಯಾದರು. ಹಾಗಾಗಿ ದಾಸಪಂಥದ ತಾತ್ವಿಕವಾದ ನಿಲುವು ಮಾತ್ರ ದ್ವೈತತತ್ತ್ವವೇತ್ತವಾದುದು. ಇಲ್ಲಿ ದೇವ ಮತ್ತು ಜೀವನನ್ನು ಬೇರೆ ಬೇರೆಯಾಗಿ ನೋಡುವ ಕ್ರಿಯೆಯಿದೆ. ಅಲ್ಲದೆ, ಜೀವ–ಜೀವ ಭೇದ, ಜಡ–ಜಡ ಭೇದ, ಜೀವ_ಜಡ ಭೇದ, ಜೀವ–ದೇವ ಭೇದ ಮತ್ತು ಜಡ–ದೇವ ಭೇದಗಳೆಂಬ ಪಂಚಭೇದತತ್ವವನ್ನು ಹಲವಾರು ದಾಸರುಗಳು ತಮ್ಮ ಕೃತಿಗಳಲ್ಲಿ ಅಲ್ಲಲ್ಲಿ ವಿವರಿಸಿದ್ದಾರೆ. ಅಲ್ಲದೆ ಶ್ರೀಹರಿಯೇ ಸರ್ವೋತ್ತಮ, ಜಗತ್ತು ಪಾರಮಾರ್ಥಿಕ ಸತ್ಯ ಮತ್ತು ನಿತ್ಯವೆಂಬ ವಿಚಾರ, ಜೀವಗಣಗಳು ಶ್ರೀಹರಿಯ ಅನುಚರರು, ಅಂತೆಯೇ ನಿತ್ಯತಾರತಮ್ಯವುಳ್ಳವರು, ಸ್ವರೂಪ ಸುಖಾನುಭವವೇ ನಿಜವಾದ ಮುಕ್ತಿ, ನಿರ್ಮಲವಾದ ಭಕ್ತಿಯೇ ಮುಕ್ತಿಗೆ ಸಾಧನೆ, ಸಾಧಕಪ್ರಮಾಣಗಳೇ ಪ್ರತ್ಯಕ್ಷ, ಅನುಮಾನ ಹಾಗೂ ಆಗಮಗಳು, ಶ್ರೀಹರಿಯು ಆಗಮವೇದ್ಯನೆಂಬುದು ಮಧ್ವಸಿದ್ಧಾಂತದ ತಿರುಳು. ವ್ಯಾಸರಾಯರ ಮಧ್ವತತ್ವವನ್ನು ಅನುಸರಿಸಿಯೇ ಪುರಂದರದಾಸರು ಕೂಡ ದ್ವೈತಸಿದ್ಧಾಂತದನ್ವಯ ಕೀರ್ತನೆಯೊಂದನ್ನು ರಚಿಸಿಬಿಡುತ್ತಾರೆ.

ಸತ್ಯ ಜಗತಿದು ಪಂಚ ಭೇದವು, ನಿತ್ಯ ಶ್ರೀ ಗೋವಿಂದನ ।
ಕೃತ್ಯ ತಿಳಿದು ತಾರತಮ್ಯದಿ ಕೃಷ್ಣನ್ನಧಿಕೆಂದು ಸಾರಿರೈ ॥
ಜೀವ ಈಶಗೆ ಭೇದ ಸರ್ವತ್ರ ಜೀವ ಜೀವಕೆ ಭೇದವು ।
ಜೀವ ಜಡರೊಳು ಭೇದ ಜಡರೊಳು ಭೇದ ಜಡ ಪರಮಾತ್ಮಗೆ ॥

....

ವಾಯುವಿಗೆ ಸಮರಿಲ್ಲ ಜಗದೊಳು ವಾಯು ದೇವರೇ ಬ್ರಹ್ಮರು
ವಾಯು ಬ್ರಹ್ಮಗೆ ಕೋಟಿಗುಣದಿಂದ ಅಧಿಕ ಮಹಿಮಳು ಶ್ರೀರಮಾ
ಅನಂತ ಗುಣದಿಂದಧಿಕ ಲಕುಮಿಗೆ ಆದಿ ಪುರಂದರವಿಠಲನು
ಘನರು ಸಮರೂ ಇಲ್ಲ ಜಗದೊಳು ಹನುಮ ಹೃತ್ಪದ್ಮವಾಸನೆ ॥ –ಪುರಂದರದಾಸರು

ಇಲ್ಲಿ ವ್ಯಾಸರಾಯರ ಗೂಢಾರ್ಥಕ್ಕೆ ಪುರಂದರದಾಸರು ನೇರವಾಗಿಯೇ ಉತ್ತರಿಸುವ ಸಾಹಸವನ್ನು ತೋರಿದ್ದಾರೆ. ಆದರೆ ಪುರಂದರದಾಸರ ರಚನೆಯಲ್ಲಿ ಶಾಸ್ತ್ರಾಧಾರಿತವಿಚಾರಗಳು ಹೆಚ್ಚಾಗಿ ಗಮನಸೆಳೆಯುತ್ತವೆ. ಅಧ್ಯಾತ್ಮಿಕವಾದ ತಾತ್ವಿಕದೃಷ್ಟಿಯನ್ನು ತಿಳಿಗನ್ನಡದಲ್ಲಿ ಪರಿಣಾಮಕಾರಿಯಾಗಿ ನಿರೂಪಿಸಿರುವುದು ಇವರ ಹೆಚ್ಚುಗಾರಿಕೆ.

ಜೀವ ಜೀವಕೆ ಭೇದ, ಜಡ ಜಡಕೆ ಭೇದ
ಜೀವ ಜಡ ಪರಮಾತ್ಮನಿಗೆ ಭೇದ
ಜೀವಾಜೀವ ಮುಕ್ತಾಮುಕ್ತರ ಭೇದ
ಸಂಸಾರದೊಳು ಭೇದ
ಮುಕ್ತರೊಡೆಯ ಹರಿ ಭಕ್ತರಾಧೀನ
ಜಗತ್ಕರ್ತು ನೀ ಸಲಹಯ್ಯ ಪುರಂದರವಿಠಲ ॥ –ಪುರಂದರದಾಸರು

ಇಲ್ಲಿ ಭೇದತತ್ವವನ್ನು ಎತ್ತಿಹಿಡಿಯುವ ಸರಳಕೀರ್ತನೆಯು ಮೇಲೆ ಹೇಳಿದಂತೆ ಅವರ ಸರಳರಚನೆಗೆ ಸಾಕ್ಷಿ. ಅಲ್ಲದೆ ಪರಮಾತ್ಮ ಮತ್ತು ಜೀವಾತ್ಮಗಳ ಭೇದಕಲ್ಪನೆಯನ್ನು ಸಾರುವ ಇನ್ನೊಂದು ಮುಖ್ಯ ಕೀರ್ತನೆ ಇಂತಿದೆ.

> ಎರಡೂ ಒಂದಾಗದು ರಂಗ । ಎರಡೂ ಒಂದಾಗದು ಎಂದೆಂದಿಗೂ ರಂಗ ॥
> ಒಂದು ವೃಕ್ಷದಲಿ ಎರಡು ಪಕ್ಷಿಗಳು । ಒಂದೇ ಗೂಡಿನಲಿ ಇರುತಿಹವು ।
> ಒಂದು ಪಕ್ಷಿ ಫಲಗಳನುಂಬುದು, ಮ । ತ್ತೊಂದು ಫಲಂಗಳನುಣ್ಣದು ರಂಗ ॥೧॥
> ಹಲವು ಕೊಂಬೆಗೆ ಒಂದು ಹಾರಿತು, ಒಂದು । ಹಲವು ಕೊಂಬೆಗೆ ಹಾರಲರಿಯದು ।
> ಹಲವನೆಲ್ಲ ಒಂದು ಬಲ್ಲುದು, ಒಂದು । ಒಂದು ಹಲವನೆಲ್ಲವ ಅರಿಯದು ರಂಗ ॥೨॥
> ನೂರೆಂಟು ಕೊಂಬೆಗೆ ಹಾರಿತು, ಅದು । ಹಾರಿ ಮೇಲಕ್ಕೇರಿ ಮೀರಿತು ।
> ಮೀರಿ ಪುರದರವಿಠಲ ನಿಮ್ಮನು । ಸೇರಿ ಸುಖಿಯಾಗಿ ನಿಂತಿತು ರಂಗ ॥೩॥ –ಪುರಂದರದಾಸರು

ಇಂತಹ ಮಧ್ವಸಿದ್ಧಾಂತವನ್ನು ಪ್ರತಿಪಾದಿಸುವ ಕೀರ್ತನೆಗಳು ನಮಗೆ ದಾಸಸಾಹಿತ್ಯದಲ್ಲಿ ಬಹಳಷ್ಟು ಸಿಗುತ್ತವೆ. ಒಟ್ಟಿನಲ್ಲಿ ಇಲ್ಲಿಯ ದಾಸರು ಹರಿಯನ್ನೇ ನಂಬಿ ಕೀರ್ತನೆಗಳನ್ನು ರಚಿಸಿದರು. ಆದರೆ ರಚಿಸಿದ ರಚನೆಗಳಲ್ಲಿ ದ್ವೈತಸಿದ್ಧಾಂತದ ಛಾಯೆಯನ್ನು ಮೂಡಿಸಿದರು. ಹಾಗಾಗಿ ದಾಸಕುಲಕ್ಕೆಲ್ಲ ಶ್ರೀಮಧ್ವಾಚಾರ್ಯರೇ ಗುರುಗಳು. ರಾಮನಾಮವೆಂಬ ಪಾಯಸಕ್ಕೆ ಕೃಷ್ಣನಾಮವೆಂಬ ಸಕ್ಕರೆಯನ್ನು ಬೆರೆಸಿದಂತೆ, ದ್ವೈತಸಿದ್ಧಾಂತಕ್ಕೆ ಭಕ್ತಿಯೆಂಬ ಸಕ್ಕರೆಯನ್ನು ಬೆರೆಸಿ, ಮಧ್ವತತ್ವದ ವ್ಯಾಪ್ತಿಗೆ ಕಾರಣೀಭೂತರಾದರು. 'ನಾಡದೈವಗಳ ಪೂಜೆಯನು ಮಾಡಿದರೆ ಕೇಡಲ್ಲದೆ ಮತ್ತೆ ಕೈವಲ್ಯವುಂಟೇ' ಎನ್ನುವ ಮೂಲಕ ವಿಜಯದಾಸರು ಹರಿಪೂಜೆಗಾಗಿ ಮಣೆಯನ್ನು ಹಾಕಿದರು. ಜೊತೆಗೆ 'ಮಧ್ವಮತವ ಪೊಂದದವನ ಭಕುತಿಯಾತಕೆ, ಊರ್ಧ್ವಪುಂಡ್ರ ತಿದ್ದದವನ ಕರ್ಮವ್ಯಾತಕೆ' ಎನ್ನುವಲ್ಲಿ ಭಕ್ತಕರ್ಮಾರ್ಥಿಗಳಿಗೆ ಮಧ್ವತತ್ತ್ವದ ದಾರಿಯನ್ನು ತೋರಿಸಿದರು. ಈ ತತ್ತ್ವಕ್ಕೆ ಒಳಗಾಗದವನು ಮಾಡುವ ದ್ರವ್ಯದಾನ, ಸ್ನಾನವನ್ನು ಮಾಡದವನ ಮೌನವೆಲ್ಲವೂ ವ್ಯರ್ಥವಾಗಲು ಸಾಧ್ಯವೆನ್ನುವ ಮೂಲಕ ಎಚ್ಚರಿಕೆಯನ್ನು ನೀಡಿದರು. ಒಟ್ಟಿನಲ್ಲಿ ಇಲ್ಲಿಯ ದಾಸರು ತಮ್ಮ ಭಕ್ತಿಸಾಹಿತ್ಯದ ಮೂಲಕವಾಗಿ ದ್ವೈತಸಿದ್ಧಾಂತವನ್ನೇ ಮಂಡಿಸಿದರು. ಆದರೆ ಕನಕದಾಸರ, ಪುರಂದರದಾಸರ, ರಾಮದಾಸರ ಹಾಗೂ ಅನೇಕ ಮಹಿಳಾದಾಸರ ಕೀರ್ತನೆಗಳಲ್ಲಿ ದ್ವೈತ ಸಿದ್ಧಾಂತದ ಚೌಕಟ್ಟನ್ನು ಮೀರಿದ ವಿಶ್ವವಿಶಾಲವಾದ ದೃಷ್ಟಿಕೋನವನ್ನು ಕಾಣಬಹುದಾಗಿದೆ.

೩.೪ ಕೀರ್ತನೆಗಳಲ್ಲಿ ಭಕ್ತಿಯ ಸ್ವರೂಪ

ಸಾಧಾರಣವಾಗಿ ಭಕ್ತಿಯ ಸ್ತರಗಳು ಒಂಬತ್ತು. ಇದು ನವವಿಧ ಭಕ್ತಿಯೆಂದೇ ಹೆಚ್ಚು ಪ್ರಸಿದ್ಧಿ. ಆದರೆ ಇಲ್ಲಿ ದಾಸಪರಂಪರೆಯು ಮಧ್ವಾಚಾರ್ಯರಿಂದಲೇ ಪ್ರಾರಂಭವಾದುದು ಎಂಬ ವಾದವನ್ನು ಸ್ವೀಕರಿಸಿದಾಗ ನವವಿಧ ಭಕ್ತಿಗಳ ಜೊತೆಗೆ ಆತ್ಮನಿವೇದನವೆಂಬ ಪ್ರತ್ಯೇಕವಾದ ಭಕ್ತಿಪ್ರಕಾರವೊಂದನ್ನು ಸ್ವೀಕರಿಸಬೇಕಾಗುತ್ತದೆ. ಕೆಲವೊಮ್ಮೆ ದಾಸ್ಯ ಹಾಗೂ ಆತ್ಮನಿವೇದನೆಗಳು ಅಂತಃಸ್ವರೂಪದಲ್ಲಿ ಒಂದೇ ಎಂಬ ಭ್ರಮೆ ಕಾಡಿದರೂ ಅಂತಃರ್ದರ್ಶನದಲ್ಲಿ ಅವೆರಡೂ ಬೇರೆಬೇರೆ ಎನ್ನುವುದನ್ನು ಆಚಾರ್ಯಮಧ್ವರೇ ಪ್ರಮಾಣದೊಂದಿಗೆ

ಉದಾಹರಿಸುತ್ತಾರೆ. ಅವರು ತಮ್ಮ ಭಾಗವತ ತಾತ್ಪರ್ಯನಿರ್ಣಯದಲ್ಲಿ 'ಆತ್ಮಸ್ಥತ್ವೇನವೇದನಮಾತ್ಮ ನಿವೇದನಮ್' ಎಂಬ ವ್ಯಾಖ್ಯಾನವನ್ನು ಈ ಕುರಿತಾಗಿ ನೀಡುತ್ತಾರೆ. ಅಲ್ಲದೆ 'ಮುಕ್ತಸ್ಯಾಪಿ ಮಮಾಂತಸ್ಥೋ ನಿಯಂತೈವ ಹರಿಃಸದಾ । ಇತಿಜ್ಞಾನಂ ಸಮದ್ದಿಷ್ಟಂ ಸಮ್ಯಗಾತ್ಮನಿವೇದನಮ್' ಎಂಬಲ್ಲಿ ಸಂವಾದ ರೂಪದ ಪ್ರಮಾಣವೊಂದನ್ನು ಒದಗಿಸಿ ಕೊಡುತ್ತಾರೆ. ಸಂಸಾರವಸ್ಥೆ ಮಾತ್ರವಲ್ಲದೆ ಮುಕ್ತಿಯ ಅವಸ್ಥೆಯಲ್ಲೂ ಭಗವಂತನು ನನ್ನೊಳಗಿದ್ದು, ನನ್ನನ್ನು ನಿಯಮಿಸುತ್ತಿರುವನೆಂದು ತಿಳಿದುಕೊಳ್ಳುವುದೇ 'ಆತ್ಮನಿವೇದನ'ವೆಂದು ಹೇಳುತ್ತಾರೆ. ಈ ಆತ್ಮನಿವೇದನವನ್ನು ಕೆಲವೆಡೆ 'ಆತ್ಮಸಮರ್ಪಣ'ವೆಂದು ಕರೆದಿರುವುದುಂಟು. ಹಾಗಾಗಿ, ಈ ಆತ್ಮಸಮರ್ಪಣಕ್ಕೂ ಆಚಾರ್ಯಮಧ್ವರು ತಮ್ಮ 'ತಂತ್ರಮಾಲಾ'ದಲ್ಲಿ 'ಅನಾದ್ಯನಂತಕಾಲೇಷು ಮುಕ್ತೌ ಸಂಸಾರ ಏವಚ.....ಬಹಿಸ್ಥೇಶ್ವರ ದಾಸತ್ವಂ ದಾಸಮಿತ್ಯುಚ್ಯತೇ ಬುಧೈಃ' ಎಂದು ಹೇಳಿದ್ದುಂಟು. ಅನಾದಿ ಅನಂತಕಾಲದ ಸಂಸಾರಾವಸ್ಥೆಯಲ್ಲಿ ಹಾಗೂ ಮುಕ್ತವ್ಯವಸ್ಥೆಯಲ್ಲಿ ವಿಷ್ಣುವು ನನ್ನಲ್ಲಿದ್ದುಕೊಂಡು ಪ್ರೇರಣೆಯಿತ್ತಿರುವನೆಂದು ಪ್ರೀತಿಪೂರ್ವಕವಾಗಿ ಅರಿತುಕೊಳ್ಳುವುದೇ ಆತ್ಮಸಮರ್ಪಣೆಯೆಂದೆನಿಸಿದರೆ, ಜೀವಾತ್ಮರ ಸ್ವರೂಪದೊಳಗಿದ್ದುಕೊಂಡು ಪ್ರೇರಣೆಯನ್ನು ನೀಡುವ ಭಗವಂತನೇ ಈಶ್ವರನಾಮಕನಾಗಿ ಬಾಹ್ಯದಲ್ಲೂ ಪ್ರೇರಣೆಯನ್ನೀಡುತ್ತಿರುವನು. ಅಂತಹ ಭಗವದ್ರೂಪದ ಸೇವೆಗಾಗಿ ತನ್ನ ಅವಯವಗಳನ್ನು ಸಮರ್ಪಿಸುವುದೇ 'ದಾಸ್ಯ'ವೆಂದೆನಿಸುವುದು.

ಹೀಗೆ ಆತ್ಮನಿವೇದನದಲ್ಲಿ ಭಗವಂತನನ್ನು ಅಂತರ್ಯದಲ್ಲಿ ವಿಶ್ಲೇಷಿಸಿದರೆ, ದಾಸ್ಯದಲ್ಲಿ ಭಗವಂತನ ಸೇವೆಗಾಗಿ ತನ್ನ ಅವಯವಗಳ ಕುರಿತು ವಿಶ್ಲೇಷಣೆ ನೆರವೇರುತ್ತದೆ. ಒಟ್ಟಿನಲ್ಲಿ ದಾಸಸಾಹಿತ್ಯದಲ್ಲಿ ನವವಿಧ ಭಕ್ತಿಗಳೊಂದಿಗೆ ಆತ್ಮನಿವೇದನವೂ ಸೇರಿ ದಶವಿಧಭಕ್ತಿ ಎಂದೆನಿಸುತ್ತದೆ. ದಾಸಕೀರ್ತನೆಯ ಪ್ರಕಾರ ಜ್ಞಾನ–ಕರ್ಮ–ಯೋಗಕ್ಕಿಂತಲೂ ಮಿಗಿಲಾದುದೆಂದರೆ ದೈವಭಕ್ತಿ. ಆದುದರಿಂದಲೇ ಹಲವು ಕೀರ್ತನೆಗಳ ಅಂತರಾಳದ ಧ್ವನಿಯೆಂದರೆ, ಭಗವದ್ಭಕ್ತಿಯುಳ್ಳ ಚಾಂಡಾಲನು ಭಕ್ತಿವಿಹೀನ ವೈದಿಕ ಜ್ಞಾನಿಗಿಂತ ಶ್ರೇಷ್ಠನೆಂದು ಸಾರುತ್ತದೆ.

೩.೪ (ಅ) ಶ್ರವಣ ಭಕ್ತಿ

ಭಗವಂತನ ಲೀಲಾವಿನೋದ ಕಾರ್ಯಕಥೆಗಳನ್ನು ಕೇಳುವುದರಿಂದಲೇ ಪ್ರಾಪಂಚಿಕ ವಿಷಯಗಳಿಂದ ಕಲುಷಿತವಾದ ಭಕ್ತನ ಹೃದಯವು ಪವಿತ್ರವಾಗುತ್ತದೆ ಎಂದು ನಂಬಿದವರು ದಾಸಪರಂಪರೆಯವರು. ಪ್ರಾಯಶಃ ಈ ದೃಷ್ಟಿಯಿಂದಲೇ ದಾಸಶ್ರೇಷ್ಠರು 'ಹರಿಕಥಾಶ್ರವಣ ಮಾಡೋ ನಿರಂತರ' ಎಂದು ಶ್ರವಣಭಕ್ತಿವಾಹಿನಿಯನ್ನು ಹರಿಸಿರಬೇಕು. ಶ್ರೀಪಾದರಾಜರು 'ವಿಶಾಲಕರ್ಣಿಕೆ ಭೂಷಣ ವಿಷ್ಣುಕಥೆಯು' ಎಂದಿರುವುದೂ ಕೂಡ ಈ ನೆಲೆಯಿಂದಲೇ.

೩.೪ (ಆ) ಸ್ಮರಣ ಭಕ್ತಿ

ಇಲ್ಲಿ ಭಗವಂತನ ಗುಣ ಹಾಗೂ ಲೀಲೋತ್ಸವಗಳನ್ನು ಜ್ಞಾಪಕಕ್ಕೆ ತರುವುದೇ ಸ್ಮರಣಭಕ್ತಿ ಎನಿಸಿಕೊಳ್ಳುತ್ತದೆ. ದೇವರ ನಾಮಸ್ಮರಣೆ ಮಾತ್ರದಿಂದಲೇ ಕಲ್ಮಷಗಳ ಉಚ್ಚಾಟನೆಯಾಗುತ್ತದೆ ಎಂಬುದು

ದಾಸಕುಲದ ಕಲ್ಪನೆ. ಇದನ್ನು ಚೈತನ್ಯಪಂಥವೂ ಒಪ್ಪಿಕೊಳ್ಳುತ್ತದೆ. ದಾಸಶ್ರೇಷ್ಠರಾದ ಪುರಂದರದಾಸರಂತೂ ತಮ್ಮ ಕೀರ್ತನೆಗಳಲ್ಲಿ, 'ಹರಿಹರಿ ಹರಿಯೆಂದು ಸ್ಮರಿಸುವ ಜನರಿಗೆ ದುರ್ಗತಿಯೇ ಇಲ್ಲ'ವೆನ್ನುತ್ತಾರೆ. ಹರಿಯ ನೆನೆಯದ ನರಜನ್ಮವೇಕೆ? ಎಂದು ಪ್ರಶ್ನಿಸುತ್ತಾರೆ. ಕಲಿಯುಗದಲ್ಲಿ ಹರಿನಾಮವ ನೆನೆದರೆ ಕುಲಕೋಟಿಗಳು ಉದ್ಧರಿಸುವವೆಂದು ಬೋಧನೆಯನ್ನು ಮಾಡುತ್ತಾರೆ. 'ನಾಮವೊಂದೇ ಸಾಲದೇ ಗೋವಿಂದನ' ಎಂದು ವಿಶ್ಲೇಷಣೆಗೆ ತೊಡಗುತ್ತಾರೆ. ಕೊನೆಯಲ್ಲಿ 'ಹರಿನಾರಾಯಣ ಹರಿನಾರಾಯಣ ಹರಿನಾರಾಯಣ ಎನುಮನವೆ' ಎಂದು ವಿನಂತಿಸಿಕೊಳ್ಳುತ್ತಾರೆ. ಒಟ್ಟಿನಲ್ಲಿ ಸ್ಮರಣಾಭಕ್ತಿಯಲ್ಲಿ ಲೀನರಾದವರುಗಳು ಅನೇಕ ದಾಸರುಗಳು.

'ಹರಿಸ್ಮರಣೆಯೆಂಬೊ ಹಿರಿಪುತ್ರನಿರಲಿಕ್ಕೆ ಈ ನರಪುತ್ರರಿಂದ ಗತಿಯಾಹುದೇನಯ್ಯಾ'(ವ್ಯಾಸರಾಯರು), 'ಹರಿಭಜನೆ ಮಾಡೋ ನಿರಂತರ ಪರಗತಿಗಿದು ನಿರ್ಧಾರ', 'ಹೋಗುತಿದೆ ಹೊತ್ತು ಬರಿದೆ ವ್ಯರ್ಥವಾಗಿ ಹರಿಗುರುಗಳ ನೆನೆಯದೆ'(ವಾದಿರಾಜರು), 'ಹರಿನಿಮ್ಮ ಪದಕಮಲ ನಿರುತಧ್ಯಾನದಿ ಎನಗೆ ದೊರಕೀತೆ ಗುರುಸೇವೆ ಹರಿಯೆ'(ಕನಕದಾಸ), 'ಮನವೇ ಬರಿದೆ ಚಿಂತಿಸಲಿಬ್ಯಾಡಾ ಹರಿಚರಣ ಸ್ಮರಿಸಿ ಸುಖಿಯಾಗು ಕಂಡ್ಯಾ'(ಕಾಖಂಡಕಿ ಕೃಷ್ಣರಾಯರು), 'ಹರಿಹರಿ ಎನ್ನದೆ ಈ ನಾಲಗಿನ್ನಿರುವುದ್ಯಾತಕೆ ಸುಮ್ಮನೆ'(ಹರಪನಹಳ್ಳಿ ಭೀಮವ್ವ), 'ಸಾಸಿರ ಮಾತುಗಳ್ಯಾಕೋ ಎಲೆಮನ ಕೇವಲ ಹರಿನಾಮವೊಂದೆ ಸಾಕೊ'(ಶ್ರೀರಾಮದಾಸರು) ಇವೆಲ್ಲವುಗಳು ಸ್ಮರಣಭಕ್ತಿಗೆ ದಾಸಸಾಹಿತ್ಯದಲ್ಲಿ ಸಿಗುವ ಉತ್ತಮ ಉದಾಹರಣೆಗಳು. ಇಲ್ಲಿ ಹರಿಸ್ಮರಣೆಯ ಹಸಿವು ದಾಸಕುಲವನ್ನು ಕಾಡುತ್ತದೆ. ಆದರೂ ಇಲ್ಲಿ ಸೂಚಿಸಿರುವ ಉದಾಹರಣೆಗಳು ಕೆಲವುಮಾತ್ರ.

೩.೪ (ಇ) ಕೀರ್ತನಾ ಭಕ್ತಿ

ಭಗವಂತನನ್ನು ಕೀರ್ತಿಸಿವುದೇ ಈ ಭಕ್ತಿಯ ಧ್ವನಿ . ಈ ಮೂಲಕವಾಗಿಯೇ ದಾಸಪಾಂಥಿಕರಿಗೆ ತೃಪ್ತಿ ಹಾಗೂ ಆನಂದ. ಇದರಿಂದಲೇ ಪುಣ್ಯಸಂಪಾದನೆ. ಇವರಿಗೆ ಕೀರ್ತನೆಯು ಅಮೃತಕ್ಕಿಂತ ಸಿಹಿ. ಪ್ರಾಯಶಃ ಈ ಕಲ್ಪನೆಯಿಂದಲೇ ತುಕಾರಾಮರು " ಅಮೃತಾಹನಿ ಗೋಡ ನಾಮ ತುಝೆ ದೇವಾ'' ಎಂದಿರಬೇಕು. ಪುರಂದರದಾಸರಿಗಂತೂ ರಾಮನಾಮದ ಪಾಯಸಕ್ಕೆ ಕೃಷ್ಣನಾಮವೇ ಸಕ್ಕರೆಯಾಗಿ, ವಿಠಲನಾಮವೇ ತುಪ್ಪವಾಗಿ ಪರಿಣಮಿಸುತ್ತದೆ. ಇಷ್ಟೇ ಅಲ್ಲದೆ, ಪುರಂದರದಾಸರಾದಿಯಾಗಿ ಇತರ ದಾಸರುಗಳು ಕೀರ್ತನಾಭಕ್ತಿಯಲ್ಲಿ ಭಗವಂತನನ್ನು ಕೀರ್ತಿಸಿದ ರೀತಿ ಮಾತ್ರ ನಿಜಕ್ಕೂ ರುಚಿದಾಯಕ.

ಕಲ್ಲು ಸಕ್ಕರೆ ಕೊಳ್ಳಿರೋ ನೀವೆಲರೂ
ಕಲ್ಲು ಸಕ್ಕರೆ ಕೊಳ್ಳಿರೋ ॥ ಪ ॥
ಕಲ್ಲು ಸಕ್ಕರೆ ಸವಿ ಬಲ್ಲವರೆ ಬಲ್ಲರು
ಪುಲ್ಲಲೋಚನ ಶ್ರೀ ಕೃಷ್ಣ ನಾಮವೆಂಬ ॥ ಅ.ಪ ॥ – ಪುರಂದರದಾಸರು

ಕೀರ್ತನೆಯ ಮಾಡಿ ಕೈವಲ್ಯ ಪಡೆವರು ಜನರು ಹರಿ
ಮೂರ್ತಿ ಶ್ರೀ ಚೆನ್ನಕೇಶವನ ಮನದೊಳಗಿಟ್ಟು ॥ – ಕನಕದಾಸರು
ಕೃಷ್ಣನ್ನ ನೋಡಿರೈ ಭಕ್ತಿ ಸಂತುಷ್ಟನ ಪಾಡಿರೈ
ಕೃಷ್ಣಗೆ ಒಲಿದತಿ ದುಷ್ಟರಾಯನ ತರಿದ ಜಗದೊಳು ಮೆರೆದ ॥– ಜಗನ್ನಾಥದಾಸರು.

ಇಲ್ಲಿ ಭಗವಂತನು ದಾಸಪ್ರಪಂಚಕ್ಕೆ ಸಂತುಷ್ಟಿಯನ್ನು ನೀಡುವವನಾಗುತ್ತಾನೆ. ಭಕ್ತನ ಭಕ್ತಿಪಾರಮ್ಯವೆಷ್ಟೆಂದರೆ ಪುಲ್ಲಲೋಚನನ ನಾಮಸ್ಮರಣೆಯಿಂದಲೇ ಕೈವಲ್ಯವನ್ನು ಸಂಪಾದಿಸಿಕೊಳ್ಳುವುದು ಕೀರ್ತನಾಭಕ್ತಿಯ ಮುಖ್ಯವಾದ ಧ್ಯೇಯವಾಗುತ್ತದೆ.

೩.೪ (ಈ) ಪಾದಸೇವನೆ

ಕೀರ್ತನಕಾರರು ಭಗವಂತನ ಪಾದಸೇವನೆಗೆ ಒಳಗಾದವರು. ಅವರಿಲ್ಲಿ ತಮ್ಮ ದೇಹಾಲಸ್ಯವನ್ನು ಕಡೆಗಣಿಸಿ, ಭಗವದ್‌ಗಿರಿಯನ್ನು ಕಾಲ್ನಡಿಗೆಯಲ್ಲೇ ಏರಿಕೊಂಡು ಪಾದಸೇವನೆಗೆ ಮುಂದಾಗುತ್ತಾರೆ. ಪವಿತ್ರವೃಕ್ಷಗಳಲ್ಲಿ ದೈವೀಪಾರಮ್ಯವನ್ನು ಕಂಡುಕೊಂಡು ಪ್ರದಕ್ಷಿಣೆ ಬರುತ್ತಾರೆ. ಅಲ್ಲದೆ ಪುಣ್ಯಕ್ಷೇತ್ರಗಳಲ್ಲಿ ತನ್ನ ಅಹಂಕಾರವನ್ನು ತ್ಯಜಿಸಿ ಕ್ಷೇತ್ರಸೇವೆಯನ್ನು ಮಾಡುವುದರಲ್ಲಿ ಪಾದಸೇವನೆಯ ಪುಣ್ಯವಿಶೇಷವನ್ನು ಕಂಡುಕೊಳ್ಳುತ್ತಾರೆ. ಅಂತಹ ಭಾವೋನ್ಮೇದವನ್ನು ಪುರಂದರದಾಸರು 'ಇದುಭಾಗ್ಯ ಇದುಭಾಗ್ಯ ಇದುಭಾಗ್ಯವಯ್ಯಾ' ಎನ್ನುವ ಜೊತೆಗೆ ಪದುಮನಾಭನ ಪಾದಸ್ಮರಣೆಯ ಭಜನೆಯಲ್ಲೇ ಸುಖವನ್ನು ಹುಡುಕುತ್ತಾರೆ. ವಾದಿರಾಜರಂತೂ 'ಎಂಥಾಪಾವನ ಪಾದವೋ...'ಎಂದು ಚೆಲುವರಂಗನ ಪಾದಸೇವನೆಯಲ್ಲಿ ತಲ್ಲೀನರಾದರೆ, 'ಚರಣವ ತೋರೈ ಚೆಲುವರ ಅರಸನೆ ಸ್ಮರಣೆಮಾತ್ರದಲಿ ಮುಕುತಿಯ ಕೊಡುವ'ನೆಂದು ವಿಜಯದಾಸರು ಭಗವಂತನ ಪಾದಶ್ರೀಮಂತಿಕೆಯನ್ನು ಹೊಗಳುತ್ತಾರೆ.

ಪಾದಸೇವನೆಯ ಕುರಿತಾದ ಕೀರ್ತನೆಗಳು ಸಮಾಜದ ಜನನಾಲಗೆಯಲ್ಲಿ ನೆಲೆಸಿದ್ದರೆ, ಅದು ಹೆಚ್ಚಾಗಿ ಕನಕದಾಸರ ಕೀರ್ತನೆಗಳು. ಅವರು ಭಗವಂತನ ಪಾವನಚರಣವನ್ನು ಇಲ್ಲಿ ಲಾಲಿಹಾಡುತ್ತಾರೆ. ಅಘಹರಣ, ವೆಂಕಟರಮಣ, ಲಲಿತಕಲ್ಯಾಣವೆಂದು ಸ್ತುತಿಸಿ ಮೈಮರೆಯುತ್ತಾರೆ.

ಈಶ ನಿನ್ನ ಚರಣ ಭಜನೆ ಆಶೆಯಿಂದ ಮಾಡುವೆನು ।
ದೋಷರಾಶಿ ನಾಶ ಮಾಡು ಶ್ರೀಶ ಕೇಶವಾ ॥
ಶರಣು ಹೊಕ್ಕೆನಯ್ಯ ಎನ್ನ ಮರಣ ಸಮಯದಲ್ಲಿ ನಿನ್ನ ।
ಚರಣ ಭಜನೆ ಕರುಣಿಸಯ್ಯ ನಾರಾಯಣ ॥ –ಕನಕದಾಸರು

ಇದು ಇಪ್ಪತ್ತೈದು ಚರಣಗಳಿರುವ ದೀರ್ಘಕೀರ್ತನೆ. ಮಠಮಂದಿರಗಳಲ್ಲಿ ನಡೆಯುವ ಸಂಕೀರ್ತನೆಯ ಕಾಲಕ್ಷೇಪಕ್ಕೆ ಈ ಕೀರ್ತನೆಯು ಹೆಚ್ಚು ಸ್ವೀಕಾರವಾಗುತ್ತದೆ. ಭೋಗಷಟ್ಪದಿಯ ಲಯದಿಂದ ಕೂಡಿದ, ಸರಳಶೈಲಿಯ ಈ ಕೀರ್ತನೆಯು ಕನಕದಾಸರ ಪ್ರತಿಭೆಗೆ ಸಾಕ್ಷಿಯಾಗುತ್ತದೆ. ಕನಕರಂತೆ ವಾದಿರಾಜರನ್ನೊಳಗೊಂಡು ಹಲವರು

ಪಾದಸೇವನೆಯ ಕುರಿತಾದ ಸಾಹಿತ್ಯವನ್ನು ರಚಿಸಿದರು. ಈ ನೆಲೆಯಲ್ಲಿ ಯತಿಪರಂಪರೆಯಲ್ಲಿ ಮಂತ್ರಾಲಯದ ಶ್ರೀರಾಘವೇಂದ್ರತೀರ್ಥರ ರಚನೆಯನ್ನು ಮಾತ್ರ ಸ್ಮರಿಸಲೇ ಬೇಕಾಗುತ್ತದೆ.

ಇಂದು ಎನಗೆ ಗೋವಿಂದ ನಿನ್ನ ಪಾದಾರ–
ವಿಂದವ ತೋರೋ ಮುಕುಂದ ।
ಸುಂದರ ವದನನೆ ನಂದ ಗೋಪನ ಕಂದ
ಮಂದರೋದ್ಧಾರ ಆನಂದ ಇಂದಿರಾರಮಣ ॥ –ಶ್ರೀ ರಾಘವೇಂದ್ರತೀರ್ಥರು

ಹೀಗೆ, ಪಾದಸೇವಾರ್ಥದ ಮೂಲಕ ಕೀರ್ತನೆಗಳನ್ನು ರಚಿಸಿ, ಆ ಮೂಲಕವಾಗಿ ತಮ್ಮ ದೇಹಾಲಸ್ಯವನ್ನು ಕಳೆದುಕೊಂಡು ಪಾರಮಾರ್ಥಿಕವನ್ನು ಪಡೆದು ಕೊಂಡವರು ದಾಸವರೇಣ್ಯರುಗಳು.

೩.೪ (ಉ) ವಂದನಾ ಭಕ್ತಿ

ವಂದನೆ ಎಂದರೆ ನಮಸ್ಕರಿಸುವುದೆಂದರ್ಥ. ಭಕ್ತನು ಭಾವುಕತೆಯಿಂದ ಭಗವಂತನ ಅಡಿಗಳಿಗೆ ವಂದಿಸುವುದೇ ವಂದನಾಭಕ್ತಿ. ಈ ಮೂಲಕವಾಗಿಯೇ ದುಃಖದುರಿತಗಳೆಲ್ಲ ನಾಶವಾಗುವುದೆಂಬ ಕಲ್ಪನೆಯು ದಾಸಕುಲಕಾಲದ ಕಲ್ಪನೆ. ಪ್ರಾಯಶಃ ಈ ಕಲ್ಪನೆಯಿಂದಲೇ ಸೂರದಾಸರು ತಮ್ಮ ರಚನೆಗಳಲ್ಲಿ ಬಹಳಷ್ಟು ಕಡೆಗಳಲ್ಲಿ ವಂದನಾಭಕ್ತಿಪಾರಮ್ಯವನ್ನೇ ತೋರಿಸಿದ್ದಾರೆ. ಹರಿಯ ಚರಣಕಮಲಗಳನ್ನು ವಂದಿಸಿದರೆ ಆತನ ಕೃಪೆಯಿಂದ ಕುಂಟನು ಬೆಟ್ಟವನ್ನು ದಾಟಬಲ್ಲನು ಎಂಬುದು ವಂದನಾಭಕ್ತಿಯಲ್ಲಿ ಅವರಿಸಿದ ನಿಖರತೆಯನ್ನು ಸೂಚಿಸುತ್ತದೆ. ಪ್ರಾಯಶಃ ಈ ಕಲ್ಪನೆಯಿಂದಲೇ ಪ್ರಸನ್ನವೆಂಕಟದಾಸರು 'ಬಿಡಲಾರೆ ಬಿಡಲಾರೆ ನಿನ್ನ ಅಡಿದಾವರೆಯಾ, ಕೊಡುಕಂಡ್ಯ ಅಭಯವಿಡಿದಮ್ಮಯ್ಯ ತಂದೆ' ಎಂದು ಹಾಡಿರಬೇಕು. ಕನಕದಾಸರು 'ಬಾಗಿಲನು ತೆರೆದು ಸೇವೆಯನು ಕೊಡು ಹರಿಯೆ', 'ಶರಣು ಶರಣು ಶರಣು ದಶರಥ ರಾಮದೂತಗೆ' ಎಂದು ಪ್ರಾರ್ಥಿಸಿರಬೇಕು.

ನಾರಾಯಣ ತೇ ನಮೋ ನಮೋ । ಭವ
ನಾರದ ಸಮ್ಮತ ನಮೋ ನಮೋ ॥
ವೇದೋದ್ಧಾರಶ ಶ್ರೀ ವೆಂಕಟನಾಯ
ಪುರಂದರ ವಿಠಲ ನಮೊ ನಮೋ ॥ –ಪುರಂದರದಾಸರು

ಇಲ್ಲಿ ನಾರಾಯಣನಿಗೆ ನಮಸ್ಕರಿಸುವುದರಲ್ಲೇ ಪುರಂದರದಾಸರು ಸಾರ್ಥಕತೆಯನ್ನು ಕಾಣುತ್ತಾರೆ. ಉಳಿದವರೂ ಅದೇ ದಾರಿಯುನ್ನು ಹಿಡಿಯುತ್ತಾರೆ.

೩.೪ (ಊ) ಅರ್ಚನಾ ಭಕ್ತಿ

ದಾಸರುಗಳು ತಮ್ಮ ಕೀರ್ತನೆಗಳಲ್ಲಿ ಅರ್ಚನಾಭಕ್ತಿಯ ಮೂಲಕವಾಗಿ ಭಗವಂತನ ಷೋಡಶೋಪಚಾರವನ್ನೇ ನೆರವೇರಿಸಲು ಹೊರಟಿದ್ದಾರೆ. ಅಲ್ಲಿ ಆವಾಹನೆ, ಆಸನ, ಪಾದ್ಯ, ಅರ್ಘ್ಯ, ಆಚಮನ,

ಸ್ನಾನ, ವಸ್ತ್ರ, ಯಜ್ಞೋಪವೀತ, ಗಂಧ, ಅಕ್ಷತೆ, ಪುಷ್ಪ, ಧೂಪ, ದೀಪ, ನೈವೇದ್ಯ, ತಾಂಬೂಲ ಮತ್ತು ಮಂಗಳಾರತಿಗಳೆಲ್ಲವೂ ಆರಾಧನೆಯಲ್ಲಿ ಅಡಕ. ಒಂದುವೇಳೆ ಇಂತಹ ಆರಾಧನೆಗೆ ತೊಡಕಿದ್ದರೂ ದಾಸರಿಗೆ ಒಂದುದಳ ಶ್ರೀತುಳಸಿ ಬಿಂದುಗಂಗೋದಕವು ಇಂದಿರಾರಮಣನಿಗೆ ಅರ್ಪಿಸಲು ಸಾಕಾಗುತ್ತದೆ. ದಾಸಕೀರ್ತನೆಗಳಲ್ಲಿ ಭಗವದ್ಗೀತೆ, ಪುರಾಣ, ಸ್ಮೃತಿಗಳೆಲ್ಲವೂ ಅಡಕವಾಗಿದೆ. ಆದುದರಿಂದಲೇ ಭಗವದಾರಾಧನೆಯ ಅರ್ಚನೆಯ ವಿಧಾನವು ಸಾಮಾಜಿಕವಾಗಿ ರುಚಿಸುವಂತೆ ಮಾಡಿದೆ

ಹೇಗೆ ಮೆಚ್ಚಿಸಲಿ ಅರ್ಚಿಸಲಿ ನಿನ್ನ । ನಾಗಶಯನನೆ ನಾರದ ವಂದಿತನೆ ದೇವಾ ॥ ಪ ॥
ಮಂಗಳಾಭಿಷೇಕಕೆ ಉದಕ ತರುವೆನೆನೆ । ಗಂಗೆಯುಂಗುಷ್ಠದಿ ಪಡೆದಿರುವೆ ।
ಸಂಗೀತ ಕೀರ್ತನೆ ಪಾಡುವೆನೆಂದರೆ ದೇವಾ । ತುಂಬುರು ನಾರದರು ಪಾಡುತಿಹರೋ ದೇವಾ ॥

ಹೀಗೆ ಅರ್ಚನಾಭಕ್ತಿಯಲ್ಲಿ ಭಗವಂತನ ಶ್ರೀಮಂತಿಕೆಯನ್ನೇ ಬಯಲಿಗೆಳೆದು ವರ್ಣಿಸಲು ಹೊರಟಿರುವುದು ಇಲ್ಲಿಯ ವಿಶೇಷವೆನಿಸುತ್ತದೆ. ಅಲ್ಲದೆ,

ಬಂಗಾರವಿಡ ಬಾರೆ ನಿನಗೊಪ್ಪುವ । ಬಂಗಾರವಿಡ ಬಾರೆ ॥ ಪ ॥
ರಂಗನಾಥನ ದಿವ್ಯ ಮಂಗಳ ನಾಮ । ವೆಂಬ ಬಂಗಾರವಿಡ ಬಾರೆ ॥ ಅ ಪ ॥
ಮುತ್ತೈದೆತನವೆಂಬ ಮುಖದಲಿ ಕುಂಕುಮದ । ಕಸ್ತೂರಿಯ ಬೊಟ್ಟನಿಡೆ ನಿನ್ನ ಫಣೆಗೆ ।
ಹೆತ್ತವರ ಕುಲಕೆ ಕುಂದು ಬಾರದ ಹಾಗೆ । ಮುತ್ತಿನ ಮೂಗುತಿಯನಿಡೆ ॥ –ಪುರಂದರದಾಸರು.

ಎಂಬಲ್ಲಿ ಲೋಕಾರ್ಥವೆಲ್ಲವನ್ನು ಪರಮಾರ್ಥಕ್ಕೆ ಸಲ್ಲಿಸುವ ಯೋಚನೆ ಕೀರ್ತನಾಕಾರರದ್ದು. ಲೋಕಾರ್ಥಕ್ಕೆ ಪರಿಮಿತಿಯೊಂದಿದೆ ಎಂದು ತಿಳಿದಮೇಲೆ 'ಹೇಗೆ ಮೆಚ್ಚಿಸಲಿ ಅರ್ಚಿಸಲಿ' ಎಂದು ಭಗವಂತನಲ್ಲೇ ಪ್ರಶ್ನಿಸುತ್ತಾರೆ. ಇಲ್ಲಿ ಮೆಚ್ಚಿಸಿ ಅರ್ಚಿಸಲು ಇನ್ನೇನಿಲ್ಲವೆಂಬುದೇ ಅಂತರಾರ್ಥವಾಗಿ ತೋರುತ್ತದೆ.

೩.೪ (ಋ) ದಾಸ್ಯ ಭಕ್ತಿ

ದಾಸಕೀರ್ತನೆಗಳಲ್ಲಿ ಹಲವಷ್ಟು ಕೀರ್ತನೆಗಳು ದಾಸ್ಯದ ಪರಾಕಾಷ್ಠೆಯನ್ನು ತಲುಪಿದವು. ಭಗವಂತನನ್ನು ಪ್ರಭುವೆಂದು ಭಾವಿಸಿದ ಭಕ್ತನು ತನ್ನನ್ನೇ ಆತನ ಸೇವಾತತ್ಪರತೆಗೆ ಒಡ್ಡಿದನು. ಆದರೆ ಇಲ್ಲಿಯ ದಾಸಪರಂಪರೆಯು ಭಗವಂತನ ದಾಸನಾಗಬೇಕಾದರೆ ಹಲವು ಜನ್ಮಗಳ ಸುಕೃತವಿರಬೇಕೆಂದು ಭಾವಿಸುತ್ತದೆ. ತುಲಸೀದಾಸರಂತೂ ತನ್ನ ಜನ್ಮಜನ್ಮಗಳೆಲ್ಲ ಸೀತಾರಾಮರ ಸೇವಕನಾಗಿಯೇ ಇರಬೇಕೆಂದು ಭಾವಿಸುತ್ತಾರೆ. ಭಕ್ತಿಯ ಭರದಲ್ಲಿ ದಾಸತ್ವದ ತಲ್ಲೀನತೆ ಎಷ್ಟೆಂದರೆ ಭಕ್ತನು ಭಗವಂತನ ದಾಸನಾದಲ್ಲಿ, ಭಗವಂತನು ಭಕ್ತನ ದಾಸನಾಗುತ್ತಾನೆ. ವಿಶೇಷವೆಂದರೆ, ಭಕ್ತನು ತನ್ನ ಭಾವುಕತೆಯಲ್ಲಿ ಭಗವಂತನನ್ನು ದಾಸಯ್ಯನೆನ್ನುವಲ್ಲಿಯ ತನಕ ಮುಂದುವರೆಯುತ್ತಾನೆ. ಹಾಗಾಗಿ, ಊರಿಗೆ ಬರುವ ದಾಸಯ್ಯನನ್ನು ಕೇರಿಗೂ ಬರುವಂತೆ ವಿನಂತಿಸಿಕೊಳ್ಳುತ್ತಾರೆ. ಬಂದಾಗ, ಕೈಯಲಿ ಕೋಲು ಕೊಳಲು, ಮಲ್ಲರ ಮರ್ದಿಸಿ, ಮಾವನ ಮಡುಹಿದೆಯೆಂದು ಆತನ ಗುಣಾವಗುಣಗಳನ್ನು ಹೊಗಳುತ್ತಾರೆ. ಪುರಂದರದಾಸರಂತೂ ತನ್ನ ದುರುಬುದ್ಧಿಗಳನ್ನು ಬಿಡಿಸಿಕೊಳ್ಳಲು,

ಚರಣಸೇವೆಯನ್ನು ಪಡೆದುಕೊಳ್ಳಲು ಸಾಸಿರನಾಮದ ವೆಂಕಟರಮಣನಲ್ಲಿ 'ದಾಸನ ಮಾಡಿಕೊ ಎನ್ನ' ಎಂದು ವಿನಂತಿಸಿಕೊಳ್ಳುತ್ತಾರೆ.

ಯತಿವರ್ಯರಾದ ವಾದಿರಾಜರಂತೂ ಭಗವಂತನ ದಾಸನಾಗಲು ತಾನೂ ಅನರ್ಹನೆಂದೇ ಭಾವಿಸುತ್ತಾರೆ. ಅಲ್ಲದೆ ತನ್ನಲ್ಲಿರುವ ಅನಂತ ಅಪರಾಧಗಳೇ ದಾಸತ್ವಕ್ಕೆ ಹಾನಿಕಾರಕವೆಂಬುದು ಅವರ ಇಂಗಿತವಾಗುತ್ತದೆ. ಈ ಕುರಿತಾದ ಅವರ ಒಂದು ರಚನೆ ಇಂತಿದೆ.

ನಿನ್ನ ದಾಸನು ನಾನು ಎಂತಾಹೆನಯ್ಯಾ । ಅನಂತ ಅಪರಾಧ ಕಾಕರಾದವನು ॥ ಪ ॥
ಅರುಣೋದಯವ ಜರಿದು, ಆಹ್ನಿಕ ಕರ್ಮವ ತೊರೆದು । ಪೊರೆವ ನಿನ್ನಡಿಯ ಮರೆದು ।
ದುರುಳರಿಗೆ ಬಾಯ್ದೆರೆದು ದೈನ್ಯದಲಿ ಪಲ್ಗಿರಿದು । ಮರಿಯಾದೆಗೆಟ್ಟು ತಿರಿದು ।
ಇರುಳು ಹಗಲೆನ್ನದೆ ಈ ವಿಧದಿ ಹೊಟ್ಟೆಯ । ಹೊರೆದು ಇದು ಪುಣ್ಯ ಇದು ಪಾಪವೆಂದರಿಯದವ ॥
–ಶ್ರೀ ವಾದಿರಾಜರು.

ಕನಕದಾಸರಲ್ಲಂತೂ ದಾಸತ್ವದ ಕಲ್ಪನೆಯು ಮೈನವಿರೇಳಿಸುವಂತಹುದು. ಅವರು ದಾಸತ್ವದ ಕುರಿತು ವ್ಯಾಖ್ಯಾನವನ್ನು ನೀಡುವಲ್ಲಿ ಇನ್ನಷ್ಟು ಅಂತರ್ಮುಖಿಯಾಗುತ್ತಾರೆ. ದಾಸನಾಗಬೇಕಾದ್ದಲ್ಲಿ ಕ್ಲೇಶಪಂಚಕಗಳನ್ನು ತೊರೆಯಬೇಕೆಂಬುದು ಕನಕದಾಸರ ದೃಷ್ಟಿ. ಆಶೆಯಿಂದ ಆದಿಕೇಶವನನ್ನು ನೆನೆಯದವಗೆ 'ದಾಸಪಟ್ಟವೋ ಸಂನ್ಯಾಸ ಪಟ್ಟವೋ' ಎಂದು ಪ್ರಶ್ನಿಸಿ, ವೈಕುಂಠದ ಸೊಂಪಿಗೆ ಮರುಳಾಗಿ 'ಬಂಟನಾಗಿ ಬಾಗಿಲ ಕಾಯ್ವೆ'ನೆಂದು ಶ್ರೀಹರಿಯಲ್ಲಿ ನಿವೇದಿಸಿಕೊಳ್ಳುತ್ತಾರೆ.

ದಾಸ ದಾಸರ ಮನೆಯ ದಾಸಿಯರ ಮಗ ನಾನು ॥ ಪ ॥
ಸಾಸಿರ ನಾಮದೊಡೆಯ ರಂಗಯ್ಯನ ಮನೆಯ ॥ ಅ. ಪ ॥
ಶಂಕುದಾಸರ ಮನೆಯ ಮಂಕುದಾಸನು ನಾನು । ಮಂಕುದಾಸನು ನಾನು ಮರುಳದಾಸ ॥
ಸಂಕೀರ್ತನೆಯ ಮಾಡಿ ನೆನೆವ ಭಕ್ತರ ಮನೆಯ । ಬಿಂಕದಿ ಬಾಗಿಲ ಕಾಯ್ವ ಬಡದಾಸ ನಾನಯ್ಯ ॥
–ಕನಕದಾಸರು.

ಇದು ಕನಕದಾಸರ ಪ್ರಸಿದ್ಧವಾದ ಕೀರ್ತನೆಗಳಲ್ಲೊಂದು. ಮೇಲ್ನೋಟಕ್ಕೆ ಬಸವಣ್ಣನವರ ವಚನದಂತೆ ಕಾಣುವ ಈ ಮೇಲಿನ ಕೀರ್ತನೆಯಲ್ಲಿ ದಾಸತ್ವದ ತೀವ್ರತೆಯಿದೆ. ಕನಕದಾಸರು ತನ್ನನ್ನು ಮಂಕುದಾಸನಾಗಿ, ಮರುಳದಾಸನಾಗಿ, ಬಡದಾಸನಾಗಿ ಬಾಗಿಲನ್ನು ಕಾಯುವಕ್ರಿಯೆಯಲ್ಲಿ ಕಂಡುಕೊಂಡರೂ ಅವರಲ್ಲಿ ಬಿಂಕವಿದೆ. ಅದಕ್ಕೆ ಸಾಸಿರನಾಮದೊಡೆಯನಾದ ರಂಗಯ್ಯನ ಮನೆಯ ದಾಸನಾಗಿರುವುದೇ ಕಾರಣವಾಗಿರುತ್ತದೆ. ಇದೇ ಕ್ರಮವನ್ನು ವಿಜಯದಾಸರಲ್ಲಿಯೂ ಕಾಣುತ್ತೇವೆ. ಅವರು ದಾಸ್ಯಕ್ಕಾಗಿ ತಮ್ಮ ಚಿತ್ತವನ್ನೇ ಭಗವಂತನಿಗಾಗಿ ಅರ್ಪಿಸಿಬಿಡುತ್ತಾರೆ. 'ದಾಸದಾಸದಾಸರ ದಾಸ್ಯವ ಕೊಡೋ ದೋಷರಾಶಿಯಳಿದು'ಎನ್ನುತ್ತಾ, ಅಂತರಂಗದಲ್ಲಿ ಆನಂದವನ್ನು ಸ್ಥಾಪಿಸುವಂತೆಯೂ, ಅಹಂಕಾರವನ್ನು ಕಳೆಯುವಂತೆಯೂ ಕೇಳಿಕೊಳ್ಳುತ್ತಾರೆ. ಜೊತೆಗೆ, ಅರಿಷಡ್ವರ್ಗಗಳ ಖಂಡಿಸಿ ದುಷ್ಟಸಂಗವನ್ನು ದೂರಮಾಡಿ, ಭಕ್ತಿಸಂಗದಲ್ಲೇ ಸಂಭ್ರಮದಲ್ಲಿದ್ದು ಬಿಡುವಂತೆ ತನಗೆ

ದಾಸತ್ವದ ಅವಕಾಶವೊಂದನ್ನು ಅನುಗ್ರಹಿಸುವಂತೆ ಭಗವಂತನಲ್ಲಿ ಅರಿಕೆಮಾಡುತ್ತಾರೆ. ಗೋಪಾಲದಾಸರಂತೂ ಭಗವನ್ನಾಮಸ್ಮರಣೆಯಲ್ಲಿ ದಾಸದೀಕ್ಷೆಯನ್ನು ಪಡೆದು ಅನುಭಾವಿಗಳಾಗಿ 'ಏನಬೇಡಲಿ ನಿನ್ನ ಬಳಿಗೆಬಂದು' ಎನ್ನುವ ಮೂಲಕ ಬೇಡಿಕೆಗಳ ಪಟ್ಟಿಯನ್ನು ಹಿಂದೆ ಪಡೆಯುತ್ತಾರೆ. ಎಲ್ಲರೂ ಬೇಡಿದ್ದನ್ನು ಮತ್ತೆ ತಾವು ಬೇಡುವಲ್ಲಿ ಗೋಪಾಲದಾಸರಿಗೆ ನಿರ್ಮೋಹತ್ವವು ಹೆಚ್ಚಾಗಿ ಆವರಿಸಿ ಬಿಡುತ್ತದೆಯೆಂದು ಕಾಣುತ್ತದೆ. ಆದುದರಿಂದಲೇ,

ಬೇಡುವೆನು ನಾ ನಿನ್ನ ಬೇಡ ತಕ್ಕುದ ದೇವ । ನೀಡೆನೆಂಬುದು ನಿನ್ನ ಮನದೊಳಿತ್ತೆ ॥
ಮೂಡಲಗಿರಿ ವಾಸ ಗೋಪಾಲವಿಠಲ ಪರರ । ಬೇಡದಂತೆ ಎನ್ನ ಮಾಡಯ್ಯ ಹರಿಯೇ ॥

–ಶ್ರೀ ಗೋಪಾಲದಾಸರು.

ಎನ್ನುವ ಮೂಲಕ ಪರರ ಬೇಡದಂತೆ ಮಾಡೆಂದು ವಿನಂತಿಸಿ ಕೊಳ್ಳುತ್ತಾರೆ. ಜಗನ್ನಾಥದಾಸರಿಗೂ ಕೂಡ 'ದಾಸೋಹಂ ತವ ದಾಸೋಹಂ'ಎನ್ನುವ ದಾಸೋಹದ ತವಕ. 'ದಾಸರಿಗುಂಟೆ ಭಯಶೋಕ, ವಾಸುದೇವನ ಸದಾಸ್ಮರಿಸುವ' ಎನ್ನುವಲ್ಲಿ ಭಯ ಶೋಕವನ್ನು ತ್ಯಜಿಸಿ, ನಿರ್ಭಯರಾಗಿ ಉಳಿದುಬಿಡುತ್ತಾರೆ.

ದಾಸನಾಗು ಮನವೇ । ಶ್ರೀಹರಿಯ । ದಾಸನಾಗು ಮನವೇ ॥
ದಾಸನಾಗಿ ವಿಷಯದಾಶೆಗೆ ಸಿಲುಕಿ ನೀ । ಮೋಸ ಹೋಗಿ ನರದಾಸನಾಗದೆ ॥

–ಕುಂಟೋಜಿ ನರಸಿಂಹದಾಸರು.

ಕುಂಟೋಜಿಯವರ ಕೀರ್ತನೆಯಲ್ಲಿ ಎದ್ದುತೋರುವ ವಿಚಾರವೆಂದರೆ ಲೌಕಿಕದ ನಿರ್ಮೋಹತೆ. ಭಗವಂತನ ದಾಸನಾಗುವ ಬದಲು ವಿಷಯಾಸಕ್ತಿಗೆ ಮಾರುಹೋಗಿ ಮಾನವನೆಲ್ಲಿ ನರದಾಸನಾಗುತ್ತಾನೋ ಎಂಬ ಭಯವು ಅವರಲ್ಲಿ ಎದ್ದುತೋರುತ್ತದೆ. ಹಾಗಾಗಿ ಅವರು ಶ್ರೀಹರಿಯ ದಾಸನಾಗುವಂತೆ ಸಾಮಾನ್ಯ ವ್ಯಕ್ತಿಗೂ ವಿನಂತಿಸಿಕೊಳ್ಳುತ್ತಾರೆ. ಸಾಧಾರಣವಾಗಿ ಮೋಸಹೋಗುವ ದಾರಿಯನ್ನು ಮಾನವನಿಗೆ ತಿಳಿಸಿಕೊಟ್ಟು ಅದರಿಂದ ವಿಮುಖರನ್ನಾಗಿಸುವ ಪ್ರಯತ್ನ ಹಾಗೂ ಕಳಕಳಿ ಕುಂಟೋಜಿಯವರದ್ದಾಗುತ್ತದೆ.

೩.೪ (ಎ) ಸಖ್ಯ ಭಕ್ತಿ

ಭಗವಂತನ ಆರಾಧನೆಯಲ್ಲಿ ಸಖ್ಯಭಕ್ತಿಗೂ ಪ್ರಮುಖಸ್ಥಾನ. ಒಂದು ದೃಷ್ಟಿಯಲ್ಲಿ ಇದೊಂದು ಅಪೂರ್ವ ಕಲ್ಪನೆಯೆಂದುಕೊಳ್ಳಬಹುದು. ಇಲ್ಲಿ ಭಕ್ತನಿಗೆ ಭಗವಂತನಲ್ಲಿ ಸ್ನೇಹಭಾವವಿದೆ. ಆದುದರಿಂದಲೇ ಭಗವಂತನನ್ನು ಸಲುಗೆಯಿಂದ ಕರೆಯುತ್ತಾನೆ. ಮುನಿಸಿನಿಂದ ಬೈಯ್ಯುತ್ತಾನೆ, ನಿಂದಿಸುತ್ತಾನೆ. ಆದರೂ ಭಗವಂತನಿಗೆ ಭಕ್ತನ ಮೇಲೆ ಕಾರುಣ್ಯದ ಹೊಳೆಯೇ ಹರಿಯುತ್ತದೆ. ಭಕ್ತನಾದವನು ಭಗವಂತನಲ್ಲಿ ಚರಣಸೇವಕನಾಗಿದ್ದರೂ ಅಂತರ್ಯದಲ್ಲಿ ಸಖ್ಯಭಾವವು ಮಿಳಿತವಾಗಿರುತ್ತದೆ. ಆದುದರಿಂದಲೇ ನರಹರಿತೀರ್ಥರು 'ಹರಿಯೇ ಇದು ಸರಿಯೇ' ಎಂದು ಗೆಳೆತನದಲ್ಲಿಯೇ ಪ್ರಶ್ನಿಸುತ್ತಾರೆ.

ಸಖ್ಯತನದ ಸಾರ್ಥಕತೆ ಅಡಗಿರುವುದು ಭಕ್ತನು ಭಗವಂತನಲ್ಲಿ ತೋರುವ ಸಲುಗೆಯಲ್ಲಿ. ಆ ಸಲುಗೆಯ ಸಂಪಾದನೆ ದಾಸರಿಗಾದದ್ದು ಭಗವಂತನಿಂದಲೇ. ಸಾಹಿತ್ಯಕವಾಗಿ ನೋಡಿದರೆ, ಈ ಸಖ್ಯಕಲ್ಪನೆಯು ಪುರಂದರದಾಸ ಹಾಗೂ ಕನಕದಾಸರಲ್ಲಿ ಯಥೇಚ್ಛವಾಗಿಯೇ ತೋರಿಬರುತ್ತದೆ. 'ಯಾಕೆನ್ನೊಳಿನಿತು ಕೃಪೆಯಿಲ್ಲ ಹರಿಯೇ', 'ಎನಗೂ ಆಣೆ ರಂಗ ನಿನಗೂ ಆಣೆ', 'ಇವೇಗೇಕೆ ಪರಿಮಳ ಇವಗೇಕೆ ಶೃಂಗಾರ', 'ಹೊಲಸು ಮೈಯವಗೇಕೆ ಹೊಸ ಕಸ್ತೂರಿವಾಟ' ಈ ಮೊದಲಾದೆಡೆಗಳಲ್ಲಿ ಪುರಂದರದಾಸರು ಹರಿಸಿದ ಸಲುಗೆಯ ಲಾಲಿತ್ಯವು ಈ ಮೇಲಿನ ಹೇಳಿಕೆಗೆ ಪುಷ್ಠಿಯನ್ನೀಡುತ್ತದೆ. ಅವರು ರಚಿಸಿದ, 'ಆರು ಬದುಕಿದರಯ್ಯ ಹರಿನಿನ್ನನಂಬಿ', 'ನೀನ್ಯಾಕೋ ನಿನ್ನ ಹಂಗ್ಯಾಕೋ' ಕೀರ್ತನೆಗಳಲ್ಲಿ ಭಗವಂತನ ಹಂಗಿನ ನಿರಾಕರಣೆಯಿದ್ದರೂ ಅಂತರಂಗಿಕವಾಗಿ ಆತನನ್ನೇ ಹೊಗಳುವಂತಹುದು. ಈ ರೀತಿಯ ರಚನೆಗಳ ಮೂಲಕ ಕನಕದಾಸರು, ಪ್ರಸನ್ನವೆಂಕಟದಾಸರು, ಗೋಪಾಲದಾಸರು, ಜಗನ್ನಾಥದಾಸರುಗಳು ಭಗವಂತನ ಗೆಳೆತನವನ್ನು ಸಂಪಾದಿಸುವುದರಲ್ಲಿ ಹಿಂದೆಬಿದ್ದವರಲ್ಲ. 'ಆವಸಿರಿಯಲಿ ನೀನು ಎನ್ನಮರೆತೆ'(ಕನಕದಾಸ), 'ದಡಸೇರಿಸು ಭವದಾಕಡಲಿನ ದಡಸೇರಿಸು ಹರಿಯೇ, ಕಡೆಮೊದಲಿಲ್ಲದ ಕ್ಲೇಶದ ವಾರಿಯ' (ಪ್ರಸನ್ನವೆಂಕಟದಾಸ), 'ಏನಬೇಡಲಿ ನಿನ್ನ ಬಳಿಗೆಬಂದು'(ಗೋಪಾಲದಾಸ), 'ಬೇಡಲೇತಕೆ ಪರರ ದೇಹಿಯೆಂದು, ನೀಡುವಾದೊರೆ ಎನಗೆ ನೀನಿರಲು ಸರ್ವದಾ'(ಜಗನ್ನಾಥದಾಸ) ಇವೆಲ್ಲವುಗಳು ಸಖ್ಯಭಕ್ತಿಗಾಗಿ ದಾಸಸಾಹಿತ್ಯದಲ್ಲಿ ಸಿಗುವ ಉತ್ತಮ ಉದಾಹರಣೆಗಳು. ಭಕ್ತನು ಭಕ್ತಿಯ ಪರಾಕಾಷ್ಠೆಯಲ್ಲಿ ಉತ್ತುಂಗಕ್ಕೆರಿದಾಗ ಭಗವಂತನು ಅಂತರಂಗದ ಗೆಳೆಯನಾಗಿ ಬಿಡುತ್ತಾನೆ ಎನ್ನುವುದಕ್ಕೆ ಈ ಮೇಲಿನ ಉದಾಹರಣೆಗಳೇ ಕಾರಣ. ಆದರೂ ಕನಕದಾಸರು ಕಂಡ ಭಗವಂತನ ಗೆಳೆತನದಲಿ ಇನ್ನಷ್ಟು ವಿಶೇಷತೆಯನ್ನು ಕಾಣಬಹುದು.

> ಬಂದೆವಯ್ಯ ಗೋವಿಂದ ಶೆಟ್ಟಿ । ನಿಮ್ಮ ।
> ಹರಿವಾಣ ತೀರ್ಥ ಪ್ರಸಾದ ಉಂಟೆನಲಾಗಿ ॥ ಪ ॥
> ಅಪ್ಪವು ಅತಿರಸ ತುಪ್ಪವು ಬಿಸಿಹಾಲು ।
> ಒಪ್ಪುವ ಸಕ್ಕರೆ ಯಾಲಕ್ಕಿಯು ॥
> ಅಪರೂಪವಾದ ಕಜ್ಜಾಯಗಳನೆಲ್ಲ
> ಛಪ್ಪನ್ನ ದೇಶಕ್ಕೆ ಮಾರುವ ಸೆಟ್ಟಿ ॥ –ಕನಕದಾಸರು

ಇಲ್ಲಿ ಕನಕದಾಸರ ಭಕ್ತಿಯ ಕೀಟಲೆ ತೀರಾಸಹಜವಾಗಿಯೇ ನಡೆದಿದೆ. ತಿರುಪತಿ ದೇವಾಲಯದಲ್ಲಿ ನೆಡೆಯುವ ಅವ್ಯವಹಾರಗಳನ್ನೆಲ್ಲ ಶ್ರೀನಿವಾಸನ ಮೇಲೆ ಹೊರಿಸುವ ಸಖ್ಯಪ್ರಯತ್ನ ಕನಕದಾಸರದ್ದು. ಹಾಗಾಗಿ ಇಲ್ಲಿಯ ಶ್ರೀನಿವಾಸ 'ಒಡಲುತುಂಬಿ ಮಿಕ್ಕ ಓಗರವ ಮಾರಿಸಿ ಒಡವೆಯಗಳಿಸುವ ಕಡುಲೋಬಿಸೆಟ್ಟಿ'ಯಾಗುತ್ತಾನೆ, ಕಾಸುಕಾಸಿಗೆ ಬಡ್ಡಿಗಳಿಸಿ ಕೊಳ್ಳುತ್ತಾನೆ, ದುಡ್ಡುದೋಚುವ ದಂಧೆಕಾರನಾಗುತ್ತಾನೆ. ಕನಕದಾಸರ ಪ್ರಕಾರ, ದೇವಾಲಯದ ಒಳಜನಗಳ ವ್ಯಾಪಾರೀಬುದ್ದಿಗೆ ಭಗವಂತನಿಲ್ಲಿ ಪ್ರೋತ್ಸಾಹಕನಾಗುತ್ತಾನೆ. ಒಟ್ಟನಲ್ಲಿ ಇಲ್ಲಿ

ವಿನೋದವು ಇದೆ. ವ್ಯಂಗ್ಯವೂ ಇದೆ. ಈ ಸಮ್ಮಿಶ್ರಭಾವವು ಸಖ್ಯಭಾವದ ಮೂಲಕ ಭಗವಂತನಲ್ಲಿ ಕಾಣುವುದು ನಿಜಕ್ಕೂ ವಿಶೇಷ.

ಕನಕದಾಸರು ಮುಖ್ಯಪ್ರಾಣದೇವರನ್ನು ತನ್ನ ಆತ್ಮೀಯತೆಯಲ್ಲಿ ತೇಲಿಸುವುದುಂಟು. 'ಸೇವಕತನದ ರುಚಿಯನೇವರಿದೆಯೇ ದೇವ ಹನುಮರಾಯ......'ಎಂಬಲ್ಲಿ ಸಖ್ಯತನದ ರುಚಿ ಸಾಬೀತುಗೊಳಿಸುತ್ತಾರೆ. 'ಎನ್ನ ಕಂದ ಹಳ್ಳಿಯ ಹನುಮ.......' ಲಂಕೆಗೆ ಬಂದ ಹನುಮಂತನಲ್ಲಿ ಸೀತೆ ಕೇಳುವ ಮಾತು ಇದಾದರೂ ಕನಕನಿಗೆ ಮಾತ್ರ ಆ ಹನುಮ ಹಳ್ಳಿಯವನು. ನಿಜವಾದ ಆತ್ಮೀಯತೆಯ ಗೆಳೆತನ ಉಕ್ಕೇರುವುದೇ ಇಲ್ಲಿ. ಒಟ್ಟಿನಲ್ಲಿ ಇಲ್ಲಿರುವುದು ಸವಿಯ ಸಲುಗೆಯ ಸೊಬಗು. 'ಏನೆಂದಳೇನೆಂದಳೋ ನಿನ್ನೊಳುಸೀತೆ ಹನುಮಯ್ಯ.....'ಎನ್ನುವಲ್ಲಿ ಒಂದು ರೀತಿಯ ದೃಶ್ಯಕಾವ್ಯವು ಕಣ್ಣೆದುರು ಮೂಡಿದಂತಾಗುತ್ತದೆ.

೩.೪ (ಏ) ವಾತ್ಸಲ್ಯ ಭಕ್ತಿ

ಭಾಗವತದ ಚರಿತೆಗಳೆಲ್ಲ ದಾಸಕೀರ್ತನೆಗಳಲ್ಲಿ ನಾವು ಹೆಚ್ಚಾಗಿ ಕಾಣುವುದಿದ್ದರೆ ಅದು ವಾತ್ಸಲ್ಯಭಕ್ತಿಯಿಂದ. ಇಲ್ಲಿಯ ನಿರೂಪಣೆಗಳಿಗೆ ಶ್ರೀಕೃಷ್ಣನ ಬಾಲಲೀಲೆಯೇ ಮುಖ್ಯ ಆಕರವಾಗುತ್ತದೆ. ಇಲ್ಲಿ ಭಗವಂತನೇ ಮಗುವಾಗಿ, ಭಕ್ತೆಯು ತಾಯಿಯಾಗಿ ವಾತ್ಸಲ್ಯವನ್ನು ಮೆರೆಸುತ್ತಾಳೆ. ಹಾಗಾಗಿ ಕೃಷ್ಣನನ್ನು ಕಾಣುವ ತಾಯಿಗೆ ಎಲ್ಲಿಲ್ಲದ ಆವೇಶ. ಆತನನ್ನು ಕಾಣದೆ ಹೋದಲ್ಲಿ ಆಕೆಗೆ ತನ್ನ ಹೃದಯವೇ ಕರಗಿಹೋಗುವಷ್ಟು ಪಾಶ. ಒಟ್ಟಿನಲ್ಲಿ ಕೃಷ್ಣನ ಆಟಪಾಟಗಳು, ಗೋಪಬಾಲೆಯರ ದೂಷಣೆ, ಯಶೋದೆಯ ಆತಂಕ ಹಾಗೂ ಆನಂದ. ಹೀಗೆ ಸಮಸ್ತಭಾವಗಳ ದಿವ್ಯಾನುಭವವೇ ದಾಸಕೀರ್ತನೆಗಳ ವಾತ್ಸಲ್ಯಭಕ್ತಿಯ ಮುಖ್ಯ ಆಕರ್ಷಣೆ.

ಏಕೆ ದೂರುವಿರೆ ರಂಗಯ್ಯನ । ಏಕೆ ದೂರುವಿರೆ ॥
ಸಾಕು ನಿಮ್ಮ ದೂರು ಬಲ್ಲೆನು । ಈ ಕುವರನಾ ಕೃತ್ಯ ಮಾಳ್ಪನೇ ॥ ಅ.ಪ ॥
–ಶ್ರೀಪಾದರಾಜರು.

ಇದು ಶ್ರೀಪಾದರಾಜರು ಭಗವಂತನ ಕುರಿತು ಮಾಡುವ ತುಂಟತನದ ದೂರು. ಈ ದೂರಿನಲ್ಲೂ ಭಯವಿದೆ, ಭಕ್ತಿಯಿದೆ. ಪುರಂದರದಾಸರಾದರೋ ಕೃಷ್ಣನ ತುಂಟತನಕ್ಕೆ ಕೃಷ್ಣನಿಗೆ ವಂದಿಸುವುದು ಮಾತ್ರವಲ್ಲದೆ, ಆತನ ತಾಯಿಯ ಸುಕೃತವೆಂದು ಭಾವಿಸಿ, 'ಎಷ್ಟು ದುಷ್ಟನೆ ಯಶೋದೆ ನಿನ್ನಮಗ ಅಷ್ಟು ಹೇಳುವೆನು ಕೇಳೆ'ಎನ್ನುತ್ತಾ, ಆತನನ್ನು ಸೃಷ್ಟಿಯೊಳಗಿನ ಚೇಷ್ಟೆಗಾರನನ್ನಾಗಿ ಬಿಂಬಿಸುತ್ತಾರೆ. ವ್ಯಾಸರಾಯರು 'ಕೃಷ್ಣ ನೀ ಬೇಗನೆ ಬಾರೋ, ಮುಖವನ್ನೆ ತೋರೋ' ಎಂದು ಹೇಳುವ ಮೂಲಕ ಭಗವಂತನಿಗೆ ಉಡಿಗೆಜ್ಜೆ, ಬೆರಳಲ್ಲಿ ಉಂಗುರ, ಕೊರಳಲ್ಲಿ ವೈಜಯಂತಿಮಾಲೆ ಇತ್ಯಾದಿ ಇತ್ಯಾದಿಯಾಗಿ ಅಲಂಕರಿಸಲು ಮುಂದಾಗುತ್ತಾರೆ.

ಇಲ್ಲಿ ತಾಯಿಯು ತನ್ನ ಮಗನನ್ನು ಬಿಟ್ಟುಕೊಡಲಾರಳು. ಕನಕದಾಸರ ರಚನೆಯಲ್ಲಿ, ಕೃಷ್ಣನ ಕುರಿತು ದೂರನ್ನೀಡುವ ಗೋಪಿಕೆಯರಿಗೆ ಯಶೋದೆಯಿಂದ ವಾತ್ಸಲ್ಯಭರಿತವಾದ ಉತ್ತರವೇ ಹೊರಹೊಮ್ಮುತ್ತದೆ. ಅವರ ರುಚಿಶುದ್ಧವಾದ ರಚನೆಯೊಂದು ಕೃಷ್ಣನ ಬಾಲಾಪರಾಧದ ಬಗ್ಗೆ ಹೀಗೆ ಹೇಳುತ್ತದೆ.

ಇಂದು ಸೈರಿಸಿರಿ ಶ್ರೀಕೃಷ್ಣನ ತಪ್ಪ । ಮುಂದಕ್ಕೆ ನಿಮ್ಮ ಮನೆಗೆ ಬಾರನಮ್ಮ ॥ ಪ ॥
ಮಗುವು ಬಲ್ಲುದೆ ಇಷ್ಟು ಬೆಣ್ಣೆಯ ಕದ್ದರೆ । ಬಿಗಿಯ ಬಹುದೇ ಶ್ರೀ ಚರಣವನ್ನು ॥
ಅಗಣಿತ ಮಹಿಮನ ಅಂಜಿಸಲೇಕಮ್ಮ । ಬಗೆಯ ಬಾರದೆ ನಿಮ್ಮ ಮಕ್ಕಳಂತೆ ॥–ಕನಕದಾಸರು

ಯಶೋದೆಯ ಹೇಳಿಕೆಯಲ್ಲಿ ವಾಸ್ತವಾಂಶವೇ ಎದ್ದು ತೋರುತ್ತದೆ. ಸಮಾಜದ ಎಲ್ಲ ತಾಯಂದಿರ ಧೋರಣೆಯೇ ಇಲ್ಲಿಯೂ ವ್ಯಕ್ತವಾದಂತಿದೆ. ಯಶೋದೆಯು ಇನ್ನೂ ಮುಂದುವರಿದು ತನ್ನ ಮಗನನ್ನು ಕುರಿತು 'ವಸುಧೆಯೊಳಗೆ ನಾನೊಬ್ಬಳೇ ಪಡೆದೆನೆ, ನಿಮ್ಮ ಹಸುಮಗುವೆಂದು ಭಾವಿಸಬಾರದೆ' ಎನ್ನುವಲ್ಲಿ ವಾತ್ಸಲ್ಯಭಾವದ ಪುನರುಕ್ತಿಯಿದೆ. ಪ್ರಾಯಶಃ ದೂರುಗಳಿಗೆ ಉತ್ತರವಾಗಿಯೋ ಏನೋ, ಪುರಂದರದಾಸರು ತಮ್ಮ ಮುಂದಿನ ಕೀರ್ತನೆಗಳಲ್ಲಿ 'ಮನೆಯೊಳಗಾಡೊ ಗೋವಿಂದ', 'ಪೋಗದಿರೆಲೋ ರಂಗ ಬಾಗಿಲಿಂದಾಚೆಗೆ' ಎನ್ನುವ ಮೂಲಕ ಯಶೋದೆಯಿಂದ ಮಗನಿಗೆ ಬುದ್ಧಿವಾದವನ್ನು ಹೇಳಿಸುತ್ತಾರೆ. ಬುದ್ಧಿವಾದವನ್ನು ಕೇಳದೇ ಇದ್ದಾಗ 'ಇವನ ಹಿಡಿದುಕೊಂಡು ಹೋಗೆಲೋ ಜೋಗಿ, ಇವ ನಮ್ಮ ಕೇಳದೆ ಪುಂಡನಾದ'ಎನ್ನುವಲ್ಲಿ ಗದರಿಸುವ ಪ್ರಯತ್ನವೂ ನೆರವೇರಿರುವುದನ್ನು ಕಾಣುತ್ತೇವೆ.

೩.೪ (ಐ) ಆತ್ಮನಿವೇದನೆ

ಇದು ದಾಸಪಂಥದ ಹೊಸ ಚಿಂತನೆ. ಸಮಸ್ತಕಾರ್ಯಗಳು ಭಗವಂತನ ಕೃಪೆಯಿಂದ ಸುಗಮವಾಗಿ ಸಾಗುತ್ತವೆ ಎಂಬ ದೃಢವಿಶ್ವಾಸದಿಂದ ತನ್ನನ್ನು ತಾನು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವುದೇ ಆತ್ಮನಿವೇದನೆಯಾಗುತ್ತದೆ. ಈ ಕುರಿತಾದ ದಾಸರರಚನೆಗಳು ಸಾಹಿತ್ಯಲೋಕದಲ್ಲಿ ಸರಾಗವಾಗಿಯೇ ಬೆಸೆದಿವೆ. ಇದನ್ನೇ ಅನೇಕರು ಮಾಧುರ್ಯಭಕ್ತಿಯೆಂದು ಹೇಳಿದ್ದೂಇದೆ. ಒಟ್ಟಿನಲ್ಲಿ ಇಲ್ಲಿ ಕಾಣುವುದು ಪ್ರೇಮಗೀತೆಗಳೇ ಹೊರತು ಇನ್ನೇನಲ್ಲ. ಹರಿಭಕ್ತಿಯ ಪ್ರೇಮೋನ್ಮಾದವೇ ಇಲ್ಲಿ ಅನುರಣನಕ್ರಿಯೆ. ಚೈತನ್ಯಪಂಥದಲ್ಲಿ ಶ್ರೀಚೈತನ್ಯರು ರಾಧಾರಾಣಿಯಂತೆ ಶ್ರೀಕೃಷ್ಣನನ್ನು ಪ್ರೇಮಿಸಿ ಬದುಕಿದಂತೆ, ಇಲ್ಲಿಯ ದಾಸಶ್ರೇಷ್ಠರುಗಳೆಲ್ಲ ಗೋಪಬಾಲಿಕೆಯರ ರೂಪದಲ್ಲಿ ಕೃಷ್ಣನನ್ನು ಪ್ರೇಮಿಸಲು ಮುಂದಾದರು. ವ್ಯಾಸರಾಯರೇ ಹೇಳುವಂತೆ, 'ಅಗಲಿ ಸೈರಿಸಲಾರೆವೋ, ವೇಣು ಗೋಪಾಲ ನಿನ್ನನ್ನಗಲಿ ಸೈರಿಸಲಾರೆವೋ', 'ಕಾಣದೆ ನಿಲ್ಲಲಾರೆ ಕಮನೀಯ ಮೂರುತಿಯ'ಹೀಗೆ ಮೊದಲಾದ ರೀತಿಗಳಲ್ಲಿ ವಿರಹಭಕ್ತಿಯ ಉನ್ಮಾದದಲ್ಲಿ ಆತ್ಮನಿವೇದನೆ ಮಾಡಿಕೊಳ್ಳುತ್ತಾರೆ.

ವೇಣೀ ಮಾಧವನ ತೋರಿಸೆ । ಜಾಣೆ ತ್ರಿವೇಣಿ । ಕಾಣದೆ ನಿಲ್ಲಲಾರೆನೆ ॥
ಕಾಣುತ ಭಕ್ತರ ಕರುಣದಿ ಸಲಹುವ । ಜಾಣೆ ತ್ರಿವೇಣಿ ಸಾರೆ ಸುಖವಾಣಿ ॥ ಪ ॥

ಬಂದನೆ ಬಹಳ ದೂರದಿ ಭವಸಾಗರ ತರುಣಿ । ನಿಂದನೇ ನಿನ್ನ ತೀರದಿ ॥
ಒಂದು ಗಳಿಗೆ ಹರಿಯಗಲಿ ನಾನಿರಲಾರೆ । ಮಂದಗಮನೆ ಎನ್ನ ಮುಂದಕೆ ಕರೆಯೆ ॥
–ಶ್ರೀ ವಾದಿರಾಜರು

ಇದು ವಾದಿರಾಜರ ವೇಣುಮಾಧವ ಗೀತೆ. ಅವರದ್ದು ಕಾಣದೆ ನಿಲ್ಲಲಾರದಷ್ಟು ಆತ್ಮನಿವೇದನೆ. ವಾದಿರಾಜರ ಈ ಕಲ್ಪನೆಗಿಂತ ಪುರಂದರದಾಸರ ಕಲ್ಪನೆಯು ಹೊರತಾಗಿಲ್ಲ. 'ಸೆರಗಬಿಡೋ ರಂಗ ಸೆರಗಬಿಡೋ । ಸಾರಿ ಹೇಳುವೆನೊಮ್ಮೆ ಸೆರಗಬಿಡೋ'ಎಂಬಲ್ಲಿ ಶೃಂಗಾರವಿದ್ದರೂ ನಿವೇದನೆ ಇದೆ. ಒಟ್ಟಿನಲ್ಲಿ, ಭಕ್ತಿರಸಾಮೃತಸಿಂಧುವಿನಲ್ಲಿ ಹೇಳುವಂತೆ, ಪರೀಕ್ಷಿತನು ಶ್ರವಣಭಕ್ತಿಗೆ, ಶುಕದೇವನು ಕೀರ್ತನಾಭಕ್ತಿಗೆ, ಪ್ರಹ್ಲಾದನು ಸ್ಮರಣಭಕ್ತಿಗೆ, ಲಕ್ಷ್ಮೀದೇವಿಯು ಪಾದಸೇವನೆಗೆ, ಪೃಥುವು ದರ್ಶನಭಕ್ತಿಗೆ, ಅಕ್ರೂರನು ವಂದನಾಭಕ್ತಿಗೆ, ಹನುಮಂತನು ದಾಸ್ಯಭಕ್ತಿಗೆ, ಅರ್ಜುನನು ಸಖ್ಯಭಕ್ತಿಗೆ ಹಾಗೂ ಮಹಾಬಲಿಯು ಆತ್ಮನಿವೇದನೆಗೆ ಉದಾಹರಣೆಗಳಾಗಿ ನಿಲ್ಲುತ್ತಾರೆ.

೩.೫ ಸಮಾಜದರ್ಶನ ಮತ್ತು ಮೌಲ್ಯಗಳು

ಕರ್ನಾಟಕದ ಧಾರ್ಮಿಕ ಇತಿಹಾಸದಲ್ಲಿ ಹರಿದಾಸಪಂಥವು ನೀಡಿದ ಸಾಮಾಜಿಕ ಕೊಡುಗೆ ನಿಜವಾಗಿಯೂ ಅನನ್ಯವಾದುದು. ಅವರು ತೋರಿಸಿದ ಜೀವನನಿಷ್ಠೆ, ಸಾಮಾಜಿಕಬೋಧೆ ಪ್ರಾಯಶಃ ಇತರ ಪಂಥಗಳಿಗಿಂತ ಭಿನ್ನಸ್ವರೂಪ. ಹಾಗಾಗಿ ಮಾನವಜನ್ಮವನ್ನು ಅವರು 'ಇದುಭಾಗ್ಯ ಇದುಭಾಗ್ಯ'ವೆಂದೇ ಭಾವಿಸಿಕೊಳ್ಳುತ್ತಾರೆ. ಅಲ್ಲದೆ ಸಾಮಾಜಿಕನೋರ್ವನಿಗೆ, 'ಕಲ್ಲಾಗಿ ಇರಬೇಕು ಕಠಿಣಭವ ತೊರೆಯೊಳಗೆ, ಬಿಲ್ಲಾಗಿ ಇರಬೇಕು ಬಲ್ಲವರೊಳು'ಎಂದು ಮಾರ್ಗದರ್ಶನವನ್ನೀಯುತಾರೆ. ಅಲ್ಲದೆ, 'ಮೆಲ್ಲನೇ ಮಾಧವನ ಮನವ ಮೆಚ್ಚಿಸಬೇಕು, ಬೆಲ್ಲನಾಗಿರಬೇಕು ಬಂಧುಜನರೊಳಗೆ' ಎಂಬ ಕಿವಿಮಾತೊಂದನ್ನು ನೀಡುತ್ತಾರೆ. ಹಲವು ಲಕ್ಷಯೋನಿಗಳನ್ನು ದಾಟಿಬಂದು ಪಡೆದಿರುವ ಮನುಷ್ಯಜನ್ಮವನ್ನು ಹಾಳುಮಾಡಿಕೊಳ್ಳಬಾರದೆಂಬ ವಿನಂತಿಯು ದಾಸಕುಲದ್ದಾಗುತ್ತದೆ.

ಏನು ಇಲ್ಲವೋ ಎರಡು ದಿನದ ಸಂಸಾರ......
ಹಸಿದು ಬಂದವರಿಗೆ ಅಶನವೀಯಲು ಬೇಕು
ಶಿಶುಗಳಿಗೆ ಪಾಲ್ಬೆಣ್ಣೆ ಕೊಡಲುಬೇಕು ।
....
ಕಳ್ಳತನವನು ಮಾಡಿ ಒಡಲು ಹೊರೆಯಲು ಬೇಡ
ಸುಳ್ಳನಾಗಿ ನೀ ತಿರುಗಬೇಡ ।
ದೊರೆತನವು ಬಂದಾಗ ಕೆಟ್ಟು ನುಡಿಯಲು ಬೇಡ
ಸಿರಿ ಬಂದ ಕಾಲಕ್ಕೆ ಮೆರೆಯಬೇಡ ॥ –ಪುರಂದರದಾಸರು.

ಎಂದುಕೊಂಡು ನಿರ್ದೇಶಿಸುತ್ತಾರೆ. 'ಮಾನವ ಜನುಮ ದೊಡ್ಡದು ಇದ ಹಾನಿಮಾಡಿಕೊಳ್ಳಬೇಡಿ ಹುಚ್ಚಪ್ಪಗಳಿರಾ' ಎಂಬ ನಿಲುವು ಅವರ ಸಾಮಾಜಿಕ ಸುಧಾರಣೆಯ ವೇಗವನ್ನು ಪ್ರತಿನಿಧಿಸುತ್ತದೆ. ಸಮಾಜದ ಕೊಂಕು ಹಾಗೂ ಡೊಂಕುಗಳನ್ನು ನಗೆವಿಡಂಬನೆಗಳ ಮೂಲಕ ತಿದ್ದುವ ಪ್ರಯತ್ನವೊಂದು ಶರಣಸಾಹಿತ್ಯದ ನಂತರದಲ್ಲಿ ಎರಡನೆಯ ಬಾರಿ ನಡೆದಿದ್ದರೆ ಅದು ದಾಸಸಾಹಿತ್ಯದಲ್ಲಿ.

ಭಾರತೀಯ ಇತಿಹಾಸದಲ್ಲಿ ಕರ್ನಾಟಕದ ದಾಸಪಂಥವು ತೋರಿದ ಸಾಮಾಜಿಕ ಕಳಕಳಿಯಷ್ಟು ಬಂಗಾಳದಲ್ಲಿ ಹುಟ್ಟಿದ ಚೈತನ್ಯಪಂಥವು ತೋರಿಸಲಿಲ್ಲ. ಚೈತನ್ಯಪಂಥಕ್ಕೆ ಭಕ್ತಿಯೇ ಸರ್ವಸ್ವವಾದರೆ, ದಾಸಪಂಥವು ಭಕ್ತಿಯೊಂದಿಗೆ ಸಾಮಾಜಿಕವಾಗಿ ಬುದ್ಧಿಮನಸ್ಸುಗಳ ವಿಕಾಸಕ್ಕೆ ಕಾರಣವಾಯಿತು. ಅದು ತನ್ನ ಧಾರ್ಮಿಕಕ್ರಾಂತಿಯಲ್ಲಿ ಸಮಾಜವನ್ನು ತಿದ್ದುವ ಕೆಲಸವನ್ನೂ ಮಾಡಿತು. ಅದಕ್ಕಾಗಿಯೇ ದಾಸಕುಲವು ತಮ್ಮ ಕೀರ್ತನೆಗಳಲ್ಲಿ ಲೋಕಾನುಭವಗಳನ್ನು ತುಂಬಿತು. ಅದನ್ನು ಆಡುಭಾಷೆಯ ಮೂಲಕವಾಗಿ ಧಾರೆಯೆರೆಯಿತು. ಆ ಮೂಲಕವಾಗಿ ಸಾಮಾಜಿಕ ಜವಾಬ್ದಾರಿಯನ್ನು, ಬದುಕಿನಲ್ಲಿ ನಿಷ್ಕಲ್ಮಷತೆಯನ್ನು, ಭಗವಂತನ ಬಗ್ಗೆ ಪ್ರೀತಿಯನ್ನು ಜನತೆಗೆ ಉಣಬಡಿಸಿತು. ಗುಡಿಯಲ್ಲಿದ್ದ ಭಗವಂತನನ್ನು ಬಯಲಿಗೆ ತಂದಿತು. ಸಾಮಾಜಿಕ ಕಿಲುಬನ್ನು ತೊಳೆಯಿತು.

ದಾಸಪಂಥದ ಈ ಧೋರಣೆಗೆ ದಾಸರುಗಳಲ್ಲಿದ್ದ ವಿದ್ಯೆ, ವಿನಯ, ವಿವೇಕಗಳೆಂಬ ತ್ರಿವೇಣಿ ಸಂಗಮವು ಒಂದು ನೆಲೆಯಲ್ಲಿ ಕಾರಣವಾಗಿರಬಹುದು. ಸಮಾಜವು ಶಾಂತಿಯುತವಾಗಿ ವ್ಯವಸ್ಥೆಗೊಳಪಡಬೇಕಾದರೆ ಧರ್ಮ, ನೀತಿ, ನಿಷ್ಕಲ್ಮಷ ದೈವಪ್ರಜ್ಞೆ ಅನಿವಾರ್ಯವೆಂಬುದು ದಾಸಪಂಥದ ಅಭಿಮತ. ಅದಕ್ಕಾಗಿಯೇ 'ಧರ್ಮವೆ ಜಯವೆಂಬ ದಿವ್ಯಮಂತ್ರ'ವೆಂದು, 'ತಲ್ಲಣಿಸದಿರು ಕಂಡ್ಯ ತಾಳುಮನವೆ' ಎಂಬ ಸಾಂತ್ವನದ ನುಡಿಯನ್ನು ನೀಡಿ, 'ಈಸಬೇಕು ಇದ್ದು ಜೈಸಬೇಕು'ಎಂಬ ಧ್ಯೇಯವಾಕ್ಯವನ್ನು ಉತ್ತಮವಾದ ಸಂಸಾರಕ್ಕಾಗಿ ಮತ್ತು ಅದರ ಹಿತಕ್ಕಾಗಿ ನೀಡಿದರು. 'ಬಡತನ ಬಂದರೆ ಹಿಗ್ಗುತಲಿರಬೇಕು' ಎಂಬ ಕಿವಿಮಾತು ಹೇಳಿದರು. 'ಎನ್ನದೆಂಬೊ ಮಾತು ಎಂದೆಂದಿಗೂ ಬೇಡ, ನಿನ್ನವನು ನಿನ್ನವನು ನಿನ್ನವನೆಂದೆನಿಸಿ ಮನ್ನಿಸಿ ಪಾಲಿಸೈ ವಿಜಯವಿಠಲಾ' ಎಂದು ಭಗವಂತನನ್ನು ಪ್ರಾರ್ಥಿಸುವಂತೆ ಮನವರಿಕೆ ಮಾಡಿದರು.

ಉತ್ತಮ ಸಮಾಜನಿರ್ಮಾಣದ ಕನಸನ್ನು ಕಟ್ಟಿಕೊಂಡ ದಾಸಪಂಥಕ್ಕೆ ಜನತೆಗೆ ಬುದ್ಧಿಮಾತು ಹೇಳಿದಷ್ಟು ತೀರದು. ಅದಕ್ಕಾಗಿ ಲೌಕಿಕ ಶ್ರೀಮಂತಿಕೆಯನ್ನು ಅಲ್ಲಗಳೆಯುವ ಪ್ರಯತ್ನವನ್ನು ದಾಸಪಂಥವು ಮಾಡುತ್ತದೆ. ಚಿತ್ತವು ವಿತ್ತವಿಚಾರವಾಗಿ ವಿಕೃತವಾಗಬಾರದೆಂಬ ದೃಷ್ಟಿಯಿಂದ 'ರೊಕ್ಕ ಎರಡಕ್ಕು ದುಃಖ ಕಾಣಕ್ಕ', 'ಹಣವೇ ನಿನ್ನಯ ಗುಣವೇನು ಬಣ್ಣಿಪೆನು' ಮೊದಲಾದ ಕೀರ್ತನೆಗಳನ್ನು ರಚಿಸಿ, ಅಧಿಕಾರ, ಅಹಂಕಾರದ ಆತಂಕದ ಕುರಿತಾಗಿ ಜನಪರ ಧೋರಣೆಯನ್ನು ತಾಳುತ್ತದೆ. ಮಾತ್ರವಲ್ಲದೆ ಸಿರಿತನದ ಕರಾಳಮುಖಗಳನ್ನು ಪರಿಚಯಿಸುವ ಕಾರ್ಯವು ದಾಸಪಂಥದಿಂದ ನಡೆಯುತ್ತದೆ.

ಕೊಬ್ಬಲಿರಬೇಡ ಮನುಜ ನೀನು ಕೊಬ್ಬಲಿರಬೇಡ......
ಸಿರಿ ಮಾನ ಬಂದಾಗ ಬಿರಿ ಬಿರಿ ನಡೆವರು
ನಡೆಯಲಾರೆನೆಂದು ಮಿಡುಕುವರು ।
ಸಿರಿ ಹೋದ ಮರುದಿನ ಬಡತನ ಬಂದರೆ
ಹುರುಕು ಹತ್ತಿದಂತೆ ಕೆರಕೊಂಬರಯ್ಯ ॥ –ಪುರಂದರದಾಸರು.

ಮನುಕುಲದ ಉತ್ಥಾನವನ್ನು ಬಯಸಿದ ದಾಸರು 'ದುಷ್ಟರ ಕಂಡರೆ ದೂರವಿರಬೇಕು, ಶಿಷ್ಟರ ಕಂಡರೆ ಕೈಮುಗಿಯಬೇಕು' ಎಂಬ ನೀತಿಯನ್ನು ಬೋಧಿಸಿ, ದಾಂಪತ್ಯಜೀವನದ ಸಿಹಿಕಹಿಭಾವಗಳ ಮೇಲೆ ಬೆಳಕನ್ನು ಚೆಲ್ಲಲು ಮುಂದಾಗುತ್ತಾರೆ.

ಇಬ್ಬರು ಹೆಂಡಿರ ಸುಖವ ಇಂದು ಕಂಡೆನಯ್ಯಾ ॥
ಒಬ್ಬಳಲಿ ಪೋಗಿ ಓಗರವ ಮಾಡೆನ್ನಲು
ಬೊಬ್ಬೆಯೇನಿದು ಕೊಬ್ಬೆ ನಡೆಯೆಂದಳು ।
ತಬ್ಬಿಬ್ಬುಗೊಂಡು ಇನ್ನೊಬ್ಬಳನು ಮಾಡೆನಲು
ಅಬ್ಬ ಬಿಸಿ ಮುಟ್ಟಲಾಪೆನೆ ಎಂದಳು ॥ –ಪುರಂದರದಾಸರು.

ಇಲ್ಲಿ ಕಾದಾಡುವ ಸತಿಯು ಸುಂದರಿಯಾದರೇನು? ಸುಂದರ ಮನಸ್ಸಿಲ್ಲದ ಹೆಂಡತಿಯಾದರೆ ಗಂಡನ ಬದುಕು ನಿತ್ಯನರಕ. ಆತನ ಬದುಕು ನಂದನವನವಾಗಬೇಕಾದರೆ, ಅಷ್ಟಮದಗಳ ತುಳಿದು, ದುಷ್ಟಸಂಗವ ಬಿಟ್ಟು, ಶಾಂತಿ ಕ್ಷಮೆದಮೆ ಪಿಡಿದು, ಭ್ರಾಂತಿಕ್ರೋಧವ ಕಳೆದು, ದಾನಧರ್ಮದ ಜೊತೆಗೆ ಏಕಪತ್ನೀವ್ರತಾಚರಣೆ ನೆರವೇರಬೇಕೆಂಬುದು ದಾಸಪಂಥದ ಅಭಿಮತ. ಇಲ್ಲಿ ಸುಖಸಂಸಾರಕ್ಕೆ ಉತ್ತಮಗೃಹಿಣಿಯ ಕಲ್ಪನೆಯನ್ನು ದಾಸಸಾಹಿತ್ಯವು ಮಾಡಿಕೊಡುತ್ತದೆ. ಮನೆಯ ಸಾಂಪ್ರದಾಯಿಕತೆಯನ್ನು ಕಾಪಾಡುವಲ್ಲಿ ಆಕೆಯ ಪಾತ್ರವು ಬಲುಮಹತ್ವವೆನ್ನುತ್ತದೆ. ಆಕೆಯಿಂದಲೇ ನಡೆಯಬೇಕಾದ ಅತಿಥಿಸತ್ಕಾರಕ್ಕೆ ದಾಸಸಾಹಿತ್ಯವು ವಿಧಿವಿಧಾನಗಳನ್ನು ಹೇಳಬಯಸುತ್ತದೆ. 'ಏಳು ಆರೋಗಣೆಗೆ ಏಕೆ ತಡವೋ' ಎಂಬ ಗೋಪಾಲದಾಸರ ಕೀರ್ತನೆಯು ಈ ವಿಚಾರಕ್ಕೆ ಉದಾಹರಣೆಯಾಗಿ ನಿಲ್ಲುತ್ತದೆ. ಅಲ್ಲಿ ಮಣೆ ಮುಂದೆ ಕುಡಿಬಾಳೆಲೆಯನ್ನು ಹಾಕಿ, ನೀರನ್ನು ಪ್ರೋಕ್ಷಿಸಿ, ದೀಪ ಹಚ್ಚಿಟ್ಟು, ರಂಗೋಲಿ ಹಾಕಿ, 'ಪುಡಿ ಉಪ್ಪು ಚಟ್ನಿ ಕೋಸಂಬರಿ ಉಪ್ಪಿನಕಾಯಿ......ಅಡವಿ ಗುಳ್ಳದ ಪಲ್ಯ ಅಂಬೊಡೆ ಪೇಣಿಯು' ಹೀಗೆ ಆರೋಗಣೆಯನ್ನು ಬಡಿಸಿದರೆ ಮಾತ್ರ ಶ್ರೀದೇವಿ ಬಂದು ನಿಲ್ಲುವಳೆಂಬ ಭಾವನೆ ಆದರ್ಶ ಸಮಾಜದ್ದು. ಭೋಜನದ ನಂತರದಲ್ಲಿ 'ಗಂಧಕಸ್ತೂರಿ ಪುನುಗು ಕರ್ಪೂರದ ವೀಳ್ಯ ಚೆಂದಾಗಿ ಮಡಿಸಿ ಕೈಲಿಹಿಡಿದುಕೊಂಡು' ಗೃಹಿಣಿಯೊಬ್ಬಳು ತಾಂಬೂಲದುಪಚಾರವನ್ನು ಕೇಳುವ ಕ್ರಮವೊಂದನ್ನು ಸಮಾಜಕ್ಕೆ ನೆನಪಿಸುವ ಕೆಲಸವೊಂದನ್ನು ಇಲ್ಲಿಯ ಸಾಹಿತ್ಯ ಮಾಡುತ್ತದೆ.

ದಾಸಸಾಹಿತ್ಯದಲ್ಲಿ ಸಂಪ್ರದಾಯವನ್ನು ಮುರಿಯುವ ಗೃಹಿಣಿಯ ಕುರಿತಾಗಿಯೂ ಪ್ರಸ್ತಾಪವಿದೆ. ಅಂತಹವರ ವಿರುದ್ಧವಾಗಿ ಜಗನ್ನಾಥದಾಸರಂತೂ ಯಮನ ಮೂಲಕವಾಗಿ ಡಂಗುರ ಸಾರಿಸುತ್ತಾರೆ.

ಹೊತ್ತಾರೆ ಎದ್ದು ಪತಿಗೆ ಎರಗದವಳ, ಮೃತ್ತಿಗೆ ಶೌಚ ಮಾಡದೆಯಿಪ್ಪಳ
ಬತ್ತಲೆ ಕುಳಿತು ಮೈದೊಳೆವಳ ನಾದಿನಿ, ಅತ್ತೆ ಮಾವನ ಬೈವಳೆಳೆದು ತನ್ನಿರೋ ಎಂದು ॥
–ಜಗನ್ನಾಥದಾಸರು.

ದಾಸರಿಗೆ ಬೆಳಗಾದ ಮೇಲೆಯೂ ಮಲಗಿರುವವಳ, ಗುರುಹಿರಿಯರನ್ನು ನಿಂದಿಸುವವಳ, ಒಲಿವೌಷಧ ಮಾಡಿ ಪತಿಯನ್ನೊಲಿಸುವವಳ, ಮಲಮಕ್ಕಳನ್ನು ಮತ್ಸರಿಸುವವಳ, ಏಕಾದಶಿ ಉಪವಾಸ ಜಾಗರಣೆ ಮಾಡದೆ ಮಲಗಿ ಗೊರಕೆ ಹೊಡೆಯುವವಳ ಬಗ್ಗೆ ತಿರಸ್ಕಾರವಿದೆ. ಆದರೆ ಈ ಕೋಪವು ಎಲ್ಲಾ ಸತಿಯರಿಗಲ್ಲ. ಅವರಿಗೆ ಸತಿಶಿರೋಮಣಿಗಳ ಕುರಿತು ಪೂಜ್ಯಭಾವವಿದೆ. ಯಮನು ತನ್ನ ಕಿಂಕರರಿಗೆ ಆದೇಶಿಸುವಾಗ ನಿಜ ಪತಿವ್ರತೆಯರನ್ನು ಎಳೆತರದಂತೆ ನಿರ್ದೇಶಿಸುತ್ತಾನೆ.

ಅರಿಶಿನ ಕುಂಕುಮ ಪುಷ್ಪಾಂಜನ ವಸ್ತ್ರಾ
ಭರಣ ಭೂಷಿತಳಾಗಿ ಪತಿಯೊಡನೆ
ಸರಸವಾಡುವ ಸುಖ ಹರಿಗೆ ಸಮರ್ಪಿಸಿ
ಹರುಷದೊಳಿಪ್ಪಳ ಮುಟ್ಟದೆ ಬನ್ನಿರೋ ಎಂದು ॥ –ಜಗನ್ನಾಥದಾಸರು.

ಹಾಗಾಗಿ ಬಾಲಕರನ್ನು ತೊಟ್ಟಿಲೊಳಗಿಟ್ಟು ಲಕ್ಷ್ಮೀರಮಣನ ಗುಣಗಾನಮಾಡಿ ತೂಗುತಿರುವ ಮಾನಿನಿಯರಿಗಿಲ್ಲಿ ರಿಯಾಯಿತಿ ಇದೆ. ಒಟ್ಟಿನಲ್ಲಿ ದಾಸಸಾಹಿತ್ಯವು ಹಲವು ಆದರ್ಶಗಳ ಆಗರ. ಅದು ಸಾತ್ವಿಕವೆನಿಸುವ ಸಾಮಾಜಿಕ ಕಲ್ಪನೆಯನ್ನು ಜನತೆಯ ಮುಂದಿಟ್ಟರೂ ಸಂಸಾರ ನಿಸ್ಸಾರತೆಯ ಬಗ್ಗೆ ಒತ್ತಿಹೇಳಲು ಮರೆಯುವುದಿಲ್ಲ. ಅದಕ್ಕಾಗಿ ಹೃದಯವನ್ನು ಹೊಲಮಾಡಿ, ಮನವ ನೇಗಿಲಮಾಡಿ, ಹದಮಾಡಿ, ಬೀಜಬಿತ್ತನೆಯಿಂದ ಫಲಪಡೆಯುವ ಕಾಯಕವು ದಾಸರದ್ದು. ಆದುದರಿಂದ ಸಾಮಾಜಿಕಮುಖಕ್ಕೆ ದಾಸರ ನಿರ್ದೇಶನವೆಂದರೆ 'ಧರೆಯ ಭೋಗವನ್ನು ನಂಬಿ ಹರಿಯ ಮರೆತು ಕೆಡಲುಬೇಡ, ಧರೆಯ ಭೋಗ ಕನಸಿನಂತೆ' ಎಂದು ಹೇಳುವುದು. ಧರಣಿಯ ಮುನ್ನಾಳ್ದ ನಹುಷ ಸಗರರೆನಿಪ ಭೂಪತಿಗಳು ಸಿರಿಯುನ್ನು ಜಯಿಸಲಿಲ್ಲ, ಇನ್ನು ನರರ ಪಾಡೇನು? ಎಂಬ ಪ್ರಶ್ನೆಯು ದಾಸಕುಲದ್ದು. ಹಾಗಾಗಿ ಸುಖದ ನೆಲೆಗಾಗಿ, 'ನೋಡದಿರು ಪರಸತಿಯ ಕೂಡದಿರು ದುರ್ಜನರ ಆಡದಿರು ಮಾತುಗಳ ಗರ್ವದಿಂದ' ಎನ್ನುವ ಬೋಧೆಯನ್ನು ಇಲ್ಲಿ ನೀಡುತ್ತದೆ. ಸತ್ಯವಂತರ ಸಂಗಕ್ಕಾಗಿ, ಸಾಧುಸಜ್ಜನರ ಸತ್ಯಗುಣಕ್ಕಾಗಿ ಹಂಬಲಿಸಿ, 'ಸಾರಿದೂರಿ ಹೇಳುತ್ತೇನೆ ಕೆಟ್ಟಕಂಡ್ಯ ಬಡ್ಡಿಮನವೆ ದೂರೋಬುದ್ಧಿ ಮಾಡಬೇಡ'ವೆಂದು ಕಿವಿಮಾತು ಕೊಡುತ್ತದೆ. ಕಾಖಂಡಕಿ ಕೃಷ್ಣರಾಯರಂತೂ 'ಮುತ್ತಿನಂಥಾಹೊತ್ತು ವ್ಯರ್ಥವಾಗಿ ಹೋಗುತಿದಕೋ' ಎನ್ನುವ ಮೂಲಕ ಮೂರ್ಖ ಜನಗಳ ಕುರಿತು ಹಲುಬುತ್ತಾರೆ. ಇಲ್ಲಿ ಸಾಮಾಜಿಕ ಕ್ಷೇಮವನ್ನು ಉದ್ದೇಶವಾಗಿರಿಸಿಕೊಂಡು ರಚನೆಯಾಗಿರುವ ಕೀರ್ತನೆಗಳಲ್ಲಿ ಕಲಾತ್ಮಕ ಪ್ರತಿಮೆಗಳು ಮತ್ತು ಶಬ್ದಚಿತ್ರಗಳು ಸೊಗಸಾಗಿ ಸೇರಿಕೊಂಡಿರುವುದು ವಿಶೇಷ.

೩.೫ (ಅ) ಹೊಲೆತನ ಮತ್ತು ಜಾತಿಪದ್ಧತಿ

ನಮ್ಮ ಪ್ರಾಚೀನ ಸಮಾಜವು ವರ್ಣನಿಷ್ಠವಾದುದು. ಆ ಕಾಲದಿಂದಲೂ ಹೊಲೆತನ ಮತ್ತು ಜಾತಿಪದ್ಧತಿಗಳು ಸ್ವಸ್ಥಸಮಾಜಕ್ಕೆ ಅಡೆತಡೆಯಾಗಿ ಪರಿಣಮಿಸಿತ್ತು. ಆದರೆ ಕಾಲಾನಂತರದಲ್ಲಿ ಹುಟ್ಟಿಕೊಂಡು ಬಂದ ದಾಸಪಂಥವು ಜಾತಿರಹಿತವಾದ ಸಾಮಾಜಿಕಕಲ್ಪನೆಯನ್ನು ಇಟ್ಟುಕೊಂಡು ಮುಂದುವರಿಯಿತು. ಹಾಗಾಗಿ ದಾಸಸಾಹಿತ್ಯದಲ್ಲಿ ನಾವು ಕಾಣುವುದು ಸಮಾಜವಾದದ ಕಲ್ಪನೆಯು ಒಂದೆಡೆಯಾದರೆ, ಮತ್ತೊಂದೆಡೆ ಉತ್ತಮ ಸಮಾಜದ ನಿರ್ಮಾಣಕ್ಕಾಗಿ ದಾಸರಿಂದ ನಡೆದ ಜನರ ಮನಃಪರಿವರ್ತನೆ. ಇಲ್ಲಿ ದಾಸರುಗಳ ಆಲೋಚನೆಗಳು ವಿಷಯಾಧಾರಿತವಾಗಿ ಗಂಭೀರತೆಯನ್ನು ಪಡೆದುಕೊಳ್ಳುತ್ತದೆ. ಅಲ್ಲದೆ ಭಾಷಾಬಳಕೆಯಲ್ಲಿ ಮತ್ತು ಘೋಷಣೆಗಳ ಮೂಲಕವಾಗಿ ವಾಚ್ಯಾರ್ಥ ಮತ್ತು ಲಕ್ಷಣಾರ್ಥಗಳೂ ಸೇರಿಕೊಳ್ಳುತ್ತದೆ. ಇದೊಂದು ರೀತಿಯಲ್ಲಿ ಉಪದೇಶದಿಂದ ಕೂಡಿದ ಎಚ್ಚರಿಕೆಯೆಂದು ಭಾವಿಸಿಕೊಳ್ಳಬಹುದು.

ಹೊಲೆಯ ಹೊರಗಿಹನೆ ಊರೊಳಗಿಲ್ಲವೆ
ಹೊಲೆಗೇರಿಯೊಳು ಹೊಲೆಯ ಹೊಲತಿಲ್ಲವೇ ॥
ಕೊಂಡ ಋಣವನು ಕೊಡದಿದ್ದವನೆ ಹೊಲೆಯ
ಬಂಡು ಮಾತುಗಳ ಬಯಲಿಗಿಕ್ಕುವವ ಹೊಲೆಯ ।
ಗಂಡ ಹೆಂಡಿರ ಮಧ್ಯ ಭೇದ ಹಚ್ಚುವವ ಹೊಲೆಯ
ಹೆಂಡತಿಯ ಇಚ್ಚೆಯಲಿ ನಡೆವವ ಹೇಡಿ ಹೊಲೆಯ ॥ –ಪುರಂದರದಾಸರು

'ಹೊಲೆಯ ಹೊರಗಿಹನೆ ಊರೊಳಗಿಲ್ಲವೇ' ಎನ್ನುವ ಪ್ರಶ್ನೆಯನ್ನು ಹಾಕುತ್ತಾ 'ಅರಿತು ಆಚಾರವನು ನಡೆಸದಾತನೇ ಹೊಲೆಯ, ಪರಸತಿಗೆ ಅಳುಪಿದವ ಪಾಪಿಹೊಲೆಯ' ಎನ್ನುವ ಉತ್ತರವನ್ನು ಕಂಡುಕೊಂಡವರು ಪುರಂದರದಾಸರು. ಅನಂತರದಲ್ಲಿ 'ಹೊಲೆಯ ಹೊಲತಿ ಇವರವರಲ್ಲ, ಹೊಲಗೇರಿಯೊಳು ಹೊಲೆಯ ಹೊಲತಿಯರಿಲ್ಲ' ಎಂದು ವಾದಿಸಿ, ಅತೀ ನಿಷ್ಠುರ ನುಡಿವವನನ್ನು ಹಾಗೂ ಪತಿದ್ವೇಷ ಮಾಡುವವಳನ್ನು ಹೊಲೆಯ ಹಾಗೂ ಹೊಲತಿಯರನ್ನಾಗಿ ಇವರು ಕಂಡುಕೊಳ್ಳುತ್ತಾರೆ. ವರ್ಗರಹಿತವಾದ ಸಮಾಜನಿರ್ಮಾಣಕ್ಕಾಗಿ ದಾಸರುಗಳು ರಚಿಸಿದ ಸಾಹಿತ್ಯದ ಆಂತರ್ಯದಲ್ಲಿ ಬಂಡವಾಳಶಾಹಿ ಮತ್ತು ಜಮೀನ್ದಾರೀಪದ್ಧತಿಗೆ ಪರೋಕ್ಷವಾದ ಟೀಕೆಯಿದೆ. ಮುಖ್ಯವಾಗಿ ಚಾರಿತ್ರ್ಯಪೂರ್ಣವಾದ ಮೌಲ್ಯಗಳನ್ನು ಸಮಕಾಲೀನ ಸಮಾಜದ ಮುಂದಿಡುವುದು ದಾಸಪಂಥದ ಉದ್ದೇಶವೆಂದು ಭಾವಿಸಿಕೊಳ್ಳಬೇಕಾಗುತ್ತದೆ.

ಹರಿದಾಸ ಆಂದೋಲನವು ಕುಲಕಲ್ಪನೆ ಅಥವಾ ಜಾತಿಪದ್ಧತಿಯ ಕುರಿತು ವ್ಯಾಖ್ಯಾನಿಸುತ್ತದೆ. ಜನತೆಯಲ್ಲಿ ಅಡಗಿದ್ದ ಕುಲವ್ಯವಸ್ಥೆಯ ಕುರಿತಾದ ಮೌಢ್ಯತೆಯನ್ನು ಮತ್ತು ಕ್ರೂರತನವನ್ನು ಬಯಲುಮಾಡಿ, ಅನಂತರದಲ್ಲಿ ಇಲ್ಲವಾಗಿಸುವ ಪ್ರಯತ್ನ ದಾಸಕುಲದ್ದು. ಇದಕ್ಕೆ ಮುಖ್ಯ ಕಾರಣವೆಂದರೆ, ಆಂತರಂಗಿಕ ಶುದ್ಧಿಗೆ ದಾಸಸಾಹಿತ್ಯದಲ್ಲಿ ಮಹತ್ವವಿರುವುದು.

ಕನಕದಾಸರು ರಚಿಸಿದ 'ಕುಲಕುಲ ಕುಲವೆನ್ನುತಿಹರು', ಕುಲದ ನೆಲೆಯನ್ನು ತಿಳಿಸುವ 'ಕುಲಕುಲ ಕುಲವೆಂದು ಹೊಡೆದಾಡದಿರಿ' ಮೊದಲಾದ ಕೀರ್ತನೆಗಳು ಕುಲದ ಕುರಿತಾಗಿ ವ್ಯಾಖ್ಯಾನವನ್ನು ನೀಡುತ್ತವೆ. ಹುಟ್ಟಿನಿಂದಲೇ ಅಂಟಿಕೊಂಡು ಬಂದ ಕುಲಪರದೆಯನ್ನು ಕನಕದಾಸರು ಬದಿಗೆಸರಿಸುತ್ತಾರೆ. ಅದಕ್ಕಾಗಿಯೇ ದಾಸಶ್ರೇಷ್ಠರು ಕುಸುಮನಾಭನಿಗೆ ಅರ್ಪಿತವಾಗುವ ಕೆಸರಿನ ತಾವರೆ, ಮೃಗಗಳ ಮೈಯಿಂದ ಉದಿಸಿದ ಕಸ್ತೂರಿ, ಪಶುಮಾಂಸದ ಕ್ಷೀರಗಳೆಲ್ಲವನ್ನು ತಮ್ಮ ಕುಲವ್ಯಾಖ್ಯಾನದ ರೂಪಕಗಳನ್ನಾಗಿ ಸ್ವೀಕರಿಸುತ್ತಾರೆ. ಇವರೆಲ್ಲರ ಕುಲವ್ಯಾಖ್ಯಾನಗಳು ವಿಶ್ವಮಾನ್ಯತೆಯನ್ನು ಪಡೆಯುವಂತಹುದು. 'ಆವಕುಲವಾದರೇನು ಆವನಾದರೇನು ಎಲ್ಲರೂ ನಮ್ಮವರೆ' ಎಂಬಲ್ಲಿ ವಿಶ್ವಕುಟುಂಬದ ಕಲ್ಪನೆಯು ಸ್ಪಷ್ಟವಾಗಿಯೇ ಚಿತ್ರಿತವಾಗುತ್ತದೆ. ಒಟ್ಟಿನಲ್ಲಿ ಜ್ಞಾನಿಗಳಿಗೆ ಕುಲವಿಲ್ಲವೆನ್ನುವ ಕಲ್ಪನೆಯು ದಾಸಪಂಥದಿಂದ ಸ್ಪಷ್ಟವಾಗುತ್ತದೆ.

೩.೫ (ಆ) ಕೀರ್ತನೆಗಳಲ್ಲಿ ಬೂಟಕತನ

ಹರಿದಾಸರ ಕೀರ್ತನಾಸಾಹಿತ್ಯದ ಸಮಾಜದರ್ಶನದಲ್ಲಿ ಅಂತರಂಗ ಅಶುದ್ಧತೆಯ ಬೂಟಾಟಿಕೆಯನ್ನು ಬಯಲಿಗೆಳೆಯುವ ಪ್ರಯತ್ನವಿದೆ. ಇಲ್ಲಿ ಸೋಗಿನಭಕ್ತಿಗೆ ಖಂಡನೆಯಿದೆ; ಡಾಂಭಿಕತೆಗೆ ವಿಡಂಬನೆಯಿದೆ. ಆದುದರಿಂದಲೇ ಅಲ್ಲಿ ಧ್ಯಾನಜನ್ಯವಾದ, ಮೌನಪೂರ್ವಕವಾದ ಪೂಜೆಗೆ ಹೆಚ್ಚಿನ ಮನ್ನಣೆಯಿದೆ. 'ನರನಾದ ಮೇಲೆ ಹರಿನಾಮ ಜಿಹ್ವೆಯೊಳಿರಬೇಕು' ಎಂಬ ವ್ಯಾಸರಾಯರ ರಚನೆಯು ಈ ಮೇಲಿನ ಕಲ್ಪನೆಯಿಂದಲೇ ರಚನೆಯಾಗಿರುವಂತಹುದು. ಮನಸ್ಸು ನೀಚವೃತ್ತಿಗಿಳಿದಾಗ 'ಛೀಛೀ ಮನವೇ ನಾಚದ ತನುವೇ' ಎಂದು ಬಯ್ಗುಳದ ಮೂಲಕ ಮಾನವನನ್ನು ತಿದ್ದುವ ಕ್ರಮವೊಂದು ನಡೆಯುತ್ತದೆ. ದಾಸರುಗಳು ಸ್ವಾಂತಸುಖವನ್ನು ಬಯಸಿದವರಲ್ಲ. ಅವರ ಸಾಮಾಜಿಕಚಿಂತನೆಯಲ್ಲಿ ಪ್ರತಿಯೊಬ್ಬನಿಗೂ ಮುಕ್ತಿಯೆಂಬ ಪರಮಪದವಿಯು ಸಿಗಬೇಕು. ಅದಕ್ಕಾಗಿಯೇ ದಾಸರು ಜನಸಾಮಾನ್ಯನೊಬ್ಬನಿಗೆ,

ಯತಿಯಾಗಬೇಡ ವೈರಾಗ್ಯವರಿತು ಸಕಲ
ವ್ರತವ ಮಾಡುವೆನೆಂಬ ನೇಮ ಬೇಡ ।
ಶ್ರುತಿ ಸ್ಮೃತಿಗಳನರಿತು ನಡೆವೆನೆಂಬ ಚೇಷ್ಟೆಯು ಬೇಡ ಶ್ರೀ
ರತಿಪತಿ ಪಿತನ ಶ್ರೀನಾಮವೊಂದೇ ಸಾಕು ಮರುಳೆ ॥

ಎಂದು ಹೇಳಿಬಿಡುತ್ತಾರೆ. ಇಲ್ಲಿ ಪಾರಮಾರ್ಥಿಕಕ್ಕೆ ಬೇಕಾಗುವ ಸತ್ಕರ್ಮಗಳು ಕೇವಲ ಲೌಕಿಕದಲ್ಲಿ ದುರುಪಯೋಗ ಆಗಬಾರದೆನ್ನುವ ಕಾಳಜಿಯು ದಾಸರದ್ದು. ಮೇಲಾಗಿ ಶ್ರೀಹರಿಕೀರ್ತನಾಮೃತವೆ ಸರ್ವಶ್ರೇಷ್ಠವೆಂಬ ತೀರ್ಮಾನವನ್ನು ಪ್ರತಿಪಾದನೆ ಮಾಡಿಬಿಡುತ್ತಾರೆ. ಲೌಕಿಕದಲ್ಲಿ ಬೂಟಾಟಿಕೆಯ ಬದಲು ಜೀವನಸೌಂದರ್ಯವನ್ನು ಹೇಗೆ ಸಾಧಿಸಬೇಕೆನ್ನುವುದನ್ನು ಪ್ರಸನ್ನವೆಂಕಟದಾಸರು ಹೀಗೆ ಹೇಳುತ್ತಾರೆ.

ಹೀಗಿದ್ದರೆ ಲೇಸು ಜ್ಞಾನಿಗೆ ॥
ಸತಿ ಇದ್ದರೆ ಸಮಹಿತದವಳಾಗಿ, ಸುತನಿದ್ದರೆ ನಿಜಮತದವನಾಗಿ, ಭ-
ಕುತಿ ಇದ್ದರೆ ಡಂಭಕವನಳಿದು, ವಿರಕುತಿಯಿದ್ದರೆ ಭವದಾಶೆಯ ಕಳಿದು,
ಮತಿಯಿದ್ದರೆ ಶುಭ ಮತಿಯವನಾಗಿ, ಧೃತಿಯಿದ್ದರೆ ದುಷ್ಕೃತಿಗಳ ನೀಗಿ......॥
–ಪ್ರಸನ್ನವೆಂಕಟದಾಸರು

ಬಿಡಬೇಕೆಂದು ಅರಿಕೆಮಾಡುತ್ತಾರೆ. ಅಂತೆಯೇ 'ಅರ್ತರಿಯದ್ದಾಂಗೆ ಇರಬೇಕು, ಬಲ್ಲೆನೆಂಬ ಬಡಿವಾರಸಲ್ಲದು, ಅಹಂಕಾರ ಬಲುಸೂಕ್ಷ್ಮ'ವೆಂದು ಕಾಖಂಡಕಿ ಮಹೀಪತಿರಾಯರು ಸಮಾಜಮುಖಕ್ಕೆ ನಿರ್ದೇಶನವನ್ನೀಯುತ್ತಾರೆ. ಡಂಭಾಚಾರಿಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಳ್ಳುವುದರಲ್ಲಿ ಪುರಂದರದಾಸರು ಹೆಚ್ಚು ನಿಪುಣರು. ಅವರು ನೇರವಾಗಿಯೇ ಕಾವಿಯನ್ನುಟ್ಟು ತಿರುಗುವ ಕಾಮುಕರನ್ನು, ನೇಮನಿಷ್ಠೆಗಳ ಮಾಡುವ ತಾಮಸಿಗಳನ್ನು ಬಯ್ಯಲು ಮುಂದಾಗುತ್ತಾರೆ. ಪದುಮನಾಭನಲ್ಲಿ ಭಕ್ತಿಲೇಶವನ್ನು ತೋರದ ಉದರವೈರಾಗ್ಯಕ್ಕೆ ಸಂತಾಪ ವ್ಯಕ್ತಪಡಿಸುತ್ತಾರೆ.

ಮಡಿ ಮಡಿ ಮಡಿಯೆಂದಡಿಗಡಿಗ್ಹಾರುತಿ । ಮಡಿ ಮಾಡುವ ಬಗೆ ಬೇರುಂಟು ॥
ಬಟ್ಟೆಯ ನೀರೊಳಗದ್ದಿ ಒಣಗಿಸಿ । ಉಟ್ಟುಕೊಂಡರೆ ಅದು ಮಡಿಯಲ್ಲ ।
ಹೊಟ್ಟೆಯೊಳಗಿನ ಕಾಮಕ್ರೋಧವ । ಬಿಟ್ಟು ನಡೆದರೆ ಅದು ಮಡಿಯು ॥ –ಪುರಂದರದಾಸರು

ದಾಸರ ಪ್ರಕಾರ ಶರೀರದ ಮಲಮೂತ್ರಾದಿಗಳನ್ನು ತೊಳೆದರೆ ಅದು ಮಡಿಯೆನಿಸದು. ಕಾಮಕ್ರೋಧಾದಿ ಅರಿಷಡ್ವೈರಿಗಳನ್ನು ಬಿಟ್ಟು ಬಾಳುವುದೇ ನಿಜವಾದ ಮಡಿಯೆಂಬ ವ್ಯಾಖ್ಯಾನ ಇವರದ್ದು. ಈ ನಿಲುವನ್ನು ಒಪ್ಪಿಕೊಂಡು ಇಸ್ಲಾಂ ಧರ್ಮದಿಂದ ಹಿಂದೂಧರ್ಮಕ್ಕಾಗಮಿಸಿದ ಶ್ರೀರಾಮದಾಸರು ಕೂಡ 'ಕದ್ದುತಿನ್ನುವ ಕ್ಷುದ್ರಬುದ್ಧಿ ನೀಗಿ ಪರಿಶುದ್ಧರಾಗಲು ನಿರ್ಧಾರಮಾಡಿ' ಎನ್ನುವ ಮೂಲಕ ಮಡಿಯ ಕುರಿತು ಮಾತಾಡುತ್ತಾರೆ.

ಕನಕದಾಸರಂತೂ ಲೌಕಿಕದ ವೇಷಧಾರಿಗಳನ್ನು ಕುರಿತು 'ದಾಸಪಟ್ಟವೋ ಸಂನ್ಯಾಸಪಟ್ಟವೋ' ಎಂದು ಛೇಡಿಸುವ ಪ್ರಯತ್ನವನ್ನು ಮಾಡುತ್ತಾರೆ. ಅವರ ದೃಷ್ಟಿಯಲ್ಲಿ, ಮಂಡೆಯನ್ನು ಬೋಳುಮಾಡಿ, ನಾಮದುಂಡೆಯನ್ನು ಬರೆದು ಕೆಡಿಸಿ, ಕಂಡಕಂಡವರನು ಕೂಡಿ, ಭಂಡಜನ್ಮ ಹೊರೆಯುವವಗೆ ದಾಸ ಅಥವಾ ಸಂನ್ಯಾಸಪಟ್ಟವು ವಿಹಿತವಾದುದಲ್ಲ. ಅದು ಏನಿದ್ದರೂ ಶುದ್ಧಸಂಸ್ಕಾರವಂತರಿಗೆ ಮಾತ್ರ ಎನ್ನುವುದು ಅವರ ಅಭಿಮತ. ಇಂತಹ ಅಂತರಂಗದ ಶುದ್ಧಿಗಾಗಿ ಬಹಿರಂಗದಲ್ಲಿ ಲೇವಡಿ ಮಾಡಿದವರಲ್ಲಿ ಮೋಹನದಾಸರು ಮುಖ್ಯರು. ಅವರು ತಮ್ಮ ಕೀರ್ತನೆಯೊಂದರಲ್ಲಿ,

ಡಂಬಕದ ಭಕುತಿಯನು ಬಿಡು ಕಂಡ್ಯ ಮನವೆ ।
....
ಜಪವ ಮಾಡುವೆನೆಂದು ಮುಸುಕನಿಟ್ಟು ಕುಳಿತು
ತಪಿಸುವ ಒಳಗೆ ನೀ ಧನದಾಸೆಯಿಂದ ॥ –ಮೋಹನದಾಸರು

ಎನ್ನುವ ಮೂಲಕ ವಿಡಂಬನೆ ಮಾಡುತ್ತಾರೆ. ಹೊರಗೆ ಜಪದ ಸೋಗು, ಒಳಗೆ ಧನದಾಸೆ. ಇಂತಹ ವಿರಕ್ತಿಯಿಂದ ಸಮಾಜಸುಖವು ಭಗ್ನಗೊಳ್ಳುತ್ತದೆ. ದಾಸರಿಲ್ಲಿ ನಿಜವಾದ ವಿರಕ್ತಿಯಿಂದ ಹುಟ್ಟುವ ಭಕ್ತಿಯನ್ನು ಮಾತ್ರ ಬೆಂಬಲಿಸುತ್ತಾರೆ. ಅವರ ಪ್ರಕಾರ ದೈವಭಕ್ತಿಯಿಂದ ವಿಮುಖನಾದವನು ದರಿದ್ರನಾಗುತ್ತಾನೆ. ದೈವಭಕ್ತಿಯಿದ್ದವನು ಕಠಿಣ ಪರಿಸ್ಥಿತಿಯಲ್ಲೂ ಸುಖಸೌಭಾಗ್ಯಕ್ಕೊಳಗಾಗುತ್ತಾನೆ. ಇದಕ್ಕೆ ಡಂಭಾಚಾರವನ್ನು ತ್ಯಜಿಸುವ ಅನಿವಾರ್ಯತೆಯಿದೆ.

ದಾಸಸಾಹಿತ್ಯದಲ್ಲಿ ಸಾಂಪ್ರದಾಯಿಕ ನಿಷ್ಠೆಗಳಿಗೆ ಅಲ್ಲಲ್ಲಿ ವಿರೋಧವಿದೆ. ಕಾರಣ ಸಾಂಪ್ರದಾಯದ ಹೆಸರಲ್ಲಿ ನಿರ್ದಿಷ್ಟ ಜನತೆಯು ಸಮಾಜಕ್ಕೆ ಮಾಡುವ ಮೋಸವೇ ಇದಕ್ಕೆ ಕಾರಣ. ಅದಕ್ಕಾಗಿ ಕನಕದಾಸರು 'ಜಪವ ಮಾಡಿದರೇನು ತಪವ ಮಾಡಿದರೇನು, ವಿಪರೀತ ಕಪಟಗುಣ ಕಲುಷವಿದ್ದವರು' ಎಂದು ಹೇಳಿದರೆ, 'ಶ್ವಾನ ಬೂದಿಯೊಳಿರಲು ಶಿವಭಕ್ತನೆನಬಹುದೆ, ಕಾನನದೊಳಿಹ ಕಾಗೆ ವನವಾಸಿಯೇ'ಎನ್ನುವ ಮೂಲಕ ಪುರಂದರದಾಸರು ಉಪಮಾನಗಳನ್ನು ಬಳಸಿ ಡಾಂಭಿಕ ಜನರ ಕಲ್ಮಷ ಹೃದಯಕ್ಕೆ ಕನ್ನಡಿಯನ್ನು ಹಿಡಿಯುತ್ತಾರೆ.

ವಿಜಯದಾಸರು ಮನಸ್ಸಿಗೆ ಎಚ್ಚತ್ತುಕೊಳ್ಳಲು ನಿರ್ದೇಶನವನ್ನೀಯುತ್ತಾರೆ. 'ನರಜನ್ಮ ಬರುವುದೇ ಕಷ್ಟ ಇದನರಿದು ನೋಡು ವಿಪ್ರಾದಿಶ್ರೇಷ್ಠ'ವೆಂದು ಬುದ್ಧಿಮಾತನ್ನು ಹೇಳುತ್ತಾರೆ. ಅವರ ಪ್ರಕಾರ, ಕಷ್ಟಬರದೆ ಸುಖಬರದು, ಕಂಗೆಟ್ಟ ಮೇಲೆ ಕಷ್ಟ ತಿಳಿಯುವುದು. ಸರ್ವಕಷ್ಟಕ್ಕೂ 'ನಾನು' ಎಂಬ ಅಹಂಕಾರವೇ ಮೂಲಕಾರಣ. ಆದುದರಿಂದ 'ನಾನು ಎಂಬುದು ಬಿಡುಕಂಡ್ಯ, ನಿನ್ನ ಮಾನಾಪಮಾನಕೆ ಹರಿಯೆನ್ನು ಕಂಡ್ಯ' ಎಂದು ಸಲಹೆಯನ್ನು ನೀಡುತ್ತಾರೆ. 'ನಾನು ಹೋದರೆ ಹೋದೇನು' ಎಂಬ ಧ್ವನ್ಯಾರ್ಥವನ್ನು ಕನಕದಾಸರು ಬಳಸಿದುದು ಇದೇ ಅರ್ಥದಲ್ಲಿ.

ಹೀಗೆ, ಸ್ವಸ್ಥಸಮಾಜದಕ್ಕಾಗಿ ಡಾಂಭಿಕತೆಯನ್ನು ಹೋಗಲಾಡಿಸಲು ಹೊರಟ ದಾಸರಲ್ಲಿ ಮೂಡಿಬಂದ ಕೀರ್ತನೆಗಳು ಸಾವಿರಾರು. ಅವುಗಳಲ್ಲಿ, ಕನಕದಾಸರ 'ಕುಲಕುಲ ಕುಲವೆನ್ನುತಿಹರು', 'ಕುಲಕುಲ ಕುಲವೆಂದು ಹೊಡೆದಾಡದಿರಿ', 'ತೀರ್ಥವನು ಪಿಡಿದವರೆಲ್ಲ ತಿರುನಾಮಧಾರಿಗಳೆ', ಪುರಂದರದಾಸರ 'ತನುವ ನೀರೊಳಗದ್ದಿ ಫಲವೇನು', 'ನಗೆಯು ಬರುತಿದೆ ಎನಗೆ ನಗೆಯು ಬರುತಿದೆ', 'ನಾಡಮಾತು ಬೇಡ ನಾಲಿಗೆ', 'ನೆಚ್ಚನಯ್ಯಾ ಹರಿ ಮೆಚ್ಚನಯ್ಯಾ', 'ಮಲವ ತೊಳೆಯ ಬಲ್ಲರಲ್ಲದೆ ಮನವ ತೊಳೆಯಬಲ್ಲರೆ' ಮೊದಲಾದ ಕೀರ್ತನೆಗಳು ಬಾಹ್ಯಾಚಾರದ ಪೊಳ್ಳುತನವನ್ನು ಖಂಡಿಸುವಂತಹುದು. ಡಾಂಭಿಕತೆಯನ್ನೇ ಉಸಿರನ್ನಾಗಿಸಿಕೊಂಡ ಮಾನವನನ್ನು ಪ್ರಾಣೇಶವಿಠಲದಾಸರು 'ಕೆಡುಬ್ಯಾಡ ಕೆಡುಬ್ಯಾಡವೆಲಪ್ರಾಣಿ ಇನ್ನು ಬಿಡುನಿನ್ನ ದುರ್ಬುದ್ಧಿ ಕಡಿಗಾಣೀ' ಎನ್ನುವ ಮೂಲಕ ಬಿರುಸುನುಡಿಯನ್ನಾಡುತ್ತಾರೆ. ಕೇವಲ ಕರ್ಮಠವಾಗಿರುವ ಮನಕ್ಕೆ 'ಮನವೇ ಬರಿದೆ ಚಿಂತಿಸಲಿಬ್ಯಾಡಾ' ಎಂಬ ಮುಂಜಾಗ್ರತೆಯನ್ನು ಕಾಖಂಡಕಿ ಕೃಷ್ಣರಾಯರು ಸೂಚಿಸುತ್ತಾರೆ.

ಒಟ್ಟಿನಲ್ಲಿ ಡಾಂಭಿಕತೆಯನ್ನು ನಿರ್ಮೂಲನೆ ಮಾಡುವ, ಆ ಮೂಲಕವಾಗಿ ಸುಂದರ ಸಮಾಜವನ್ನು ಕಟ್ಟುವ ಕಲ್ಪನೆಯನ್ನು ಕೀರ್ತನದಾಸರು ಕಂಡುಕೊಳ್ಳುತ್ತಾರೆ. ಅದಕ್ಕಾಗಿ ವಿರಕ್ತಿಯೆಂಬ ಮಡಿಯುಟ್ಟುಕೊಳ್ಳುತ್ತಾರೆ. ದೇಹವನ್ನು ದೇವಾಲಯವನ್ನಾಗಿಸಿ, ಹರಿಸ್ಮರಣೆಯಿಂದ ದೈವಸಾಕ್ಷಾತ್ಕಾರಕ್ಕೊಳಗಾಗುತ್ತಾರೆ. ಹಾಗಾಗಿ ಅವರಿಗೆ ಗಾತ್ರವೆನಿಸುವ ಶರೀರವು ಇಲ್ಲಿ ಮಂದಿರವಾಗಿ ಪರಿಣಮಿಸುತ್ತದೆ. ಹೃದಯವು ಮಂಟಪವಾಗುತ್ತದೆ. ನೇತ್ರವು ದೀಪವಾಗಿ, ಹಸ್ತ ಚಾಮರವಾಗುತ್ತದೆ.

೩.೫ (ಇ) ಧರ್ಮಸಾಮರಸ್ಯ

ಹರಿದಾಸ ಆಂದೋಲನದ ಹೊಸ ಆಯಾಮವೆಂದರೆ ಧರ್ಮಸಾಮರಸ್ಯ. ಇಲ್ಲಿ ಧರ್ಮ, ಜಾತಿ ಭೇದ ಹಾಗೂ ಲಿಂಗಭೇದವನ್ನು ಅಳಿಸುವ ಪ್ರಯತ್ನವೊಂದು ಸಹಜವಾಗಿ ಮತ್ತು ಅರ್ಥಪೂರ್ಣವಾಗಿ ನಡೆದಿದೆ. ಇದಕ್ಕವರು ತಮ್ಮ ಸಂಚಾರಕ್ಷೇತ್ರವಾಗಿ ಕೇವಲ ಹಿಂದೂಸಮಾಜವನ್ನು ಸ್ವೀಕರಿಸದೆ, ಅನ್ಯಮತೀಯರ ನೆಲದಲ್ಲೂ ತಿರುಗಾಡಿದ್ದೇ ಇದಕ್ಕೆ ಕಾರಣ. ಈ ಮೂಲಕವಾಗಿ ಎರಡು ಮತಧರ್ಮಗಳ ಅಂತರವನ್ನು ಕಂಡುಕೊಂಡು ಪರಸ್ಪರವಾಗಿ ಆಯಾಯ ಸಮಾಜದ ಮುಸುರೆಯನ್ನು ತೊಳೆಯಲು ಮುಂದಾಗುತ್ತಾರೆ. ಅಲ್ಲದೆ ಪರಸ್ಪರ ಪ್ರೀತಿ, ಸೌಹಾರ್ದತೆಯನ್ನು ಪ್ರತಿಷ್ಠಾಪಿಸುವ ಕೆಲಸವನ್ನು ಮಾಡುತ್ತಾರೆ. ಈ ವಿಚಾರವನ್ನು ಗಮನಿಸಿದರೆ ನಮ್ಮ ನಾಡಿನ ದಾಸಸಂಸ್ಕೃತಿಯೊಂದು ಸಮನ್ವಯ ಸಂಸ್ಕೃತಿಯಾಗಿ ರೂಪುಗೊಳ್ಳುತ್ತದೆ.

ತುರುಕರು ಕರೆದರೆ ಉಣಬಹುದಣ್ಣ ।
ತುರುಕರು ಕರೆದರೆ ಅತೀ ಪುಣ್ಯವಯ್ಯಾ ॥
ತುರುಕರಿಂದ ಮುಟ್ಟು ಮುಡಿ ಬಿಟ್ಟು ಹೋಗೋದು
ತುರುಕರಿಂದಲಿ ಎಂಜಲು ಹೋಗೋದು ।
ತುರುಕರ ಕೂದಲು ತುರುಬಿಗೆ ಸುತ್ತಿದರೆ
ಎಣಿಕೆಯಿಲ್ಲದೆ ಮುತ್ತೈದೆಯರಣ್ಣ ॥ –ಪುರಂದರದಾಸರು.

ದಾಸಸಾಹಿತ್ಯದ ವಿಮರ್ಶೆಯಲ್ಲಿ 'ತುರುಕರು' ಎಂಬ ಪದಕ್ಕೆ 'ಹಸುಕರು' ಎಂಬ ಶ್ಲೇಷಾರ್ಥವನ್ನು ಪ್ರಯೋಗಿಸಿದ ಉಲ್ಲೇಖಗಳಿವೆ.[೧೩] ಮುಖ್ಯವಾಗಿ ಗಮನಿಸಬೇಕಾದುದೇನೆಂದರೆ, ಇಂತಹ ಕೀರ್ತನೆಗಳು ಅಂದಿನ ಸಾಮಾಜಿಕ ಬದುಕಿಗೆ ಹೊಸ ವಿಸ್ತಾರವನ್ನು ತಂದುಕೊಟ್ಟಿತು. ಸಮಾಜದಲ್ಲಿರುವ ಅಲ್ಪಸಂಖ್ಯಾತರನ್ನು ಪ್ರೋತ್ಸಾಹಿಸುವ ಗುಣಧರ್ಮವೊಂದು ಹಲವು ಶತಮಾನಗಳ ಪೂರ್ವದಲ್ಲಿಯೇ ಇತ್ತೆಂಬುದನ್ನು ಮೆಚ್ಚಬೇಕಾಗುತ್ತದೆ. ಪುರಂದರದಾಸರ ಈ ಕೀರ್ತನಾಪ್ರಯೋಗಗಳು ಇನ್ನಿತರ ದಾಸರಲ್ಲೂ ಪ್ರಭಾವ ಬೀರಿದ್ದಿರಬೇಕು. ಆದುದರಿಂದಲೇ ಇವರ ನಂತರದಲ್ಲಿ ಅನ್ಯಧರ್ಮ ಸಾಮರಸ್ಯದ ಕೀರ್ತನೆಗಳು ಇನ್ನಿತರರಲ್ಲೂ ಕಾಣಲುಸಾಧ್ಯವಾಯಿತು. ಕನಕದಾಸರಂತೂ ಸ್ವಸ್ಥಸಮಾಜಕ್ಕಾಗಿ 'ತುರುಕರಿಂದಲೇ ಜಗಕೆ ಬೈಗುಬೆಳಗು', 'ತುರುಕರಾಪಾಲ ಶ್ರೀಗೋಪಾಲಕೃಷ್ಣ' ಎನ್ನುವ ಹೇಳಿಕೆಯನ್ನು ನೀಡುವಲ್ಲಿಯ ತನಕ ಮುಂದುವರಿಯುತ್ತಾರೆ. ಅವರ ಪ್ರಕಾರ,

ತುರುಕರಿಲ್ಲದ ಊರೊಳು ಇರಬಾರದು ।
ತುರುಕರು ಜಗದೊಳು ಪರಮ ಶ್ರೇಷ್ಠರು ಕಾಣೋ ॥
ತುರುಕರಾ ನಿಂದಕನು ಪರಮ ದುಃಖಿಯು ಸಿದ್ಧ ।
ತುರುಕರ ಅರ್ಚಿಸಿದವಗೆ ಪರಮ ಪದವಿ ॥ –ಪುರಂದರದಾಸರು

ಈ ಎಲ್ಲಾ ರಚನೆಗಳು ಮೇಲುನೋಟಕ್ಕೆ ಹೊಗಳಿಕೆಯಂತೆ ಕಂಡು ಬಂದರೂ ಅದರ ಆಂತರಿಕ ತೀರ್ಮಾನ ಸಾಮಾಜಿಕ ಕಲಹೋಚ್ಚಾಟನೆ. ಆ ಮೂಲಕವಾಗಿ ಶಾಂತಿಸ್ಥಾಪನೆ. ಏನೇ ಇದ್ದರೂ ಆ ಕಾಲದಲ್ಲಿ ದಾಸಪಂಥವೊಂದು ಈ ರೀತಿಯ ಸುಧಾರಣೆಯನ್ನು ಬಯಸಿ, ಸಾಮರಸ್ಯವನ್ನು ಮೂಡಿಸಿದುದು ನಿಜಕ್ಕೂ ದೊಡ್ಡ ಸಾಧನೆಯೆನ್ನಬೇಕು.

೩.೫ (ಈ) ಗೂಢಾರ್ಥಪ್ರೇರಿತ ಕೀರ್ತನೆಗಳು

ವೇದಕಾಲದಲ್ಲಿ ಪ್ರಾರಂಭವಾದ ತತ್ವಜಿಜ್ಞಾಸೆಗೆ ಮೂಲವೇದಿಕೆಯೊಂದು ನಿರ್ಮಾಣವಾದುದು ಭರತ ಭೂಮಿಯಲ್ಲಿ. ಅವೈದಿಕವಾಗಿ ಬೆಳೆದುಬಂದ ಬೌದ್ಧ, ಜೈನ ಇತ್ಯಾದಿ ಧರ್ಮಗಳು ಈಶತ್ವದ ನೆಲೆಯನ್ನು ಹುಡುಕುವ ಬದಲು ಸಾಮಾಜಿಕಬದುಕಿನ ಕುರಿತು ಚಿಂತನೆ ನಡೆಸಿದರೂ ಅದು ತಾತ್ವಿಕನೆಲೆಗಟ್ಟನ್ನು ಮೀರಿರಲಿಲ್ಲ. ಕಠಿಣವಾದ ತಾತ್ವಿಕವಿಚಾರವು ಜನಸಾಮಾನ್ಯನ ತಿಳುವಳಿಕೆಗೆ ಸರಳಭಾಷೆಯಲ್ಲಿ ಹೆಚ್ಚು ಗ್ರಾಸವಾಗುತ್ತದೆಂಬ ಸೂತ್ರವನ್ನು ಕಂಡುಕೊಂಡವರು ಮೊದಲಿಗೆ ಜೈನರು. ಅನಂತರದಲ್ಲಿ ಕನ್ನಡನೆಲದಲ್ಲಿ ಈ ಸರಳೀಕೃತಮಾರ್ಗವನ್ನು ಅನುಸರಿಸಿದವರು ವೀರಶೈವರು ಮತ್ತು ದಾಸಪಂಥದವರು. ಇವರಿಂದ ವೇದೋಪನಿಷತ್ತಿನ ಕಠಿಣವಿಚಾರಗಳು ಪಾಮರರಿಗಾಗಿ ಪ್ರತಿಪಾದಿತವಾಯಿತು. ದಾಸಪಂಥವು ದ್ವೈತಸಿದ್ಧಾಂತವನ್ನೇ ತನ್ನ ಶರೀರವನ್ನಾಗಿಸಿಕೊಂಡಿತು. ಆದರೂ ಆತ್ಮವನ್ನು ಮಾತ್ರ ವಿಶ್ವಮಾನ್ಯವನ್ನಾಗಿಸಿತು. ಹೊರನೋಟದಲ್ಲಿ ಅಸಂಬದ್ಧವಾಗಿ ತೋರಿದ ರಚನೆಗಳೂ ಗೂಢಾರ್ಥದಲ್ಲಿ ರಮ್ಯತೆಯನ್ನು ಕಂಡುಕೊಂಡವು. ಅಂತಹ ಕೆಲವೇಕೆಲವು ಉದಾಹರಣೆಗಳನ್ನು ಇಲ್ಲಿ ಬಿಡಿಸುವ ಪ್ರಯತ್ನಮಾಡಿದ್ದೇನೆ.

ಕೀರ್ತನೆ : ೧. (ಪುರಂದರದಾಸರು)

ಜಯ ಜಯವದೆ ಈ ಮನೆತನಕೆ
ಬಿಡು ಬಿಡು ಬಿಡು ಬಿಡು ಮನದ ಸಂಶಯವ ॥

ಶುಕನೆಂಬಕ್ಕಿ ಹೇಳುತದಪ್ಪ	–	ಭಾಗವತವನ್ನು ಹೇಳಿದ ಶುಕ ಮುನಿ
ಜಗವೆಂಬೋ ಗಿಡ ಹುಟ್ಟೈತಣ್ಣ	–	ಸಂಸಾರ ಚಿತ್ರಣ (ಅಥರ್ವ ವೇದದ ದ್ವಾಸುಪರ್ಣಾ..... ತತ್ವ ಚಿತ್ರಣ)
ಹಣ್ಣುಗಳೆರಡೂ ಐದಾವಪ್ಪ	–	ಈಶ ಮತ್ತು ಜೀವ
ಮೂರು ಬುಡದ ಗಿಡ ಕೇಳಣ್ಣ	–	ತ್ರಿಗುಣ (ಸತ್ತ್ವ, ರಜಸ್ಸು, ತಮಸ್ಸು)
ಹಣ್ಣಿನೊಳಗೆ ನಾಲ್ಕು ರಸವು	–	ಜೀವಭಿಮುಖವಾದ ಈಶ ಗುಣ (ಪ್ರೇರಕ ,ನಿಯಾಮಕ, ಸಾಕ್ಷಿಕ, ಉದ್ಧಾರಕ)
ಐದು ದೊಡ್ಡ ಹರೆ ಕಾಣಪ	–	ಪಂಚೇಂದ್ರಿಯಗಳು ಅಥವಾ ಪಂಚ ಭೂತಗಳು.

ಆರು ಬಗೆಯ ಸ್ವರೂಪ ಕೇಳು – ಅರಿಷಡ್ವರ್ಗ
ಏಳು ಬಗೆಯ ತೊಗಟುಂಟಣ್ಣ – ಸಪ್ತವ್ಯಸನ
ಸಣ್ಣ ಗರಿಗಳು ಎಂಟೈದಾವೆ – ಅಷ್ಟ ಪ್ರಕೃತಿ
ಅಕ್ಷವು ಇದಕ್ಕೆ ಒಂಬತ್ತೈತೆ – ಅಕ್ಷ ಒಂಬತ್ತು = ನವಾವರಣ.
ಎಲೆಗಳು ಹತ್ತು ಐದಾವಪ್ಪ – ದಶ ಇಂದ್ರಿಯಗಳು.
ಒಂದೇ ಹಕ್ಕಿ ಹಣ್ ತಿಂದೈತೆ – ಒಂದೇ ಹಕ್ಕಿ = ಜೀವ
ಮತ್ತೊಂದ್ಹಕ್ಕಿ ನೋಡುತದಪ್ಪ – ನೋಡುವ ಹಕ್ಕಿ = ಈಶ
ಹಣ್ ತಿಂದ್ಹಕ್ಕಿ ಬಡವಾಗೈತೆ – ಲೌಕಿಕವಾದರೂ ಜೀವ ಬಡ
ತಿನ್ನದ ಹಕ್ಕಿ ಬಲಿತೈತಣ್ಣ – ತಿನ್ನದ ಅಲೌಕಿಕ ಶಕ್ತಿ = ಈಶ ಶಕ್ತಿ
ಸುಳ್ಳಲ್ಲ ನೀ ಕೇಳೋ ತಮ್ಮ
ದ್ವಾ ಸುಪರ್ಣದ ಶ್ರುತಿಯಲ್ಲೈತೆ – ಅಥರ್ವ ಶ್ರುತಿಯ ಉಪನಿಷತ್ತು.
ಒಂದೇ ಕುಲದ ಹಕ್ಕ್ಯಲ್ಲಣ್ಣ – ಎರಡಕ್ಕೂ ಒಂದೇ ಕುಲವಲ್ಲ
(ಈಶ–ಸ್ವತಂತ್ರ, ಜೀವ–ಅಸ್ವತಂತ್ರ)
ಒಂದೇ ಕುಲವೆಂದು ತಿಳಿಯಲು ಬೇಡ
ತಿಳಿದರೆ ನಿನಗೆ ಕೇಡಾದೀತು – ಜೀವವನ್ನು ಸ್ವತಂತ್ರವೆಂದು ತಿಳಿದರೆ ನಿನಗೆ ಕೇಡಾದೀತು.
ಹಳೇ ವಸ್ತ್ರವ ಬಿಸಾಡಣ್ಣ – ಭಗವದ್ಗೀತೆಯ 'ವಾಸಾಂಸಿ ಜೀಣಾನಿ ಯಥಾ ವಿಹಾಯ'
ಎಂಬ ಶ್ಲೋಕಾಧಾರ. ವಸ್ತ್ರ = ದೇಹ
ಹೊಸ ವಸ್ತ್ರವ ನಿನಗೆ ದೇವರು ಕೊಟ್ಟಾನು
ಹಕ್ಕಿಯರಸ ಆಡಿದ ಮಾತು – ಈಶ ಜೀವನಿಗೆ ಒಡೆಯ.
ಉತ್ತಮ ಮಾರ್ಗವ ಹಿಡಿಯೋ ತಮ್ಮ
ಮಾರ್ಗವ ಕಟ್ಟಿ ಸುಲಿಯುತ್ತಾರೆ
ಗಿರಿ ದುರ್ಗಗಳು ಐದಾವಪ್ಪ – ಐದು ಇಂದ್ರಿಯ ವಿಷಯ ಸುಖಕ್ಕೆ ಸಂಬಂಧಿಸಿದುದು.
ಮಾರನೆಂಬ ಕಳ್ಳೈದಾನೆ – ಮನಸ್ಸಿನಲ್ಲಿ ಹುಟ್ಟುವ ಬಯಕೆಗಳು.
ಸಮೀರನಾದರೆ ಹೊರಟ್ಹೋಗ್ತಾನೆ – ಹನೂಮಂತನೆಂಬರ್ಥವಿದ್ದರೂ ಭಕ್ತಿಯಲ್ಲಿ
ಐಕ್ಯನಾದವ ಎಂದರ್ಥ.
ಪುರಂದರನಾದರೆ ಬಿಡುವ್ವೋನಲ್ಲ – ಪುರಂಧರ = ಇಂದ್ರ. ಭೋಗ ಭೂಮಿಯಲ್ಲಿರುವವ.
ಸುರಜ್ಯೇಷ್ಠನ ಸಂಗತಿ ಹಿಡಿಯೋ – ಸುರ = ಶ್ರೀಹರಿ.
ಕಣ್ಣು ಮೂಗು ಕಿವಿ ನಾಲಗೆಯಪ್ಪ – ಪಂಚೇಂದ್ರಿಯ ಸುಖವು ಭೋಗದಾಸೆಯನ್ನು ಹೆಚ್ಚಿಸಿ,
ಹಿಡಿತ ತಪ್ಪಿಸಿ,
ಒಂದೊಂದೊಬ್ಬರ ಕೊಂದಾದವಣ್ಣ – ಒಂದೊಂದು ದೇಹ ಮತ್ತು ಆತ್ಮನನ್ನು ಹಾಳು ಮಾಡುತ್ತವೆ.
ಕುರಂಗ ಮಾತಂಗ ಪತಂಗ ಕೇಳೋ – ಕುರಂಗ – ಜಿಂಕೆ, ಮಾತಂಗ – ಗಾಳಿಗೆ,
ಪತಂಗ – ರೂಪಕ್ಕೆ,
ಭೃಂಗ ಮೀನಾ ಹತವಾದವಣ್ಣ ಮೀನು – ಗಾಳಕ್ಕೆ ಮರುಳಾಗಿ ಪ್ರಾಣ ಬಿಡುತ್ತವೆ.
ಜ್ಞಾನ ಭಕ್ತಿಯೆಂಬ ಮಾರ್ಗವು ಎರಡು
ದೊಡ್ಡ ಮಾರ್ಗವ ಹಿಡಿಬೇಕಣ್ಣಾ

ದೊಡ್ಡ ಸಂಗತಿ ಬರುವ್ರೋ ತನಕ
ಎರಡೂ ಮುನೆಯಲ್ಲಿರಬೇಕಣ್ಣಾ
ದಾನದ ಕೈಯ ತೋರಿಸಬೇಕು – ಕೈ ಎತ್ತಿ ದಾನ ಮಾಡಬೇಕು.
ಅದರಿಂದ ನದಿಯ ದಾಟುತಿಯಪ್ಪ – ಭವ ಸಾಗರ.
ನಿನ್ನ ಯೋಗ್ಯತೆ ತಿಳಿದಮೇಲೆ
ಪುರಂದರವಿಠಲ ಸ್ಥಳ ಕೊಟ್ಟಾನು ॥ – ವೈಕುಂಠ ಪದವಿ.

ಕೀರ್ತನೆ : ೨. (ಪುರಂದರದಾಸರು)

ಪಿಂಡಾಂಡದೊಳಗಣ ಗಂಡನ ಕಾಣದೆ
ಮುಂಡೆಯರಾದರು ಪಂಡಿತರೆಲ್ಲ ॥ ಪ ॥

ಪಿಂಡಾಂಡ = ಜೀವಗಳ ಕರ್ಮಭೋಗಕ್ಕೆ ಸಿದ್ಧವಾದ ಶರೀರ ಹಾಗೂ ಇಂದ್ರಿಯಗಳು, ಮನಸ್ಸು, ಪಂಚಪ್ರಾಣಗಳು, ಪಂಚ ಭೂತಗಳು. ಇವುಗಳಿಂದ ಕೂಡಿದ ಸ್ಥೂಲ ಮತ್ತು ಸೂಕ್ಷ್ಮಶರೀರದ ಜಗತ್ತನ್ನು ಬ್ರಹ್ಮಾಂಡವೆಂದೂ, ಶರೀರವನ್ನು ಪಿಂಡಾಂಡವೆಂದೂ ಕರೆಯಬಹುದು. ಗಂಡನ ಕಾಣದೆ = ಪಿಂಡಾಂಡದೊಳಗಿರುವ ಬಿಂಬರೂಪೀ ಪರಮಾತ್ಮನನ್ನು ಕಾಣದೆ; ಮುಂಡೆಯರಾದರು = ಶಾಸ್ತ್ರಜ್ಞರಾಗಿ ಸಾಧನೆ ಮಾಡದೆ ದಿಕ್ಕುಗೆಟ್ಟವರು, ಪಂಡಿತರು.

ಆಧಾರ ಮೊದಲಾದ ಆರು ಚಕ್ರವ ಮಿರಿ
ನಾದ ಬಿಂದು ಕಳೆಯುಳಿದು ಬಳಿಕ ।
ಶೋಧಿಸಿ ಸುಧೆಯ ಪ್ರಸಾದವ ನುಣ್ಣದೆ
ಓದುತ ಮನದೊಳು ಒಂದನು ತಿಳಿಯದೆ ॥ ೧ ॥

ಆರು ಚಕ್ರಾಧಾರ=೧) ಮೂಲಧಾರ, ೨) ಸ್ವಾಧಿಷ್ಠಾನ, ೩) ಮಣಿಪೂರ, ೪) ಅನಾಹತ, ೫)ವಿಶುದ್ಧ ೬) ಆಜ್ಞಾ. ನಾದಬಿಂದು=ಪರಮಾತ್ಮನಾದ ಶಕ್ತಿಯು (ಪ್ರಕೃತಿ) ಹೊರಹೊಮ್ಮಿ ಪರನಾದವಾಗಿ (ಪರಬಿಂದು) ಮುಂದೆ ಅಪರಬಿಂದು (ಶಿವ), ಅಪರನಾದ ಮತ್ತು ಬೀಜ (ಶಕ್ತಿ) ವಾಗಿ ಮಾರ್ಪಾಡಾಗುವುದು. ಬೀಜರೂಪದಲ್ಲಿರುವ ಶಕ್ತಿಯೇ ಶಬ್ದ, ಬ್ರಹ್ಮ, ಪರಾಶಕ್ತಿ, ಕುಂಡಲಿನಿಯ ಆಕಾರದಲ್ಲಿರುತ್ತದೆ. ಇದನ್ನೇ ಏಳುಕಲೆಗಳು ಎನ್ನುತ್ತಾರೆ. ಸುಧೆಯ ಪ್ರಸಾದ= ಕುಂಡಲಿನಿಯು ಜಾಗೃತವಾದಾಗ ಸಹಸ್ರಾರದಿಂದ ಸುಧಾಶ್ರವಣವಾಗುವುದೇ 'ಅಮೃತ' ವೆನಿಸುವುದು.

ವಾದದೊಳಗೆ ಸುನಾದ ಓಂಕಾರದಿ
ಪದವ ಬಿತ್ತಿ ಪರಿಣಾಮಿಯಾಗದೆ
ವೇದಾಂತ ರೂಪ ತದ್ರೂಪ ನಾಲಗೆಯಲಿ
ವಾದಿಸಿ ಮನದೊಳು ಒಂದನು ಅರಿಯದೆ ॥ ೨ ॥

'ಪ್ರಣವ ಉದ್ಗೀಥ' ಇದರ ಉಪಾಸನೆಯಿಂದ ಶಬ್ದಬ್ರಹ್ಮನನ್ನು ನೆಲೆಗೊಳಿಸಿ, ವಿಕಾರವನ್ನು ಹೊಂದದೆ ಚಿತ್ತಸ್ಥೈರ್ಯದಿಂದ ಪಾಂಡಿತ್ಯವನ್ನು ಪಡೆಯಬೇಕು. ಆದರೆ ಕೆಲವರು ಏನೂ ತಿಳಿಯದೆ ವೇದಂತರೂಪವನ್ನು

ಕಂಠಪಾಠ ಮಾಡಿಕೊಳ್ಳುತ್ತರೆಯೇ ಹೊರತು ಅರಿತುಕೊಳ್ಳುವುದಿಲ್ಲ. ಇದನ್ನು 'ಅಸಂಪ್ರಜ್ಞಾತ ಸಮಾಧಿ' ಎಂದು ಕರೆಯುತ್ತಾರೆ.

ನವನಾಳ ಮಧ್ಯದಿ ಪವನ ಸುತ್ತಿದ್ದು ಫಣಿ
ಶಿವನ ತ್ರಿಪುಟ ಸ್ಥಿತಿ ಸ್ಥಿರವಾಗಿದೆ. ।
ಭವರೋಗ ವೈದ್ಯನ ಧ್ಯಾನವ ಮಾಡದೆ
ಶವುರಿ ಶ್ರೀಪುರಂದರ ವಿಠಲನ ಸ್ಮರಿಸದೆ ॥ ೩ ॥

ನವನಾಳ ಮಧ್ಯದಿ = ಬ್ರಹ್ಮರಂಧ್ರ, ಮಸ್ತಕ, ಲಲಾಟ, ಭ್ರೂಮಧ್ಯ, ಕಂಠ, ಹೃದಯ, ನಾಭಿ, ಸ್ವಾಧಿಷ್ಠಾನ ಮತ್ತು ತ್ರಿಪುರ ಎಂಬ ಒಂಬತ್ತು ಆವರಣಗಳು ; ಪವನ ಸುತ್ತಿದ್ದು = ಕುಂಡಲಿನೀ ; ಫಣಿ ಶಿವನ ತ್ರಿಪುಟ ಸ್ಥಿತಿ = ಸತ್ + ಚಿತ್ + ಆನಂದ (ತ್ರಿಪಟಿ) ಗಳು ಒಟ್ಟಾಗಿರುವ ಸ್ಥಿತಿ. ಅಖಂಡ ಬ್ರಹ್ಮ, ಸೋಮ, ಸೂರ್ಯ, ಅಗ್ನಿಗಳೆಂಬ ಖಂಡಗಳು ಕೂಡಿ 'ಶಿವ'ವೆಂದು ತಂತ್ರಶಾಸ್ತ್ರದ ಒಕ್ಕಣೆ. ಜ್ಞಾನ, ಜ್ಞೇಯ, ಜ್ಞಾತೃ – ಇವು ಸಾಮರಸ್ಯದ ತ್ರಿಪುಟಿಗಳೆಂದು ಕರೆಯುತ್ತಾರೆ.

ಕೀರ್ತನೆ : ೩. (ಹೆಳವನಕಟ್ಟೆ ಗಿರಿಯಮ್ಮ)

ಎಲ್ಲಿ ಗ್ಹೋಗಲ್ಲೇನು ಸುಖ ಇಲ್ಲೆ ಪಾಡ್ಯೆತಿ ।
ಒಲ್ಲಿದ ಅರಮನೆ ಒಂಬತ್ತು ಕದವಿನ ಖಿಲ್ಲೆವು ಪಾಡ್ಯೆತಿ ॥ ಅ.ಪ.॥

ಜೀವ ಬಯಸುವ ಶಾಂತಿಯು ಹೊರಗೆ ಸಿಗುವುದಿಲ್ಲ, ಅದು ಮನಸ್ಸಿಗೆ ಸಂಬಂಧಿಸಿದುದೆಂಬ ಕಲ್ಪನೆ. ಒಲ್ಲಿದ ಅರಮನೆ ಒಂಬತ್ತು ಕದವು= ಒಂಬತ್ತು ದ್ವಾರಗಳಿಂದ ಕೂಡಿದ ಶರೀರವೆಂಬ ಕೋಟೆ.

ಗಡಿ ಬಿಡಿವೆಂಬೋ ಮನೆಯ ಒಳಗೆ ಗಸ್ತಿ ಪಾರ್‍ಯೆತಿ ।
ಎಪ್ಪತ್ತೆರಡು ಸಾವಿರ ಜನ ಜಪ್ಪಿಸಿ ಕುಂತ್ಯೆತಿ ॥ ೧ ॥

ಗಡಿಬಿಡಿಯಮನೆ = ಪ್ರಕ್ಷುಬ್ಧ ಮನಸ್ಸು ; ಒಳಗೆ ಗಸ್ತು = ಮನಸ್ಸಿನ ಆಲೋಚನಾ ಮಿತಿ, ಎಪ್ಪತ್ತೆರಡು ಸಾವಿರ = ಇಡ, ಪಿಂಗಳಾದಿ ೩ ಸಾವಿರ ಜೊತೆ ನಾಡಿಗಳು ;

ಆರು ಮಂದಿ ನಮ್ಮನ ಅಪ್ಪಿಕೊಳ್ಳಾಕ ಬರತಾರ್‍ರಿ ।
ಪೋರರಂತೆ ನೀವು ಅವರ ಕೈಗೆ ಸಿಗಬ್ಯಾಡ್ರಿ ॥ ೨ ॥

ಆರು ಮಂದಿ = ಅರಿಷಡ್ವರ್ಗಗಳು.

ಐದು ಮಂದಿ ಕೂಡಿ ಈ ಮನಿಯ ಮಾಡ್ಯಾರ್‍ರಿ ।
ಐದು ಮುಖದವನ ತಂದೆಯ ತಂದೆಯ ಮರಿಬ್ಯಾಡ್ರಿ ॥ ೩ ॥

ಐದು ಮಂದಿ = ಪಂಚೇಂದ್ರಿಯಗಳು ; ಐದು ಮುಖದವನ ತಂದೆಯ ತಂದೆ = ಈಶ್ವರನ ತಂದೆಯ ತಂದೆ ವಿಷ್ಣು.

ಹದಿನಾರು ಮಂದಿ ಕೂಡಿ ಮನಿಯ ಕಟ್ಟಾರ್ರಿ ।
ಅದರೊಳಗೆ ಎಂಟು ದಿವ್ಯ ಕಂಬ ಹೊಡ್ಯಾರ್ರಿ ॥ ೪ ॥

ಹದಿನಾರು ಮಂದಿ = ಪಂಚಭೂತ + ಪಂಚೇಂದ್ರಿಯ + ಪಂಚತನ್ಮಾತ್ರ (ರಸ,ಪ್ರಾಣ,ಶಬ್ದ,ರೂಪ,ಸ್ಪರ್ಶ) + ಮನಸ್ಸು= ೧೬. ಅದರೊಳಗೆ ಎಂಟು ದಿವ್ಯಕಂಬ = ಅಣಿಮಾದಿ ಅಷ್ಟ ಸಿದ್ಧಿಗಳು.

ಎಂಟು ಕಂಬದ ಮನಿಯ ಒಳಗೆ ಒಬ್ಬ ಕುಳಿತಾನ್ರಿ ।
ತುಂಟನಾಗಿ ಜಗದ ಜನರ ಬಾಳ್ವೆ ನಡೆಸ್ಯಾನ್ರಿ ॥ ೫ ॥

ಎಂಟು ಕಂಬದ ಮನಿಯೊಳಗೆ ಒಬ್ಬ = ಜೀವಾತ್ಮ .

ಧರಣೆಯೊಳಗೆ ಶ್ರೇಷ್ಠನಾಗಿ ಮತ್ತ ಮೆರಿತಾನ್ರಿ ।
ಮರೆಯ ಬೇಡ್ರಿ ಹೆಳವನ ಕಟ್ಟೆ ರಂಗನ ನುಡಿಯನ್ರಿ ॥ ೬ ॥

ಧರಣೆಯೊಳಾಗೆ ಶ್ರೇಷ್ಠನಾಗಿ ಮೆರೆವ = ಪರಮಾತ್ಮ.

ಹೀಗೆ ತತ್ವಾಧಾರಿತ ಕೀರ್ತನೆಗಳ ಉದ್ದೇಶವೇ ಸಮಾಜದ ಜನಜೀವನವನ್ನು ಹಸನುಗೊಳಿಸುವುದು. ಇಂತಹ ರಚನೆಗಳಿಂದ ಮಾನವನು ತನ್ನ ಅಂತರಂಗದಲ್ಲಿ ಅರಿವನ್ನು ಮೂಡಿಸಿಕೊಂಡು ಅನುಭಾವದ ಕಡೆಗೆ ತಿರುಗುತ್ತಾನೆ ಎನ್ನುವುದು ಕೀರ್ತನಕಾರರ ಇಂಗಿತ. ಈ ಕಲ್ಪನೆಯಿಂದಲೇ ಕಾಖಂಡಕಿ ಕೃಷ್ಣರಾಯರೂ ಕೂಡ,

ಸಂತೆಯ ನೋಡಲು ಬಂದವನಾ.......
ಭ್ರಾಂತತನವ ನೋಡಿ ಮಾನವನಾ ॥
ಇಂತಿಹ ನರದೇಹ ಪ್ಯಾಟೆಯ ಸಡಗರ
ಪ್ರಾಂತವ ಕಾಣದೆ ಮರುಳಾಗಿ ।
ನಿಂತಲ್ಲಿ ನಿಲ್ಲದೆ ನೋಡುತ ತಿರುಗುತ
ಕಂಥಿಯ ಕಳೆದನು ಹೆಗಲಿನ ॥ – ಕಾಖಂಡಕಿ ಕೃಷ್ಣರಾಯರು

ಎನ್ನುವ ಮೂಲಕ ಪರಿಪರಿ ವಾಸನೆಕಾರರ ವಿಷಯದ ಸರಕಿಗೆ ತಾತ್ವಿಕವಾದ ಕಾವನ್ನು ಕೊಡುತ್ತಾರೆ. ಒಟ್ಟಿನಲ್ಲಿ ಇಂತಹ ಮಾದರಿಗಳಲ್ಲಿ ಪದಪ್ರಾಸದ ಸೊಗಸು, ಕಲ್ಪಿತಚಾತುರ್ಯ, ಜನಪದಸೊಗಡು ಮತ್ತು ಅನುಭಾವದ ಆಳಅಗಲವು ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚುಮಾಡುತ್ತದೆ. ಮುಖ್ಯವಾಗಿ ವ್ಯಾವಹಾರಿಕ ಭಾಷೆಯಿಂದಲೇ ಜನತೆಗೆ ತಾತ್ತ್ವಿಕತೆಯನ್ನು ಉಪದೇಶಿಸಬೇಕೆಂಬ ದಾಸಕಲ್ಪನೆಯು ಬೌದ್ಧಿಕಮಾರ್ಗದಲ್ಲಿದ್ದ ಜಿಜ್ಞಾಸುಗಳಿಗೆ ಒಳ್ಳೆಯದೇ ಆಯಿತು. ಮುಖ್ಯವಾಗಿ ಹೇಳಬೇಕೆಂದರೆ, ದ್ವೈತ–ಅದ್ವೈತ–ವಿಶಿಷ್ಟಾದ್ವೈತಗಳೆಂಬ ತತ್ತ್ವತ್ರಯಗಳ ಆಂತರಿಕ ಕಲಹವು ಏನೇ ಇದ್ದರೂ ದಾಸಪಂಥವೊಂದು ಹಿಂದೂಧರ್ಮವನ್ನು ಜ್ಞಾಪಿಸಿ, ಜನಜಾಗೃತಿಯನ್ನುಂಟು ಮಾಡಿದ್ದಂತೂ ಸತ್ಯ. ಅವರು ಸ್ವೀಕರಿಸಿಕೊಂಡ ಕನ್ನಡಭಾಷಾಪ್ರೇಮ, ಸಂಗೀತಶಾಸ್ತ್ರೋದ್ಧಾರ, ಮತವೈರಪರಿಹಾರ, ಪಂಚಮರಲ್ಲಿ ಸಹಾನುಭೂತಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಕನ್ನಡಸಾಹಿತ್ಯಕ್ಕೆ ಅವರ ಕೊಡುಗೆ ಸ್ಮರಣೀಯವಾದುದು.

೩.೬ ದಾಸಸಾಹಿತ್ಯ ಮತ್ತು ಕನ್ನಡ ಪ್ರೇಮ

ದಾಸರು ತಮ್ಮ ಕೀರ್ತನಾಸಾಹಿತ್ಯದಲ್ಲಿ ಧಾರ್ಮಿಕ ಮೂಲಭೂತವಾದಿಗಳ ಕಿಲುಬನ್ನು ತೊಳೆಯುವ ಕಾರ್ಯ ಮಾಡಿದ್ದರೂ ಆ ಸಾಹಿತ್ಯನಿರ್ಮಿತಿಯಲ್ಲಿ ಅವರ ಭಾಷಾಪ್ರೇಮವು ಎದ್ದುತೋರುತ್ತದೆ. ಶ್ರೀಪಾದರಾಯರು, ವ್ಯಾಸರಾಯರು, ವಾದಿರಾಜರು, ರಾಘವೇಂದ್ರತೀರ್ಥರು ಮೊದಲಾದವರುಗಳು ಸಂಸ್ಕೃತ ಪಾಂಡಿತ್ಯವನ್ನು ಪಡೆದು ಮಠಕೇಂದ್ರಗಳಲ್ಲಿ 'ಸರ್ವಜ್ಞಪೀಠ'ವನ್ನು ಅಲಂಕರಿಸಿದವರು. ಆದರೂ ಅವರೆಲ್ಲರ ಮನಸ್ಸಿನಲ್ಲಿ ಕನ್ನಡದ ಕಂಪು ಪಸರಿಸಿದ್ದು ವಿಶೇಷ.

ಶ್ರೀಪಾದರಾಯರಂತೂ ಕನ್ನಡಸಂಸ್ಕೃತಿಗಾಗಿ, ಕನ್ನಡಸಾಹಿತ್ಯದ ಉಳಿವಿಗಾಗಿ ದೇವಪೂಜಾಕಾಲದಲ್ಲಿ ಭಾಗವತರ ಮುಖದಿಂದ ದೇವರನಾಮಗಳನ್ನು ಹಾಡಿಸುತ್ತಿದ್ದುದು ಅವರ ಭಾಷಾಪ್ರೇಮವನ್ನು ತೋರಿಸುತ್ತದೆ. ಈ ಕ್ರಮಕ್ಕೆ ಆಗಿನ ಕಾಲದಲ್ಲಿ ವಿರೋಧಗಳು ಬಂದರೂ ಅದನ್ನು ಲೆಕ್ಕಿಸದೆ ಭಾಷಾಪ್ರೇಮದಿಂದ ಮಾಡಿದ ಸುಧಾರಣೆ ಮಾತ್ರ ಗಮನಾರ್ಹವಾದುದು. ಅಂದಿನ ಕಾಲದಲ್ಲಿ ಸ್ತ್ರೀಯರೂ, ಬಾಲಕರಾದಿಯಾಗಿ ಶ್ರೀಪಾದರಾಜರ ಕೀರ್ತನೆಗಳನ್ನು ನಿತ್ಯನಿಯಮವಾಗಿ ಪಠಿಸುವಂತೆ ಮಾಡಿದುದು ಒಂದುರೀತಿಯಲ್ಲಿ ಕನ್ನಡಕ್ರಾಂತಿಯೇ ಆಗಿತ್ತು. 'ಜಯಜಯ ಜಗತ್ರಾಣ ಜಗದೊಳಗೆ ಸುತ್ರಾಣ ನಿಖಿಳಗುಣ ಸದ್ಧಾಮ ಮಧ್ವನಾಮ'ಎನ್ನುವ ಮಧ್ವನಾಮದ ಕೀರ್ತನೆ, 'ತ್ರೇತೆಯಲಿ ರಘುಪತಿಯ ಸೇವೆ ಮಾಡುವೆನೆಂದು ವಾತಸುತ ಹನುಮಂತನೆಂದೆನಿಸಿದ' ಎನ್ನುವ ಮೂಲಕ ಮಾರುತಿ ಅವತಾರದ ಕೀರ್ತನೆ, 'ಆ ಭೀಮನೆನಿಸಿ ದ್ವಾಪರದಲಿ ಸೋಮಕುಲದಲಿ ಜನಿಸಿ ಪಾರ್ಥರೊಡನೆ... ಭೀಮವಿಕ್ರಮ ರಕ್ಕಸರನು ಮುರಿದಟ್ಟಿದ' ಎಂಬ ಭೀಮಾವತಾರದ ಕೀರ್ತನೆ, ಇವೆಲ್ಲವುಗಳು ಶ್ರೀಪಾದರಾಜರು ಯತಿಸ್ಥಾನದಲ್ಲಿದ್ದುಕೊಂಡು ದಾಸಸಾಹಿತ್ಯಕ್ಕೆ ಕೊಡಲ್ಪಟ್ಟ ಉತ್ತಮ ಉದಾಹರಣೆಗಳು.

ಅವರ ಕನ್ನಡಪ್ರೇಮವು ಹೆಚ್ಚಾಗಿ ಗೋಚರಿಸುವುದು ಅವರ ಕೀರ್ತನೆಗಳ ಪಂಚಭಾವಗಳಲ್ಲಿ. ಆ ಮೂಲಕವಾಗಿಯೇ ಭಕ್ತ ಹಾಗೂ ಭಗವಂತನ ಸಂಬಂಧವನ್ನು ವ್ಯಾಖ್ಯಾನಿಸಲು ಅವರು ಮುಂದಾಗುತ್ತಾರೆ.

ಸೊಂಪು ನೋಟದ ಚೆಲುವ ಸೋಗೆಗಣ್ಣಿಗೆ ಶರಣು ।
ಸಂಪಿಗೆಯ ಕುಸುಮ ಸಮ ನಾಸಿಕಕೆ ಶರಣು ।
ಗುಂಪು ರತ್ನದ ಕರ್ಣ ಕುಂಡಲಕೆ ಶರಣು ।
ಇಂಪು ದರ್ಪಣ ನಿಭ ಕಪೋಲಗಳಿಗೆ ಶರಣು ॥ -ಶ್ರೀಪಾದರಾಜರು

ಇಲ್ಲಿ ಭಕ್ತನು ದೇವನ ಲೀಲಾವಿನೋದಗಳಲ್ಲಿ ಅಚ್ಚರಿಗೊಳ್ಳುವ ಪರಿಯನ್ನು ಶಾಂತಭಾವದ ಮೂಲಕ ಸಂಭ್ರಮಿಸುತ್ತಾನೆ. ಅವನಿಗೆ ಭಗವಂತನನ್ನು ತಾನುಮಾತ್ರ ನೋಡಿದರೆ ಸಾಲದು. ಇತರರಿಗೂ ಆ ಯೋಗವೊಂದು ಲಭಿಸಬೇಕೆಂದು ಹಾತೊರೆಯುತ್ತಾನೆ. ಭಗವಂತನ ಧ್ಯಾನಕ್ಕಾಗಿ ಮನುಜಜನ್ಮವೇ ಹಿರಿದೆಂದು ಅವರ ಕಲ್ಪನೆ. ಹಾಗಾಗಿ ಅವರು ಭಗವಂತನ ದಾಸನಾಗುತ್ತಾರೆ. ದಾಸ್ಯಭಾವವನ್ನು ಪ್ರಕಟಿಸುತ್ತಾರೆ.

ಅನ್ನಂತ ಕಾಲದಲಿ ನಿನ್ನ ನಾನರಿಯದೆ ಭವಗಳಲ್ಲಿ ಬಂದೆನೋ
ಅನ್ನಂತ ಕಾಲದಲಿ ಅದಾವ ಪುಣ್ಯದಿಂದ ಬಂದು ಇಂದು

ನಿನ್ನವನೆನಿಸಿದೆ, ಅದಾವ ಪುಣ್ಯದಿಂದಲೆನ್ನ ಮನ
ನಿನ್ನಲ್ಲೆರಗಿತೋ, ನೋಯದಂತೆ
ಎನ್ನ ಪೊರೆದು ಪಾಲಿಸೋ.................. --ಶ್ರೀಪಾದರಾಜರು

ಎನ್ನುವಲ್ಲಿ ಬೇಡಿಕೆಯ ಆಳಗಲಗಳು ಅವರ ರಚನೆಗಳಲ್ಲಿ ಕಾಣುತ್ತವೆ. ಇಷ್ಟೇ ಅಲ್ಲದೆ ತಮ್ಮ ಉಗಾಭೋಗದಲ್ಲಿ, 'ಸರಕು ಒಪ್ಪಿಸಿದಮ್ಯಾಲೆ ಸುಂಕ ಉಂಟೇ ದೇವಾ'ಎಂದು ಭಗವಂತನನ್ನು ಲಘುವಾಗಿ ಟೀಕಿಸುವ, ಆತ ಒಲಿಯದಿದ್ದಾಗ ಸಖ್ಯಭಾವದಿಂದ ನಿಂದಿಸುವ ಪ್ರಯತ್ನವನ್ನು ಮಾಡುತ್ತಾರೆ. 'ಯಾಕೆ ಪುಟ್ಟಿಸಿದಿ ನೀ ಸಾಕಲಾರದೆ ಜಗದೇಕ ಕಾರಣಪುರುಷನೆ ಕೃಷ್ಣ......'ಎನ್ನುವ ರಚನೆಯು ಅವರು ತೋರಿಸುವ ಸಖ್ಯಭಾವಕ್ಕೊಂದು ಉತ್ತಮ ಉದಾಹರಣೆ. 'ನನ್ನ ಹೃದಯದಲ್ಲಿ ಬಂದು ತೆಪ್ಪನೆವಾಸ ಮಾಡುತ್ತೀಯೋ ಇಲ್ಲ ನಿನ್ನ ಆಟಗಳನ್ನೆಲ್ಲಾ ಲೋಕಕ್ಕೆ ಸಾರೆಲೋ.....'ಎಂಬಲ್ಲಿ ಸಖ್ಯತನದ ಸಹವಾಸದಲ್ಲಿ ಪರಮಾತ್ಮನಿಗೆ ಬೆದರಿಕೆಯನ್ನು ಒಡ್ಡುತ್ತಾರೆ.

ಇವರ 'ಭ್ರಮರಗೀತೆ'ಮಧುರಭಾವದ ಪ್ರದರ್ಶನಕೃತಿ. ಇಲ್ಲಿ ತೋರುವ ಹೃದಯಾಂತರಾಳದ ಪರಿಶುದ್ಧ ಪ್ರೇಮದಲ್ಲಿ ಆಳ್ವಾರರ ಪ್ರಭಾವ ಎದ್ದುತೋರುತ್ತದೆ. 'ಸದ್ದುಮಾಡಲು ಬೇಡವ್ವೋ, ನಿನ್ನ ಕಾಲಿಗೆಬಿದ್ದು ನಾ ಬೇಡಿಕೊಂಬೆನು'ಎಂಬಲ್ಲಿ ರಾತ್ರಿಯ ಕಳ್ಳತನದಲ್ಲಿ ಗೋಪಿಕೆಯಲ್ಲಿಗೆ ಬರುವ ಕೃಷ್ಣನ ಚಿತ್ರಣ, 'ಕೇಳಿದ್ಯಾ ಕೌತುಕ ಕೇಳಿದ್ಯಾ' ಎಂಬಲ್ಲಿ ಗೋಪಿಕೆಯರ ಕಳವಳ, 'ಮಾರನಯ್ಯನೆ ಕೇಳು ಅಲ್ಲಿರುತಿಹನಾರೇರು ಬಲುನಿಪುಣರೋ' ಎನ್ನುವ ಜೊತೆಗೆ, ಇಲ್ಲಿಯ ಗೋಪಿಯೊಬ್ಬಳು ಕೃಷ್ಣನ ವಿರಹದಿಂದ ನಡೆಯಲಾರಳು; ನುಡಿಯಲಾರಳು. ಆಕೆಯ ಮನದ ಕಾತರತೆಗೆ ಊಟವು ಸೇರದು. ನಿದ್ದೆಯು ಬೀಳದು. ಆದುದರಿಂದಲೇ ಆಕೆ 'ಹೆಣ್ಣುಜನುಮ ಸಾಕವ್ವಾ' ಎಂದು ಉದ್ಗರಿಸುತ್ತಾಳೆ.

ಎಲ್ಲಾ ಸಂಬಂಧಕ್ಕಿಂತಲೂ ತಾಯಿಮಗುವಿನ ಸಂಬಂಧವು ವಾತ್ಸಲ್ಯಭರಿತವಾದುದು. ಆದುದರಿಂದಲೇ ಶ್ರೀಪಾದರಾಜರು ತಮ್ಮನ್ನು ತಾವೇ ಯಶೋದೆಯ ಸ್ಥಾನದಲ್ಲಿ ಕಲ್ಪಿಸಿಕೊಂಡು ಕೃಷ್ಣನನ್ನು ಮುದ್ದಾಡುತ್ತಾರೆ. ಇಲ್ಲಿ ಆತನ ಬಗೆಗೆ ಆತಂಕವಿದೆ, ಶೃಂಗಾರದ ಉಪಚಾರವೂ ಇದೆ. ಎಲ್ಲಕ್ಕಿಂತ ಹೆಚ್ಚಾಗಿ, ಚಾಡಿಯನ್ನು ಹೇಳುವ ಗೋಪಿಕೆಯರ ಮುಂದೆ ಕೃಷ್ಣನನ್ನೇ ವಹಿಸಿಕೊಳ್ಳುವ ತಂತ್ರಗಾರಿಕೆಯಿದೆ. ಇಲ್ಲಿ ಯಶೋದೆಯು ಕೃಷ್ಣನನ್ನು ಕುರಿತು 'ಬೀದಿಗೆ ಹೋಗ ಬೇಡವ್ವೋ...' ಎಂದು ಹಲುಬುತ್ತಾಳೆ. 'ಪೋಪು ಹೋಗೋಣ ಬಾರೋರಂಗ' ಎಂದು ಕರೆಯುತ್ತಾಳೆ. 'ಯಾಕೆ ದೂರುವಿರಿ ರಂಗಯ್ಯನ ಯಾಕೆ ದೂರುವಿರಿ'ಎನ್ನುವ ಮೂಲಕ ಇತರ ತಾಯಂದಿರಿಗೆ ಬೈಯ್ಯುತ್ತಾಳೆ. ಒಟ್ಟಿನಲ್ಲಿ ಶ್ರೀಪಾದರಾಜರ ಕೀರ್ತನೆಗಳು ಸಾಹಿತ್ಯ ಹಾಗೂ ಧಾರ್ಮಿಕವಾಗಿ ಮುಖ್ಯವಾಗುತ್ತದೆ.

ದಾಸಪರಂಪರೆಯಲ್ಲಿ ಕನ್ನಡಪ್ರೇಮವನ್ನು ತೋರಿದವರಲ್ಲಿ ಉಡುಪಿಯ ಶ್ರೀವಾದಿರಾಜ(೧೪೮೦-೧೬೦೦)ರು ಮುಖ್ಯರು. ಶಾಸ್ತ್ರ ಮತ್ತು ಸಾಹಿತ್ಯಗಳೆರಡರಲ್ಲೂ ಪರಿಶ್ರಮವಿದ್ದ ಇವರು ಸಂಸ್ಕೃತ, ಕನ್ನಡ ಹಾಗೂ ತುಳುಭಾಷೆ ಮೂರರಲ್ಲೂ ಸಾಹಿತ್ಯಸೇವೆಗೈದರು. 'ಹಯವದನ'ವೆಂಬ ಅಂಕಿತದಲ್ಲಿ ಇವರು ರಚಿಸಿದ ಕೃತಿಗಳು

ಹಲವಾರು. ಮುಖ್ಯವಾಗಿ ಸಂಸ್ಕೃತದಲ್ಲಿ ೭೦, ಕನ್ನಡದಲ್ಲಿ ೮, ತುಳುಭಾಷೆಯಲ್ಲಿ ಕೆಲವು. ಹೀಗೆ ಮೂರು ಭಾಷೆಗಳಲ್ಲಿ ಕೃತಿರಚಿಸಿ ಭಾಷಾಪ್ರೇಮವನ್ನು ತೋರಿದರು.

ವಾದಿರಾಜರ ಬರವಣಿಗೆಗಳಲ್ಲಿ ಗಮನಿಸಬೇಕಾದ ವಿಚಾರವೆಂದರೆ ಲೌಕಿಕ ಸಂಪ್ರದಾಯಗಳಿಗೆ ಪಾರಮಾರ್ಥಿಕ ಲೇಪವನ್ನು ನೀಡಿದುದು. ಶ್ರೀಪಾದರಾಜರ ಭ್ರಮರಗೀತೆಯನ್ನಾಧರಿಸಿ ವಾದಿರಾಜರು ಕನ್ನಡದಲ್ಲಿ ರಚಿಸಿದ ದೀರ್ಘಕೀರ್ತನೆಯು ಅವರ ದೃಶ್ಯಕಾವ್ಯದ ತಂತ್ರಗಾರಿಕೆಯ ಜೊತೆಗೆ ನಾಟಕಚಾರಿತ್ರ್ಯವನ್ನು ಪ್ರತಿನಿಧಿಸುತ್ತದೆ. 'ನವರಸಭರಿತ ಭ್ರಮರಗೀತೆಯರ್ಥವ ವಿವಶದಿಂದ ಬಿನ್ನೈಸಿ ದಿವಿಜವಂದಿತ ಗೋವಿಂದನ ಸಮ್ಮುಖದಲ್ಲಿ ನಾಟ್ಯವನಾಡಿಸುವೆ ನಾನು' ಎಂದು ಸಂಕಲ್ಪಿಸುತ್ತಾ, 'ನಲಿವುತ್ತ ಕೃಷ್ಣನನೆ ಪಾಡುತ್ತ ಗೋಕುಲದ ಲಲನೆಯರೆಲ್ಲ ಒಲಿದು ಬಂದರೋ......' ಎಂಬಲ್ಲಿ ನಾಟಕದ ಪರದೆಯನ್ನು ತೆಗೆಯುವ ಗೋಪಿಕಾಬಾಲೆಯರ ಲೀಲಾವಿನೋದದಲ್ಲಿ ಕನ್ನಡ ನುಡಿಸೊಗಸನ್ನು ಕಾಣಬಹುದು. 'ಎಲ್ಲರುಂಬಕ್ಕಿ ಬತ್ತ ಇಲಿ ಹೆಗ್ಗಣದೆಂಜಲಲ್ಲವೆ, ಎಲ್ಲರು ಸವಿಯುವ ಪಾಲು ಕರುವಿನೆಂಜಲು', 'ದೇವ ಹೊಟ್ಟೆ ಗಣಪ ಈಯೆಮಗೆ ಶುಭವ' ಎಂಬ ಗಣಪತಿ ಸ್ತುತಿಯೇ ಸರಳಗನ್ನಡದ ಭಾಷಾಪ್ರೇಮಕ್ಕೆ ಸಾಕ್ಷಿ.

ಅವರ ಕನ್ನಡಪ್ರೇಮಕ್ಕೆ ಇನ್ನೊಂದು ಮುಖ್ಯ ಉದಾಹರಣೆ ಎಂದರೆ 'ಲಕ್ಷ್ಮೀಶೋಭಾನ'ವೆಂಬ ಜನಪದ ಜಾಡಿನಿಂದ ಸಾಗುವ ಸಾಂಗತ್ಯಕೃತಿ. ಮಾಧ್ವಸಂಪ್ರದಾಯದ ಮದುವೆಗಳಲ್ಲಿ ಸುಮಂಗಲೆಯರೆಲ್ಲ ಒಂದಾಗಿ ಸೇರಿ ಹಾಡುವ ಕ್ರಮವನ್ನು ತಂದುಕೊಟ್ಟವರು ಶ್ರೀವಾದಿರಾಜರೇ.

ಶೋಭನವೆನ್ನಿರೆ ಸುರರೊಳು ಸುಭಗನಿಗೆ
ಶೋಭನವೆನ್ನೀ ಸುಗುಣನಿಗೆ ।
ಶೋಭನವೆನ್ನಿರೆ ತ್ರಿವಿಕ್ರಮರಾಯಗೆ
ಶೋಭನವೆನ್ನೀ ಸುರಪ್ರಿಯಗೆ ॥ ಶೋಭನೆ ॥

ಮುತ್ತು ರತ್ನಗಳಿಂದ ಕೆತ್ತಿಸಿದ ಹಸೆಗೆ ನವ
ರತ್ನ ಮಂಟಪವ ಪಸರಿಸಿ ।
ರತ್ನ ಮಂಟಪವ ಪಸರಿಸಿ ಕೃಷ್ಣನ್ನ
ಮುತ್ತೈದೆಯರೆಲ್ಲ ಕರೆದರು ॥ ಶೋಭನೆ ॥

ಎನಲು ನಗುತ ಬಂದು ಹಸೆಯ ಮೇಲೆ
ವನಿತೆ ಲಕುಮಿಯೊಡಗೂಡಿ ।
ಅನಂತ ವೈಭವದಿ ಕುಳಿತ ಕೃಷ್ಣನ ನಾಲ್ಕು
ದಿನದುತ್ಸವವ ನಡೆಸಿದರು ॥ ಶೋಭನೆ ॥ –ವಾದಿರಾಜರು

ಇಲ್ಲಿಯ ವಧೂವರರೇ ಲಕ್ಷ್ಮೀನಾರಾಯಣರು. ಅಲ್ಲದೆ ಅವರೇ ಇಲ್ಲಿ ನಾಯಕನಾಯಿಕೆಯರು. ಲೌಕಿಕಕ್ಕೊಂದು ತೋರಿದ ಪಾರಮಾರ್ಥಿಕ ಲೇಪನದಲ್ಲಿ ಸೊಗಸಿದೆ.[೬] ಒಟ್ಟಿನಲ್ಲಿ ದ್ವೈತತತ್ವ ಬೋಧನೆಯನ್ನು ಕನ್ನಡದಲ್ಲಿ

ತಿಳಿಹೇಳುವುದೇ ವಾದಿರಾಜರ ಮುಖ್ಯೋದ್ದೇಶ. ವೇದ-ಉಪನಿಷತ್ತುಗಳು, ಬ್ರಹ್ಮಸೂತ್ರ_ಭಾಗವತ, ಹರಿನಾಮಸ್ತುತಿ_ ಭಗವದ್ಗೀತೆ, ಪಂಚರಾತ್ರ_ಮಹಾಭಾರತ ಮೊದಲಾದ ಶಾಸ್ತ್ರಗ್ರಂಥಗಳಿಂದಲೇ ಪ್ರಮಾಣಗಳನ್ನು ಹುಡುಕಿತೆಗೆದು ರೂಪಿಸಿದುದು ವಾದಿರಾಜರ ಹೆಗ್ಗಳಿಕೆ. ಇವರ ಸಾಲಿನಲ್ಲಿಯೇ ಬರುವ ಮತ್ತೊಂದು ಮುಖ್ಯ ಹೆಸರೆಂದರೆ ಶ್ರೀರಾಘವೇಂದ್ರತೀರ್ಥರದ್ದು. ಇವರು ಕೂಡ ಮಾಧ್ವಯತಿಗಳಾಗಿ ಪ್ರಸಿದ್ಧರು. ಸಾಧಾರಣವಾಗಿ ಸಂಸ್ಕೃತಭಾಷೆಯನ್ನೇ ಬರವಣಿಗೆಯಲ್ಲಿ ಬಳಸಿಕೊಳ್ಳುವ ಯತಿಪರಂಪರೆಗೆ ಇವರ ಕೆಲವು ರಚನೆಗಳು ಅಪವಾದವಾಗಿ ನಿಲ್ಲುತ್ತವೆ. ಅದಕ್ಕೆ ಕನ್ನಡಭಾಷೆಯ ಕುರಿತಾಗಿ ಅವರಲ್ಲಿದ್ದ ಅಭಿಮಾನವೇ ಕಾರಣವೆನ್ನಬೇಕು.

ಇಂದು ಎನಗೆ ಗೋವಿಂದ ನಿನ್ನ ಪಾದಾರ ।
ವಿಂದವ ತೋರೋ ಮುಕುಂದನೇ ॥
ಮಂದರೋದ್ಧಾರನೆ ನಂದಗೋಪನ ಕಂದ ।
ಇಂದಿರಾರಮಣ ಗೋವಿಂದ ಗೋಕುಲಾನಂದ ॥ ಅ ಪ ॥

ನೊಂದೆನಯ್ಯಾ ಭವ ಬಂಧನದೊಳು ಸಿಲುಕಿ । ಮುಂದೆ ದಾರಿ ಕಾಣದೆ ಕುಂದಿದೆ ಜಗದೊಳು ॥
ಕಂದ ನಾನೆಂದೆನ್ನ ಕುಂದುಗಳೆಣಿಸದೆ । ತಂದೆ ನೀ ಕಾಯೋ ಕಂದರ್ಪ ಜನಕನೆ ॥ ೧ ॥
ಮೂಢತನದಿ ಬಲು ಹೇಡಿ ಜೀವನನಾಗಿ । ದೃಢ ಭಕ್ತಿಯ ಮಾಡಲಿಲ್ಲವೋ ಹರಿಯೇ ॥
ನೋಡಲಿಲ್ಲವೊ ನಿನ್ನ ಪಾಡಲಿಲ್ಲವೊ ಮಹಿಮೆ । ಗಾಡಿಕಾರ ಕೃಷ್ಣ ಬೇಡಿಕೊಂಬೆನೊ ಸ್ವಾಮಿ ॥ ೨ ॥
ಧಾರುಣಿಯೊಳು ಭೂಭಾರ ಜೀವನನಾಗಿ । ಮೇರೆದಪ್ಪಿ ನಡೆದು ಸೇರಿದೆ ಕುಜನರ ॥
ಯಾರೂ ಕಾಯುವರಿಲ್ಲ ಸೇರಿದೆ ನಿನಗಯ್ಯಾ । ಧೀರ ವೇಣುಗೋಪಾಲ ಪಾರಗಾಣಿಸೊ ಸ್ವಾಮೀ॥೩॥

–ಶ್ರೀರಾಘವೇಂದ್ರತೀರ್ಥರು

ಕನ್ನಡಸಾಹಿತ್ಯ ಶ್ರೀಮಂತಿಕೆಗೆ ಪುರಂದರದಾಸರು ನೀಡಿದ ಕೊಡುಗೆ ವಿಶೇಷವಾದುದು. ಭರತಭೂಮಿಯ ಎಲ್ಲಾ ತೀರ್ಥಕ್ಷೇತ್ರಗಳನ್ನು ದರ್ಶಿಸಿ, ಆಯಾಯ ತೀರ್ಥಕ್ಷೇತ್ರದ ದೈವಿಕಾಂಶವನ್ನು ದೇವರನಾಮಗಳ ಮೂಲಕವಾಗಿ ಆಸ್ತಿಕರಿಗೆ ಉಣಬಡಿಸಿದ ಸಾಹಿತ್ಯಕೃತಿಸಂಖ್ಯೆ ಮಾತ್ರ ಅಚ್ಚರಿ ಮೂಡಿಸುವಂತಹುದು. ಅವರೇ ಹೇಳಿದಂತೆ, 'ಕೇದಾರ ರಾಮೇಶ್ವರ ಕೇರಳ ಭೂತಳದಿ ಪಾದಾರವಿಂದ ಕ್ಷೇತ್ರ ಪ್ರತಿಕ್ಷೇತ್ರವು, ಆದರದಿ ಲಕ್ಷದಿಪ್ಪತ್ತೈದುಸಾವಿರ ಕೃತಿಯ, ವೇದಶಾಸ್ತ್ರಪುರಾಣ ಸಮ್ಮತದಿಂದ......'[೧೦]ಎನ್ನುವ ಮೂಲಕ ತಮ್ಮ ರಚನೆಯ ಉಲ್ಲೇಖವನ್ನು ಹೀಗೆ ತೋರಿಸಿಕೊಡುತ್ತಾರೆ.

ಮಧ್ವರಾಯರ ಮಹಿಮೆ ಮಹ ಗುರು ಪರಂಪರೆ ಪ್ರ
ಸಿದ್ಧ ವ್ಯಾಸರಾಯರ ಪರಿಯಂತವು ।
ಶುದ್ಧ ತಂತ್ರ ಸಾರೋಕ್ತಿ ಸೇವಕ ತಾರತಮ್ಯ
ಉದ್ಧರಿಸೈದು ಸಾವಿರವ ಪೇಳಿದೆನು ॥

(ಮಧ್ವಾಚಾರ್ಯ, ವ್ಯಾಸರಾಯರಾದಿಯಾಗಿ ಗುರುಪರಂಪರೆಯ ಮಹಿಮೆ, ತಂತ್ರಸಾರ ಹಾಗೂ ದೇವತಾ ತಾರತಮ್ಯಗಳು ಸೇರಿದಂತೆ ೫೦೦೦ ಕೀರ್ತನೆಗಳು).

ಬ್ರಹ್ಮಲೋಕ ಕೈಲಾಸ ಭರದಿ ದಿಕ್ಪಾಲಕರ
ಪೇರ್ಮೆ ತೊಂಬತ್ತು ಸಾವಿರದಿ ಪೇಳಿದೆನು

ಸಮ್ಮತದಿ ಹಲವು ಕಥಾಸಾರ ತೊಂಬತ್ತು ಸಾವಿರ
ಮೊಮ್ಮನದಿ ಪೇಳಿದೆನು ಕೇಳಿ ಜನರು ॥

(ಬ್ರಹ್ಮಲೋಕ, ಕೈಲಾಸ ದಿಕ್ಪಾಲಕರ ಲೋಕ ವರ್ಣನೆಗಳು– ೯೦.೦೦೦, ಹಲವು ಪುರಾಣ ಕಥಾಸಾರ–೯೦.೦೦೦)

ಅವರವರ ಮೂರ್ತಿ ಧ್ಯಾನ ಅವರವರ ಕೀರ್ತಿಮಾನ
ವಿವರದಿಂದಲಿ ನಾನಿಮಗೆ ವಿಸ್ತರಿಸಿದೆನು ।
ಘನತೆ ಗಣಿತ ಗಂಡಕಿಯ ಶಿಲಾಮೂರ್ತಿ
ಅನಘ ಕಲ್ಯಾಣಕಥೆ ಅರವತ್ತು ಸಾವಿರವು ॥

(ದೇವತೆಗಳ ಮೂರ್ತಿ ಧ್ಯಾನ, ಕೀರ್ತಿಮಾನ, ಗಂಡಕೀ ಮಹಾತ್ಮೆ, ಇತರ ಕಲ್ಯಾಣ ಚರಿತ್ರೆಗಳು–೬೦.೦೦೦)

ಅಹ್ನಿಕ ಗುಣವು ಜನ್ಮಾಷ್ಟಮಿ, ಏಕಾದಶಿಯ
ನಿರ್ಣಯವನು ಶ್ರುತಿಸ್ಮೃತಿ ಸಹಿತದಿ
ವರ್ಣಿಸದೆ ಕ್ಷೀರಾಬ್ಧಿಶಯನ ಅಹೋಬಲ ನರ
ಸಿಂಹಮೂರ್ತಿಗಳ ಶ್ರೀನಾಮಗಳ ॥

(ಅಹ್ನಿಕ ಪದ್ಧತಿ, ಏಕಾದಶಿ, ಜಯಂತಿ ನಿರ್ಣಯ, ಶ್ರುತಿ–ಸ್ಮೃತಿಗಳ ವಿಚಾರ– ೧೬.೦೦೦)

ಸುಳಾದಿ ಅರವತ್ತನಾಲ್ಕು ಸಾವಿರ ಬಹುತರ ನಾಮಾ
ವಳಿಯು ಇಪ್ಪತ್ತೈದು ಸಾವಿರವಾಗಿವೆ ।
ತಿಳಿದು ಶ್ವೇತದ್ವೀಪ ಅನಂತಾಸನ ವೈಕುಂಠ
ಸಲೆ ಶೇಷನ ಚರಿತ್ರೆಯನು ಪೇಳಿದೆನು ॥

(ಸುಳಾದಿಗಳು–೬೪.೦೦೦, ದೇವರ ನಾಮಗಳು–೨೫.೦೦೦)

ಇಂತು ನಾಲ್ಕುಲಕ್ಷದಿಪ್ಪತ್ತೈದು ಸಾವಿರ ಕೃತಿಯು
ಕಂತು ಜನಕನ ನಾಮ ಘನಮಹಿಮೆ ।
ಸಂತಸದಿ ಶ್ರುತಿಸ್ಮೃತಿ ಸಮ್ಮತದಿಂದ
ಪುರಂದರವಿಠಲ ವ್ಯಾಸಮುನಿಗಳು ಪೇಳಿದರು ॥ –ಶ್ರೀಕರ್ನಾಟ ಭಕ್ತ ವಿಜಯ/೧೮೮

(ಒಟ್ಟು ರಚನೆಗಳ ಮೊತ್ತ ಕಲ್ಪನೆ –೪.೬೫.೦೦೦)

ಈ ಎಲ್ಲಾ ರಚನೆಗಳಲ್ಲಿ ಪದಪ್ರಯೋಗದ ದೋಷಗಳಿದ್ದರೂ ಅದು ನಂತರದ ತಿದ್ದುಪಡಿಗಳಾಗಿರಬಹುದು. ಆದರೂ ಪುರಂದರದಾಸರ ಒಟ್ಟು ಕೃತಿರಚನೆಯನ್ನು ಈ ಮೇಲಿನ ಉಲ್ಲೇಖಗಳಿಂದ ತಾಳೆನೋಡಬಹುದು. ಪುರಾಣಗಳಿಂದ ಹಿಡಿದು ಈವರೆಗಿನ ಕಾಲಘಟ್ಟದಲ್ಲಿ ಬಹುಲಕ್ಷಗ್ರಂಥವನ್ನು ರಚಿಸಿದರೆಂಬ ಮೊದಲಕೀರ್ತಿ ಶ್ರೀವೇದವ್ಯಾಸರಿಗಿದ್ದರೆ, ಸಂಖ್ಯಾದೃಷ್ಟಿಯಿಂದ ಎರಡನೇ ಸ್ಥಾನದಲ್ಲಿ ನಿಲ್ಲುವವರು ಶ್ರೀಪುರಂದರದಾಸರೆಂಬುದು ಮಹತ್ವದ ಸಂಗತಿ. ಇದು ಕನ್ನಡಭಾಷೆಗೆ ಸಂದ ಬಲುದೊಡ್ಡ ಗೌರವವೆನ್ನಬೇಕು.

೩.೬ ಹರಿಸರ್ವೋತ್ತಮತ್ವಕ್ಕಾಗಿ ಶಿವಾರಾಧನೆ

ದಾಸಕೀರ್ತನೆಗಳಲ್ಲಿ ಹರಿಸರ್ವೋತ್ತಮತ್ವಕ್ಕೆ ಮೊದಲ ಮಣೆಯಾದರೂ ಶೈವಸ್ತುತಿಗೆ ಅವಹೇಳನವಿಲ್ಲ. ಈ ದೃಷ್ಟಿಕೋನವು ಚೈತನ್ಯಪಂಥದ ಸಾಹಿತ್ಯರಚನೆಯಲ್ಲಿಯೂ ಕಾಣಲುಸಾಧ್ಯವಿದೆ. ದಾಸರುಗಳಲ್ಲದೆ ಯತಿಶ್ರೇಷ್ಠರುಗಳಿಗೂ ಶಿವನಲ್ಲಿ ಅನುಭಾವವು ಹುಟ್ಟದಿರಲಿಲ್ಲ. ಇವರೆಲ್ಲರಿಗೂ ಶಿವನು ಮನೋಭಿಮಾನಿಯಾಗಿ,

ವೈಕಾರಿಕ–ತೈಜಸ–ತಾಮಸವೆಂಬೀ ಅಹಂಕಾರತ್ರಯಗಳಿಗೆ ಅಭಿಮಾನಿಯಾಗಿಯೂ ಕಾಣುತ್ತಾನೆ. ಆತ ತ್ರಿನೇತ್ರ, ಪಾಲಾಕ್ಷ, ಹಣೆಗಣ್ಣ, ವಿರೂಪಾಕ್ಷ, ಜಟಾಜೂಟ, ನಂದಿವಾಹನ, ವ್ಯೋಮಕೇಶ ಮೊದಲಾದ ನಾಮಾವಳಿಗಳಿಂದ ಅರ್ಚನೆಗೊಳಗಾಗುತ್ತಾನೆ. ಶ್ರೀಪಾದರಾಜರಂತೂ ತಮ್ಮ ರಚನೆಯಲ್ಲಿ ಶಿವನ ಪರಿಚಯವನ್ನು ವರ್ಣಿಸುವಲ್ಲಿ ಹೀಗೆ ಆನಂದತುಂದಿಲರಾಗುತ್ತಾರೆ.

ವೃಷಭನೇರಿದ ವಿಷಧರನ್ಯಾರೆ ಪೇಳಮ್ಮಯ್ಯ ॥ ಪ ॥
ಹಸುಳೆ ಪಾರ್ವತಿಯ ತಪಸಿಗೆ ಮೆಚ್ಚಿದ । ಜಟಾಮಂಡಲಧಾರಿ ಕಾಣಮ್ಮ ॥ ಅ.ಪ ॥
ಕೈಲಾಸಗಿರಿಯ ದೊರೆಯಿವನಮ್ಮ । ಅದು ಅಲ್ಲದೆ ಕೇಳೆ
ಬೈಲು ಶ್ಮಶಾನದಿ ಮನೆಯಿವಗಮ್ಮ । ಸಂಕರ್ಷಣನೆಂದು
ಕೇಳೆ ಮಹಿಯೊಳು ಜನ ಪೊಗಳುವರಮ್ಮ । ಇದು ನೈಜವಮ್ಮ
ನಾಲಗೆ ಸಾಸಿರ ಫಣಿಭೂಷಣನಮ್ಮ । ರಮೆಯರಸಗೆ ಇವ ಮೊಮ್ಮಗನಮ್ಮ ॥ ೧ ॥

–ಶ್ರೀಪಾದಾರಾಜರು.

ಇಲ್ಲಿ ಶ್ರೀಪಾದರಾಜರು ಕಥನಕೌಶಲ್ಯವನ್ನು ಮೆರೆಸಿದ್ದಾರೆ. ಕೃಷ್ಣನ ಮೋಹಿನೀರೂಪವನ್ನು ನೋಡಿ ಸೆರಗನ್ನು ಎಳೆದ ಶಿವನು ಮೋಹಿನಿಯನ್ನು ಕೃಷ್ಣನೆಂದು ಅರಿತಾಗ ನಾಚಿತಲೆತಗ್ಗಿಸುತ್ತಾನೆ. ಮಾತ್ರವಲ್ಲದೆ 'ಮಂಗಳಾಂಗನೆ ಮಾರಜನಕ ನಾ ಮಾಡಿದ ತಪ್ಪ ಹಿಂಗದೆ ಕ್ಷಮಿಸೊ ಯದುಕುಲತಿಲಕ'ನೆಂದು ಅಂಗಲಾಚಿ ಬೇಡಿಕೋಳ್ಳುತ್ತಾನೆ. ಇದೊಂದು ರೀತಿಯ ದೃಶ್ಯಸಂವಾದ. ಈ ರೀತಿಯ ಭಾವರಸಾಯನಗಳು ದಾಸಸಾಹಿತ್ಯದಲ್ಲಿ ಸ್ವಲ್ಪಮಟ್ಟಿಗೆ ವಿರಳವೆಂದೇ ಹೇಳಬೇಕು. ಶ್ರೀವ್ಯಾಸರಾಯರಂತೂ ಸದ್ಭಕ್ತರ ಮನೋಭಿಮಾನಿಯಾದ ಪಾರ್ವತೀರಮಣನಲ್ಲಿ, 'ರಮಾರಮಣನಲ್ಲಮಲ ಬಕುತಿ ಕೊಡೋ ನಮೋ ವಿಶಾಲಾಕ್ಷಾ' ಎನ್ನುವಲ್ಲಿ ಹರಿಯೊಳಗೆ ನಿರ್ಮಲವಾದ ಭಕ್ತಿಯನ್ನು ದೊರಕಿಸಿಕೊಡಬೇಕೆಂದು ಆಗ್ರಹಿಸುತ್ತಾರೆ.

ವಾದಿರಾಜರಂತೂ ತಮ್ಮ ನುಡಿಯು ಅಹಿತವೆಂದು ಕೇಳಲಿಚ್ಚಿಸದ ನಾಸ್ತಿಕರಿಗೆ ಬೈಗುಳದ ಸುರಿಮಳೆಯನ್ನೇ ಸುರಿಸುತ್ತಾ, 'ಕೈಲಾಸದಾಶೆಯೆಲ್ಲಿಹುದೋ ಶೈಲೇಂದ್ರಸುತೆಯರಸ ಶಿವನ ಒಲವಿಲ್ಲದವಗೆ' ಎನ್ನುತ್ತಾರೆ. 'ದವಳಗಂಗೆಯ ಗಂಗಾಧರ ಮಹಾಲಿಂಗ ಮಾಧವನ ತೋರಿಸಯ್ಯಾ ಗುರುಕುಲೋತ್ತುಂಗಾ' ಎನ್ನುವಲ್ಲಿ ವೈಷ್ಣವ ಭಕ್ತನ ಹರಿಯ ಹರಿಯದ ಹಸಿವನ್ನು ನೀಗಿಸಲು ಶಿವನಲ್ಲಿ ಮಾರ್ಗದರ್ಶನ ಬೇಡುತ್ತಾರೆ. ಇವರಂತೆಯೇ ದಾಸಶ್ರೇಷ್ಠರಾದ ಪುರಂದರದಾಸರು ಶಿವನನ್ನೇ ವೈಷ್ಣವ ಭಕ್ತನೆನ್ನುವಲ್ಲಿಯ ತನಕ ಕೃಷ್ಣಪಾರಮ್ಯಕ್ಕೆ ಒಳಗಾಗಿದ್ದಾರೆ. ಪ್ರಾಯಶಃ ಶಿವನಲ್ಲಿ ವೈಷ್ಣವತ್ವವನ್ನು, ವಿಷ್ಣುವಿನಲ್ಲಿ ಶಿವತ್ವವನ್ನು ಕಂಡುಕೊಳ್ಳುವಪರಿ ಇದೇ ಇರಬೇಕು. 'ಕೊರಳೊಳು ರುದ್ರಾಕ್ಷಿ ಭಸ್ಮವ ಧರಿಸಿದ ಪರಮವೈಷ್ಣವ ನೀನೆ'ಎನ್ನುವ ಮಾತೇ ಮೇಲಿನ ಕಲ್ಪನೆಗೆ ಸಾಕ್ಷಿ.

ಚಂದ್ರಚೂಡ ಶಿವಶಂಕರ ಪಾರ್ವತಿರಮಣನೆ ನಿನಗೆ ನಮೋ ನಮೋ ॥ ಪ ॥
ಸುಂದರ ಮೃಗವರ ಪಿನಾಕಧನುಕರ ಗಂಗಾಶಿರ ಗಜ ಚರ್ಮಾಂಬರಧರ ॥ ಅ.ಪ ॥

–ಪುರಂದರದಾಸರು.

[illegible]

ಈ ಎಲ್ಲಾ ರಚನೆಗಳಲ್ಲಿ ನಾವು ನೋಡುವುದು ಹರಿಪಾರಮ್ಯದ ವೈಭವ. ಆದರೆ ಆ ಕೆಲಸವನ್ನು ಶಿವನ ಮೂಲಕವಾಗಿ ವೈಭವೀಕರಿಸುವ ಸಾಹಸದಿಂದ ನಡೆದಿದೆ. ಪ್ರಾಯಶಃ ಈ ರೀತಿಯ ಕಲ್ಪನೆಯಿಂದಲೇ, 'ಇಂದಿರೇಶ ಶ್ರೀರಾಮನ ಪಾದವ ಚಂದದಿ ಪೊಗಳುವ ನೀನೆ' ಎಂಬಂತಹ ಹಲವು ಸಾಲುಗಳು ರಚನೆಯಾಗಿರಬೇಕು. ಇವರಂತೆಯೇ ಕನಕದಾಸರೂ ಶಿವನ ಸಾನ್ನಿಧ್ಯವನ್ನು ಹೊಗಳದೆ ಬಿಟ್ಟವರಲ್ಲ. ಅವರ ಸಾಹಿತ್ಯರಚನೆಯಲ್ಲಿ ಶಿವಸ್ತುತಿಗಿಂತ ಶಿವಶರಣರ ಕುರಿತಾದ ಚಿಂತನೆಯೇ ಹೆಚ್ಚು. ಲಿಂಗಧಾರಿಗಳಾದ ಶಿವಶರಣರ ಬಗ್ಗೆ ಅವರ ಕಟುವಾದ ನಿರ್ಧಾರದಲ್ಲಿ ಬೈಯ್ಗುಳದ ಹೊಳೆಯೇ ಹರಿಯುತ್ತದೆ.

ಕೇಳಿರೈ ಶಿವಶರಣರು ಹೇಳಲಂಜಿಕೆ ಆವುದು । ಭಾಳನೇತ್ರನ ಭಕ್ತರಿಂತು ನೋಡಿಕೊಳ್ಳಿರೈ ॥ ಪ ॥
ಲಿಂಗವೊಂದು ತನ್ನೊಳು ಲೀನವಾಗಿರುವಾಗ । ಅಂಗಭವಿಗಳು ಕೂಡಿ ಆಡಿಕೊಂಬರು ।
ಅಂಗದನುಭವದರ್ಥವನರಿಯದ ಇಂತಹ । ಭಂಗಿ ಹುಚ್ಚರೆಲ್ಲ ಶಿವನ ಭಕ್ತರಹರೇ ॥ ೧ ॥–ಕನಕದಾಸರು.

ಶಿವನೇ ಜೀವದಲ್ಲಿ ಲೀನವಾಗಿರುವಾಗ ಬೇರೊಂದು ಲಿಂಗದ ಅವಶ್ಯವಾದರೂ ಏನೆಂಬುದು ಕನಕರಪ್ರಶ್ನೆ. ಆದುದರಿಂದ ಶಿವಶರಣರಿಗೆಲ್ಲರಿಗೂ ಅಂಗದನುಭವದರ್ಥವನ್ನು ತಿಳಿಸಿಕೊಡುವ ಪ್ರಯತ್ನವನ್ನು ಕನಕದಾಸರು ಮಾಡಿದರೆ, ವಿಜಯದಾಸರು ತಮ್ಮ ಸಾಹಿತ್ಯರಚನೆಯಲ್ಲಿ ಸೈದ್ಧಾಂತಿಕ ಮಹತ್ವವನ್ನೇ ಸಾರುತ್ತಾರೆ. ಅವರು ಪ್ರಮೇಯಭರಿತ ಹಾಗೂ ಅರ್ಥಗರ್ಭದಲ್ಲಿಯೇ ಕೀರ್ತನೆಗಳಿಗೆ ಜೀವತುಂಬುತ್ತಾರೆ. ತಮ್ಮ ರಚನೆಗಳಲ್ಲಿ ದ್ವೈತಸಿದ್ಧಾಂತದ ಮೂಲಕ ವಿಷ್ಣುಪಾರಮ್ಯವನ್ನು ಕಂಡಿದ್ದರೂ ಶಿವನ ಕುರಿತಾದ ಕೀರ್ತನೆಗಳನ್ನು ರಚಿಸುವ ಮೂಲಕ ಶೈವಭಕ್ತಿಗೂ ಒಳಗಾಗುತ್ತಾರೆ. 'ಗೌರೀವರನೆ ಎನ್ನ ಮೊರೆಯ ಕೇಳೋ ಚೆನ್ನ' ಎಂದು ಪ್ರಾರ್ಥಿಸಿಕೊಳ್ಳುವ ಪರಿಯನ್ನು ಇಲ್ಲಿ ಉದಾಹರಿಸಬಹುದು.

ಕೈಲಾಸವಾಸ ಗೌರೀಶ ಈಶ
ತೈಲಧಾರೆಯಂತೆ ಮನಸು ಕೊಡೊ ಹರಿಯಲ್ಲಿ ॥
ಭಾಗೀರಥೀ ಧರನೆ ಭಯವ ಪರಿಹರಿಸೋ ಲೇ
ಸಾಗಿ ಒಲಿದು ನೀ ಸತತ ಶರ್ವದೇವ ।
ಭಾಗವತ ಜನಪ್ರೀಯ ವಿಜಯ ವಿಠಲನಂಘ್ರಿ
ಜಾಗು ಮಾಡದೆ ಭಜಿಪ ಭಾಗ್ಯವನು ಕೊಡೊ ಶಂಭು ॥ –ವಿಜಯದಾಸರು.

ಹರಿಸರ್ವೋತ್ತಮತ್ವವನ್ನೇ ಸಾರಲುಹೊರಟ ವಿಜಯದಾಸರರಿಗೆ ಪ್ರಾಥಮಿಕವಾಗಿ ಬೇಕಾಗುವ ಹರಿಭಕ್ತಿಭಾಗ್ಯವನ್ನು ಶಿವನ ಮೂಲಕವಾಗಿ ಕೇಳಿಕೊಳ್ಳುತ್ತಾರೆ. ಪಾಪಪುಣ್ಯಗಳಿಗೆ ಅನಲಾಕ್ಷನೇ ಪ್ರೇರಣೆ ಎಂಬುಂದು ವಿಜಯದಾಸರ ಅಭಿಮತ. ಆದುದರಿಂದ 'ಮಣಿಸು ಈ ಮನಸು ಸಜ್ಜನರ ಸಿರಿಚರಣದಲ್ಲಿ' ಎಂದು ವಿನಯಪೂರ್ವಕವಾಗಿ ಕೇಳಿಕೊಳ್ಳುವ ಕ್ರಮಮಾತ್ರ ಬಲುಸೊಗಸು.

ಪಂಪಾಪುರಾಧೀಶ ಶ್ರೀವಿರೂಪಾಕ್ಷ ನೀ ಪಾಲಿಪುದೆಮ್ಮನು
ಕಾಪಾಡುವುದು ಶೇತಾದೀಪಾವಾಸನ ತೋರಿ ॥ ಪ ॥

ಸರ್ಪಭೂಷಣದೇವ ತ್ರಿಪುರ ಸಂಹಾರ
ಭಾಪುರೆ ಸುರಕುಲ ದೀಪ ಸದಾಶಿವ
ಶ್ರೀಪತಿ ಪಾದ ಸಮೀಪದ ಸೇವಕ ॥ ಅ.ಪ ॥
ಕುಂದು ಗೊರಳ ಜೀಯ ಸಿಂಧೂರ ಮೊಗನಯ್ಯ । ಕಂದರ್ಪಹರ ಭಕ್ತ ಬಾಂಧವ ಕಾಯೊ ॥
ಇಂದಿರೆ ರಮಣ ಗೋವಿಂದನ ಪಾದಾರ । ವಿಂದಭೃಂಗನೆ ಭವದಿಂದ ಕಡೆಗೆ ಮಾಡೊ ॥
ನಂದಿವಾಹನ ಎನ್ನ ಹಿಂದಣ ಕಲುಷಿತ । ವೃಂದಗಳೋಡಿಸು ಇಂದು ಧರ ಅರ ।
ವಿಂದನಯನ ಸಿರಿ ವಿಜಯ ವಿಠಲನ । ಕುಂದದೆ ಭಜಪ ಆನಂದವ ಕರುಣಿಸು ॥೧॥–ವಿಜಯದಾಸರು.

ಈ ಎಲ್ಲಾ ವಿನಯಪೂರಿತವಾದ ಕೀರ್ತನೆಗಳಿಗೆ ಅವರು ಬಾಲ್ಯದಲ್ಲಿ ಅನುಭವಿಸಿದ 'ಕೂಸಿಮಗದಾಸ'ನೆಂಬ ಸಾಮಾಜದ ತಿರಸ್ಕಾರವೇ ಇದಕ್ಕೆ ಕಾರಣವಾಗಿರಲೂಬಹುದು. ಪುರಾಣಕಾಲದ ಶಿವನ ಅಲೆದಾಟಕ್ಕೂ ಹಾಗೂ ತನ್ನ ಅಲೆದಾಟಕ್ಕೂ ತೌಲನಿಕವಾದ ವಿವೇಚನೆ ಮಾಡಿರಬಹುದು. ಇಂತಹ ಪ್ರಯತ್ನಗಳನ್ನು ಇವರ ನಂತರದ ದಾಸರುಗಳೆಲ್ಲ ಮಾಡದಿರುವವರಲ್ಲ. ಜಗನ್ನಾಥದಾಸರಂತೂ, 'ಶಂಭೋ ಸುರಗಂಗಾಧರನೇ ಪಾಲಿಸಂಬಾರಮಣನೇ' ಎಂದು ಬೇಡಿಕೊಂಡು, 'ಪಂಚಾಸ್ಯ ಮನನದ ಚಂಚಲನ ಪರಿಹರಿಸಿ ಸಂಚಿತಾಗಾಮಿ ಪ್ರಾರಬ್ಧದಾಟಿಸು ವಿರಂಚಿಸಂಭವನೇ ಕೃತಯೋಗ.....'ಎನ್ನುವ ತ್ರಿಪದಿಯ ಬಂಧಛಾಯೆಯನ್ನು ಹೋಲುವ ಶಿವಸ್ತುತಿರಚನೆಗೆ ಮುಂದಾಗಿದ್ದಾರೆ. ಈ ರಚನೆಗಳಲ್ಲಿ ದೇಸೀಛಂದಸ್ಸಿನ ಲಯದ ಗಾಳಿ ಬೀಸಿರುವುದು ವಿಶೇಷ.

ದಾಸಸಾಹಿತ್ಯದಲ್ಲಿ ಮಧ್ವಪಂಥದ ಪ್ರತಿಪಾದನೆ ಇದ್ದಿದ್ದರೂ ಮುಂದೆ ಬರುವ ಬಹುತೇಕ ದಾಸರು ಅಲ್ಲಲ್ಲಿ ಶಿವ ಸಂಬಂಧಿತ ಕೀರ್ತನೆಗಳನ್ನು ರಚಿಸುತ್ತಲೇ ಮುಂದುವರಿದಿದ್ದಾರೆ. ಈ ನಿಟ್ಟಿನಲ್ಲಿ, ಪ್ರಸನ್ನವೆಂಕಟದಾಸರ 'ಬೇಸರದಂದೂ ಸದಾಶಿವನೆನ್ನೀ, ಕಾಶಿಯ ಪ್ರಭುವಿಶ್ವೇಶ್ವರವೆನ್ನೀ', ಗುರು ಮಹೀಪತಿದಾಸರ 'ನಕ್ಷತ್ರರಮಣನಯ್ಯನಿಗೊಲಿದು ಶರವರವನಿತ್ತೇ', ಪ್ರಾಣೇಶವಿಠ್ಠಲದಾಸರ 'ಬಾಣದವನ ಸಲಹೋ ನಾ ನಮಿಸುವೆ', 'ಏಕೆ ಭಿಕ್ಷುವೋ ಚರ್ಮಚೇಲ ನಿನಗೆ', ಮೋಹನದಾಸರ 'ಭಿಕ್ಷುವ್ಯಾತಕೆ ಪಾಲಾಕ್ಷ ನಿನಗೆ, ಶ್ರೀಲಕುಮಿಪತಿಯೆಂಬ ಸಖನಿದ್ದಬಳಿಕ', ನಡುಪುರೇಶದಾಸರ 'ನಡಿ ಶಂಭೋ ಗಡ ಬಾ ಎನ್ನೊಡನೆ, ನಾನಿನಗೊಂದು ಗುಡಿಕಟ್ಟಿ ಪೂಜಿಪೆ ನಡುಪುರದಿ' ಮೊದಲಾದ ರಚನೆಗಳು ಮುಖ್ಯವೆನಿಸುತ್ತವೆ. ಹರಪನಹಳ್ಳಿಯ ಭೀಮವ್ವನವರಂತೂ ಶಿವಸ್ತುತಿಗೋಸ್ಕರ ಪಾರ್ವತಿಸ್ತುತಿಯನ್ನೂ ಮಾಡಿಬಿಟ್ಟಿದ್ದಾರೆ. 'ಇಂದುವದನೆ ಪಾರ್ವತಿಯೆ ನಾ ಇಲ್ಲಿಗೆ ಬಂದೆನು ಬಾಗಿಲು ತೆಗೆಯೆ ಜಾಣೆ'ಎನ್ನುವ ಮೂಲಕ ಸಂವಾದಕ್ಕಿಳಿಯುತ್ತಾರೆ.

ಬಂದವರ್‍ಯಾರೀ ವ್ಯಾಳ್ಯದಿ ಬಾಗಿಲು
ಬಂದು ತೆಗೆಯೊರ್‍ಯಾರಿಲ್ಲ ಈಗ
ಬಂದು ತೆಗೆಯೊರ್‍ಯಾರಿಲ್ಲ ॥

ಅಂಗನಾಮಣಿ ಕೇಳೆ ಗಂಗಾಧರನೆನಿಸಿದ್ದ
ಚಂದ್ರಶೇಖರ ನಾ ಬಂದೀನೆ ಜಾಣೆ
ಚಂದ್ರಶೇಖರ ನಾ ಬಂದೀನೆ ॥ -ಹರಪನಹಳ್ಳಿ ಭೀಮವ್ವನವರು.

ಈ ರಚನೆ ಇನ್ನಿತರ ದಾಸರುಗಳ ರಚನೆಗಳಿಗಿಂತ ಸ್ವಲ್ಪಮಟ್ಟಿಗೆ ಭಿನ್ನ. ಇಲ್ಲಿ ದೇಸೀಶೈಲಿಯ ಕಥನ ಕೀರ್ತನೆಯ ರುಚಿಶುದ್ಧಿ ಚೆನ್ನಾಗಿಯೇ ಹರಿದು ಬಂದಿದೆ. ಒಟ್ಟಿನಲ್ಲಿ ಭಾಗವತ ಸಂಪ್ರದಾಯವನ್ನು ಪ್ರಚಾರಕ್ಕೆ ತರುವ ನಿಟ್ಟಿನಲ್ಲಿ ಭಕ್ತಿಪಂಥದ ಭಾಗವಾದ ದಾಸಪಂಥವು ಹರಿಸರ್ವೋತ್ತಮತ್ವವನ್ನೇ ಉಸಿರಾಗಿಸಿಕೊಂಡಿದ್ದರೂ, ಅಲ್ಲಲ್ಲಿ ಶಿವಸಂಬಂಧೀ ಕೀರ್ತನೆಗಳನ್ನು ರಚಿಸಿರುವುದು ಸಾಮಾಜಿಕವಾದ ಸಾಮರಸ್ಯದ ಕಾರಣವಿರಬಹುದು.

೩.೮ ಸಾಹಿತ್ಯದಲ್ಲಿ ಲಾಲಿಪದಗಳ ಲಾಲಿತ್ಯ

ದಾಸಸಾಹಿತ್ಯದ ಹಲವಷ್ಟು ಕೀರ್ತನೆಗಳು ಲಾಲಿಗೀತಾಸಕ್ತಿಯಲ್ಲಿಯೇ ಮೂಡಿಬಂದಿದೆ. ಇದಕ್ಕೆ ಕಾರಣ ಅವರ ಭಕ್ತಿಯ ಪರಾಕಾಷ್ಠೆ. ಭಗವಂತನನ್ನು ಮಗನಂತೆ ಕಾಣುವ, ಭಗವಂತನಿಗಾಗಿ ತಾವು ತಾಯಿ–ತಂದೆಗಳಾಗುವ ವಾತ್ಸಲ್ಯಭಕ್ತಿಯ ಅಧ್ಯಾತ್ಮಿಕ ಅನುಭೂತಿಪ್ರಜ್ಞೆಯೇ ಇದಕ್ಕೆ ಕಾರಣ. ಆದುದರಿಂದ ಇಲ್ಲಿಯ ರಚನೆಗಳೆಲ್ಲ ಅಚ್ಚುಮೆಚ್ಚಿನ ಕಲಾಕೃತಿಗಳು. ಭಗವಂತನ ಬಾಲಲೀಲೆಗಳಿಗಾಗಿ ದಾಸವರೇಣ್ಯರಿಗೆ ಹಾಡಿಹೊಗಳಿದಷ್ಟು ತೃಪ್ತಿಯಿಲ್ಲ. ಅವರೆಲ್ಲರಿಗೂ ಭಗವಂತನು ಮಕ್ಕಳ ಮಾಣಿಕ್ಯ–ಮನೋಹರ ನಿಧಿ. 'ತಾರಮ್ಮಯ್ಯ ಯದುಕುಲವಾರಿಧಿ, ಚಂದ್ರಮನ, ಮಾರಜನಕನ ಮೋಹನಾಂಗನಾ' ಎಂದು ಬಾಲಕೃಷ್ಣನನ್ನು ಕಾಣುವ ತಾಯಿಯ ಬಾಯಲ್ಲಿ ಜೋಗುಳ ಪದಗಳಿಗೆ ಬರವಿಲ್ಲ. ಆದರೂ ಈ ಲಾಲಿಕೀರ್ತನೆಗಳಲ್ಲಿ ಮುಖ್ಯವಾಗಿ ಮೂರು ಭೇದಗಳನ್ನು ನಾವು ನೋಡಲುಸಾಧ್ಯ.

೧ ಮಗುವಿನೊಂದಿಗೆ ರಮಿಸಿ, ಸಂವಾದಿಸಿ ಹಾಡುವ ಲಾಲಿಪದ.

೨ ಮಗುವನ್ನು ಹೆದರಿಸಿ ಮಲಗಿಸುವ ಲಾಲಿಪದ.

೩ ಮಗುವು ನಿದ್ರೆಹೋದ ಬಳಿಕ ಗುಣಗಾನದಲ್ಲಿ ಸಂಭ್ರಮಿಸುವ ಲಾಲಿಪದ.

ದಾಸಾನುಭಾವದ ಪರಮಸ್ಥಿತಿಗಳು ಕೃಷ್ಣನನ್ನು ಮಾತ್ರ ಮುಟ್ಟುವುದಲ್ಲದೆ ರಾಮ–ಹನುಮ–ಮಧ್ವ–ಭೀಮರನ್ನು ಲಾಲಿಹಾಡಿಸಿ ಮಲಗಿಸಿದ್ದುಂಟು. ಪ್ರಾಯಶಃ ಇಂತಹ ರಚನೆಗಳು ಮಧ್ವಸಿದ್ಧಾಂತದ ಪ್ರಕಟಾನುಭೂತಿ ಇರಬಹುದು. ಏನೇ ಇದ್ದರೂ ಇದೊಂದು ರೀತಿಯ ಪರಮ ವಾತ್ಸಲ್ಯಭಕ್ತಿ; ವಾತ್ಸಲ್ಯಶಕ್ತಿ. ಶ್ರೀಪಾದರಾಜರಂತೂ ತಮ್ಮ ಲಾಲಿಸಾಹಿತ್ಯದಲಿ ಅಲೌಕಿಕ ಪ್ರೀತಿಯ ಹೊನಲನ್ನು ಹರಿಸಿದ್ದಾರೆ. ಇಲ್ಲಿ ಹಲವು ಅವತಾರಗಳ ಕಥನಚಿತ್ರವೂ ಅಡಕ. ಆ ಮೂಲಕವಾಗಿ ರಸಾನುಭೂತಿಯ ವೈಭವವನ್ನು ಸೆರೆಹಿಡಿದಿದ್ದಾರೆ.

ಜೋ ಜೋ ಜೋ ಜೋ ಜೋ ರಂಗಧಾಮ । ಜೋ ಜೋ ಜೋ ಜೋ ಜೋ ರಣಭೀಮ ॥
ಜೋ ಜೋ ಭಕ್ತರ ಕಷ್ಟ ನಿರ್ಧೂಮ । ಜೋ ಜೋ ದಶರಥ ರಾಮ ನಿಸ್ಸಿಮ ॥ ಅ.ಪ. ॥
ಭೂಮಿಯ ಚೆನ್ನದ ತೊಟ್ಟಿಲ ಮಾಡಿ । ಸೋಮ ಸೂರ್ಯರೆಂಬ ಕಲಶವ ಹೂಡಿ ॥
ನೇಮದಿ ವೇದಗಳ ಸರಪಣಿ ಮಾಡಿ । ಆ ಮಹಾಕಾಶಕ್ಕೆ ಕೊಂಡಿಗಳ ಹಾಕಿ ॥ ೧ ॥ -ಶ್ರೀಪಾದರಾಜರು.

ಹೀಗೆ ಇಲ್ಲಿ ಭಾವಗೀತೆಗಳ ಸೊಗಸು ತಾನಾಗಿಯೇ ಮೂಡಿಬಂದಿದೆ. ಅವರ ಇನ್ನೊಂದು ಕೀರ್ತನೆಯಲ್ಲೂ ಈ ಶೈಲಿ ದೀರ್ಘವಾಗಿಯೇ ಮುಂದುವರಿದಿದೆ. 'ಲಾಲಿ ಗೋವಿಂದ ಲಾಲಿ ಕೌಸಲ್ಯಾ, ಬಾಲ ಶ್ರೀರಾಮ ಲಾಲಿ' ಎಂಬುದು ಇವರು ರಚಿಸಿದ ದೀರ್ಘ ಭಾವಕೀರ್ತನೆ. ಇದು ಅಲ್ಲಲ್ಲಿ ಲೀಲಾವತಾರವನ್ನು ವರ್ಣಿಸುತ್ತದೆ. ಅಲ್ಲದೆ ಹಸ್ತಿನಿ, ಪದ್ಮಿನಿ, ಚಿತ್ತಿನಿ ಮತ್ತು ಶಂಕಿನಿ ಎಂಬ ನಾರಿಯರು ಕಲ್ಯಾಣಿ, ಆನಂದಭೈರವಿ, ದೇವಗಾಂಧಾರಗಳಲ್ಲಿಯೇ ಜೋಗುಳವನ್ನು ಹಾಡಿದರೆಂಬ ಉಲ್ಲೇಖವನ್ನೂ, ಮತ್ತು ಅದರ ಸಂಗೀತದ ಸಾಹಚರ್ಯವನ್ನೂ ನಮೂದಿಸುತ್ತದೆ. ವಾದಿರಾಜರಂತೂ ತಮ್ಮ ರಚನೆಗಳಲ್ಲಿ ಮುಖ್ಯಪ್ರಾಣನಿಗೂ ಜೋಗುಳವನ್ನು ಹಾಡಿ ಅನುಭಾವವನ್ನು ಹಂಚಿಕೊಳ್ಳುತ್ತಾರೆ.

ಜೋ ಜೋ ಜೋ ಜೋ ಜೋ ಮುಖ್ಯಪ್ರಾಣ । ಜೋ ಜೋ ಮಲೆವರ ಗಂಟಲಗಾಣ ॥ ಪ ॥
ಜೋ ಜೋ ರಾಕ್ಷಸ ಶಿಕ್ಷ ಕಲ್ಯಾಣ । ಜೋ ಜೋ ಸಕಲ ವಿದ್ಯಾಪ್ರವೀಣ ॥ ಅ.ಪ ॥ –ವಾದಿರಾಜರು.

ಇಷ್ಟೇ ಅಲ್ಲದೆ, 'ಮನೆಯೊಳಗೆ ಇರನೀತ ಬಹುರಚ್ಚೆವಂತ, ಮನೆವಾರ್ತೆ ಯಾರು ಮಾಡುವರು ಶ್ರೀಕಾಂತ' ಎಂಬಲ್ಲಿ ವ್ಯಾವಹಾರಿಕ ನಿಲುವನ್ನು ಕಂಡುಕೊಳ್ಳುತ್ತಾರೆ. ಭೀಮ, ಮಧ್ವರಿಗೂ ಲಾಲಿಹಾಡುತ್ತ ಪರಮಾನುಭೂತಿಗೆ ಒಳಗಾಗುವುದನ್ನು ಇವರ ರಚನೆಗಳಲ್ಲಿ ಕಾಣಬಹುದಾಗಿದೆ.

ಕರ್ನಾಟಕಸಂಗೀತದ ಪಿತಾಮಹರೆನಿಸಿಕೊಂಡ ಪುರಂದರದಾಸರ ಜೋಗುಳಪದ ಗಾಯಕರಿಗಂತೂ ಪರಮಾನಂದ. ಭಕ್ತ ಹಾಗೂ ಭಗವಂತನಲ್ಲಿ ತಾಯಿ–ತಂದೆ–ಮಗನ ಭಾವಪ್ರಪಂಚದ ನಿರ್ಮಾಣವೇ ಇಲ್ಲಿಯ ಪ್ರಮುಖವಾದ ಭಕ್ತಿಯ ಕಸರತ್ತು. ಇಲ್ಲಿಯ ವಾತ್ಸಲ್ಯಭಾವದ ಅಭಿವ್ಯಕ್ತಿಯಲ್ಲಿ ಸಾರ್ವಕಾಲಿಕ ಜೀವನಮೌಲ್ಯದ ಪರಿಣಾಮಕಾರೀ ನಿರೂಪಣೆಯಿದೆ. ಪರಮಾನಂದದಲ್ಲಿ ಮುಳುಗಿದ ಪುರಂದರದಾಸರಿಗೆ ಗೋಪಿಯ ಕಂದನು ಪಾಲುಗಡಲಲ್ಲಿ ಪವಡಿಸಿದವನಾಗಿ, ಆಲದೆಲೆಯ ಮೇಲೆ ಮಲಗಿದವನಾಗಿ, ಶ್ರೀಲಲಿತಾಂಗಿಯರ ಚಿತ್ತದೊಲ್ಲಭನಾಗಿ ಕಾಣುತ್ತಾನೆ. ಅದಕ್ಕಾಗಿ ಹೊಳೆವಂತ ರನ್ನದ ತೊಟ್ಟಿಲನ್ನು ರಚಿಸಿ, ಗುಲಗಂಜಿಯ ಮಾಲೆಯಿಂದ ಅಲಂಕರಿಸಿ ತೂಗುವ ಪ್ರಯತ್ನವನ್ನು ಮಾಡುತ್ತಾರೆ.

ಯಾರ ಕಂದ ನೀನಾರ ನಿಧಾನಿ । ಯಾರ ರತ್ನವೋ ನೀನಾರ ಮಾಣಿಕವೋ ।
ಸೇರಿತು ಎನಗೊಂದು ಚಿಂತಾಮಣಿಯೊಂದು । ಪೋರ ನಿನ್ನನು ಪಾಡಿ ತೂಗುವೆನು ॥ ಜೋ ಜೋ ॥
ಗುಣನಿಧಿಯೆ ನಿನ್ನನೆತ್ತಿ ಕೊಂಡಿದ್ದರೆ । ಮನೆಯ ಕೆಲಸವಾರು ಮಾಡುವರಯ್ಯ
ಮನಕೆ ಸುಖ ನಿದ್ರೆಯ ತಂದುಕೊ ಬೇಗ । ಫಣಿಶಯನನೆ ನಿನ್ನ ಪಾಡಿ ತೂಗುವೆನು ॥ ಜೋ ಜೋ ॥
ಅಂಡಜವಾಹನ ಅನಂತಮಹಿಮ । ಪುಂಡರೀಕಾಕ್ಷ ಶ್ರೀ ಪರಮಪಾವನ್ನ
ಹಿಂಡುದೈವದ ಗಂಡು ಉದ್ದಂಡನೆ । ಪಾಂಡುರಂಗ ಶ್ರೀ ಪುರಂದರವಿಠಲನೆ ॥ ಜೋ ಜೋ ॥
–ಪುರಂದರದಾಸರು.

ಇಲ್ಲಿ ಭಗವಂತನನ್ನು ತೂಗಿಪಾಡಿ ನಿದ್ರಿಸುವ ಇವರ ಕ್ರಮದಲ್ಲಿ ಲೌಕಿಕದ ಸೊಗಸು ಎದ್ದುತೋರುತ್ತದೆ. ಆದರೂ ಆ ಮಗು ಹಿಂಡುದೈವದ ಗಂಡನೆಂದು, ಉದ್ದಂಡನೆಂದು ಭಾವಿಸುವಲ್ಲಿ ಪುರಂದರದಾಸರು ಹಿಂಜರಿಯುವುದಿಲ್ಲ.

ಇವಲ್ಲದೆ, 'ಪವಡಿಸು ಪರಮಾತ್ಮನೇ', 'ಲಾಲಿಲಾಲಿ ನಮ್ಮ ಹರಿಯೇ ಲಾಲಿ', 'ಜೋಜೋ ಯಶೋದೆಯ ನಂದ ಮುಕುಂದನೆ' ಮುಂತಾದ ಇತರ ರಚನೆಗಳು ತೊಟ್ಟಿಲಶಿಶುವಲ್ಲದೆ ಇತರ ಕೇಳುಗರಿಗೂ ನಿದ್ದೆಯ ಕಾವನ್ನು ತರಿಸುವಂತಿದೆ. ಇದಕ್ಕೆ ಅವರ ರಚನೆಗಳಲ್ಲಿ ಕಾಣುವ ಸಾಮಾಜಿಕ ಕುಟುಂಬದ ಭಾವವಾಕ್ಯಗಳೇ ಕಾರಣ. ತೊಟ್ಟಿಲನ್ನು ಸಿಂಗರಿಸಿದ ಕ್ರಮ, 'ವೇಳೆಯಾಗಿದೆ, ಬಾಗಿಲಿಗೆ ಬೀಗಮುದ್ರೆಯಾಗಿದೆ,' 'ಪದ್ಮನಾಭನೆ ಮಲಗು ಹೊತ್ತಾಯಿತು', ಇವೆಲ್ಲವೂ ವರ್ತಮಾನಕ್ಕೆ ಸಂಬಧಿಸಿದ ಮನೋಜ್ಞ ಕಲ್ಪನೆಗಳು. ಇಲ್ಲಿ ಸಂಗೀತ ಮತ್ತು ಸಾಹಿತ್ಯಗಳು ಹೃದಯದ ಭಾವತಂತಿಗಳನ್ನು ಮೀಟಿದಾಗ ಮಾತ್ರ ಇಂತಹ ರಚನೆಗಳ ಸೃಷ್ಟಿಸಾಧ್ಯ. ಈ ಮೂಲಕವಾಗಿಯೇ ಪುರಂದರದಾಸರು ಪ್ರತ್ಯೇಕವಾದ ಭಾವಪ್ರಪಂಚವೊಂದನ್ನು ಸೃಷ್ಟಿಸುತ್ತಾರೆ.

ತೂಗಿರೆ ರಂಗನ ತೂಗಿರೆ ಕೃಷ್ಣನ ತೂಗಿರೆ ಅಚ್ಚುತಾನಂತನ ।
ತೂಗಿರೆ ವರಗಿರಿಯಪ್ಪ ತಿಮ್ಮಪ್ಪನ ತೂಗಿರೆ ಕಾವೇರಿ ರಂಗಯ್ಯನ ॥
ನಾಗಲೋಕದಲ್ಲಿ ನಾರಾಯಣ ಮಲಗ್ಯಾನೆ ನಾಗಕನ್ನಿಕೆಯರು ತೂಗಿರೆ ।
ನಾಗವೇಣಿಯರು ನೇಣ ಪಿಡಿದು ಕೊಂಡು ಬೇಗನೆ ತೊಟ್ಟಿಲ ತೂಗಿರೆ ॥–ಪುರಂದರದಾಸರು.

ಇಲ್ಲಿಯ ವಿಶೇಷವೆಂದರೆ ದಾಸರು ತಮ್ಮ ಭಾವಸಮುದ್ರದಲ್ಲಿ ಎಲ್ಲಾ ಲೋಕಗಳಿಗೂ ಹೋಗುತ್ತಾರೆ. ಇಂದ್ರಲೋಕಕ್ಕೂ ಹೋಗಿ ಇಂದ್ರಮುಖಿಯರಲ್ಲೂ ಬಾಲಭಗವಂತನನ್ನು ತೂಗುವಂತೆ ಕೇಳಿಕೊಳ್ಳುತ್ತಾರೆ. ಅವರಿಗೆ ಆತನ ಸಾವಿರ ನಾಮಾವಳಿಯನ್ನು, ಹರಿಸರ್ವೋತ್ತಮತ್ವವನ್ನು ಅರುಹುತ್ತಾರೆ. ಸಮಸ್ತಲೋಕದ ನಾರಿಯರಿಗೂ ಭಕ್ತಿಲಾಲಿತ್ಯದ ಲಾಲಿಪದದ ಸೊಗಸನ್ನು ಪ್ರಸರಿಸುತ್ತಾರೆ. ಇಲ್ಲಿ ಸಂಗೀತಭಾಷೆಯೂ ಇದೆ. ಆಡುಮಾತಿನ ಲಯಬದ್ಧ ಬಳಕೆಯೂ ಇದೆ. ಒಟ್ಟಿನಲ್ಲಿ ತಿಳಿಗನ್ನಡದ ದಾಸಪ್ರತಿಭೆಯನ್ನು ಜನರಿಗೆ ಸುಲಭವಾಗಿ ತೋರಿಸಿಕೊಡುತ್ತಾರೆ.

ಕನಕದಾಸರೂ ಕೂಡ ಪರಮಾತ್ಮನನ್ನು ಲಾಲಿಹಾಡಿ ಮಲಗಿಸಲು ಮರೆತವರಲ್ಲ. ಅವರ ರಚನೆಗಳೆಲ್ಲವೂ ವಿಶಿಷ್ಟ ಮಾದರಿ. ಕವಿಕುಲದಲ್ಲೇ ಕುಲಕವಿತಿಲಕರಾಗಿ ವಿಜೃಂಭಿಸಿದ್ದುದರಿಂದಲೇ ಅಭೂತಪೂರ್ವ ರಚನೆಗಳಿಗೆ ಕನಕದಾಸರು ಸಾಕ್ಷಿಯಾಗುತ್ತಾರೆ. ಲಾಲಿರಚನೆಗಳಲ್ಲಿ ಏಕತಾನತೆಯನ್ನು ಮೆರೆಯುತ್ತಾರೆ. ಸಮಕಾಲೀನ ಆಡುಮಾತಿಗೆ ಗೇಯಗುಣವನ್ನು ಆವಾಹನೆಗೊಳಿಸಿ ಬಾಲಭಗವಂತನನ್ನು ನಿದ್ರಿಸುವುದರಲ್ಲಿ ಇವರು ಸಿದ್ಧಹಸ್ತರಾಗುತ್ತಾರೆ.

ಲಾಲಿ ಪಾವನ ಚರಣ ಲಾಲಿ ಅಘಹರಣ । ಲಾಲಿ ವೆಂಕಟರಮಣ ಲಲಿತಕಲ್ಯಾಣ ॥

....

ನಂದ ಗೋಪ ಕುಮಾರ ನವನೀತ ಚೋರ । ಮಂದಾಕಿನೀ ಜನಕ ಮೋಹನಾಕಾರ ।
ಇಂದುಧರಸತಿ ವಿನುತ ವಿಶ್ವಸಂಚಾರ । ನಂದ ಗೋವಿಂದ ಮುಚುಕುಂದ ನುತಸಾರ॥

–ಕನಕದಾಸರು.

ಇಲ್ಲಿ ಭಗವಂತನ ಕೌಟುಂಬಿಕ ಹಿನ್ನಲೆಯನ್ನೇ ಸ್ವೀಕರಿಸಿ ಲಾಲಿಹಾಡುತ್ತಾರೆ. ಸ್ತುತಿಪರವಾದ ರಚನೆಗಳಿಗೆ ಹೆಚ್ಚು ಒತ್ತು ನೀಡುವವರು ಕನಕದಾಸರು ಎಂಬುದಕ್ಕೆ ಇಂತಹ ರಚನೆಗಳೇ ಉದಾಹರಣೆಗಳು.

ಪ್ರಸನ್ನವೆಂಕಟದಾಸರು(೧೬೮೦-೧೭೫೨) ಬಾಲಭಾಷೆಯಲ್ಲಿಯೇ ವಾತ್ಸಲ್ಯಭಾವವನ್ನು ಕೀರ್ತನೆಗಳಲ್ಲಿ ತುಂಬಿದವರು. ರಚನೆಗಳು ಜೀವತುಂಬಿಕೊಂಡು ಹರಿಯಬೇಕಾದರೆ ರಚನಾವಸ್ತುವಿಗೆ ಬೇಕಾದುದು ಭಾಷೆ ಮತ್ತು ಲಯ. ಇಂತಹ ಮೌಲ್ಯಗಳನ್ನು ವೃದ್ಧಿಸಿಕೊಂಡೇ ಲಾಲಿಕೀರ್ತನೆಗಳನ್ನು ರಚಿಸಿದುದು ಪ್ರಸನ್ನವೆಂಕಟದಾಸರ ಹೆಚ್ಚುಗಾರಿಕೆಯಾಗಿದೆ.

ಲಾಲಿ ಮುಕುಂದ ಲಾಲಿ ಗೋವಿಂದ । ಲಾಲಿ ಮಯ್ಯಾಲಾಲಿ
ಲಾಲಿ ಮೂರ್‍ಯೆದಾಲಿಪ್ಪೆ ಲಾಲಿಯರ ಪ್ರಭುಲಾಲಿ ॥ ಪ ॥
ಜಗ ಜಗುಳಿಸಿ ವಟ ಪತ್ರದಿ ಮಲಗಿದೆ । ಲಾಲಿ ಮಯ್ಯಾಲಾಲಿ
ಮಗುವಾಗಿ ಜಗದೊಳು ತೊಟ್ಟಿಲೊಳೊಪ್ಪಿದೆ । ಲಾಲಿ ಮಯ್ಯಾಲಾಲಿ ॥-ಪ್ರಸನ್ನವೆಂಕಟದಾಸರು

ಈ ಕೀರ್ತನೆಗಳಲ್ಲಿ ಎದ್ದುತೋರುವುದು ಅಚ್ಚುಕಟ್ಟುತನ. ಆದುದರಿಂದಲೇ ಅದು ಜನರ ಬಾಯಲ್ಲಿ ಇನ್ನೂ ಜೀವಂತ. ಮುಂದುವರಿಯುವ ಕೀರ್ತನೆಯಲ್ಲಿ ಭಾಗವತದ ಹತ್ತಾರು ಚಿತ್ರಗಳನ್ನು ಬಿಡಿಸುತ್ತಾಹೋಗುತ್ತಾರೆ. ಆ ಮೂಲಕವಾಗಿಯೇ ಲಾಲಿಹಾಡಬಯಸುತ್ತಾರೆ.

ಗುರು ಜಗನ್ನಾಥವಿಠಲದಾಸರು ಪರಮಾತ್ಮನ ಪಾರಮ್ಯವನ್ನು ತಮ್ಮ ಕೀರ್ತನೆಗಳಲ್ಲಿ ಹಾಡಿದ್ದು ಮಾತ್ರವಲ್ಲದೆ, ಆ ಹೊತ್ತಿಗಾಗಲೇ ಪವಾಡಪುರುಷರಾಗಿ ಧಾರ್ಮಿಕಕ್ರಾಂತಿಯನ್ನು ಆರಂಭಿಸಿ, ಪರಂಧಾಮಗೈದಿದ್ದ ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ಅವಿಚ್ಛಿನ್ನ ಭಕ್ತರಾಗಿಯೂ ಆಧ್ಯಾತ್ಮಿಕರಾಗಿಯೂ ಬೆಳೆದವರು. ಈ ನಿಟ್ಟಿನಲ್ಲಿ ಮಂತ್ರಾಲಯ ಪ್ರಭುಗಳನ್ನೇ ಲಾಲಿಹಾಡಿನಿಂದ ಸ್ತುತಿಸಿದವರು. ಪ್ರಾಯಶಃ ದಾಸಪರಂಪರೆಯ ಆಧ್ಯಾತ್ಮದಲ್ಲಿ ಯೋಗಪುರುಷನೊಬ್ಬನನ್ನು ಲಾಲಿಹಾಡಿನಿಂದ ಸ್ಮರಣೆಯನ್ನು ಮಾಡಿರುವಂತಹುದು ಇದೇ ಪ್ರಥಮವಾಗಿದ್ದಿರಬಹುದು.

ತೂಗಿರೆ ರಾಯರ ತೂಗಿರೆ ಗುರುವರರ । ತೂಗಿರೆ ಯತಿಕುಲ ತಿಲಕರ
ತೂಗಿರೆ ಯೋಗೀಂದ್ರ ಕರಕಮಲ ಪೂಜ್ಯರ । ತೂಗಿರೆ ಗುರು ರಾಘವೇಂದ್ರರ ॥
ಅದ್ವೈತ ಮತದ ವಿಧ್ವಂಸನ ನಿಜಗುರು । ಮಧ್ವಮತೋದ್ಧರರ ತೂಗಿರೆ
ಶುದ್ಧ ಸಂಕಲ್ಪದಿ ಬದ್ಧ ನಿಜ ಭಕ್ತರ । ಉದ್ಧಾರ ಮಾಳ್ಪರ ತೂಗಿರೆ ॥-ಗುರು ಜಗನ್ನಾಥವಿಠಲದಾಸರು

ಇಲ್ಲಿ ರಾಘವೇಂದ್ರತೀರ್ಥರ ಕುರಿತು ಭಕ್ತಿಯ ಪರಾಕಾಷ್ಠೆ ಒಂದೆಡೆಯಾದರೆ, ಇನ್ನೊಂದೆಡೆ ದ್ವೈತತತ್ವಕ್ಕೆ ಆದ್ಯತೆಯನ್ನು ನೀಡುವುದು ಶ್ರೀಗುರು ಜಗನ್ನಾಥವಿಠಲದಾಸರ ಧ್ಯೇಯವಾಗಿರುತ್ತದೆ. ಮಧ್ವಮತದಿಂದಲೇ ಜನರ ಉದ್ಧಾರವೆನ್ನುವಂತಹುದು ಎರಡನೆಯ ಕಲ್ಪನೆಯಾಗಿ ನಿಲ್ಲುತ್ತದೆ. ಒಟ್ಟಿನಲ್ಲಿ ದೈವಭಕ್ತನಾದವನೊಬ್ಬ ದೈವಾದರ್ಶವನ್ನು ಪಡೆದ ಇನ್ನೊಬ್ಬ ಯತಿವರ್ಯನನ್ನು ದೈವಿಕಕಲ್ಪನೆಯಿಂದಲೇ ಕಾಣುವಂತಹುದು ವಿಶೇಷ. ಪ್ರಸನ್ನವೆಂಕಟದಾಸರ ನಂತರದಲ್ಲಿ ಕಾಖಂಡಕಿ ಮಹೀಪತಿರಾಯರಿರಬಹುದು, ಕಾಖಂಡಕಿ ಕೃಷ್ಣರಾಯರಿರಬಹುದು, ಅಥವಾ ಗೋಪಾಲದಾಸರಿರಬಹುದು, ಇವರ ಯಾರ ದೃಷ್ಟಿಗೂ ತೋರದಿರುವ ಯತಿವರ್ಯರ ಕುರಿತಾದ ಲಾಲಿಹಾಡು ಗುರು ಜಗನ್ನಾಥವಿಠಲರಿಗೆ ಮನವರಿಕೆಯಾಗಿರುವುದು ವಿಶೇಷ.

ಗುರು ಜಗನ್ನಾಥವಿಠಲರ ನಂತರದಲ್ಲಿ ಲಾಲಿಹಾಡಿನ ಮಾಧುರ್ಯಾಕ್ಕೆ ಮನಸೋತವರು ಶ್ರೀವಿದ್ಯಾಪ್ರಸನ್ನ ತೀರ್ಥರು. ಅವರ ರಚನೆಗಳಾದ, 'ಕಂದನ ತೂಗಿದಳು ಯಶೋದೆ', 'ಮಲಗು ಮಲಗೆಲೋ ಸುಮ್ಮಾನೆ ಸುಕುಮಾರ, ಚೆಲುವ ಜೋಗುಳವ ಪಾಡುವೆ ಗೋಪಾಲ', 'ಜೋಜೋ ಸುಖಸಾರ ಜೋಜೋ ದೋಷವಿದೂರ' ಮೊದಲಾದ ರಚನೆಗಳಲ್ಲಿ ತಾಯಿ ಮಗುವಿನ ಸಂಭಾಷಣೆಯ ರಾಗಮಾಲಿಕೆಯನ್ನು ನಾವು ಕಾಣಲುಸಾಧ್ಯ. ಇವಷ್ಟೇ ಅಲ್ಲದೆ, ಗುರು ಮಧ್ವಪತಿ ವಿಠಲದಾಸರ 'ತೂಗಿದಳೇ ರಂಗನಾ ಯಶೋದಾಸಾಗರಪಾಲ ಶಯನನ', ದಕ್ಷಿಣಕನ್ನಡ ಜಿಲ್ಲೆಯವರಾದ ಮೂಲ್ಕಿ ಹರಿದಾಸ ವೆಂಕಣ್ಣಕವಿಗಳ 'ಜೋಜೋ ದೇವಕಿದೇವಿಯ ಕಂದಾ, ಜೋಜೋ ಗೋವರ್ಧನಧಾರಿ ಮುಕುಂದಾ', ಹರಿದಾಸ ಪಾವಂಜೆ ಲಕ್ಷ್ಮೀನಾರಾಯಣಪ್ಪಯ್ಯನವರ 'ಹೇಮದಿ ತೊಟ್ಟಿಲ ಭಾಮೆಯರ್ಹೂಡಿ, ಕೋಮಲ ಕಾಂಚನಧಾಮನ ಮಾಡಿ', ಮೈಸೂರಿನ ಗುರು ಶ್ರೀಗೋವಿಂದವಿಠಲದಾಸರ 'ಏಕಾಂತ ಭಕ್ತಿಪ್ರಿಯ ಜೋಜೋ ಹರಿಯೆ', ಶ್ರೀವರಾಹ ಹರಿವಿಠಲದಾಸರ 'ತೂಗೀರೆ ರಾಮನ್ನ ತೂಗೀರೆ ಕೃಷ್ಣನ್ನ ತೂಗೀರೆ ಭಾಮೆಯ ಪ್ರಿಯನನ್ನ', ಶ್ರೀಗುರುಪ್ರಿಯ ವಿಠಲದಾಸರ 'ಕಂದನ ತೂಗಿದಳು ಕೌಸಲ್ಯಾ' ಈ ಮೊದಲಾದವುಗಳು ಇತ್ತೀಚಿನ ಕಾಲದ ರಚನೆಗಳೆಂದೇ ಹೇಳಬೇಕು. ಆದರೆ, ೨೦ನೇ ಶತಮಾನದಲ್ಲಿ ದಕ್ಷಿಣಕನ್ನಡದ ಕಳುವಾರುವಿನಲ್ಲಿ ವಾಸಿಸುತ್ತಿದ್ದ ಹರಿದಾಸ ವೆಂಕಟರಾಯರ 'ಜೋಜೋ ತಾರಕವೈರಿ ದ್ವಾದಶನೇತ್ರ, ಜೋಜೋ ಸ್ಮರವೈರಿ ಪುತ್ರಾಷಡ್ವಕ್ತ್ರಾ, ಜೋಜೋ ಚರಿತ ಲೋಕದೆಳ್ಳಿನ್ನ ಸ್ತೋತ್ರಾ । ಜೋಜೋ ಶರಣರ ಸ್ತುತಿಗೆ ಸತ್ಪಾತ್ರ' ಎಂಬ ರಚನೆಯಲ್ಲಿ ಕಂಡುಬರುವ ಕುಕ್ಕೇ ಶ್ರೀಸುಬ್ರಹ್ಮಣ್ಯ ದೇವರ ಕುರಿತಾದ ಲಾಲಿಕೀರ್ತನೆ ಮಾತ್ರ ದಾಸಸಾಹಿತ್ಯದಲ್ಲಿ ಅಪರೂಪವೆಂದೇ ಹೇಳಬೇಕು.

ಕಾಖಂಡಕಿ ಕೃಷ್ಣರಾಯರ ದೃಷ್ಟಿಯಲ್ಲಿ ಲಾಲಿಚಿಂತನೆ ತೀರ ವಾಸ್ತವಿಕ. ಇಲ್ಲಿ ಮಗುವಿಗೆ ಜೋಗಿ ಬಂದನೆಂದು ಸುಳ್ಳುಹೇಳಿ, ಹೆದರಿಸಿ ಮಲಗಿಸುವ ಕ್ರಮವೊಂದು ಮನೋಜ್ಞವಾಗಿದೆ.

ಜೋಗಿ ಬಂದನು ಗೋವಿಂದ । ನಮ್ಮ ಬಾಗಿಲಕಾ ತಡೆತಂದಾ ।
ಬ್ಯಾಗನೆ ಪವಡಿಸೋ ಕಂದಾ । ನಾನು ಜೋಗುಳ ಹಾಡುವೆ ಛಂದಾ ॥
ಸಿರಿರಾಮ ನಾಮದ ಒಲಿದು । ತಾನು ಕರದಿ ಕಪಾಲವ ಪಿಡಿದು ।
ಧರೆಯೊಳು ಭಿಕ್ಷಾನೆವದಿಂದು । ಹರ ತಿರುಗುವ ವಿಜ್ಞಾನಸಿಂಧು ॥ –ಕಾಖಂಡಕಿ ಕೃಷ್ಣರಾಯರು.

ಲಾಲಿಕೀರ್ತನಾಸಾಹಿತ್ಯದಲ್ಲಿ ಮಲಗಿನಿದ್ರಿಸಿದ ಮಗುವನ್ನೂ ದಾಸಪರಂಪರೆ ಜೋಗುಳ ಹಾಡದೆ ಬಿಟ್ಟಿಲ್ಲ. ಆ ಪ್ರಯತ್ನದಲ್ಲಿ ಮೊದಲು ಕಾಣುವ ಹೆಸರು ಭೀಮೇಶಕೃಷ್ಣ ಅಂಕಿತದಿಂದ ಕೂಡಿದ ಹರಪ್ಪನಹಳ್ಳಿ ಭೀಮವ್ವ ಅವರದು.

ಆಲದೆಲೆಯ ಮ್ಯಾಲೆ ಮಲಗಿದ್ದಾದಿ ಕೇಶವನ ನೋಡ ಬನ್ನಿ–
ರಾಲದೆಲೆಯ ಮ್ಯಾಲೆ ಕೃಷ್ಣ ।

ಬಾಲ ರೂಪ ಧರಿಸಿ ಅಂಧಕಾರ ಪ್ರಳಯ ಜಲದ ಒಳಗೊಂ–
ದಾಲದೆಲೆಯ ಮ್ಯಾಲೆ ಕೃಷ್ಣ ॥ –ಹರಪನಹಳ್ಳಿ ಭೀಮವ್ವನವರು.

ದೇಸೀ ಸೊಗಡು ಇಲ್ಲಿಯ ವಿಶೇಷತೆ. ಒಟ್ಟಿನಲ್ಲಿ ಲಾಲಿಹಾಡಿನ ಕೀರ್ತನಾರಚನೆಯು ಪ್ರಾಚೀನ ದಾಸರುಗಳಿಂದ ಹಿಡಿದು ನಂತರದಲ್ಲಿ ಬಂದ ಹೆಚ್ಚಿನ ದಾಸರುಗಳಲ್ಲಿ ಮುಂದುವರಿದುಕೊಂಡು ಬಂದಿದೆ.

*****

ಹೀಗೆ ನೂರಾರು ಹರಿದಾಸರುಗಳನ್ನು ಪಡೆದುಕೊಂಡ ದಾಸಪಂಥದ ಸಾಹಿತ್ಯ ಕಾಯಕವು ವರ್ಣಮಯವಾದುದು. ಇಲ್ಲಿ 'ಡಾಂಭಿಕತೆ, ಬೂಟಾಟಿಕೆಯಂತಹ ಸೋಗಿನ ಸಂಸ್ಕೃತಿಯನ್ನು ವಿಡಂಬಿಸಿ ವಿನಯವಂತಿಕೆ, ಮಾನವೀಯತೆಯನ್ನು ಕಲಿಸುವ ದಾಸರ ಹಾಡುಗಳು ಎಲ್ಲ ಕಾಲಕ್ಕೂ ಸಲ್ಲಬಹುದಾದ ಸತ್ವವನ್ನು ಪಡೆದುಕೊಂಡಿವೆ' ಎಂದು ಹೇಳುವ ಬಸವರಾಜ ಸಬರದ ಅವರ ಮಾತನ್ನು ಪೂರ್ಣಪ್ರಮಾಣದಲ್ಲಿ ಒಪ್ಪಬೇಕಾಗುತ್ತದೆ.[೧೬] ಅಲ್ಲದೆ ಇಲ್ಲಿ ಬರುವ ದಾಸರುರಾರೂ ಗುಂಪು ಕಟ್ಟಲಿಲ್ಲ. ಅವರು ಜನಪರವಾಗಿದ್ದರೂ ಗುಂಪಿನ ಗೊಂದಲದಲ್ಲಿ ಕಳೆದುಹೋಗದೆ ಬಾಳಿದರು. ಕ್ರಾಂತಿ, ನೂತನ ಧರ್ಮಸ್ಥಾಪನೆ, ಮತಪರಿವರ್ತನೆಗಳಂತಹ ವಿಕಾರಗಳಿಗೆ ಮುಂದಾಗದೆ, 'ನಮ್ಮ ಮತಿ ಶುದ್ಧವಾಗಲಿ; ನಡೆ ಸರಳವಾಗಲಿ, ಬದುಕು ಸುಂದರವಾಗಲಿ' ಎಂಬ ದಿಕ್ಕಿನಲ್ಲಿ ತಮ್ಮ ಸರ್ವಸ್ವವನ್ನೂ ಸವೆಸಿದರು ಎಂಬ ಮಾನಕರಿ ಶ್ರೀನಿವಾಸಾಚಾರ್ಯರ ಬರಹದಲ್ಲೂ ಸತ್ಯವಿದೆ.[೧೭] ಒಟ್ಟಿನಲ್ಲಿ ಆದರ್ಶವನ್ನು ಸಾರುವ ಪುರಾಣಗಳು ಮತ್ತು ತತ್ವವನ್ನು ಪ್ರತಿನಿಧಿಸುವ ಪ್ರತಿಮೆಗಳಿಂದ ತಿಳಿಹೇಳುವ ಇಲ್ಲಿಯ ಕೀರ್ತನಾರಚನೆಗಳಲ್ಲಿ ಹೊಸತನವಿದೆ, ಅಂತೆಯೇ ಆಕರ್ಷಣೆಯೂ ಇದೆ. ಆದರೆ ಇಲ್ಲಿಯ ವಿಷಾದವೆಂದರೆ, ಹರಿದಾಸಪಂಥದಲ್ಲಿ ಸಿಗುವ ದಾಸರುಗಳ ಹೆಸರುಗಳಿಗಿಂತಲೂ ಸಿಗದಿರುವ ದಾಸರುಗಳ ಹೆಸರುಗಳು ಹೆಚ್ಚೆಂದು ಭಾವಿಸಿಕೊಳ್ಳಬೇಕಾಗುತ್ತದೆ. ಸಿಕ್ಕಿರುವ ದಾಸಕೀರ್ತನೆಯ ಸಾಹಿತ್ಯಕ್ಕಿಂತಲೂ ಸಿಗದಿರುವ ಕೀರ್ತನಾಸಾಹಿತ್ಯವು ಅಧಿಕವೆಂದು ಭಾವಿಸಿಕೊಳ್ಳಬಹುದಾಗಿದೆ. ಆದರೆ ಹರಿದಾಸ ಸಾಹಿತ್ಯವನ್ನು ಪ್ರೋತ್ಸಾಹಿಸುವ ಭಜನಾಮಂಡಲಿಗಳು, ಹರಿಕೀರ್ತನಾಕಾರರು ನಮ್ಮ ಸಮಾಜದ ನಡುವೆಯೇ ಇದ್ದರೂ, ಆ ಸಂಘಟನೆಗಳಿಗೆ ಪ್ರೋತ್ಸಾಹದ ಕೊರತೆಯು ಎದ್ದುತೋರುತ್ತದೆ. ಪ್ರಾಯಶಃ ಈಗಿನ ಸ್ಥಿತಿಯನ್ನು ನೆನಪಿಸಿಕೊಂಡು, ಭವಿಷ್ಯವನ್ನು ಕಲ್ಪಿಸಿಕೊಂಡರೆ, ಅಲ್ಲಿ ದಾಸಸಾಹಿತ್ಯದ, ಕೀರ್ತನಕಾರರ, ಹರಿಕಥೆಗಳ ಕುರುಹು ಮಾತ್ರ ಕಾಣಲು ಸಾಧ್ಯವಿದೆ.

ದಾಸಸಾಹಿತ್ಯದ ರಚನೆಯ ಕಾಯಕವು ಅಧ್ಯಯನಾಸಕ್ತಿಯನ್ನು ಉಳಿಸುವಂತೆ, ದಾಸಾಧ್ಯಯನವನ್ನೇ ಕಾಯಕವನ್ನಾಗಿ ಮಾಡಿಕೊಂಡ ಮೂವರು ಜರ್ಮನ್ನರ ಸಾಧನೆಯೂ ಇಲ್ಲಿ ಮುಖ್ಯವಾಗುತ್ತದೆ. ಅವರುಗಳೆಂದರೆ, ವೈಗ್ಲೆ, ಮೋಗ್ಲಿಂಗ್ ಮತ್ತು ಕಿಟ್ಟೆಲ್. ಇವರುಗಳು ಬಾಸೆಲ್ ಮಿಷನ್ ಮೂಲಕವಾಗಿ ಕರ್ನಾಟಕಕ್ಕೆ ಬಂದವರು. ೧೮೪೮ ರ ಹೊತ್ತಿಗೆ ವೈಗ್ಲೆಯು ಜರ್ಮನ್ ಪತ್ರಿಕೆಯಾದ ZDMG ಯಲ್ಲಿ ಕನ್ನಡಸಾಹಿತ್ಯದ ಚರಿತ್ರೆಯನ್ನು ಪ್ರಕಟಿಸಿ ಅದರಲ್ಲಿ ದಾಸಸಾಹಿತ್ಯದ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಹೇಳಿದನು. ಈತನ ಸಮಕಾಲೀನನಾದ

ಅಧ್ಯಾಯ :೩. ಅಡಿ ಟಿಪ್ಪಣಿ

೧. ಭಗವದ್ಗೀತೆ–ಯಥಾರೂಪ, ಅಧ್ಯಾಯ ೯, ಶ್ಲೋಕ ೧೪, ಪುಟ ಸಂ–೪೩೭.

ಸತತಂ ಕೀರ್ತಯಂತೋ ಮಾಂ ಯತಂತಶ್ಚ ದೃಢವ್ರತಾ: ।
ನಮಸ್ಯಂತಶ್ಚ ಮಾಂ ಭಕ್ತ್ಯಾ ನಿತ್ಯ ಯುಕ್ತಾ ಉಪಾಸತೇ ॥

ಭಗವದ್ಗೀತೆಯಲ್ಲಿಯೂ ಕೀರ್ತನೆಯ ಉಲ್ಲೇಖವಿರುವುದರಿಂದ ಶ್ರೀಕೃಷ್ಣನ ಜೀವಿತಕಾಲದಲ್ಲಿ ಕೀರ್ತನ ಸಂಪ್ರದಾಯವು ಪರಮಪದವಿಯನ್ನೇ ಪಡೆದಿರಬೇಕೆಂಬುದು ಊಹೆ.

೨. ವೇದಾಂತ ದರ್ಶನ, ಅಧ್ಯಾಯ ೮, ಪುಟ ಸಂ–೬೮.

ಧ್ಯಾಯಾನ್ ಕೃತೇ ಯಜನ್ ಯಜ್ಞೈಃ ತ್ರೇತಾಯಾಂ ದ್ವಾಪರೇರ್ಚಯನ್ ।
ಯದ್ ಆಪ್ನೋತಿ ತದ್ ಆಪ್ನೋತಿ ಕಲೌ ಸಂಕೀರ್ತ್ಯ ಕೇಶವಂ ॥

೩. ದಾಸಸಾಹಿತ್ಯ ದರ್ಶನ, ಪುಟ ಸಂ–೩೦೧.

ಇದು ಪದ್ಮಪುರಾಣದಲ್ಲಿ ಬರುವ ಕೀರ್ತನೆಯ ಪ್ರಸ್ತಾಪ. ವ್ಯಾಸಮಹರ್ಷಿಗಳ ಪುತ್ರರಾದ ಶುಕ್ರಾಚಾರ್ಯರು ಸನಕಾದಿಗಳಿಂದ ಕೂಡಿದ್ದ ಸಭೆಯೊಂದರಲ್ಲಿ ನವರಸ ತುಲ್ಯವಾದ ಕೀರ್ತನೆಯೊಂದನ್ನು ಹಾಡಿದರಂತೆ. ಆ ಸಂದರ್ಭದಲ್ಲಿ ಪ್ರಹ್ಲಾದನು ತಾಳವನ್ನೂ, ಉದ್ಧವನು ಕಾಂಸ್ಯವನ್ನೂ, ನಾರದರು ವೀಣೆಯನ್ನೂ, ಇಂದ್ರನು ಮೃದಂಗವನ್ನೂ ಬಾರಿಸಿದರಂತೆ. ಅರ್ಜುನನು ರಾಗಾಲಾಪನೆಯೊಂದಿಗೆ ಸ್ವರ ಕಲ್ಪನೆಗಳನ್ನು ಮಾಡಿದಾಗ ಸನಕಾದಿಗಳು ಕೀರ್ತನ ಸ್ವಾರಸ್ಯಕ್ಕೆ ಕರತಾಡನದೊಂದಿಗೆ ಜಯ ಘೋಷವನ್ನೂ ಮಾಡಿದರಂತೆ.

ಪ್ರಹ್ಲಾದಸ್ತಾಲಧಾರೀ ತರಗಲಗತಿತಯಾಚೋದ್ಧವ: ।
ವೀಣಾಧಾರೀ ಸುರರ್ಷಿ: ಸ್ವರಕುಶಲತಯಾ ರಾಗಕರ್ತಾರ್ಜುನೋ ಭೂತ್ ॥
ಇಂದ್ರೋವಾದೀನ್ಮೃದಂಗಂ ಜಯಜಯ ಸುಕರಾ ಕೀರ್ತನೇ ತೇ ಕುಮಾರಾ: ।
ತತ್ರಾಗ್ರೇ ಭಾವ ವಕ್ತಾರಸರಚನತಯಾ ವ್ಯಾಸ ಪುತ್ರ ಶ್ಯುಕೋ ಭೂತ್ ॥

೪. ಕರ್ನಾಟ ಭಕ್ತವಿಜಯ, ಪುಟ ಸಂ–೨೧೬.

ಅರ್ಥಶಾಸ್ತ್ರಜ್ಞನಾದ ಚಾಣಾಕ್ಯನು ತನ್ನ ರಾಜನಾದ ಚಂದ್ರಗುಪ್ತನ ರಾಜ್ಯ ವಿಸ್ತರಣೆಗೆ ಸಹಾಯಕರಾದ ಒಂದು ಕೀರ್ತನಕಾರರ ತಂಡವನ್ನು ರಚಿಸಿ, ಅನ್ಯರಾಜ್ಯಗಳಲ್ಲಿ ಸಂಚರಿಸಿ, ಪಾಂಡಿತ್ಯ ಪ್ರದರ್ಶಿಸಿ, ಜನಾದರಣೆ ಪಡೆದು ಕೊಂಡಿದ್ದನಂತೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಧರ್ಮೋಪದೇಶವನ್ನು ಮಾತ್ರ ಮಾಡಬೇಕಾಗಿದ್ದ ಭಾಗವತ ಧರ್ಮಾವಲಂಬಿಗಳು ರಾಜಕೀಯ ನಿಪುಣರೂ ಆಗಿಹೋದುದು ಕಾಲಗತಿಯಲ್ಲಾದ ಮುಖ್ಯ ಬದಲಾವಣೆ ಎನ್ನಬೇಕು, ಪುಟ ಸಂ–೨೧೬.

೫. ಶ್ರೀಪುರಂದರ ಸಾಹಿತ್ಯ–೧, ಪುಟ ಸಂ–೧೫೬.

ಶ್ರೀಹಂಸಂ ಪರಮಾತ್ಮಾನಂ ವಿರಿಂಚಿಂ ಸನಕಾದಿಕಾನ್ ।
ದುರ್ವಾಸಸೋ ಜ್ಞಾನನಿಧೀನ್ವಿಂದ್ರವಾಹನ ತೀರ್ಥಕಾನ್ ॥

(ಬೆಟಗೇರಿ ಕೃಷ್ಣಶರ್ಮ, ಬೆಂಗೇರಿ ಹುಚ್ಚರಾಯರು ಸಂಪಾದಿಸಿದ 'ಶ್ರೀಪುರಂದರ ಸಾಹಿತ್ಯ–೧ 'ಪೂಜಾತತ್ವ'.

೬. ದಾಸಸಾಹಿತ್ಯ ದರ್ಶನ, ಪುಟ ಸಂ–೪೬.

೭. ಈ ಪರಿಯ ಸೊಬಗು/ದಾಸಸಾಹಿತ್ಯ ಮತ್ತು ಮಹಿಳೆ, ಪುಟ ಸಂ–೩೨೮.

೮. ಈ ಪರಿಯ ಸೊಬಗು/ದಾಸಸಾಹಿತ್ಯ ಮತ್ತು ಮಹಿಳೆ, ಪುಟ ಸಂ–೩೨೯.

೯. ದಾಸಸಾಹಿತ್ಯ ದರ್ಶನ, ಪುಟ ಸಂ–೩೪೬.

ಗಲಗಲಿ ಅವ್ವನವರ ಮದುವೆಯಲ್ಲಿ ಮದುಮಗನಾದ ಮುದ್ಗಲಾಚಾರ್ಯರಿಗೆ ೯೫ ವರ್ಷ ವಯಸ್ಸಾಗಿತ್ತೆಂದು ಹೇಳಲಾಗುತ್ತಿದೆ.

೧೦. ಈ ಪರಿಯ ಸೊಬಗು/ದಾಸಸಾಹಿತ್ಯ ಮತ್ತು ಮಹಿಳೆ, ಪುಟ ಸಂ–೩೩೦.

೧೧. ಶ್ರೀ ವ್ಯಾಸರಾಯರ ಕೃತಿಗಳು,–೨೦೦೧. ಪೀಠಿಕೆ. ಪುಟ.೨೦.

ವಿದೇಶೀ ಪ್ರವಾಸಿಗರ ಹೇಳಿಕೆಗಳು:–

"ವಿಜಯನಗರದ ರಾಜನು ಬ್ರಹ್ಮಚಾರಿಯೂ, ವಿದ್ವಾಂಸನೂ ಆದ ಒಬ್ಬ ಬ್ರಾಹ್ಮಣನಿಂದ ನಿತ್ಯವೂ ಉಪದೇಶ ಪಡೆಯುತ್ತಿರುವನು"–ಕ್ರಿ.ಶ.೧೫೩೭ ರಲ್ಲಿ ಬಂದ ಪೋರ್ಚುಗೀಸ್ ಪ್ರವಾಸಿ – 'ನ್ಯೂನಿಝ್'.

"ಅರಸನಿಗೆ ಗುರುವೆನಿಸಿ ಆಪ್ತ ಪ್ರಧಾನನೊಬ್ಬ ವೃದ್ಧನಿರುತಿಹನಾತಿ ಸನ್ಯಾಸಿ ಇವನ ಅಪ್ಪಣೆಯಂತೆ ರಾಜನು ಅನು ದಿನವೂ ನಡೆಯುವನು"–ಹರ್‌ವರ್ಟ್ ಲಿಂಕನ್.

೧೨. ಅನುಭಾವ : ಸಾಂಸ್ಕ ತಿಕ ಸಮಸ್ಯೆ ಮತ್ತು ಹುಡುಕಾಟ, ಪುಟ ಸಂ–೬೮.

೧೩. ದಾಸಸಾಹಿತ್ಯದ ಶಬ್ದ ಶಿಲ್ಪ, ಪುಟ ಸಂ: ೫೮.

೧೪. ಶ್ರೀ ಕರ್ನಾಟಕ ಭಕ್ತವಿಜಯ, ಪುಟ ಸಂ–೧೫೧.

ಇವರ ಈ 'ಲಕ್ಷ್ಮೀಶೋಭಾನ'ವು ಮದುವೆಯ ಸಂದರ್ಭದಲ್ಲಿ ಮಾತ್ರವಲ್ಲದೆ, ಶ್ರಾವಣ ಶುಕ್ರವಾರದಲ್ಲೂ ಹಾಡುವ ಪದ್ಧತಿ ಬೆಳೆದುಕೊಂಡು ಬಂದಿದೆ. ಶ್ರೀವಾದಿರಾಜ ಮುನಿಗಳ ಭಕ್ತರಲ್ಲೊಬ್ಬನಾದ ಅರಸಪ್ಪ ನಾಯಕನ ಅಳಿಯನು ಕಲ್ಯಾಣಮಂಟಪದಲ್ಲೇ ಅಸುನೀಗಲು, ಶ್ರೀವಾದಿರಾಜರು ಲಕ್ಷ್ಮೀಶೋಭಾನೆಯನ್ನು ಹಾಡಿ, ನಾಯಕನ ಸತ್ತ ಅಳಿಯನನ್ನು ಬದುಕಿಸಿದರೆಂದೂ, ಮದುಮಗಳಿಗೆ ಮಾಂಗಲ್ಯಭಾಗ್ಯವನ್ನು ಕರುಣಿಸಿದರೆಂದೂ ಪ್ರತೀತಿಯಿದೆ. 'ಲಕ್ಷ್ಮೀಶೋಭನ'ದ ಕೊನೆಯ ಚರಣವನ್ನು ಗಮನಿಸಿದಾಗ, ಈ ಮೇಲಿನ ಘಟನೆ ಇನ್ನಷ್ಟು ಸತ್ಯವಾಗುತ್ತದೆ.

೧೫. ಶ್ರೀ ಕರ್ನಾಟಕ ಭಕ್ತ ವಿಜಯ, ಪುಟ ಸಂ–೧೮೮.

೧೬. ಪುರಂದರದಾಸರ ಆಯ್ದ ಕೀರ್ತನೆಗಳು, (ಪ್ರಸ್ತಾವನೆ) ಪುಟ ಸಂ–೧೩.

೧೭. ಹರಿದಾಸ ಸಾಹಿತ್ಯ–ಶ್ರೀಮದ್ಭಾಗವತ:ಋಣ ಮತ್ತು ವೃದ್ಧಿ, ಪುಟ ಸಂ–೪.

೧೮.ಈ ಪರಿಯ ಸೊಬಗು/ದಾಸ ಸಾಹಿತ್ಯದ ಅಧ್ಯಯನ: ಐತಿಹಾಸಿಕ ಪರಿಶೀಲನೆ, ಪುಟ ಸಂ–೩೮೬.

೧೯.ಈ ಪರಿಯ ಸೊಬಗು/ದಾಸ ಸಾಹಿತ್ಯದ ಅಧ್ಯಯನ: ಐತಿಹಾಸಿಕ ಪರಿಶೀಲನೆ, ಪುಟ ಸಂ–೩೮೬.

****

ಅಧ್ಯಾಯ : ೪

ಚೈತನ್ಯಪಂಥ–ಉಗಮ ಮತ್ತು ವಿಕಾಸ

ವನ್ದೇ ಗುರೂನ್ ಈಶ ಭಕ್ತಾನ್ ಈಶಮ್ ಈಶಾವತಾರಕಾನ್ ।
ತತ್ಪ್ರಕಾಶಾಂಶ್ಚ ತಚ್ಛಕ್ತೀಃ ಕೃಷ್ಣಚೈತನ್ಯ ಸಂಜ್ಞಕಮ್ ॥ –ಚೈತನ್ಯ ಚರಿತಾಮೃತ

ಮಧ್ಯಕಾಲೀನ ಭಾರತದ ಚರಿತ್ರೆಯೆಂದರೆ ಅದು ಭಕ್ತಿಪಂಥದ, ಅನುಭಾವಿ ಸಂತರ ದಿವ್ಯಚರಿತೆ. ಈ ಚರಿತೆಯು ರಾಜಕೀಯ ವಿಪ್ಲವದ, ಸಾಮಾಜಿಕ ಅರಾಜಕತೆಗಳ ಗೊಂದಲದಲ್ಲಿ ಹುಟ್ಟಿದ್ದು. ಮಹಾರಾಷ್ಟ್ರದ ನಾಮದೇವ, ತುಕಾರಾಮ, ಗುಜರಾತಿನ ನರಸೀಮೆಹ್ತ, ರಾಜಸ್ಥಾನದ ಮೀರಾಬಾಯಿ, ಉತ್ತರಪ್ರದೇಶದ ಕಬೀರ, ಸೂರದಾಸ, ತುಳಸೀದಾಸ, ಆಂಧ್ರದ ಅನ್ನಮಾಚಾರ್ಯ, ತ್ಯಾಗರಾಜ ಇವರೆಲ್ಲ ತತ್ತ್ವಶಾಸ್ತ್ರದಲ್ಲಿ ಬಿಗಿದಿದ್ದ ವೈದಿಕವಿಚಾರಕ್ಕೆ ಭಕ್ತಿಯ ಅನುಸಂದಾನದ ಮೂಲಕ ಹೊಸದಾರಿಯನ್ನು ತೋರಿಸಿದವರು. ಈ ನೆಲೆಯಲ್ಲಿಯೇ ಮೂಡಿಬಂದುದು ಬಂಗಾಳದ ಚೈತನ್ಯಪಂಥ ಅಥವಾ ಗೌಡೀಯಪಂಥ.

'ಚೈತನ್ಯ' ಎಂದರೆ 'ಜೀವಂತ ಶಕ್ತಿ'ಎಂದರ್ಥ. 'ಚರಿತ' ಎಂದರೆ 'ಗುಣ'ವೆಂದೂ, 'ಅಮೃತ'ವೆಂದರೆ 'ಅಮರ'ವೆಂದೂ ಅರ್ಥವಿಸಬೇಕಾಗುತ್ತದೆ. ಅಂದರೆ ಚಟುವಟಿಕೆಯಲ್ಲಿರುವ ಜೀವಶಕ್ತಿ ಎಂದುಕೊಳ್ಳಬಹುದು. ಅಂದಮಾತ್ರಕ್ಕೆ ಜೀವಶಕ್ತಿ ಭೌತಿಕಸ್ಥಿತಿಯಲ್ಲಿದ್ದರೂ ಆ ಸ್ಥಿತಿಯನ್ನು ಅಮೃತವೆಂದು ಭಾವಿಸಿಕೊಳ್ಳಬಾರದು. ಇಲ್ಲಿಯ 'ಚೈತನ್ಯ ಚರಿತಾಮೃತ' ಎನ್ನುವ ಪದವನ್ನು 'ಅಮರತ್ವದಲ್ಲಿರುವ ಜೀವಶಕ್ತಿಯ ಒಂದು ಗುಣ'ವೆಂದು ನಾವು ಅರ್ಥವಿಸಬೇಕಾಗುತ್ತದೆ.

ಉತ್ತರಭಾರತದಲ್ಲಿ ಹುಟ್ಟಿದ ಚೈತನ್ಯಪಂಥವನ್ನು ಮೊದಲು ಗೌಡೀಯಪಂಥವೆಂದೇ ಕರೆಯುತ್ತಿದ್ದರು. ಇಲ್ಲಿ 'ಗೌಡೀಯ'ವೆಂದರೆ ಹಿಮಾಲಯ ಪರ್ವತದ ಹಾಗೂ ವಿಂಧ್ಯಪರ್ವತದ ಉತ್ತರಭಾಗದ ಭಾರತದ ನೆಲವನ್ನು ಸೂಚಿಸುತ್ತದೆ. ಈ ಭಾಗವನ್ನು 'ಆರ್ಯಾವರ್ತ', 'ಆರ್ಯರ ಪ್ರದೇಶ'ವೆಂದೂ ಕರೆಯಲಾಗುತ್ತದೆ. ಪ್ರಾಚೀನರು ಭಾರತದ ಈ ಭಾಗವನ್ನು ಐದು ಭಾಗಗಳಾಗಿ ವಿಂಗಡಿಸಿ 'ಪಂಚಗೌಡ' ಕರೆದಿದ್ದಾರೆ. ಅವು, ೧. ಸಾರಸ್ವತ (ಕಾಶ್ಮೀರ ಮತ್ತು ಪಂಜಾಬ್), ೨. ಕನ್ಯಾಕುಬ್ಜ (ಲಕ್ನೋ ಸೇರಿದಂತೆ ಉತ್ತರಪ್ರದೇಶ), ೩. ಮಧ್ಯಗೌಡ (ಮಧ್ಯಪ್ರದೇಶ), ೪. ಮೈಥಿಲ (ಬಿಹಾರ ಮತ್ತು ಬಂಗಾಳದ ಸ್ವಲ್ಪ ಭಾಗ), ೫. ಉತ್ಕಲ (ಬಂಗಾಳದ ಸ್ವಲ್ಪ ಭಾಗ ಮತ್ತು ಒರಿಸ್ಸಾ). ಬಂಗಾಳವನ್ನು ಆಳುತ್ತಿದ್ದ ರಾಜಾ ಲಕ್ಷ್ಮಣಸೇನನು ತನ್ನ ರಾಜಧಾನಿಯನ್ನು 'ಗೌಡ' ಎಂದು ಕರೆದ. ಅಲ್ಲಿಂದ ಮುಂದೆ ಆ ರಾಜ್ಯವು 'ಗೌಡಪುರ'ವೆಂದೂ ಕ್ರಮೇಣ 'ಮಾಯಾಪುರ'ವೆಂದೂ ಪ್ರಸಿದ್ಧವಾಯಿತು. ಅಂತೆಯೇ ಒರಿಸ್ಸಾದ ಭಕ್ತರನ್ನು 'ಉಡಿಯ'ರೆಂದೂ ಬಂಗಾಳದ ಭಕ್ತರನ್ನು 'ಗೌಡೀಯ'ರೆಂದೂ ಕರೆಯುವ ಸಂಪ್ರದಾಯವೊಂದು ಮುಂದುವರೆಯಿತು.[೧] ಪಶ್ಚಿಮಬಂಗಾಳ ಮಾಯಾಪುರದಲ್ಲಿ ಹುಟ್ಟಿದ ಚೈತನ್ಯ

ಮಹಾಪ್ರಭುಗಳು ಈಶ್ವರಪುರಿಯವರ ಪ್ರಭಾವಕ್ಕೊಳಗಾಗಿ, ಗೌಡೀಯವೆಂಬ ವೈಷ್ಣವಪಂಥವನ್ನು ಬಲವಾಗಿ ಸ್ಥಾಪಿಸಿದರು. ಇಲ್ಲಿಂದ ಈ ಗೌಡೀಯಪಂಥವು 'ಚೈತನ್ಯಪಂಥ'ವೆಂದೇ ಪ್ರಸಿದ್ಧಿಯನ್ನು ಪಡೆಯಿತು.

೪.೧ : ಬಂಗಾಳದಲ್ಲಿ ಹಿಂದಿನ ಸಾಮಾಜಿಕ ಪರಿಸ್ಥಿತಿ

ಬಂಗಾಳದಲ್ಲಿ ಹಿಂದಿನ ಸಾಮಾಜಿಕ ಪರಿಸ್ಥಿತಿಯು ಏಕಮುಖವಾಗಿರಲಿಲ್ಲ. ಕೆಲವೊಮ್ಮೆ ಸಾಮಾಜಿಕ ಪರಿಸ್ಥಿತಿಯು ಸುಧಾರಣೆಯಾಗಿ ಸಹಬಾಳ್ವೆಯ ರೂಪವು ಕಂಡುಬಂದರೆ, ಇನ್ನೊಮ್ಮೆ ಸಂಪೂರ್ಣವಾಗಿ ಹದಗೆಡುತ್ತಿತ್ತು. ಅದಕ್ಕೆ ಅಲ್ಲಿಯ ಹಿಂದೂ, ಮುಸಲ್ಮಾನ ಹಾಗೂ ಬ್ರಿಟೀಷರ ರಾಜಕೀಯ ಆಡಳಿತದ ಏರಿಳಿತಗಳೇ ಕಾರಣವಾಗಿತ್ತು.

ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಕಲ್ಕತ್ತೆಯು 'ಸುವರ್ಣವಣಿಕ'ರೆಂಬ ವರ್ಗದವರಿಂದ ಪ್ರಭಾವಿತವಾಗಿತ್ತು. ಅಲ್ಲದೆ ಅಲ್ಲಿಯ ಅಭಿವೃದ್ಧಿಯು ಅವರ ಆಶ್ರಯದಿಂದಲೇ ನಡೆಯುತ್ತಿತ್ತು. ಮೂಲತಃ ಸಪ್ತಗ್ರಾಮದವರಾದ ಇವರು ಕಲ್ಕತ್ತೆಗೆ ಬಂದು ವ್ಯಾಪಾರ ಹಾಗೂ ಮನೆಮಠಗಳನ್ನು ಸ್ಥಾಪಿಸಿದರು. ಹಾಗಾಗಿರುವುದರಿಂದಲೇ ಅವರಿಗೆ 'ಸಪ್ತಗ್ರಾಮೀ ವಣಿಕವರ್ಗ'ವೆಂದು ಕರೆಯಲಾಗುತ್ತಿತ್ತು. ಈ ವರ್ಗದಲ್ಲಿ ಹೆಚ್ಚಿನ ಜನರು 'ಮಲ್ಲಿಕ್' ಮತ್ತು 'ಸಿಲ್' ಕುಟುಂಬಗಳಿಗೆ ಸೇರಿದವರಾಗಿದ್ದರು. ಚೈತನ್ಯಪಂಥದಲ್ಲಿ ಮುಖ್ಯರಾದ ಶ್ರೀಲ ಉದ್ಧಾರಣ ಠಾಕೂರರು ಇದೇ ವರ್ಗಕ್ಕೆ ಸೇರಿದವರು. ಇಲ್ಲಿಯ 'ಮಲ್ಲಿಕ್'ರಲ್ಲಿ ಎರಡು ವಿಧ. ಒಂದನೆಯದು 'ಸಿಲ್' ಎಂಬ ಕುಟುಂಬ, ಎರಡನೆಯದು 'ಡೇ' ಎಂಬ ಕುಟುಂಬ. ಆದರೆ ಈ ಎರಡರ ಗೋತ್ರಗಳು ಮಾತ್ರ ಒಂದೇ ಆಗಿತ್ತು. ಆದರೆ ಇಲ್ಲಿಯ ಮಲ್ಲಿಕ್ ಕುಟುಂಬವು ಪೂರ್ವದಿಂದಲೂ ವಿಧರ್ಮೀಯರಿಗೆ ನಿಕಟವರ್ತಿಗಳಾಗಿದ್ದರು. ಇವರ ಸಂಪರ್ಕದಿಂದಾಗಿಯೇ 'ಮಲ್ಲಿಕ್' ಎಂಬ ಹೆಸರು ಕ್ರಮೇಣದಲ್ಲಿ 'ಮುಲ್ಲಿಕ್' ಎಂಬುದಾಗಿಯೂ ಬಳಕೆಯಾಗಲಾರಂಭಿಸಿತು.

ಚೈತನ್ಯಪಂಥದ ಅನುಭಾವಿಗಳಾದ ಶ್ರೀಲ ಉದ್ಧಾರಣ ಠಾಕೂರರು ಸುವರ್ಣವಣಿಕ ಕುಟುಂಬಕ್ಕೆ ಸೇರಿದ ವೈಷ್ಣವ ಸಮುದಾಯದವರು. ಆದರೆ ಬಹಳ ಕಾಲದ ಹಿಂದೆ ಅಲ್ಲಿಯ ಅರಸನಾದ ಬಲ್ಲಾಳಸೇನನಿಗೂ ಸುವರ್ಣ ವಣಿಕರಿಗೂ ವೈಮನಸ್ಸು ಉಂಟಾಗಿ, ಬಲ್ಲಾಳಸೇನನು ಸುವರ್ಣವಣಿಕರನ್ನು ಜಾತಿಭ್ರಷ್ಟರನ್ನಾಗಿಯೂ, ಬಹಿಷ್ಕೃತರನ್ನಾಗಿಯೂ ಮಾಡಿ, ಉಳಿದ ಸಾಮಾಜಿಕರನ್ನು ವಣಿಕರ ವಿರುದ್ಧ ಎತ್ತಿಕಟ್ಟಿದ. ಅಂದಿನಿಂದ ವಣಿಕ ಸಮುದಾಯಕ್ಕೆ ಬ್ರಾಹ್ಮಣ, ಕ್ಷತ್ರಿಯ ಹಾಗೂ ವೈಶ್ಯರಾದಿಯಾಗಿ ಬಹಿಷ್ಕಾರವನ್ನು ಹಾಕಿದರು. ಆದರೆ ನಂತರದಲ್ಲಿ ಬಂದ ಚೈತನ್ಯಪಂಥಾನುಯಾಯಿಗಳಾದ ನಿತ್ಯಾನಂದ ಪ್ರಭುಗಳ ಕೃಪೆಯಿಂದ ಸುವರ್ಣವಣಿಕ ಸಮುದಾಯವು ಮತ್ತೆ ಮೇಲ್ದರ್ಜೆಗೆ ಬಂದಿತು. ಈ ಮೂಲಕವಾಗಿ ಚೈತನ್ಯಪಂಥವು ಸಾಮಾಜಿಕ ಹಿತವನ್ನು ಕಾಯುವಲ್ಲಿ ಯಶಸ್ವಿಯಾಯಿತು.[೨]

ಚೈತನ್ಯಪಂಥಕ್ಕೆ ಸಂಬಂಧಿಸಿದಂತೆ ಬಂಗಾಳದ ಸಾಮಾಜಿಕ ಪರಿಸ್ಥಿತಿಯಲ್ಲಿ ಸ್ತ್ರೀಯರ ಸ್ಥಾನಮಾನವು ಪ್ರಾಮುಖ್ಯತೆಯನ್ನು ಪಡೆದಿತ್ತು. ಕಲ್ಕತ್ತೆಯಲ್ಲಿ ಗೌರವಾನ್ವಿತಳಾದ ಮಹಿಳೆಯೊಬ್ಬಳು ಪಕ್ಕದೂರಿಗೆ ತೆರಳಬೇಕಾದರೆ ನಾಲ್ಕುಜನರು ಹೊತ್ತ ಪಲ್ಲಕ್ಕಿಯಲ್ಲಿ ಕುಳಿತುಕೊಂಡು ಹೋಗುವ ಪದ್ಧತಿಯೊಂದು ರೂಢಿಯಲ್ಲಿತ್ತು. ಅದು ಅಂದಿನ ಗೌರವದ ಸಂಕೇತವಾಗಿತ್ತು. ಪಲ್ಲಕ್ಕಿಯು ಮೃದುವಾದ ಹತ್ತಿಬಟ್ಟೆಯಿಂದ ಆಚ್ಛಾದಿತವಾಗಿರುತ್ತಿತ್ತು. ಆ ಕಾಲದಲ್ಲಿ ಯಾವುದೇ ಸಂದರ್ಭದಲ್ಲಿಯೂ ಓರ್ವ ಮಹಿಳೆಯೊಬ್ಬಳು ಪಯಣಿಸುವ ಪದ್ಧತಿಯೇ ಇರಲಿಲ್ಲ. ವಿಶೇಷವಾಗಿ ಗೌರವಸ್ಥ ಕುಟುಂಬದ ಮಹಿಳೆಯೊಬ್ಬಳು ಸಾಮಾನ್ಯ ಪುರುಷರಿಂದ ನೋಡಲ್ಪಡಲೂ ಆಗುತ್ತಿರಲಿಲ್ಲ. ಈಗಲೂ ಬಹುದೂರದ ಒಳನಾಡಿನ ಸ್ಥಳಗಳಲ್ಲಿ ಮಹಿಳೆಯರು ವಸ್ತ್ರಾಚ್ಛಾದಿತ ಪಲ್ಲಕಿಯಲ್ಲಿ ಪ್ರಯಾಣಿಸುವುದು ರೂಢಿಯಲ್ಲಿದೆ. ಸಂಸ್ಕೃತಭಾಷೆಯಲ್ಲಿ 'ಅಸೂರ್ಯ ಪಶ್ಯಾ' ಎಂಬ ಶಬ್ದವು, ಒಬ್ಬ ಗೌರವಸ್ಥ ಮಹಿಳೆಯು ಸೂರ್ಯನ ಕಣ್ಣಿಗೂ ಬೀಳದಂತೆ ಹೋಗಿ ಬರುವವಳೆಂದು ಅರ್ಥವನ್ನೀಯುತ್ತದೆ. ಸುಮಾರಾಗಿ ಈ ಪದ್ಧತಿಯು ಹಿಂದೂ ಹಾಗೂ ಮುಸಲ್ಮಾನವರ್ಗದ ಸ್ತ್ರೀಯರಲ್ಲಿ ಕಟ್ಟುನಿಟ್ಟಾಗಿ ಆಚರಣೆಯಲ್ಲಿತ್ತು. ಬಂಗಾಳದ ಪ್ರಾಚೀನ ಇತಿಹಾಸದಲ್ಲೇ ಈ ಪದ್ಧತಿಯು ರೂಢಿಯಲ್ಲಿತ್ತೆಂಬುದಕ್ಕೆ ಚೈತನ್ಯ ಚರಿತಾಮೃತವೇ ಪುಷ್ಟಿಯನ್ನೀಯುತ್ತದೆ. ಅಲ್ಲಿಯ ಅನುಭಾವಿಗಳಾದ ಅದ್ವೈತಾಚಾರ್ಯರ ಪತ್ನಿಯಾದ ಸೀತಾಠಾಕೂರಾಣಿಯು ವಸ್ತ್ರದಿಂದ ಹೊದಿಸಿ ಮುಚ್ಚಿದ ಪಲ್ಲಕ್ಕಿಯನ್ನೇರಿ ಹೆಣ್ಣಾಳುಗಳೊಂದಿಗೆ ಜಗನ್ನಾಥಮಿಶ್ರರ ಮನೆಗೆ ತೆರಳುವ ಸಂದರ್ಭವೊಂದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ.[೩]

ಬಂಗಾಲದೆಲ್ಲೆಡೆ ಆರೋಗ್ಯಕರವಾದ ಸಾಮಾಜಿಕವ್ಯವಸ್ಥೆಯಿತ್ತೆಂದು ಹೇಳಲಿಕ್ಕಾಗದು. ಆದರೆ ಆ ರಾಜ್ಯದ ಒಳಭಾಗದ ಕೆಲವೊಂದು ಹಳ್ಳಿಗಳಲ್ಲಿ ಹಿಂದೂ ಮತ್ತು ಮುಸಲ್ಮಾನರ ಕುಟುಂಬಗಳಲ್ಲಿ ಒಳ್ಳೆಯ ಬಾಂಧವ್ಯವಿತ್ತೆಂದು ಗೌಡೀಯ ಸಾಹಿತ್ಯವು ಸಮರ್ಥಿಸುತ್ತದೆ. ಅಲ್ಲಿ ಚಿಕ್ಕವರು ಗ್ರಾಮದ ಹಿರಿಯರನ್ನು 'ಚಾಚಾ' ಅಥವಾ 'ಕಾಕಾ' (ಮಾದಾ) ಎಂದು ಕರೆಯುತ್ತಿದ್ದರು. ಸಮಾನವಯಸ್ಕರು ಪರಸ್ಪರ 'ದಾದಾ' ಎಂದು ಕರೆಯುತ್ತಿದ್ದರು. ಮುಸಲ್ಮಾನರು ಹಿಂದೂಗಳ ಮನೆಗೆ, ಹಿಂದೂಗಳು ಮುಸಲ್ಮಾನರ ಮನೆಗೆ ಹೋಗಿಬರುವ, ಶುಭಸಮಾರಂಭಗಳಲ್ಲಿ ಪರಸ್ಪರವಾಗಿ ಪಾಲ್ಗೊಳ್ಳುವ ಪದ್ಧತಿಯೊಂದು ರೂಢಿಯಲ್ಲಿತ್ತು.

ಬಂಗಾಳಿಗರು 'ಮಾತೃ' ಸ್ಥಾನಕ್ಕೆ ಹೆಚ್ಚು ಗೌರವವನ್ನು ನೀಡುತ್ತಿದ್ದರು. ಆದುದರಿಂದಲೇ ಅವರಿಗೆ ಗೋವಿನ ಕುರಿತು ಪೂಜ್ಯಭಾವ. ಈ ಭಾವನೆಯಿಂದಲೇ ಚೈತನ್ಯರು ಖಾಜಿಯೊಂದಿಗೆ ಸಂಭಾಷಿಸುತ್ತಾ, ಯಾರು ಕೂಡ ತಿನ್ನುವ ಸಲುವಾಗಿ ತಂದೆತಾಯಿಯರನ್ನು ಕೊಲ್ಲುವುದಿಲ್ಲ. ಆದರೆ ನೀವು ತಾಯಿಗೆ ಸಮಾನವಾದ ಗೋವನ್ನು ಕೊಂದು ಪಾಪಕೂಪಕ್ಕೆ ಬೀಳುತ್ತಿದ್ದೀರಿ. ಆದುದರಿಂದ ನಿಮ್ಮ ಧರ್ಮವೆಂದರೆ ಪಿತೃಹತ್ಯೆ ಮತ್ತು ಮಾತೃಹತ್ಯೆಯ ಧರ್ಮವೆನ್ನುತ್ತಾರೆ. ಇದು ಬಂಗಾಳದವರ ಗೋವಿನ ಕುರಿತಾದ ಪೂಜ್ಯಭಾವನೆಗೆ ನಿದರ್ಶನವೆನಿಸುತ್ತದೆ.

ಬಂಗಾಳದಲ್ಲಿ ಶ್ರೀಚೈತನ್ಯರು ಅವತರಿಸುವುದಕ್ಕಿಂತ ಪೂರ್ವದಲ್ಲಿ ಭಕ್ತಿಪಂಥವೊಂದಿತ್ತು. ಪೂರ್ವದಲ್ಲಿ ಬಂಗಾಳವನ್ನು ಗೌಡದೇಶವೆಂದು ಕರೆಯುತ್ತಿದ್ದುದರಿಂದ ಅಲ್ಲಿಯ ಭಕ್ತಿಪಂಥವನ್ನು 'ಗೌಡೀಯ ಪಂಥ'ವೆಂದು ಕರೆಯಲಾಗುತ್ತಿತ್ತು. ಚೈತನ್ಯರ ಜನ್ಮಪೂರ್ವದಲ್ಲಿಯೇ ಶ್ರೀಲ ಭಕ್ತಿವಿನೋದ ಠಾಕೂರರು, ಚಂಡೀದಾಸ, ವಿದ್ಯಾಪತಿ, ಬಿಲ್ವಮಂಗಲ, ಜಯದೇವರೆಲ್ಲರೂ ಜೀವಿಸಿ, ಅಮೂಲ್ಯಕೃತಿಗಳನ್ನು ಗೌಡೀಯ ಭಕ್ತಿಪಂಥಕ್ಕೆ ಸಮರ್ಪಿಸಿದ್ದರು. ಆ ಮೂಲಕ ರಾಧಾಕೃಷ್ಣರ ಪ್ರೇಮಪೂರಿತವಾದ ಭಕ್ತಿಸ್ವರೂಪವನ್ನು ತಿಳಿಸಿದ್ದರು.[*] ಆ ಕಾಲಕ್ಕಾಗಲೇ ಭಾರತದ ಮೂಲೆಮೂಲೆಯನ್ನು ಸ್ಪರ್ಶಿಸಿದ್ದ ಆಚಾರ್ಯತ್ರಯರ ಸಿದ್ಧಾಂತಗಳು ತಾತ್ವಿಕನೆಲೆಯಲ್ಲಿ ಒಂದಷ್ಟು ಗೊಂದಲವನ್ನು ಏಬ್ಬಿಸಿದ್ದವು. ಮುಸಲ್ಮಾನರ ದಬ್ಬಾಳಿಕೆ ಅತಿಯಾಗಿತ್ತು. ಹಿಂದೂಧರ್ಮದಲ್ಲಿ ಅತಂತ್ರತೆಯಿತ್ತು. ಹಾಗಾಗಿ ಬಂಗಾಳದ ಭಕ್ತಿರೂಪಕ್ಕೊಂದು ತಾತ್ವಿಕವಾದ ಚೌಕಟ್ಟಿನ ಅನಿವಾರ್ಯತೆಯಿತ್ತು. ಚೈತನ್ಯರು ಅವತರಿಸುವ ಅರುವತ್ತು ವರ್ಷಗಳ ಪೂರ್ವದಲ್ಲಿಯೇ ಅದ್ವೈತಾಚಾರ್ಯರು ಅವತರಿಸಿದ್ದು, ಬದ್ಧಾತ್ಮಗಳನ್ನು ಇಹಲೋಕದಿಂದ ಪಾರುಮಾಡಬೇಕೆಂಬ ಕಾಳಜಿಯಿಂದ ಬೀದಿಬೀದಿಗಳಲ್ಲಿ ಕೃಷ್ಣನಾಮಸಂಕೀರ್ತನೆಯನ್ನು ಮಾಡುತ್ತಾ ಸಂಚರಿಸಿ, ಶ್ರೀಕೃಷ್ಣನನ್ನೇ ಚೈತನ್ಯರಾಗಿ ಅವತರಿಸಲು ಕೇಳಿಕೊಂಡರೆಂಬುದು ಪ್ರಾಚೀನ ಬಂಗಾಳೀ ಸಾಹಿತ್ಯವಿಚಾರ. ಏನೇ ಇದ್ದರೂ ಆ ತನಕದ ಗೌಡೀಯಪಂಥವು ಶ್ರೀಚೈತನ್ಯರ ಜನ್ಮಾನಂತರದಲ್ಲಿ 'ಚೈತನ್ಯಪಂಥ'ವೆಂದೇ ಖ್ಯಾತವಾಯಿತು.

ಬಂಗಾಳದ ನೆಲದಲ್ಲಿ ಚೈತನ್ಯಪಂಥವೊಂದು ಪರಿಣಾಮಕಾರಿಯಾಗಿ ಜನ್ಮತಾಳಬೇಕಾದರೆ ಅಲ್ಲಿಯ ಸಾಮಾಜಿಕ ಸ್ಥಿತಿಯೂ ಮುಖ್ಯಕಾರಣವೆನ್ನಬೇಕು. ಧ್ಯಾನ ಮತ್ತು ಕರ್ಮಮಾರ್ಗಗಳ ಅನುಸಂಧಾನವು ಅಲ್ಲಿಯ ಜನತೆಗೆ ಕಷ್ಟವಾದಾಗ ಅವರು ಭಕ್ತಿಮಾರ್ಗವನ್ನು ಅನುಸರಿಸುವುದು ಅನಿವಾರ್ಯವಾಯಿತು. ಆದರೆ ಇಲ್ಲಿ ಮೂಡಿದ ಭಕ್ತಿಚಳುವಳಿಗೆ ಪೂರಕವಾದ ಸಾಮಾಜಿಕಪರಿಸ್ಥಿತಿ ಅಲ್ಲಿರಲಿಲ್ಲವೆನ್ನುವುದು ಇತಿಹಾಸದ ವಿಚಾರ. ಇದಕ್ಕೆ ಮುಖ್ಯಕಾರಣವೆಂದರೆ ಅಲ್ಲಿದ್ದ ಮುಸಲ್ಮಾನ ಆಳ್ವಿಕೆ. ಇವರ ಆಳ್ವಿಕೆಯ ಕಾಲಾವಧಿಯಲ್ಲಿ ರಾಜಕೀಯ ಮತ್ತು ಸಾಂಸ್ಕೃತಿಕಕ್ಷೇತ್ರಗಳಲ್ಲಿ ವಸ್ತುನಿಷ್ಠವಾದ ಸ್ಥಾನಮಾನಗಳು ಹಿಂದೂಗಳಿಗೆ ದೊರೆಯದಿದ್ದಾಗ, ತಮ್ಮ ಮನೋಕ್ಲೇಶದಿಂದ ಮುಕ್ತರಾಗಲು ಆಧ್ಯಾತ್ಮಿಕ ಜೀವನವನ್ನು ಅನುಸರಿಸಬೇಕಾಯಿತು.

ಕಾಲಾಂತರದಲ್ಲಿ ಬಂಗಾಲವು ಮುಸಲ್ಮಾನರ ಆಡಳಿತಕ್ಕೆ ಒಳಪಟ್ಟಿತು. ಆದರೆ ಅಲ್ಲಿ ಅನಿಶ್ಚಿತತೆಯಿತ್ತು. ೧೩೩೯ ರಲ್ಲಿ ಅಲ್ಲಾವುದ್ದೀನ್‌ಆಲಿಷಾಹನು ಉತ್ತರಬಂಗಾಲದ ಸ್ವತಂತ್ರದೊರೆಯೆಂದೂ, ಫಕ್ರುದ್ದೀನ್‌ಆಲಿಷಾಹನು ಸೋನಾರ್‌ಗಾಂನಲ್ಲಿ ಸ್ವತಂತ್ರರಾಜನೆಂದೂ ಘೋಷಿಸಿಕೊಂಡರು. ಆ ನಂತರ ೧೩೫೨ ರಲ್ಲಿ ಬಂದ ಹಾಜಿ ಇಲಿಯಾಸನು ಎರಡೂ ರಾಜ್ಯಗಳನ್ನು ಸೇರಿಸಿ ಬಂಗಾಳದ ಸುಲ್ತಾನನಾದನು. ಇವನ ಆಳ್ವಿಕೆಯ ಕಾಲದಲ್ಲಿ ಬಂಗಾಳದ ಬಹುಸಂಖ್ಯಾತರು ಹಿಂದೂಗಳೇ ಇದ್ದರೂ ಅವರ ಭೂಮಿಯ ಒಡೆತನವನ್ನು ಬಲಾತ್ಕಾರವಾಗಿ ಕಬಳಿಸಲಾಯಿತು. ಆಡಳಿತದಲ್ಲಿ ಉನ್ನತಹುದ್ದೆಯನ್ನು ತಾವೇ ಅಲಂಕರಿಸಿ, ಹಿಂದೂಗಳಿಂದ ಹೆಚ್ಚಿನ ಕಂದಾಯವನ್ನು ವಸೂಲಿ ಮಾಡಲಾರಂಭಿಸಿದರು. ಬಂಗಾಳಕ್ಕೆ ತುರುಷ್ಕಸುಲ್ತಾನರ ಆಗಮನದ ನಂತರದಲ್ಲಿ ಸ್ತ್ರೀ ಸ್ವಾತಂತ್ರ್ಯವು ಸಂಪೂರ್ಣವಾಗಿ ಹದಗೆಟ್ಟಿತು. ಈ ಕಾಲದಲ್ಲಿ ಹಿಂದೂ ಸ್ತ್ರೀಯರನ್ನು ಬಲಾತ್ಕಾರವಾಗಿ

ಮದುವೆಯಾಗುವ ಕ್ರಮವೊಂದು ಮುಂದುವರಿಯಿತು. ಮೊದಲು ಹಿಂದೂ ಹುಡುಗಿಯರನ್ನು ಮುಸಲ್ಮಾನಧರ್ಮಕ್ಕೆ ಮತಾಂತರಿಸಿಕೊಂಡು, ಅನಂತರದಲ್ಲಿ ಮುಸಲ್ಮಾನ ಮತಧರ್ಮದ ವಿಧಿಯಂತೆ ವಿವಾಹಮಾಡಿಕೊಳ್ಳಲಾಗುತ್ತಿತ್ತು.

೧೪೯೩ ರಲ್ಲಿ ಅಲ್ಲಾವುದ್ದೀನ್ ಹುಸೇನ್‌ಷಾಹನು ಬಂಗಾಳದ ಸಿಂಹಾಸನವನ್ನು ಏರಿದ ಕಾಲದಿಂದ ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಉನ್ನತ ಬೆಳವಣಿಗೆಯನ್ನು ಕಂಡಿತು. ಆದರೂ ಅಲ್ಲಿ ಸ್ತ್ರೀ ಶಿಕ್ಷಣ ಮತ್ತು ಸ್ತ್ರೀ ಸ್ವಾತಂತ್ರ್ಯಕ್ಕೆ ಮಾನ್ಯತೆಯಿರಲಿಲ್ಲ. ನಿಮ್ನಜಾತಿಯಲ್ಲಿ ವಿಧವಾವಿವಾಹಕ್ಕೆ ಮಾತ್ರ ಮನ್ನಣೆಯಿತ್ತು.

ಬಂಗಾಳದ ಹಿಂದೂಸಮಾಜ ಜೀವನದಲ್ಲಿ ಮುಸಲ್ಮಾನಪಂಥದ ಏಕದೇವೋಪಾಸನೆ ಒಂದಿಷ್ಟು ಪರಿಣಾಮ ಬೀರಿತು. ಅದಕ್ಕೆ ಕಾರಣವೆಂದರೆ, ಹಿಂದೂಗಳಲ್ಲಿದ್ದ ಅನೇಕ ದೇವೋಪಾಸನೆ. ಅನೇಕ ಹಿಂದೂಗಳು ಏಕದೇವೋಪಾಸನೆಗೆ ಒಲವು ತೋರಿಸಿ ಇಸ್ಲಾಂ ಧರ್ಮಕ್ಕೆ ಸೇರುತ್ತಿದ್ದರೆ, ಇನ್ನೂ ಕೆಲವು ಹಿಂದೂಗಳು ಮುಸಲ್ಮಾನರ ಒತ್ತಡಕ್ಕೆ ಮಣಿದು ಆ ಧರ್ಮವನ್ನು ಸೇರಬೇಕಾಗಿತ್ತು. ಹೀಗೆ ಮುಸಲ್ಮಾನಪಂಥಕ್ಕೊಳಗಾದವರಲ್ಲಿ ಷಡ್‌ಗೋಸ್ವಾಮಿಗಳಲ್ಲಿ ಇಬ್ಬರಾದ ರೂಪ ಹಾಗೂ ಸನಾತನ ಗೋಸ್ವಾಮಿಗಳು ಮುಖ್ಯರು. ಇವರು ಗೌಡದೇಶದ ಮುಸ್ಲಿಂ ಸಾಮ್ರಾಟ ಹುಸೇನ್‌ಷಾಹನ ಸರ್ವಾಧಿಕಾರಿ ಧೋರಣೆಯಿಂದ ದಬೀರ್‌ಖಾಸ್ ಮತ್ತು ಸಾಕರಮಲ್ಲಿಕ್ ಎಂದು ನಾಮಾಂತರಕ್ಕೊಳಗಾಗಿ ರಾಜಸೇವೆಯಲ್ಲಿದ್ದರು.

ಒಟ್ಟಿನಲ್ಲಿ ಪ್ರಾಚೀನ ಬಂಗಾಳವು ಹಿಂದೂರಾಜರುಗಳ ಆಡಳಿತಕ್ಕೊಳಪಟ್ಟಿದ್ದರೆ, ಕಾಲಾನಂತರದಲ್ಲಿ ಅದು ಮುಸಲ್ಮಾನರ ಕೈಸೇರಿತು. ಅಂದರೆ, ಬಂಗಾಳದಲ್ಲಿ ಚೈತನ್ಯಪಂಥವು ಹುಟ್ಟಿಕೊಳ್ಳುವಾಗಲೇ ಆ ಪ್ರಾಂತ್ಯದಲ್ಲಿ ಇಸ್ಲಾಂ ಧರ್ಮಾಡಳಿತವು ನೆಲೆಗೊಂಡಿತ್ತು. ಹಿಂದೂಧರ್ಮದ ಶೋಷಣೆಯು ಆ ಕಾಲಕ್ಕಾಗಲೇ ತಾರಕಕ್ಕೇರಿತ್ತು. ಆದರೂ ಆ ಕಾಲದ ಸಮಸ್ಯೆಗಳಿಗೆ ಪೂರ್ಣಪ್ರಮಾಣದಲ್ಲಿ ಮುಸಲ್ಮಾನಧರ್ಮವೇ ಕಾರಣವೆನ್ನುವಂತಿರಲಿಲ್ಲ. ಇದಕ್ಕೆ ಹಿಂದೂ ತತ್ವಸಿದ್ಧಾಂತಗಳಲ್ಲಿದ್ದ ಸಂಘರ್ಷಣಾತ್ಮಕ ತಿಕ್ಕಾಟವೂ ಒಂದು ಕಾರಣವಾಗಿದ್ದರಬೇಕು. ತತ್ತ್ವತ್ರಯಗಳಾದ ದ್ವೈತ, ಅದ್ವೈತ ಹಾಗೂ ವಿಶಿಷ್ಟಾದ್ವೈತಗಳ ನಡುವೆ ಇದ್ದ ವೈರುಧ್ಯಮಯವಾದ ತಾತ್ತ್ವಿಕ ಗುದ್ದಾಟಗಳು ಹಿಂದೂ ಭಾವನೆಗಳ ಏಕತೆಗೆ ಧಕ್ಕೆಯಾಗಿ ಪರಿಣಮಿಸಿದ್ದವು. ಬೌದ್ಧ ಹಾಗೂ ಜೈನಧರ್ಮಗಳ ಅವಸಾನವೂ ಹಿಂದೂ ಪ್ರಾಬಲ್ಯಕ್ಕೆ ಧಕ್ಕೆಯನ್ನೊಡ್ಡಿರಬೇಕು. ಹಿಂದೂಸಮಾಜದ ಈ ಗೊಂದಲದ ಲಾಭಾಂಶವನ್ನು ಇಸ್ಲಾಮೀಯರು ಪಡೆದಿರಬಹುದು. ಇಂತಹ ಸಂದಿಗ್ಧತೆಯಲ್ಲಿ ಚೈತನ್ಯರು ಜನ್ಮತಾಳಿ ಧಾರ್ಮಿಕ ಪುನರುಜ್ಜೀವನಕ್ಕೆ ಕಾರಣರಾದರು.

ಸಮಾಜದಲ್ಲಿ ಅರ್ಥವ್ಯವಸ್ಥೆ

ಬಂಗಾಲದ ಪ್ರಾಚೀನ ಅರ್ಥವ್ಯವಸ್ಥೆಯನ್ನು ಆ ಕಾಲದ ಚಾರಿತ್ರಿಕ ಹಾಗೂ ಸಾಹಿತ್ಯಕ ಕೃತಿಗಳು ಸ್ವಲ್ಪಮಟ್ಟಿಗೆ ತಿಳಿಸಿಕೊಡುತ್ತವೆ. ಅವುಗಳಲ್ಲಿ 'ಚೈತನ್ಯ ಚರಿತಾಮೃತ'ದಂತಹ ಕೃತಿಗಳು ಮುಖ್ಯವೆನಿಸುತ್ತವೆ.

ಬ್ರಹಸ್ವ ಅಧಿಕ ಏಇ ಹಯ ರಾಜ ಧನ ।
ತಾಹಾ ಹರಿ ಭೋಗ ಕರೇ ಮಹಾ ಪಾಪೀ ಜನ ॥[೫]

ಇದು ಚೈತನ್ಯ ಚರಿತಾಮೃತವು ಸಾರುವ ಅರ್ಥವ್ಯವಸ್ಥೆಯ ಮಾತು. ಅಂದು ಸರ್ಕಾರದ ಕಂದಾಯದ ಹಣವು ಬ್ರಾಹ್ಮಣನೊಬ್ಬನ ಆಸ್ತಿಗಿಂತಲೂ ಪವಿತ್ರವಾದುದು. ಯಾರು ಸರ್ಕಾರದ ಹಣವನ್ನು ದುರ್ಬಳಕೆ ಮಾಡಿ ಇಂದ್ರಿಯ ಸುಖಕ್ಕಾಗಿ ವ್ಯಯಿಸುತ್ತಾರೋ ಅಂತಹವರು ಮಹಾಪಾಪಿಗಳೆಂದು ಬಂಗಾಳದ ಜನ ಭಾವಿಸುತ್ತಿದ್ದರು. ಅಂದಿನ ಸಮಾಜವು 'ಫೌಜುದಾರ'ನನ್ನು ಮತ್ತು ನಗರದ 'ನ್ಯಾಯಾಧಿಪತಿ'ಯನ್ನು 'ಖಾಜಿ' ಎಂದು ಕರೆಯುತ್ತಿದ್ದರು. ಜಮೀನುದಾರರು (ಮುಂಡಲೇರರು) ಜಮೀನಿನ ಮೇಲೆ ಕಂದಾಯ ಪಾವತಿಸಬೇಕಾಗಿತ್ತು. ಆದರೆ ಕಾನೂನುಪಾಲನೆ ಮತ್ತು ಅಪರಾಧಿಗಳನ್ನು ಶಿಕ್ಷಿಸುವುದು ಖಾಜಿಯ ಕರ್ತವ್ಯವಾಗಿತ್ತು. ಖಾಜಿ ಮತ್ತು ಜಮೀನ್ದಾರರಿಬ್ಬರೂ ಬಂಗಾಳದ ಗವರ್ನರನ ಕೈಕೆಳಗಿದ್ದರು. ಆಗ ಈ ವ್ಯವಸ್ಥೆಯನ್ನು 'ಸುಬಾ-ಬಾಂಗಾಲಾ' ಎಂದು ಕರೆಯುತ್ತಿದ್ದರು.

ಚೈತನ್ಯ ಚರಿತಾಮೃತದ ಅಂತ್ಯಲೀಲೆಯ ೯ ನೆಯ ಅಧ್ಯಾಯದಲ್ಲಿ ಬರುವ ಗೋಪಿನಾಥ ಪಟ್ಟನಾಯಕರ ಅರ್ಥದ್ರೋಹದ ವಿಚಾರವೊಂದರಲ್ಲಿ ಒಂದಿಷ್ಟು ವಿವರಗಳ ಲಭ್ಯವಿದೆ. ಅಲ್ಲಿ ಬರುವ 'ದುಇ ಲಕ್ಷ ಕಾಹನ ಕೌಡಿ ದಿಲೇಖ ಭಾಡಿಯಾ'[೬] ಅಂದರೆ 'ಎರಡುಲಕ್ಷಕಾಹನ ಬಾಕಿ' ಎನ್ನುವಲ್ಲಿ 'ಕಾಹನ'ವೆಂಬ ಹೊಸದಾದ ಸಂಬಂಧಿ ಪದವೊಂದು ಸಿಗುವಂತಾಗಿತ್ತದೆ.

ಆ ಕಾಲದಲ್ಲಿ 'ಕೌಡಿ' ಎಂಬ 'ಕವಡೆ' ರೂಪದ ನಾಣ್ಯಗಳು ಚಲಾವಣೆಯಲ್ಲಿದ್ದವು. ಇಲ್ಲಿಯ 'ಕೌಡಿ'ಗಳು ಅಮೇರಿಕದ 'ಸೆಂಟ್' ಅಥವಾ ಜಪಾನಿನ 'ಯೆನ್'ನಾಣ್ಯಗಳಂತೆ. ಹಳೆಯಕಾಲದ ವ್ಯವಹಾರದಲ್ಲಿ ನಾಣ್ಯಗಳು ಬಳಕೆಯಾಗುತ್ತಿದ್ದುದು ಕವಡೆಗಳ ಮೂಲಕವಾಗಿ. ನಾಲ್ಕುಕವಡೆಗಳು ಅಂದರೆ 'ಒಂದುಗಣ್ಡಾ', ಇಪ್ಪತ್ತು ಗಣ್ಡಾಗಳೆಂದರೆ 'ಒಂದು ಪಣ', ಹದಿನಾರು ಪಣಗಳೆಂದರೆ 'ಕಾಹನ'ವೆಂದು ಕರೆಯಲಾಗುತ್ತಿತ್ತು.

ಆ ಕಾಲದ ಪ್ರತಿಯೊಂದು ರಾಜ್ಯದಲ್ಲಿಯೂ ತೆರಿಗೆಯನ್ನು ವಸೂಲು ಮಾಡಲು ಜಮೀನ್ದಾರರು ಬಳಸುತ್ತಿದ್ದ ಸುಂಕದಕಟ್ಟೆಗಳಿಗೆ 'ಘಾಟೀ' ಎಂದು ಕರೆಯಲಾಗುತ್ತಿತ್ತು. ನಾನಾರೀತಿಯ ಜಮೀನ್ದಾರರ ಕೈವಶದಲ್ಲಿದ್ದ ರಸ್ತೆಗಳನ್ನು ವ್ಯವಸ್ಥಿತವಾಗಿಡಲು ಸಾಮಾನ್ಯವಾಗಿ ಈ ತೆರಿಗೆಗಳನ್ನು ಸಂಗ್ರಹಿಸಲಾಗುತ್ತಿತ್ತು. ಬಂಗಾಳದ ಭಕ್ತರು ಜಗನ್ನಾಥಪುರಿಗೆ ಹೋಗುತ್ತಿದ್ದುದರಿಂದ ಅಂತಹ ಅನೇಕ 'ಘಾಟೀ' ಎನ್ನುವಂತಹ ಸುಂಕದಕಟ್ಟೆಗಳನ್ನು ಹಾದುಹೋಗಬೇಕಾಗಿತ್ತು. ಚೈತನ್ಯರ ಕಾಲದಲ್ಲಿ ಸುಂಕಗಳನ್ನು ಕೊಡುವ ಜವಾಬ್ದಾರಿಯನ್ನು ಶಿವಾನಂದಸೇನರು ತೆಗೆದುಕೊಂಡಿದ್ದರೆಂದು ಚೈತನ್ಯ ಚರಿತಾಮೃತವು ಹೇಳುತ್ತದೆ. ಹೀಗೆ ಬಂಗಾಲದ ಪ್ರಾಚೀನ ಅರ್ಥವ್ಯವಸ್ಥೆಯು ಆ ಕಾಲದ ಜನಜೀವನದ ಮೇಲೆ ಬೆಳಕನ್ನು ಚೆಲ್ಲುತ್ತದೆ.

ಒಟ್ಟಿನಲ್ಲಿ, ಬಂಗಾಳದ ಚರಿತ್ರೆಯಲ್ಲಿ ರಾಜ್ಯಾಡಳಿತದ ವ್ಯವಸ್ಥೆಯು ಬದಲಾದಂತೆ, ಅಲ್ಲಿಯ ಪ್ರಾಚೀನ ಹಾಗೂ ಮಧ್ಯಮಕಾಲದ ಸಾಮಾಜಿಕ ಹಾಗೂ ಆರ್ಥಿಕ ಜೀವನವು ಬದಲಾಗುತ್ತಿತ್ತು.

೪.೨ : ಚೈತನ್ಯ ಪಂಥದ ಉಗಮ ಮತ್ತು ಬೆಳವಣಿಗೆ

ಬಂಗಾಳದಲ್ಲಿ ಚೈತನ್ಯರಿಗಿಂತ ಮೊದಲು ಹಲವು ಸಂತರು ತಮ್ಮ ಭಕ್ತಿರೂಪವನ್ನು ಪ್ರಕಟಿಸಿದ್ದರೂ ಅದು ನಿಖರವಾದ ರೂಪವನ್ನು ಪಡೆದುದು ಶ್ರೀಚೈತನ್ಯರಿಂದಲೆ. ಇಲ್ಲಿಯ ಚೈತನ್ಯರು ಅವತಾರಪುರುಷರಾಗಿ, ಹರಿನಾಮ ಸಂಕೀರ್ತನಕಾರರಾಗಿ, ಅಚಿಂತ್ಯಾಭೇದಾಭೇದದ ತತ್ತ್ವದ್ರಷ್ಟಾರರಾಗಿ ಮೂಡಿಬರುತ್ತಾರೆ. ಇಲ್ಲಿ ನಡೆದಿರುವ ಹರಿಸಂಕೀರ್ತನಾಕ್ರಾಂತಿಯ ಸೂಚನೆಯು ಶ್ರೀಮದ್ಭಾಗವತದಲ್ಲಿಯೇ ಸುಳುಹಾಗಿ ತೋರಿದೆ. ಅಲ್ಲಿಯ ಶ್ಲೋಕವೊಂದು ಶ್ರೀಚೈತನ್ಯ ಪ್ರಭುಗಳ ಅವತಾರವನ್ನು ಸೂಚಿಸುವ ಭವಿಷ್ಯವಾಣಿಯಂತೆ ಮೂಡಿಕೊಳ್ಳುತ್ತದೆ.

> ಕೃಷ್ಣಂ ವರ್ಣಂ ತ್ವಿಷಾ ಕೃಷ್ಣಂ ಸಾಂಗೋಪಾಂಗಾಸ್ತ್ರ ಪಾರ್ಷದಂ ।
> ಯಜ್ಞೈಃ ಸಂಕೀರ್ತನ ಪ್ರಾಯೈರ್ ಯಜಂತಿ ಹಿ ಸು ಮೇಧಸಾಂ ॥[೬]

'ಭಗವಂತನು ಕಲಿಯುಗದಲ್ಲಿ ಹಳದಿಬಣ್ಣದ ಮೈಕಾಂತಿಯಿಂದ ಕಂಗೊಳಿಸುತ್ತಾ, ಸಂಕೀರ್ತನೆಯನ್ನು ಮಾಡುತ್ತಿರುತ್ತಾನೆ. ಬುದ್ಧಿವಂತರಾದ ಜೀವಿಗಳು ಆತ್ಮಸಾಕ್ಷಾತ್ಕಾರಕ್ಕಾಗಿ ಸಂಕೀರ್ತನೆಯ ದಾರಿಯನ್ನು ಅವಲಂಬಿಸುತ್ತಾರೆ' ಎಂದಿದೆ. ಈ ಶ್ಲೋಕಾರ್ಥವನ್ನು ಗಮನಿಸಿದರೆ ಶ್ರೀಹರಿಯೇ ಚೈತನ್ಯರ ರೂಪದಲ್ಲಿ ಅವತರಿಸಿದನೆಂಬ ನಂಬಿಕೆಯು ಇನ್ನಷ್ಟು ಬಲವಾಗುತ್ತದೆ. ಆದುದರಿಂದ ಈ ಪಂಥದ ಉಗಮಕ್ಕೆ ಶ್ರೀಚೈತನ್ಯ ಮಹಾಪ್ರಭುಗಳೇ ಕಾರಣರಾದರೆ, ಅದರ ವಿಸ್ತಾರಕ್ಕೆ ಭಕ್ತಿಯ ಮೂಲಕವಾಗಿ ಭಗವಂತನನ್ನು ಒಲಿಸಿಕೊಳ್ಳುವ 'ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ, ಹರೇ ಕಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ' ಎಂಬ ದಿವ್ಯನಾಮ ಮಂತ್ರೋಚ್ಚಾರಣೆಯೇ ಮುಖ್ಯವಾಗುತ್ತದೆ.

೪.೨ (ಅ) ಚೈತನ್ಯ (೧೪೮೬–೧೫೩೪) : ಬಾಲ್ಯ, ಸಂಸಾರ, ಆಧ್ಯಾತ್ಮ ಮತ್ತು ಸಂನ್ಯಾಸ

'ಹರೇಕೃಷ್ಣ' ಮಹಾಮಂತ್ರವನ್ನು ಸಜ್ಜನ ಕೂಟದಲ್ಲಿ ಜಗದಗಲ ಪ್ರಚುರಗೊಳಿಸುವ ಕಾರ್ಯಕ್ಕಾಗಿ ಶಕವರುಷ ೧೪೦೭ರ ಫಾಲ್ಗುಣಮಾಸದ ೨೩ ನೆಯ ದಿನ ಚೈತನ್ಯರ ಅವತರಣವಾಯಿತು. ಕ್ರಿ.ಶಕದ ಪ್ರಕಾರ ೧೮. ೦೨. ೧೪೮೬. ಆ ಪೂರ್ಣಿಮೆಯ ಸಂಜೆ ಚಂದ್ರನಿಗೆ ಗ್ರಹಣಹಿಡಿದಿತ್ತು. ಪಶ್ಚಿಮಬಂಗಾಳದ ಜನ ಆ ಸಾಯಂಕಾಲದಲ್ಲಿ 'ಹರಿಬೋಲ್ ಹರಿಬೋಲ್' ಎಂದು ಘೋಷಿಸುತ್ತಾ ಭಾಗೀರಥೀನದಿಯ ದಂಡೆಯಲ್ಲಿ ಸ್ನಾನಸಂಧ್ಯಾವಂದನೆಗೆ ತೊಡಗಿದ್ದರು. ಆ ಸೂಕ್ತ ಸಮಯದಲ್ಲಿ ಬಂಗಾಳದ ಒಂದು ಭಾಗವಾದ ಶ್ರೀಧಾಮ ಮಾಯಾಪುರದಲ್ಲಿ, ನಿಂಬಾವೃಕ್ಷದ ತಳದಲ್ಲಿ ಶ್ರೀಚೈತನ್ಯರು ಜಗನ್ನಾಥಮಿಶ್ರ ಹಾಗೂ ಶ್ರೀಮತಿ ಶಚೀದೇವಿ ದಂಪತಿಗಳಿಗೆ ಮಗನಾಗಿ ಅವತರಿಸಿದರು. ಈ ಮೂಲಕವಾಗಿ ಭಾರತೀಯ ಭಕ್ತಿಪಂಥದ ಒಂದು ಬೀಜಾಂಕುರವಾಯಿತು.

ಚೈತನ್ಯರನ್ನು ಶ್ರೀಕೃಷ್ಣಚೈತನ್ಯರೆಂದೇ ಕರೆಯುತ್ತಿದ್ದುದು ರೂಢಿ. ಅವರ ಆವಿರ್ಭಾವಕ್ಕೆ ಮುಖ್ಯವಾಗಿ ಮೂರು ಆಂತರಂಗಿಕ ಕಾರಣಗಳಿರುವುದನ್ನು ಮೊದಲು ತಿಳಿಯಬೇಕಾಗುತ್ತದೆ. ಅವುಗಳೆಂದರೆ,

೧. ಶ್ರೀಕೃಷ್ಣನ ದಿವ್ಯಪ್ರೇಮದ ಕರೆಗೆ ಪ್ರಧಾನವಾಗಿ ಸ್ಪಂದಿಸಿದ ರಾಧಾರಾಣಿಯ ಸ್ಥಾನದಲ್ಲಿ ತನ್ನನ್ನಿರಿಸಿಕೊಂಡು ಆ ಅನುಭವವನ್ನು ಸವಿಯುವುದಕ್ಕೋಸ್ಕರವಾಗಿ,

೨. ತನ್ನಲ್ಲಿದ್ದ ದಿವ್ಯಪ್ರೇಮದ ಸ್ವಾದವನ್ನು ತಾನೇ ಅರ್ಥೈಸಿಕೊಳ್ಳಲು ಅಥವಾ ತನ್ನ ಆಕರ್ಷಣೆಯ ಸವಿಯನ್ನು ಸ್ವಯಂ ತಾನೇ ಸವಿದುನೋಡುವ ಅಪೇಕ್ಷೆಯಿಂದ,

೩. ರಾಧಾರಾಣಿಯು ಅನುಭವಿಸುತ್ತಿದ್ದ ಪ್ರೇಮದ ಆನಂದವನ್ನು ತಾನೇ ಅನುಭವಿಸುವ ಅಪೇಕ್ಷೆ.

ಹೀಗೆ, ಈ ಮೂರು ಕಾರಣಗಳು ಆಂತರಿಕವಾಗಿ ತೋರುವವು. ಆದರೆ ಇಷ್ಟೇ ಅಲ್ಲದೆ, ಅದ್ವೈತಪ್ರಭುಗಳ ಕರೆಯೊಂದು ಆನುಷಂಗಿಕ ಕಾರಣವಾಗಿ ತೋರಿಬರುತ್ತದೆ.

ಇಲ್ಲಿ ನಾವು ಮುಖ್ಯವಾಗಿ ತಿಳಿದುಕೊಳ್ಳಬೇಕಾದ ಇನ್ನೊಂದು ಅಂಶವೆಂದರೆ, ಭಗವಾನ್ ಶ್ರೀಕೃಷ್ಣನೇ ಚೈತನ್ಯ ಮಹಾಪ್ರಭುಗಳಾಗಿ ಆವಿರ್ಭವಿಸಿದ್ದಾರೆಂಬುದು. ಆದರೆ ಇಲ್ಲಿಯ ಅವತಾರದಲ್ಲಿ ದುಷ್ಟರಿಗೆ ಬಲಪ್ರದರ್ಶನದ ಮೂಲಕವಾಗಿ ಶಿಕ್ಷೆಯಿಲ್ಲ. ಬದಲಾಗಿ ಆ ದುಷ್ಟರಿಗೆ ಹರಿನಾಮಸಂಕೀರ್ತನೆಗೆ ಒಳಗಾಗುವಂತೆ ಅನುಗ್ರಹದ ಪ್ರೇರೇಪಣೆಯಿದೆ. ಶ್ರೀಕೃಷ್ಣನೆನಿಸಿದ ಚೈತನ್ಯರು ಭಕ್ತನ ಪಾತ್ರವನ್ನು ನಿರ್ವಹಿಸಿ, ಶರಣಾಗತಿ ತತ್ತ್ವಾರ್ಥವನ್ನು ಭಕ್ತಸಮೂಹಕ್ಕೆ ತಿಳಿಯಪಡಿಸುತ್ತಾರೆ. ಆದರೂ ಕೆಲವೊಮ್ಮೆ, ತನ್ನ ಹಿಂದಿನ ಅವತಾರದ ಗುಣವಿಶೇಷವನ್ನು ಅಲ್ಲಲ್ಲಿ ಭಕ್ತಕುಲಕ್ಕೆ ಸೂಕ್ಷ್ಮವಾಗಿ ತಿಳಿಯುವಂತೆ ಮಾಡುತ್ತಾರೆ. ಅಂತಹ ಘಟನೆಗಳಲ್ಲಿ ಮುಖ್ಯವಾಗಿ, ದಶಾವತಾರಗಳಲ್ಲಿ ಕೆಲವೊಂದು ಅವತಾರವನ್ನು ಸೂಕ್ಷ್ಮವಾಗಿ ಪ್ರದರ್ಶಿಸುವುದು, ಚತುರ್ಭುಜಧಾರಿಯಾಗುವುದು, ಪುರಿಯಲ್ಲಿದ್ದ ಚೈತನ್ಯರು ಮಾಯಾಪುರದಲ್ಲಿದ್ದ ತನ್ನ ತಾಯಿಯು ಸಿದ್ಧಗೊಳಿಸಿದ ಅಡುಗೆಯನ್ನು ಉಣ್ಣುವುದು, ಜಗದೀಶ ಮತ್ತು ಹಿರಣ್ಯರೆಂಬ ಪಂಡಿತರ ಮನೆಯಲ್ಲಿ ಏಕಾದಶಿಯಂದು ವಿಷ್ಣುವಿಗೆ ಮಾಡಿದ ನೈವೇದ್ಯವನ್ನು ತಂದೆ ಜಗನ್ನಾಥಮಿಶ್ರರಿಂದ ತರಿಸಿ ಸ್ವೀಕರಿಸಿದುದು, ಪ್ರದ್ಯುಮ್ನ ಬ್ರಹ್ಮಚಾರಿಯು ಶ್ರೀಹರಿಗೆ ನೈವೇದ್ಯವನ್ನಿಟ್ಟು, ಧ್ಯಾನಾಸಕ್ತನಾದಾಗ, 'ದೇಖೇ ಶೀಘ್ರ ಆಸಿ, ವಸಿಲಾ ಚೈತನ್ಯ ಗೋಸ್ವಾಮಿ । ತಿನ ಭೋಗ ಖಾಯಿಲಾ ಕಿಚು ಅವನಿಷ್ಟ ನಾಇ'[೮] ಎಂಬಲ್ಲಿ ಚೈತನ್ಯರೇ ಬಂದು ಮೂರೂ ನೈವೇದ್ಯವನ್ನು ಸ್ವಲ್ಪವೂ ಬಿಡದೆ ಸ್ವೀಕರಿಸಿ, ಜಗನ್ನಾಥ, ನರಸಿಂಹ ಹಾಗೂ ಚೈತನ್ಯರಲ್ಲಿ ಯಾವ ಭೇದವೂ ಇಲ್ಲವೆನ್ನುವುದಕ್ಕೆ ಸಮರ್ಥನೆಯನ್ನು ತೋರಿಸುವುದು...ಇವೇ ಮುಖ್ಯವಾದವು. ಹೀಗೆ ಶ್ರೀಕೃಷ್ಣನೇ ಚೈತನ್ಯರಾಗಿ ಬಂದು ಅಚಿಂತ್ಯಾತತ್ತ್ವವನ್ನು ಆಧ್ಯಾತ್ಮಿಕಪ್ರಪಂಚಕ್ಕೆ ತಿಳಿಸಿಕೊಡುತ್ತಾರೆ. ಅಲ್ಲದೆ ಏಕಕಾಲಕ್ಕೆ ನಾಲ್ಕುದಿಕ್ಕುಗಳಲ್ಲಿಯೂ ಪ್ರಕಟಗೊಳ್ಳುತ್ತಾರೆ.

ಶಚೀರ ಮನ್ದಿರೇ ಆರ ನಿತ್ಯಾನಂದ ನರ್ತನೇ ।
ಶ್ರೀವಾಸ ಕೀರ್ತನೇ ಆರ ರಾಘವ ಭವನೇ ॥[೯]

ಅದು, ಶಚೀದೇವಿಯ ಮನೆಯಲ್ಲಿ, ನಿತ್ಯಾನಂದಪ್ರಭುಗಳು ನೃತ್ಯಮಾಡುವ ಸಂದರ್ಭದಲ್ಲಿ, ಶ್ರೀವಾಸಪಂಡಿತರ ಸಾಮೂಹಿಕ ಸಂಕೀರ್ತನಾ ಸಮಯದಲ್ಲಿ ಮತ್ತು ರಾಘವ ಪಂಡಿತರ ಮನೆಯಲ್ಲಿ. ಅಲ್ಲದೆ, ೧. ಪ್ರತ್ಯಕ್ಷ ಆವಿರ್ಭಾವ (ಸಾಕ್ಷಾತ್), ೨. ಇನ್ನೊಬ್ಬರಿಗೆ ತನ್ನ ಶಕ್ತಿಯನ್ನು ನೀಡುವುದು (ಆವೇಶ), ೩. ಅವರ ಅವತಾರ (ಆವಿರ್ಭಾವ) ಹೀಗೆ ಮೂರು ರೂಪಗಳಲ್ಲಿ ಅವ್ಯಾಜಕರುಣಾನುಗ್ರಹವನ್ನೂ ತೋರುತ್ತಾರೆ. ಈ ಎಲ್ಲಾ ಉದಾಹರಣೆಗಳಿಂದ ಚೈತನ್ಯ ಮಹಾಪ್ರಭುಗಳ ಅಚಿಂತ್ಯಾಶಕ್ತಿಯನ್ನು ಕಾಣಬಹುದಾಗಿದೆ.

ಬಾಲಲೀಲೆಗಳಲ್ಲಿ ಭಗವದ್‌ಪಾರಮ್ಯ

ಜಗನ್ನಾಥಮಿಶ್ರ ಹಾಗೂ ಶಚೀದೇವಿ ದಂಪತಿಗಳದ್ದು ತುಂಬು ಕುಟುಂಬ. ಹತ್ತುಮಂದಿ ಮಕ್ಕಳಲ್ಲಿ ಮೊದಲ ಎಂಟುಮಂದಿ ಪುತ್ರಿಯರು, ಒಂಬತ್ತನೆಯವರು ವಿಶ್ವರೂಪರು, ಹತ್ತನೆಯವರೇ ಶ್ರೀಚೈತನ್ಯರೆಂದು ಖ್ಯಾತರಾದ ಶ್ರೀವಿಶ್ವಂಭರರು.

ಚೈತನ್ಯರು ತನ್ನ ಎಳವೆಯಲ್ಲೇ ಭಗವದ್ವಿಶಿಷ್ಟತೆಯನ್ನು ತೋರಿದವರು. ತನ್ನ ಅನ್ನಪ್ರಾಶನದ ದಿನದಲ್ಲೇ ನಾಣ್ಯಗಳ ರಾಶಿ ಮತ್ತು ಶ್ರೀಮದ್ಭಾಗವತದ ಕೃತಿಯನ್ನಿಟ್ಟು ಮಗುವಿನ ಸ್ವಭಾವವನ್ನು ಅರಿಯಲು ತಾಯಿ ಮಾಡಿದ ಪರೀಕ್ಷೆಯಲ್ಲಿ, ಭಾಗವತಕೃತಿಯ ಕಡೆಗೆ ಸಾಗಿ ತನ್ನ ಆಧ್ಯಾತ್ಮದ ಒಲವನ್ನು ಸೂಚಿಸಿದುದು, ಮುಂದೊಂದು ದಿನ ಬಾಲಚೈತನ್ಯ (ನಿಂಬಾವೃಕ್ಷದ ಕೆಳಗೆ ಜನಿಸಿದ್ದರಿಂದ ನಿಮಾಯ್ ಎಂಬ ಹೆಸರು ಕೆಲವು ಕೃತಿಗಳಲ್ಲಿ ಉಲ್ಲೇಖಗೊಂಡಿದೆ.) ಮನೆಯಂಗಳದಲ್ಲಿ ಆಡುತ್ತಿದ್ದಾಗ ನಾಗರಹಾವೊಂದು ಹೆಡೆಯನ್ನೆತ್ತಿಕೊಂಡು ಮಗುವಿನತ್ತ ಬಂದಾಗ, ಶೇಷರೂಪನಾದ ಬಲರಾಮನೇ ಸಹೋದರನಾದ ಕೃಷ್ಣನನ್ನು ಮುದ್ದಿಸಲೆಂದು ಬಂದನೆಂದು ತಿಳಿಯದ ತಾಯಿಯನ್ನು ಗಾಬರಿಗೊಳಿಸಿದುದು, ಬಾಲಚೈತನ್ಯನು ಅಂಗಳದಲ್ಲಿ ಆಡುತ್ತಿರುವಾಗ, ಆತನ ಮೈಮೇಲಿನ ಆಭರಣವನ್ನು ಕಂಡ ಕಳ್ಳರಿಬ್ಬರು ಆತನನ್ನು ಅಪಹರಿಸಿ ಹೊತ್ತೊಯ್ಯುವ ಸಂದರ್ಭದಲ್ಲಿ ಚೈತನ್ಯನು ತನ್ನ ದೇಹದ ಭಾರವನ್ನು ಹೆಚ್ಚಾಗಿ ಪ್ರಕಟಿಸಿದುದು, ಕಳ್ಳರ ದಾರಿಯನ್ನು ತಪ್ಪಿಸಿ, ಕಳ್ಳರು ತಮ್ಮ ದಾರಿಯೆಂದೇ ನಡೆದು, ಪುನಃ ಬಾಲಕನ ಮನೆಯ ಅಂಗಳವನ್ನೇ ತಲುಪುವಂತೆ ಮಾಡಿದುದು, ಜಗನ್ನಾಥಮಿಶ್ರರ ಮನೆಗೆ ತೀರ್ಥಯಾತ್ರೆಯಲ್ಲಿ ಬಂದ ಬ್ರಾಹ್ಮಣ ಸಂತನು ತಾನಾಗಿಯೇ ಸಿದ್ಧಗೊಳಿಸಿದ ನೈವೇದ್ಯವನ್ನು ಕೃಷ್ಣನಿಗರ್ಪಿಸಲು, 'ನಮೋ ಬ್ರಹ್ಮಣ್ಯ ದೇವಾಯ ಗೋಬ್ರಾಹ್ಮಣ ಹಿತಾಯಚ, ಜಗದ್‌ಹಿತಾಯ ಕೃಷ್ಣಾಯ ಗೋವಿಂದಾಯ ನಮೋ ನಮಃ' ಎಂದು ಧ್ಯಾನಿಸತೊಡಗಿದಾಗ, ಮಿಶ್ರರ ಮಗನಾದ ಚೈತನ್ಯನು ನೈವೇದ್ಯವೆಲ್ಲವನ್ನು ಪೂರ್ತಿಯಾಗಿ ಸ್ವೀಕರಿಸಿ, ಬ್ರಾಹ್ಮಣನಿಗೆ ದಿಗ್ಭ್ರಮೆಯಾಗುವಂತೆ ಮಾಡಿ, ಅನಂತರ ಆ ಬ್ರಾಹ್ಮಣನಲ್ಲಿ 'ನೀನು ಕರೆದು ನೈವೇದ್ಯವನ್ನಿಟ್ಟಾಗ ನಾನು ಬಂದೆ. ಹಿಂದೆ ನಾನು ನಂದನ ಕಂದನಾಗಿರುವಾಗಲೂ ನೀನು ನಮ್ಮ ಮನೆಗೆ ಬಂದು ಇದೇ ರೀತಿಯಾಗಿ ನೈವೇದ್ಯವನ್ನು ಸಲ್ಲಿಸಿದ್ದೆ. ಆ ನಂದನ ಕಂದನಾದ ಕೃಷ್ಣನೇ ತಾನೆಂದು ಹೇಳಿ, ಬ್ರಾಹ್ಮಣನನ್ನು ಕೃತಾರ್ಥನನ್ನಾಗಿಸಿದುದು.....ಹೀಗೆ ಅತಿಮಾನುಷದ ಕೆಲವೊಂದು ಸೂಕ್ಷ್ಮಗಳನ್ನು ತನ್ನ ಕಿರುಹರೆಯದಲ್ಲೇ ತೋರಿಸಿಕೊಟ್ಟವರು ಚೈತನ್ಯ ಮಹಾಪ್ರಭುಗಳು.

ಸಂಸಾರ, ಅಧ್ಯಾತ್ಮ ಮತ್ತು ಸಂನ್ಯಾಸ

ಶ್ರೀವಿಶ್ವಂಭರ(ಚೈತನ್ಯ)ರು ತಮ್ಮ ಕಿರುಹರೆಯದಲ್ಲೇ ವ್ಯಾಕರಣ, ಅಲಂಕಾರ, ಸ್ಮೃತಿ ಹಾಗೂ ನ್ಯಾಯ ಶಾಸ್ತ್ರಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಿದ್ದರು. ಆದರೆ ಈ ವೇಳೆಗಾಗಲೇ ತಮ್ಮ ಸಹೋದರರಾದ ವಿಶ್ವರೂಪರ ಸಂನ್ಯಾಸ ಸ್ವೀಕಾರ ಮತ್ತು ತಂದೆಯ ಮರಣವಿಚಾರಗಳು ಅವರನ್ನು ಸಂದಿಗ್ಧತೆಗೆ ಗುರಿಮಾಡಿತ್ತು. ವಿಧವೆಯಾಗಿದ್ದ ತನ್ನ ತಾಯಿಯನ್ನು ಸಮಾಧಾನಿಸಿ, ಮುಂದೆ ತನ್ನ ಹದಿನೈದನೆಯ ವಯಸ್ಸಿನಲ್ಲಿ ನದಿಯಾಪಟ್ಟಣದ ಶ್ರೀವಲ್ಲಭಾಚಾರ್ಯರ ಪುತ್ರಿಯಾದ ಲಕ್ಷ್ಮೀದೇವಿಯನ್ನು ಮದುವೆಯಾಗಬೇಕಾಯಿತು. ಸ್ವಲ್ಪಸಮಯದಲ್ಲೇ ವೈಷ್ಣವಸಿದ್ಧಾಂತದ ಬೋಧನೆಗಾಗಿ ಪೂರ್ವಬಂಗಾಳದಲ್ಲಿ ಚೈತನ್ಯರು ಇರಬೇಕಾದ ಸಮಯದಲ್ಲಿ ಅವರ ಪತ್ನಿಯು ಹಾವು ಕಚ್ಚಲ್ಪಟ್ಟು ತೀರಿಕೊಳ್ಳಲು, ತಾಯಿಯ ಒತ್ತಾಯಕ್ಕಾಗಿ ಎರಡನೆಯ ಮದುವೆಯನ್ನು ಒಪ್ಪಿಕೊಂಡು ಸನಾತನಮಿಶ್ರರ ಪುತ್ರಿಯಾದ ವಿಷ್ಣುಪ್ರಿಯೆಯನ್ನು ಮದುವೆಯಾದರು. ಆದರೂ ಅಧ್ಯಾತ್ಮಿಕ ಅಧ್ಯಯನದ ಹಸಿವು ಅವರನ್ನು ಕಾಡದೆಬಿಡಲಿಲ್ಲ. ಈ ನೆಲೆಯಲ್ಲಿ ಕ್ರಿ.ಶ. ೧೫೧೦ ರಲ್ಲಿ ವಿಶ್ವಂಭರರು ಕಾಟ್ವಾಪಟ್ಟಣದ ಶ್ರೀಕೇಶವ ಭಾರತಿಯೆಂಬವರಲ್ಲಿ ಸಂನ್ಯಾಸದೀಕ್ಷೆಯನ್ನು ಸ್ವೀಕರಿಸಿಕೊಂಡು, 'ಚೈತನ್ಯ'ರೆಂದು ನಾಮಕರಣಗೊಂಡರು. ಸಂನ್ಯಾಸ ಸ್ವೀಕಾರದ ಬಳಿಕ, ಕಣ್ಣೀರು ಸುರಿಸುತ್ತಿರುವ ತಮ್ಮ ತಾಯಿಯನ್ನು ಸಮಾಧಾನಿಸಿ, ಶಾಂತಿಪುರವನ್ನು ಬಿಟ್ಟು ಒರಿಸ್ಸಾಕ್ಕೆ ತೆರಳಿದರು.

೪.೨ (ಅ) : ಷಡ್‌ಗೋಸ್ವಾಮಿಗಳು.

ಚೈತನ್ಯಪಂಥದ ಅಧ್ಯಾತ್ಮ ಬೆಳವಣಿಗೆಯಲ್ಲಿ ಷಡ್‌ಗೋಸ್ವಾಮಿಗಳ ಪಾತ್ರವು ಮಹತ್ವಪೂರ್ಣವಾದುದು. ಹೆಸರೇ ಸೂಚಿಸುವಂತೆ ಈ ಶಬ್ದವು ಸಂಸ್ಕೃತದ 'ಗೋಸ್ವಾಮಿನ್' ಎಂಬ ಶಬ್ದದಿಂದ ಬಂದಿದೆ. ಆ ಪಂಥದ ಪ್ರಕಾರ, ಇಂದ್ರಿಯಗಳು ಮತ್ತು ಮನಸ್ಸಿನ ಮೇಲೆ ಸಂಪೂರ್ಣ ಹತೋಟಿಯನ್ನು ಇಟ್ಟುಕೊಂಡಿರುವವನನ್ನು ಗೋಸ್ವಾಮಿ ಎಂದು ಕರೆಯಲಾಗುತ್ತದೆ. ಅಂತಹ ಹತೋಟಿ ಇಲ್ಲದವನನ್ನು ಗೋದಾಸ ಅಥವಾ ಇಂದ್ರಿಯಗಳ ದಾಸನೆಂದು ಕರೆದಿದೆ. ಈ ಗೋದಾಸನು ಗುರುವಾಗಲು ಸಾಧ್ಯವಿಲ್ಲ. ಮನಸ್ಸು ಮತ್ತು ಇಂದ್ರಿಯಗಳ ಮೇಲೆ ಹತೋಟಿಯನ್ನು ಸಾಧಿಸುವವ ಮಾತ್ರ ಇಲ್ಲಿ ಗುರುವಾಗುತ್ತಾನೆ. ಇಲ್ಲಿಯ ಈ 'ಗೋಸ್ವಾಮಿ' ಎಂಬ ಬಿರುದು ಶ್ರೀಲ ರೂಪರಿಂದ ಆರಂಭವಾಯಿತು. ಗೋಸ್ವಾಮಿಗೆ ಇಲ್ಲಿ ಅರ್ಹತೆಯೇ ಮುಖ್ಯವಾಗುತ್ತದೆ. ಇದು ವಂಶಪಾರಂಪರ್ಯವಾಗಿ ಬಂದ ಬಿರುದಲ್ಲವೆಂಬುದನ್ನು ಚೈತನ್ಯ ಚರಿತಾಮೃತವು ಸ್ಪಷ್ಟವಾಗಿ ಹೇಳುತ್ತದೆ.[೧೦] ಇಷ್ಟೇ ಅಲ್ಲದೆ ಈ ಶಬ್ದವು 'ಗೋಸಾಯಿ', 'ಗೋಸಾಮಿ' ಮೊದಲಾದ ರೂಪದಲ್ಲೂ ಪ್ರಯೋಗಗೊಂಡದ್ದಿದೆ. ಮುಖ್ಯವಾಗಿ ಈತನು ವಿರಕ್ತನಾಗಿರುವುದು ಮಾತ್ರವಲ್ಲದೆ ವೈಷ್ಣವ ದೀಕ್ಷೆಗೂ ಒಳಗಾಗಿರಬೇಕಾಗುತ್ತದೆ. ಈ ನೆಲೆಯಲ್ಲಿ ಚೈತನ್ಯಪಂಥದಲ್ಲಿ ಬರುವ ಆರುಜನ ಗೋಸ್ವಾಮಿಗಳು ಷಡ್‌ಗೋಸ್ವಾಮಿಗಳೆಂದೇ ಪ್ರಸಿದ್ಧರಾಗಿದ್ದವರು. ಅವರುಗಳೆಂದರೆ,

೧. ಜೀವ ಗೋಸ್ವಾಮಿ

೨. ರೂಪ ಗೋಸ್ವಾಮಿ

೩. ಸನಾತನ ಗೋಸ್ವಾಮಿ

೪. ಗೋಪಾಲ ಭಟ್ಟ ಗೋಸ್ವಾಮಿ

೫. ರಘುನಾಥ ಗೋಸ್ವಾಮಿ

೬. ರಘುನಾಥ ಭಟ್ಟ ಗೋಸ್ವಾಮಿ

ಇವರುಗಳು ಶ್ರೀಚೈತನ್ಯ ಮಹಾಪ್ರಭುಗಳ ಶಿಷ್ಯತ್ವವನ್ನು ಪಡೆದವರು. ತಮ್ಮ ಬದುಕಿನಲ್ಲಿ ಭಕ್ತಿಸೇವೆಯನ್ನೇ ಮುಖ್ಯವಾಗಿ ಸ್ವೀಕರಿಸಿದವರು. ಅಲ್ಲದೆ ಚೈತನ್ಯಪಂಥದ ಮುನ್ನಡೆಯಲ್ಲಿ ಇವರುಗಳ ಧಾರ್ಮಿಕಸಾಧನೆ, ಸಾಮಾಜಿಕ ಸುಧಾರಣೆಯ ಜೊತೆಗೆ ಅವರು ರಚಿಸಿದ ಸಾಹಿತ್ಯರಚನೆ ಬಹಳ ಮುಖ್ಯವೆನಿಸುತ್ತದೆ.

ಶ್ರೀಚೈತನ್ಯರ ಉಪದೇಶಗಳು ಕೃಷ್ಣದಾಸ ಕವಿರಾಜ ಗೋಸ್ವಾಮಿಯವರ ಮೂಲಕವಾಗಿ ಬರಹರೂಪದಲ್ಲಿ ಸಂಗ್ರಹವಾಗಬೇಕಾದರೆ ರೂಪ ಹಾಗೂ ಸನಾತನರ ಸೋದರಿಯ ಮಗನಾದ ಜೀವ ಗೋಸ್ವಾಮಿಯವರ ಕೊಡುಗೆ ಮಹತ್ತರವಾದುದು. ಅವರ ಅಧ್ಯಾತ್ಮದ ಆಳ ಮತ್ತು ವಿಸ್ತಾರಕ್ಕೆ ಅವರು ಬರೆದಿರುವ 'ಷಟ್‌ಸಂದರ್ಭ'ವೆಂಬ ಕೃತಿಯೇ ಆಧಾರವಾಗಿ ನಿಲ್ಲುತ್ತದೆ. ಒಂದು ನೆಲೆಯಲ್ಲಿ ನೋಡಿದರೆ ಚೈತನ್ಯರ ತಾತ್ವಿಕವಿಚಾರಗಳಿಗೆ ಸೈದ್ಧಾಂತಿಕ ರೂಪವನ್ನು ಕೊಟ್ಟಿದ್ದು ಜೀವ ಗೋಸ್ವಾಮಿಗಳೆಂದೇ ಹೇಳಬೇಕು.

ಶ್ರೀಚೈತನ್ಯ ಮಹಾಪ್ರಭುಗಳ ಶಿಷ್ಯರೂ ಹಾಗೂ ಸನಾತನರ ಸಹೋದರರೂ ಆದ ರೂಪ ಗೋಸ್ವಾಮಿಗಳ ಮೊದಲ ಹೆಸರು ಸಂತೋಷನೆಂದು. ಗೌಡೀಯಭಕ್ತಿ ಸಂಪ್ರದಾಯಕ್ಕೆ ಮಹತ್ವದ ಕೊಡುಗೆಯನ್ನು ನೀಡಿದ ಇವರು ಜನಿಸಿದ್ದು ೧೪೮೯ರಲ್ಲಿ. ದ್ವಾಪರದಲ್ಲಿದ್ದ 'ರೂಪಮಂಜರಿ' ಎಂಬ ಗೋಪಿಕೆಯೇ ಚೈತನ್ಯರ ಕಾಲದಲ್ಲಿ ರೂಪ ಗೋಸ್ವಾಮಿಗಳಾಗಿ ಅವತರಿಸಿದಳೆಂದು ಗೌಡೀಯ ಕೃತಿಗಳು ಸಾರುತ್ತವೆ.[೧೧] ಹಿರಿಯ ಸಹೋದರ ಸನಾತನರಂತೆ ಇವರೂ ಕೂಡ ತೀಕ್ಷ್ಣಮತಿಗಳಾಗಿದ್ದು ಬಂಗಾಳದ ದೊರೆ ಹುಸೇನ್‌ಷಾನ ಆಡಳಿತಾವಧಿಯಲ್ಲಿ ಮುಖ್ಯಹುದ್ದೆಯೊಂದನ್ನು ಅಲಂಕರಿಸಿ 'ದಬೀರ್‌ಖಾಸ್' ಎಂಬ ಹೆಸರಿನಿಂದ ಬಲವಂತವಾಗಿ ಗುರುತಿಸಿಕೊಂಡಿದ್ದರು. ಹುಸೇನ್‌ಷಾನ ಶೋಷಣೆಗೆ ಗುರಿಯಾಗುತ್ತಿದ್ದಂತೆಯೇ ರೂಪ ಗೋಸ್ವಾಮಿಗಳ ಮುನಸ್ಸು ಅಧ್ಯಾತ್ಮದೆಡೆಗೆ ತಿರುಗಿ, ದೊರೆಯು ವಿಧಿಸಿದ ಕಾರಾಗೃಹವಾಸದಿಂದ ತಪ್ಪಿಸಿಕೊಂಡು ಶ್ರೀಚೈತನ್ಯ ಪ್ರಭುಗಳ ಅನುಯಾಯಿಯಾಗಿ ದೀಕ್ಷೆಯನ್ನು ಪಡೆದರು. ಅಲ್ಲದೆ ಅವರಿಂದಲೇ 'ಶ್ರೀರೂಪ'ನೆಂದು ನಾಮಾಂಕಿತರಾದರು. ಅಲ್ಲಿಂದ ಮುಂದೆ ರಾಮಕೇಲಿಯನ್ನೇ ತನ್ನ ವಾಸ್ತವ್ಯವನ್ನಾಗಿ ಮಾಡಿಕೊಂಡು, ತನ್ನನ್ನು ತಾನು ಅಚಿಂತ್ಯಾತತ್ವ ಸಿದ್ಧಾಂತಕ್ಕೆ ಸಂಪೂರ್ಣವಾಗಿ ಸಮರ್ಪಿಸಿಕೊಂಡರು.

ರೂಪ ಗೋಸ್ವಾಮಿಗಳಿಗೆ ಶ್ರೀಚೈತನ್ಯರ ಮೊದಲಭೇಟಿಯಾದುದು ಪ್ರಯಾಗದ ಓರ್ವ ಬ್ರಾಹ್ಮಣನ ಮನೆಯಲ್ಲಿ. ಇಲ್ಲಿಂದಲೇ ಶ್ರೀರೂಪರು ಶ್ರೀಚೈತನ್ಯರ ಆಧ್ಯಾತ್ಮಿಕ ಭಾವನೆಗಳಿಗೆ ಮಾರುಹೋಗಿ, ಅವರ ಅಂತರಂಗ ಭಕ್ತರಾಗಿ ಬಿಂಬಿತರಾಗುತ್ತಾರೆ. ಶ್ರೀಚೈತನ್ಯರೇ ಹೇಳುವಂತೆ, ಚತುರ್ವೇದ ಪಠಿಸಿರುವ ಬ್ರಾಹ್ಮಣನೊಬ್ಬನನ್ನು ಭಕ್ತನೆಂದು ಸ್ವೀಕರಿಸದೆ ಇದ್ದುಬಿಡಬಹುದಾದರೂ, ಶುದ್ಧಭಕ್ತನೋರ್ವನು ಹೀನಕುಲದಿಂದ ಬಂದಿದ್ದವನಾದರೂ ಅವನನ್ನು ಭಕ್ತನೆಂದು ಒಪ್ಪಿಕೊಳ್ಳಬಹುದಾಗಿದೆ.[೧೨] ಇದು ಆ ಕಾಲದ ಜಾತ್ಯತೀತ ಶಿಷ್ಯಸ್ವೀಕಾರಕ್ರಮದ ಕಲ್ಪನೆಗೆ ಸಾಕ್ಷಿಯಾಗುತ್ತದೆ. ಅಲ್ಲದೆ ಈ ಕ್ರಮವು ಶುದ್ಧಭಕ್ತನ ಅಂತಸ್ಸತ್ವವನ್ನು ಒಂದೆಡೆ ಪ್ರತಿನಿಧಿಸಿದರೆ, ಇನ್ನೊಂದೆಡೆ ಚೈತನ್ಯ ಮಹಾಪ್ರಭುಗಳ ಜಾತ್ಯತೀತ ಕಲ್ಪನೆಯ ಅನುಗ್ರಹವಿಧಾನವು ಇಲ್ಲಿ ವಿಜೃಂಭಿಸುತ್ತದೆ. ಪರಮಪುರುಷರಾದ ಶ್ರೀಕೃಷ್ಣಚೈತನ್ಯರಿಂದ ಅನುಗ್ರಹೀತರಾದ ರೂಪ ಗೋಸ್ವಾಮಿಗಳು ತಮ್ಮ 'ಗೋವಿಂದ ಲೀಲಾಮೃತ'ದಲ್ಲಿ ಹೀಗೆ ಹೇಳುತ್ತಾರೆ.

ಯೋ ಜ್ಞಾನ ಮತ್ತಂ ಭುವನಂ ದಯಾಲುರ್
ಉಲ್ಲಾಘಯನ್ ಅಪಿ ಅಕರೋತ್ ಪ್ರಮತ್ತಮ್ ।
ಸ್ವ ಪ್ರೇಮ ಸಂಪತ್ ಸುಧಯಾದ್ಭು ತೇಹಂ
ಶ್ರೀ ಕೃಷ್ಣ ಚೈತನ್ಯಮ್ ಅಮುಂ ಪ್ರಪದ್ಯೇ ॥[೧೩]

ಇಲ್ಲಿ, ಅಜ್ಞಾನವೆಂಬ ಅಂಧಕಾರದಲ್ಲಿ ಮುಳುಗಿದ ಆತ್ಮಗಳನ್ನು ಉದ್ಧರಿಸುವವರು ಹಾಗೂ ಶ್ರೀಕೃಷ್ಣ ಪ್ರೇಮವನ್ನು ನೀಡುವವರೂ ಒಬ್ಬರೇ ಆಗುತ್ತಾರೆ. ಅವರೇ ಶ್ರೀಚೈತನ್ಯರೆಂಬುದು ರೂಪ ಗೋಸ್ವಾಮಿಗಳ ಅಭಿಪ್ರಾಯ. ಮುಂದೆ ರೂಪ ಗೋಸ್ವಾಮಿಗಳು ಶ್ರೀಚೈತನ್ಯ ಮಹಾಪ್ರಭುಗಳಿಂದ ಧರ್ಮಬೋಧನೆಯನ್ನು ಗಂಗಾತೀರದ 'ದಶಾಶ್ವಮೇಧ ಘಟ್ಟ'ದಲ್ಲಿ ಹತ್ತುದಿನಗಳ ಪರ್ಯಂತವಾಗಿ ಪಡೆದು ತಮ್ಮ ವೈರಾಗ್ಯ ಹಾಗೂ ಆಧ್ಯಾತ್ಮಿಕಜೀವನವನ್ನು ಹೆಚ್ಚಿಸಿಕೊಳ್ಳುತ್ತಾರೆ. ಈ ಉಪದೇಶಾಮೃತವೇ ಮುಂದಿನ ದಿನಗಳಲ್ಲಿ ರೂಪ ಗೋಸ್ವಾಮಿಗಳಿಂದ ರಚಿತವಾದ 'ಭಕ್ತಿರಸಾಮೃತಸಿಂಧು'ವೆಂಬ ಗ್ರಂಥವಾಗಿ ಗೌಡೀಯ ಭಕ್ತಿಸಾಹಿತ್ಯದಲ್ಲಿ ಮುಖ್ಯವೆನಿಸಿಬಿಡುತ್ತದೆ.

ಶ್ರೀಲ ಸನಾತನ ಗೋಸ್ವಾಮಿಗಳು ಚೈತನ್ಯಪಂಥದ ಷಡ್‌ಗೋಸ್ವಾಮಿಗಳಲ್ಲಿ ಒಬ್ಬರು. ಚೈತನ್ಯ ಮಹಾಪ್ರಭುಗಳ ಪ್ರಮುಖ ಶಿಷ್ಯರುಗಳಲ್ಲಿ ಒಬ್ಬರಾದ ಇವರು ಜನಿಸಿದ್ದು ೧೪೮೮ ರಲ್ಲಿ. ದ್ವಾಪರದಲ್ಲಿ 'ರತಿಮಂಜರಿ'ಎಂಬ ಗೋಪಿಕೆಯೇ ಚೈತನ್ಯಲೀಲೆಯುಲ್ಲಿ ಸನಾತನ ಗೋಸ್ವಾಮಿಗಳಾಗಿ ಅವತರಣರಾದರೆಂಬುದು ಪೂರ್ವಕೃತಿಗಳ ಸಾರ.[೧೪]

ಸನಾತನರ ಮೂಲಹೆಸರು 'ಅಮರ'ನೆಂದು. ಅವರ ಬಾಲ್ಯ ವಿದ್ಯಾಭ್ಯಾಸವು 'ಸುಕರ್ಮ' ಎಂಬ ಪ್ರದೇಶದಲ್ಲೇ ನಡೆಯಿತು. ತೀಕ್ಷ್ಣಮತಿಗಳೂ, ಚತುರರೂ ಆಗಿದ್ದ ಅವರು ಬಂಗಾಳದ ಅಂದಿನ ದೊರೆ ಹುಸೇನ್‌ಷಾನ ಆಪ್ತ ಕಾರ್ಯದರ್ಶಿಯಾಗಿ 'ಸಾಕರಮಲ್ಲಿಕ್' ಎಂಬ ಹೆಸರನ್ನು ಪಡೆದುಕೊಂಡು ಬಹುಪಾಲು ಮುಸಲ್ಮಾನರೇ ಆಗಿಹೋಗಿದ್ದರು. ವಿಧರ್ಮೀಯರೊಂದಿಗಿನ ತಮ್ಮ ಕಾರ್ಯಭಾರದಿಂದಾಗಿ ದೈನಂದಿನ ಬ್ರಾಹ್ಮಣ

ಅನುಷ್ಠಾನಗಳನ್ನು ಮಾಡಲಿಕ್ಕಾಗದೆ ಉಚ್ಚಬ್ರಹ್ಮಕುಲಪತಿತನೆಂದೇ ತನ್ನ ಬಗ್ಗೆ ಅವರು ಭಾವಿಸಿಕೊಂಡಿದ್ದರು. ದಿನಕಳೆದಂತೆ ತಮ್ಮ ಹುದ್ದೆಯಲ್ಲಿ ಔದಾಸೀನ್ಯತೆಯನ್ನು ತೋರಿಸುತ್ತಾ ಸಹೋದರನೊಂದಿಗೆ ಸೇರಿಕೊಂಡು ರಾಮಕೇಲಿಯನ್ನು ತಮ್ಮ ವಾಸ್ತವ್ಯ ತಾಣವಾಗಿ ಮಾಡಿಕೊಂಡು, ಸಾರ್ವಭೌಮ ಭಟ್ಟಚಾರ್ಯರ ಸಹೋದರ ಶ್ರೀವಿದ್ಯಾವಾಚಸ್ಪತಿಯವರಲ್ಲಿ ವೈದಿಕಗ್ರಂಥಗಳ ಪರಿಚಯವನ್ನು ಪಡೆದರು. ಒಮ್ಮೆ ಸನಾತನರಿಗೆ ಕನಸಿನಲ್ಲಿ ಓರ್ವ ಬ್ರಾಹ್ಮಣ ಶ್ರೀಮದ್ಭಾಗವತವನ್ನು ನೀಡಿದಂತೆ ಭಾಸವಾಗಿ, ಅದರಂತೆಯೇ ಮಾರನೆಯ ದಿನದ ಹಗಲಿನಲ್ಲೂ ಓರ್ವ ಬ್ರಾಹ್ಮಣ ಬಂದು ಭಾಗವತವನ್ನು ನೀಡಿ, ಇದನ್ನು ಅಧ್ಯಯನ ಮಾಡಿದರೆ ಪರಿಪೂರ್ಣತೆ ನಿನ್ನದಾಗುವುದೆನ್ನಲು, ಮುಂದೆ ಭಾಗವತದ ಪಾರಾಯಣದಲ್ಲೇ ತನ್ನನ್ನು ತೊಡಗಿಸಿಕೊಂಡು, ಆಧ್ಯಾತ್ಮದಲ್ಲೇ ಜೀವನವನ್ನು ನಡೆಸಿದರು. ಈ ಪರಿಣಾಮವಾಗಿಯೇ 'ಶ್ರೀಕೃಷ್ಣ ಲೀಲಾಸ್ತವ' ವೆಂಬ ಕೃತಿಯೊಂದು ಅವರಿಂದ ಹುಟ್ಟಿಕೊಳ್ಳುವಂತಾಯಿತು.

ಮದೇಶ ಬಂದೋ ಮತ್ಸಒಗೀ ಮದ್ ಗುರೋಮನ್ ಮಹಾಧನ ।
ಮನ್ ವಿಸ್ತಾರಕ ಮದ್ಭಾಗ್ಯಮದಾನಂದ ನಮೋಸ್ತುತೇ ॥ –ಶ್ರೀಕೃಷ್ಣ ಲೀಲಾಸ್ತವ

ಮುಂದೊಂದು ದಿನದ ಸಂಜೆಯಲ್ಲಿ ಗಂಗಾತಟದಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಶ್ರೀಚೈತನ್ಯರನ್ನು ಸಾಕರಮಲ್ಲಿಕರು ತಮ್ಮ ಸಹೋದರ ದಬೀರ್‌ಖಾಸ್‌ನೊಂದಿಗೆ ಭೇಟಿಮಾಡಿ ವಿಲಾಪಿಸಲು, ಕೃಪೆದೋರಿದ ಚೈತನ್ಯರು ಸಾಕರಮಲ್ಲಿಕರಿಗೆ ಶ್ರೀಸನಾತನರೆಂದೂ, ದಬೀರ್‌ಖಾಸ್‌ನಿಗೆ ಶ್ರೀರೂಪನೆಂದೂ ನಾಮಕರಣಮಾಡಿ ಪರಮಪುರುಷನಾದ ಶ್ರೀಕೃಷ್ಣನು ನಿಮ್ಮಿಬ್ಬರನ್ನೂ ಕರುಣಿಸುತ್ತಾನೆಂದು ಹರಸಿದರು. ಮುಂದೆ ವಾರಣಾಸಿಯಲ್ಲೇ ಚೈತನ್ಯ ಮಹಾಪ್ರಭುಗಳಿಂದ ಸಂನ್ಯಾಸದೀಕ್ಷೆಯನ್ನು ಪಡೆದು ಚೈತನ್ಯಪಂಥದ ಮುನ್ನಡೆಗೆ ಪಾತ್ರರಾದರು. ಏನಿದ್ದರೂ ಇವರು ವೈರಾಗ್ಯದಲ್ಲೇ ಆತ್ಮೋದ್ಧಾರವನ್ನು ಕಂಡವರು. ಆದುದರಿಂದಲೇ ಶ್ರೀಲ ರಘುನಾಥದಾಸ ಗೋಸ್ವಾಮಿಯವರು ತಮ್ಮ 'ವಿಲಾಸ ಕುಸುಮಾಂಜಲಿ'ಯಲ್ಲಿ ಸನಾತನರನ್ನು ಕುರಿತು ಹೀಗೆ ಸ್ತುತಿಸುತ್ತಾರೆ.

ವೈರಾಗ್ಯ ಯುಗ್ ಭಕ್ತಿರಸಮ್ ಪ್ರಯತ್ನೈರ್
ಅಪಯಯನ್ ಮಮ್ ಅನಭಿಪ್ಸುಮ್ ಅಂಧಮ್
ಕೃಪಾಂಬುಧಿರ್ ಯಃ ಪರಾದುಃಖಃ– ದುಃಖಃ
ಸನಾತನಸ್ತಮ್ ಪ್ರಭುಮ್ ಅಶ್ರಯಾಮಿ ॥ –ವಿಲಾಸ ಕುಸುಮಾಂಜಲಿ

"ನಾನು ಭಕ್ತಿರಸಾಮೃತ ಪಾನವನ್ನು ಮಾಡಲಾರದವನಾಗಿದ್ದೆ. ಆದರೆ ಅದು ಸನಾತನರ ಕಾರುಣ್ಯದಿಂದ ಸಾಧ್ಯವಾಯಿತು. ಪತಿತನಾದ ನನ್ನ ಉದ್ಧಾರವೂ ಇವರಿಂದಲೇ ಆಯಿತು. ಆದುದರಿಂದ ಅವರ ಪಾದಪದ್ಮಗಳಿಗೆ ನಮಿಸುವುದು ನನ್ನ ಕರ್ತವ್ಯವಾಗಿದೆ" ಎಂಬ ಈ ಮಾತು ಸನಾತನರ ಆಧ್ಯಾತ್ಮಿಕ ಸಾಧನೆಯ ಎತ್ತರವನ್ನು ಪ್ರತಿನಿಧಿಸುತ್ತದೆ. ವಾರಣಾಸಿಯಲ್ಲಿ ಕೇಶಮುಂಡನ ಮಾಡಿಸಿ, ಶ್ರೀಚೈತನ್ಯ ಮಹಾಪ್ರಭುಗಳಿಂದ ಸಂನ್ಯಾಸವನ್ನು ಸ್ವೀಕರಿಸಿದ ಶ್ರೀಲ ಸನಾತನರು, ಆದಿಆತ್ಮಿಕದಲ್ಲಿ ದೇಹ ಹಾಗೂ ಮನಸ್ಸು ಒಡ್ಡುವ ಸಂಕಟಗಳನ್ನು,

ಆದಿಭೌತಿಕದಲ್ಲಿ ಇತರ ಜೀವಿಗಳು ಪಡುವ ಸಂಕಟವನ್ನು ಹಾಗೂ ಆದಿದೈವಿಕದಲ್ಲಿ ಊರ್ಧ್ವಲೋಕಗಳಲ್ಲಿನ ದೇವತೆಗಳ ಮೂಲಕ ಉಂಟಾಗುವ ಪ್ರಾಕೃತಿಕ ಏರಿಳಿತಗಳನ್ನು ತಿಳಿದುಕೊಂಡು[೧೫] ತನ್ನನ್ನು ಇನ್ನಷ್ಟು ಅಧ್ಯಾತ್ಮ ಚಿಂತನೆಗೆ ಒಳಗಾಗಿಸುತ್ತಾರೆ.

ಒಬ್ಬ ಶ್ರೀಮಂತ ಜಮಿನ್ದಾರರ ಮಗನಾದ ಶ್ರೀಲ ರಘುನಾಥರು ಚೈತನ್ಯರ ಲೀಲೆಗಳಲ್ಲಿ ಪಾಲ್ಗೊಂಡವರು. ತನ್ನ ಹಿರಿಯರಿಂದ ಬಂದಿರುವ ಶ್ರೀಮಂತಿಕೆಯ ಕಡೆಗೆ ಆಸಕ್ತಿ ತೋರದ ಶ್ರೀಲ ರಘುನಾಥರು ವೈರಾಗ್ಯವನ್ನು ಒಲೈಸಿದರು. ಇವರ ಸಂಸಾರತ್ಯಾಗಕ್ಕೆ ಕುಟುಂಬದವರಿಂದ ವಿರೋಧವಿದ್ದು ರಕ್ಷಾಭಟರನ್ನು ನಿಯಮಿಸಿದ್ದರೂ, ಶ್ರೀಚೈತನ್ಯರ ಸಾಮಿಪ್ಯದಲ್ಲೇ ಇದ್ದು ಭಕ್ತಿಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು. ಇವರ ಬಗ್ಗೆ ಹೆಚ್ಚಿನ ವಿವರಣೆಯನ್ನು ನೀಡುವ ಕೃತಿಯೆಂದರೆ ಕೃಷ್ಣದಾಸ ಕವಿರಾಜ ಗೋಸ್ವಾಮಿಗಳು ರಚಿಸಿದ 'ಚೈತನ್ಯ ಚರಿತಾಮೃತ'.

ಚೈತನ್ಯ ಚರಿತಾಮೃತವು ಶ್ರೀಲ ರಘುನಾಥದಾಸ ಗೋಸ್ವಾಮಿಗಳ ಪಾರಮಾರ್ಥಿಕ ಗುಣಗಳ ಪಟ್ಟಿಯನ್ನೇ ಕೊಡುತ್ತದೆ. ಅವರ ನಿಯಮ ತತ್ವಸಾಲುಗಳೆಲ್ಲ ಕಲ್ಲಿನ ಸಾಲುಗಳಂತೆ. ದಿವಸದ ೨೨ ಘಂಟೆಗಳನ್ನು ಹರೇಕೃಷ್ಣ ನಾಮಸಂಕೀರ್ತನೆಗೆ ಮೀಸಲಾಗಿರಿಸಿಬಿಡುತ್ತಿದ್ದರಂತೆ. ಉಳಿದರೆಡು ಘಂಟೆಗಳು ನಿದ್ದೆ ಮತ್ತು ಆಹಾರಕ್ಕಾಗಿ. ಅವರು ಉಪಯೋಗಿಸುತ್ತಿದ್ದ ತುಂಡುಬಟ್ಟೆ ಮತ್ತು ತೇಪೆಹಾಕಿದ ಹೊದಿಕೆಯು ವೈರಾಗ್ಯದ ನಿದರ್ಶನವನ್ನು ಮಾಡಿಕೊಡುತ್ತಿತ್ತಂತೆ. ಅವರ ಬದುಕಿನ ೧೬ ವರ್ಷಗಳು ಚೈತನ್ಯರ ಸೇವೆಯೊಂದಿಗೆ ಜಗನ್ನಾಥಪುರಿಯಲ್ಲಿ ಕಳೆದು, ಪ್ರಭುಗಳ ಅವಸಾನಾನಂತರ ರಾಧಾಕುಂಡದಲ್ಲಿ ಜೀವಿಸಿದರೆಂದು ಈ ಕೃತಿಯು ಸಾರುತ್ತದೆ. ಒಟ್ಟಿನಲ್ಲಿ ಇವರ ಬದುಕು ದಾಸಪಂಥದ ಪುರಂದರದಾಸರನ್ನು ಬಹುಮಟ್ಟಿಗೆ ನೆನಪಿಸುತ್ತದೆ. ಇವರು ದ್ವಾಪರದ ಕೃಷ್ಣಲೀಲೆಯಲ್ಲಿ 'ರಾಸಮಂಜರಿ' ಎಂಬ ಗೋಪಿಕೆಯಾಗಿದ್ದರೆಂದು ಪೂರಕ ಕೃತಿಗಳು ಸಾರುತ್ತವೆ.[೧೬]

ಕ್ರಿ. ಶ. ೧೫೧೦ ರ ಸಮಯದಲ್ಲಿ ಶ್ರೀಚೈತನ್ಯ ಮಹಾಪ್ರಭುಗಳ ದಕ್ಷಿಣಭಾರತ ಪ್ರವಾಸದಲ್ಲಿ ವೆಂಕಟಭಟ್ಟರ ಪರಿಚಯವಾಗಿ, ಅವರ ಮನೆಯಲ್ಲೇ ನಾಲ್ಕು ತಿಂಗಳುಗಳ ಕಾಲ ಉಪಚಾರವನ್ನು ಸ್ವೀಕರಿಸುತ್ತಾರೆ. ಆ ಸಂದರ್ಭದಲ್ಲಿ ವೆಂಕಟಭಟ್ಟರ ೭ ವರ್ಷದ ಮಗನಾದ ಗೋಪಾಲಭಟ್ಟನು ಪ್ರಭುಗಳ ನಿರಂತರಸೇವೆ ಮಾಡುವುದರ ಮೂಲಕ ಆಧ್ಯಾತ್ಮಿಕ ಭಾವಪ್ರಪಂಚಕ್ಕೆ ಪಾದಾರ್ಪಣೆ ಮಾಡುತ್ತಾನೆ. ಆ ಹುಡುಗನೇ ಮುಂದೆ ಗೋಪಾಲಭಟ್ಟ ಗೋಸ್ವಾಮಿಯಾಗಿ, ತಮ್ಮ ಮಾವನಾದ ಪ್ರಭೋದಾನಂದ ಸರಸ್ವತೀ ಅವರಲ್ಲಿ ವಾಗ್ಮಿಕಲೆ, ಕಾವ್ಯ, ವೇದಾಂತ ಮತ್ತು ಸಂಸ್ಕೃತ ವ್ಯಾಕರಣವನ್ನು ಅಧ್ಯಯನ ಮಾಡಿ ಚೈತನ್ಯಪಂಥದ ಸಂತಪರಂಪರೆಯಲ್ಲಿ ಖ್ಯಾತನಾಗುತ್ತಾನೆ.

ಶ್ರೀಲ ಗೋಪಾಲಭಟ್ಟರು ತಮ್ಮ ಆಧ್ಯಾತ್ಮದರ್ಶನದಿಂದ ಶ್ರೀಚೈತನ್ಯರಲ್ಲೇ ದೇವೋತ್ತಮ ಪರಮಪುರುಷನಾದ ಶ್ರೀಕೃಷ್ಣನನ್ನು ಕಂಡವರು. ತಂದೆತಾಯಿಯರು ಸ್ವರ್ಗಸ್ಥರಾದ ಮೇಲೆ ಗೋಪಾಲಭಟ್ಟ ಗೋಸ್ವಾಮಿಯವರು ವೃಂದಾವನಕ್ಕೆ ಪ್ರಯಾಣವನ್ನು ಬೆಳೆಸಿ, ಶ್ರೀಚೈತನ್ಯರ ಆದೇಶದಂತೆ ಶ್ರೀರೂಪ ಹಾಗೂ ಶ್ರೀಸನಾತನ ಗೋಸ್ವಾಮಿಯವರ ಪಾರಮಾರ್ಥಿಕ ಸಾಹಿತ್ಯವನ್ನು ರಚಿಸುವುದರಲ್ಲಿ ಮಗ್ನರಾದರು.

ನೇಪಾಳದ ಗಂಡಕಿನದಿಗೆ ಸ್ನಾನಕ್ಕೆಂದು ಹೋದಾಗ ಅವರ ಮಡಕೆಗೆ ೧೨ ಸಾಲಿಗ್ರಾಮಶಿಲೆಗಳು ಬಂದು ಸೇರಿದವು. ಅದನ್ನು ಪುನಃ ನೀರಿನಲ್ಲಿ ವಿಸರ್ಜಿಸಲು, ನೀರು ತುಂಬಿಕೊಳ್ಳುವಾಗ ಮತ್ತೆ ಮಡಕೆಗೆ ಬಂದು ಸೇರಿದವು. ಇದಕ್ಕೊಂದು ಪರಮಾರ್ಥವಿರಬಹುದೆಂದು ಭಾವಿಸಿದ ಗೋಪಾಲಭಟ್ಟ ಗೋಸ್ವಾಮಿಯವರು ಆ ಸಾಲಿಗ್ರಾಮಗಳನ್ನು ವೃಂದಾವನಕ್ಕೆ ತಂದರು. ಕೃಷ್ಣನನ್ನು ಪೂಜಿಸಬೇಕೆಂದು ಬಯಸಿದ್ದ ಅವರು ಆ ಸಾಲಿಗ್ರಾಮಶಿಲೆಯಲ್ಲಿಯೇ ಕೃಷ್ಣನ ಸುಂದರ ವಿಗ್ರಹವನ್ನು ಕಂಡರು. ಈ ವಿಗ್ರಹಕ್ಕೆ 'ರಾಧಾರಮಣ'ನೆಂದು ಕರೆದು, ನಂತರದಲ್ಲಿ ಅದನ್ನು ಪ್ರತಿಷ್ಠಾಪಿಸಿ, ರಾಧಾರಮಣ ದೇವಸ್ಥಾನದ ರಚನೆಗೆ ಕಾರಣರಾದರು. ಒಟ್ಟಿನಲ್ಲಿ ಇವರ ಆಧ್ಯಾತ್ಮಿಕ ಜೀವನವು ಗೌಡೀಯಪಂಥದಲ್ಲಿ ಮುಖ್ಯವಾದುದು.

ಶ್ರೀಚೈತನ್ಯರ ಆಪ್ತರೂ, ಶಿಷ್ಯರೂ ಆಗಿದ್ದ ಶ್ರೀಲ ರಘುನಾಥಭಟ್ಟ ಗೋಸ್ವಾಮಿಯವರ ಜನನ ಕ್ರಿ.ಶ. ೧೫೦೫ರಲ್ಲಿ. ಕವಿ ಕರ್ಣಾಪುರರ 'ಗೌರಘನೋದ್ದೇಶ ದೀಪಿಕಾ' ಕೃತಿಯಲ್ಲಿ ಉಲ್ಲೇಖಿಸಿರುವಂತೆ ಶ್ರೀಲ ರಘುನಾಥಭಟ್ಟ ಗೋಸ್ವಾಮಿಗಳು ಕೃಷ್ಣಾವತಾರದ ಕಾಲದಲ್ಲಿ 'ರಾಗಮಂಜರಿ' ಎಂಬ ಗೋಪಿಕೆಯಾಗಿದ್ದರೆಂದು ಹೇಳಲಾಗಿದೆ. ತಂದೆ ಖ್ಯಾತ ತತ್ವಶಾಸ್ತ್ರಪಂಡಿತರಾದ ತಪನಮಿಶ್ರರು. ಇವರು ಕಾಶೀಧಾಮದಲ್ಲಿದ್ದಾಗ ಶ್ರೀಚೈತನ್ಯರ ಭೇಟಿಯಾಗಿ, ತನ್ನ ಮಗನಾದ ರಘುನಾಥನನ್ನು ಪ್ರಭುಗಳ ಸತ್ಕಾರಕ್ಕಾಗಿ ನಿಯುಕ್ತಿಗೂಳಿಸಿದರು.

ದಣ್ಡ ಪ್ರಣಾಮಕರಿ ಭಟ್ಟ ಪಡಿಲಾ ಚರಣೇ
ಪ್ರಭು ರಘುನಾಥ ಬಲಿ ಕೈಲಾ ಆಲಿಂಗನೇ ॥[೧೭]

ಚೈತನ್ಯರ ಸಾನ್ನಿಧ್ಯವನ್ನೇ ಇಷ್ಟಪಡುತ್ತಿದ್ದ ರಘುನಾಥಭಟ್ಟರು ಪ್ರತಿನಿತ್ಯ ಶ್ರೀಚೈತನ್ಯರ ದರ್ಶನವನ್ನು ಪಡೆದು ಜಗನ್ನಾಥಪುರಿಯಲ್ಲೇ ನೆಲೆಸಿ, ಶ್ರೀಚೈತನ್ಯ ಮಹಾಪ್ರಭುಗಳಿಗೆ ಪ್ರಸಾದವನ್ನು ಸಿದ್ಧಮಾಡಿ ಕೊಡುವುದರೊಂದಿಗೆ, ತನ್ನನ್ನು ಪೂರ್ಣಪ್ರಮಾಣದಲ್ಲಿ ಅಧ್ಯಾತ್ಮಕ್ಕೆ ಸಮರ್ಪಿಸಿಕೊಂಡರು. ಮುಂದೆ ಚೈತನ್ಯರ ಆದೇಶದಂತೆ ವೃಂದಾವನಕ್ಕೆ ತೆರಳಿ, ರೂಪ ಗೋಸ್ವಾಮಿಯವರನ್ನು ಕೂಡಿಕೊಂಡು, ಬ್ರಹ್ಮಚಾರಿಗಳಾಗಿಯೇ ಉಳಿದು, ಶ್ರೀಮದ್ಭಾಗವತದ ಪಠಣ ಕಾರ್ಯದಲ್ಲಿ ಮಗ್ನರಾಗಿರುತ್ತಿದ್ದರು. ವಿಶೇಷವೆಂದರೆ, ಶ್ರೀಮದ್ಭಾಗವತದ ಪ್ರತಿಯೊಂದು ಶ್ಲೋಕವನ್ನು ಮೂರು ಅತ್ಯಂತ ಮಾಧುರ್ಯಯುಕ್ತರಾಗದಲ್ಲಿ ಆಲಾಪಿಸುವ ವಿದ್ಯೆಯು ಅವರಿಗೆ ಕರಗತವಾಯಿತು. ನಂತರದಲ್ಲಿ ಕೃಷ್ಣಪ್ರಜ್ಞೆಗೆ ಪೂರಕವಾದ ವಿಷಯದಲ್ಲೇ ಆಸಕ್ತಿಯನ್ನು ಹೊಂದಲು ರಾಧಾಕುಂಡದ ಸಮೀಪವಿರುವ ಕುಟೀರವೊಂದರಲ್ಲಿ ನೆಲೆಸಿದರು.

ಒಟ್ಟಿನಲ್ಲಿ ಚೈತನ್ಯಪಂಥದ ಮುನ್ನಡೆಯಲ್ಲಿ ಷಡ್‌ಗೋಸ್ವಾಮಿಗಳ ಪಾತ್ರವು ಮಹತ್ತನ್ನು ಪಡೆಯುತ್ತದೆ. ಅವರು ಸ್ವೀಕರಿಸಿಕೊಂಡ ಭಕ್ತಿಸೇವೆ, ಶರಣಾಗತಿ ಮತ್ತು ಅವರ ಸಾಹಿತ್ಯ ರಚನೆಗಳೆಲ್ಲವೂ ಗೌಡೀಯಪಂಥದ ತತ್ತ್ವಾಧ್ಯಯನದಲ್ಲಿ ಮುಖ್ಯವಾಗುತ್ತದೆ.

೪.೨ (ಇ) ಅನುಭಾವಿಗಳು ಮತ್ತು ಅವರ ಭಕ್ತಿಸಾಹಿತ್ಯ

ಮಧ್ವಾಚಾರ್ಯರಿಂದ ಹಿಡಿದು ನರಹರಿತೀರ್ಥರು, ವ್ಯಾಸರಾಯರು, ವಾದಿರಾಜರು, ಪುರಂದರ ಕನಕರಾದಿಯಾಗಿ ನೂರಾರು ದಾಸರುಗಳೆಲ್ಲ ದಾಸಪಂಥದ ವಿಕಾಸಕ್ಕೆ ಕಾರಣರಾದಂತೆ, ಚೈತನ್ಯಪಂಥದಲ್ಲೂ ಅದ್ವೈತಾಚಾರ್ಯರಿಂದ ಹಿಡಿದು ಚೈತನ್ಯ, ನಿತ್ಯಾನಂದ, ಷಡ್‌ಗೋಸ್ವಾಮಿಗಳು,_....... ಹೀಗೆ ನೂರಾರು ಅನುಭಾವಿಗಳ ಮೂಲಕ ಆ ಪಂಥ (ಗೌಡೀಯ)ವು ವಿಕಾಸದತ್ತ ನಡೆಯುತ್ತದೆ. ಸ್ವಲ್ಪಕಾಲದ ಹಿಂದೆಯೇ ಬಂಗಾಳದಲ್ಲಿ ಬಾಳಿಹೋದ ವಿದ್ಯಾಪತಿ, ಜಯದೇವ ಹಾಗೂ ಚಂಡೀದಾಸ ಮೊದಲಾದ ಕವಿಕೃತಿಗಳು ನಂತರದಲ್ಲಿ ಹುಟ್ಟಿಬಂದ ಗೌಡೀಯ ಪಂಥಾನುಯಾಯಿಗಳಿಗೆ ಹೆಚ್ಚಿನ ಪ್ರಭಾವ ಬೀರಿದವು. ಇವರ ರಚನೆಯಲ್ಲಡಗಿದ್ದ ಕೃಷ್ಣಪ್ರೇಮದ ವಿರಹಭಾವಗಳು ಅಂದಿನ ಜನರನ್ನು ಭಾವಪರವಶತೆಯಲ್ಲಿ ಮುಳುಗಿಸುವಲ್ಲಿ ಯಶಸ್ವಿಯಾದವು. ವಿದ್ಯಾಪತಿಯು ಕವಿಯಾಗಿದ್ದದ್ದು ಮಾತ್ರವಲ್ಲದೆ ರಾಧಾಕೃಷ್ಣರ ಪ್ರೇಮಲೀಲೆಗಳ ಕುರಿತಂತೆ ಗೀತಗಳನ್ನು ರಚಿಸಿ ಹಾಡುತ್ತಿದ್ದುದು ಇತರರ ಭಾವೋನ್ಮಾದಕ್ಕೆ ಪ್ರೇರಕಶಕ್ತಿಯಾಯಿತು. ಇಂತಹ ಯೋಗ್ಯ ವಾತಾವರಣದಲ್ಲಿ ಹುಟ್ಟಿಬಂದ ಚೈತನ್ಯಪಂಥವು ಮಾಧುರ್ಯಭಕ್ತಿಯಲ್ಲಿ ಕೃಷ್ಣನನ್ನು ನೋಡಲು ಮುಂದಾಯಿತು.

ಚೈತನ್ಯಪಂಥವು ಕನ್ನಡನೆಲಕ್ಕೆ ಹೊಸತು. ಈ ನೆಲೆಯಲ್ಲಿ ಆ ಪಂಥದ ಮುಖ್ಯ ಬೆಳವಣಿಗೆಯ ಹೆಜ್ಜೆಗಳನ್ನು ಅಲ್ಲಿಯ ಪಂಥಾನುಯಾಯಿಗಳ ಸಂಕ್ಷಿಪ್ತ ಪರಿಚಯವನ್ನು ಮಾಡುವುದರ ಮೂಲಕ ಗುರುತಿಸುವ ಪ್ರಯತ್ನ ಮಾಡಿದ್ದೇನೆ.

ಚೈತನ್ಯರ ಅವತರಣದ ಪೂರ್ವದಲ್ಲಿ ಮೊದಲಿಗೆ ಬರುವ ಹೆಸರು ಅದ್ವೈತಾಚಾರ್ಯರದ್ದು. ಇವರು ಬಂಗಾಳದ ನವಗ್ರಾಮದಲ್ಲಿ ಜನಿಸಿದವರು. ಇವರ ಮೊದಲ ಹೆಸರು 'ಕಮಲಾಕ್ಷ'ಎಂದು. ಇವರ ತಂದೆ ತಾಯಿಯರು ಗತಿಸಿದ ಮೇಲೆ ಗಯಾಕ್ಷೇತ್ರಕ್ಕೆ ತೆರಳಿ, ಮಾಧವೇಂದ್ರಪುರಿಗಳಿಂದ ಸಂನ್ಯಾಸದೀಕ್ಷೆಯನ್ನು ಸ್ವೀಕರಿಸಿದರು. ನಿತ್ಯವೂ ಆಧಾತ್ಮಿಕ ಚಿಂತನೆಯಿಂದಿರುತ್ತಿದ್ದ ಅದ್ವೈತರು ಮಥುರ, ಬೃಂದಾವನಗಳನ್ನು ದರ್ಶಿಸಿ ಬಂಗಾಳದ ನವದ್ವೀಪಕ್ಕೆ ಬಂದರು.

ವ್ರಜಲೀಲೆಯಲ್ಲಿ 'ವಿಶಾಖಾ'ಳೆಂಬ ಗೋಪಿಕೆಯಾಗಿ ರಾಧಾಕೃಷ್ಣರನ್ನು ಒಡನಾಡಿದ್ದರಿಂದ, ಇಲ್ಲಿಯೂ ಪರಮ ವೈಷ್ಣವಭಕ್ತರಾಗಿ 'ರಾಧಾಕೃಷ್ಣ'ರನ್ನು ಸಂಯುಕ್ತವಾಗಿ ಪೂಜಿಸಬೇಕೆಂಬ ಕನಸನ್ನು ಕಂಡುಕೊಂಡರು. ಈ ನಿಮಿತ್ತವಾಗಿಯೇ ಸಾಲಿಗ್ರಾಮರೂಪೀ ದೇವೋತ್ತಮ ಪರಮಪುರುಷನಾದ ಶ್ರೀಕೃಷ್ಣನನ್ನು ಕಲಿಯುಗದಲ್ಲಿ ಅವತರಿಸುವಂತೆ ಕೇಳಿ, ಶ್ರೀಚೈತನ್ಯರ ಆವಿರ್ಭಾವಕ್ಕೆ ನಿಮಿತ್ತರಾದರು. ಮುಂದೆ ಬಂಗಾಳದ ನವದ್ವೀಪದಲ್ಲಿ ಹುಟ್ಟಿದ ಶ್ರೀಚೈತನ್ಯರನ್ನೇ ಶ್ರೀಕೃಷ್ಣನೆಂದು ತಿಳಿಯುವಲ್ಲಿ ಸಫಲರಾಗಿ, ಶ್ರೀಚೈತನ್ಯರ ಭಕ್ತಶ್ರೇಷ್ಠರಾಗಿ ಭಕ್ತಿಸೇವೆಯನ್ನು ತಿಳಿಸುವಲ್ಲಿ, ದಾಸ್ಯಭಾವದ ಮಹತ್ವವನ್ನು ಜಗತ್ತಿಗೆ ಸಾರುವಲ್ಲಿ ಯಶಸ್ವಿಯಾದರು.

ಶ್ರೀಚೈತನ್ಯ ಮಹಾಪ್ರಭುಗಳ ದೀಕ್ಷಾಗುರುಗಳೂ, ಶ್ರೀಮಾಧವೇಂದ್ರಪುರಿಗಳ ಆಪ್ತಶಿಷ್ಯರಾಗಿದ್ದವರು ಶ್ರೀಲ ಈಶ್ವರಪುರಿಯವರು. ಶ್ರೀಮಾಧವೇಂದ್ರಪುರಿಯವರ ಅವಸಾನವಾಗುವ ಹಿಂದಿನ ಕೆಲವು ದಿನಗಳಲ್ಲಿ ಅವರ

ನಿಷ್ಕ್ರಿಯದೇಹದ ಸ್ವಚ್ಛತೆಯನ್ನು ನೋಡಿಕೊಂಡುಬಂದ ಶ್ರೀಲ ಈಶ್ವರಪುರಿಯವರಿಗೆ ಶ್ರೀಮಾಧವೇಂದ್ರರೇ 'ಕೃಷ್ಣಪ್ರೇಮವು ನಿನಗೆ ಸಿದ್ಧಿಸಲಿ'ಎಂದು ಹರಸಿದ್ದರು. ಈಶ್ವರಪುರಿಯವರು ಕೆಲಸಮಯ ಬಂಗಾಳದ ನವದ್ವೀಪದಲ್ಲಿ ತಂಗಿದ್ದಾಗ, ಎಳೆಯ ವಿದ್ಯಾರ್ಥಿಯಾದ ಶ್ರೀಚೈತನ್ಯರನ್ನು ಕಂಡು ಪ್ರಭಾವಿತರಾಗಿದ್ದು ಮಾತ್ರವಲ್ಲದೆ, ಚೈತನ್ಯರ ಬೇಡಿಕೆಯಂತೆ 'ಗಾಯತ್ರೀಮಂತ್ರದ' ಉಪದೇಶವನ್ನು ನೀಡಿ, ಅವರನ್ನು ಭಕ್ತಿಸೇವೆಗೆ ಒಳಗಾಗುವಂತೆ ಮಾಡಿದರು. ಅಲ್ಲದೆ ಸ್ವತಃ ಈಶ್ವರಪುರಿಯವರೇ ಮಾಧವೇಂದ್ರಪುರಿಗಳ ವೈಯುಕ್ತಿಕ ಸೇವೆಯನ್ನು ಮಾಡುವ ಮೂಲಕ ಗುರುಸೇವೆಯ ಔನ್ನತ್ಯದ ಮಾದರಿಯನ್ನು ಇತರರಿಗೆ ಹಾಕಿಕೊಟ್ಟರು. ಒಟ್ಟಿನಲ್ಲಿ ಚೈತನ್ಯಪಂಥದ ಅಧ್ಯಯನದಲ್ಲಿ ಶ್ರೀಲ ಈಶ್ವರಪುರಿಯವರ ಕೊಡುಗೆ ಮಹತ್ವಪೂರ್ಣ.

ಈ ಪಂಥದ ಬೆಳವಣಿಗೆಯಲ್ಲಿ ನಿತ್ಯಾನಂದಪ್ರಭುಗಳ ಹೆಸರು ಮುಖ್ಯವಾದುದು. ದೇವೋತ್ತಮ ಪರಮಪುರುಷನಾದ ಶ್ರೀಕೃಷ್ಣನು ತನ್ನ ಲೀಲಾವಿನೋದಕ್ಕೆ ಮಾಡಿದ ಪ್ರಥಮ ವಿಸ್ತರಣೆಯೇ ಶ್ರೀಬಲರಾಮ. ಆ ಬಲರಾಮನೇ ಇಲ್ಲಿ ನಿತ್ಯಾನಂದಪ್ರಭುಗಳಾಗಿ ಅವತರಿಸುತ್ತಾರೆ.

ನಿತ್ಯಾನಂದರು ಜನಿಸಿದ್ದು ಕಾಟ್ವಾನಗರದ ವೀರಭೂಮಿಯಲ್ಲಿ. ತಾಯಿ ಪದ್ಮಾವತೀದೇವಿ. ತಂದೆ ಹದಾಯ್‌ಪಂಡಿತ. ನಿತ್ಯಾನಂದರ ಲೀಲಾವತರಣಗಳೆಲ್ಲ ನಡೆಯುವುದು ವೀರಭೂಮಿಯ ಹತ್ತಿರದ ಪ್ರದೇಶಗಳಾದ ಏಕಚಕ್ರನಗರ, ಗರ್ಭಾವಾಸ ಮೊದಲಾದೆಡೆಗಳಲ್ಲಿ. ನಿತ್ಯಾನಂದರು ಹನ್ನೆರಡುವರ್ಷದ ಬಾಲಕನಾಗಿದ್ದಾಗಲೇ, ವಯೋವೃದ್ಧ ಸಂನ್ಯಾಸಿಯೊಬ್ಬರು ಹದಾಯ್‌ಪಂಡಿತರನ್ನುದ್ದೇಶಿಸಿ, 'ನಿನ್ನಮಗ ನನಗೆಬೇಕು' ಎಂದು ಭಿಕ್ಷೆಯನ್ನು ಕೇಳಿದರು. ಹದಾಯ್‌ದಂಪತಿಗಳು ಚಿಂತಿತರಾದರೂ ಚಿಂತೆಗೆ ಅವಕಾಶವಿಲ್ಲದಿದ್ದುದರಿಂದ 'ನಿತಾಯ್' ಎಂಬ ಈ ಪುತ್ರರತ್ನನನ್ನು ಸಂನ್ಯಾಸಿಗೆ ನೀಡಲೇಬೇಕಾಯಿತು. ಹೀಗೆ ನಿತಾಯ್‌ನು ಶ್ರೀಮಾಧವೇಂದ್ರಪುರಿಗಳ ಶಿಷ್ಯನಾಗಿ ಆಜ್ಞಾನುಧಾರಿಯಾದ.

ನಿತಾಯ್ ನಿತ್ಯಾನಂದನಾಗಿ, ಶ್ರೀಮಾಧವೇಂದ್ರಪುರಿಗಳೊಂದಿಗೆ ಭಾರತದುದ್ದಕ್ಕೂ ಸಂಚರಿಸಿ, ಪುಣ್ಯಕ್ಷೇತ್ರಗಳ ದರ್ಶನವನ್ನು ಪಡೆದ. ಗುರುಗಳ ಇಹಲೋಕದ ನಿರ್ಗಮನದ ನಂತರವೂ ನಿತ್ಯಾನಂದನು ತೀರ್ಥಯಾತ್ರೆಯಲ್ಲೇ ತಲ್ಲೀನನಾದ. ಚೈತನ್ಯರು ನವದ್ವೀಪದಲ್ಲಿ ಸಂಕೀರ್ತನಾಲೀಲೆಯನ್ನು ಕೈಗೊಂಡಾಗ ಅದರಲ್ಲಿ ತಾನೂ ಸೇರಿಕೊಂಡ. ಈ ಮೂಲಕವಾಗಿ ದ್ವಾಪರದ ಸಹೋದರರಿಬ್ಬರು ಕಲಿಯುಗದಲ್ಲಿ ಅವತರಿಸಿ, ಪರಸ್ಪರವಾಗಿ ದರ್ಶನಮಾಡಿಕೊಂಡರು. ಇಲ್ಲಿಂದಲೇ ಚೈತನ್ಯ ಹಾಗೂ ನಿತ್ಯಾನಂದರ ಲೀಲಾಲಾಲಿತ್ಯವು ಪ್ರಾರಂಭವಾಯಿತು. ಮುಂದೆ ನಿತ್ಯಾನಂದರು ಶ್ರೀಕೃಷ್ಣಚೈತನ್ಯರ ಕೃಷ್ಣನಾಮದ ಉಪದೇಶಾಮೃತವನ್ನು ಮನೆಮನೆಗೆ ತಲುಪಿಸುವಲ್ಲಿ ದೀಕ್ಷಾಬದ್ಧರಾಗಿ, ಗೌಡೀಯಪಂಥದ ಔನ್ನತ್ಯಕ್ಕೆ ಕಾರಣರಾದರು.

ನಿತ್ಯಾನಂದ ಪ್ರಭುಗಳ ಅವತಾರ ಕುರಿತು ವೈದಿಕ ಗ್ರಂಥ ನಿದರ್ಶನ

ಬಲರಾಮೋ ಮಮೈವಾಂಶಃ ಸೋಪಿ ಮತ್ ಪೃಷ್ಠಮ್ ಏಸ್ಯತಿ ।
ನಿತ್ಯಾನಂದ ಇತಿ ಖ್ಯಾತೋ ನ್ಯಾಪಿ ಚೂಡಾಮಣಿಃ ಕ್ಷಿತೌ ॥

ಜಾಹ್ನವ್ಯಾದಿಭಿರಾತ್ಮಾನಮ್ ದರ್ಶಯಿಷ್ಯತಿ ಮಾನವಾನ್ । -ವಾಯುಪುರಾಣ.

ಇಲ್ಲಿ ಬ್ರಹ್ಮನನ್ನು ಕುರಿತು ಶ್ರೀಕೃಷ್ಣ ಹೇಳುವ ಮಾತಿದೆ. ನನ್ನ ಪ್ರಪ್ರಥಮ ವಿಸ್ತರಣೆಯಲ್ಲಿ ಬಲರಾಮನು ನಿತ್ಯಾನಂದನಾಗಿ ಅವತರಿಸಿ, ಭಕ್ತರುಗಳ ಮುಕುಟಮಣಿಯಾಗುತ್ತಾನೆ. ಆತನು ತನ್ನ ನಿತ್ಯಸಖಿಯಾದ ಶ್ರೀಮತಿ ಜಾಹ್ನವೀದೇವಿ ಹಾಗೂ ಇತರ ಸಂಗಾತಿಗಳೊಡನೆ ಅಲೌಕಿಕ ಲೀಲಾವಿನೋದಗಳನ್ನು ಪ್ರದರ್ಶಿಸುತ್ತಾನೆ.

ನಿತ್ಯಾನಂದೋ ಮಹಾಕಯೋ ಭೊತ್ತಾಮತ್ ಕೀರ್ತನೇ ರಥಃ ।
ವಿಮೂಡಾನ್ ಭಕ್ತತಹಿತಾನ್ ಮಮ ಭಕ್ತಾನ್ ಕರಿಷ್ಯತಿ ॥[೧೮]

ಅನಂತದೇವನನ್ನು ಕುರಿತು ಭಗವಂತನು ಹೇಳುವ ಮಾತು ಇಂತಿದೆ :- ನಾನು ಕಲಿಯುಗದಲ್ಲಿ ನವದ್ವೀಪದಲ್ಲಿ ಅವತರಿಸಿದಾಗ ನೀನು ನಿತ್ಯಾನಂದನಾಗಿ ಅವತರಿಸಬೇಕು. ನೀಳಕಾಯನೂ, ಸ್ಫುರದ್ರೂಪಿಯೂ ಆಗಿರುವ ನೀನು ನನ್ನ ನಾಮಸ್ಮರಣೆ ಹಾಗೂ ವೈಭವಗಳನ್ನು ಕೊಂಡಾಡಬೇಕು. ಭಕ್ತಿರಹಿತರನ್ನು ಭಕ್ತಿಸಹಿತರನ್ನಾಗಿ ಮಾಡಬೇಕು. ಇವೆಲ್ಲವು ನಿತ್ಯಾನಂದರ ಅವತಾರದ ಪೂರ್ವಸೂಚನೆಗಳು. ಒಟ್ಟಿನಲ್ಲಿ ಚೈತನ್ಯಪಂಥದ ಬೆಳವಣಿಗೆಯಲ್ಲಿ ನಿತ್ಯಾನಂದರ ಪಾತ್ರವು ಮುಖ್ಯವೆನಿಸುತ್ತದೆ.

ಚೈತನ್ಯಪಂಥದ ಅನುಭಾವಿಗಳಲ್ಲಿ ಶ್ರೀಲ ರಸಿಕಾನಂದ ಠಾಕೂರರ ಹೆಸರು ಮುಖ್ಯವಾದುದು. ಅವರ ಮೊದಲ ಹೆಸರು ಮುರಾರಿ ಎಂದು. ಇವರ ಜನನ ೧೫೯೦ರಲ್ಲಿ. ಸ್ಪುರದ್ರೂಪಿಯೂ, ತೀಕ್ಷ್ಣಮತಿಯೂ ಆಗಿದ್ದ ಮುರಾರಿಯವರು ಶ್ಯಾಮಾದಾಸೀ ಎಂಬವಳೊಂದಿಗೆ ವಿವಾಹವಾಗಿದ್ದರು. ಮುಂದೆ ಶ್ಯಾಮಾನಂದಪ್ರಭುಗಳಿಂದ ದೀಕ್ಷೆಯನ್ನು ಪಡೆದು 'ರಸಿಕಾನಂದ ದೇವ'ನೆಂಬ ಮರುನಾಮವನ್ನು ಪಡೆದರು.

ಶ್ರೀಲ ರಸಿಕಾನಂದರಲ್ಲಿದ್ದುದು ಭಕ್ತಿಸೇವೆ. ಆದ್ದರಿಂದಲೇ ಗೋಪೀಜನವಲ್ಲಭಪುರದಲ್ಲಿ ಮೂರ್ತಿಗಳ ಪ್ರತಿಷ್ಠಾಪನೆಯನ್ನು ನೆರವೇರಿಸಿ ಮುಂದಿನ ತಮ್ಮ ಜೀವಮಾನವನ್ನು ಚೈತನ್ಯರ ಹಾಗೂ ನಿತ್ಯಾನಂದರ ಬೋಧನೆಗಳನ್ನು ಜನರಿಗೆ ತಲುಪಿಸುವ ಮಹತ್ಕಾರ್ಯದಲ್ಲಿ ತೊಡಗಿಸಿಕೊಂಡರು. ಈ ಮೂಲಕವಾಗಿ ಸಮಾಜದ ಬಹಳಷ್ಟು ನಾಸ್ತಿಕರನ್ನು, ಜನಸಾಮಾನ್ಯರನ್ನು ಕೃಷ್ಣಪ್ರೇಮಭಕ್ತಿಗೆ ಒಲಿಸಿದರು. ಪರಿಣಾಮವಾಗಿ ಅಸಂಖ್ಯಾತ ಶಿಷ್ಯರನ್ನು ಪಡೆದರು. ಮಯಾರ್‌ಭಂಜ್‌ನ ರಾಜಾವೈದ್ಯನಾಥಭಂಜ್, ಪತಾಕಪುರದ ರಾಜಾಗಜಪತಿ, ಮಾಯನದ ರಾಜಾಚಂದ್ರಭಾನು ಇವರುಗಳೆಲ್ಲರೂ ಶ್ರೀಲ ರಸಿಕಾನಂದರ ಚರಣಾಶ್ರಯವನ್ನು ಕೇಳಿಬಂದುದು ಅವರ ವ್ಯಕ್ತಿತ್ವವನ್ನು ತೋರಿಸುತ್ತದೆ.

ಶ್ರೀಲ ರಸಿಕಾನಂದರ ಮುಖ್ಯಕೃತಿಗಳೆಂದರೆ, ಶ್ಯಾಮಾನಂದಪ್ರಭುಗಳ ಜೀವನಚರಿತ್ರೆ, ಶ್ಯಾಮಾನಂದ ಶತಕ ಹಾಗೂ ಶ್ರೀಮದ್ಭಾಗವತಾಷ್ಟಕಮ್. ಶ್ಯಾಮಾನಂದಪ್ರಭುಗಳ ಆದೇಶದಂತೆ ೪೨ ವರ್ಷಗಳ ತನಕ ಕೃಷ್ಣ ಭಕಿಸೇವನೆಯಲ್ಲಿ ತೊಡಗಿ ೧೬೫೨ ರಲ್ಲಿ ಒರಿಸ್ಸಾದ ರೇಮುನಾದಲ್ಲಿರುವ ಕ್ಷೀರಚೋರ ಗೋಪೀನಾಥ ಮೂರ್ತಿಯಲ್ಲಿ ವಿಲೀನರಾದರು.

ಶ್ರೀಚೈತನ್ಯರು ಜನಿಸಿದ ತಾಣವನ್ನು ಕಂಡುಹಿಡಿದ, ಸರ್ವವೈಷ್ಣವರಿಂದಲೂ ಮಹಾಗೌರವಕ್ಕೆ ಪಾತ್ರರಾದ ಸಾರ್ವಭೌಮರಾದ ಶ್ರೀಲ ಜಗನ್ನಾಥ ಬಾಬಾಜಿಯವರು ೧೪೪ ವರ್ಷ ಬಾಳಿಬದುಕಿದವರು. ಕೃಷ್ಣಭಕ್ತಿಯಲ್ಲೇ ಜೀವನ ಸಾಗಿಸಿದವರು. ಗುರು ಶ್ರೀಬಲದೇವವಿದ್ಯಾಭೂಷಣರ ಶಿಷ್ಯರಾಗಿದ್ದ ಶ್ರೀಬಾಬಾಜಿಯವರು ಪುರುಷೋತ್ತಮ ಕ್ಷೇತ್ರವಾದ ಪುರಿಯಲ್ಲಿ 'ಮಹೋನ್ನತ ರಸಿಕ'ರೆಂದೇ ಖ್ಯಾತರಾದವರು. ಅಲ್ಲದೆ ವೈಷ್ಣವ ಸಾರ್ವಭೌಮರೆಂದು ಕರೆಸಿಕೊಂಡವರು. ಇವರು ಆರಂಭದಿಂದಲೂ ಕಠಿಣವ್ರತಿಗಳಾಗಿದ್ದವರು. ಚಾತುರ್ಮಾಸ್ಯದ ಕಾಲಾವಧಿಯ ನಿಯಮಿತ ಆಹಾರ, ಭಗವಂತನಿಗೆ ಪ್ರತೀದಿನ ಸಲ್ಲಿಸುತ್ತಿದ್ದ ಸಾವಿರದನೂರೆಂಟು ದಂಡಪ್ರಣಾಮಗಳು ಇವರ ಭಕ್ತಿಸೇವೆಗೆ ಉತ್ತಮ ನಿದರ್ಶನಗಳು. ದಿನದ ಬಹುಪಾಲು ಅವಧಿಯಲ್ಲಿ ಕೃಷ್ಣನಾಮಾಮೃತಪಾನವನ್ನು ಮಾಡುತ್ತಿದ್ದವರು.

ಒಮ್ಮೆ ವೃಂದಾವನದ ಕಸಗುಡಿಸುವವನಿಂದ ರೊಟ್ಟಿಯನ್ನು ಬೇಡಿತಿಂದು, ಇತರರಿಂದ ಹುಚ್ಚನೆಂದು ಹೇಳಿಸಿಕೊಂಡು, ಆನಂತರದಲ್ಲಿ ವೃಂದಾವನದ ಧೂಳು ಕೃಷ್ಣಪ್ರೇಮದಿಂದ ಸಂಪನ್ನವಾಗಿದೆಯೆಂದು ಹೇಳಿ ಆ ಜನತೆಯ ಮೂಢತ್ವವನ್ನು ಬಿಡಿಸಿದ್ದರು. ಹೀಗೆ ಕೃಷ್ಣಪ್ರೇಮದ, ಕೃಷ್ಣಪ್ರಜ್ಞೆಯ ಔನ್ನತ್ಯವನ್ನು ತೋರಿಸಿಕೊಟ್ಟ ಚೈತನ್ಯಾನುಯಾಯಿಗಳಲ್ಲಿ ಶ್ರೀಲ ಜಗನ್ನಾಥದಾಸ ಬಾಬಾಜಿಯವರದ್ದು ಮುಖ್ಯಹೆಸರು.

ಚೈತನ್ಯಪಂಥವು ಕಂಡುಕೊಂಡ ಮಹಾನ್ ಅಧ್ಯಾತ್ಮಿಕ ಸಂತರುಗಳಲ್ಲೊಬ್ಬರು ಶ್ರೀಭಕ್ತಿವಿನೋದರ ಠಾಕೂರರು. ಚೈತನ್ಯಪಂಥವನ್ನು ಹೊರದೇಶಗಳಿಗೆ ಕೊಂಡೊಯ್ದ ಪ್ರಭುಪಾದರ ಗುರುಗಳಾದ ಶ್ರೀಲ ಭಕ್ತಿಸಿದ್ಧಾಂತ ಸರಸ್ವತೀ ಠಾಕೂರರ ತಂದೆಯಾದ ಇವರು ಬಂಗಾಳೀ ಭಕ್ತಿಕೀರ್ತನೆಗಳನ್ನು ಸಖ್ಯಭಾವದಿಂದ ಬರೆದವರು. ಮೊದಲಿಗೆ ಲೌಕಿಕ ಪ್ರಪಂಚದಲ್ಲೇ ಸುಖವನ್ನು ಕಂಡವರು ಇವರು. ಅಪ್ಪಅಮ್ಮನ ಪ್ರೀತಿಯ ಪುತ್ರನಾಗಿ ಓರಗೆಯ ಹುಡುಗರೊಡನೆ ಆಟವಾಡಿ, ಶಾಲಾಪುಸ್ತಕಗಳ ಓದಿನೊಂದಿಗೆ ಬೆಳೆದವರು. ಓದಿನಿಂದ ವೃತ್ತಿ, ವೃತ್ತಿಯಿಂದ ಸಂಪಾದನೆ, ಸಂಪಾದನೆಯಿಂದ ಕುಟುಂಬ ಪೋಷಣೆಗೈದವರು. ತಮ್ಮ ಜೀವನದ ಬಹಳಷ್ಟು ಕಾಲವನ್ನು ಲೌಕಿಕತೃಪ್ತಿಯಿಂದಲೇ ಕಳೆದು, ನಂತರದಲ್ಲಿ ಕೃಷ್ಣಭಕ್ತಿಗೆ ಮಾರುಹೋಗಿ ಪೂರ್ವದ ಲೌಕಿಕವಿಚಾರವನ್ನು ಮರೆತರು. ಆ ಮೂಲಕವಾಗಿ ಸಾಧಕರಾದರು, ಕೃತಿರಚನಾಕಾರರೂ ಆದರು.

ಗೌಡೀಯ ವೈಷ್ಣವರಲ್ಲಿ ಶ್ರೀಲ ವಿಶ್ವನಾಥಚಕ್ರವರ್ತಿಗಳು ಮುಖ್ಯರು. ಪಶ್ಚಿಮಬಂಗಾಳದ ನದಿಯಾಜಿಲ್ಲೆಯ ರಾಢಾಪ್ರದೇಶದ ಬ್ರಾಹ್ಮಣಮನೆತನದಲ್ಲಿ ಹುಟ್ಟಿದ ವಿಶ್ವನಾಥರ ಕಾವ್ಯನಾಮ 'ಹರಿವಲ್ಲಭ'ನೆಂದು. ಸಂಸ್ಕೃತ ವ್ಯಾಕರಣದಲ್ಲಿ ಪ್ರಭುತ್ವವನ್ನು ಪಡೆದಿದ್ದ ಇವರ ಭಕ್ತಿಸಾಹಿತ್ಯಸಾಧನೆ ಅಸಾಧಾರಣವಾದುದು. ಇವರು ರಚಿಸಿದ ಮುಖ್ಯಕೃತಿಗಳು 'ಶ್ರೀಕೃಷ್ಣಭಾವಾಮೃತ'(೨೦ ಅಧ್ಯಾಯ, ೧೩೪೭ ಶ್ಲೋಕಗಳು), 'ಸಂಕಲ್ಪ ಕಲ್ಪದ್ರುಮ'(೧೦೪ ಶ್ಲೋಕಗಳು), 'ಚಮತ್ಕಾರ ಚಂದ್ರಿಕ'(೪ ಅಧ್ಯಾಯಗಳು, ೨೨೬ ಶ್ಲೋಕಗಳು), 'ಪ್ರೇಮ ಸಮಾತ'(೧೪೧ ಶ್ಲೋಕಗಳು), 'ವ್ರಜರೀತ ಚಿಂತಾಮಣಿ'(೩ ಅಧ್ಯಾಯಗಳು, ೨೩೪ ಶೋಕಗಳು). ಇವುಗಳಲ್ಲದೆ ಇವರ ಇನ್ನಷ್ಟು

ಕೃತಿಗಳು ಗೌಡೀಯ ವೈಷ್ಣವಸಾಹಿತ್ಯಕ್ಕೆ ಉತ್ತಮಕೊಡುಗೆ. ಒಟ್ಟಿನಲ್ಲಿ ವಿಶ್ವನಾಥ ಚಕ್ರವರ್ತಿಗಳದ್ದು ಬಂಗಾಳೀ ಧಾರ್ಮಿಕಸಾಹಿತ್ಯದಲ್ಲಿ ದೊಡ್ಡಹೆಸರು.

ಕೃಷ್ಣಪ್ರಜ್ಞೆಯನ್ನು ಜಗದ್ವಿಖ್ಯಾತಗೊಳಿಸಿದ ಶ್ರೀಲ ಪ್ರಭುಪಾದರ ಅಧ್ಯಾತ್ಮಿಕಗುರು ಶ್ರೀಲ ಭಕ್ತಿಸಿದ್ಧಾಂತ ಸರಸ್ವತೀ ಠಾಕೂರ (೧೮೭೪–೧೯೩೭)ರ ಆಧ್ಯಾತ್ಮಿಕ ಸಾಧನೆ ಅಸದೃಶವಾದುದು.. ಇವರ ಹುಟ್ಟುಹೆಸರು ವಿಮಲಪ್ರಸಾದ. ತಂದೆ ಭಕ್ತಿವಿನೋದ ಠಾಕೂರ. ತಂದೆಯ ಭಗವದ್‌ಪ್ರಾರ್ಥನೆಯ ಫಲವಾಗಿ ೧೮೭೪ ಫೆಬ್ರವರಿ ೬ ರಂದು ವಿಮಲಪ್ರಸಾದರ ಜನನವಾಯಿತು. ವಿಮಲಪ್ರಸಾದರಿಗೆ ಏಳನೆಯ ವಯಸ್ಸಿನಲ್ಲಿಯೇ ಭಗವದ್ಗೀತೆಯ ಶ್ಲೋಕಗಳನ್ನು ಅಸ್ಖಲಿತವಾಗಿ ಹೇಳಬಲ್ಲಂತಹ ಜಾಣ್ಮೆಯಿತ್ತು. ತನ್ನ ಇಪ್ಪತ್ತಾರನೆಯ ವಯಸ್ಸಿನಲ್ಲಿ ಗಣಿತಶಾಸ್ತ್ರ, ಖಗೋಳಶಾಸ್ತ್ರ, ವೇದ–ವೇದಾಂತಗಳ ಪಾಂಡಿತ್ಯವನ್ನು ಬಲ್ಲವರಾಗಿದ್ದರು. ಆದರೂ ತಂದೆಯ ಪ್ರೇರಣೆಯಂತೆ ಗೌರಕಿಶೋರ ಬಾಬಾಜಿ ಅವರನ್ನು ಗುರುವಾಗಿ ಸ್ವೀಕರಿಸಿ, ಪರಮಸತ್ಯದ ಹುಡುಕಾಟದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡರು. ಗುರುವಿನಿಂದ 'ಭಕ್ತಿಸಿದ್ಧಾಂತ ಸರಸ್ವತೀ' ಎಂಬ ಅಭಿದಾನವನ್ನು ಪಡೆದರು. ತಂದೆಯ ಪರಂಧಾಮಾನಂತರ ೧೯೨೮ ರಲ್ಲಿ ಸಂನ್ಯಾಸವನ್ನು ಸ್ವೀಕರಿಸಿ ಕೃಷ್ಣಭಕ್ತಿಯ ಜ್ಞಾನಪ್ರಸಾರದ ದೀಕ್ಷೆಯನ್ನು ಹೊತ್ತರು. ಮುಖ್ಯವಾಗಿ, ಗೌಡೀಯ ವೈಷ್ಣವತತ್ತ್ವದ ಪುನರುತ್ಥಾನಕ್ಕೆ ಕಾರಣರಾದ ಇವರು ೧೯೩೭ರ ಜನವರಿ ೧ ರಂದು ಭಗವದ್ಧಾಮಕ್ಕೆ ನಿರ್ಗಮಿಸಿದರು.

ಚೈತನ್ಯಪಂಥದ ವಿಕಾಸದ ಹೆಜ್ಜೆಯಲ್ಲಿ ಭಕ್ತಿವೇದಾಂತ ಸ್ವಾಮಿ ಪ್ರಭುಪಾದರದ್ದು ಕ್ರಾಂತಿಕಾರಕ ನಡೆ. ಗೌಡೀಯ ಪಂಥದ ಭಜನೆ, ಭಕ್ತಿ, ಅನುಷ್ಠಾನ, ಅಧ್ಯಯನ, ಆಚರಣೆಗಳಿಗೆ ಸಾಂಘಿಕವಾದ ರೂಪವನ್ನಿತ್ತು, ಸಾಗರದಾಚೆ ಕೃಷ್ಣಪ್ರಜ್ಞೆಯ ಸಮರ್ಪಣಾಭಾವವನ್ನು ಬಿತ್ತಿದ ಕೀರ್ತಿ ಎ. ಸಿ. ಪ್ರಭುಪಾದರಿಗೆ ಸಲ್ಲಬೇಕು. ಈ ಮೂಲಕವಾಗಿಯೇ ಜಗತ್ತಿನ ತರತಮಭಾವಗಳನ್ನು ಮೀರುತ್ತಾ, ನಿರ್ಮಲವಾದ ಪ್ರೀತಿಯನ್ನು ಚೆಲ್ಲುತ್ತಾ 'ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾಸಂಘ'ದ ಸಂಸ್ಥಾಪನಾಚಾರ್ಯರಾಗಿ ಹೆಸರಾದರು. ಅದ್ವೈತಾಚಾರ್ಯರು ಕಂಡಕನಸು ಚೈತನ್ಯರ ಮೂಲಕ ನನಸಾದರೂ, ಈ ಪಂಥವೊಂದು ಸಾಗರೋಲ್ಲಂಘನಗೈದು, ಪಾಶ್ಚಾತ್ಯರಿಗೆ ಗೌಡೀಯ ವೈಷ್ಣವಭಕ್ತಿಯನ್ನು ಉಣಬಡಿಸಿದ್ದು ಸ್ವಾಮಿ ಪ್ರಭುಪಾದರು ಎನ್ನಬೇಕು.

ಸ್ವಾಮಿ ಪ್ರಭುಪಾದರ ಪೂರ್ವಾಶ್ರಮದ ಹೆಸರು ಅಭಯಚರಣ ಡೇ. ೧೮೯೬ ಸಪ್ಟೆಂಬರ್ ಒಂದರಂದು ಕಲ್ಕತ್ತಾದ ಟಾಲಿಗಂಜ್‌ನ ಪುಟ್ಟ ಮನೆಯೊಂದರಲ್ಲಿ ಜನಿಸಿದರು. ತಂದೆ ಗೌರಮೋಹನ ಡೇ. ತಾಯಿ ರಜನಿ. ಅವರದು ಮಧ್ಯಮವರ್ಗದ ವಸ್ತ್ರವ್ಯಾಪಾರೀ ಮನೆತನ. ಮಗುವಿನ ಜಾತಕವನ್ನು ವೀಕ್ಷಿಸಿದ ಜ್ಯೋತಿಷಿಗಳು ಇವನು ೭೦ ನೆಯ ವಯಸ್ಸಿನಲ್ಲಿ ಸಮುದ್ರವನ್ನು ದಾಟಿ, ಧರ್ಮಪ್ರಚಾರ ಮಾಡುತ್ತಾನೆಂದೂ, ೧೦೮ ದೇವಾಲಯಗಳ ನಿರ್ಮಾಣಕ್ಕೆ ಕಾರಣನಾಗುತ್ತಾನೆಂದೂ ಭವಿಷ್ಯವನ್ನು ನುಡಿದರು.

ಅಭಯಚರಣರಿಗೆ ಚಿಕ್ಕಂದಿನಲ್ಲೇ 'ರಾಧಾಕೃಷ್ಣ' ಪೂಜೆಯ ಹುಚ್ಚು. ಪ್ರಾಯಶಃ ಈ ಪಾರಮ್ಯದಿಂದಲೋ ಏನೋ, ಒಂದೂವರೆ ವರ್ಷದ ಅಭಯಚರಣರಿಗೆ ಬಂದೊದಗಿದ ವಿಷಮಜ್ವರ ಹೆಚ್ಚು ವಿಶ್ರಮಿಸದೆ

ನಿರ್ಗಮಿಸಿತು. ಕ್ರಿ.ಶ. ೧೯೦೦ರಲ್ಲಿ ಅಭಯಚರಣರಿಗೆ ನಾಲ್ಕರ ವಯಸ್ಸು. ಅದೇ ಸಮಯದಲ್ಲಿ ಕಲ್ಕತೆಯು ಪ್ಲೇಗ್‌ಜ್ವರದಿಂದ ತತ್ತರಿಸಿ ಹೋಗಿತ್ತು. ಸರ್ಕಾರದ ಯಾವಕ್ರಮಕ್ಕೂ ಪ್ಲೇಗ್ ಕುಂಠಿತಗೊಳ್ಳದಾದಾಗ, ಜಾತಿ, ಮತವನ್ನು ಮರೆತು ಜನರೆಲ್ಲ ಕೃಷ್ಣನಾಮ ಸಂಕೀರ್ತನೆಗೆ ಒಳಗಾದರು. ಆ ಮಹಾಮಂತ್ರದ ಪವಾಡವೋ ಎಂಬತೆ ಪ್ಲೇಗ್‌ರೋಗವು ಕಲ್ಕತ್ತೆಯಿಂದ ದೂರವಾಯಿತು. ಇದರಿಂದಾಗಿ ಕೃಷ್ಣನಾಮಸಂಕೀರ್ತನೆಗೆ ಅಭಯಚರಣರು ತನ್ನನ್ನು ತಾನು ಹೆಚ್ಚಾಗಿ ಒಗ್ಗೂಡಿಸಿಕೊಂಡರು.

ಅಭಯಚರಣರು ತಮ್ಮ ಸ್ನೇಹಿತ ನರೇಂದ್ರನಾಥ್‌ಮಲ್ಲಿಕ್‌ರವರ ಆಗ್ರಹದಂತೆ ಗೌಡೀಯಮಠದ ಶ್ರೀಲ ಭಕ್ತಿಸಿದ್ಧಾಂತ ಸರಸ್ವತೀಸ್ವಾಮಿಗಳ ದರ್ಶನವನ್ನು(೧೯೨೨) ಪಡೆದರು. ಅಭಯಚರಣರನ್ನು ಕಂಡ ಆ ಸ್ವಾಮೀಜಿಯು 'ನೀವೇಕೆ ಶ್ರೀಚೈತನ್ಯ ಮಹಾಪ್ರಭುಗಳ ಸಂದೇಶವನ್ನು ಜಗತ್ತಿನಾದ್ಯಂತ ಸಾರಬಾರದು'? ಎಂದು ಪ್ರಶ್ನಿಸಿದರು. ಈ ಪ್ರಶ್ನೆಯೇ ಅಭಯಚರಣರನ್ನು ಜಗದಗಲಕ್ಕೆ ಕೃಷ್ಣಪ್ರಜ್ಞೆಯನ್ನು ಬಿತ್ತುವ ಕಾಯಕಕ್ಕೆ ಸಂಕಲ್ಪಿಸುವಂತೆ ಮಾಡಿತು. ಈ ಪ್ರೇರಣೆಯೇ 'ಬ್ಯಾಕ್ ಟು ಗಾಡ್‌ಹೆಡ್'(೧೯೪೪) ಎಂಬ ಪತ್ರಿಕೆಯ ಆರಂಭಕ್ಕೆ ಕಾರಣವಾಯಿತು. ಅಲ್ಲದೆ ೧೯೫೯ರಲ್ಲಿ ಸಂಸಾರವನ್ನು ತ್ಯಜಿಸಿ, ಸಂನ್ಯಾಸಿಯಾಗಿ, ಅಭಯಚರಣಾರವಿಂದ ಭಕ್ತಿವೇದಾಂತ ಸ್ವಾಮಿ ಪ್ರಭುಪಾದರೆಂದು ಸಮಾಜಮುಖಕ್ಕೆ ಪ್ರಕಟಗೊಂಡರು. ವೈದಿಕಧರ್ಮದ ಪ್ರಚಾರಕ್ಕಾಗಿ, ಜಾತಿಮತಭೇದಗಳನ್ನು ದಾಟಿದ ಭಗವದ್ಭಕ್ತಿಯೊಂದೇ ಸಾಧನವಾಗಿರುವ 'ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾಸಂಘ (ಇಸ್ಕಾನ್–೧೯೬೬) ಮತ್ತು 'ಭಕ್ತಿವೇದಾಂತ ಬುಕ್‌ಟ್ರಸ್ಟ್'(೧೯೭೦) ಎಂಬ ಸಾಹಿತ್ಯ ಪ್ರಾಕಾಶನದ ಅತಿದೊಡ್ಡ ಸಂಸ್ಥೆಯನ್ನು ಸ್ಥಾಪಿಸಿದರು. ಇವರು ತಮ್ಮ ಜೀವನದ ಕೊನೆಯ ಹನ್ನೆರಡು ವರ್ಷಗಳಲ್ಲಿ ಪ್ರಪಂಚದ ಮೂಲೆಮೂಲೆಯನ್ನು ದರ್ಶಿಸಿ, ಪ್ರಪಂಚದ ಆರು ಖಂಡಗಳಲ್ಲಿ ೧೦೮ ದೇವಾಲಯಗಳನ್ನು ಸ್ಥಾಪಿಸಿದುದು ಗಮನಾರ್ಹವಾದ ಸಂಗತಿ. ಅಲ್ಲದೆ ೧೨ ಬಾರಿ ಭೂಪ್ರದಕ್ಷಿಣೆ, ೪ ಸಾವಿರಕ್ಕಿಂತಲೂ ಹೆಚ್ಚು ಜನರಿಗೆ ದೀಕ್ಷೆ, ೬೦ ಕ್ಕಿಂತಲೂ ಹೆಚ್ಚು ಗ್ರಂಥರಚನೆ– ಇವೆಲ್ಲವುಗಳು ಪ್ರಭುಪಾದರ ಬದುಕಿನ ಮುಖ್ಯ ಸಾಧನೆಗಳು. ಇವರ ಕೃತಿಗಳು ಇಂಗ್ಲೀಷ್ ಭಾಷೆಯೊಂದರಲ್ಲೇ ೪ ಕೋಟಿಗೂ ಹೆಚ್ಚು ಪ್ರತಿಗಳು ಪ್ರಕಟವಾದವು. ರಷ್ಯನ್‌ಭಾಷೆಗಳಲ್ಲಿ ಪ್ರಕಟವಾದ ಅವರ ಕೃತಿಗಳ ಒಟ್ಟು ಪ್ರತಿಗಳು ೫,೫೩,೧೪,೦೦೦. ಪ್ರಾಯಶಃ ಈ ಮಟ್ಟದ ಸಾಧನೆ ಬೇರೆ ಯಾವ ಧಾರ್ಮಿಕ ಪಂಥಗಳಲ್ಲೂ ಆಗಿರಲಾರದು. ಆ ನಿಟ್ಟಿನಲ್ಲಿ ಇದೊಂದು ವಿಶ್ವದಾಖಲೆ.

ಪ್ರಭುಪಾದರ ಹೊನ್ನುಡಿಗಳು

- ಜಗತ್ತಿನಲ್ಲಿ ಹಣದ ಕೊರತೆಯಿಲ್ಲ ; ಕೃಷ್ಣಪ್ರಜ್ಞೆಯ ಕೊರತೆಯಿದೆ.
- ಸಂಸಾರ ನಿರ್ವಹಣೆ ಎಂಬುದು ಸಾಮ್ರಾಜ್ಯ ನಿರ್ವಹಣೆಗಿಂತ ಕಷ್ಟಕರ.

- ವೇದಾಂತ ಮಾರ್ಗದರ್ಶನಕ್ಕೆ ಪಶ್ಚಿಮದ ಜನರು ಕಾಯುತ್ತಿದ್ದಾರೆ. ಆದರೆ ತಮ್ಮಲ್ಲಿರುವ ಸಂಪತ್ತನ್ನೇ ಮರೆತ ಭಾರತೀಯರು ಭಿಕ್ಷೆ ಬೇಡುವ ಸ್ಥಿತಿಯಲ್ಲಿದ್ದಾರೆ. ವಿದೇಶಿಯರು ಭಾರತದ ತತ್ವಾರ್ಥಕ್ಕೆ ಶರಣಾದಾಗ, ಭಾರತೀಯರು ಮತ್ತೆ ಆಧ್ಯಾತ್ಮಕ್ಕೆ ಮರಳುತ್ತಾರೆ.
- ವಿದೇಶೀ ದಾಳೀಕಾರರು ಭಾರತದ ಮಹತ್ವದ ವಾಸ್ತುಶಿಲ್ಪಗಳನ್ನು ಭಗ್ನಗೊಳಿಸಿರಬಹುದು. ಆದರೆ ಸಂಸ್ಕೃತ ಭಾಷೆಯಲ್ಲಿ ವೇದಗಳೊಳಗೆ ಮುಚ್ಚಿಟ್ಟಿರುವ ನಾಗರಿಕತೆಯನ್ನು ಒಡೆದು ಹಾಕಲು ಅವರಿಗೆ ಸಾಧ್ಯವಾಗಲಿಲ್ಲ.
- ಗುರುಗಳಿಗೂ ಶಿಷ್ಯರಿಗೂ ವಿಯೋಗವೆಂಬುದೇ ಇಲ್ಲ. ಗುರುಗಳ ಉಪದೇಶಗಳನ್ನು ಶಿಷ್ಯರು ಅನುಸರಿಸುತ್ತಿರುವವರೆಗೂ ಗುರುಗಳು ಶಿಷ್ಯರ ಸನಿಹದಲ್ಲೇ ಇರುತ್ತಾರೆ. ಇದನ್ನೇ 'ವಾಣೀ ಸಾನ್ನಿಧ್ಯ' ಎಂದು ಹೇಳುತ್ತಾರೆ.
- ದೇವಾಲಯಗಳು ಕೇವಲ ಊಟ ಮಾಡುವ, ಮಲಗುವ ಸ್ಥಳಗಳಲ್ಲ. ಅದೊಂದು ರೀತಿಯ ಸೈನಿಕನೆಲೆ. ಇಲ್ಲಿಂದ ಸೈನಿಕರು ಮಾಯೆಯ ವಿರುದ್ಧವಾಗಿ ಹೋರಾಡುತ್ತಾರೆ. ಮಾಯೆಯೊಡನೆ ಹೋರಾಟವೆಂದರೆ, ಸಾವಿರಾರು ಧಾರ್ಮಿಕ ಗ್ರಂಥಗಳನ್ನು ಬದ್ಧಾತ್ಮರ ಮಡಿಲಿಗೆ ಹಾಕುವುದು. ಇದೊಂದು ರೀತಿಯಲ್ಲಿ ಯುದ್ಧಕಾಲಕ್ಕೆ ಸುರಿಮಳೆಯಾಗುವ ವಿಷಯುಕ್ತ ಪರಮಾಣು ಬಾಂಬುಗಳಂತೆ.[೧೯] ಭಕ್ತಿವೇದಾಂತ ಬುಕ್‌ಟ್ರಸ್ಟ್ ನಿಧಿಯನ್ನು ನನ್ನ ಪುಸ್ತಕ, ಸಾಹಿತ್ಯದ ಪ್ರಕಟಣೆಗೆ, ಮತ್ತು ಪ್ರಪಂಚದಾದ್ಯಂತ ದೇವಸ್ಥಾನಗಳ ಸ್ಥಾಪನೆಗೆ ಉಪಯೋಗಿಸಬೇಕು. ಮುಖ್ಯವಾಗಿ ಮಾಯಾಪುರ, ವೃಂದಾವನ ಮತ್ತು ಜಗನ್ನಾಥಪುರಿಯಲ್ಲಿ ಒಂದೊಂದರಂತೆ ಮೂರು ದೇವಸ್ಥಾನಗಳನ್ನು ಸ್ಥಾಪಿಸಬೇಕು.[೨೦]

ಇವಲ್ಲದೆ, ಶ್ರೀಮದ್ಭಾಗವತಮ್, ಭಗವದ್ಗೀತಾ ಯಥಾರೂಪ, ಜನನ ಮರಣಗಳಾಚೆ, ಕೃಷ್ಣಪ್ರಜ್ಞೆ ಅನುಪಮ ಕೊಡುಗೆ, ಶ್ರೀಈಶೋಪನಿಷದ್, ರಾಜವಿದ್ಯೆ, ಪರಿಪೂರ್ಣ ಪ್ರಶ್ನೆಗಳು–ಪರಿಪೂರ್ಣ ಉತ್ತರಗಳು, ಕೃಷ್ಣಪ್ರಜ್ಞೆಗೆ ಆರೋಹಣ, ಭಗವದ್‌ಸಂದೇಶ, ಉಪದೇಶಾಮೃತ, ಕೃಷ್ಣಪ್ರಜ್ಞೆ: ಶ್ರೇಷ್ಠತಮ ಯೋಗಪದ್ಧತಿ, ಇತರ ಲೋಕಗಳಿಗೆ ಸುಗಮ ಪ್ರಯಾಣ, ಆತ್ಮಸಾಕ್ಷಾತ್ಕಾರ ವಿಜ್ಞಾನ, ಯೋಗದ ಪರಿಪೂರ್ಣತೆ, ಕೃಷ್ಣ:ಆನಂದದ ಆಗರ, ಪ್ರಹ್ಲಾದ ಮಹಾರಾಜನ ಪಾರಮಾರ್ಥಿಕ ಬೋಧನೆಗಳು, ದೇವಹೂತಿ ಪುತ್ರ ಶ್ರೀಕಪಿಲನ ಬೋಧನೆಗಳು, ಸನಾತನಧರ್ಮ ಏನು? ಏಕೆ? ಇವೆಲ್ಲವು ಕನ್ನಡಕ್ಕೆ ಅನುವಾದಗೊಂಡ ಪ್ರಭುಪಾದರ ಕೃತಿಗಳು. ಚೈತನ್ಯಪಂಥಾವಲಂಬಿ ಬಂಗಾಳಿಕೃತಿಗಳು ಕನ್ನಡಭಾಷೆಯ ಮೂಲಕ ಅನುವಾದಗೊಂಡಿರುವುದು ಕನ್ನಡ ಮನಸ್ಸುಗಳಿಗೆ ಆ ಪಂಥದ ಒಳಹೊರಗನ್ನು ತಿಳಿಯಲು ಅನುಕೂಲವಾಯಿತು. ಅಲ್ಲದೆ, ಈ ಕಾರ್ಯವು ಚೈತನ್ಯಪಂಥದ ವಿಕಾಸದೃಷ್ಟಿಯನ್ನು ಹೆಚ್ಚಿಸಿತು.

೪.೩ : ಚೈತನ್ಯ ಕುರಿತ ಹಾಗೂ ರಚಿತ ಸಾಹಿತ್ಯ ಸಂದೇಶಗಳು

ದಾಸಸಾಹಿತ್ಯಕ್ಕೆ ಚೈತನ್ಯಪಂಥದ ಸಾಹಿತ್ಯವನ್ನು ಹೋಲಿಸಿದರೆ, ಚೈತನ್ಯಪಂಥದ ಸಾಹಿತ್ಯ ಪ್ರಮಾಣವು ದಾಸಸಾಹಿತ್ಯಕ್ಕಿಂತ ಕಿರಿದಾದುದೆಂಬ ಕಲ್ಪನೆ ಹಿಂದಿನ ಧಾರ್ಮಿಕ ವಲಯದಲ್ಲಿತ್ತು. ಆದರೆ ವಾಸ್ತವದಲ್ಲಿ ನೋಡಿದರೆ ಆ ಹೇಳಿಕೆಯಲ್ಲಿ ಪೂರ್ಣವಾದ ಸಹಜತೆಯಿಲ್ಲ. ಒಂದರ್ಥದಲ್ಲಿ ಗಮನಿಸಿದರೆ ದಾಸಸಾಹಿತ್ಯದಲ್ಲಿ ಸಿಗುವ ವೈವಿಧ್ಯಮಯವಾದ ಕೀರ್ತನೆಗಳು ಚೈತನ್ಯಪಂಥದ ಸಾಹಿತ್ಯದಲ್ಲಿ ಇಲ್ಲವೆನ್ನುವುದು ಸತ್ಯವಾದರೂ ತತ್ತ್ವಾಧಾರಿತವಾದ ಮೌಲಿಕ ಕೃತಿಗಳಿಗೆ ಚೈತನ್ಯಪಂಥದಲ್ಲಿ ಬರವಿಲ್ಲ. ಇಲ್ಲಿಯ ಅಚಿಂತ್ಯಾತತ್ವ ದ್ರಷ್ಟಾರರಾದ ಶ್ರೀಚೈತನ್ಯರು ಸಾಹಿತ್ಯರಚನೆಗೆ ಆದ್ಯತೆಕೊಡದೆ ಕೇವಲ ತತ್ತ್ವಬೋಧನೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದವರು. ಆದರೆ ಚೈತನ್ಯರ ನಂತರದಲ್ಲಿ ಬಂದವರೆಲ್ಲ ಚೈತನ್ಯರ ತತ್ವಬೋಧನೆಗೆ ಸಂಬಂಧಿಸಿ ಕೃತಿಗಳನ್ನು ರಚಿಸಿದರು. ಆ ಮೂಲಕವಾಗಿ ಭಕ್ತಿಸೇವೆ, ಶರಣಾಗತಿ, ರಾಧಾಮಾಧವ ಪ್ರೇಮವಿನಿಮಯದ ಜೊತೆಗೆ ಚೈತನ್ಯಚಾರಿತ್ರ್ಯವನ್ನು ಸಮಾಜದ ಮುಂದಿಟ್ಟರು. ಹಾಗಾಗಿ ಇಲ್ಲಿಯ ಹೆಚ್ಚಿನ ಸಾಹಿತ್ಯ ನಿರ್ಮಾಣವು ಚೈತನ್ಯಪಂಥದ ಸಂತಪರಂಪರೆಯಿಂದಲೇ ಎನ್ನಬೇಕು.

ಶ್ರೀಚೈತನ್ಯ ಮಹಾಪ್ರಭುಗಳ ಜೀವನಚರಿತ್ರೆಯ ಕುರಿತಾಗಿ ಲಭ್ಯವಿರುವ ೭ ಕೃತಿಗಳಲ್ಲಿ, ನಾಲ್ಕು ಬಂಗಾಳಿ ಭಾಷೆಯಲ್ಲಿದ್ದರೆ, ಉಳಿದ ಮೂರುಕೃತಿಗಳು ಸಂಸ್ಕೃತದಲ್ಲಿವೆ. ಆದರೆ ಅವುಗಳಲ್ಲೊಂದು ನಾಟಕ ರೂಪದಲ್ಲಿರುವುದು ವಿಶೇಷ.

೧. ಶ್ರೀಕೃಷ್ಣ ಚೈತನ್ಯ ಚರಿತಾಮೃತ(ಸಂಸ್ಕ್ರತ) – ಮುರಾರಿ ಗುಪ್ತ, (ಶ್ರೀಚೈತನ್ಯ ಚರಿತ)

೨. ಶ್ರೀಕೃಷ್ಣಚೈತನ್ಯ ಚರಿತಾಮೃತ (ಸಂಸ್ಕ್ರತ) – ಕವಿ ಕರ್ಣಾಪುರ,

೩. ಶ್ರೀಕೃಷ್ಣಚೈತನ್ಯ ಚಂದ್ರೋದಯ ನಾಟಕ (ಸಂಸ್ಕೃತ)– ಕವಿ ಕರ್ಣಾಪುರ,

೪. ಶ್ರೀಕೃಷ್ಣಚೈತನ್ಯ ಭಾಗವತ (ಬಂಗಾಳಿ)– ವೃಂದಾವನದಾಸ ಠಾಕುರ,

೫. ಶ್ರೀಕೃಷ್ಣಚೈತನ್ಯ ಮಂಗಳ (ಬಂಗಾಳಿ)– ಲೋಚನದಾಸ ಠಾಕುರ,

೬. ಶ್ರೀಕೃಷ್ಣಚೈತನ್ಯ ಮಂಗಳ (ಬಂಗಾಳಿ)– ಜಯಾನಂದ ಠಾಕುರ,

೭. ಶ್ರೀಕೃಷ್ಣಚೈತನ್ಯ ಚರಿತಾಮೃತ (ಬಂಗಾಳಿ)– ಕೃಷ್ಣದಾಸ ಕವಿರಾಜ ಗೋಸ್ವಾಮಿ,

ಈ ಕೃತಿಗಳಲ್ಲಿ ಶ್ರೀ ಮುರಾರಿಗುಪ್ತ ಅವರ ಕೃತಿಯು ಮೊದಲಿನದು, ಇಲ್ಲಿಯ ಎಲ್ಲಾ ಕೃತಿಗಳಿಗಿಂತ ಮುರಾರಿಗುಪ್ತರ ಕೃತಿಗೆ ಹೆಚ್ಚಿನ ಮನ್ನಣೆಯಿರುವುದು ಅವರು ಶ್ರೀಚೈತನ್ಯರ ಸಮಕಾಲೀನರು ಹಾಗೂ ಸಮೀಪವರ್ತಿಗಳೆನ್ನುವುದಕ್ಕೆ. ವಯೋಮಾನದಲ್ಲಿ ಶ್ರೀಚೈತನ್ಯರಿಗಿಂತ ಹಿರಿಯರಾಗಿದ್ದ ಗುಪ್ತರು, ಶ್ರೀಗಂಗಾದಾಸ ಪಂಡಿತರಲ್ಲಿ ಮಹಾಪ್ರಭುಗಳ ಸಹಪಾಠಿಯಾಗಿ ಸಂಸ್ಕೃತಾಧ್ಯಯನ ಮಾಡುತ್ತಿದ್ದರು.

'ಶ್ರೀಕೃಷ್ಣಚೈತನ್ಯ ಚರಿತಾಮೃತ'ವನ್ನು ಬರೆದ ಮುರಾರಿಗುಪ್ತರು, ಶ್ರೀಚೈತನ್ಯರು ಅಂತರ್ಧಾನರಾಗುವ ಮೊದಲೇ ಅವರ ಸಮ್ಮತಿಯನ್ನು ಪಡೆದು, ಚೈತನ್ಯರ ಕುರಿತಾಗಿ ಬರವಣಿಗೆಗೆ ಮುಂದಾಗಿದ್ದರು. ಆದರೆ ಕೃತಿ ರಚನೆಯ ಸಮಾಪ್ತಿಯ ಒಳಗಾಗಿ ಶ್ರೀಚೈತನ್ಯರು ಲೌಕಿಕಯಾತ್ರೆಯನ್ನು ಮುಗಿಸಿದ್ದರು. ಇದಕ್ಕೆ ಆಧಾರವೆಂದರೆ 'ಶ್ರೀಚೈತನ್ಯ ಚರಿತ'ದ ಎರಡನೇ ಅಧ್ಯಾಯುದಲ್ಲಿ ಮಹಾಪ್ರಭುಗಳ ಅಂತರ್ಧಾನದ ಬಗ್ಗೆ ಬರುವ ಒಂದು ಶ್ಲೋಕಾರ್ಥ ನಿರೂಪಣೆ.

ಮಹಾಪ್ರಭುಗಳ ಜೀವನಚರಿತ್ರೆಯನ್ನು ಸಾರುವ ಎರಡನೆಯ ಕೃತಿಯೆಂದರೆ, ಕವಿ ಕರ್ಣಾಪುರರ 'ಚೈತನ್ಯ ಚರಿತಾಮೃತ'ವೆಂಬ ಮಹಾಕಾವ್ಯ. ಇದಲ್ಲದೆ ಕವಿ ಕರ್ಣಾಪುರರು 'ಚೈತನ್ಯ ಚಂದ್ರೋದಯು'ವೆಂಬ ನಾಟಕವನ್ನೂ ಬರೆದಿದ್ದಾರೆಂದು ಕೆಲವೊಂದು ಕೃತಿಗಳು ಸಾರುತ್ತವೆ. ಚೈತನ್ಯ ಮಹಾಕಾವ್ಯದ ಕಾಲ ೧೫೪೨ ಆಸುಪಾಸು ಎಂದೂ, ನಾಟಕ ರಚನೆಯ ಕಾಲ ೧೫೭೦ ಎಂದೂ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಕವಿ ಕರ್ಣಾಪುರರು ಕೂಡ ಶ್ರೀಚೈತನ್ಯರ ಕಾಲದಲ್ಲಿ ಜೀವಿಸಿದ್ದವರೇ ಆದರೂ ಅವರು ವಯೋಮಾನದಲ್ಲಿ ಶ್ರೀಚೈತನ್ಯರಿಗಿಂತ ಬಹಳ ಚಿಕ್ಕವರು. ಕರ್ಣಾಪುರರ ತಂದೆ ಶಿವಾನಂದಸೇನರು ಮಹಾಪ್ರಭುಗಳ ಭಕ್ತಾನುಯಾಯಿಗಳಾಗಿದ್ದವರು. ಮಹಾಪ್ರಭುಗಳು ಶಿವಾನಂದಸೇನರ ಮಗನಿಂದ ರಚಿಸಲ್ಪಟ್ಟ ಕರ್ಣಾನಂದಕರವಾಗಿದ್ದ ಶ್ರೀಕೃಷ್ಣಸ್ತುತಿ ಕಾವ್ಯವನ್ನು ಬಹುವಾಗಿ ಮೆಚ್ಚಿಕೊಂಡಿದ್ದರಿಂದಲೇ ಆ ಬಾಲಕನಿಗೆ 'ಕವಿ ಕರ್ಣಾಪುರ' ಎಂದು ಹೆಸರಿಟ್ಟರು. ಕವಿ ಕರ್ಣಾಪುರರು ರಚಿಸಿರುವ ಮತ್ತೊಂದು ಮಹತ್ತ್ವದ ಕೃತಿ 'ಗೌರ ಘನೋದ್ದೇಶ ದೀಪಿಕಾ'. ಇದು ಚೈತನ್ಯ ಮಹಾಪ್ರಭುಗಳು ವ್ರಜಲೀಲೆಯಲ್ಲಿ (ಕೃಷ್ಣಲೀಲೆ) ವಹಿಸಿದ್ದ ಪಾತ್ರಗಳನ್ನು ಸಮೀಕರಿಸಿ ರಚಿಸಲಾಗಿರುವ ಕೃತಿ.

ಶ್ರೀಚೈತನ್ಯ ಮಹಾಪ್ರಭುಗಳ ಜೀವನ ಚರಿತ್ರೆಯು ಬಂಗಾಳಿ ಭಾಷೆಯಲ್ಲಿ ನಿರೂಪಿತವಾದದ್ದು ಶ್ರೀವೃಂದಾವನ ದಾಸರ 'ಚೈತನ್ಯ ಭಾಗವತ' ಕೃತಿಯ ಮೂಲಕ. ಅಷ್ಟೇ ಅಲ್ಲದೆ, ಉಳಿದ ಆರು ಜೀವನಚರಿತ್ರೆಗಳಿಗಿಂತ ಅತಿ ವಿಸ್ತಾರವಾದ ಕೃತಿಯೆಂಬ ಹೆಗ್ಗಳಿಕೆ ಇದರದು. ಈ ಕೃತಿಯಲ್ಲಿ ಸುಮಾರು ೧೨,೩೦೦ ಬಂಗಾಳಿ ದ್ವಿಪದಿಗಳಿವೆ. 'ಚೈತನ್ಯ ಭಾಗವತ'ದ ರಚನೆಯ ಕಾಲ ಸುಮಾರು ಕ್ರಿ.ಶ. ೧೫೪೬ ರಿಂದ ಕ್ರಿ.ಶ. ೧೫೫೦ರ ನಡುವೆ ಇರಬಹುದು. ಆರಂಭದಲ್ಲಿ 'ಚೈತನ್ಯ ಭಾಗವತ'ದ ಹೆಸರು 'ಚೈತನ್ಯ ಮಂಗಳ'ವೆಂದೇ ಕರೆಯಲಾಗಿತ್ತು. ಶ್ರೀವೇದವ್ಯಾಸರು ಶ್ರೀಕೃಷ್ಣಲೀಲೆಯನ್ನು ಬರೆದು 'ಭಾಗವತ'ವೆಂದು ಕರೆದಂತೆ, ವೃಂದಾವನದಾಸರು 'ಶ್ರೀಚೈತನ್ಯಲೀಲೆ'ಯನ್ನು ರಚಿಸಿ, 'ಚೈತನ್ಯ ಭಾಗವತ' ಎಂದು ಕರೆದರು.

ಸುಲೋಚನದಾಸರು ತಮ್ಮ ಕೃತಿಯಲ್ಲಿ ಮಹಾಪ್ರಭುಗಳ ಜೀವನದ ಮಾಧುರ್ಯಭಾವವನ್ನು ಪ್ರಮುಖವಾಗಿ ಚಿತ್ರಿಸಿದರು. ಮಾಧುರ್ಯವು ಶ್ರೀಚೈತನ್ಯಾವತಾರದಲ್ಲಿ ಅತ್ಯಂತ ಮಂಗಳಕರವಾದ ಭಾವವೆನ್ನುವುದರಲ್ಲಿ ಎರಡು ಮಾತಿಲ್ಲ. ಈ ಕಾರಣದಿಂದ ಲೋಚನದಾಸರ ಕೃತಿಗೆ 'ಚೈತನ್ಯ ಮಂಗಳ' ಎಂದು ಹೆಸರಿಟ್ಟರು. ಅಂತೆಯೇ ಜಯಾನಂದರ 'ಚೈತನ್ಯ ಮಂಗಳ' ಕೃತಿಕೂಡ ಲೋಚನದಾಸರ ಕಾಲಘಟ್ಟದಲ್ಲಿಯೇ

ರಚಿತವಾದ ಕೃತಿ. ಆದರೆ ಈ ಕೃತಿಯನ್ನು ಚೈತನ್ಯಪರಂಪರೆಯು ಅಷ್ಟಾಗಿ ಮಾನ್ಯಮಾಡಲಿಲ್ಲ. ಆದರೂ ಇದು ಅತ್ಯಂತ ಹೆಚ್ಚು ಹಸ್ತಪ್ರತಿಗಳಲ್ಲಿ ದಾಖಲಾದ ಕೃತಿಯೆನ್ನಲಾಗಿದೆ. ಮಹಾಪ್ರಭುಗಳ ಅಂತರ್ಧಾನದ ಬಗ್ಗೆ ಸಮ್ಮತವಲ್ಲದ ವಿವರಗಳಿರುವುದರಿಂದ ಈ ಕೃತಿಯನ್ನು ಶುದ್ಧವೈಷ್ಣವಭಕ್ತರು ದೂರವಿರಿಸಿದ್ದಾರೆ. ಲೋಚನದಾಸರ ಕೃತಿ ಮತ್ತು ಜಯಾನಂದರ ಕೃತಿಗಳೆರಡಕ್ಕೂ 'ಚೈತನ್ಯ ಮಂಗಳ' ಎಂಬ ಹೆಸರಿದ್ದು ಎರಡೂ ಕೃತಿಗಳ ಹಸ್ತಪ್ರತಿಗಳು ದೊರೆತಿವೆ. ಅವುಗಳಲ್ಲಿ ಜಯಾನಂದರ ಕೃತಿಯ ಪ್ರತಿಗಳೇ ಸಾಕಷ್ಟು ಸಂಖ್ಯೆಯಲ್ಲಿವೆ.

ಶ್ರೀಚೈತನ್ಯ ಮಹಾಪ್ರಭುಗಳ ಜೀವನಚರಿತ್ರೆಗಳಲ್ಲಿ ಕೊನೆಯ ಪ್ರಮಾಣೀಕೃತ ಗ್ರಂಥವೆಂದರೆ, ಶ್ರೀಕೃಷ್ಣದಾಸ ಕವಿರಾಜರ 'ಶ್ರೀಚೈತನ್ಯ ಚರಿತಾಮೃತ'. ಕವಿರಾಜರು ಇದನ್ನು ತಮ್ಮ ವೃದ್ಧಾಪ್ಯದಲ್ಲಿ ರಚಿಸಿದರೆಂದು ಹೇಳಲಾಗುತ್ತದೆ. ಇದರ ರಚನಾಕಾಲ ಕ್ರಿ.ಶ. ೧೬೧೨ ರಿಂದ ಕ್ರಿ.ಶ. ೧೬೧೫ ರ ಮಧ್ಯಭಾಗವಿರಬಹುದು. ಇನ್ನು 'ಚೈತನ್ಯವಿಲಾಸ' ಹೆಸರಿನ ಸಾಕಷ್ಟು ಕೃತಿಗಳು ಮಹಾಪ್ರಭುಗಳ ಜೀವನಚರಿತ್ರೆ ಎಂದು ಹೇಳಲಾಗುತ್ತದೆ. ಆದರೆ ಅವುಗಳನ್ನು ಪ್ರಮಾಣಗಳೆಂದು ಒಪ್ಪಿಕೊಳ್ಳಲಾಗುವುದಿಲ್ಲ. ವಂಶೀದಾಸರು ರಚಿಸಿರುವ 'ಗೌರಘನೋದ್ದೇಶ' ಕೃತಿಯು ಸಂಪೂರ್ಣ ಜೀವನಚರಿತ್ರೆಯಾಗಿದೆಯಾದರೂ ಇನ್ನೂ ಹಸ್ತಪ್ರತಿ ರೂಪದಲ್ಲಿದೆಯೇ ಹೊರತು ಮುದ್ರಣ ಕಂಡಿಲ್ಲ. ನಿತ್ಯಾನಂದ ವಂಶಸ್ಥರಾದ ಚೂಡಾಮಣಿದಾಸರು ಬರೆದಿರುವರೆನ್ನಲಾದ 'ಗೌರಾಂಗ ವಿಜಯ'ದ ನಾಲ್ಕನೇ ಒಂದುಭಾಗ ಮಾತ್ರ ಹಸ್ತಪ್ರತಿಯಾಗಿ ಈವರೆಗೆ ಲಭ್ಯವಾಗಿದೆ. ಆನಂತರದ ದಿನಗಳಲ್ಲಿ ಸುಕುಮಾರಸೇನರು ಬರೆದ 'ಶ್ರೀಚೈತನ್ಯರ ಚರಿತ್ರೆ'ಯು ವಿಸ್ತಾರವಾದ ಕೃತಿಯಾದರೂ ಅಷ್ಟೇನೂ ಮಹತ್ತ್ವದ ರಚನೆಯಲ್ಲವೆನಿಸಿದ ಕಾರಣ ಜನಪ್ರಿಯವಾಗದೆ ಉಳಿದುಹೋಗಿದೆ. ಶ್ರೀಚೈತನ್ಯ ಚರಿತಾಮೃತದ ಅನಂತರ ಚೈತನ್ಯರ ಕುರಿತಾಗಿ ರಚನೆಯಾದ ಮತ್ತೊಂದು ಕಾವ್ಯವೆಂದರೆ, 'ಚೈತನ್ಯ ತತ್ತ್ವಪ್ರದೀಪ'ವೆಂಬುದು. ಇದು ರಚನೆಗೊಂಡಿದ್ದು ನಿತ್ಯಾನಂದರ ವಂಶಸ್ಥರಾದ ವ್ರಜಮೋಹನದಾಸರಿಂದ. ಆದರೆ ಇದು ಕೂಡ ಕೇವಲ ಒಂದೇ ಒಂದು ಹಸ್ತಪ್ರತಿಯಲ್ಲಿ ದಾಖಲಾಗಿ ಅಜ್ಞಾತವಾಗಿಯೇ ಉಳಿದಿದೆ. ಒಟ್ಟಿನಲ್ಲಿ ಇಷ್ಟು ವಿಚಾರಸಾಹಿತ್ಯವು ಚೈತನ್ಯರ ಕುರಿತಾಗಿ ಇತರ ವಿದ್ವತ್ಕವಿಗಳಿಂದ ರಚಿತವಾದವುಗಳೆನ್ನಬೇಕು.

ಚೈತನ್ಯಪಂಥದಲ್ಲಿ ಭಕ್ತಿಯಿಂದಲೇ ಭಗವದ್‌ಪ್ರಾಪ್ತಿಯೆಂದು ಸಾರುವ ಸಾಹಿತ್ಯಕೃತಿಗಳು ಹೇರಳವಾಗಿದ್ದರೂ, ಶ್ರೀಚೈತನ್ಯರ ಕರ್ತೃತ್ವದ 'ಚೈತನ್ಯ ಕೀರ್ತನೆ', 'ಶಿಕ್ಷಾಷ್ಟಕ', ಕೃಷ್ಣದಾಸ ಕವಿರಾಜ ಗೋಸ್ವಾಮಿಗಳ 'ಶ್ರೀಚೈತನ್ಯ ಚರಿತಾಮೃತ', ಹಾಗೂ ವಿಶ್ವನಾಥ ಚಕವರ್ತಿಗಳ 'ಗುರ್ವಾಷ್ಟಕ' ಮೊದಲಾದ ಕೃತಿಗಳು ಶರಣಾಗತ ತತ್ತ್ವದ ಜೊತೆಗೆ ಅಧ್ಯಾತ್ಮಿಕವಾಗಿ ಜೀವನ ಸೌಂದರ್ಯವನ್ನು ಹೇಳುವ ಕೃತಿಗಳು.

೪.೩ (ಅ) ಶ್ರೀಚೈತನ್ಯ ಕೀರ್ತನೆ

ಚೈತನ್ಯಪಂಥದ ಪ್ರವರ್ತಕರಾದ ಶ್ರೀಕೃಷ್ಣಚೈತನ್ಯರು ಕೀರ್ತನೆಯನ್ನು ರಚಿಸಿಲ್ಲವೆಂಬ ವಾದವೊಂದಿದ್ದರೂ, ಅವರು ಒಂದೇ ಒಂದು ಕೀರ್ತನೆಯನ್ನು ರಚಿಸಿದ್ದಾರೆಂಬ ವಾದವೂ ಬೇರೊಂದಿದೆ. ಅದರ ಸಂಗ್ರಹ ಕೀರ್ತನೆಯನ್ನು ಶ್ರೀ ಭದ್ರಗಿರಿ ಅಚ್ಯುತದಾಸರಿಂದ ಸಂಗ್ರಹಿಸಿ, ಈ ಕೆಳಗೆ ನೀಡಿದ್ದೇನೆ.

ಕೃಷ್ಣನಾಮ ಚಿಂತಾಮಣಿ ಅನಾದಿ ಚಿನ್ಮಯ, ಅನಾದಿ ಚಿನ್ಮಯ ।
ಯೇಯಿ ಕೃಷ್ಣಸೇಯಿ ನಾಮ ಏಕತತ್ವಹಯ, ಏಕ ತತ್ವಹಯ, ಏಕ ತತ್ವಹಯ ॥
ಚೈತನ್ಯ ವಿಗ್ರಹ ನಾಮ ನಿತ್ಯ ಶುದ್ಧ ಸತ್ವ
ನಾಮ ನಾಮಿ ಭಿನ್ನ ನಯೇ ನಿತ್ಯ ಮುಕ್ತ ತತ್ವ ॥
ಕೃಷ್ಣ ನಾಮ ಕೃಷ್ಣ ಹೈತೆ ಸರ್ವದಾ ಅಭೇದ
ನಾಮ ನಾಮಿ ಏಕ ವಸ್ತು ನಾಹಿಕಾ ಪ್ರಭೇಧ ॥
ಶ್ರೀ ಕೃಷ್ಣ ಗೋವಿಂದ ಹರೇ ಮುರಾರೇ
ಹೇ ನಾಥ ನಾರಾಯಣ ವಾಸುದೇವ ॥[೨೧]

(ಕೃಷ್ಣನಾಮವು ಚಿಂತೆಯನ್ನು ದೂರಮಾಡುವಂತಹುದು. ಆತನಿಗೂ ಆತನ ಹೆಸರಿಗೂ ಯಾವ ವ್ಯತ್ಯಾಸವನ್ನು ಕಾಣಲು ಸಾಧ್ಯವಿಲ್ಲ. ಆತನು ನಿತ್ಯಶುದ್ಧ. ಆತನಿಗೂ ಆತನ ಹೆಸರಿಗೂ ಯಾವುದೇ ಭಿನ್ನವಿಲ್ಲದುದರಿಂದ ಆತನ ನಾಮಸ್ಮರಣೆಯನ್ನು ಮಾಡುವುದು ಮುಕ್ತಿಗೆ ಸಾಧನ.)

ಈ ಕೀರ್ತನೆಯನ್ನು ಶ್ರೀಕೃಷ್ಣಚೈತನ್ಯರು ರಚಿಸಿದರೆಂಬ ಪ್ರತೀತಿಯಿದೆ. ಪ್ರಾಯಶಃ ಇಲ್ಲಿ ಕರ್ತೃವಿನ ಅಂಕಿತನಾಮವು ಇಲ್ಲದಿರುವುದರಿಂದ ಒಂದಿಷ್ಟು ಗೊಂದಲಕ್ಕೆ ಕಾರಣವಾಗಿರಬಹುದು. ಇಂತಹ ಗೊಂದಲಗಳು ದಾಸಸಾಹಿತ್ಯದಲ್ಲಿ ತೀರ ಕಡಿಮೆಯೆಂದೇ ಹೇಳಬಹುದು.

೪.೩ (ಆ) ಶಿಕ್ಷಾಷ್ಟಕ

ಚೈತನ್ಯರು ರಚಿಸಿದ 'ಶಿಕ್ಷಾಷ್ಟಕ'ವು ಅವರೇ ಕಂಡುಕೊಂಡ ಭಕ್ತಿರಸಾಮೃತಪಾನ. ಶಿಕ್ಷಾಷ್ಟಕವು ಹೆಸರೇ ಹೇಳುವಂತೆ ಎಂಟು ಶ್ಲೋಕಗಳ ಪದ್ಯಗುಚ್ಛ. ಇದರೊಳಗಿರುವ ಭಾವಪ್ರಪಂಚವು ದಾಸಸಾಹಿತ್ಯದ ಒಡಲಿನಲ್ಲಿರುವ ಸಂಗತಿಗಳನ್ನೇ ಒಳಗೊಂಡಿದೆ ಎನ್ನ ಬಹುದು.

ಶಿಕ್ಷಾಷ್ಟಕದ ಸಾರಬೋಧೆ ಎಂದರೆ ಭಗವಂತನಲ್ಲಿ ಮೊರೆಯಿಡುವುದು. 'ಅಜ್ಞಾನವನ್ನು ಕಳೆದು ಜನನ ಮರಣಗಳಿಂದ ಪಾರುಮಾಡು, ನಿನ್ನ ನಾಮಸಂಕೀರ್ತನೆಯ ಭಾಗ್ಯವನ್ನು ಕೊಡು, ಭಕ್ತಿಸೇವೆಯನ್ನು ಕರುಣಿಸು' ಎಂಬುದಾಗಿದೆ. ವಿಶೇಷವೆಂದರೆ, ದಾಸಸಾಹಿತ್ಯದಲ್ಲೂ ಇದೇ ಭಾವವನ್ನು ನಾವು ಕಾಣುತ್ತೇವೆ. 'ಹುಟ್ಟಿಸಲು ಬೇಡವಿನ್ನು, ಹುಟ್ಟಿಸಿದಕೆ ಪಾಲಿಸಿನ್ನು' ಎಂಬ ಕನಕದಾಸರ ಕೀರ್ತನೆ ಇದನ್ನೇ ಪ್ರಾರ್ಥಿಸುತ್ತದೆ. ಪುರಂದರದಾಸರ, 'ನಾ ನಿನ್ನ ಧ್ಯಾನದೊಳಿರಲು, ಮರೆಯಬೇಡ ಮನವೆ ನೀನು, ಬಿನ್ನಹಕೆ ಬಾಯಿಲ್ಲವಯ್ಯಾ' ಮುಂತಾದ ಕೀರ್ತನೆಗಳು ಚೈತನ್ಯಪಂಥದ ಆಶಯವನ್ನೇ ಹೇಳುತ್ತದೆ. ಶ್ರೀಚೈತನ್ಯರು ಹೇಳುವ 'ಹುಲ್ಲಿಗೂ ನಿಕೃಷ್ಟವೆಂಬ

ಭಾವ'ವೇ ದಾಸತ್ವದ ಜೀವನಾಡಿಯಾಗಿ ಇಲ್ಲಿ ಪರಿಣಮಿಸುತ್ತದೆ. ದಾಸಸಾಹಿತ್ಯದ 'ದಾಸದಾಸ ಕಸಗುಡಿಸುವ ದಾಸ, ದಾಸನ ಮಾಡಿಕೊ ಎನ್ನ, ಮುಂತಾದ ಕೀರ್ತನೆಗಳು ಭಗವಂತನಲ್ಲಿ ಚರಣಧೂಳಿಯಾಗುವಂತಹ ಶರಣಾಗತಿತತ್ವವನ್ನೇ ಹೇಳುತ್ತದೆ. ಒಟ್ಟಿನಲ್ಲಿ ದಾಸಕುಲಕಂಡ ಶರಣಾಗತಿ ತತ್ತ್ವವೇ ಚೈತನ್ಯರ ಶಿಕ್ಷಾಷ್ಟಕದಲ್ಲೂ ಹರಡಿದೆ.

ಚೇತೋದರ್ಪಣ ಮಾರ್ಜನಂ ಭವ ಮಹಾದಾವಾಗ್ನಿ ನಿರ್ವಾಪಣಂ
ಶ್ರೇಯಃ ಕೈರವ ಚಂದ್ರಿಕಾ ವಿತರಣಂ ವಿದ್ಯಾವಧೂ ಜೀವನಂ ।
ಆನಂದಾಂಬುಧಿ ವರ್ಧನಂ ಪ್ರತಿಪದಂ ಪೂರ್ಣಾಮೃತ ಸ್ವಾದನಂ
ಸರ್ವಾತ್ಮ ಸ್ನಪನಂ ಪರಂ ವಿಜಯತೇ ಶ್ರೀಕೃಷ್ಣ ಸಂಕೀರ್ತನಂ ॥–ಚೈತನ್ಯ ಶಿಕ್ಷಾಷ್ಟಕ

ಹಲವು ವರ್ಷಗಳಿಂದ ಹೃದಯದಲ್ಲಿ ಆವರಿಸಿದ ಕಲ್ಮಷವನ್ನು ತೊಳೆಯುವ ಹಾಗೂ ಜನನಮರಣದ ವರ್ತುಲದಿಂದ ಪಾರುಮಾಡುವ ಶ್ರೀಕೃಷ್ಣ ಸಂಕೀರ್ತನಕ್ಕೆ ಜಯವಾಗಲಿ. ಈ ಸಂಕೀರ್ತನಾಂದೋಲನವು ಚಂದ್ರನ ಬೆಳದಿಂಗಳಿನಂತೆ ಅನುಗ್ರಹ ಪ್ರದಾನವಾಗಿರಲಿ. ಅಲ್ಲದೆ, ಆಧ್ಯಾತ್ಮಿಕ ಜೀವನದಲ್ಲಿ ಜ್ಞಾನವೇ ಜೀವಾಳವಾಗಿ, ಆನಂದವು ಸಾಗರವಾಗಿ ವೃದ್ಧಿಸಲಿ. ಈ ಸಂಕೀರ್ತನೆಯು ಅಮೃತದ ಸವಿಯಂತೆ ಆಸ್ವಾದವಾಗಲಿ ಎಂಬುದು ಪ್ರಭು ಚೈತನ್ಯರ ಮಾನಸಿಕ ನಿಲುವು. ಇದೇ ನಿಲುವನ್ನು ಸುಮತೀಂದ್ರ ನಾಡಿಗರು ತಮ್ಮ ಕನ್ನಡ ಶಿಕ್ಷಾಷ್ಟಕದಲ್ಲಿ ಕನ್ನಡಾನುವಾದ ಗೈದಿದ್ದಾರೆ.[೨೨]

ನಾಮ್ನಾಂ ಅಕಾರಿ ಬಹುದಾ ನಿಜ ಸರ್ವ ಶಕ್ತಿಸ್ತತ್ರಾರ್ಪಿತ ನಿಯಮಿತ ಸ್ಮರಣೇನ ಕಾಲಾಃ ।
ಏತದೃಷಿ ತವಕೃಪ ಭಗವನ್ ಮಮಾಪಿ ದುರ್ದೈವಂ ಈದೃಶಮ್ ಇಹಜಾನಿ ನಾನು ರಾಗಃ ॥ ೨ ॥
–ಚೈತನ್ಯ ಶಿಕ್ಷಾಷ್ಟಕ

ಶ್ರೀಕೃಷ್ಣನೇ...! ಸಮಸ್ತ ಜೀವಿಗಳಿಗೂ ಅನುಗ್ರಹಕಾರಕ ಶಕ್ತಿ ಎಂದರೆ ಅದು ನಿನ್ನ ಪವಿತ್ರನಾಮ. ಹಾಗಾಗಿರುವುದರಿಂದಲೇ ನಿನಗೆ ಅಷ್ಟೋತ್ತರ ಶತನಾಮಾವಳಿ. ಪ್ರತಿಯೊಂದು ನಾಮದಲ್ಲೂ ವಿಶೇಷ ಆಧ್ಯಾತ್ಮಿಕಶಕ್ತಿ. ನಿನ್ನ ಸ್ಮರಣೆಯನ್ನು ಸಮೀಪಿಸುವ ಸಾಮರ್ಥ್ಯವನ್ನು ಕರುಣೆಯಿಂದ ಅನುಗ್ರಹಿಸಿದ್ದಿ. ಆದರೆ, ಆ ನಾಮಾವಳಿಗಳಲ್ಲಿ ಆಕರ್ಷಣೆ ಕಾಣದೆ ಸೊರಗಿರುವೆನೆಂಬುದು ಚೈತನ್ಯರ ಆತ್ಮಾವಲೋಕನ.

ತೃಣಾದಪಿ ಸುನೀ ಚೇನ ತರೋರಪಿ ಸಹಿಷ್ಣುನಾ ।
ಅಮಾನಿನ ಮಾನದೇನ ಕೀರ್ತನಾಯಃ ಸದಾಹರಿಃ ॥ ೩ ॥ –ಚೈತನ್ಯ ಶಿಕ್ಷಾಷ್ಟಕ

ತಾನು ಹುಲ್ಲುಕಡ್ಡಿಗಿಂತಲೂ ಕನಿಷ್ಟವೆಂಬ ಭಾವನೆಯಿಂದ, ವಿನಮ್ರತೆಯಿಂದ ಭಗವಂತನ ನಾಮೋಚ್ಛಾರಣೆ ಮಾಡಬೇಕು. ಅಹಂಕಾರವನ್ನು ಬದಿಗಿಟ್ಟು ಮುರಕ್ಕಿಂತಲೂ ಹೆಚ್ಚು ಸಹನಾಶೀಲನಾಗಬೇಕು. ಗೌರವವನ್ನು ನೀಡಲು ಮನಬದ್ಧವಾಗಬೇಕು. ಈ ರೀತಿಯಲ್ಲಿ ಮಾತ್ರ ಭಗವಂತನ ಪುಣ್ಯನಾಮಸ್ಮರಣೆ ಸತತವಾಗಿ ಮಾಡಲು ಸಾಧ್ಯವೆಂಬುದು ಚೈತನ್ಯರ ಕಲ್ಪನೆ.

ನ ಧನಂ ನ ಜನಂ ನ ಸುಂದರೀಂ ಕವಿತಾಂ ವಾ ಜಗದೀಶ ಕಾಮಯೇ ।
ಮಮ ಜನ್ಮನೀ ಜನ್ಮನೀಶ್ವರೇ ಭವತಾದ್ಭಕ್ತಿ ರಹೈತುಕೀತ್ವಯೀ ॥ ೪ ॥ –ಚೈತನ್ಯ ಶಿಕ್ಷಾಷ್ಟಕ

ಚೈತನ್ಯರಿಗೆ ಇಲ್ಲಿ ಸಂಪತ್ತಿನ ಲಾಲಸೆಯಿಲ್ಲ, ಸುಂದರ ಸ್ತ್ರೀಯರ ಬಯಕೆಯಿಲ್ಲ, ಶಿಷ್ಯಸಂಪತ್ತೂ ನನಗೆ ಬೇಕಾಗಿಲ್ಲ. ನನಗೆ ಬೇಕಾಗಿರುವುದು ನಿಷ್ಕಾಮಭಕ್ತಿ. ಇದು ಚೈತನ್ಯರ ಲೌಕಿಕದ ನಿರಾಸಕ್ತಿಯನ್ನು ತೋರಿಸುತ್ತದೆ. ಇಂತಹ ನಿಷ್ಕಾಮಭಕ್ತಿಯನ್ನು ದಾಸ ಹಾಗೂ ವಚನಪಂಥಗಳೂ ಪ್ರಕಟಿಸಿದ್ದಿದೆ. 'ತಪವ ನಾನರಿಯೆನು ಜಪವ ನಾನರಿಯೆನು', 'ಕರಿಯನಿತ್ತಡೆ ಒಲ್ಲೆ ಸಿರಿಯನಿತ್ತಡೆ ಒಲ್ಲೆ, ಹಿರಿದಪ್ಪ ರಾಜ್ಯವನಿತ್ತಡೆವೊಲ್ಲೆ, ನಿನ್ನ ಶರಣರ ಸೂಳ್ನುಡಿಯ ಒಂದರೆಘಳಿಗೆಯಿತ್ತಡೆ ನಿನ್ನನಿತ್ತೆ ಕಾಣಾ' ಎಂಬ ರಚನೆಗಳೆಲ್ಲಾ ಲೌಕಿಕದ ನಿರಾಸಕ್ತಿಯನ್ನೇ ಪ್ರತಿಪಾದಿಸುತ್ತದೆ.

ಆಯಿ ನಂದತನುಜಾ ಕಿಂಕರಂ ಪತಿತಂ ಮಾಂ ವಿಷಮೇ ಭವಾಂಬುಧೌ ।
ಕೃಪಯಾ ತವ ಪಾದ ಪಂಕಜ ಸ್ಥಿತ ಧೂಲೀ ಸದೃಶಂ ವಿಂಚಿತಯಾ ॥ ೫ ॥-ಚೈತನ್ಯ ಶಿಕ್ಷಾಷ್ಟಕ

ಹೇ ನಂದಕುಮಾರನೇ, ನಾನು ನಿನ್ನ ಕಿಂಕರನಾಗಿದ್ದರೂ ಭವಭವಾಬ್ಧಿಯನ್ನು ದಾಟಿಲ್ಲ. ಈ ಮೃತ್ಯು ಸಾಗರದಿಂದ ನನ್ನನ್ನು ನೀನು ಮೇಲೆತ್ತಿ ನಿನ್ನ ಚರಣದ ಧೂಳಿನ ಕಣವನ್ನಾಗಿಸಬೇಕೆಂಬುದು ಚೈತನ್ಯರ ಬೇಡಿಕೆ. ಇದೇ ಬೇಡಿಕೆಯನ್ನು ಪುರಂದರದಾಸರೂ ಕೂಡ 'ನಾ ನಿನ್ನ ದಾಸನಯ್ಯಾ' ಎನ್ನುವ ಮೂಲಕ ಕೇಳಿಕೊಳ್ಳುತ್ತಾರೆ.

ನಯನಂ ಗಲದಶ್ರುಧಾರಯಾ ವದನಂ ಗದ್ಗದರುದ್ಧಯಾಗಿರಾ ।
ಪುಲಕೈರ್ನಿಚಿತಂ ವಪು ಕದಾ ತವ ನಾಮ ಗ್ರಹಣೇ ಭವಿಷ್ಯತಿ ॥ ೬ ॥-ಚೈತನ್ಯ ಶಿಕ್ಷಾಷ್ಟಕ

ಕೃಷ್ಣನೇ... ! ನಿನ್ನ ಸಂಕೀರ್ತನೆಯಿಂದ ನನ್ನ ಕಣ್ಣುಗಳಲ್ಲಿ ಪ್ರೇಮಭಾಷ್ಪವು ಸುರಿಯುವುದು ಯಾವಾಗ ? ನಾನು ಗದ್ಗದಿತನಾಗುವುದು ಯಾವಾಗ ?. ಮೈಮುನ ರೋಮಾಂಚನವಾಗುವುದು ಯಾವಾಗ ? ಇದು ಭಗವಂತನನ್ನು ಪ್ರೇಮಿಸಲು ಹೊರಟ ಚೈತನ್ಯ ಮಹಾಪ್ರಭುಗಳ ಪ್ರೇಮೋನ್ಮಾದ. ಇಂತಹ ಭಾವಾತಿರೇಕಕ್ಕೆ ದಾಸರುಗಳು ಒಳಗಾಗದವರೇನಲ್ಲ. ಆ ನೆಲೆಯಲ್ಲೇ 'ಕಂಗಳಿನ್ಯಾತಕೋ ಕಾವೇರಿ ರಂಗನ ನೋಡದಾ...' ಎಂಬ ಭಾವಾವೇಶಕ್ಕೆ ಒಳಗಾದವರು ದಾಸಪಂಥದವರು.

ಯುಗಾಯಿತಂ ನಿಮೇಷೇಣ ಚಕ್ಷುಷಾ ಪ್ರಾವೃಷಾಯಿತಂ ।
ಶೂನ್ಯಾಯಿತಂ ಜಗತ್ ಸರ್ವಂ ಗೋವಿಂದ ವಿರಹೇಣ ಮೇ ॥ ೭ ॥ -ಚೈತನ್ಯ ಶಿಕ್ಷಾಷ್ಟಕ

ದೇವನೇ... ನಾನು ನಿನ್ನ ವಿರಹದಲ್ಲಿ ಮುಳುಗಿರುವ ಈ ಸಮಯದ ಪ್ರತಿಯೊಂದು ಕ್ಷಣವೂ ಹನ್ನೆರಡು ವರುಷಗಳಂತೆ ತೋರುತ್ತಿದೆ. ಕಣ್ಣೀರು ಬಿರುಮಳೆಯಂತೆ ಸುರಿಯುತ್ತಿದೆ. ನೀನಿಲ್ಲದ ಈ ಪ್ರಪಂಚವು ನನಗೆ ಶೂನ್ಯವಾಗಿ ತೋರುತ್ತಿದೆ. ದಾಸ ಶ್ರೇಷ್ಠರುಗಳೂ ಕೂಡ, 'ಕ್ಷಣವೊಂದು ಯುಗವಾಗಿ ತೃಣಕ್ಕಿಂತ ಕಡೆಯಾಗಿ ಎಣಿಸಲಾರದ ಭವದಿ ನೊಂದೆನಾನು। ಸನಕಾದಿಮುನಿವಂದ್ಯ ವನಜಸಂಭವಜನಕ ಫಣಿಶಾಹಿ ಪ್ರಹ್ಲಾದಗೊಲಿದ ಶ್ರೀಕೃಷ್ಣ' ಎಂಬುದಾಗಿ ಹಾಡಬೇಕಾದರೆ ಚೈತನ್ಯರಂತೆಯೆ ದಾಸಕುಲವೂ ಭಾವತೀವ್ರತೆಗೆ ಒಳಗಾಗಿದ್ದಾರೆಂಬುದು ಸತ್ಯ.

ಆಶ್ಲಿಷ್ಯ ವಾ ಪಾದ ರತಂ ಪಿನಷ್ಟುಮಾವ್ ಆದರ್ಶನಂ ಮರ್ಮಾ ಹತಮ್ ಕರೋತು ವಾ ।
ಯಥಾತಥಾ ವಾ ವಿಧಧಾತು ಲಮ್ಪತೋ ಮಥ್ಪ್ರಾಣನಾಥಸ್ತು ಏವ ನ ಪರಃ ॥ ೮ ॥-ಚೈತನ್ಯ ಶಿಕ್ಷಾಷ್ಟಕ

ಕೃಷ್ಣನಲ್ಲದೆ ಇತರ ಸ್ವಾಮಿಯ ನಾನರಿಯೆ. ಕೃಷ್ಣನು ನನ್ನನ್ನು ಬಾಧಿಸಿದರೂ ಸರಿ, ನನ್ನ ಹೃದಯವನ್ನು ಭಗ್ನಗೊಳಿಸಿದರೂ ಸರಿ, ನನಗಂತೂ ಆತನೇ ದೇವನು. ಆತನು ಸ್ವತಂತ್ರ; ಸರ್ವತಂತ್ರ. ನಿರ್ಬಂಧವಿಲ್ಲದಿರುವ ಅವನೇ ನನಗೆ ಆರಾಧ್ಯದೈವವೆನ್ನುತ್ತದೆ. ಒಟ್ಟಿನಲ್ಲಿ ಈ ಅಷ್ಟಕಗಳ ಅಂತರಾರ್ಥವು ಕೃಷ್ಣನಿಗೋಸ್ಕರವಾಗಿ ಹಾತೊರೆಯುತ್ತದೆ. ಪ್ರಾಯಶಃ ಇದೇ ಭಾವನೆಯಿಂದ ವ್ಯಾಸರಾಯರು 'ನಿನಗಾರು ಸರಿಯಿಲ್ಲ ಎನಗನ್ಯ ಗತಿಯಿಲ್ಲ' ಎಂದು ಕೀರ್ತನೆಯನ್ನು ಹಾಡಿರಬೇಕು. 'ನಿನ್ನನಾಶ್ರಯಿಸುವೆನು ನಿಗಮಗೋಚರ ಕೃಷ್ಣ'ನೆಂದು ಪುರಂದರದಾಸರು ಬೇಡಿಕೊಂಡಿರಬೇಕು. 'ವಾಸುದೇವನ ನೆನೆದು ನೀ ಸುಖಿಯಾಗು'ಎಂದು ವಿಜಯದಾಸರು ಕೀರ್ತಿಸಿರಬೇಕು.

೪.೩ (ಇ) ಶ್ರೀಚೈತನ್ಯ ಚರಿತಾಮೃತ

'ಶ್ರೀಚೈತನ್ಯ ಚರಿತಾಮೃತ' ಎಂಬುದು ಚಾರಿತ್ರಿಕ ಕೃತಿಯಲ್ಲ. ಅದೊಂದು ಗ್ರಂಥನಾಮ. ಚರಿತಾಮೃತವಾದರೂ, ಮುಖ್ಯವಾಗಿ ಶ್ರೀಚೈತನ್ಯ ಮಹಾಪ್ರಭುಗಳ ದಿವ್ಯಗುಣ, ಮಹಿಮೆ ಮತ್ತು ಪವಾಡಗಳನ್ನು ತಿಳಿಸುವ ಸ್ತೋತ್ರಮಂಜರಿ. ಶ್ರೀಚೈತನ್ಯರ ಸಮಕಾಲೀನರಾದ ಶ್ರೀಕೃಷ್ಣದಾಸ ಕವಿರಾಜ ಗೋಸ್ವಾಮಿಗಳು 'ಚೈತನ್ಯ ಚರಿತಾಮೃತ'ದ ಕರ್ತೃ. ಇವರಿಗೆ ಶ್ರೀಚೈತನ್ಯರ ನೇರಸಂಪರ್ಕವಿಲ್ಲದಿದ್ದುದರಿಂದ ಪ್ರಭುಗಳ ನಿಕಟವರ್ತಿಗಳಾದ ರಘುನಾಥ ಗೋಸ್ವಾಮಿಗಳಿಂದ ಹೆಚ್ಚಿನ ವಿವರಗಳನ್ನು ಸಂಗ್ರಹಿಸಿ ರಚಿಸಿದ ಕೃತಿಯಿದು. ಇದು ತುಳಸೀದಾಸರ 'ರಾಮಚರಿತ ಮಾನಸ'ವನ್ನು ನೆನಪಿಸುವುದು ಮಾತ್ರವಲ್ಲದೆ, ಹೃದಯಂಗಮವಾಗಿ ಬಂಗಾಳೀಭಾಷೆಯೊಂದಿಗೆ ರಾಗತಾಳಕ್ಕೂ ಒಗ್ಗುವಂತಹುದು. ಇಲ್ಲಿ ಆದಿಲೀಲೆ (೧೭ ಅಧ್ಯಾಯಗಳು), ಮಧ್ಯಲೀಲೆ (೨೫ ಅಧ್ಯಾಯಗಳು), ಮತ್ತು ಅಂತ್ಯಲೀಲೆ (೨೦ ಅಧ್ಯಾಯಗಳು) ಗಳೆಂಬ ಮೂರು ವಿಂಗಡಣೆಗಳನ್ನು ಇಲ್ಲಿ ಕಾಣುತ್ತೇವೆ.

'ಚೈತನ್ಯ ಚರಿತಾಮೃತ'ದ ಮೊದಲ ಆದಿಲೀಲೆಯು ಪರಮಸತ್ಯ ಸ್ವರೂಪನಾದ ಭಗವಂತನನ್ನು ಕುರಿತಾದುದು. ಅನಂತರದ ಶ್ಲೋಕಗಳು ವೃಂದಾವನದ ವಿಗ್ರಹರೂಪಿಗಳಾದ ಶ್ರೀರಾಧಾಮದನ ಮೋಹನ, ಶ್ರೀರಾಧಾಗೋವಿಂದದೇವ ಮತ್ತು ಶ್ರೀರಾಧಾಗೋಪೀನಾಥನ ಗುಣಚಿತ್ರಗಳನ್ನು ತಿಳಿಹೇಳುತ್ತವೆ. ಪ್ರಥಮಾಧ್ಯಾಯದಲ್ಲಿ ಹೆಚ್ಚು ಪ್ರಾಮುಖ್ಯತೆಯಿರುವುದು ಪರಮಸತ್ಯನ ಸಾಂಕೇತಿಕ ನಿರೂಪಣೆಗೆ. ಇಲ್ಲಿ ಪರಮಸತ್ಯನ ಅಭಿವ್ಯಕ್ತಿಯಲ್ಲಿ ಅನನ್ಯತೆಯೇ ವಿಜೃಂಭಿಸುತ್ತದೆ. ಶ್ರೀಕೃಷ್ಣ ಮತ್ತು ಆತನ ಅಂಶವಿಸ್ತಾರಗಳೆಲ್ಲ ಶಕ್ತಿಪೂರ್ಣವಾದ ಪರಮಸತ್ಯದ ವರ್ಗಕ್ಕೆ ಸೇರಿದವು. ಆತನ ಭಕ್ತರು ಮತ್ತು ನಿತ್ಯಸಹಚರರೆಲ್ಲ ಆತನ ಶಕ್ತಿಸ್ವರೂಪರು. ಇಲ್ಲಿ ಶಕ್ತಿ ಮತ್ತು ಶಕ್ತಿವಂತರು ಮೂಲಭೂತವಾಗಿ ಒಂದೇ ಆಗಿದ್ದರೂ ವ್ಯಾಪಾರಗುಣಗಳು

ಬೇರೆಬೇರೆ ದಾರಿಯಲ್ಲಿ ಸಾಗುವುದರಿಂದ ಪರಮಸತ್ಯನ ಅಭಿವ್ಯಕ್ತಿಯಲ್ಲಿ ಅನನ್ಯತೆಯನ್ನು ಕಾಣುತ್ತೇವೆ. ಇದನ್ನೇ 'ಅಚಿಂತ್ಯಾಭೇದಾಭೇದ' ತತ್ವ ಎಂದು ಕರೆಯಲಾಗಿದೆ.

ಚರಿತಾಮೃತದ ಪ್ರಾಥಮಿಕ ಅಧ್ಯಾಯಗಳಲ್ಲಿ ಚೈತನ್ಯರ ಜನ್ಮಕ್ಕೆ ಬಾಹ್ಯಕಾರಣದ ವಿಚಾರವಿದೆ. ಚೈತನ್ಯರ ತಂದೆಯ ಸಮಾಕಾಲೀನರಾದ ಅದ್ವೈತಾಚಾರ್ಯರು, ಪರಮಪುರುಷನಾದ ಶ್ರೀಕೃಷ್ಣನಿಗೆ ಭಕ್ತಿಸೇವೆಯನ್ನು ಸಲ್ಲಿಸುವುದರಲ್ಲಿ ಈ ಜಗತ್ತು ಮೌನವಾದಾಗ, ಶ್ರೀಕೃಷ್ಣನನ್ನೇ ಸ್ತುತಿಸಿ, ಚೈತನ್ಯಪ್ರಭುಗಳಾಗಿ ಆವಿರ್ಭವಿಸುವಂತೆ ಬೇಡಿಕೊಳ್ಳುತ್ತಾರೆ. ಪರಿಣಾಮವಾಗಿ ಚೈತನ್ಯ ಮಹಾಪ್ರಭುಗಳ ಅವತಾರವೂ ನಡೆಯುತ್ತದೆ. ಹರೇಕೃಷ್ಣ ಮಹಾಮಂತ್ರದ ವಿಶೇಷ ಸಂಕೀರ್ತನೆಯೂ ಜಗತ್ತಿನಾದ್ಯಂತವಾಗಿ ಮೊಳಗುತ್ತದೆ.

ಶ್ರೀಕೃಷ್ಣನು ತನ್ನ ಲೀಲೋತ್ಸವಕ್ಕೆ ಮಾಡಿದ ಪ್ರಥಮ ವಿಸ್ತರಣೆಯೆಂದರೆ ಬಲರಾಮ. ಇಲ್ಲಿ ಚೈತನ್ಯರ ಸಂಕೀರ್ತನಲೋಕಕ್ಕೆ ಬಲರಾಮನೇ ನಿತ್ಯಾನಂದಪ್ರಭುಗಳಾಗಿ ಜನ್ಮತಾಳುತ್ತಾನೆ. ಇಲ್ಲಿ ಇವರೇ ಸಂಕರ್ಷಣ ; ಮಹಾ ಸಂಕರ್ಷಣರು. ಇಲ್ಲಿಯ ವೈಕುಂಠಲೋಕದ ಕ್ಷೀರಸಮುದ್ರದಲ್ಲಿ ಎರಡು ಶ್ವೇತದ್ವೀಪಗಳ ಕುರಿತು ವರ್ಣನೆಯಿದೆ. ಪ್ರಥಮ ಶ್ವೇತದ್ವೀಪದಲ್ಲಿ ಕೃಷ್ಣನ ಆವಾಸಸ್ಥಾನವಿದೆ. ವೃಂದಾವನಧಾಮಕ್ಕೆ ಅನುರೂಪವಾಗಿದೆ. ಇಲ್ಲಿ ಕೃಷ್ಣನು ತನ್ನ ಪ್ರೇಮಲೀಲಾವಿನೋದಕಾಗಿ ಅವತರಿಸುತ್ತಾನೆ. ಎರಡನೆಯ ಶ್ವೇತದ್ವೀಪದಲ್ಲಿ ಶೇಷರೂಪವಾಗಿ ದೇವೋತ್ತಮನಿರುತ್ತಾನೆ.

ಅಗತಿ ಏಕಂ ನತ್ವಾಹೀನಾರ್ಥಾದಿಕ ಸಾಧಕಂ ।
ಶ್ರೀಚೈತನ್ಯಂ ಅಚ್ಯುತೇಸ್ಯ ಪ್ರೇಮ-ಭಕ್ತಿ ವದಾನ್ಯತಾ ॥ -ಚೈತನ್ಯ ಚರಿತಾಮೃತ

ಪ್ರತಿಯೊಬ್ಬನೂ ಧರ್ಮಾರ್ಥಕಾಮಮೋಕ್ಷಕ್ಕಾಗಿ ಹಾತೊರೆದರೆ ಶ್ರೀಚೈತನ್ಯ ಮಹಾಪ್ರಭುಗಳಂತೂ ಮೋಕ್ಷಕ್ಕಿಂತ ಮಿಗಿಲಾದ ಭಕ್ತಿಸೇವೆಗೆ ಮತ್ತು ಲೋಕೋತ್ತರವಾದ ಪ್ರೇಮಕ್ಕೆ ಪ್ರಾಮುಖ್ಯತೆ ನೀಡುತ್ತಾರೆ. ಇಲ್ಲಿ ಸಮಸ್ತ ಜೀವ ಮಾನವರಿಗೆ ಅಂತಿಮ ಶ್ರೇಯಸ್ಸೆಂದರೆ ದೇವೋತ್ತಮ ಪ್ರೇಮವೇ ಆಗಿರುತ್ತದೆ.

ಆದಿಲೀಲೆಯ ಮೊದಲ ಹದಿನೇಳು ಅಧ್ಯಾಯಗಳು ಪೂರ್ಣಕೃತಿಗೊಂದು ಪ್ರಸ್ತಾವನೆಯಾಗಿದೆ. ವೇದಮೂಲವನ್ನು ಸಾಕ್ಷಿಯಾಗಿಟ್ಟುಕೊಂಡು, ಕೃಷ್ಣದಾಸ ಕವಿರಾಜ ಗೋಸ್ವಾಮಿಗಳು ಚೈತನ್ಯ ಮಹಾಪ್ರಭುಗಳನ್ನು ಕಲಿಯುಗದಲ್ಲಾದ ಶ್ರೀಕೃಷ್ಣಾವತಾರವೆಂದು ಹೇಳುತ್ತಾರೆ. ಅಲ್ಲದೆ ಚೈತನ್ಯ ಮಹಾಪ್ರಭುಗಳು ಶ್ರೀಕೃಷ್ಣನಿಗೆ ಸಾಮ್ಯರಾಗಿರುವುದಕ್ಕೆ ಆಧಾರವನ್ನು ನೀಡಿ ಸಮರ್ಥಿಸುತ್ತಾರೆ. ಅಧೋಗತಿಗಿಳಿದಿರುವ ಆತ್ಮಗಳಿಗೆ ದೇವರ ಪರಿಶುದ್ಧ ಪ್ರೀತಿಯನ್ನು ಹಂಚಲು ಮುಂದಾಗುತ್ತಾರೆ. ಶ್ರೀಹರಿಸಂಕೀರ್ತನ ಆಂದೋಲನದ ಮೂಲಕವಾಗಿ ಮುಸಲ್ಮಾನ ಸರ್ಕಾರದ ದಬ್ಬಾಳಿಕೆಯ ವಿರುದ್ಧವಾಗಿ ಜಾಗೃತಿಯನ್ನು ಮೂಡಿಸುವ ಪ್ರಯತ್ನ ಪ್ರಥಮಾಧ್ಯಾಯದಲ್ಲಿ ನೆರವೇರಿದೆ.

ಈ ಮೂರು ಲೀಲೆಗಳಲ್ಲಿ ಎರಡನೆಯ 'ಮಧ್ಯಲೀಲೆ'ಯು ಹೆಚ್ಚು ವಿಸ್ತಾರವಾದುದು. ಇಲ್ಲಿ ಶ್ರೀಚೈತನ್ಯ ಮಹಾಪ್ರಭುಗಳು ಸರ್ವಪರಿತ್ಯಾಗಿಯಾಗಿ, ಭಿಕ್ಷುವಾಗಿ, ಗುರುವಾಗಿ, ದಾರ್ಶನಿಕರಾಗಿ, ಧರ್ಮೋಪದೇಶಕರಾಗಿ

ಮತ್ತು ಯೋಗಿಯಾಗಿ ಸಮಗ್ರ ಭಾರತವನ್ನು ಪ್ರವಾಸಮಾಡಿದ ವಿವರವಿದೆ. ಪ್ರವಾಸದ ಈ ಆರು ವರ್ಷಗಳಲ್ಲಿ, ಶ್ರೀಚೈತನ್ಯ ಮಹಾಪ್ರಭುಗಳು ತಮ್ಮ ಉಪದೇಶಗಳನ್ನು ತಮ್ಮ ಪ್ರಮುಖ ಶಿಷ್ಯರಿಗೆ ನೀಡುತ್ತಾರೆ. ತಮ್ಮ ಕಾಲದ ಅನೇಕ ಸುಪ್ರಸಿದ್ಧ ದಾರ್ಶನಿಕರು ಮತ್ತು ಶಾಸ್ತ್ರಜ್ಞರ (ಶಂಕರ ಅನುನಾಯಿಗಳು, ಬೌದ್ಧರು ಮತ್ತು ಮುಸ್ಲಿಮರು) ಜೊತೆ ವಾದಮಾಡಿ ಅವರನ್ನು ಪರಿವರ್ತಿಸಿ, ಶ್ರೀಹರಿಸಂಕೀರ್ತನಾಂದೋಲನಕ್ಕೆ ಬರಮಾಡಿಸುತ್ತಾರೆ. ತಮ್ಮ ಸಂಚಾರದಲ್ಲಿ ಒರಿಸ್ಸಾದ ಪುರಿಜಗನ್ನಾಥನ ಬೃಹತ್‌ರಥಯಾತ್ರೆಯೊಂದರಲ್ಲಿ ಪವಾಡವನ್ನು ತೋರಿಸಿ, ಹರಿಸರ್ವೋತ್ತಮತ್ವದ ವಿಶೇಷತೆಯನ್ನು ಜನತೆಗೆ ತಿಳಿಸಿಕೊಡುವ ಪ್ರಯತ್ನವಲ್ಲದೆ ಇತರ ಅನೇಕ ವಿಚಾರಗಳು ಮಧ್ಯಲೀಲೆಯಲ್ಲಿ ಅಡಕವಾಗಿದೆ.

'ಅಂತ್ಯಲೀಲೆ'–ಶ್ರೀಚೈತನ್ಯರ ಭೌತಿಕ ಅಸ್ತಿತ್ವದ ಕೊನೆಯ ಹದಿನೆಂಟು ವರ್ಷಗಳ, ಪುರಿಜಗನ್ನಾಥ ದೇವಾಲಯದ ಹತ್ತಿರ ಏಕಾಂತವಾಗಿ ಕಳೆದ ಸಮಯವನ್ನು ಕುರಿತದ್ದಾಗಿದೆ. ಇಲ್ಲಿ ಶ್ರೀಚೈತನ್ಯರಿಂದ ಸನಾತನ ಗೋಸ್ವಾಮಿಗಳ ಚರ್ಮರೋಗ ನಿವಾರಣೆ, ಬಂಗಾಳ ಬ್ರಾಹ್ಮಣನೊಬ್ಬನ ನಾಟಕಕೃತಿಯಲ್ಲಿದ್ದ ಮಾಯಾವಾದ ಸಿದ್ಧಾಂತದ ತಿರುಳನ್ನು ಸ್ವರೂಪದಾಮೋದರ ಗೋಸ್ವಾಮಿಗಳು ಗುರುತಿಸಿ ಸರಿಪಡಿಸುವಿಕೆ, ಪುರಿಜಗನ್ನಾಥ ದೇವಾಲಯದ ಸಿಂಹದ್ವಾರದಲ್ಲಿ ಶ್ರೀಲ ರಘುನಾಥದಾಸರು ಭಿಕ್ಷೆಯನ್ನು ಸ್ವೀಕರಿಸುವುದು, ಗೋಪೀನಾಥ ಪಟ್ನಾಯಕನ ಗಲ್ಲುಶಿಕ್ಷೆ ನಿವಾರಣೆ, ಬ್ರಹ್ಮಹರಿದಾಸ ಠಾಕೂರರ ದೇಹತ್ಯಾಗ, 'ವಲ್ಲಭ ಭೋಗ' ಆಹಾರದ ವರ್ಣನೆ, ಶ್ರೀಚೈತನ್ಯರು ಯಮುನಾನದಿಯನ್ನೇ ಸಮುದ್ರವೆಂದು ಭಾವಿಸುವ ದೇವೋನ್ಮಾದ, ಶಿಕ್ಷಾಷ್ಟಕದ ಆಸ್ವಾದನೆ, ಜಯದೇವನ 'ಗೀತ ಗೋವಿಂದ', ಬಿಲ್ವಮಂಗಲರ 'ಕೃಷ್ಣ ಕರ್ಣಾಮೃತ' ಕೃತಿಗಳಿಂದ ಶ್ಲೋಕಗಾಯನ ಇವೆಲ್ಲವು ಕೃತಿಯ ಕೊನೆಯ ಭಾಗದಲ್ಲಿ ಬರುವಂತಹುದು.

ಒಟ್ಟಿನಲ್ಲಿ, ಈ ಕೃತಿಯು ಚೈತನ್ಯರ ಪೂರ್ಣಬದುಕಿನ ವಿಸ್ತೃತರೂಪ. ಆದರೂ ಇಲ್ಲಿ ಮಂಡಿತವಾಗಿರುವ ಅಚಿಂತ್ಯಾಭೇದಾಭೇದವೆಂಬ ತಾತ್ವಿಕತೆ, ಹರಿಸರ್ವೋತ್ತಮತ್ವ, ಪಂಚತತ್ತ್ವ, ಪಂಚಭಾವ, ಶರಣಾಗತಿ, ರಾಧಾಮಾಧವ ಪ್ರೇಮವಲ್ಲದೆ, ಪ್ರಾಕೃತಿಕ ಮೃಗಪಕ್ಷಿ ಪ್ರೇಮ, ಚೈತನ್ಯಾನುಗ್ರಹಗಳೆಲ್ಲವೂ ಗೌಡೀಯಪಂಥದ ಪೂರ್ಣಸ್ವರೂಪವನ್ನು ತಿಳಿಸುತ್ತದೆ.

೪.೩. (ಈ) ಗುರ್ವಾಷ್ಟಕ

ಗುರ್ವಾಷ್ಟಕವು ಶಿಕ್ಷಾಷ್ಟಕದಂತೆ ಕೂಡ ಎಂಟು ಪದ್ಯಗಳಿಂದ ಕೂಡಿದ ಗುಚ್ಛ. ಇದರ ಕರ್ತೃ ಬಂಗಾಳದ ನದಿಯಾ ಜಿಲ್ಲೆಯವರಾದ ಶ್ರೀ ವಿಶ್ವನಾಥ ಚಕ್ರವರ್ತಿಗಳು. ಹೆಸರೇ ಹೇಳುವಂತೆ, ಗುರುವಿನ ಮಹಿಮೆಗಳ ಪ್ರಶಂಸೆಯನ್ನು ಈ ಕೃತಿಯು ಮಾಡುತ್ತದೆ. ಪ್ರಾರ್ಥನಾರೂಪದಲ್ಲಿರುವ ಈ ಕಾವ್ಯವನ್ನು ಪ್ರಭುಪಾದರ ಆದೇಶದ ಮೇರೆಗೆ ಎಲ್ಲಾ ಇಸ್ಕಾನ್ ದೇವಾಲಯಗಳಲ್ಲಿಯೂ ದಿನದ ಮೊದಲ ಪೂಜೆಯ ಮಂಗಳಾರತಿಯ ಸಂದರ್ಭದಲ್ಲಿ ಹಾಡಲಾಗುತ್ತದೆ.

ಸಂಸಾರವೆಂಬ ದಾವಾನಲದಿಂದ ಪಾರಾಗಲು ಗುರುವಿನ ಬಳಿಯಲ್ಲಿ ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ. ಹಾಗಾಗಿ ಇಲ್ಲಿಯ ಗುರುವು ಕಲ್ಯಾಣಸಾಗರನಾಗುತ್ತಾನೆ, ಕಾರುಣ್ಯಮೇಘವಾಗುತ್ತಾನೆ, ರಾಧಾಮಾಧವರಲ್ಲಿ ಮಾಧುರ್ಯ ಲೀಲಾಗುಣರೂಪವನ್ನು ಆಸ್ವಾದಿಸಿದವನಾಗುತ್ತಾನೆ. ಆದುದರಿಂದ ಇಲ್ಲಿಯ ಭಕ್ತರಿಗೆ ಇಂತಹ ಗುರುವು ಸದ್ಗುರುವಾಗಿ ಕಾಣುತ್ತಾನೆ. ಅವನಿಗೆ ಶರಣು ಹೋಗುತ್ತಾರೆ.

ಮುಕ್ತಿಯ ಮೂರು ಮಾರ್ಗಗಳಾದ ಕರ್ಮ, ಭಕ್ತಿ ಮತ್ತು ಜ್ಞಾನಗಳಲ್ಲಿ ಚೈತನ್ಯಸಾಹಿತ್ಯ ಸಂದೇಶವು ಭಕ್ತಿಮಾರ್ಗಕ್ಕೆ ಸಂಬಂಧಿಸಿದ್ದು. ಆದುದರಿಂದ ಅದು ರೌದ್ರ, ವೀರ, ಭೀಭತ್ಸ, ಶೋಕ, ಅದ್ಭುತ, ಹಾಸ್ಯ ಹಾಗೂ ಕರುಣ ರಸಗಳನ್ನು ಮೀರಿನಿಲ್ಲುತ್ತದೆ. ದೇಹ, ಮಾತು ಮತ್ತು ಮನಸ್ಸನ್ನು ಶುದ್ಧೀಕರಿಸಿ, ವ್ಯಕ್ತಿಯನ್ನು ಭಾಗವತನನ್ನಾಗಿ ಪರಿವರ್ತಿಸಿ, ಭಗವಂತನ ಸಾನ್ನಿಧ್ಯದತ್ತ ಕೊಂಡೊಯ್ಯುತ್ತದೆ. ಭಕ್ತಿಧಾರಣೆಯೇ ಸರ್ವಶ್ರೇಷ್ಠವಾದ ಮಾನವಧರ್ಮವೆಂದೂ, ಅಧ್ಯಾತ್ಮಿಕ ಸಾಧನೆಗಳೇ ಉತ್ತುಂಗವೆಂದೂ ಗುರ್ವಾಷ್ಟಕವು ಸಮಾಜಕ್ಕೆ ಸಂದೇಶವನ್ನೀಡುತ್ತದೆ.

೪.೪ ದಕ್ಷಿಣಭಾರತದಲ್ಲಿ ಶ್ರೀಚೈತನ್ಯರ ಸಂಕೀರ್ತನಾಯಾತ್ರೆ

ಬಂಗಾಳದಲ್ಲಿ ಹುಟ್ಟಿದ ಶ್ರೀಚೈತನ್ಯ ಮಹಾಪ್ರಭುಗಳು ಶ್ರೀಹರಿಸಂಕೀರ್ತನೆಯನ್ನು ವಿಶ್ವದ ಮೂಲೆ ಮೂಲೆಗೂ ಕೊಂಡೊಯ್ಯುವ ಕನಸನ್ನು ಕಂಡವರು. ಹಾಗಾಗಿ ಅವರ ಆಧ್ಯಾತ್ಮಿಕ ಪ್ರವಾಸ ಉತ್ತರಭಾರತಕ್ಕೆ ಮಾತ್ರ ಮೀಸಲಾಗಿರದೆ ಅದು ಅಲ್ಲಿಂದ ಸಂಚಲನಗೊಂಡಿದ್ದು ದಕ್ಷಿಣಭಾರತದಕಡೆಗೆ. ಚೈತನ್ಯರು ದಕ್ಷಿಣಭಾರತದ ಕಡೆಗೆ ಬಂದಿರುವುದು ಮತ್ತು ಅಲ್ಲಿ ನಡೆದ ಘಟನಾವಳಿಗಳು ಸತ್ಯವಾದರೂ ಕಾಲನಿರ್ಣಯದಲ್ಲಿ ಸಮರ್ಪಕತೆ ಕಾಣಿಸುವುದಿಲ್ಲ.

ತಬೇ ತ ಕರಿಲಾ ಪ್ರಭು ದಕ್ಷಿಣಗಮನ ।
ಕೂರ್ಮ ಕ್ಷೇತ್ರೇ ಕೈಲ ವಾಸುದೇವ ವಿಮೋಚನ ॥[೨೩]

ಚೈತನ್ಯರು ನೀಲಾಚಲದಿಂದ ಹೊರಟು ದಕ್ಷಿಣಭಾರತದ ಯಾತ್ರೆಯನ್ನು ಆರಂಭಿಸಿದಾಗ ಕೃಷ್ಣದಾಸನೆಂಬ ಬ್ರಾಹ್ಮಣನನ್ನು ಜೊತೆಯಲ್ಲಿ ಕರೆದುಕೊಂಡಿದ್ದರು. ಅವರ ಯಾತ್ರೆ ಪ್ರಾರಂಭವಾದುದು ಕೂರ್ಮಕ್ಷೇತ್ರದರ್ಶನದ ಮೂಲಕ. ಅಲ್ಲಿ ವಾಸುದೇವನೆಂಬ ಬ್ರಾಹ್ಮಣನಿಗೆ ವಿಮುಕ್ತಿಯನ್ನು ದೊರಕಿಸಿಕೊಟ್ಟು ರಾಜಮಹೇಂದ್ರಿಯನ್ನು ಪ್ರವೇಶಿಸುತ್ತಾರೆ. ಅದು ಗೌತಮಋಷಿಗಳು ವಾಸಿಸುತ್ತಿದ್ದ ಪುಣ್ಯತಾಣ. ಅಲ್ಲಿಯ 'ಗೌತಮಿ ಗಂಗಾ'ದಲ್ಲಿ ತೀರ್ಥಸ್ನಾನವನ್ನು ಮುಗಿಸಿ, 'ಅಹೋಬಲ ಕ್ಷೇತ್ರ'ಕ್ಕೆ ಪ್ರಯಾಣವನ್ನು ಬೆಳೆಸಿದರು. ಇಲ್ಲಿಯ ನರಸಿಂಹನಲ್ಲಿ ಪ್ರಾರ್ಥಿಸಿ, ಆಂಧ್ರಪ್ರದೇಶದ ಕಡಪದಿಂದ ಹತ್ತುಮೈಲು ದೂರದಲ್ಲಿರುವ 'ಸಿದ್ಧಾವಟ'ವನ್ನು ಪ್ರವೇಶಿಸಿದರು. ಅಲ್ಲಿ ಬ್ರಾಹ್ಮಣನೊಬ್ಬನ ಸತ್ಕಾರವನ್ನು ಸ್ವೀಕರಿಸಿ, 'ವೃದ್ಧಾಚಲಮ್' ('ವೃದ್ಧಕಾಶಿ'–ಅರ್ಕಾಟ ಜಿಲ್ಲೆಯ ಮಣಿಮುಖ ನದಿಯ ದಂಡೆ ಮೇಲಿದೆ)ಗೆ ಬಂದು ಅಲ್ಲಿಯ ಶಿವಾಲಯವನ್ನು ಸಂದರ್ಶಿಸಿದರು. ಅಲ್ಲಿಂದ,

ತ್ರಿಮಲ್ಲ ತ್ರಿಪದೀ ಸ್ಥಾನ ಕೈಲ ದರಶನ ।
ಸರ್ವತ್ರ ಕರಿಲ ಕೃಷ್ಣ ನಾಮ ಪ್ರಚಾರಣ ॥[೨೪]

ಹರೇಕೃಷ್ಣ ಮಹಾಮಂತ್ರದ ಸಂಕೀರ್ತನೆಯೊಂದಿಗೆ ಚೈತನ್ಯರು ಸಂದರ್ಶಿಸಿದ ಮುಂದಿನ ಕ್ಷೇತ್ರವೆಂದರೆ ತಿರುಪತಿ ತಿರುಮಲ ದೇವಸ್ಥಾನ. ಇಲ್ಲಿ ಸಂಕೀರ್ತನೆಯನ್ನು ನಡೆಸಿ, ಆಂಧ್ರ ಪ್ರದೇಶದ ಕೃಷ್ಣಾಜಿಲ್ಲೆಯಲ್ಲಿರುವ ಪಾನಕ ನರಸಿಂಹ ದೇವಾಲಯ (ಇದು ವಿಜಯವಾಡದಿಂದ ಏಳುಮೈಲು ದೂರದಲ್ಲಿರುವ ಮಂಗಲಗಿರಿ ಎಂಬ ಬೆಟ್ಟದಲ್ಲಿದೆ), ವಿಷ್ಣುಕಂಚಿಯ ಲಕ್ಷ್ಮೀನಾರಾಯಣ ದೇವಾಲಯ, ಕಾಳಹಸ್ತಿ (ತಿರುಪತಿಯಿಂದ ೨೨ ಮೈಲು ದೂರದಲ್ಲಿದೆ) ದೇವಾಲಯ, ಚಂಗಲಪೇಟೆಯಿಂದ ೯ ಮೈಲು ದೂರದಲ್ಲಿರುವ ಪಕ್ಷಿತೀರ್ಥದ ಶಿವದೇವಾಲಯ, ವೃದ್ಧಕೋಲಮ್‌ನ ಶ್ವೇತವರಾಹ ದೇವಾಲಯ, ತಂಜಾವೂರಿನಿಂದ ಈಶಾನ್ಯಕ್ಕೆ ೪೮ ಮೈಲುಗಳ ದೂರದಲ್ಲಿರುವ ಶಿಯಾಲಿ ಭೈರವಿ ದೇವಾಲಯ, ಶ್ರೀರಂಗದ ರಂಗನಾಥ ದೇವಾಲಯಗಳಿಗೆ ಭೇಟಿಯಿತ್ತರು. ಇವರಂತೆಯೇ ಕರ್ನಾಟಕದ ದಾಸಪರಂಪರೆಯೂ ಮುಖ್ಯವಾಗಿ ಶ್ರೀಪಾದರಾಯರು, ವ್ಯಾಸರಾಯರು, ವಾದಿರಾಜರು, ಪುರಂದರದಾಸರುಗಳೆಲ್ಲ ಉತ್ತರಭಾರತದ ತೀರ್ಥಕ್ಷೇತ್ರಗಳನ್ನು ದರ್ಶಿಸಿರುವುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು.

ಶ್ರೀಚೈತನ್ಯರ ಧಾರ್ಮಿಕಕ್ಷೇತ್ರ ದರ್ಶನಗಳಲ್ಲಿ ಮುಖ್ಯವಾದುದು ರಾಮೇಶ್ವರ ಮತ್ತು ಧನುಷ್ಕೋಟಿ ಕ್ಷೇತ್ರಗಳು. ಇಲ್ಲಿಯ ವಿಪ್ರೋತ್ತಮರ ಪುರಾಣಪ್ರವಚನಗಳಲ್ಲಿ ಮಹಾಪ್ರಭುಗಳು ಭಾಗಿಯಾಗಿದ್ದು ಮಾತ್ರವಲ್ಲದೆ, ಅಲ್ಲಿಯ ಪತಿವ್ರತಾಸ್ತ್ರೀಯರು ಕೂಡ ಆ ವ್ಯಾಖ್ಯಾನವನ್ನು ಆಲಿಸುತ್ತಿದ್ದರಂತೆ. ಅಲ್ಲಿಂದ ಚೈತನ್ಯರು ಮಲ್ಲಾರದೇಶ (ದಕ್ಷಿಣಕನ್ನಡ, ಕೊಡಗು, ಕೊಚ್ಚಿನ್ ಪ್ರಾಂತ್ಯಗಳು)ದ ಮೂಲಕ ಕನ್ಯಾಕುಮಾರಿಯನ್ನು ದರ್ಶಿಸುತ್ತಾರೆ. ಅಲ್ಲಿಂದ ಹಿಂತಿರುಗಿದ ನಂತರದಲ್ಲಿ, ಶೃಂಗೇರಿಯ ಶಾರದೆಯ ಸನ್ನಿಧಾನವನ್ನು ಕಂಡು, ತುಂಗಾಸ್ನಾನದಿಂದ ಪುನೀತರಾಗಿ, ತತ್ತ್ವವಾದಿಗಳ ಊರಾದ ಉಡುಪಿಯನ್ನು ಸಂದರ್ಶಿಸುತ್ತಾರೆ.[೨೫] ಅಲ್ಲದೆ,

ತತ್ತ್ವವಾದೀ ಸಹ ಕೈಲ ತತ್ತ್ವೇರ ವಿಚಾರ ।
ಆಪನಾಕೇ ಹೀನ ಬುದ್ಧಿ ಹೈಲ ತಾಂಗ್ ಸಬಾರ ॥[೨೬]

ಪ್ರಾಯಶಃ ಈ ಘಟನೆಯನ್ನು ದಾಸಪಂಥದ ಕಾಲಾವಧಿಯಲ್ಲಿ ನೋಡಿದರೆ ಅದು ಉಡುಪಿಯ ವಾದಿರಾಜ ಯತಿ (ಕ್ರಿ.ಶ.–೧೪೮೦–೧೬೦೦)ಗಳ ಕಾಲವೆಂದು, ಚೈತನ್ಯ ಮಹಾಪ್ರಭುಗಳು ವಾದಿರಾಜರೊಂದಿಗೆ ಸಂಭಾಷಿಸಿದ್ದರೆಂದು ಬನ್ನಂಜೆಯವರು ತಮ್ಮ ಭಕ್ತಿ ಭಾರತೀ'ಯಲ್ಲಿ ಬರೆಯುತ್ತಾರೆ. ಆದರೆ ಚೈತನ್ಯ ಚರಿತಾಮೃತದ ಪ್ರಕಾರ, ಚೈತನ್ಯ ಮಹಾಪ್ರಭುಗಳು ಉಡುಪಿಯನ್ನು ಸಂದರ್ಶಿಸಿದಾಗ, ಶ್ರೀ ಶ್ರೀ ರಘುವರ್ಯ ತೀರ್ಥ (ಶಕಾಬ್ದ–೧೪೨೪, ಶ್ರೀಶಿರೂರುಮಠ...?)ರೆಂಬುವವರು ಅವರೊಂದಿಗೆ ಸಂಬಾಷಿಸಿದ್ದಾರೆಂದು ಹೇಳುತ್ತದೆ. ಶಕಾಬ್ದಕ್ಕೆ ೭೮ ವರುಷಗಳನ್ನು ಸೇರಿಸಿದಾಗ ಕ್ರಿಸ್ತಶಕ ವರ್ಷವು ಬರುವುದರಿಂದ ಅದು ಕ್ರಿ.ಶ. ೧೫೦೨ ಕ್ಕೆ ಸರಿಹೊಂದುತ್ತದೆ. ಅಂದರೆ ಚೈತನ್ಯ (ಕ್ರಿ. ಶ. ೧೪೮೬–೧೫೩೪)ರು ವಾದಿರಾಜರಿಗಿಂತ ಆರು ವರ್ಷಕ್ಕೆ ಕಿರಿಯರು. ಆದರೆ

ಶ್ರೀಚೈತನ್ಯರು ಉಡುಪಿಯನ್ನು ಸಂದರ್ಶಿಸಿದುದರ ಸ್ಪಷ್ಟ ದಿನಾಂಕವು ಉಡುಪಿಯ ಮಠಗಳಿಂದಾಗಲೀ ಅಥವಾ ವಿದ್ವಾಂಸರಿಂದಾಗಲೀ ಸಿಕ್ಕಿಲ್ಲ. ಚೈತನ್ಯ ಚರಿತಾಮೃತದ ಪ್ರಕಾರ, ಚೈತನ್ಯರು ಉಡುಪಿಯ ಕೃಷ್ಣನನ್ನು ನರ್ತಕ ಗೋಪಾಲಕನನ್ನಾಗಿ ನೋಡಿ, ತಾವೂ ಕೂಡ ಪ್ರೇಮೋನ್ಮಾದದಲ್ಲಿ ನರ್ತಿಸಿ, ಭಜಿಸಿದರು. ಇಲ್ಲಿ ಅವರು ಉಡುಪಿಯ ತತ್ತ್ವವಾದಿಗಳೊಂದಿಗೆ ತತ್ತ್ವಾರ್ಥವಾಗಿ ತರ್ಕಿಸುತ್ತಾರೆ. ಚಾತುರ್ವಣ್ಯ (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರ) ಮತ್ತು ಚತುರಾಶ್ರಮ (ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಹಾಗೂ ಸಂನ್ಯಾಸ) ಗಳನ್ನು ಅನುಷ್ಠಾನಗೊಳಿಸುವುದೇ ಕೃಷ್ಣನನ್ನು ಹೊಂದಲು ಶ್ರೇಷ್ಠಮಾರ್ಗವೆಂದರಿತ ತತ್ವಜ್ಞಾನಿಗಳ ವಾದವನ್ನು ಒಪ್ಪದೆ ಕೃಷ್ಣನಾಮಕೀರ್ತನ ಹಾಗೂ ಶ್ರವಣಗಳೇ ಶ್ರೇಷ್ಠಮಾರ್ಗವೆಂದು ಪ್ರತಿಪಾದಿಸುತ್ತಾರೆ. ದೇವತ್ವಕ್ಕೆ ಮರಳುವುದೇ ಪರಮಗುರಿಯೆಂಬ ತತ್ತ್ವವಾದಿಗಳ ನಿಲುವನ್ನು ಖಂಡಿಸಿ, ಐಹಿಕ ವಿಶ್ವದಲ್ಲಾಗಲಿ ಅಥವಾ ಪಾರಮಾರ್ಥಿಕ ವಿಶ್ವದಲ್ಲಾಗಲಿ ದೇವತ್ವದ ಪ್ರೇಮವನ್ನು ಹೊದುವುದೇ ಪರಮಗುರಿಯಾಗಬೇಕು ಎಂದು ಹೇಳಿ, ಉಡುಪಿಯ ತತ್ತ್ವವಾದಿಗಳನ್ನು ಒಪ್ಪಿಸುತ್ತಾರೆ. ಅಲ್ಲದೆ, 'ಮಧ್ವಾಚಾರ್ಯರು ಹೇಳಿರುವ ಶುದ್ಧಭಕ್ತಿಯಿಂದ ನೀವು ಸ್ವಲ್ಪ ದೂರ ಸರಿದಿದ್ದೀರಿ. ನಿಮ್ಮ ಸಂಪ್ರದಾಯದಲ್ಲಿ ಈಗ ಶುದ್ಧವಾದ ಭಕ್ತಿಯನ್ನು ಬಿಟ್ಟು ಕರ್ಮ ಮತ್ತು ಜ್ಞಾನದ ಸೋಗಿನಿಂದ ಭಕ್ತಿಯನ್ನು ಪ್ರತಿಪಾದಿಸುತ್ತಿದ್ದೀರಿ. ಆದರೂ ಭಗವಂತನು ಪರಮಪರಾತ್ಪರ ರೂಪವನ್ನು ಹೊಂದಿದ್ದಾನೆಂಬ ಅಂಶಮಾತ್ರ ಸೂಕ್ತವಾಗಿದೆ' ಎಂದು ಚೈತನ್ಯರು ಉಡುಪಿಯ ತತ್ವವಾದಿಗಳಿಗೆ ಬೋಧನೆ ನೀಡುತ್ತಾರೆ.[೨೭] ಮುಂದೆ ಗೋಕರ್ಣತೀರ್ಥವನ್ನು ಸಂದರ್ಶಿಸಿ, ಸೂರ್ಪಾರಕದ ಮೂಲಕವಾಗಿ ಕೊಲ್ಲಾಪುರವನ್ನು ದರ್ಶಿಸುತ್ತಾರೆ. ಅಲ್ಲಿ ಕ್ಷೀರ ಭಗವತಿ ಗುಡಿಯಲ್ಲಿ ಲಕ್ಷ್ಮೀದೇವಿಯನ್ನು ನೋಡಿ, ಚೋರಪಾರ್ವತಿ ಎನ್ನುವ ಗುಡಿಯಲ್ಲಿ ಲಾಂಗ ಗಣೇಶನನ್ನು ನೋಡಿ, ಮುಂದೆ ಪಂಢರಾಪುರ ವಿಠಲನನ್ನು ಸಂದರ್ಶಿಸುತ್ತಾರೆ. ಅಲ್ಲಿಯ ತುಕಾರಾಮ (ಕ್ರಿ. ಶ. ೧೬೦೮–೧೬೪೯)ನೆಂಬ ಭಕ್ತನಿಗೆ ಅಧ್ಯಾತ್ಮಿಕ ದೀಕ್ಷೆಯನ್ನು ನೀಡಿದರೆಂದು ಚೈತನ್ಯ ಚರಿತಾಮೃತವೂ ಸೇರಿದಂತೆ ಕೆಲವು ಕೃತಿಗಳು ಸಾರುತ್ತವೆ.[೨೮] ತುಕಾರಾಮರು ಚೈತನ್ಯರ ಶಿಷ್ಯರಾಗಿ ಸಂಕೀರ್ತನದ ಗುಂಪುಗಳನ್ನು ರಚಿಸಿ, ಮೃದಂಗ ಹಾಗೂ ತಾಳಗಳನ್ನು ಹಿಡಿದು ದೇವರನಾಮಗಳನ್ನು ಸ್ತುತಿಸುತ್ತಾರೆ. ಆದರೆ ಇಲ್ಲಿ ತೊಡಕಾಗುವುದು ಚೈತನ್ಯ, ವಾದಿರಾಜ ಮತ್ತು ತುಕಾರಾಮರ ಕಾಲಮಾನದ ವಿಚಾರದಲ್ಲಿ.

ವಿಠ್ಠಲನ ದರ್ಶನಕ್ಕಾಗಿ ಪಂಢರಾಪುರಕ್ಕೆ ಆಗಮಿಸಿದ ಚೈತನ್ಯರಿಗೆ ಶ್ರೀರಂಗ ಪುರಿಗಳ ದರ್ಶನವಾಗುತ್ತದೆ. ಚೈತನ್ಯರ ಪೂರ್ವಾಶ್ರಮದಲ್ಲಿ ಅಣ್ಣನಾಗಿದ್ದ ವಿಶ್ವರೂಪರು, ಪ್ರಭುಗಳಿಗಿಂತ ಮೊದಲೇ ಸಂನ್ಯಾಸವನ್ನು ಸ್ವೀಕರಿಸಿ, ಶಂಕರಾರಣ್ಯ ಎಂಬ ಹೆಸರನ್ನು ಪಡೆದು, ದೇಶವನ್ನೆಲ್ಲಾ ಸುತ್ತಿ ಕೊನೆಗೆ ಪಂಢರಾಪುರಕ್ಕೆ ಬಂದು, ಅಲ್ಲಿ ತಮ್ಮ ಐಹಿಕದೇಹವನ್ನು ತ್ಯಜಿಸಿದರೆಂದು ಶ್ರೀರಂಗ ಪುರಿಗಳಿಂದ ತಿಳಿದುಕೊಳ್ಳುತ್ತಾರೆ. ಪಂಢರಾಪುರದ ಬ್ರಾಹ್ಮಣನೊಬ್ಬನ ಮನೆಯಲ್ಲಿ ನಾಲ್ಕುದಿನವಿದ್ದು, ಅನಂತರದಲ್ಲಿ ಕೃಷ್ಣವೇಣ್ಣಾನದೀತೀರದ ದೇವಮಂದಿರಗಳನ್ನು ದರ್ಶಿಸುತ್ತಾರೆ. ಅಲ್ಲಿಂದ ತಾಪಿನದಿಯಲ್ಲಿ ಸ್ನಾನವನ್ನು ಮುಗಿಸಿಕೊಂಡು ಮಾಹಿಷ್ಮತೀಪುರಕ್ಕೆ, ಮತ್ತೆ ಧನುಸ್‌ತೀರ್ಥ, ಋಷ್ಯಮೂಕ, ದಂಡಕಾರಣ್ಯ, ಪಂಪಾಸರೋವರ, ಪಂಚವಟಿ, ನಾಸಿಕ, ಕಳಿಂಗ ಮೊದಲಾದ ಪುಣ್ಯಕ್ಷೇತ್ರಗಳನ್ನು

ಸಂಕೀರ್ತನೆಯೊಂದಿಗೆ ಸಂದರ್ಶಿಸಿ, ರಾಮಾನಂದರಾಯರಿಗೆ ನೀಲಾಚಲಕ್ಕೆ ಬರುವಂತೆ ಹೇಳಿ, ತಾನು ಜಗನ್ನಾಥಪುರಿಗೆ ಆನಂದದಿಂದ ನಿರ್ಗಮಿಸಿದರು.

ಒಟ್ಟಿನಲ್ಲಿ ಉತ್ತರಭಾರತದ ಬಂಗಾಳದಿಂದ ಶ್ರೀಹರಿಸಂಕೀರ್ತನವೆಂಬ ಭಕ್ತಿರಸಾಮೃತವನ್ನು ದಕ್ಷಿಣಭಾರತದ ಮೂಲೆಮೂಲೆಗೂ ಸಿಂಚನಗೈಯುವ ಕೆಲಸವನ್ನು ಮಾಡುತ್ತಾರೆ. ತಾನು ಸಂಚರಿಸಿದ ಪವಿತ್ರಸ್ಥಳಗಳ ಆಸ್ತಿಕರಿಗೆ ಶ್ರವಣ, ಕೀರ್ತನ ಮತ್ತು ನಾಮಸ್ಮರಣೆಯಿಂದ ಅನುಕೂಲಕ್ಕೆ ತಕ್ಕ ಭಕ್ತಿಸೇವೆಯನ್ನು ಕೃಷ್ಣನಿಗೆ ಸಲ್ಲಿಸುವಂತೆ ಪ್ರೇರೇಪಿಸುತ್ತಾರೆ. ವಿಗ್ರಹಗಳ ಪೂಜೆ, ಪ್ರಾರ್ಥನೆಯನ್ನು ಸಲ್ಲಿಸುವುದು ಹಾಗೂ ನಿರಂತರ ಕೃಷ್ಣನ ದಾಸನೆಂದು ತಿಳಿಯುವುದರ ಮೂಲಕ ಪಾರಮಾರ್ಥಿಕವಾಗಿ ನಮ್ಮನ್ನು ನಾವು ತೊಡಗಿಸಿಕೊಳ್ಳುವಂತಾಗುತ್ತದೆಂಬುದು ಚೈತನ್ಯರ ನಿಲುವು. ಈ ದೃಷ್ಟಿಯಿಂದಲೇ ತಮ್ಮ ಯಾತ್ರೆಯ ಸಂದರ್ಭದಲ್ಲಿ, ಲೌಕಿಕರು ನವವಿಧ ಭಕ್ತಿಸೇವೆಯನ್ನು ಕೃಷ್ಣನಿಗೆ ಅರ್ಪಿಸುವಂತೆಯೂ ಅದುವೇ ಅಪೌರುಷೇಯ ಧರ್ಮಗ್ರಂಥಗಳ ಸಿದ್ಧಾಂತವೆಂದೂ ಧರ್ಮಜಾಗೃತಿಯನ್ನು ಮೂಡಿಸುತ್ತಾರೆ. ಚೈತನ್ಯರು ಮಾಡಿದ ಆಧ್ಯಾತ್ಮಿಕ ಸಂಕೀರ್ತನಾಯಾತ್ರೆ ಮತ್ತು ಕರ್ನಾಟಕದ ದಾಸಕುಲವು ಸಾಮಾಜಿಕ ಜಾಗೃತಿಗಾಗಿ ನಿರ್ವಹಿಸಿದ ಕೀರ್ತನಾಸಾಹಿತ್ಯ ಯಾತ್ರೆಯು ಸಮಾನ ಭಾವನೆಯಿಂದ ಕೂಡಿದ್ದೆಂದು ಈ ಮೂಲಕ ತಿಳಿಯುವಂತಾಗುತ್ತದೆ.

೪.೫ : ಶ್ರೀಚೈತನ್ಯ ಮಹಾಪ್ರಭುಗಳು ಅದ್ವೈತಿಗಳೇ.....?

ಶ್ರೀಚೈತನ್ಯ ಮಹಾಪ್ರಭುಗಳು ಸ್ಮಾರ್ತರು, ಅದ್ವೈತಿಗಳು ಎಂಬ ವಾದವೊಂದು ಧಾರ್ಮಿಕ ಸಮಾಜದ ಚಿಂತಕರಲ್ಲಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಅದ್ವೈತತತ್ತ್ವ ಪ್ರತಿಪಾದಕರಾದ ಶಂಕರಾಚಾರ್ಯರ ಗುರುಪರಂಪರೆಗೆ ಸೇರಿದ ಭಾರತೀ ಸಮಾಜದವರಾದ ಶ್ರೀಕೇಶವ ಭಾರತೀ ಅವರಿಂದ ಚೈತನ್ಯರು ಸಂನ್ಯಾಸ ಸ್ವೀಕಾರವನ್ನು ಮಾಡಿದುದು. ಆದರೆ ಶ್ರೀಚೈತನ್ಯ ಮಹಾಪ್ರಭುಗಳು ಮಧ್ವಾಚಾರ್ಯರ ದ್ವೈತತತ್ತ್ವದಿಂದ ಪ್ರಭಾವಕ್ಕೊಳಗಾಗಿ, ತಮ್ಮದೇ ಆದ ಅಚಿಂತ್ಯಾಭೇದಾಭೇದವೆಂಬ ತಾತ್ತ್ವಿಕಸಿದ್ಧಾಂತವನ್ನು ಮಂಡಿಸಿದುದು ಹಳೆಯವಿಚಾರ. ಈ ಮಧ್ಯೆ ಎರಡು ರೀತಿಯ ಸಂದೇಹಗಳು ತಾತ್ತ್ವಿಕರನ್ನು ಕಾಡುವಂತಾಯಿತು. ಒಂದನೆಯದು, ದ್ವೈತಪರಂಪರೆಯಲ್ಲಿ ಸಂನ್ಯಾಸದೀಕ್ಷೆಯನ್ನು ಅದ್ವೈತ ಗುರುಗಳಿಂದ ಸ್ವೀಕರಿಸಲು ಅವಕಾಶವಿದೆಯೇ ಎಂಬ ಪ್ರಶ್ನೆ. ಎರಡನೆಯದು, ಸಂನ್ಯಾಸದೀಕ್ಷೆ ನೀಡಿದ ಶ್ರೀಕೇಶವ ಭಾರತೀ ಅವರಿಂದ 'ಭಾರತೀ' ಎಂಬ ಅಭಿದಾನವು ಶ್ರೀಚೈತನ್ಯರ ಹೆಸರಿನೊಂದಿಗೆ ಏಕೆ ಸೇರಲಿಲ್ಲವೆಂಬುದು ಎರಡನೆಯ ಪ್ರಶ್ನೆ. ಮೂಲ ಹೆಸರಲ್ಲಿದ್ದ ವಿಶ್ವಂಭರರು ಸಂನ್ಯಾಸದೀಕ್ಷೆಯ ನಂತರದಲ್ಲಿ 'ಶ್ರೀಚೈತನ್ಯ'ರೆಂದು ಕರೆಯಿಸಿಕೊಂಡರು. ಆದರೆ 'ಚೈತನ್ಯ' ಎಂಬ ಅಭಿದಾನವು ಶಾಂಕರ ಪರಂಪರೆಯಲ್ಲಿ ಬ್ರಹ್ಮಚಾರಿಗಳಿಗೆ ಮಾತ್ರ ಮೀಸಲಾದ ಹೆಸರಾಗಿತ್ತೆಂಬುದು ಅದ್ವೈತತತ್ತ್ವ ಸಿದ್ಧಾಂತವು ಹೇಳುತ್ತದೆ.

ಇನ್ನು ದೀಕ್ಷಾವಿಧಾನದಲ್ಲಿ ಸಂನ್ಯಾಸಿ ಶಿಷ್ಯರುಗಳಿಗೆ ಹೆಸರುಗಳನ್ನು ಕೊಡುವ ಪದ್ಧತಿಯನ್ನು ಅದ್ವೈತ ಪ್ರವರ್ತಕರಾದ ಶಂಕರಾಚಾರ್ಯರು ಪ್ರಾರಂಭಿಸಿದರು. ಇಂತಹ ಶಿಷ್ಯರಿಗೆ ನೀಡಲಾಗುವ ಹೆಸರುಗಳು ಒಟ್ಟು

ಹತ್ತು. ಅವುಗಳಲ್ಲಿ ತೀರ್ಥ, ಆಶ್ರಮ ಹಾಗೂ ಸರಸ್ವತೀ ಎನ್ನುವ ಉಪನಾಮಗಳನ್ನು ಪಡೆದವರು ಅತ್ಯಂತ ಶ್ರೇಷ್ಠರು. 'ಸರಸ್ವತೀ' ಎನ್ನುವ ಉಪನಾಮವು ಪ್ರಥಮಶ್ರೇಣಿಯದೆಂದೂ, 'ಭಾರತೀ' ಎನ್ನುವ ಉಪನಾಮವು ದ್ವಿತೀಯ ಹಾಗೂ 'ಪುರಿ' ಎನ್ನುವುದು ತೃತೀಯದರ್ಜೆಯದೆಂದು ಅದ್ವೈತವಿದ್ವಾಂಸರು ಭಾವಿಸುತ್ತಾರೆ. 'ತತ್ ತ್ವಮ್ ಅಸಿ' ಎನ್ನುವ ಘೋಷಣಾವಾಕ್ಯವನ್ನು ಚೆನ್ನಾಗಿ ಅರ್ಥಮಾಡಿಕೊಂಡವನೂ, ಗಂಗಾ, ಯಮುನಾ ಹಾಗೂ ಸರಸ್ವತೀ ನದಿಗಳ ಸಂಗಮದಲ್ಲಿ ಸ್ನಾನವನ್ನು ಮಾಡಿ ಸಂನ್ಯಾಸಾಶ್ರಮವನ್ನು ಸ್ವೀಕರಿಸಿದವನನ್ನು 'ತೀರ್ಥ' ಎಂದು ಕರೆಯುತ್ತಾರೆ. ಸಂನ್ಯಾಸವನ್ನು ಸ್ವೀಕರಿಸಲು ತೀವ್ರ ಕಾತರವುಳ್ಳವನಾಗಿದ್ದು ಪ್ರಾಪಂಚಿಕ ಚಟುವಟಿಕೆಗಳಿಂದ ಬಿಡಿಸಿಕೊಂಡವನಾಗಿದ್ದು, ಯಾವುದೇ ಐಹಿಕ ಅನುಕೂಲಗಳಿಗೆ ಆಸೆಪಡದ ಮತ್ತು ಈ ಗುಣತ್ರಯಗಳಿಂದಾಗಿ ಜನನಮರಣಗಳಿಗೆ ಅತೀತನಾದ ಸಂನ್ಯಾಸಿಯನ್ನು 'ಆಶ್ರಮ' ಎಂಬ ಉಪನಾಮದಿಂದ ಕರೆಯಲಾಗುತ್ತದೆ. ಅರಣ್ಯವೊಂದರ ಮನೋಹರ ತಾಣದಲ್ಲಿ ಏಕಾಂತವಾಸ ಮಾಡುತ್ತಲಿದ್ದು ಲೌಕಿಕ ಅಪೇಕ್ಷೆಗಳನ್ನು ತೊರೆದಿರುವ ಸಂನ್ಯಾಸಿಯು 'ವನ' ಎನ್ನುವ ಉಪನಾಮವನ್ನು ಪಡೆಯುತ್ತಾನೆ. ಸದಾ ಅರಣ್ಯದಲ್ಲಿಯೇ ವಾಸವಿದ್ದು ಸ್ವರ್ಗೀಯ ಲೋಕಗಳಿಗೆ ಹೋಗಿ ಅಲ್ಲಿಯ ನಂದನವನದಲ್ಲಿ ವಾಸಮಾಡುವ ಬಯಕೆಯನ್ನು ಹೊತ್ತು, ಪ್ರಾಪಂಚಿಕದ ಜೊತೆ ಎಲ್ಲ ಸಂಬಂಧಗಳನ್ನೂ ಕಡಿದುಕೊಂಡಿರುವ ಸಂನ್ಯಾಸಿಯನ್ನು 'ಅರಣ್ಯ' ಎನ್ನುತ್ತಾರೆ. ಯಾರು ಬೆಟ್ಟಗಳಲ್ಲಿ ವಾಸಿಸುತ್ತ ಗೀತಾಧ್ಯಯನ ಮಾಡುತ್ತಿರಲು ಇಷ್ಟಪಡುವನೋ ಹಾಗೂ ಯಾರ ಬುದ್ಧಿಯು ನಿಶ್ಚಲವಾಗಿರುವುದೋ ಅಂತಹ ಸಂನ್ಯಾಸಿಯನ್ನು 'ಗಿರಿ' ಎನ್ನುತ್ತಾರೆ. ದಾರ್ಶನಿಕ ಮುನೋಕಲ್ಪನೆಯ ತುತ್ತತುದಿಯನ್ನೇರಲು (ಎಂದರೆ ಐಹಿಕ ಜಗತ್ತಿನ ಬದುಕು ಸಾರವಿಲ್ಲದ್ದು ಎಂದು ಅರಿಯಲು) ಪರ್ವತಶ್ರೇಣಿಗಳಲ್ಲಿ ವಾಸಮಾಡಲು ಬಯಸುವ ಸಂನ್ಯಾಸಿಯನ್ನು 'ಪರ್ವತ' ಎಂದು ಕರೆಯುತ್ತಾರೆ. ಪರಮಸತ್ಯವೆಂದು ಕಡಲಿನಲ್ಲಿ ಮುಳುಗಿ, ಜ್ಞಾನವೆಂಬ ಅಮೂಲ್ಯರತ್ನಗಳನ್ನು ಸಂಗ್ರಹಿಸಿರುವ ಹಾಗೂ ಸಂನ್ಯಾಸದ ನಿಯಂತ್ರಕ ತತ್ತ್ವಗಳಿಂದ ಚ್ಯುತನಾಗದವನನ್ನು 'ಸಾಗರ' ಎನ್ನುತಾರೆ. ಶಾಸ್ತ್ರೀಯ ಸಂಗೀತವನ್ನು ಅಭ್ಯಾಸ ಮಾಡುತ್ತಿದ್ದು ಅದರ ಸಾಧನೆಯಲ್ಲೇ ತೊಡಗಿ ಪಾರಂಗತನಾಗಿರುವವನು ಹಾಗೂ ಲೋಕದ ಮೋಹದಿಂದ ಸಂಪೂರ್ಣವಾಗಿ ಬೇರೆಯಾದವನು ಸರಸ್ವತೀ. 'ಸರಸ್ವತೀ'ಯು ಸಂಗೀತ ಹಾಗೂ ಲಲಿತಕಲೆಗಳ ಅದಿದೇವತೆ. ಆದುದರಿಂದ ಆಕೆಯು ಜ್ಞಾನಸಾಗರಿಯಾಗಿ, ತನ್ನ ಒಂದು ಕೈಯಲ್ಲಿ ವೀಣೆಯನ್ನು ಹಿಡಿದಿದ್ದಾಳೆ. ಆಧ್ಯಾತ್ಮಿಕ ಜ್ಞಾನದ ಉನ್ನತಿಯನ್ನು ಬಯಸಿ, ಸದಾಸಂಗೀತವನ್ನೇ ಆಧಾರಮಾಡಿಕೊಂಡ ಸಂನ್ಯಾಸಿಯನ್ನು 'ಸರಸ್ವತೀ' ಎಂದು ಕರೆಯುವುದು ಸಂನ್ಯಾಸ ಪರಂಪರೆಯಲ್ಲಿ ಬೆಳೆದುಕೊಂಡು ಬಂದಿದೆ. ಪೂರ್ಣ ವಿದ್ಯಾವಂತನಾದವನು, ಎಲ್ಲ ಬಗೆಯ ಅಜ್ಞಾನದಿಂದ ಪೂರ್ಣವಾಗಿ ಮುಕ್ತನಾದವನು ಹಾಗೂ ಅತ್ಯಂತ ಸಂಕಟದ ಸಮಯದಲ್ಲೂ ಅಸಂತೋಷಕ್ಕೆ ಎಡೆಮಾಡಿಕೊಡದ ಸಂನ್ಯಾಸಿಯನ್ನು 'ಭಾರತಿ' ಎನ್ನುತ್ತಾರೆ. ಪರಮಜ್ಞಾನದಲ್ಲಿ ಪ್ರವೀಣನಾದವನು, ಪರಮಸತ್ಯದಲ್ಲಿ ಸ್ಥಿತನಾದವನು ಹಾಗೂ ಸದಾಕಾಲ ಪರಮಸತ್ಯವನ್ನೇ

ಕುರಿತು ಜಿಜ್ಞಾಸೆ ಮಾಡುತ್ತಿರುವ ಸಂನ್ಯಾಸಿಯು 'ಪುರಿ' ಎನಿಸಿಕೊಳ್ಳುತ್ತಾನೆ. ಇಲ್ಲಿಯ ಎಲ್ಲಾ ಸಂನ್ಯಾಸಿಗಳಿಗೂ 'ಬ್ರಹ್ಮಚಾರಿಗಳು' ಅಥವಾ 'ಚೈತನ್ಯ'ರೇ ಸಹಾಯಕರಾಗಿ ನಿಯುಕ್ತರಾಗುತ್ತಾರೆ. ಈ ಬ್ರಹ್ಮಚಾರಿಗಳನ್ನು, ತನ್ನ ನೈಜವ್ಯಕ್ತಿತ್ವವನ್ನು ಬಲ್ಲವನು, ಒಂದು ನಿರ್ದಿಷ್ಟ ಜೀವಿತಾವೃತ್ತಿಯಲ್ಲಿ ನೆಲೆನಿಂತವನು ಹಾಗೂ ಅಧ್ಯಾತ್ಮಿಕ ತಿಳಿನಿಂದ ಸಂತೋಷ ಪಡುವವನೆಂದು ಅದ್ವೈತ ಕೃತಿಗಳು ಸಾರುತ್ತವೆ. ಅಲ್ಲದೆ ಆತನನ್ನು 'ಸ್ವರೂಪ ಬ್ರಹ್ಮಚಾರಿ' ಎಂಬ ಹೆಸರಿನಿಂದ ಕರೆದದ್ದಿದೆ.[೩೯] ಬ್ರಹ್ಮಪ್ರಭೆಯನ್ನು ಸಂಪೂರ್ಣವಾಗಿ ಬಲ್ಲವನು ಹಾಗೂ ಎಡೆಬಿಡದೆ ಯೋಗಾಭ್ಯಾಸದಲ್ಲಿ ತೊಡಗಿಕೊಂಡಿರುವವನನ್ನು 'ಪ್ರಕಾಶ ಬ್ರಹ್ಮಚಾರಿ' ಎಂದು ಕರೆಯುತ್ತಾರೆ. ಯಾರು ಪರಮಜ್ಞಾನವನ್ನು ಪಡೆದಿರುವನೋ, ಸದಾಕಾಲ ಪರಮಸತ್ಯ ಹಾಗೂ ಪರಮಜ್ಞಾನಗಳನ್ನು ಹಾಗೂ ಅಪರಿಮಿತ ಬ್ರಹ್ಮಪ್ರಭೆಯನ್ನು ಕುರಿತು ಧ್ಯಾನಮಗ್ನನಾಗಿ ತನ್ನನ್ನು ಅಧ್ಯಾತ್ಮಿಕ ಆನಂದದಲ್ಲಿ ಇರಿಸಿಕೊಳ್ಳುವನೋ ಅವನನ್ನು 'ಆನಂದ ಬ್ರಹ್ಮಚಾರಿ' ಎಂದು ಕರೆಯುತ್ತಾರೆ. ಜಡ ಹಾಗೂ ಚೇತನಗಳಿಗಿರುವ ಭೇದವನ್ನು ಕಾಣಬಲ್ಲವನು, ಭೌತಿಕ ಪರಿವರ್ತನೆಗಳಿಂದ ಬಾಧಿತನಾಗದವನು ಮತ್ತು ಅಪರಿಮಿತ, ಅಕ್ಷಯ ಹಾಗೂ ಮಂಗಳಕರವಾದ ಬ್ರಹ್ಮಪ್ರಭೆಯನ್ನು ಕುರಿತು ಧ್ಯಾನಿಸುವವನು 'ಪರಮೋನ್ನತ ಶ್ರೇಣಿಯ ವಿದ್ವಾಂಸ ಬ್ರಹ್ಮಚಾರಿ' ಎಂದು ಕರೆಯಲ್ಪಡುತ್ತಾನೆ. ಇಂತಹಬ್ರಹ್ಮಚಾರಿಗಾಗಿ ಪರ್ಯಾಯ ರೂಪವಾಗಿ ಕರೆಯುವ ನಾಮವಿಶೇಷವೇ 'ಚೈತನ್ಯ'ಎಂಬುದಾಗಿರುತ್ತದೆ.

ಈ ಎಲ್ಲಾ ವಿಚಾರಗಳಿಂದಾಗಿ ಶ್ರೀಚೈತನ್ಯ ಮಹಾಪ್ರಭುಗಳು ಅದ್ವೈತಿಗಳೋ, ಸ್ಮಾರ್ತರೋ ಎಂಬ ಗೊಂದಲ ಉಂಟಾಗುತ್ತದೆ. ಈ ನೆಲೆಯಲ್ಲಿಯೇ ಚೈತನ್ಯರ ಕಾಲಾವಧಿಯಲ್ಲಿದ್ದ ಅದ್ವೈತ ವಿದ್ವಾಂಸರಾದ ಶ್ರೀ ಸಾರ್ವಭೌಮ ಭಟ್ಟಾಚಾರ್ಯರು, ಚೈತನ್ಯ ಮಹಾಪ್ರಭುಗಳು ವಿರಕ್ತ ಬದುಕಿನಲ್ಲಿ ಸ್ಥಿರವಾಗಿದ್ದು ಅದ್ವೈತಮತಕ್ಕೆ ಪ್ರವೇಶಿಸಲಿ. ಅದಕ್ಕಾಗಿ ನಾನು ಅವರೆದುರು ವೇದಾಂತದರ್ಶನವನ್ನು ಅವಿರತವಾಗಿ ಪಠಿಸುತ್ತೇನೆಂಬ ಹೇಳಿಕೆಯೊಂದನ್ನು ನೀಡುತ್ತಾರೆ. ಅಲ್ಲದೆ ಗೋಪೀನಾಥ ಆಚಾರ್ಯರಲ್ಲಿ ಈ ಕುರಿತು ವಾದವನ್ನು ಮಂಡಿಸುತ್ತಾರೆ.

ಸಾರ್ವಭೌಮ ಕಹೇ, ಇಂಕ್‌ಹಾರ ನಾಮ ಸರ್ವೋತ್ತಮ ।
ಭಾರತೀಸಂಪ್ರದಾಯ ಇಂಕ್‌ಹೋ ಹಯೇನ ಮಧ್ಯಮ ॥[೪೦]

ಇಲ್ಲಿ ಮಹಾಪ್ರಭುಗಳ ಹೆಸರಿನ ಮೊದಲಲ್ಲಿ ಬರುವ 'ಶ್ರೀಕೃಷ್ಣ' ಎಂಬ ಪದವನ್ನು ಶ್ರೀ ಭಟ್ಟಾಚಾರ್ಯರು ಒಪ್ಪಿಕೊಂಡರೂ, ಶ್ರೀಚೈತನ್ಯರು ಭಾರತೀಸಂಪ್ರದಾಯಕ್ಕೆ ಸೇರಿ, ದ್ವಿತೀಯಶ್ರೇಣಿಯ ಸಂನ್ಯಾಸಿಗಳಾಗುತ್ತಾರೆಂಬುದು ಅವರ ಅಭಿಮತ. ಹಾಗಾಗಿ,

ಕಹೇನ ಯದಿ, ಪುನರಪಿ ಯೋಗ ಪತ್ತದಿಯಾ ।
ಸಂಸ್ಕಾರ ಕರೆಯೇ ಉತ್ತಮ ಸಂಪ್ರದಾಯೇ ಆನಿಯಾ ॥[೪೧]

ಅದ್ವೈತದ ಪ್ರಕಾರ, ಶ್ರೀಚೈತನ್ಯ ಮಹಾಪ್ರಭುಗಳು 'ಭಾರತೀ' ಇಲ್ಲವೇ 'ಪುರಿ' ಸಂಪ್ರದಾಯಕ್ಕೆ ಅವರ ದೀಕ್ಷೆಯ ಅನುಸಾರವಾಗಿ ಸೇರುತ್ತಾರೆ. ಆದರೆ ಈ ಮಧ್ಯಮ ಸಂಪ್ರದಾಯವು ಶ್ರೀ ಭಟ್ಟಾಚಾರ್ಯರಿಗೆ ಸಹಮತವಾಗಿ

ಕಾಣದಿರುವುದರಿಂದ , ಶ್ರೀಚೈತನ್ಯರು ಒಪ್ಪುವುದಾದರೆ ಅವರನ್ನು 'ಸರಸ್ವತೀ' ಸಂಪ್ರದಾಯಕ್ಕೆ ಪುನಃ ಪ್ರವೇಶಿಸಲು ನಾನು ಅವಕಾಶವನ್ನು ಕಲ್ಪಿಸಿಕೊಡುತ್ತೇನೆಂದು ಮನವರಿಕೆ ಮೂಡುತ್ತಾರೆ. ಈ ಎಲ್ಲಾ ವಿಚಾರಗಳು ಶ್ರೀಚೈತನ್ಯರನ್ನು ಅದ್ವೈತಿಗಳೆಂದು ಸಮರ್ಥಿಸಿಕೊಳ್ಳುತ್ತದೆ. ಆದರೆ, ಇಲ್ಲಿ ಅದ್ವೈತ ಇಲ್ಲವೇ ಸ್ಮಾರ್ತರೆಂಬ ಕಲ್ಪನೆಯನ್ನು ಚೈತನ್ಯರ ವ್ಯಕ್ತಿತ್ವದ ಆಧಾರದಿಂದ ಶ್ರೀಗೋಪೀನಾಥ ಆಚಾರ್ಯರು ಅಲ್ಲಗಳೆಯುತ್ತಾರೆ. ಅವರ ಪ್ರಕಾರ ದೇವೋತ್ತಮ ಪರಮಪುರುಷನಲ್ಲಿರುವ ಷಡೈಶ್ವರ್ಯಗಳು ಶ್ರೀಚೈತನ್ಯರಲ್ಲಿದೆ. ಹಾಗಾಗಿ ಚೈತನ್ಯ ಮಹಾಪ್ರಭುಗಳು ಸ್ವಯಂ ದೇವೋತ್ತಮ ಪುರುಷನೆಂಬುದು ಅವರ ವಾದ. ಪರಮಸತ್ಯವನ್ನು ಬಲ್ಲವರಾದ ಚೈತನ್ಯರಿಗೆ ಶ್ರೇಷ್ಠ, ಮಧ್ಯಮ ಹಾಗೂ ಕನಿಷ್ಠಗಳೆಂಬ ಸಂಪ್ರದಾಯ ತಾರತಮ್ಯಗಳು ಸಲ್ಲುವುದಿಲ್ಲವೆಂಬುದು ಅವರ ನಿಲುವು. ಸಾರ್ವಭೌಮ ಭಟ್ಟಾಚಾರ್ಯರೂ ಕೂಡ ಚೈತನ್ಯರಿಂದ ಆತ್ಮಾರಾಮಶ್ಲೋಕದ ವ್ಯಾಖ್ಯಾನವನ್ನು ಅರ್ಥೈಸಿಕೊಂಡ ನಂತರದಲ್ಲಿ, ಅವರಲ್ಲೇ ಕೃಷ್ಣಪಾರಮ್ಯವನ್ನು ಕಾಣುತ್ತಾರೆ. ತಮ್ಮ ಕೀಳರಿಮೆಗಾಗಿ ಮರುಗಿ, ಚೈತನ್ಯರ ಪಾದಗಳಿಗೆರಗಿದ ಸಾರ್ವಭೌಮ ಭಟ್ಟಾಚಾರ್ಯರಿಗೆ ಚೈತನ್ಯರು ಚತುರ್ಭುಜಧಾರಿಯಾಗಿ, ಷಡ್‌ಭುಜಧಾರಿಯಾಗಿ ನಿಜರೂಪವನ್ನು ತೋರಿಸುತ್ತಾರೆ. ಅದ್ವೈತಿಗಳಾಗಿದ್ದ ಭಟ್ಟಾಚಾರ್ಯರು ದ್ವೈತಿಗಳಾಗಿ ಬಿಡುತ್ತಾರೆ. ಆದರೆ ಈ ವಿಚಾರದ ವಿಮರ್ಶೆ ಇಲ್ಲಿ ಅಪ್ರಸ್ತುತ. ಇಲ್ಲಿಯ ಒಟ್ಟು ಚಿಂತನೆಯಲ್ಲಿ ದೇವೋತ್ತಮ ಪರಮಪುರುಷನನ್ನು ಅರ್ಥೈಸಿಕೊಳ್ಳಲು ಪಾಂಡಿತ್ಯದ ಸಹಾಯ ಬೇಕಾಗಿಲ್ಲವೆಂಬುದು ಮುಖ್ಯವಿಚಾರ. ಸಂನ್ಯಾಸಸ್ವೀಕಾರದ ವಿಷಯದಲ್ಲೂ ಹಾಗೆಯೇ. ಇಲ್ಲಿ ಸಂಪ್ರದಾಯವೆನ್ನುವ ವಿಚಾರ ಅಸಮರ್ಪಕವಾದುದೆಂಬುದು ಸೂಕ್ಷ್ಮಾರ್ಥವಾಗಿ ತೋರುತ್ತದೆ.

೪.೬ ಚೈತನ್ಯ ಪಂಥದಲ್ಲಿ ತಾತ್ತ್ವಿಕತೆ

ಚೈತನ್ಯಪಂಥವು ಮಾಧ್ವಪಂಥದಿಂದ ಸ್ಫೂರ್ತಿ ಪಡೆದದ್ದೆಂದು ಹೇಳಲಾಗುತ್ತದೆ. ಅದು ತನ್ನ ಸಿದ್ಧಾಂತವನ್ನು ಅಚಿಂತ್ಯಾಭೇದಾಭೇದವೆಂದು ಕರೆದುಕೊಂಡು, ತನ್ನದೇ ಆದ ತಾತ್ತ್ವಿಕತೆಯಲ್ಲಿ ಮುಂದುವರಿಯುತ್ತದೆ. ಇಲ್ಲಿ ಹೇಳುವ 'ಅಚಿಂತ್ಯಾ'ವೆಂದರೆ ಯೋಚನೆಗೆ ಹಾಗೂ ತರ್ಕಕ್ಕೆ ನಿಲುಕದ್ದು. ಅಲ್ಲದೆ ಭೇದಾಭೇದದ ಸ್ಥಿತಿ ಮತ್ತು ಅನುಭವಗಳು ಅಚಿಂತ್ಯವಾಗಿ ತೋರುವವು. ಜೀವಬ್ರಹ್ಮರುಗಳಲ್ಲಿ ಭೇದವೂ ಇದೆ, ಅಭೇದವೂ ಇದೆ. ಇಲ್ಲಿ ಭಾಗವತಪುರಾಣವೇ ಚೈತನ್ಯಪಂಥಕ್ಕೆ ಶಾಸ್ತ್ರವಾಗಿ ನಿಲ್ಲುತ್ತದೆ. ಭಗವಂತನಲ್ಲಿ ಭಕ್ತನು ತೋರುವ ಪ್ರೇಮವೇ ಅತ್ಯುನ್ನತ ಪುರುಷಾರ್ಥವಾಗುತ್ತದೆ. ಸಚ್ಚಿದಾನಂದ ಸ್ವರೂಪವೆಂಬ ಬ್ರಹ್ಮವೇ ಇಲ್ಲಿ ಕೃಷ್ಣನಾಗಿ ಪರಿಣಮಿಸುತ್ತದೆ.

ಕೃಷ್ಣನಾಮಾಮೃತಪಾನಕ್ಕಾಗಿ ಈ ಪಂಥವು ಮಧುಕರವೃತ್ತಿಯನ್ನು ಅವಲಂಬಿಸುತ್ತದೆ. ಕೃಷ್ಣಪ್ರೇಮಿಯಾದ ಅನುಭಾವಿಯೊಬ್ಬನು ಗೃಹಸ್ಥನ ಮನೆಯಿಂದ ಸ್ವಲ್ಪಮಾತ್ರ ಆಹಾರವನ್ನು ಪಡೆದು ತನ್ನ ಹೊಟ್ಟೆಯನ್ನು ತುಂಬಿಸಿಕೊಳ್ಳುತ್ತಾನೆ. ಈ ಪದ್ಧತಿಯನ್ನು ಚೈತನ್ಯಪಂಥವು 'ಮಧುಕರೀ' ಎಂದು ಕರೆಯುತ್ತದೆ. ಅಂದರೆ, ಜೇನುತುಪ್ಪವನ್ನು ಸಂಗ್ರಹ ಮಾಡುವ ಜೇನುಹುಳದಂತೆ ಇಲ್ಲಿಯ ಭಕ್ತನ ಸ್ಥಿತಿಯಿರುತ್ತದೆ. ಅಂತೆಯೇ, ಸಂನ್ಯಾಸಿ

ಅಥವಾ ಅನುಭಾವಿಯೊಬ್ಬನು ಪ್ರತಿಯೊಬ್ಬ ಗೃಹಸ್ಥನ ಮನೆಯಿಂದಲೂ ಸ್ವಲ್ಪಮಾತ್ರ ಆಹಾರವನ್ನು ಸಂಗ್ರಹಿಸಿ, ತನ್ನ ದೇಹಧಾರಣೆಗೆ ಬೇಕಾಗುವಷ್ಟನ್ನು ಮಾತ್ರ ತಿನ್ನಬೇಕು. ಈ ತತ್ತ್ವಾರ್ಥದಿಂದಲೇ ಮಧುಕರವೃತ್ತಿಗೆ ಆದ್ಯತೆಯನ್ನು ನೀಡುತ್ತದೆ. ಇದೇ ಕಲ್ಪನೆಯಿಂದ ದಾಸಪಂಥವೂ ಕೂಡ 'ಮಧುಕರವೃತ್ತಿ ಎನ್ನದು, ಬಲುಚೆನ್ನದು' ಎನ್ನುವ ಮೂಲಕವಾಗಿ ಚೈತನ್ಯಪಂಥದ ದಾರಿಯನ್ನೇ ಹಿಡಿಯುತ್ತದೆ.

ಚೈತನ್ಯಸಾಹಿತ್ಯದಲ್ಲಿ ಬರುವ ಗುಣ್ಡೀಚಾಮಂದಿರದ ಮಾರ್ಜನವೆಂಬುದರ ತತ್ತ್ವಾರ್ಥವೇ ಬೇರೆಯಾಗಿರುತ್ತದೆ. ಭಕ್ತನು ತನ್ನ ಹೃದಯವನ್ನು ಪರಿಶುದ್ಧಗೊಳಿಸಬೇಕೆಂಬುದು ಇಲ್ಲಿಯ ನಿಜವಾದ ಅರ್ಥ. ಹೃದಯವು ಪರಿಶುದ್ಧಗೊಳಿಸಬೇಕಾದ್ದಲ್ಲಿ ಆ ಭಕ್ತನು ಕೃಷ್ಣನ ಮಹಿಮೆಗಳನ್ನು ಶ್ರವಣ ಮಾಡಬೇಕು; ಅಂತೆಯೇ ಸಂಕೀರ್ತಿಸಬೇಕು. ಪಂಥದ ಚಿಂತನೆಯಲ್ಲಿ ಇದೊಂದು ಸರಳ ಪ್ರಕ್ರಿಯೆ. ಇಲ್ಲಿ ಹೃದಯಶೋಧದಲ್ಲಿ ಶ್ರೀಕೃಷ್ಣನೇ ನೆರವಾಗುತ್ತಾನೆ. ಹೀಗೆ ನೆರವಾಗಬೇಕಾದ್ದಲ್ಲಿ, ಆತನು ಹೃದಯವಾಸಿಯೇ ಆಗಿರಬೇಕಾಗುತ್ತದೆ. ಅಲ್ಲದೆ ವ್ಯಕ್ತಿಯ ಹೃದಯದಲ್ಲೇ ತಾನು ವಾಸನಾಗಿರಬೇಕೆಂಬುದು ಆತನ ಅಪೇಕ್ಷೆಯೂ ಆಗಿರುತ್ತದೆ.

ಗೌಡೀಯರಿಗೆ 'ಗುಂಡೀಚಾ'ವೆಂಬುದು ಹೃದಯವಿದ್ದ ಹಾಗೆ. ಹಾಗಾಗಿ ವ್ಯಕ್ತಿಯ ಹೃದಯವೆಂಬ ಗುಂಡೀಚಾಮಂದಿರವು ಗುಡಿಸಿ, ತೊಳೆದು, ನಿರ್ಮಲಗೊಳಿಸಬೇಕಾಗುತ್ತದೆ. ಅದೆಷ್ಟು ಶುಭ್ರವೆಂದರೆ, ಚೈತನ್ಯ ಮಹಾಪ್ರಭುಗಳು ಗುಡಿಸಿ, ತೊಳೆದಹಾಗೆ. ಈ ಕ್ರಮದಿಂದ ಭಕ್ತನು ತನ್ನಲ್ಲಿ ಭಕ್ತಿಸೇವೋತ್ಸಾಹವನ್ನು ಶ್ರೀಮಂತಗೊಳಿಸಬಹುದು. ಭಕ್ತನ ಅಥವಾ ಜೀವಿಯ ಹೃದಯದಲ್ಲಿ ಕೊಳೆಯು ತುಂಬಿದ್ದರೆ ಪರಮಪುರುಷನನ್ನು ಪೀಠಸ್ಥನನ್ನಾಗಿ ಮಾಡಲು ಸಾಧ್ಯವಿಲ್ಲ. ಆತನು ಕಾಮ್ಯಕರ್ಮದಲ್ಲಿ ತೊಡಗಿದ್ದರ ಫಲವಾಗಿ, ಮನೋಕಲ್ಪನಾಧಾರಿತ ಜ್ಞಾನದ ದ್ವಾರಾ, ಹಠಯೋಗ ಪದ್ಧತಿಯ ಮೂಲಕ ಅಥವಾ ಧ್ಯಾನವೆಂದು ಹೇಳಲಾಗುವ ಕ್ರಿಯೆಯಿಂದ ಜನ್ಯವಾದ ಎಲ್ಲಾ ಲೌಕಿಕಪ್ರೇರಣೆಗಳನ್ನು ಹೃದಯವೆಂಬ ಮಂದಿರದಿಂದ ಹೊರಹಾಕಿ ನಮ್ಮನ್ನು ನಾವು ಪರಿಶುದ್ಧಗೊಳಿಸಿಕೊಳ್ಳಬೇಕು. ಇದು ಗುಂಡೀಚಾಮಂದಿರ ಮಾರ್ಜನದ ತತ್ತ್ವಾರ್ಥವಾಗಿದೆ.

ಇಲ್ಲಿಯ ಅಂತರಾರ್ಥವು ಇಲ್ಲಿಗೆ ನಿಲ್ಲುವುದಿಲ್ಲ. ಚೈತನ್ಯ ಮಹಾಪ್ರಭುಗಳು ಮಂದಿರದ ಹೊರಭಾಗವನ್ನೂ ಸ್ವಚ್ಛಗೊಳಿಸುತ್ತಾರೆ. ಹೊರಗಿರುವ ಕಸಕಡ್ಡಿಗಳು ಪುನಃ ಮಂದಿರದೊಳಗೆ ಬರಬಹುದೆಂಬ ಭಯವೇ ಇದಕ್ಕೆ ಕಾರಣವಾಗಿರುತ್ತದೆ. ಕಾಮ್ಯಕರ್ಮದಲ್ಲಿ ತೊಡಗಿಕೊಳ್ಳುವ ಅಪೇಕ್ಷೆಯಿಂದ ಜೀವಿಯು ಮುಕ್ತನಾದರೂ ಅಂತಹ ಬಯಕೆಯು ಸೂಕ್ಷ್ಮರೂಪದಲ್ಲಿ ಮತ್ತೆ ಹೃದಯಮಂದಿರವನ್ನು ಪ್ರವೇಶ ಮಾಡಬಾರದೆಂಬ ಉದ್ದೇಶ ಅವರದ್ದಾಗಿರುತ್ತದೆ. ಅಂದರೆ ನಿರಾಕಾರವಾದ, ಅದ್ವೈತ ಹಾಗೂ ಪುರುಷಾರ್ಥಗಳು ಸೂಕ್ಷ್ಮವಾಗಿ ವ್ಯವಹರಿಸಬಲ್ಲವು ಎಂಬ ಭಯವು ಕಾರಣವಾಗಿರುತ್ತದೆ.

ಚೈತನ್ಯಪಂಥದ ಒಟ್ಟು ತಾತ್ವಿಕತೆಯಲ್ಲಿ, ಅಚಿಂತ್ಯಾಭೇದಾಭೇದ ವೇದಾಂತ, ಶರಣಾಗತಿ ಮತ್ತು ಭಕ್ತಿಸೇವೆ, ನಿರಾಕಾರದ ಖಂಡನೆ; ಸ್ವರೂಪಾಕಾರದ ಮಂಡನೆ ಮತ್ತು ದೇವೋತ್ತಮ ಪರಮಪುರುಷ ಪರಿಕಲ್ಪನೆ ಮೊದಲಾದವುಗಳು ತತ್ತ್ವಾಧಾರಿತವಾದ ವಿಚಾರಕ್ಕೆ ಸೂಕ್ತ ನಿದರ್ಶನಗಳು.

೪.೬ (ಅ) ಅಚಿಂತ್ಯಾಭೇದಾಭೇದ ವೇದಾಂತ

ಭಾರತೀಯ ಭಕ್ತಿಪಂಥದ ತವನಿಧಿಗಳಲ್ಲೊಂದಾದ ಬಂಗಾಳದ ಚೈತನ್ಯಪಂಥವು ಗೌಡೀಯ ವೈಷ್ಣವ ಪಂಥವೆನಿಸಿ, ಅಚಿಂತ್ಯಾಭೇದಾಭೇದವೆಂಬ ಹೊಸ ತಾತ್ವಿಕತೆಯಿಂದ ರೂಪಧಾರಣೆಯನ್ನು ಮಾಡಿತು. ಅಂತೆಯೇ ಹೊಸ ವ್ಯಾಖ್ಯಾನವನ್ನು ನೀಡಿತು. ಕೆಲವರ ಪ್ರಕಾರ ಈ ಪಂಥವು ಮಾಧ್ವಮತದ ಶಾಖೆಯಾಗಿ ಹುಟ್ಟಿತು. ಇನ್ನೂ ಕೆಲವರ ಪ್ರಕಾರ ಸ್ವತಂತ್ರವಾಗಿ ಹುಟ್ಟಿ ಸ್ವತಂತ್ರವಾದ ಸಿದ್ಧಾಂತವನ್ನು ಪ್ರಕಟಿಸಿತು. ಏನೇ ಇದ್ದರೂ, ಅಚಿಂತ್ಯಾಭೇದಾಭೇದ ವೇದಾಂತವು ಅಭೇದದಲ್ಲಿ ಭೇದವಿದೆಯೆಂದೂ, ಆದರೆ ಅದು ಅಚಿಂತ್ಯವಾಗಿದೆಯೆಂದೂ ಹೇಳಲು ಮುಂದಾಯಿತು. ಇಲ್ಲಿ 'ಅಚಿಂತ್ಯಾ'ವೆಂದರೆ ಯೋಚನೆಗೂ ಮತ್ತು ತರ್ಕಕ್ಕೂ ಸಿಕ್ಕದಿರುವುದು. ಅದು ಭೇದಾಭೇದದ ಸ್ಥಿತಿ. ಇಲ್ಲಿ ಅನುಭವಗಳು ಅಚಿಂತ್ಯ. ಸೃಷ್ಟಿಯುಃ ಭಗವಂತನ ನಿರ್ಮಿತಿಯೇ ಆಗಿರುವುದರಿಂದ ಅದು ಅವನ ಹಾಗೆಯೇ ಇದೆ. ಆದರೂ ಆತನು ಅದಕ್ಕಿಂತ ಭಿನ್ನನಾಗಿದ್ದಾನೆ ಎಂದು ಸಾರಿತು. ಪರಿಣಾಮವಾಗಿ, ಏಕಕಾಲದಲ್ಲಿ ಹೋಲಿಕೆ ಹಾಗೂ ವ್ಯತ್ಯಾಸಗಳನ್ನು ತೋರಿಸುವುದೇ ಅಚಿಂತ್ಯಾರ್ಥವೆಂದು ಹೇಳಿತು. ವಿಶೇಷವೆಂದರೆ, ಇದು ಅತಾರ್ಕಿಕತೆಯಲ್ಲ; ತರ್ಕಾತೀತತೆ.

ಭಗವಂತನು ಇಲ್ಲಿ ತನ್ನ ಅಚಿಂತ್ಯವಾದ ಶಕ್ತಿಗಳಿಂದ ದಿವ್ಯವೆನಿಸುವ ಕಾರ್ಯಗಳನ್ನು ಮಾಡುತ್ತಾನೆ. ಭಗವಂತನು ನಡೆಯುತ್ತಾನೆ, ಆದರೆ ನಡೆಯುವುದಿಲ್ಲ. ಆತನು ಅವತರಿಸುತ್ತಾನೆ, ಆದರೆ ಅವತರಿಸುವುದಿಲ್ಲ. ಹೀಗೆ ಭಗವಂತನ ಕುರಿತಾದ ವಿರೋಧಾಭಾಸದಂತೆ ಕಾಣುವ ಹೇಳಿಕೆಗಳು ಇಲ್ಲಿ ಸಿಗಲುಸಾಧ್ಯ. ಆದರೆ ಅದಕ್ಕೂ ಒಂದು ಅರ್ಥವಿದೆ. ಅದು ಕಲ್ಪನಾತೀತವಾದ ಶಕ್ತಿಯಿಂದ ಕೂಡಿರುವಂತಹುದು. ನಾವು ನಮ್ಮ ಸೀಮಿತವಾದ ಜ್ಞಾನದಿಂದ ಈ ತರಹದ ಹೊಂದಾಣಿಕೆಯನ್ನು ಮಾಡಿಕೊಳ್ಳಲು ಸಾಧ್ಯವಿಲ್ಲ. ಹೀಗಾಗಿಯೇ ಮಾಯಾವಾದಪಂಥಕ್ಕೆ ಸೇರಿದ ನಿರಾಕಾರವಾದಿಗಳು ಭಗವಂತನ ನಿರಾಕಾರ ಚಟುವಟಿಕೆಗಳನ್ನು ಒಪ್ಪಿಕೊಂಡು, ಅವನ ಸಾಕಾರವಾದ ರೂಪವನ್ನು ತಿರಸ್ಕರಿಸುತ್ತಾರೆ. ಆದರೆ ಭಾಗವತರು ಭಗವಂತನ ಅಚಿಂತ್ಯವಾದ ಶಕ್ತಿಗಳನ್ನು ಒಪ್ಪುತ್ತಾರೆ. ಸಾಕಾರರೂಪವನ್ನು ಕಾಣುತ್ತಾರೆ. ಇದನ್ನು ಪ್ರತಿಪಾದಿಸುವುದೇ ಅಚಿಂತ್ಯಾಭೇದಾಭೇದ ಸಿದ್ಧಾಂತ. ಅದು ಕಾಣುವ ಅಚಿಂತ್ಯಾರ್ಥದ ಸಾಕಾರ ರೂಪಕ್ಕೆ 'ಪರಮಪ್ರಭು' ಎಂಬ ವಿಶೇಷ ಶಬ್ದಚಿತ್ರವನ್ನು ಕಲ್ಪಿಸಿ ಬಿಡುತ್ತದೆ.

ನಾವು ನಮ್ಮ ಕಣ್ಣುಗಳಿಂದ ಭಗವಂತನನ್ನು ನೋಡಲು ಸಾಧ್ಯವಿಲ್ಲವೆಂದ ಮಾತ್ರಕ್ಕೆ ಭಗವಂತನಿಗೆ ಸಾಕಾರ ಅಸ್ತಿತ್ವವಿಲ್ಲವೆಂಬುದು ಅರ್ಥವಲ್ಲ. ಅವನ ಅಸ್ತಿತ್ವವು ನಮ್ಮಿಂದ ದೂರವೂ ಇದೆ. ಅತ್ಯಂತ ಸಮೀಪವೂ ಇದೆ. ಅವನ ಧಾಮ ಐಹಿಕ ಆಕಾಶದ ಆಚೆಯಿದೆ. ನಾವು ಐಹಿಕದಲ್ಲಿದ್ದೇವೆ. ನಮ್ಮ ಐಹಿಕ ಆಕಾಶವನ್ನೇ

ಅಳೆಯಲು ನಮ್ಮಬಳಿ ಸಾಧನೋಪಾಯವಿಲ್ಲ. ಅಂದ ಮೇಲೆ ಆಧ್ಯಾತ್ಮಿಕ ಆಕಾಶದ ಬಗ್ಗೆ ಹೇಳಲು ಸಾಧ್ಯತೆಗಳು ನಮ್ಮಲ್ಲಿ ಇಲ್ಲವೆಂದೇ ಭಾವಿಸಬೇಕು. ದೂರಾತಿದೂರದಲ್ಲಿರುವ ಭಗವಂತನು ನಮಗೆ ಅತೀ ಹತ್ತಿರದಲ್ಲಿ ಸಿಗಬಲ್ಲ. ಅದು ವಾಯುವೇಗದಿಂದ. ಮನೋವೇಗಕ್ಕಿಂತಲೂ ಮುಖ್ಯವಾದ ವೇಗದಿಂದಲೂ ಸಾಧ್ಯ. ಭಗವಂತನು ಮನುಷ್ಯನ ರೂಪದಲ್ಲಿ ನಮ್ಮ ಮುಂದೆ ಬರುತ್ತಾನೆ ಎಂಬ ಮಾತ್ರಕ್ಕೆ ಆತ ಮರ್ತ್ಯನಲ್ಲವೆಂಬ ತಿಳುವಳಿಕೆಯನ್ನೂ ಈ ಸಿದ್ಧಾಂತವು ಮಾಡಿಕೊಡುತ್ತದೆ.

ಭಗವಂತನಿಗೆ ಕಲ್ಪನೆಗೂ ಎಟುಕದಷ್ಟು ಶಕ್ತಿಗಳಿರುವುದರಿಂದ ಅವನು ಯಾವುದೇ ಮಾಧ್ಯಮದ ಮೂಲಕ ನಮ್ಮ ಸೇವೆಯನ್ನು ಸ್ವೀಕರಿಸಬಹುದು ಅಥವಾ ತನ್ನ ನಾನಾ ಶಕ್ತಿಗಳನ್ನು ತನ್ನ ಇಚ್ಛಾನುಸಾರವಾಗಿ ಪರಿವರ್ತಿಸಬಹುದು. ಅದು ಯಾವುದೇ ಐಹಿಕಶಕ್ತಿಯ ರೂಪದಲ್ಲಿರಬಹುದು ಅಥವಾ ವಿಗ್ರಹಗಳಲ್ಲಿರಬಹುದು. ಹೀಗಾಗಿ ನಾವು ಅಪರಿಪೂರ್ಣರಾಗಿದ್ದರೂ, ಐಹಿಕತೆಯಲ್ಲಿ ಮುಳುಗಿದ್ದರೂ ನಮ್ಮ ಸೇವಾಭಕ್ತಿಯನ್ನು ಸ್ವೀಕರಿಸಲು ಭಗವಂತನು ನಮ್ಮ ಮುಂದೆ ಅರ್ಚವಿಗ್ರಹ ರೂಪದಲ್ಲಿ ಪ್ರಕಟಗೊಳ್ಳುತ್ತಾನೆ. ಈ ವಿಗ್ರಹರೂಪೀ ಭಗವಂತನನ್ನು ಪ್ರಾಮಾಣಿಕ ಭಕ್ತನೊಬ್ಬನು ವಾಸ್ತವದಲ್ಲಿ ಪ್ರಮಾಣ ರೂಪದಲ್ಲಿ ಪ್ರಾರ್ಥಿಸಬಹುದು. ಇಲ್ಲಿ ಭಕ್ತನ ಶರಣಾಗತಿಗೆ ತಕ್ಕಂತೆಯೇ ಭಗವಂತನ ಸಂಪರ್ಕವಿರುತ್ತದೆ. ಯಾರು ಶರಣಾಗತರಾಗುವುದಿಲ್ಲವೋ ಭಗವಂತನು ಅವರಿಂದ ಬಹಳ ದೂರವಾಗಿಯೇ ಇರುತ್ತಾನೆ.

ಭಗವಂತನು ಪ್ರತಿಯೊಂದರ ಒಳಗೂ ಇದ್ದಾನೆ. ಹೊರಗೂ ಇದ್ದಾನೆ. ಕಂಬದಿಂದಲೂ ಅವನು ಮೂಡಿ ಬಂದ. ಡಿಂಬದಿಂದಲೂ ಬಂದ. ಈ ಕಲ್ಪನೆಯ ದೃಢತೆಯಲ್ಲಿಯೇ 'ಉಡುಪಿಯ ರಂಗ ಕಲ್ಲ ಕಂಬದಿಂದೊಡೆದ ನರಸಿಂಹ, ಬಿಡದೆಮ್ಮ ಸಲಹೊ ಕೈಹಿಡಿ ಇನ್ನೇಕೆ ತಡವೊ' ಎಂದು ವಾದಿರಾಜರೂ, 'ಡಿಂಬಿನೊಳಗೆ ಪ್ರಾಣವಿರಲು ಕಂಬಸೂತ್ರ ಗೊಂಬೆಯಂತೆ ಎಂದಿದ್ದರೊಂದು ದಿನ ಸಾವುತಪ್ಪದು' ಎಂದು ಕನಕದಾಸರು ಸಂಕೀರ್ತಿಸಿದುದು. ಅಂತೆಯೇ ಪುರಂದರದಾಸರು ಮಾನವಶರೀರ ದುರ್ಬಲವಾದುದರಿಂದಲೂ ಮತ್ತು ಮಾನವಜನ್ಮ ದುರ್ಲಬವಾದುದರಿಂದಲೂ ಹರಿಯನ್ನು ನೆನೆಯುವಂತೆ ಒತ್ತಾಯಿಸುತ್ತಾರೆ. ಜೊತೆಗೆ ಭಗವದ್ದರ್ಶನದಲ್ಲಿ ನಂಬಿಕೆಯನ್ನಿಟ್ಟುಕೊಳ್ಳುತ್ತಾರೆ. ಹೀಗೆ ಭಕ್ತರನ್ನು ಸಂರಕ್ಷಿಸಲು ಯಾವುದೇ ರೂಪದಿಂದ ಭಗವಂತ ಪ್ರಕಟಗೊಳ್ಳಬಲ್ಲ. ದುಷ್ಟನಾದ ಹಿರಣ್ಯಕಶಿಪುವಿಗೆ ದುಷ್ಟರೂಪವನ್ನೇ ತೋರಿದ. ಮುಗ್ಧಬಾಲಕ ಪ್ರಹ್ಲಾದನಿಗೆ ಪ್ರಸನ್ನನಾಗಿಯೇ ಗೋಚರಿಸಿದ. 'ಬ್ರಹ್ಮಭೂತಃ ಪ್ರಸನ್ನಾತ್ಮಾ ನ ಶೋಚತಿ ನ ಕಾಂಕ್ಷತಿ । ಸಮಃ ಸರ್ವೇಷು ಭೂತೇಷು ಮದ್ಭಕ್ತಿಂ ಲಭತೇ ಪರಮ್'[೩೨] (ಆಧ್ಯಾತ್ಮಿಕ ನೆಲೆಯಲ್ಲಿರುವವನು ಕೂಡಲೇ ಪರಬ್ರಹ್ಮನ ಸಾಕ್ಷಾತ್ಕಾರವನ್ನು ಪಡೆಯುತ್ತಾನೆ. ಆತ ಸಂಪೂರ್ಣನಾಗಿ ಪ್ರಸನ್ನನಾಗುತ್ತಾನೆ. ಅವನು ಯಾವಾಗಲೂ ಶೋಕಿಸುವುದಿಲ್ಲ. ಅವನು ಎಲ್ಲಾ ಜೀವಿಗಳನ್ನು ಒಂದೇ ಸಮನಾಗಿ ಕಾಣುತ್ತಾನೆ. ಇಂತಹ ಸ್ಥಿತಿಯಲ್ಲಿ ಅವನು ನನ್ನ ಪರಿಶುದ್ಧ ಭಕ್ತಿಸೇವೆಯನ್ನು ಪಡೆಯುತ್ತಾನೆ) ಇಲ್ಲಿ ಶೋಕವಿಲ್ಲದ, ಆಸೆ ಅಪೇಕ್ಷೆಗಳಿಲ್ಲದ, ಎಲ್ಲಾ ಜೀವಿಗಳಲ್ಲೂ ಸಮತಾಭಾವದಿಂದ ಇರಬಲ್ಲ, ಅಸಮತೆಗೆ ಅಸಮನಾಗಿಯೂ ತೋರಬಲ್ಲ ಈ ಸಿದ್ಧಾಂತವನ್ನೇ ಚೈತನ್ಯಪಂಥವು ಅಚಿಂತ್ಯಶಕ್ತಿಯ ಪ್ರಕಟವೆಂದು ಹೇಳುತ್ತದೆ.

ಅದ್ವೈತ ಹಾಗೂ ದ್ವೈತದಲ್ಲಿರುವ ವ್ಯತ್ಯಾಸವನ್ನು ಕಂಡುಕೊಂಡು, ಶ್ರೀರಾಮಾನುಜಾಚಾರ್ಯರು ಜೀವ ಹಾಗೂ ದೇವರ ನಡುವಿನ ಸಾಮ್ಯ ಮತ್ತು ವ್ಯತ್ಯಾಸವನ್ನು ವಿಶಿಷ್ಟಾದ್ವೈತದ ಮೂಲಕ ಹೇಳಲುಹೊರಟರೆ, ಅದರ ಮುಂದುವರಿದ ವ್ಯಾಖ್ಯಾನವನ್ನು ಶ್ರೀಚೈತನ್ಯ ಮಹಾಪ್ರಭುಗಳು ನೀಡಲು ಮುಂದಾಗುತ್ತಾರೆ. ಅವರ ಪ್ರಕಾರ, ಜೀವನು ಗುಣದಲ್ಲಿ ದೇವನಿಗೆ ಹೋಲಿಕೆಯಾದರೆ, ಗಾತ್ರದಲ್ಲಿ ಮಾತ್ರ ಭಿನ್ನಸ್ವರೂಪನಾಗಿ ಕಾಣುತ್ತಾನೆ. ಭಗವಂತನಿಗೆ ಪೂರ್ಣಜ್ಞಾನವಿದ್ದರೆ, ಮನುಷ್ಯನಿಗೆ ಅಲ್ಪಜ್ಞಾನವಿರುತ್ತದೆ. ಭಗವಂತನು ಸಂಪೂರ್ಣ ಆಕರ್ಷಕನಾದರೆ, ಮನುಷ್ಯನಲ್ಲಿ ಕಿಂಚಿತ್ ಆಕರ್ಷಣೆ. ಭಗವಂತ ಸರ್ವವ್ಯಾಪಿಯಾದರೆ, ಮನುಷ್ಯನ ವ್ಯಾಪ್ತಿಯಲ್ಲಿ ನಿರ್ದಿಷ್ಟತೆಯಿದೆ. ಇದನ್ನೇ 'ಅಚಿಂತ್ಯಾಭೇದಾಭೇದ' ತತ್ವವೆಂದು ಶ್ರೀಚೈತನ್ಯ ಮಹಾಪ್ರಭುಗಳು ಸಾರಲುಹೊರಡುತ್ತಾರೆ. ಒಟ್ಟಿನಲ್ಲಿ ಇದು 'ಮಧುರರತಿ' ತೋರುವ ಭಕ್ತಿಪಂಥ. ಇಲ್ಲಿ ಸದಾ ಭಗವಂತನ ಧ್ಯಾನ ಹಾಗೂ ಹರಿಸಂಕೀರ್ತನಾದಿಗಳಿಂದ ಭಗವಂತನನ್ನು ಗಾಢವಾಗಿ ಪ್ರೀತಿಸುವ ಭಕ್ತಿಭಾವವಿದೆ. ಇದನ್ನು ಗೌಡೀಯಸಾಹಿತ್ಯವು ರಾಗಮಾರ್ಗಭಕ್ತಿ ಅಥವಾ ಪ್ರೇಮಯುತಭಕ್ತಿಸೇವೆಯೆಂದು ಕರೆಯಿತು.[೩೩] ಭಕ್ತನ ಸೇವೆಯಲ್ಲಿ ಸೇರಿಕೊಂಡಿರುವ ದೇವೋನ್ಮಾದವನ್ನು 'ರಾಗಾತ್ಮಿಕಾ' ಎಂದು 'ಭಕ್ತಿರಸಾಮೃತಸಿಂಧು'ವು ಕರೆಯಿತು. ಇಲ್ಲಿಯ ಪ್ರಾರ್ಥನೆಯಲ್ಲಿ ಬೇಡಿಕೆಗಳ ಪಟ್ಟಿಯಿಲ್ಲ; ಸರ್ವಸಮರ್ಪಣೆಯ ನಿಷ್ಠೆಯಿದೆ. ಇದನ್ನು 'ಷರತ್ತುಗಳಿಲ್ಲದ ಪ್ರೇಮ'ವೆನ್ನಬಹುದು. ಇದೇ ಭಗವದ್ಗೀತೆಯ ಸಾರವೂ ಕೂಡ.

೪.೬ (ಆ) ಶರಣಾಗತಿ ಮತ್ತು ಭಕ್ತಿ ಸೇವೆ.

ಚೈತನ್ಯಪಂಥವು ಇತರ ಪಂಥಗಳಿಗಿಂತ ಭಿನ್ನತೆಯನ್ನು ಸಾಧಿಸಿದ್ದುದೇ ಶರಣಾಗತಿ ಮತ್ತು ಭಕ್ತಿಸೇವೆಯೆಂಬ ವಿಚಾರದಲ್ಲಿ. ಇಲ್ಲಿ ಭಕ್ತನೊಬ್ಬನು ಕೃಷ್ಣವಿರಹಕ್ಕೆ ಒಳಗಾಗಿ ತನ್ನನ್ನು ಕೃಷ್ಣನಿಗೆ ಅರ್ಪಿಸಿಕೊಳ್ಳುವ ವಿನೂತನ ಕಲ್ಪನೆಯಿದೆ. ಇಲ್ಲಿಯ ಭಕ್ತಿಸೇವೆ ಒಲವಿನಲ್ಲಿ ಪ್ರಾರಂಭವಾಗಿ ಅಭಿವೃದ್ಧಿ ಹೊಂದುತ್ತಾ, ಅದು ದಾಸ್ಯ, ಸಖ್ಯ, ವಾತ್ಸಲ್ಯದ ಹಂತವನ್ನು ತಲುಪುತ್ತದೆ. ಷಟ್‌ಗೋಸ್ವಾಮಿಗಳಲ್ಲೊಬ್ಬರಾದ ಶ್ರೀಲ ಜೀವಗೋಸ್ವಾಮಿಯವರು ತಮ್ಮ 'ಶ್ರೀಭಾಗವತ ಸಂದರ್ಭ'ದಲ್ಲಿ ಈ ಸೇವೆಯನ್ನು 'ಪ್ರೀತಿ ಸಂದರ್ಭ'ವೆಂದು ಕರೆದಿದ್ದಾರೆ. ಅವರೇ ಹೇಳುವಂತೆ, ಭಕ್ತನೋರ್ವನು ಭಗವಂತನಲ್ಲಿ ಪ್ರೇಮಯುತ ಸೇವೆಯನ್ನು ಗೈಯುವ ಮೂಲಕ ವಿಮುಕ್ತಿಯನ್ನು ಪಡೆಯುತ್ತಾನೆ. ಅಲ್ಲದೆ ಆ ವಿಮುಕ್ತಿಯೇ ಆತನ ಜೀವನದ ಅತ್ಯುನ್ನತ ಪರಿಪೂರ್ಣತೆಯಾಗುತ್ತದೆ. ಇದು ಲೌಕಿಕ ಕಾಮವಲ್ಲ. ಅದು ಅಪ್ರಾಪಂಚಿಕ ಪ್ರೇಮ.

ಸೇಇತ ಪರಾಣ ನಾಥ ಪಾಇನು ।
ಯಾಹಾ ಲಾಗೀ ಮದನ ದಹನೇ ಝುರಿ ಗೇನು ॥[೩೪]

ಇದು ಶ್ರೀಕೃಷ್ಣ ಚೈತನ್ಯರು ಕಾಮನೆಯ ಅಗ್ನಿಯಲ್ಲಿ ಮುಳುಗೇಳುವ ರೀತಿ. ಈ ಕ್ರಮವನ್ನೇ ಅವರು 'ಮದನದಹನೆ' ಎಂದು ಕರೆಯುವುದು ವಿಶೇಷ. ಭಗವಂತನಿಗಾಗಿ ಕಾಮಾಗ್ನಿಯಲ್ಲಿ ಸುಟ್ಟುಹೋಗಿ,

ಭಗವಂತನನ್ನು ಪಡೆದುಕೊಂಡ ಮೇಲೆ ಹೇಳುವ ಉನ್ಮಾದದ ಮಾತಿದು. ಇವರು ಜಗತ್ತನ್ನು ಸತ್ಯವಾಗಿ ಕಂಡರು. ಅದು ಪರಮಪುರುಷನ ಸೇವೆಗಾಗಿಯೇ ಇರುವುದೆಂದರು.

ಚೈತನ್ಯಪಂಥವು ಹೇಳುವ ಭಕ್ತಿಸೇವೆಯಲ್ಲಿ ಮೊದಲನೆಯ ನಿಯಮವೇ ಹರೇಕೃಷ್ಣ ಮಹಾಮಂತ್ರವನ್ನು ಪಠಿಸುವುದು. ಇಲ್ಲಿ 'ಮಹಾ' ಎಂದರೆ ಹಿರಿದಾದದ್ದು ಎಂದರ್ಥ. 'ಮಂತ್ರ' ಎಂದರೆ ಯಾವುದು ಮನಸ್ಸನ್ನು ಅಜ್ಞಾನದಿಂದ ಬಿಡುಗಡೆ ಮಾಡುತ್ತದೋ ಆ ಶಬ್ದ.

ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ
ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ ॥

ಇಲ್ಲಿ ಈ ಮಂತ್ರವನ್ನು ಎರಡು ರೀತಿಯಾಗಿ ಮಾಡಬಹುದು ಎನ್ನುತ್ತದೆ ಚೈತನ್ಯಪಂಥ. ಒಂದನೆಯದಾಗಿ, ಮಂತ್ರವನ್ನು ಹಾಡುವುದು. ಇದನ್ನು 'ಕೀರ್ತನ' ಎಂದು ಹೇಳುತ್ತಾರೆ. ಎರಡನೆಯದಾಗಿ, ಮಂತ್ರವನ್ನು ತನ್ನಷ್ಟಕ್ಕೆ ಮೃದುವಾಗಿ ಹೇಳಿಕೊಳ್ಳುವುದು. ಇದಕ್ಕೆ 'ಜಪ' ಎಂದು ಕರೆಯುತ್ತಾರೆ. ಜಪಿಸುವಾಗ ಶಬ್ದಗಳನ್ನು ಸ್ಪಷ್ಟವಾಗಿ ಮತ್ತು ಬಿಡಿಬಿಡಿಯಾಗಿ ಉಚ್ಚರಿಸಬೇಕಾಗುತ್ತದೆ. ಇಲ್ಲಿ ಭಕ್ತನು ಎಷ್ಟು ಪ್ರಾಮಾಣಿಕನಾಗಿ ಭಗವನ್ನಾಮಗಳನ್ನು ಜಪಿಸುತ್ತಾನೆಯೋ ಅಷ್ಟರಮಟ್ಟಿಗೆ ಆಧ್ಯಾತ್ಮದ ಮುನ್ನಡೆಯನ್ನು ಸಾಧಿಸುತ್ತಾನೆ.

ಶರಣಾಗತಿ ಮತ್ತು ಭಕ್ತಿಸೇವೆಯಲ್ಲಿ ಹರೇಕೃಷ್ಣ ಮಹಾಮಂತ್ರವು ಎಷ್ಟು ಮಹತ್ವಪೂರ್ಣವೋ ಅಷ್ಟೇ ಮಹತ್ತಾದದ್ದು ಗೌರಗೋಪಾಲ ಮಂತ್ರ.

ಗೌರ ಗೋಪಾಲ ಮಂತ್ರ ತೋಮಾರ ಚಾರಿ ಅಕ್ಷರ ।
ಅವಿಶ್ವಾಸ ಛಾಡ ಯೇಇ ಕರಿಯಾಛ ಅನ್ತರ ॥[೩೮]

ಇದು ನಾಲ್ಕು ಅಕ್ಷರಗಳಿಂದ ಕೂಡಿದ ಮಂತ್ರ. ಇದರ ಬಗ್ಗೆ ಹೆಚ್ಚು ವಿವರಣೆಯನ್ನು ಕೊಡುವ ಕೃತಿಯೆಂದರೆ ಶ್ರೀಲ ಭಕ್ತಿ ವಿನೋದ ಠಾಕೂರರ 'ಅಮೃತ ಪ್ರವಾಹ ಭಾಷ್ಯ'. ಇಲ್ಲಿ ನಾಲ್ಕು ಅಕ್ಷರಗಳೆಂದರೆ ಗೌ–ರ–ಅಂ–ಗ. ರಾಧೆ ಮತ್ತು ಕೃಷ್ಣನನ್ನು ಪೂಜಿಸುವ ವೈಷ್ಣವರು ರಾ–ಧಾ–ಕೃ–ಷ್ಣ ಅಕ್ಷರವನ್ನು ಗೌರ ಗೋಪಾಲ ಮಂತ್ರವೆಂದು ಭಾವಿಸುತ್ತಾರೆ. ಅದರೂ ರಾಧಾಕೃಷ್ಣರನ್ನು ಅಭಿನ್ನರೆಂದು ಭಾವಿಸಿರುವ ಗೌಡೀಯ ಪಂಥವು ಈ ಮೇಲಿನ ಎರಡು ಮಂತ್ರವನ್ನು ಪಠಿಸುವವರು ಒಂದೇ ಪಾತಳಿಯಲ್ಲಿರುವವರೆಂದುಕೊಳ್ಳುತ್ತದೆ.

ಗೌಡೀಯ ಸಾಹಿತ್ಯದಲ್ಲಿ ಶ್ರೀಲ ಸನಾತನ ಗೋಸ್ವಾಮಿಗಳು ಬರೆದ ಬೃಹದ್ಭಾಗವತಾಮೃತ, ಹರಿಭಕ್ತಿ ವಿಲಾಸ, ಲೀಲಾಸ್ತವವೆಂಬ ಕೃತಿಗಳು, ಶ್ರೀಲ ರೂಪ ಗೋಸ್ವಾಮಿಗಳ 'ಭಕ್ತಿರಸಾಮೃತ ಸಿಂಧು', 'ಉಜ್ವಲ ನೀಲಮಣಿ' ಕಾವ್ಯಗಳು ಹಾಗೂ 'ವಿದಗ್ಧ ಮಾಧವ' ಮತ್ತು 'ಲಲಿತ ಮಾಧವ'ವೆಂಬ ನಾಟಕಗಳು ಸೇರಿದಂತೆ ಅವರ ಹದಿನಾರು ಗ್ರಂಥಗಳು, ಶ್ರೀಲ ಜೀವ ಗೋಸ್ವಾಮಿಗಳ 'ಷಟ್‌ಸಂದರ್ಭ'(ಭಾಗವತ ಸಂದರ್ಭ), ಗೋಪಾಲಚಂಪೂ ಮೊದಲಾಗಿ ೪,೦೦,೦೦೦ ಶ್ಲೋಕ ರಚನೆಗಳು ಭಕ್ತಿಸೇವೆಯನ್ನು ಮತ್ತು ಶರಣಾಗತಿ ತತ್ತ್ವವನ್ನು ಪ್ರತಿನಿಧಿಸುವಂತಹುದು.

ಭಕ್ತಿಸೇವೆಯನ್ನು ಅರ್ಥೈಸಿಕೊಳ್ಳಲು ಪ್ರಮಾಣೀಕೃತ ಗ್ರಂಥವೆಂದರೆ ಶ್ರೀಮದ್ಭಾಗವತ. ಇದು ವೇದಾಂತ ಸೂತ್ರದ ಮೇಲೆ ಮಾಡಲಾಗಿರುವ ಮೂಲವ್ಯಾಖ್ಯಾನ. ಈ ವೇದಾಂತಸೂತ್ರವನ್ನು ನ್ಯಾಯಪ್ರಸ್ಥಾನ ಎಂದು ಕರೆವವರಿದ್ದಾರೆ. ಇಲ್ಲಿಯ ಮೂಲ ಉದ್ದೇಶವೆಂದರೆ ವ್ಯಕ್ತಿಯು ಪರಮಸತ್ಯವನ್ನು ಭಕ್ತಿಯ ಮೂಲಕ ಸ್ವೀಕರಿಸುವುದು. ಇಂತಹ ಭಕ್ತಿಸೇವೆಯಿಂದ ಮುಂದಿನ ಜನ್ಮದಲ್ಲೂ ಸಾಫಲ್ಯವುಂಟಾಗುತ್ತದೆಯೆಂದು ಗೌಡೀಯರ ಕಲ್ಪನೆ. ಅದಕ್ಕಾಗಿ ಅಲ್ಲಿಯ ಸಾಹಿತ್ಯವು ಪೌರಾಣಿಕ ಪಾತ್ರಗಳನ್ನು ನೆನಪಿಸಿಕೊಳ್ಳುತ್ತದೆ. ಚೈತನ್ಯ ಚರಿತಾಮೃತವು ಹೇಳುವಂತೆ, ದ್ವಾಪರದಲ್ಲಿ ಕೃಷ್ಣನು ಮಗುವಾಗಿದ್ದಾಗ ಅಂಬಿಕಾ ಎನ್ನುವ ಸ್ತ್ರೀಯೊಬ್ಬಳು ಆತನನ್ನು ಲಾಲಿಸುತ್ತಿದ್ದಳು. ಆ ಅಂಬಿಕೆಗೆ ಕಿಲಿಂಬಿಕಾ ಎನ್ನುವ ತಂಗಿಯೊಬ್ಬಳಿದ್ದಳು. ಭಗವಾನ್ ಚೈತನ್ಯರು ಹುಟ್ಟಿದ ಬಳಿಕ ಆ ಕಿಲಿಂಬಿಕೆಯು ಶ್ರೀಚೈತನ್ಯ ಮಹಾಪ್ರಭುಗಳು ಉಂಡುಬಿಟ್ಟ ಆಹಾರವನ್ನು ಸೇವಿಸುತ್ತಿದ್ದಳು. ಈ ಕಿಲಿಂಬಿಕೆಯೇ ಶ್ರೀನಿವಾಸ ಠಾಕೂರರ ಸೋದರನ ಮಗಳಾದ ನಾರಾಯಣಿಯಾಗಿ ಜನಿಸಿ, ಮುಂದೆ ಬೆಳೆದು ದೊಡ್ಡವಳಾಗಿ ಮದುವೆಯೂ ಆದಾಗ ಶ್ರೀಲ ವೃಂದಾವನದಾಸ ಠಾಕೂರರು ಆಕೆಯ ಮಗನಾಗಿ ಹುಟ್ಟುತ್ತಾರೆ.

ಅಂಬಿಕಾಯಾಃ ಸ್ವಸ್ಯಾಯಾಸೀನ್ ನಾಮ್ನಾ ಶ್ರೀಲ ಕಿಲಿಂಬಿಕಾ ।
ಕೃಷ್ಣೋಚ್ಛಿಷ್ಟಂ ಪ್ರಭುಂಜಾನಾ ಸೇಯಂ ನಾರಾಯಣೀ ಮಾತಾ ॥[೩೬]

ಹೀಗೆ ಬಕ್ತಿಸೇವೆಯಿಂದ ಉತ್ತಮ ಜನ್ಮ, ಉತ್ತಮ ಸಂಸ್ಕಾರ, ಉತ್ತಮ ಸಂಸಾರ, ಉತ್ತಮ ಸಂತಾನವೂ ಪ್ರಾಪ್ತಿಯೂಗುತ್ತದೆಂದು ಚೈತನ್ಯಪಂಥವು ಹೇಳುತ್ತದೆ.

ಚೈತನ್ಯಪಂಥದ ಭಕ್ತಿಯ ವ್ಯಾಖ್ಯಾನವು ಉಳಿದ ಧರ್ಮಗ್ರಂಥಗಳಿಗಿಂತ ಭಿನ್ನವಾಗುತ್ತದೆ. ಸಾಮಾನ್ಯವಾಗಿ ಭಕ್ತರಿಗೆ ಸಾರ್ಷ್ಟಿ, ಸಾರೂಪ್ಯ, ಸಾಮೀಪ್ಯ, ಸಾಲೋಕ್ಯಗಳೆಂಬ ಮೋಕ್ಷವನ್ನು ಪಡೆಯುವ ಆಸೆಯು ಇರುತ್ತದೆ. ಆದರೆ ಇಲ್ಲಿಯ ಭಕ್ತರಿಗೆ ಮೋಕ್ಷದ ಹಸಿವಿಲ್ಲ. ಅವರಿಗೆ ದಿವ್ಯಪ್ರೇಮಸೇವೆಯನ್ನು ಭಗವಂತನಿಗೆ ಸಲ್ಲಿಸುವುದರಲ್ಲಿಯೇ ತೃಪ್ತಿಯಿದೆ. ಅವನು ಸಾಯುಜ್ಯವೆಂಬ ಮೋಕ್ಷಕ್ಕಾಗಿ ಹಂಬಲಿಸುವುದೇ ಇಲ್ಲ. ಬದಲಾಗಿ ಕೃಷ್ಣಸೇವೆಗಾಗಿ ಬದುಕನ್ನು ಆಹ್ವಾನಿಸುತ್ತದೆ.

ಚೈತನ್ಯಪಂಥಲ್ಲಿ ಭಕ್ತಿಯೇ ಮುಖ್ಯ. ಹಾಗಾಗಿ ಅದರ ಪ್ರಕಟನೆಯಲ್ಲಿ ಪಂಚತತ್ವಗಳ ನಾಮಸ್ಮರಣೆಯು ಮುಖ್ಯವಾಗಿರುತ್ತದೆ. ಇಲ್ಲಿ ಪಂಚತತ್ವಗಳೆಂದರೆ ಶ್ರೀಚೈತನ್ಯ ಮಹಾಪ್ರಭುಗಳು, ನಿತ್ಯಾನಂದಪ್ರಭು, ಅದ್ವೈತಪ್ರಭು, ಗದಾಧರಪ್ರಭು ಹಾಗೂ ಶ್ರೀವಾಸಪ್ರಭು. ಇಲ್ಲಿ ಶಕ್ತಿಸ್ವರೂಪನಾದ ದೇವೋತ್ತಮ ಪರಮಪುರುಷನು ಅನುಕ್ರಮವಾದ ತನ್ನ ಐದು ವಿಧವಾದ ಲೀಲೆಗಳ ಆನಂದವನ್ನು ಸ್ಫುರಿಸಲು ಪಂಚತತ್ವರೂಪದಲ್ಲಿ ಪ್ರಕಟಗೊಳ್ಳುತ್ತಾನೆ. ಇಲ್ಲಿ ಭಕ್ತನಲ್ಲಿ ಕೃಷ್ಣಭಕ್ತಿಯೊಂದಿದ್ದರೆ ಸಾಲದು. ಮೊದಲು ಪಂಚತತ್ವಗಳ ಪೂಜೆಯನ್ನು ಕೈಗೊಳ್ಳಬೇಕೆಂದು ಪಂಥಸಿದ್ಧಾಂತವು ಸಾರುತ್ತದೆ.

ಚೈತನ್ಯ ಸಿದ್ಧಾಂತದಲ್ಲಿ ಪರಿಪೂರ್ಣತೆಯನ್ನು ಸಾಧಿಸಲು ಮೂರು ಮಾರ್ಗಗಳನ್ನು ತಿಳಿಸುತ್ತದೆ. ಅದರಲ್ಲಿ ವಿಧಿ ನಿಷೇಧಗಳ ರೀತಿಯಲ್ಲಿ ಭಕ್ತಿಸೇವೆಯನ್ನು ಮಾಡಿಗಳಿಸುವ ಸಾಧನಸಿದ್ಧಿಯು ಮೊದಲನೆಯದು.

ಕೃಷ್ಣನನ್ನು ಮರೆಯದೆ ಮಾಡುವ ಭಕ್ತಿಸೇವೆಯೆಂಬ ನಿರಂತರ ಅಥವಾ ನಿತ್ಯಸಿದ್ಧಿಯು ಎರಡನೆಯದಾಗಿರುತ್ತದೆ. ಅಲ್ಲದೆ, ಗುರುವಿನ ಅಥವಾ ವೈಷ್ಣವನ ಅನುಗ್ರಹದಿಂದಾಗಿ ಗಳಿಸುವ ಕೃಪಾಸಿದ್ಧಿಯು ಮೂರನೆಯದಾಗಿದೆ.

ಈ ಪಂಥದ ಭಕ್ತಿಸೇವೆಯಲ್ಲಿ ಮೂಡಿಬರುವ ವೈಷ್ಣವ ಭಕ್ತರನ್ನು ಮೂರು ವರ್ಗಗಳನ್ನಾಗಿ ವಿಂಗಡಿಸಬಹುದು. ಅವುಗಳಲ್ಲಿ ಒಂದನೆಯದು ಕನಿಷ್ಟಅಧಿಕಾರಿ. ಈತನು ವೈಷ್ಣವ ಜೀವನದಲ್ಲಿ ಕೆಳಹಂತದಲ್ಲಿರುವವನು. ಇವನು ದೃಢವಾದ ಭಕ್ತಿಯನ್ನು ಹೊಂದಿರುತ್ತಾನೆ. ಆದರೆ ಆತನಿಗೆ ಶಾಸ್ತ್ರಗಳ ಪರಿಚಯವಿರುವುದಿಲ್ಲ. ಎರಡನೆಯವನು ಮಧ್ಯಮಅಧಿಕಾರಿಯಾಗಿರುತ್ತಾನೆ. ಆತನು ಶಾಸ್ತ್ರಗಳ ನಿರ್ಣಯಗಳನ್ನು ಸಂಪೂರ್ಣವಾಗಿ ತಿಳಿದಿರುತ್ತಾನೆ. ಅಲ್ಲದೆ ಪ್ರಭು ಹಾಗೂ ಗುರುವಿನಲ್ಲಿ ದೃಢವಾದ ಶ್ರದ್ಧೆಯನ್ನಿಟ್ಟಿರುತ್ತಾನೆ. ಈತನು ಭಕ್ತರಲ್ಲದವರಿಂದ ದೂರವಿದ್ದು ಮುಗ್ಧರಿಗೆ ಬೋಧಿಸುವವನಾಗಿರುತ್ತಾನೆ. ಇನ್ನು ಮೂರನೆಯವನಾದ ಉತ್ತಮಅಧಿಕಾರಿಯು ವೈಷ್ಣವತತ್ವಗಳಿಗೆ ವಿರೋಧ ಬಯಸುವವರನ್ನು ನೋಡಲಿಕ್ಕೂ ಅಪೇಕ್ಷಿಸದಿರುವವನಾಗಿರುತ್ತಾನೆ.

ಚೈತನ್ಯಪಂಥದಲ್ಲಿ ಭಕ್ತಿಸೇವೆಗೆ ಜೀವಂತ ಉದಾಹರಣೆಗಳಾಗುವವರು ವಿವಿಧ ವರ್ಗಗಳಾಗಿ ವಿಂಗಡಣೆಗೆ ಒಳಗಾಗುತ್ತಾರೆ. ಇದನ್ನು ಈ ಪಂಥವು ಸಮರ್ಥಿಸಿಕೊಳ್ಳುವುದು ಶ್ರೀಮದ್ಭಾಗವತದ ಉಲ್ಲೇಖದ ಮೂಲಕ.

ನ ಕರ್ಹಿಚಿನ್ ಮತ್ಪರಾಃ ಶಾಂತ ರೂಪೇ ನಂಕ್ಷ್ಯಂತಿ ನೋ ಮೇ ನಿಮಿಷೋ ಲೇಡಿ ಹೇತಿಃ ।
ಯೇಶಾಮ್ ಅಹಂ ಪ್ರಿಯ ಆತ್ಮಾ ಸುತಶ್ಚ ಸಖಾಗುರುಃ ಸುಹೃದೋ ದೈವಮ್ ಇಷ್ಟಮ್ ॥[೩೭]

ಶ್ರೀಕೃಷ್ಣನೇ ಹೇಳುವಂತೆ, ನಾನು ಭಕ್ತನ ಆತ್ಮ, ಭಕ್ತನ ಗೆಳೆಯ, ಭಕ್ತನ ಮಗ, ಭಕ್ತನ ಸ್ವಾಮಿ, ಭಕ್ತನ ಹಿತಚಿಂತಕ ಮತ್ತು ಆತನ ಪರಮಗುರಿಯೂ ಆಗಿರುವೆನೆಂಬುದು. ಈ ಚಿಂತನೆಯನ್ನೇ ಚೈತನ್ಯಪಂಥವು ಸ್ವೀಕರಿಸುವುದನ್ನು ಸಮರ್ಥಿಸಿಕೊಂಡು ಹೋಗುತ್ತದೆ. ಶ್ರೀರೂಪ ಗೋಸ್ವಾಮಿಯವರ 'ಭಕ್ತಿರಸಾಮೃತಸಿಂಧು'ವು ಕೂಡ ಇದನ್ನೇ ಒಪ್ಪಿಕೊಳ್ಳುತ್ತದೆ. ಯಾರು ಕೃಷ್ಣನನ್ನು ಮಗನಾಗಿ, ಹಿತೈಷಿಯಾಗಿ, ಭ್ರಾತೃವಾಗಿ, ತಂದೆಯಾಗಿ, ಮಿತ್ರನನ್ನಾಗಿ ಕಲ್ಪಿಸಿ ಚಿಂತಿಸುತ್ತಾರೋ ಅಂತಹವರಿಗೆ ತನ್ನ ನಮಸ್ಕಾರವನ್ನು ಸಮರ್ಪಿಸಿ, ಪ್ರೇಮಪೂರ್ಣವಾದ ಭಕ್ತಿಸೇವೆಯ ಔನ್ನತ್ಯವನ್ನು ತಲುಪುತ್ತಾರೆ. ಬಿಲ್ವಮಂಗಲರು ಬರೆದಿರುವ 'ಕೃಷ್ಣ ಕರ್ಣಾಮೃತ'ವೂ ಕೂಡ ಇದನ್ನೇ ಹೇಳುತ್ತದೆ.

ತ್ವಚ್ಛೈಶವಂ ತ್ರಿಭುವನಾದ್ಭುತಮ್ ಇತಿ ಅವೇಹಿ
ಮಚ್ಚಾಫಲಂ ಚ ತವ ವಾ ಮಮ ವಾಧಿಗಮ್ಯಮ್ ।
ತತ್ ಕಿಂ ಕರೋಮಿ ವಿರಲಂ ಮುರಲೀ ವಿಲಾಸಿ
ಮುಗ್ಧಃ ಮುಖಾಂಬುಜಮ್ ಉದಿಕ್ಷಿತುಮ್ ಈಕ್ಷಣಾಭ್ಯಂ ॥ – ಕೃಷ್ಣ ಕರ್ಣಾಮೃತ

'ಹೇ ಕೃಷ್ಣ, ಮುರಳೀವಾದಕನೇ, ನಿನ್ನ ಹುಡುಗಾಟದ ಕಾರ್ಯಗಳು ಈ ಜಗತ್ತಿಗೆ ಕಮನೀಯ. ನನ್ನ ಮನಸ್ಸಿನ ತುಮುಲವನ್ನು ನೀನು ಬಲ್ಲೆ. ಅಂತೆಯೇ ನೀನಾರೆಂದು ನಾನು ಬಲ್ಲೆ. ಗೌಪ್ಯವಾದ ನಮ್ಮಿಬ್ಬರ ಸಂಬಂಧವನ್ನು

ಯಾರೂ ಅರಿಯರು. ನಿನ್ನನ್ನು, ನಿನ್ನ ಮುಖಾರವಿಂದವನ್ನು ನೋಡುವ ಕಾತರ ನನ್ನ ಕಣ್ಣುಗಳದ್ದು. ಆದರೂ ನಿನ್ನನ್ನು ಕಾಣಲಾರದವನಾದ ನಾನು ನಿನ್ನನ್ನು ಕಾಣಬೇಕಾದ್ದಲ್ಲಿ ನಾನೇನು ಮಾಡಬೇಕೆಂಬುದನ್ನು ತಿಳಿಸು' ಎಂದು ಉನ್ಮಾದಭಕ್ತಿಯ ಎಳೆಯೊಂದನ್ನು ಬಿಚ್ಚಿಡುತ್ತದೆ.

ಈ ನೆಲೆಯಲ್ಲಿ ಚೈತನ್ಯಪಂಥವು ಭಕ್ತಿಪ್ರೇಮಕ್ಕೆ ರತಿ ಮತ್ತು ಭಾವಗಳೆಂಬ ಎರಡು ಬೀಜಲಕ್ಷಣಗಳನ್ನು ಹೇಳುತ್ತದೆ. ಇದರಿಂದಲೇ ಭಕ್ತರು ಶ್ರೀಕೃಷ್ಣನನ್ನು ಪರಾಜಿತಗೊಳಿಸುತ್ತಾರೆ. ವ್ಯಕ್ತಿಯು ಕೃಷ್ಣಪ್ರೇಮದಲ್ಲಿ ಗಾಢವಾಗಿ ಮುಳುಗಿದಾಗ, ಅದುವೇ ಆತನ ಶಾಶ್ವತಸ್ಥಿತಿಯೆಂದು, ಅದಕ್ಕೆ 'ದೇವೋತ್ತಮನಲ್ಲಿ ಪ್ರೇಮಸ್ಥಿತಿ'ಯೆಂದೂ ಕರೆಯಲಾಗುತ್ತದೆ. ಇಲ್ಲಿ ಕಾಣುವ ಭಕ್ತಿಸಂದರ್ಭಗಳನ್ನು ಈ ಪಂಥವು ಐದು ರೀತಿಯಾಗಿ ವಿಂಗಡಿಸುತ್ತದೆ.

೧. ಶಾಂತ ಸ್ಥಿತಿ
೨. ಸೇವಾ ಭಾವ
೩. ಸಖ್ಯ ಭಾವ
೪. ಪಿತೃ ಭಾವ ಮತ್ತು
೫. ದಾಂಪತ್ಯ ಭಾವ.

ಇಲ್ಲಿಯ ವಿಂಗಡಣೆಯಲ್ಲಿ ಅದರದ್ದೇ ಆದ ರುಚಿಯಿದೆ. ಭಕ್ತನ ಪಾಲಿಗೆ ಭಾವತರಂಗಗಳು ಅನುಕೂಲವಾಗಿ ಪರಿಣಮಿಸಿದಾಗ, ಆತನು ನಗುತ್ತಾನೆ. ಪ್ರತಿಕೂಲವಿದ್ದಾಗ ಅಳುತ್ತಾನೆ. ಇಲ್ಲಿ ಕೃಷ್ಣಪ್ರೇಮವು ಸ್ಥಾಯಿಯಾಗಿದ್ದರೂ, ಪ್ರೇಮ ತೋರುವ ಮನಸ್ಸಿನ ಅಭಿರುಚಿಗಳಲ್ಲಿ ವಿಭಾವ, ಅನುಭಾವ ಮತ್ತು ವ್ಯಭಿಚಾರೀ ಭಾವಗಳು ಜೊತೆಗೂಡಿ ಸಂಚರಿಸುವುದುಂಟು. ಕೃಷ್ಣನಲ್ಲಿ ತೋರುವ ಪ್ರೇಮವು ವಿಭಾವ ಅಭಿರುಚಿಗೊಳಗಾಗಿ, ಕೃಷ್ಣನೇ ಏಕೈಕ ಧ್ಯೇಯವಾದಾಗ ಆಲಂಬನವೂ, ಕೃಷ್ಣನ ಲೋಕೋತ್ತರ ಗುಣಗಳು, ಕಾರ್ಯಗಳು, ಆತನ ಕೊಳಲಗಾನ, ಶಂಖನಾದ, ಅಂಗಾಲಚಿಹ್ನೆಗಳು ಭಕ್ತನ ಚಿತ್ತವೃತ್ತಿಯಲ್ಲಿ ಉದ್ದೀಪನವನ್ನುಂಟು ಮಾಡಬಲ್ಲವು. ಆದುದರಿಂದ ಚೈತನ್ಯಪಂಥದ ಪ್ರೇಮಭಕ್ತಿಯು ಪರಮೋನ್ನತನಾದ ಶ್ರೀಕೃಷ್ಣನನ್ನು ಸಾಕಾರನಾಗಿ ಕಂಡು ಸಾಕ್ಷಾತ್ಕಾರಕ್ಕಾಗಿ ಹಂಬಲಿಸುತ್ತದೆ. ಈ ಮೂಲಕವಾಗಿ ಮಾಯಾತತ್ತ್ವವನ್ನು ಮತ್ತು ನಿರಾಕಾರತೆಯನ್ನು ತಳ್ಳಿಹಾಕುತ್ತದೆ. ಮೂಲತಃ ಮಾಯಾವಾದಿಗಳಾಗಿದ್ದ ರಾಮಾನಂದ ರಾಯರು, ಸಾರ್ವಭೌಮ ಭಟ್ಟಾಚಾರ್ಯರು ಮೊದಲಾಗಿ ಅನೇಕರು ಚೈತನ್ಯಪಂಥದ ಶುದ್ಧಪ್ರೇಮವನ್ನು ಒಪ್ಪಿಕೊಂಡು ವೈಷ್ಣವರಾಗುತ್ತಾರೆ.

ಚೈತನ್ಯಪಂಥವೇ ಹೇಳುವಂತೆ, ಭಕ್ತಿಪ್ರೇಮದ ವಿಕಾಸದಲ್ಲಿ ಭಕ್ತನಲ್ಲಿರುವ ಭಗವಂತನ ಕುರಿತಾದ ಅಂಜಿಕೆ ಮತ್ತು ದೊಡ್ಡವನೆಂಬ ಭಾವ ಕಡಿಮೆಯಾಗುತ್ತಾ ಹೋಗುತ್ತದೆ. ದಾಸ್ಯಭಾವದಿಂದ ಸ್ನೇಹಭಾವಕ್ಕೆ ಪ್ರೇಮಭಕ್ತಿಯು ಮುನ್ನಡೆದು ದಾಂಪತ್ಯ ಪ್ರೇಮಭಾವದ ನೆಲೆಯನ್ನು ತಲುಪುತ್ತದೆ. ಈ ಶುದ್ಧಪ್ರೇಮದ ಪರಿವರ್ತಿತ ಕ್ರಿಯೆಗೆ ಶ್ರೀಚೈತನ್ಯ ಮಹಾಪ್ರಭುಗಳು ಭೂಮಿ, ನೀರು, ಅಗ್ನಿ, ವಾಯು ಮತ್ತು ಆಕಾಶಗಳೆಂಬ ಐದು ಸ್ಥೂಲಧಾತುಗಳನ್ನು ಉದಾಹರಿಸುತ್ತಾರೆ. ಆಕಾಶದಲ್ಲಿ ಶಬ್ದವನ್ನು ಕೇಳುವ ಹಾಗೆ, ಗಾಳಿಯಲ್ಲಿ ಶಬ್ದ ಮತ್ತು

ಸ್ಪರ್ಶಗಳೆರಡೂ ಇವೆ. ಅದರೊಂದಿಗೆ ಅಗ್ನಿಯನ್ನು ಸೇರಿಸಿದಾಗ ಶಬ್ದ, ಸ್ಪರ್ಶದ ಜೊತೆಗೆ ರೂಪವು ಮೂಡುತ್ತದೆ. ಈ ನಾಲ್ಕರೊಂದಿಗೆ ನೀರನ್ನು ಸೇರಿಸಿದಾಗ ಶಬ್ದ, ಸ್ಪರ್ಶ, ರೂಪ ಮತ್ತು ರುಚಿ ಉಂಟಾಗುತ್ತದೆ. ಇವೆಲ್ಲವೂ ಭೂಮಿಯನ್ನು ಸೇರಿದಾಗ ಶಬ್ದ, ಸ್ಪರ್ಶ, ರೂಪ, ರುಚಿ ಮತ್ತು ವಾಸನೆ ಇವೆಲ್ಲವೂ ಉಂಟಾಗುತ್ತದೆ. ಆಕಾಶದಿಂದ ಭೂಮಿಗೆ ಬರುವ ಕಾಲದಲ್ಲಾದ ಹಂತಹಂತದ ಪ್ರಗತಿಯಂತೆ, ಭಕ್ತಿಯ ಲಕ್ಷಣದಲ್ಲೂ ವರ್ಧನೆಯುಂಟಾಗುತ್ತದೆ. ಹಾಗಾಗಿ ಶಾಂತಸ್ಥಿತಿಯಿಂದ ಕೂಡಿದ ಭಕ್ತಿಯು ದಾಸ್ಯ, ಸಖ್ಯ, ವಾತ್ಸಲ್ಯವನ್ನು ದಾಟಿ ಮಧುರವೆಂಬ ದಾಂಪತ್ಯ ಪ್ರೇಮವನ್ನು ತಲುಪುತ್ತದೆ. ಇದನ್ನೇ ದೈವಪ್ರೇಮದ ಅತ್ಯುನ್ನತಸಿದ್ಧಿಯೆಂದು ಚೈತನ್ಯಪಂಥವು ಹೇಳುತ್ತದೆ.

ಈ ಪಂಥವು ಹೇಳುವ ದೈವಪ್ರೇಮದ ಅತ್ಯುನ್ನತ ಸಿದ್ಧಿಯೆನಿಸಿದ ದಾಂಪತ್ಯ ಪ್ರೇಮವು ಲೌಕಿಕವಲ್ಲ. ಅದು ಪಾರಮಾರ್ಥಿಕವಾದುದು. ಕೃಷ್ಣ ಹಾಗೂ ಗೋಪಿಯರ ನಡುವಿನ ಪ್ರೇಮವು ಕಾಮಲಾಲಸೆಯಂತೆ ಕಂಡರೂ ಅಲ್ಲಿ ಅಲೌಕಿಕವಾದ ಅನುಭೂತಿಯಿದೆ. ಐಹಿಕಜಗತ್ತಿನ ಕಾಮಲಾಲಸೆಯು ಪೂರ್ಣವಾದಾಗ ಕಾಮದ ಹಸಿವು ಮಾಯವಾಗುತ್ತದೆ. ಅದು ಮಾನವದೇಹದಷ್ಟೇ ತಾತ್ಕಾಲಿಕವಾದುದು. ಆದರೆ ಪಾರಮಾರ್ಥಿಕದ ಕಾಮಲಾಲಸೆಯಲ್ಲಿ ಪ್ರೇಮವು ವರ್ಧಿಸುತ್ತಾ ಸಾಗುತ್ತದೆ. ಇದಕ್ಕೆ ಕಾರಣ ಅಲ್ಲಿರುವ ಪ್ರೇಮದ ನಿರಂತರತೆ. ಆದ್ದರಿಂದಲೇ ಚೈತನ್ಯಪಂಥವು ಕೃಷ್ಣನನ್ನು 'ನಿತ್ಯನೂತನ ಮನ್ಮಥ'ನೆಂದು ಕರೆಯುತ್ತದೆ. ಚೈತನ್ಯಪಂಥದ ದ್ರಷ್ಟಾರರಾದ ಶ್ರೀಕೃಷ್ಣಚೈತನ್ಯರಂತೂ ತಮ್ಮ ಬದುಕಿನ ಕೊನೆಯ ಹನ್ನೆರಡು ವರ್ಷಗಳಲ್ಲಿ ಕೃಷ್ಣವಿರಹದ ದೇವೋನ್ಮಾದದಲ್ಲಿ ಮುಳುಗಿ ಬಿಡುತ್ತಾರೆ.

ಶೇಷ ಯೇ ರಹಿಲ ಪ್ರಭುರ ದ್ವಾದಶ ವತ್ಸರ ।
ಕೃಷ್ಣೇರ ವಿಯೋಗ ಸ್ಫೂರ್ತಿ ಹಯ ನಿರಂತರ ॥[೩೮]

ಇಲ್ಲಿ ಗೋಪಿಯರನ್ನು ಕಾಣಲು ಉದ್ಧವನು ವೃಂದಾವನಕ್ಕೆ ಬಂದಾಗ ರಾಧಾರಾಣಿಯ ಮನಃಸ್ಥಿತಿ ಹೇಗಿತ್ತೋ, ಅದೇ ರೀತಿಯ ಮನಃಸ್ಥಿತಿಗೆ ಚೈತನ್ಯ ಮಹಾಪ್ರಭುಗಳು ಒಳಗಾಗುತ್ತಾರೆ.[೩೯] ಮರಳಿನ ಗುಡ್ಡಗಳನ್ನು ಗೋವರ್ಧನ ಗಿರಿಯೆಂದು ಭ್ರಮಿಸಿ ಆ ಕಡೆಗೆ ಓಡುತ್ತಿದ್ದುದು ರಾಧೆಯ ವಿರಹದ ಪರಿಕಲ್ಪನೆಯಿಂದಲೇ. ದಕ್ಷಿಣಭಾರತದಲ್ಲಿ ಸಂಚರಿಸುತ್ತಿದ್ದ ಮಾಧವೇಂದ್ರಪುರಿಯವರು ರೇಮುಣಾಗ್ರಾಮಕ್ಕೆ ಬಂದು ಗೋಪೀನಾಥನ ರೂಪವನ್ನು ನೋಡಿ ಭಾವಪರವಶವಾಗಿ,

ನೃತ್ಯ ಗೀತ ಕರಿ ಜಗಮೋಹನೇ ವಸಿಲಾ ।
ಕ್ಯಾ ಕ್ಯಾ ಭೋಗ ಲಾಗೇ ? ಬ್ರಾಹ್ಮಣೇ ಪುಛಿಲಾ ॥[೪೦]

ಎಂದು ನರ್ತನ ಸಂಕೀರ್ತನಕ್ಕೆ ಒಳಗಾದುದು ದೇವೋನ್ಮಾದದಿಂದಲೇ ಎನ್ನಬೇಕು. ಇವರೆಲ್ಲರ ಭಕ್ತಿಸೇವೆಯೊಂದಿಗೆ ರಘುನಾಥದಾಸ ಗೋಸ್ವಾಮಿಗಳ ಭಕ್ತಿಸೇವೆಯು ಅಚ್ಚರಿಯನ್ನುಂಟುಮಾಡುವಂತಹುದು. ಅವರು ಭಕ್ತಿಯ ಪಾರಮ್ಯದಲ್ಲಿ ಒಂದಿಷ್ಟು ಮಜ್ಜಿಗೆಯನ್ನು ಕುಡಿಯುತ್ತಿದ್ದುದು ಬಿಟ್ಟರೆ ಅನ್ನಪಾನಗಳನ್ನು ಕ್ರಮೇಣದಲ್ಲಿ ಬಿಟ್ಟುಬಿಡುತ್ತಾರೆ. ಅವರು ನಿತ್ಯ ಕರ್ತವ್ಯವಾಗಿ ಒಂದುಸಾವಿರ ನಮಸ್ಕಾರಗಳನ್ನು ಚೈತನ್ಯರಿಗೆ

ಸಲ್ಲಿಸುತ್ತಿದ್ದರು. ಕನಿಷ್ಟವೆಂದರೆ ಒಂದುಲಕ್ಷ ಬಾರಿ ಪುಣ್ಯನಾಮುಗಳನ್ನು ಜಪಿಸುತ್ತಿದ್ದರು. ಎರಡುಸಾವಿರ ವೈಷ್ಣವರಿಗೆ ಪ್ರಣಾಮಗಳನ್ನು ಮಾಡುತ್ತಿದ್ದರು. ಒಟ್ಟಿನಲ್ಲಿ ದಿನದ ಇಪ್ಪತ್ತೆರಡೂವರೆ ಘಂಟೆಗಳಿಗೂ ಹೆಚ್ಚಿನಕಾಲ ಭಕ್ತಿಸೇವೆಯಲ್ಲಿ ನಿರತರಾಗಿರುತ್ತಿದ್ದರೆಂದು ಚೈತನ್ಯ ಚರಿತಾಮೃತವು ಹೇಳುತ್ತದೆ.[೧೧] ಅಲ್ಲದೆ ಪಂಥವೇ ನಿರ್ದೇಶಿಸುವಂತೆ ಶರಣಾಗತಿಯಲ್ಲಿ ಮುಖ್ಯವಾಗಿ ಆರು ತತ್ವಗಳನ್ನು ಪಾಲಿಸಬೇಕಾಗುತ್ತದೆ. ಅವುಗಳೆಂದರೆ,

೧. ಭಕ್ತಿಸೇವೆಯನ್ನು ಮಾಡಲು ತಕ್ಕುದಾದ ವಿಷಯಗಳನ್ನು ಒಪ್ಪಿಕೊಳ್ಳುವುದು.

೨. ಅಸಮ್ಮತವಾದುದನ್ನು ಕಡೆಗಣಿಸುವುದು.

೩. ಭಗವಂತನ ಸಂರಕ್ಷಣೆಯಲ್ಲಿ ನಂಬಿಕೆಯನ್ನಿಡುವುದು.

೪. ಭಗವಂತನು ದಯಾಮಯನೆಂದು ಒಪ್ಪಿಕೊಳ್ಳುವುದು.

೫. ಭಕ್ತನು ನಮ್ರನಾಗಿಯೂ ವಿನೀತನಾಗಿಯೂ ಇರಬೇಕಾಗುವುದು. ಹಾಗೂ

೬. ಭಗವಂತನ ಹಿತಾರ್ಥವನ್ನೇ ಬಯಸುವುದು.

ಇದು ಶರಣಾಗತಿಗಾಗಿ ಭಕ್ತಿನಿಗೆ ಚೈತನ್ಯಪಂಥವು ಹೇಳುವ ಆರು ಸೂತ್ರಗಳು. ಇದನ್ನು ಒಪ್ಪಿಕೊಂಡು ಮುಂದುವರೆದಾಗ ಮಾತ್ರ ಭಗವಂತನ ಪ್ರೀತಿಪೂರ್ವಕ ಭಕ್ತಿಸೇವೆ ಸಾಧ್ಯವಾಗುತ್ತದೆ.

ಭಕ್ತಿಸೇವೆಯ ಮೂಲಕವಾಗಿ ತನ್ನ ಅಸ್ತಿತ್ವವನ್ನು ಪರಿಶುದ್ಧಗೊಳಿಸಿಕೊಂಡಿರುವ ಭಕ್ತನು ಜೀವನದ ಪ್ರತೀ ಹಂತದಲ್ಲೂ ಕೃಷ್ಣನನ್ನೇ ಕಾಣುತ್ತಾನೆ. ಅಂದರೆ ಆ ಭಗವಂತನು ಪ್ರತಿಯೊಂದು ಆತ್ಮಗಳ ಆತ್ಮನಾಗಿರುತ್ತಾನೆ. ಭಕ್ತಿಸೇವೆಯ ಪರಿಣಾಮವೆಂದರೆ ಐಹಿಕಲಾಭವನ್ನು ಪಡೆಯುವುದಲ್ಲ ಅಥವಾ ಐಹಿಕಬಂಧನದಿಂದ ಮುಕ್ತನಾಗುವುದೂ ಅಲ್ಲ. ಅದರ ನಿಜವಾದ ಉದ್ದೇಶವೆಂದರೆ ಪರಮಪ್ರಭುವಿನ ಪ್ರೀತಿಯ ಸೇವೆಯಲ್ಲಿ ನೆಲೆನಿಲ್ಲುವುದು ಮತ್ತು ಆ ಸೇವೆಯಲ್ಲಿ ಸಿಗುವ ಐಹಿಕ ಆನಂದವನ್ನು ಅನುಭವಿಸುವುದು. ಇಲ್ಲಿ ವ್ಯಕ್ತಿಯು ಪರಮಪುರುಷನಾದ ದೇವೋತ್ತಮನನ್ನು ಮರೆತರೆ ಅವನು ದಾರಿದ್ರ್ಯವನ್ನು ಪಡೆಯುತ್ತಾನೆಂದು ಭಾವಿಸಿಕೊಳ್ಳಬೇಕು. ಲೌಕಿಕ ಅಸ್ತಿತ್ವದ ಸಂಕೋಲೆಗಳನ್ನು ತಾನೇತಾನಾಗಿ ಕಳೆದುಕೊಳ್ಳಬೇಕಾದರೆ ಅಂತಹ ದಾರಿದ್ರ್ಯಮಯವಾದ ಬದುಕನ್ನು ಕೊನೆಗೊಳಿಸಬೇಕಾಗುತ್ತದೆ. ಜೀವನು ಪರಮಪ್ರಭುವಿನ ಸೇವೆಯ ಸವಿಯನ್ನು ಪಡೆದಾಗ, ಅವನು ತನ್ನಿಂದ ತಾನಾಗಿಯೇ ಐಹಿಕಭೋಗದಿಂದ ಮುಕ್ತನಾಗಲು ಸಾಧ್ಯ.

ಇದರಿಂದ ನಾವು, ಜೀವಿಯಲ್ಲಿರುವ ಆತ್ಮವು ಕೃಷ್ಣನ ವಿಭಿನ್ನಾಂಶವೆಂದು ಅರ್ಥೈಸಿಕೊಳ್ಳಬೇಕು. ಪರಮಪ್ರಭುವೆಂದೆನಿಸಿಕೊಳ್ಳುವ ಶ್ರೀಕೃಷ್ಣನು ಪ್ರತಿಯೊಂದು ಜೀವಿಗೂ ಬಲುಪ್ರಿಯನಾಗಿರುತ್ತಾನೆ. ಅಂತೆಯೇ ಪ್ರತಿಯೊಂದು ಜೀವನಿಗೂ ಅವನ ದೇಹವು ಪ್ರಿಯವಾಗಿರುತ್ತದೆ. ಪ್ರತಿಯೊಬ್ಬನು ಎಲ್ಲಾ ರೀತಿಯಿಂದಲೂ ತನ್ನ ದೇಹವನ್ನು ರಕ್ಷಿಸಿಕೊಳ್ಳುತ್ತಿರುತ್ತಾನೆ. ಏಕೆಂದರೆ ಅವನ ದೇಹದಲ್ಲಿ ಆತ್ಮವು ಜೀವಿಸಿಕೊಂಡಿರುತ್ತದೆ. ದೇಹ ಮತ್ತು ಆತ್ಮಗಳ ಮಧ್ಯೆ ಅನ್ಯೋನ್ಯತೆಯಿರುವುದರಿಂದ ದೇಹಕ್ಕೆ ಮಹತ್ವವಿರುತ್ತದೆ. ಆತ್ಮವು ಕೃಷ್ಣನ ವಿಭಿನ್ನಾಂಶವಾಗಿದ್ದರೂ ಅದರ ದುರ್ದೈವದಿಂದಾಗಿ ತನ್ನ ಬದ್ಧಸ್ಥಿತಿಯನ್ನು ಮರೆತು, ತಾನೇ ದೇಹವೆಂದು ತಿಳಿಯಲು ಮುಂದಾಗುತ್ತದೆ.

ಹೀಗೆ ಆತ್ಮವೊಂದು ಲೌಕಿಕದ ನೀತಿ ನಿಯಮಗಳಿಗೆ ಒಳಗಾಗಿಬಿಡುತ್ತದೆ. ಯಾವಾಗ ಜೀವಿಯು ತನ್ನ ಬುದ್ಧಿಯ ಮೂಲಕವಾಗಿ ತನ್ನ ಆಕರ್ಷಣೆಗಳೆಲ್ಲವನ್ನು ಕೃಷ್ಣನ ಬಗ್ಗೆ ಎಚ್ಚರಿಸುತ್ತಾನೋ, ಆಗ ಅವನು ತಾನು ದೇಹವಲ್ಲವೆಂದೂ, ತಾನು ಕೃಷ್ಣನ ವಿಭಿನ್ನಾಂಶವೆಂದು ತಿಳಿದುಕೊಳ್ಳಲು ಸಮರ್ಥನಾಗುತ್ತಾನೆ.

ಒಟ್ಟಿನಲ್ಲಿ ಭಕ್ತಿಸೇವೆ ಮತ್ತು ಶರಣಾಗತಿಯೆಂಬ ತತ್ವಗಳು ಪರಮಪುರುಷನನ್ನು ಪಡೆಯುವಲ್ಲಿ ಸಹಕಾರವನ್ನೀಯುತ್ತವೆ. ಪ್ರಾಯಶಃ ಇದನ್ನು ಪಡೆಯಲು ಚೈತನ್ಯಪಂಥವು ಸ್ವೀಕರಿಸುವ ದಾರಿ ಮಾತ್ರ ಇತರ ಪಂಥಕ್ಕಿಂತ ಭಿನ್ನವಾದುದೆಂದು ಭಾವಿಸಬೇಕಾಗುತ್ತದೆ.

೪.೬ (ಇ) ನಿರಾಕಾರದ ಖಂಡನೆ ; ಸ್ವರೂಪಾಕಾರದ ಮಂಡನೆ

ಬಂಗಾಳದಲ್ಲಿ ಹುಟ್ಟಿದ ಶ್ರೀಚೈತನ್ಯರ ಅಚಿಂತ್ಯಾಭೇದಾಭೇದ ಸಿದ್ಧಾಂತವು ಶಂಕರರ ಅದ್ವೈತವೆಂಬ ನಿರಾಕಾರ ತತ್ವವನ್ನು ಖಂಡಿಸುತ್ತದೆ. ಶ್ರೀಚೈತನ್ಯರ ಪ್ರಕಾರ ಪ್ರತಿಯೊಂದು ಜೀವಿಯ ಹೃದಯದಲ್ಲೂ ಹಾಗೂ ಪ್ರತೀ ಅಣುಸ್ವರೂಪದಲ್ಲೂ ಭಗವಂತನಿದ್ದು. ಆತನು ಸಾಕಾರ ರೂಪಿತನಾಗಿರುತ್ತಾನೆ. ಅವರು ಶಂಕರಾಚಾರ್ಯರು ಹೇಳುವ 'ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವನಾಪರಃ' (೧. ಬ್ರಹ್ಮವೊಂದೇ ಸತ್ಯ. ೨. ಜಗತ್ತುಮಿಥ್ಯಾ ೩. ಜೀವನೇ ಬ್ರಹ್ಮ ೪. ಜೀವ ಬ್ರಹ್ಮನಿಂದ ಬೇರೆಯಲ್ಲ) ಎಂಬಲ್ಲಿ 'ಜಗನ್ಮಿಥ್ಯಾ'ವೆಂಬ ಮಾಯಾವಾದದ ಅದ್ವೈತ ನಿಲುವಿಗೆ ವಿರೋಧವನ್ನು ಸೂಚಿಸುತ್ತಾರೆ. ಚೈತನ್ಯರ ಈ ನಿಲುವಿಗೆ ಒಂದು ಕಾರಣವೆಂದರೆ, ಅವರು ಅನುಸರಿಸಿದ ಮಾರ್ಗವು ಭಕ್ತಿಸ್ವರೂಪವಾದುದು. ಆದರೆ ಶಂಕರಾಚಾರ್ಯರು ಅನುಸರಿಸಿದ್ದು ಜ್ಞಾನಮಾರ್ಗ. ಆ ಜ್ಞಾನಮಾರ್ಗದ ಮೂಲಕವಾಗಿಯೇ ವ್ಯಕ್ತಿಯ 'ಅಹಂ'(ಜೀವಾತ್ಮ) ಮತ್ತು 'ಅತ್ಮ ಬ್ರಹ್ಮ'(ಪರಮಾತ್ಮ)ಗಳು ಒಂದೆಂಬ ಕಲ್ಪನೆಯನ್ನು ಶಂಕರಾಚಾರ್ಯರು ಸಮೀಕರಿಸಿದರು. ಆದರೆ ಚೈತನ್ಯರು ಈ ಮಾರ್ಗಾವಲಂಬಿಗಳನ್ನು ನಿರಾಕಾರವಾದಿಗಳೆಂದು ಕರೆದರು. ಪರಮಾತ್ಮನನ್ನು ಪರಮಪುರುಷನೆಂದು ಭಾವಿಸಿ, ಆತನ ಸಾಕಾರತ್ವಕ್ಕೆ ವ್ಯಾಖ್ಯಾನವನ್ನು ನೀಡಿದರು. ಶಂಕರಾಚಾರ್ಯರ ' ಬ್ರಹ್ಮ ಸತ್ಯಂ ಜಗನ್ಮಿಥ್ಯಾ' ಎಂಬ ಮಾಯಾವಾದದ ಹೇಳಿಕೆಯನ್ನು ಭಗವದ್ಗೀತೆಯ ಆಧಾರದಲ್ಲಿ ಶ್ರೀಚೈತನ್ಯರು ಖಂಡಿಸಿ, ಅಲ್ಲಿಯ ಮಾಯಾವಾದಿಗಳಿಗೆ ಅಚಿಂತ್ಯಾತತ್ತ್ವಸಿದ್ಧಾಂತದ ಸಾರಬೋಧೆಯನ್ನು ನೀಡಲು ಮುಂದಾಗುತ್ತಾರೆ.

ಅಹಂ ಸರ್ವಸ್ಯ ಪ್ರಭವೋ ಮತ್ತಃ ಸರ್ವಂ ಪ್ರವರ್ತತೇ ।
ಇತಿ ಮತ್ವಾ ಭಜಂತೇ ಮಾಂ ಬುಧಾ ಭಾವ ಸಮನ್ವಿತಾಃ ॥[೨೨]

ಭಗವದ್ಗೀತೆಯಲ್ಲಿ ಹೇಳುವಂತೆ, "ಸಕಲ ಆಧ್ಯಾತ್ಮಿಕ ಹಾಗೂ ಐಹಿಕ ಜಗತ್ತಿನ ಮೂಲವು ನಾನೇ. ಅಂತೆಯೇ ಪ್ರತಿಯೊಂದರ ಆಕರ್ಷಣೆಯೂ ನಾನೇ. ಇದನ್ನು ಬಲ್ಲವರು ಜ್ಞಾನಿಗಳು. ಅವರು ಆಂತರಂಗಿಕ ಭಕ್ತಿಯಿಂದ ಪೂಜಿಸುತ್ತಾರೆ"– ಈ ಹೇಳಿಕೆಯಿಂದ ಅದ್ವೈತದ ಕಲ್ಪನೆ ಬಿದ್ದು ಬಿಡುತ್ತದೆಂಬುದು ಶ್ರೀಚೈತನ್ಯರ ಅಭಿಪ್ರಾಯ.

ಚೈತನ್ಯರ ಕಾಲದಲ್ಲಿ ಉತರಭಾರತದಲ್ಲಿದ್ದ ಎರಡು ಮುಖ್ಯ ನಿರಾಕಾರ ಸಿದ್ಧಾಂತವೆಂದರೆ ೧. ಸಾರನಾಥ್‌ನ ಮಾಯಾವಾದಿ ಸಿದ್ಧಾಂತ. ೨. ವಾರಣಾಸಿಯ ಮಾಯಾವಾದಿ ಸಿದ್ಧಾಂತ. ಸಾರನಾಥದ ಮಾಯವಾದಿಗಳು ದಾರ್ಶನಿಕರಾಗಿದ್ದುದು ಮಾತ್ರವಲ್ಲದೆ, 'ನಿರಾಕಾರ ಬ್ರಹ್ಮ'ದ ಅವಲಂಬಿಗಳಿಗಿಂತ ಭಿನ್ನರಾದವರು. ಅವರಿಗೆ ಅಧ್ಯಾತ್ಮಿಕ ಅಸ್ತಿತ್ವವಿಲ್ಲ. ಆದರೆ ಐಹಿಕಪ್ರಕೃತಿಯಲ್ಲಿ ಎರಡೂ ಪಂಗಡಗಳೂ ಸಿಲುಕಿಕೊಂಡಿರುವುದು ನಿಜಸ್ಥಿತಿಯಾದರೂ ಪರಮೋನ್ನತವಾದ ಪಾರಮಾರ್ಥಿಕ ಸ್ವಭಾವವನ್ನು ಇವರು ತಿಳಿಯಲಾರರು. ವಾರಣಾಸಿಯ ಮಾಯಾವಾದಿಗಳು ವೈದಿಕ ತತ್ವಗಳನ್ನು ಮೇಲ್ನೋಟಕ್ಕೆ ಒಪ್ಪಿಕೊಂಡು, ತಾವು ಅಲೌಕಿಕರೆಂದು ಹೇಳಿಕೊಂಡರೂ ಅಧ್ಯಾತ್ಮಿಕ ಭನ್ನತೆಗಳಾದ ಸಂಕೀರ್ತನ, ನರ್ತನ ಇತ್ಯಾದಿಗಳನ್ನು ಒಪ್ಪಿಕೊಳ್ಳಲಾರರು. ಈ ದೆಸೆಯಲ್ಲಿ ಚೈತನ್ಯರು ಆರಂಭಿಸಿದ ಸಂಕೀರ್ತನ ನರ್ತನಗಳೆಂಬ ಆಧ್ಯಾತ್ಮಿಕ ಭಿನ್ನತೆಗಳು ಮೊದಲದಿನಗಳಲ್ಲಿ ಟೀಕೆಗೆ ಗುರಿಯಾದವು. ಅದ್ವೈತಸಂಪ್ರದಾಯದ ಕೇಶವ ಭಾರತಿಯವರಿಂದ ಚೈತನ್ಯರು ಸಂನ್ಯಾಸ ಸ್ವೀಕಾರಮಾಡಿ ವೇದಾಂತದರ್ಶನ, ಶ್ರವಣಮಾಡುವ ಬದಲು ಗಾಯನ, ಸಂಗೀತವಾದ್ಯ, ಸಂಕೀರ್ತನ, ನರ್ತನಗಳಲ್ಲಿ ತೊಡಗಿದ್ದುದು ಮಾಯಾವಾದಿಗಳ ಅಚ್ಚರಿಗೆ ಕಾರಣವಾಗಿತ್ತು. ಶಂಕರಾಚಾರ್ಯರು ಹೇಳುವಂತೆ, ಸಂನ್ಯಾಸಿಯಾದವನು ವೇದಾಂತಧ್ಯಯನದೊಂದಿಗೆ ಒಂದೇ ವಸನವನ್ನು ಹೊದ್ದು ತೃಪ್ತನಾಗಬೇಕು. ಆದರೆ ಭಾವೋನ್ಮತ್ತರಾಗಿ ಗಾಯನ, ಸಂಕೀರ್ತನ, ನರ್ತನ, ಸಂಗೀತವಾದ್ಯಗಳು ಜ್ಞಾನಯೋಗಕ್ಕೆ ಹೊಂದಿಕೆಯಾಗುವುದಿಲ್ಲವೆಂಬುದು ಅವರ ವಾದ.

ಈ ನಿಟ್ಟಿನಲ್ಲಿ ಶಂಕರಾಚಾರ್ಯರ ಮಾಯಾವಾದದ ಖಂಡನೆಯನ್ನು ಶ್ರೀಚೈತನ್ಯರು ಮಾಡುವಂತಹುದು ಭಾಗವತದ ಶ್ಲೋಕಾಧಾರದಲ್ಲಿ. ಆದರೂ ಶಂಕರಾಚಾರ್ಯರನ್ನು ಶಿವನ ಅವತಾರವೆಂದು ಚೈತನ್ಯರು ಒಪ್ಪಿಕೊಳ್ಳುತ್ತಾರೆ. ಇದಕ್ಕೆ ಶಿವನು ಭಾಗವತ ಸಂಪ್ರದಾಯದ ಶ್ರೇಷ್ಠಭಕ್ತನೆಂಬುದೇ ಕಾರಣ. ಹೀಗಿದ್ದರೂ ಶಿವನು ಮಾಯಾವಾದ ಸಿದ್ಧಾಂತವನ್ನು ಒಪ್ಪಿಕೊಳ್ಳುತ್ತಾನೆ.

ಮಾಯಾವಾದಮ್ ಅಸಚ್ಛಾಸ್ತ್ರಂ ಪ್ರಚ್ಛನ್ನಂ ಬೌದ್ಧಂ ಉಚ್ಯತೇ ।
ಮಯ್ಯೈವ ಕಲ್ಪಿತಂ ದೇವಿ ಕಲೌ ಬ್ರಾಹ್ಮಣ ರೂಪಿಣಾ ॥ –ಪದ್ಮಪುರಾಣ

ಮಾಯಾವಾದವು ಪ್ರಚ್ಛನ್ನವಾದ ಬೌದ್ಧಮತ. ಇಲ್ಲಿರುವುದು ಬುದ್ಧನ ಶೂನ್ಯವಾದ. ಆದರೂ ತನ್ನ ಹೇಳಿಕೆಯನ್ನು ವೇದಪ್ರಣೀತವೆಂದು ಹೇಳಿಕೊಳ್ಳುತ್ತದೆ. ಆದರೂ ಕಲಿಯುಗದಲ್ಲಿ ಮಾಯಾವಾದವನ್ನು ಸೃಷ್ಟಿಸಿ ಹೇಳುವುದಾಗಿ ಶಿವನು ಒಪ್ಪಿಕೊಳ್ಳುತ್ತಾನೆ. ಶಿವನ ಅಂತರ್ಯದಲ್ಲಿ ಪರಮಪುರುಷನಿಗೆ ಅಲೌಕಿಕ ದೇಹವಿರುವುದನ್ನು ಒಪ್ಪಿಕೊಂಡರೂ ಆತ ನಿರಾಕಾರಿಯೆಂದು ಹೇಳಲು ಮುಂದಾಗುತ್ತಾನೆ.

ದ್ವಾಪರಾದೌ ಯುಗೇ ಭೂತ್ವಾ ಕಲಯಾ ಮಾನುಷಾದಿಷು ।
ಸ್ವಾಗಮ್ಯೈಃ ಕಲ್ಪಿತೈಸ್ ತ್ವಂ ಚ ಜನಾನ್ ಮದ್ವಿಮುಖಾನ್ ಕುರು ॥ – ಶಿವಪುರಾಣ

ದ್ವಾಪರಯುಗದ ಮೊದಲಲ್ಲಿ ನನ್ನ ಆಜ್ಞಾನುಸಾರವಾಗಿ ಅನೇಕ ಮುನಿವರ್ಯರು ಮಾಯಾವಾದಿ ಸಿದ್ಧಾಂತವನ್ನು ಹೇಳಿ ಸಾಮಾನ್ಯ ಜನರನ್ನು ವಿಸ್ಮಯಗೊಳಿಸುತ್ತಾರೆ.

ಇಲ್ಲಿಯ ಮಾಯಾವಾದಿಗಳಲ್ಲಿ ಮುಖ್ಯರಾದ ಸದಾನಂದ ಯೋಗಿಗಳು ಶಂಕರಾಚಾರ್ಯರ ನಂತರದಲ್ಲಿ ಬಂದವರು. ಅವರು ತಮ್ಮ 'ವೇದಾಂತಸಾರ'ದಲ್ಲಿ 'ಪರಮಸತ್ಯವಾದ ನಿತ್ಯಜ್ಞಾನ ಮತ್ತು ಆನಂದಗಳೇ ಬ್ರಹ್ಮವೆಂದೂ, ಅವನೇ ಐಹಿಕ ಶಕ್ತಿಯ ಫಲವೆಂದೂ ಹೇಳುತ್ತಾರೆ. ಆದರೆ ಈ ವ್ಯಾಖ್ಯಾನವು ಕೇವಲ ನಿರಾಕಾರತತ್ತ್ವದವರಿಗೆ ಮಾತ್ರ ಸಮ್ಮತವಾದೀತೇ ಹೊರತು ವೈಷ್ಣವತತ್ತ್ವ ಪ್ರತಿಪಾದಕರಿಗಲ್ಲ. ಈ ನಿಟ್ಟಿನಲ್ಲಿ ವೈಷ್ಣವತತ್ತ್ವ ಪ್ರತಿಪಾದಕರು ಶ್ವೇತಾಶ್ವತರ ಉಪನಿಷತ್ತನ್ನು ಸಮರ್ಥಿಸುತ್ತದೆ. ಆ ಉಪನಿಷತ್ತಿನ ಪ್ರಕಾರ ದೇವೋತ್ತಮ ಪರಮಪುರುಷನು ಜಗದಭಿವ್ಯಕ್ತಿಗೆ ಅತೀತನಾದವನು. ಅವನು ಸರ್ವಧರ್ಮಗಳ ಮೂಲ ಹಾಗೂ ಸರ್ವವ್ಯಾಪಕವೆನ್ನುತ್ತದೆ. ಅಲ್ಲದೆ ಪರಮಪ್ರಭುವಿನ ಶಕ್ತಿಮೂಲದ ವಿವಿಧ ಅಭಿವ್ಯಕ್ತಿಗಳಿಗೆ ಭಾರತೀಯ ವೈದಿಕಸಾಹಿತ್ಯ ಕೃತಿಗಳು ಆಧಾರವನ್ನು ದೊರಕಿಸಿಕೊಡುತ್ತವೆ. ಭಗವಂತನ ನಾಮ, ರೂಪ, ಗುಣ, ಪರಿವಾರವೆಲ್ಲವೂ ಪರಮಾರ್ಥದಿಂದ ಸಂಗ್ರಹಿತವಾಗಿರುವಾಗ, ಆತನಾದರೂ 'ನಿರಾಕಾರ' ಹೇಗಾದಾನು ಎನ್ನುವ ಪ್ರಶ್ನೆಯು ವೈಷ್ಣವರುಗಳದ್ದು. ಹಾಗಾಗಿ ಚೈತನ್ಯರು, ಅಚಿಂತ್ಯವಾದ ಆತನ ಶಕ್ತಿಯು ಬ್ರಹ್ಮಾಂಡದಲ್ಲಿ ಸರ್ವವ್ಯಾಪಿಯಾಗಿ ಹರಡಿಕೊಂಡಿರುವುದನ್ನು ಉದಾಹರಣೆಗಳ ಮೂಲಕವಾಗಿ ಸಮಾಜಕ್ಕೆ ತಿಳಿಸಿದರು. ಈ ಸಮರ್ಥನೆಗಾಗಿ ಅವರು ಆರಿಸಿಕೊಂಡಿದ್ದು ಭಾಗವತದ 'ಆತ್ಮಾರಾಮಾ......' ಶ್ಲೋಕವನ್ನು. ಆ ಮೂಲಕವಾಗಿಯೇ ಮಾಯಾವಾದದ ವಿರುದ್ಧ ಅಚಿಂತ್ಯಾರ್ಥ ಪ್ರೇಮವನ್ನು ತೋರಿದರು.

ಆತ್ಮಾ ರಾಮಾಶ್ಚ ಮುನಯೋ ನಿರ್ಗ್ರಂಥಾ ಅಪಿ ಉರುಕ್ರಮೇ ।
ಕುರ್ವಂತಿ ಅಹೈತುಕೀಂ ಭಕ್ತಿಂ ಇತ್ಥಾಂಭೂತ ಗುಣೋ ಹರಿಃ ॥[೪೩]

ಶ್ರೀಚೈತನ್ಯ ಮಹಾಪ್ರಭುಗಳು ನಿರಾಕಾರವಾದಿಗಳನ್ನು ಉದ್ದೇಶಿಸಿ ಮೇಲಿನ ಶ್ಲೋಕಾರ್ಥವನ್ನು ಬಿಡಿಸುತ್ತಾರೆ. ಸ್ವಸಂತೃಪ್ತಿಯನ್ನು ಹೊಂದಿದ ಮುಕ್ತಾತ್ಮರುಗಳು ಉತ್ತರೋತ್ತರವಾಗಿ ಭಗವಂತನ ಭಕ್ತರಾಗುತ್ತಾರೆಂಬುದೇ ಇಲ್ಲಿಯ ಶ್ಲೋಕಾರ್ಥ. ಮಾಯಾವಾದಿಗಳು ಅಥವಾ ನಿರಾಕಾರವಾದಿಗಳು ನಿರಾಕಾರ ಬ್ರಹ್ಮನಿಂದಲೇ ಸಂತೃಪ್ತರಾಗುತ್ತಾರೆ. ಆದರೆ ಪರಮಪುರುಷನಾದ ಶ್ರೀಕೃಷ್ಣನು ಸುಂದರಾಂಗನಾಗಿಯೂ, ಶೌರ್ಯವಂತನಾಗಿಯೂ ಜನತೆಯ ಮನಸ್ಸನ್ನು ಆಕರ್ಷಿಸುತ್ತಾನೆಂಬುದು ಚೈತನ್ಯರ ಅಭಿಮತ.

'ಆತ್ಮಾರಾಮ'ವೆಂಬ ಶ್ಲೋಕದಲ್ಲಿರುವ ಹನ್ನೊಂದು ಅಂಶಗಳಾದ ಆತ್ಮಾರಾಮ(ಸುಖಾನುಭವಿ), ಚ (ವಿವಿಧ ರೀತಿಯ ಸುಖಾನುಭವಿಗಳು), ಮುನಯಃ (ಅನುಭಾವಿಗಳು), ನಿರ್ಗಂಥಾಃ (ಧರ್ಮ ಸಂಬಂಧದೊಂದಿಗೆ ಪ್ರವೇಶವಿಲ್ಲದವರು), ಅಪಿ (ಕ್ರಿಯಾವಿಶೇಷಣ), ಉರುಕ್ರಮೇ (ಬ್ರಹ್ಮಾಂಡವನ್ನು ಆಕ್ರಮಿಸಿದವನು), ಕುರ್ವಂತಿ (ಭಗವಂತನಿಗಾಗಿ ಮಾಡುವ ಪ್ರೇಮಸೇವೆ), ಅಹೈತುಕಿಮ್ (ಲೌಕಿಕ ಸುಖದ ಅನುಭವಗಳು ಇಲ್ಲದ ಸ್ಥಿತಿ), ಭಕ್ತಿಮ್ (ದೈವಪ್ರೇಮ), ಇತ್ಥಂಭೂತ (ಅಲೌಕಿಕ ಆನಂದ) ಹಾಗೂ ಹರಿಃ

(ಅಮಂಗಳವನ್ನು ತೆಗೆಯುವವನು). ಇಲ್ಲಿಯ ಏಕಾದಶ ಶಬ್ದಾರ್ಥವನ್ನು ಬಿಡಿಸುವ ಸುಂದರ ಪ್ರಯತ್ನವೊಂದನ್ನು ಮಾಯೆಯ ಪ್ರಭಾವದಿಂದಿರುವ ಹಾಗೂ ಮಾಯೆಯಿಂದ ಮುಕ್ತವಾಗಲಿರುವ ಜೀವಿಗಳಿಗೆ ತೋರಿಸಿ ಕೊಟ್ಟಿದ್ದಾರೆ.

ಶ್ಲೋಕಾರ್ಥ ವಿಂಗಡಣೆ

ಪರಮಸತ್ಯ
ಸ್ವಾಭಾವಿಕ ಲಕ್ಷಣ
ದೃಢತೆ
ಬುದ್ಧಿ
ಕಾರ್ಯಶೀಲತೆ
ಮನಸ್ಸು
ದೇಹ
} ಆತ್ಮದ ೭ ಅರ್ಥಗಳು → ಆತ್ಮ

ಸುಖ ಪಡುವವನು → ಆರಾಮ

ವಿಚಾರವಂತ , ಮೌನಿ
ತಪಸ್ವಿ, ಮಹಾನ್ ಚಿಂತಕ,
ಸಂತ
} → ಮುನಯೊ

ಅಜ್ಞಾನದಿಂದ ಮುಕ್ತಿ ಹೊಂದದವ
ವೇದ ನಿಯಮಗಳನ್ನು ಪಾಲಿಸದವ
ಜ್ಞಾನವನ್ನು ಹೊಂದಿರದವ,
ನಿಕ್ಷರಕುಕ್ಷಿ, ಅಧಮ ವೇದಗಳನ್ನು ಒಪ್ಪದವ
ಧಿಕ್ಕಾಪಾಲಾದವ
} ಆರು ಅರ್ಥಗಳು → ನಿಗ್ರದ್ಧಾ

ಅಸಾಧಾರಣ ಕಾರ್ಯಗಳನ್ನು ಮಾಡುವವ → ಉರುಕ್ರಮೇ
ಇತರರಿಗಾಗಿ ಮಾಡಿದ ಕಾರ್ಯ → ಕುರ್ವಂತಿ
ಯಾವುದೇ ಸ್ವಾರ್ಥವಿಲ್ಲದೆ ಮಾಡಿದ → ಅಹೈತುಕೀಂ
ಭಕ್ತಿ → ಭಕ್ತಿಂ
ದಿವ್ಯಗುಣಗಳಿಂದ ಕೂಡಿದ → ಇತ್ಥ ಭೂತ ಗುಣೇ
ಹರಿ → ಹರಿಃ

ಈ ಮೂಲಕವಾಗಿ 'ಬ್ರಹ್ಮನ್' ಎಂಬ ಶಬ್ದವು ಸರ್ವದೃಷ್ಟಿಯಿಂದಲೂ ಶ್ರೇಷ್ಠವಾದುದೆಂಬುದನ್ನು ಸಮಾಜಮುಖಕ್ಕೆ ತಿಳಿಸಿಕೊಡುತ್ತಾರೆ. ಐಶ್ವರ್ಯ, ಬಲ, ಕೀರ್ತಿ, ಚೆಲುವು, ಜ್ಞಾನ ಹಾಗೂ ವೈರಾಗ್ಯದಿಂದ ಆತನಲ್ಲಿ ಯಾರೂ ಸ್ಪರ್ಧಿಸಲಾರರು ಎಂಬುದನ್ನು ಶ್ರೀಚೈತನ್ಯ ಮಹಾಪ್ರಭುಗಳಿಲ್ಲಿ ಸಮರ್ಥಿಸುತ್ತಾರೆ. ಇಲ್ಲಿಯ 'ಬ್ರಹ್ಮನ್' ದೇವೋತ್ತಮ ಪರಮಪುರುಷನಾಗುತ್ತಾನೆ. ಆತನೇ ಶ್ರೀಕೃಷ್ಣ ಹಾಗೂ ನಿತ್ಯಪುರುಷ. ಅಲ್ಲದೆ ಸೃಷ್ಟಿಯ ಪೂರ್ವಕಾಲ, ಸೃಷ್ಟಿಯ ಕಾಲ ಹಾಗೂ ಸೃಷ್ಟಿನಾಶದ ನಂತರವೂ ಪರಮಪುರುಷನಾದ ಶ್ರೀಕೃಷ್ಣನಿರುತ್ತಾನೆಂದು ಶ್ರೀಮದ್ಭಾಗವತ(೨.೯.೩೩)ವು ಸಮರ್ಥಿಸುತ್ತದೆ. ಲೌಕಿಕದ ಜ್ಞಾನಾರ್ಜನೆಯಲ್ಲಿ ನಿರತರಾದ ಅಧ್ಯಾತ್ಮಿಕರಲ್ಲಿ ಒಂದು ವರ್ಗವು ನಿರಾಕಾರ ಬ್ರಹ್ಮನನ್ನು ಪೂಜಿಸಿದರೆ, ಇನ್ನೊಂದು ವರ್ಗವು ಮೋಕ್ಷವನ್ನು ಅಪೇಕ್ಷಿಸುತ್ತದೆ. ನಿರಾಕಾರ ಬ್ರಹ್ಮನನ್ನು ನಿರಾಕಾರವಾದಿಗಳು ಪೂಜಿಸಿ, ಬ್ರಹ್ಮೋಪಾಸಕರೆಂದು ಕರೆಸಿಕೊಳ್ಳುತ್ತಾರೆ. ಆದರೆ ಈ ಬ್ರಹ್ಮೋಪಾಸಕರಲ್ಲಿ, ಪ್ರಾಥಮಿಕ ಮನಸ್ಸು, ಬ್ರಹ್ಮ ಸಾಕ್ಷಾತ್ಕಾರಕ್ಕೆ ಒಳಗಾದ ಮನಸ್ಸು ಮತ್ತು ತಾನೇ ಬ್ರಹ್ಮನೆಂಬ ಮೂರು ಹಂತಗಳನ್ನು ಕಾಣುತ್ತೇವೆ. ಆದರೆ ಈ ಮೂರಕ್ಕೆ ಭಕ್ತಿಸೇವೆಯು ಹೊಂದಿಕೊಂಡರೆ ಮಾತ್ರ ಬ್ರಹ್ಮ ಸಾಕ್ಷಾತ್ಕಾರಕ್ಕೊಳಪಟ್ಟವನು ಮುಕ್ತಿಯನ್ನನುಭವಿಸುತ್ತಾನೆ.

ಅಚಿಂತ್ಯವಾದ ಸುಲಕ್ಷಣಗಳನ್ನು ಪರಮಪುರುಷನಾದ ಶ್ರೀಕೃಷ್ಣನ ದಿವ್ಯದೇಹದಿಂದ ನೋಡಿದ ಭಕ್ತನು ಅತನಿಂದ ಆಕರ್ಷಿತನಾಗುತ್ತಾನೆ. ಅಲ್ಲಿ ಆ ಭಕ್ತನಿಗೆ ಮೋಕ್ಷಾಪೇಕ್ಷೆ ಬಿಟ್ಟುಹೋಗಿ ಕೇವಲ ಭಕ್ತಿಸೇವೆಯಲ್ಲಿ ಮಾತ್ರ ನಿರತನಾಗುತ್ತಾನೆ. ಇದರಿಂದ ತನ್ನ ಪೂರ್ವಜ್ಞಾನಾರ್ಜನೆಯ ಕಾಲಹರಣಕ್ಕಾಗಿ ಆತ ಪರಿತಪಿಸುತ್ತಾನೆ. ನಂತರದಲ್ಲಿ ಭಕ್ತನು ಪರಮಪುರುಷ ಭಗವಂತನ ಸ್ವರೂಪಾಕಾರಕ್ಕೆ ಒಳಗಾಗಿ ಪರಿಶುದ್ಧ ಭಕ್ತನಾಗುತ್ತಾನೆ. ಇಲ್ಲಿ ಗೌಡೀಯಪಂಥದಲ್ಲಿ ಬರುವ ಅನುಭಾವಿಗಳಾದ ಬಿಲ್ವಮಂಗಲರು ಮೊದಲು ಅದ್ವೈತಿಯಾಗಿದ್ದು ನಂತರದಲ್ಲಿ ವೈಷ್ಣವರಾಗಿ ಭಗವಂತನ ಸಾಕ್ಷಾತ್ಕಾರ ಪಡೆಯುವುದನ್ನು ನೆನಪಿಸಬಹುದು.

ಅದ್ವೈತದ ಪ್ರಕಾರ ಐಹಿಕದೇಹ ಹಾಗೂ ಜೀವಿಗೆ ವ್ಯಕ್ತಿತ್ವ ನೀಡುವ ಜಡದ ಕಾರ್ಯಗಳೆಲ್ಲವೂ ಐಹಿಕ ಅಭಿವ್ಯಕ್ತಿಗಳು. ಅವರ ಪಾಲಿಗೆ ಮೋಕ್ಷವೆಂದರೆ ಶುದ್ಧಜೀವಿಯು ಮುಕ್ತನಾದಾಗ ಅವನು ಪರಮೋನ್ನತ ನಿರಾಕಾರನಾದ ಬ್ರಹ್ಮನಲ್ಲಿ ಒಂದಾಗುತ್ತಾನೆ. ಶಂಕರಾಚಾರ್ಯರು ಜೀವನೇ ಬ್ರಹ್ಮವೆಂದು ವಾದಿಸಿದುದು ಇದೇ ಆಧಾರದಲ್ಲಿ. ಆದರೆ ಚೈತನ್ಯರ ಪ್ರಕಾರ ಈ ಹೇಳಿಕೆಯಲ್ಲಿ ಮಾಯೆಯ ಪ್ರಭಾವವಿದೆ. ಮಾಯಾವಾದಿಗಳು ಐಹಿಕಬದ್ಧತೆಯಲ್ಲೇ ಮುಂದುವರಿಯುತ್ತಾರೆಂಬುದು ಚೈತನ್ಯರ ಅಬಿಪ್ರಾಯ. ಅಲ್ಲದೆ ದೈವಪ್ರೇಮದ ಅನಿವಾರ್ಯತೆಯನ್ನು ಆ ಮಾಯಾವಾದಿಗಳಲ್ಲಿ ಕಾಣಬಯಸಿಯೇ ಅವರಿಗೆ ಸೂಕ್ತಮಾರ್ಗವನ್ನು ತೋರಿಸಲು ಮುಂದಾಗುತ್ತಾರೆ. ಕೃಷ್ಣನಿಂದ ಆಕರ್ಷಿತನಾಗದವನು ಯಾರೇ ಆದರೂ ಅವನು ಮಾಯೆಯ ಪ್ರಭಾವದಲ್ಲಿ ಸಿಲುಕಿಕೊಂಡಿದ್ದಾನೆಂದೇ ಅರ್ಥೈಸಿಕೊಳ್ಳಬೇಕಾಗುತ್ತದೆ.

ಇದು ಚೈತನ್ಯರ ದ್ವೈತವಾದ. ಈ ತತ್ವವಾದದಿಂದಲೇ ಪಂಡಿತರಾಗಿದ್ದ ಸಾರ್ವಭೌಮ ಭಟ್ಟಾಚಾರ್ಯರನ್ನು ದ್ವೈತರನ್ನಾಗಿಸುತ್ತಾರೆ. ಇದು ಅವರ ದ್ವೈತಪ್ರೇಮವನ್ನು ತೋರಿಸಿ ಕೊಡುವಂತಹುದು. ಏನೇ

ಇದ್ದರೂ ಈ ವ್ಯಾಖ್ಯಾನದ ಮೂಲ ಉದ್ದೇಶವೆಂದರೆ ಮಾಯೆಯನ್ನು ಹೋಗಲಾಡಿಸುವುದು. ಭಕ್ತಿಸೇವೆಯಿಂದ ಮಗ್ನರಾದಲ್ಲಿ ಮಾತ್ರ ಜೀವನಮಾರ್ಗದಲ್ಲಿ ಮುಕ್ತರಾಗುತ್ತಾರೆಂಬುದು ಶ್ರೀಚೈತನ್ಯರ ನಿಲುವು.

೪.೭ (ಈ) ದೇವೋತ್ತಮ ಪರಮಪುರುಷ-ಪರಿಕಲ್ಪನೆ

ದೇವೋತ್ತಮ ಪರಮಪುರುಷನೆಂಬ ಪರಿಕಲ್ಪನೆಯು ಚೈತನ್ಯಪಂಥದ ಹೊಸ ಚಿಂತನೆಗಳಲ್ಲೊಂದು. ಸಕಲ ಶಕ್ತಿ ಪರಿಪೂರ್ಣನಾದ ದೇವೋತ್ತಮ ಪರಮಪುರುಷನು ಪರಾತ್ಪರದ ಪೂರ್ಣರೂಪ. 'ಭಗವಾನ್' ಎಂಬ ಶಬ್ದದಲ್ಲಿ ಮೊದಲಕ್ಷರ 'ಭ' ಅಕ್ಷರವು ಪಾಲಕನೆಂಬ ಅರ್ಥವನ್ನೂ, ನಂತರದ 'ಗ' ಅಕ್ಷರವು 'ನಾಯಕ'ನೆಂಬ ಅರ್ಥವನ್ನೂ, 'ವಾ' ಎಂದರೆ 'ವಾಸಿಸುವಿಕೆ' ಎಂದೂ ಈ ಪಂಥವು ವ್ಯಾಖ್ಯಾನಿಸುತ್ತದೆ. ಈ ಎಲ್ಲಾ ಶಬ್ದಗಳು ಕಾರ್ಯರೂಪಗೊಳ್ಳಲು ಅಚಿಂತ್ಯಶಕ್ತಿಯು ಸ್ಫುಟಗೊಳ್ಳುತ್ತದೆ. ಪರಮಪುರುಷನಾದ ಶ್ರೀಕೃಷ್ಣನು ಪಾರಮಾರ್ಥಿಕ ಹಾಗೂ ಲೌಕಿಕಸೃಷ್ಟಿಗಳೆರಡರಲ್ಲೂ ವಾಸಿಸುತ್ತಾನೆ. ಆತ ಭೂತ, ಭವಿಷ್ಯ ಹಾಗೂ ವರ್ತಮಾನದ ಎಲ್ಲಾ ಕಾರ್ಯಗಳಿಗೂ ಸಾಕ್ಷಿಯಾಗಿರುತ್ತಾನೆ. ಅವನಿಗೆ ಹಿಂದಿನ ಜೀವಿಗಳ ಸಾವಿರಾರು ಹುಟ್ಟುಗಳ ವಿವರವು ತಿಳಿದಿದೆ ಎನ್ನುತ್ತದೆ ಚೈತನ್ಯತತ್ತ್ವ.

ಚೈತನ್ಯಪಂಥದಲ್ಲಿ 'ಆಶ್ರಯ' ಮುತ್ತು 'ಆಶ್ರಿತ'ವೆಂಬ ಎರಡು ಶಬ್ದಗಳು ಮುಖ್ಯವಾದವು. ಇಲ್ಲಿ 'ಆಶ್ರಯ' ಎಂದರೆ ಆಸರೆಯನ್ನು ನೀಡುವವನೆಂದೂ, 'ಆಶ್ರಿತ' ಎಂದರೆ ಆಶ್ರಯನನ್ನು ಅವಲಂಬಿಸಿದವನೆಂದೂ ತನ್ನ ತತ್ತ್ವಾರ್ಥದಲ್ಲಿ ಪ್ರತಿಪಾದಿಸುತ್ತದೆ. ಅಂದರೆ, ಇಲ್ಲಿ ಆಶ್ರಿತನು ಆಶ್ರಯವೆಂಬ ಮೂಲತತ್ವದಡಿಯಲ್ಲಿ ಅಸ್ತಿತ್ವದಲ್ಲಿರುತ್ತಾನೆ. ಮುಖ್ಯವಾಗಿ ಯಾರು ಸಕಲ ಶರಣಾಗತಾತ್ಮರಿಗೆ ಆಶ್ರಯ ನೀಡಿದ್ದಾನೋ ಆ ದೇವೋತ್ತಮ ಪರಮಪುರುಷನೇ 'ಆಶ್ರಯ'ನೆಂಬ ಹೆಸರಿಗೆ ಅರ್ಹನಾಗುತ್ತಾನೆ. ಹೀಗೆ ಆಶ್ರಯನೆಂದಾಗಲು ನಾಲ್ಕು ಲೋಕೋತ್ತರ ಲಕ್ಷಣಗಳ ಅನಿವಾರ್ಯತೆ ಇರುತ್ತದೆ. ವಿಶಿಷ್ಟತೆ, ನಿರಾಕಾರಪ್ರಭೆ, ಅವನ ಆಧೀನರಾದ ಜೀವಿಗಳು ಮತ್ತು ಸರ್ವಕಾರಣಗಳ ಕಾರಣ ಎಂಬ ಆ ನಾಲ್ಕು ಲಕ್ಷಣಗಳು ಆತನಲ್ಲಿವೆ.

ಇವಲ್ಲದೆ, ದೇವೋತ್ತಮ ಪರಮಪುರುಷನಿಗೆ ಶೈಶವ ಹಾಗೂ ಬಾಲ್ಯವೆಂಬ ಎರಡು ವಿಶಿಷ್ಟ ಲಕ್ಷಣಗಳಿವೆ. ವಯಸ್ಸಿಗೆ ಬಂದ ಆತನ ತಾರುಣ್ಯವು ನಿರಂತರ ಲಕ್ಷಣವಾಗಿ ಪರಿಣಮಿಸುತ್ತದೆ. ಹಾಗಾಗಿ ಆತನ ಪೂಜೆಯನ್ನು ಚಿರಯುವಕನ ರೂಪವನ್ನು ಕಲ್ಪಿಸಿಕೊಂಡೇ ನೆರವೇರುತ್ತದೆ. ಆದರೂ ಆತನ ರೂಪಗಳಲ್ಲಿ ಪ್ರಾಭವ, ವೈಭವ, ದತ್ತ ಶಕ್ತಿಯ ಅವತಾರಗಳು, ಆಂಶಿಕ ಅವತಾರಗಳು, ಶೈಶವ ಹಾಗೂ ಯೌವನವೆಂಬ ಆರು ಬಗೆಯ ಅಪರಿಮಿತ ವೈವಿಧ್ಯಗಳಿವೆ. ಈ ಆರರಲ್ಲಿಯೂ ಆತನ ಲೀಲಾವಿನೋದವಿದೆ ಎನ್ನುವುದು ಮುಖ್ಯವಾಗುತ್ತದೆ.

ದೇವೋತ್ತಮ ಪುರುಷನಿಗೆ ಪರಿಮಿತ ಮತ್ತು ಅಪರಿಮಿತ ಶಕ್ತಿಗಳೆರಡು ಇರದಿರುತ್ತಿದ್ದರೆ ಆತನನ್ನು ಸರ್ವಶಕ್ತನೆಂದು ಒಪ್ಪಿಕೊಳ್ಳಲು ಆಗುತ್ತಿರಲಿಲ್ಲ. ಈ ಪಂಥವು ವ್ಯಾಖ್ಯಾನಿಸುವಂತೆ 'ಪ್ರಭುವು ಅತ್ಯಂತ ದೊಡ್ಡದಕ್ಕಿಂತ ದೊಡ್ಡವನು ಮತ್ತು ಅತ್ಯಂತ ಚಿಕ್ಕದಕ್ಕಿಂತ ಚಿಕ್ಕವನು' ಆಗಿರುತ್ತಾನೆ. ಇದನ್ನೇ ದಾಸಪಂಥವು

'ಜಗದುದ್ಧಾರನ......ಅಣೋರಣೀಯನ ಮಹತೋಮಹೀಯನ ಅಪ್ರಮೇಯನ ಆಡಿಸಿದಳಾ ಯಶೋದೆ... ಪರಮಪುರುಷನ ಪರವಾಸುದೇವನ ಪುರಂದರವಿಠಲನ ಆಡಿಸಿದಳಾ ಯಶೋದೆ' ಎಂದು ಹೇಳಿಕೊಳ್ಳುತ್ತದೆ. ಇದನ್ನೇ ಚೈತನ್ಯಪಂಥವು ಹೇಳಲು ಮುಂದಾಗುತ್ತದೆ.

ಪರಮ ಕಾರಣಪುರುಷನಾದವನೇ ಇಲ್ಲಿ ದೇವೋತ್ತಮ ಪರಮಪುರುಷನಾಗುತ್ತಾನೆಂಬುದು ಗೌಡೀಯಪಂಥದ ನಿಲುವು. ಇಲ್ಲಿಯ ದೇವೋತ್ತಮನು ಅಧಮ ಹಾಗೂ ಶ್ರೇಷ್ಠಶಕ್ತಿಗಳೆರಡನ್ನೂ ಹೊಂದಿರುತ್ತಾನೆ. ಈ ಎರಡು ಶಕ್ತಿಗಳ ವ್ಯತ್ಯಾಸವೆಂದರೆ, ಶ್ರೇಷ್ಠಶಕ್ತಿಯು ವಾಸ್ತವವಾಗಿದ್ದು, ಅಧಮ ಶಕ್ತಿಯು ಶ್ರೇಷ್ಠಶಕ್ತಿಯ ಪ್ರತಿಫಲನವಾಗಿರುತ್ತದೆ. ಅಂದರೆ ಇದು ಐಹಿಕಜಗತ್ತು ಎನ್ನುವುದು ಆಧ್ಯಾತ್ಮಿಕಶಕ್ತಿಯ ಪ್ರತಿಫಲನವಾಗಿರುತ್ತದೆ. ಆದರೆ ಅದು ವಾಸ್ತವಿಕವೆಂದು ಕಂಡುಬಂದರೂ ಅದು ವಾಸ್ತವಿಕವಲ್ಲ. ಆಧ್ಯಾತ್ಮಿಕವಾದರೆ ವಸ್ತುನಿಷ್ಠ ವಾಸ್ತವವಾಗಿರುತ್ತದೆ. ಸ್ಥೂಲ ಮತ್ತು ಸೂಕ್ಷ್ಮ ರೂಪಗಳಿಂದ ಕೂಡಿದ ಐಹಿಕಜಗತ್ತೆಂಬುದು ಆಧ್ಯಾತ್ಮಿಕ ಜಗತ್ತಿನ ಪ್ರತಿಫಲನವಾಗಿಯೇ ಇರುತ್ತದೆ.

ಇಲ್ಲಿ ಮುಖ್ಯವಾಗಿ ಭಾವಿಸಿಕೊಳ್ಳಬೇಕಾದುದೇನೆಂದರೆ, ಜೀವಿಯು ಐಹಿಕ ಜಗತ್ತಿನ ಉತ್ಪನ್ನವಲ್ಲ. ಅವನು ಆಧ್ಯಾತ್ಮಿಕಶಕ್ತಿಯೆನ್ನುವುದು ಮುಖ್ಯವಿಚಾರ. ಜಡತತ್ವದ ಸಂಸರ್ಗದಿಂದ ಜೀವಿಯು ತನ್ನ ಗುರುತನ್ನೇ ಮರೆತು ಬಿಡುತ್ತಾನೆ. ಆ ಜೀವಿಯು ಐಹಿಕ ಚಟುವಟಿಕೆಯ ವೇಷವನ್ನು ತೊಟ್ಟುಕೊಳ್ಳುತ್ತಾನೆ. ಹಾಗಾಗಿ ಅವನಿಗೆ ನಿಜವಾದ ವ್ಯಕ್ತಿತ್ವವು ಇಲ್ಲವಾಗಿ ಬಿಡುತ್ತದೆ. ಈ ನಿಟ್ಟಿನಲ್ಲಿ ಪರಮಪ್ರಭುವು ನಿಯಂತ್ರಕ ಶಕ್ತಿಯಾಗಿ ತೋರಿಬರುತ್ತಾನೆ. ಇದೇ ಕಾರಣಕ್ಕಾಗಿ ಚೈತನ್ಯಪಂಥವು ಭಕ್ತಿಸೇವೆಯ ಮೂಲಕ ಹರಿಸರ್ವೋತ್ತಮತ್ವವನ್ನು ಸಾರಲು ಮುಂದಾಗುತ್ತದೆ. ಆತನನ್ನು ದೇವೋತ್ತಮ ಪರಮಪುರುಷನೆಂದು ಕಲ್ಪಿಸಿಕೊಳ್ಳುತ್ತದೆ. ದಾಸಪಂಥವೂ ಇದನ್ನೇ ಸಾರಿರುತ್ತದೆ ಎನ್ನುವುದು ವಿಶೇಷ.

ಅಲ್ಲಿದೆ ನಮ್ಮನೆ ಇಲ್ಲಿ ಬಂದೆ ಸುಮ್ಮನೆ.......
ಕದ ಬಾಗಿಲಿರಿಸಿಹ ಕಳ್ಳಮನೆ ಇದು ।
ಮುದದಿಂದಲೋಲಾಡೊ ಸುಳ್ಳುಮನೆ ॥
ಇದಿರಾಗಿ ವೈಕುಂಠ ವಾಸ ಮಾಡುವಂತ
ಪದುಮನಾಭನ ದಿವ್ಯ ಬದುಕುಮನೆ ॥ –ಪುರಂದರದಾಸ

ಪುರಂದರದಾಸರ ಈ ಕಲ್ಪನೆಯು ಚೈತನ್ಯಪಂಥದ ನಿಲುವನ್ನೇ ಸ್ವೀಕರಿಸಿದೆ.

ಭಗವಂತನಿಗೆ ಆಕಾರವಿದೆ. ಆದರೆ ನಾವು ಭಾವಿಸುವಂತೆ ಭೌತಿಕ ಆಕಾರವೇ ಆಗಿರಬೇಕಾಗಿಲ್ಲವೆಂಬುದು ಅಚಿಂತ್ಯ ಸಿದ್ಧಾಂತದ ನಿಲುವು. ಅದು ಭೌತಿಕದ ನಮ್ಮ ರೂಪಕ್ಕೂ, ಭಗವಂತನ ರೂಪಕ್ಕೂ ವ್ಯತ್ಯಾಸವಿದೆ ಎನ್ನುತ್ತದೆ. ನಮ್ಮದು ಭೌತಿಕದಲ್ಲಿ ಭೌತರೂಪವಾಗಿದ್ದರೆ ಭಗವಂತನದು ಸಚ್ಚಿದಾನಂದ ವಿಗ್ರಹವಾಗಿರುತ್ತದೆ. ಆ ಸಿದ್ಧಾಂತದ ಪ್ರಕಾರ, ಭಗವಂತನು ಸಾಮಾನ್ಯ ಮನುಷ್ಯನಂತೆಯೂ ಕಾಣಿಸಿಕೊಳ್ಳಬಲ್ಲ. ಅಂತೆಯೇ

ಅಸಾಮಾನ್ಯನಾಗಿಯೂ ಕಾಣಬಲ್ಲ. ಹಾಗಾಗಿ ಪುರುಷ ಸ್ವರೂಪವಾದರೂ ಅದು ದೇವೋತ್ತಮ ಪರಮಪುರುಷವೆಂಬ ನೂತನ ಕಲ್ಪನೆ ಚೈತನ್ಯಪಂಥದ್ದು.

ಜನ್ಮ ಕರ್ಮ ಚ ಮೇ ದಿವ್ಯಂ ಏವಂ ಯೋ ವೇತ್ತಿ ತತ್ತ್ವತಃ ।
ತ್ಯಕ್ತ್ವಾ ದೇಹಂ ಪುನರ್ ಜನ್ಮ ನೇತಿ ಮಾಂ ಏತಿ ಸೋಽರ್ಜುನ ॥[೪೪]

ಇದು ಭಗವದ್ಗೀತೆಯ ಮಾತು. ನಾನು ಬರುವಾಗ ಭೌತಶರೀರದಲ್ಲಿ ಬರುವುದಿಲ್ಲ. ನನ್ನ ಜನ್ಮ ಮತ್ತು ಕಾರ್ಯಗಳೆಲ್ಲವೂ ಪಾರಮಾರ್ಥಿಕವಾದುದು. ಇದನ್ನು ತಿಳಿದವನು ಮಾತ್ರ ಮುಕ್ತನಾಗುತ್ತಾನೆ. ಕೃಷ್ಣನು ಯಶೋದೆಯಲ್ಲಿ ಬೆಣ್ಣೆಯನ್ನು ಕೇಳಿ ತಿನ್ನುವ ಕಲ್ಪನೆ ಭೌತಿಕದ ಮಾನವ ಪರಿಕಲ್ಪನೆಯಾಗಿದ್ದರೂ ತಾಯಿಗೆ ಬಾಯೊಳು ಮೂಜಗವನ್ನು ತೋರಿಸುವಂತಹುದು ದೇವೋತ್ತಮ ಪರಿಕಲ್ಪನೆಯಾಗಿ ನಿಲ್ಲುತ್ತದೆ.

ನಮಸ್ತ್ಯೇ ಪುರುಷಂ ತ್ವಾದ್ಯಂ ಈಶ್ವರಂ ಪ್ರಕೃತೇಃ ಪರಂ ।
ಅಲಕ್ಷಂ ಸರ್ವ ಭೂತಾನಾಂ ಅಂತರ್ ಬಹಿರ್ ಅವಸ್ಥಿತಮ್ ॥[೪೫]

ಕುಂತಿಯು, " ಹೇ ಕೃಷ್ಣ, ನೀನು ಮೂಲಪುರುಷ, ಐಹಿಕಜಗತ್ತಿನ ಗುಣಗಳಿಂದ ಪ್ರಭಾವಿತನಾಗದವನು. ಎಲ್ಲದರ ಒಳಗೂ ಹಾಗೂ ಹೊರಗೂ ಇರುವವನು. ಆದರೂ ಯಾರ ಕಣ್ಣಿಗೂ ಬೀಳದಂತಿರುವೆ. ಹಾಗಾಗಿ ನಿನಗೆ ನನ್ನ ನಮಸ್ಕಾರಗಳನ್ನು ಅರ್ಪಿಸುತ್ತಿದ್ದೇನೆ" ಎನ್ನುತ್ತಾಳೆ. ಇಲ್ಲಿ ಶ್ರೀಕೃಷ್ಣನು ಕುಂತಿಗೆ ಲೌಕಿಕವಾಗಿ ಸೋದರಳಿಯ. ಆದರೂ ಕುಂತಿಯು ಶ್ರೀಕೃಷ್ಣನಿಗೆ ನಮಸ್ಕರಿಸುವ ಮಟ್ಟಕ್ಕೆ ತಲುಪುತ್ತಾಳೆ. ಇದಕ್ಕೆ ಆತನು ಐಹಿಕಜಗತ್ತಿನಿಂದ ಅತೀತನಾಗಿ ಮೂಲ ಪುರುಷನಾಗಿದ್ದುದೇ ಕಾರಣವಾಗುತ್ತದೆ. ಐಹಿಕಜಗತ್ತಿನ ಜೀವಿಗಳು ದಿವ್ಯವ್ಯಕ್ತಿಗಳೇ ಆಗಿದ್ದರೂ ಅವರಿಗೆ ಪತನವಿದೆ. ಅವರು ಪ್ರಕೃತಿಯ ಹಿಡಿತಕ್ಕೆ ಸಿಕ್ಕಿ ಜಾರುವ ಸಂಭವವೇ ಹೆಚ್ಚು . ಆದರೆ ಭಗವಂತನು ಇದರಿಂದ ಹೊರತಾದವನು. ಹಾಗಾಗಿ ಆತನು ಈಶ್ವರನಾಗುತ್ತಾನೆ. ಕೆಲಮಟ್ಟಿಗೆ ಸೂರ್ಯಚಂದ್ರಾದಿಗಳು ಈಶ್ವರರಾದರೂ ಅವರು ಪರಮೋನ್ನತ ನಿಯಾಮಕರಲ್ಲ. ಅದೇನಿದ್ದರೂ ಶ್ರೀಕೃಷ್ಣನೇ. ಹಾಗಾಗಿ ಆತನು ಪರಮೇಶ್ವರನಾಗುತ್ತಾನೆ; ಪರಮಪುರುಷನಾಗುತ್ತಾನೆ. ಕುಂತಿಯ ಎದುರಿನಲ್ಲಿ ಶ್ರೀಕೃಷ್ಣನಿದ್ದರೂ, ಆತನು ಆಕೆಯ ಒಳಗೂ ಇದ್ದಾನೆ. ಉಳಿದೆಡೆಗಳಿಗೂ ವ್ಯಾಪಿಸುತ್ತಾನೆ. ಆದುದರಿಂದ ಶ್ರೀಕೃಷ್ಣನು ದೇವೋತ್ತಮನೂ ಹೌದು; ಲೌಕಿಕವಾಗಿ ಪರಮಪುರುಷನೂ ಹೌದು. ಕೃಷ್ಣನು ತಾಯಿಯ ಮಡಿಲಲ್ಲಿ ಮಲಗಿರುವ ಕಾಲದಿಂದಲೇ ಆತನಿಗೆ ಲೌಕಿಕದ ಅಸುರರ ಪರೀಕ್ಷೆಗಳು ಎದುರಾಗುತ್ತವೆ. ಅದರಲ್ಲಿ, ಪೂತನಿಯ ವಿಷಯುಕ್ತವೆನಿಸಿದ ಸ್ತನ್ಯಪಾನವಿರಬಹುದು, ವೃಂದಾವನ ನಿವಾಸಿಗಳಿಗೆ ರಕ್ಷಣೆಯನ್ನು ಒದಗಿಸಲು ಗೋವರ್ಧನಗಿರಿಯನ್ನು ಎತ್ತಿದ ವಿಚಾರವಿರಬಹುದು. ಈ ಎಲ್ಲಾ ಕಡೆಗಳಲ್ಲಿ ಮೊದಲಿಗೆ ಕೃಷ್ಣನು ಲೌಕಿಕವಾಗಿಯೇ ತೋರಿದರೂ ಶಿಷ್ಟರಕ್ಷಣೆಯ ಹಾಗೂ ದುಷ್ಟನಿರ್ಮೂಲನೆಯ ದೃಷ್ಟಿಯಿಂದ ಅಲೌಕಿಕತೆಯನ್ನು ತೋರಿಸುತ್ತಾನೆ. ಈ ಮೂಲಕವಾಗಿ ಮೊದಲು ಪ್ರಕಟಗೊಳ್ಳುವ ಕೃಷ್ಣರೂಪಕ್ಕೆ ದೇವೋತ್ತಮ ಪರಮಪುರುಷನೆಂಬ ಅಭಿದಾನವು ಚೈತನ್ಯಪಂಥದಿಂದ ಸಲ್ಲುವಂತಾಗುತ್ತದೆ.

ದ್ವೇಷಸಾಧನೆ ಎನ್ನುವಂತಹುದು ಪರಮಾತ್ಮನಿಗೆ ಸಲ್ಲುವುದಿಲ್ಲ. ಆದುದರಿಂದ ಅಸುರ ಸಂಹಾರವೆಂಬ ಕ್ರಿಯೆಯು ಆತನ ಪಾಲಿಗೆ ವಾತ್ಸಲ್ಯದ ಪ್ರದರ್ಶನವಾಗಿ ಬಿಡುತ್ತದೆ. ಅಲ್ಲದೆ ಅದು ಲೌಕಿಕದ ರಾಗದ್ವೇಷದ ನೆಲೆಯಾಗದೆ, ಪ್ರೇಮದ ಸೆಲೆಯಾಗಿ ಪರಿಣಮಿಸುತ್ತದೆ. ಇದಕ್ಕೆ ಭಗವಂತನಿಂದ ಸಂಹಾರಗೊಂಡ ರಕ್ಕಸರೆಲ್ಲರಿಗೂ ಮೋಕ್ಷವು ಸಂಪ್ರಾಪ್ತಿಯಾಗುವುದೇ ಉತ್ತಮ ಉದಾಹರಣೆ. ರಕ್ಕಸಿಯಾದ ಪೂತನಿಯು ನಂಜಿನ ಮೊಲೆಹಾಲನ್ನೊಡ್ಡಿ ಕೃಷ್ಣನನ್ನು ಕೊಲ್ಲಬಯಸಿದಳು. ಆದರೆ ಕೃಷ್ಣನು ಆಕೆಯ ಸ್ತನಪಾನವನ್ನು ಮಾಡಿದ್ದಲ್ಲದೆ, ಆಕೆಯ ಜೀವವನ್ನೂ ಹೀರಿದ. ಇಲ್ಲಿಯ ಫಲಿತಾಂಶವೆಂದರೆ, ಸ್ತನ್ಯಪಾನ ಮಾಡಿದ ಕೃಷ್ಣನು ರಕ್ಕಸಿ ಪೂತನಿಯನ್ನು ತನ್ನ ತಾಯಿಯ ಸ್ಥಾನದಿಂದ ಅಧ್ಯಾತ್ಮಿಕ ಕಲ್ಪನೆಯಿಂದ ಕಾಣುತ್ತಾನೆ. ಆದುದರಿಂದ ಆಕೆಗೆ ಮೋಕ್ಷವನ್ನು ಕರುಣಿಸಿದ. ಇಲ್ಲಿ ಶ್ರೀಕೃಷ್ಣನು ತನ್ನ ಕರುಣಾಮಯ ದೃಷ್ಟಿಯಿಂದ, ಉದಾರ ಹೃದಯದಿಂದ ಮಹಾಪುರುಷನಾಗುತ್ತಾನೆ. ದೇವೋತ್ತಮನಾಗುತ್ತಾನೆ.

ಭೌಮಾಸುರನೆಂಬ ರಕ್ಕಸನು ಹದಿನಾರುಸಾವಿರ ಕನ್ಯೆಯರನ್ನು ಅಪಹರಿಸಿಕೊಂಡು ಹೋದಾಗ, ಆ ಕನ್ಯೆಯರೆಲ್ಲರು ಕೃಷ್ಣನನ್ನು ಪ್ರಾರ್ಥಿಸುತ್ತಾರೆ. ಕೃಷ್ಣನು ಭೌಮಾಸುರನ ಅರಮನೆಗೆ ನುಗ್ಗಿ, ಅವನೊಂದಿಗೆ ಕಾದಾಡಿ ಕನ್ಯೆಯರ ಸೆರೆಯನ್ನು ಬಿಡಿಸುತ್ತಾನೆ. ಈ ಕಾದಾಟದಲ್ಲಿ ಕೃಷ್ಣನಿಂದ ನಾವು ಕಾಣುವುದು ಪರಮಪುರುಷ ಪ್ರಯತ್ನ. ಇದೇನಿದ್ದರೂ ಲೌಕಿಕವಾದುದು. ಆದರೆ ವೈದಿಕಸಂಪ್ರದಾಯದಲ್ಲಿ ಅವಿವಾಹಿತ ಹೆಣ್ಣೊಬ್ಬಳು ಒಂದು ರಾತ್ರಿ ಮನೆಯಿಂದ ಹೊರಗಿರುವಂತಿಲ್ಲ. ಇದರಿಂದ ಅವರ ವಿವಾಹಕ್ಕೆ ತೊಡಕಾಗುವುದನ್ನು ಗಮನಿಸಿ, ಕೃಷ್ಣನೇ ಅವರನ್ನು ವರಿಸುತ್ತಾನೆಂಬುದು ಪುರಾಣಕಥೆ, ವಿವಾಹಾನಂತರದಲ್ಲಿ ತನ್ನ ರಾಜಧಾನಿಗೆ ಅವರನ್ನು ಕರೆತಂದ ಕೃಷ್ಣ, ಹದಿನಾರುಸಾವಿರ ಹೆಂಡತಿಯರಿಗೂ ಹದಿನಾರುಸಾವಿರ ಮನೆಗಳನ್ನು ನಿರ್ಮಿಸಿ, ಪ್ರತಿಯೊಬ್ಬರ ಮನೆಯಲ್ಲೂ ಪ್ರತಿರಾತ್ರಿಯಲ್ಲೂ ಕಾಲಕಳೆಯುತ್ತಾನೆ. ಇಲ್ಲಿ ಗಮನಿಸಬೇಕಾದುದು ದೇವೋತ್ತಮ ಕಲ್ಪನೆ. ಹೀಗೆ ಕೆಲವೊಮ್ಮೆ ಮನುಷ್ಯನಂತೆ ಕಂಡರೂ, ಹಲವು ಕಡೆಗಳಲ್ಲಿ ದೇವರದೇವನಾಗಿ ವಿಜೃಂಭಿಸುತ್ತಾನೆ.

ಶ್ರೀಕೃಷ್ಣನು ಶಿಶುವಗಿದ್ದಾಗಲೇ ತನ್ನ ಹತ್ಯೆಯಿಂದ ತಪ್ಪಿಸಿಕೊಂಡು ನಂದಮಹಾರಾಜನಲ್ಲಿ ಸೇರಿದ. ತಾಯಿ ದೇವಕಿಗಿಂತಲೂ ಹೆಚ್ಚಿನ ಕೃಪೆಯನ್ನು ಕುಂತಿಗೆ ನೀಡಿದ. ದೇವಕಿಯ ಇನ್ನಿತರ ಮಕ್ಕಳನ್ನು ರಕ್ಷಿಸದ ಕೃಷ್ಣನು ಕುಂತಿಯ ಮಕ್ಕಳನ್ನು ರಕ್ಷಿಸಿದ. ಇದಕ್ಕೆ ಮುಖ್ಯ ಕಾರಣವೆಂದರೆ, ಕೃಷ್ಣನಲ್ಲಿದ್ದ ಲೌಕಿಕದ ಅನುಕಂಪ. ದೇವಕಿಗಾದರೋ ಪತಿಯಾದ ವಸುದೇವನು ಜೀವಂತವಾಗಿದ್ದ. ಆದರೆ ಗಂಡನನ್ನು ಕಳೆದುಕೊಂಡು ವಿಧವೆಯಾಗಿದ್ದ ಕುಂತಿಗೆ ಕೃಷ್ಣನೇ ಸಹಾಯಹಸ್ತನಾಗಿದ್ದ. ಇಲ್ಲಿ ಕೃಷ್ಣನು ದೇವೋತ್ತಮನಾಗಿದ್ದರೂ ಲೌಕಿಕಬಂಧನದಲ್ಲಿ ಪರಮಪುರುಷನಾಗಿ ವಿಜೃಂಭಿಸುತ್ತಾನೆ.

ಜನ್ಮ ಕರ್ಮ ಚ ವಿಶ್ವಾತ್ಮಾನ್ ಅಜಸ್ಯಾತರ್ತುರ್ ಆತ್ಮನಃ ।
ತಿರಣ್ ನೈಶಿಶು ಯಾದಃ ಸು ತದ್ ಅತ್ಯಂತ ವಿಡಂಬನಮ್ ॥[೪೬]

ಭಗವಂತನು ನಿಷ್ಕ್ರಿಯನಾಗಿದ್ದರೂ ಕ್ರಿಯಾಸಂಪನ್ನನು. ಜನ್ಮರಹಿತನಾದರೂ ಆಗಾಗ ಜನಿಸುತ್ತಿರುವವನು ಎಂದು ಶ್ರೀಮದ್ಭಾಗವತವು ಸಾರುತ್ತದೆ. ಇಲ್ಲಿ ವಿಸ್ಮಯವೂ ಇದೆ. ವಿರೋಧಾಭಾಸವೂ ಇದೆ. ಇವನು ಪ್ರಾಣಿಜಗತ್ತಿನಲ್ಲಿ ವರಾಹನಾಗಿ, ಮಾನವಕುಲದಲ್ಲಿ ರಾಮಕೃಷ್ಣರಾಗಿ, ಋಷಿಕೂಟದಲ್ಲಿ ನಾರಾಯಣನಾಗಿ, ಜಲಚರಗಳಲ್ಲಿ ಮೀನಾಗಿ ಜನಿಸುತ್ತಾನೆ. ಹೀಗಿದ್ದರೂ ಆತನು ಜನ್ಮರಹಿತನಾಗಿ ಅಜನೆಂದೆನಿಸಿಕೊಳ್ಳುತ್ತಾನೆ; ದೇವೋತ್ತಮ ಪರಮಪುರುಷನೆಂದು ಭಕ್ತನಿಂದ ಕರೆಸಿಕೊಳ್ಳುತ್ತಾನೆ.

ಚೈತನ್ಯ ತತ್ತ್ವಾಧಾರದಲ್ಲಿ, ಇಲ್ಲಿಯ ಭಕ್ತನೋರ್ವನಿಗೆ ದೇವೋತ್ತಮ ಪರಮಪುರುಷನ ಸಂಕೀರ್ತನೆಯ ನಾಮ ಮತ್ತು ಚೈತನ್ಯ ಮಹಾಪ್ರಭುಗಳ ನಾಮಗಳೆರಡೂ ಅನನ್ಯವಾದುದೆಂಬ ಭಾವನೆಯು ಮೂಡಿಬರಬೇಕು. ಆದರೆ ಲೌಕಿಕದಲ್ಲಿ ಅಪರಾಧವನ್ನು ಮಾಡದೆ, ನಾಮಜಪದಲ್ಲಿ ತೊಡಗುವ ತನಕ ಇಂತಹ ನಿಲುವಿಗೆ ಬರಲು ಸಾಧ್ಯವಿಲ್ಲ. ನಮ್ಮ ಪ್ರಾಪಂಚಿಕದಲ್ಲಿ ಯಾವುದೇ ಒಂದು ವಸ್ತುವು ಮತ್ತು ಅದರ ಹೆಸರಿನ ನಡುವೆ ವ್ಯತ್ಯಾಸವನ್ನು ಗಮನಿಸುತ್ತೇವೆ. ಆದರೆ ಆಧ್ಯಾತ್ಮಿಕ ಜಗತ್ತಿನಲ್ಲಿ ಪರಾತ್ಪರವೂ ಪರಾತ್ಪರವೇ ಆಗಿರುತ್ತದೆ. ಪರಾತ್ಪರದ ಹೆಸರು, ಗುಣ, ರೂಪ, ಲೀಲೆಗಳು ಪರಾತ್ಪರ ಪುರುಷನೇ ಹೊರತು ಬೇರೆಯಲ್ಲ. ಆದ್ದರಿಂದ ತಾನು ಪವಿತ್ರನಾಮದ ನಿರಂತರ ದಾಸನೆಂದು ವ್ಯಕ್ತಿಯು ಭಾವಿಸಿ, ಅದೇ ಸದ್ಭಾವನೆಯಿಂದ ಪರಮಪ್ರಭುವಿನ ಪವಿತ್ರನಾಮವನ್ನು ಜಗತ್ತಿಗೆ ವಿತರಿಸಿದರೆ, ಆ ವ್ಯಕ್ತಿಯು ದೇವೋತಮ ಪರಮಪುರುಷನ ನಿರಂತರ ದಾಸನಾಗುತ್ತಾನೆಂಬುದು ಸತ್ಯಾರ್ಥ. ಈ ಕಲ್ಪನೆಯಿಂದಲೇ ಕೃಷ್ಣಪ್ರಜ್ಞಾ ಚಳುವಳಿಯ ತಳಹದಿಯು ನಿಂತಿರುತ್ತದೆ.

ಚೈತನ್ಯರ ಚಳುವಳಿಯಿಂದ ಮನುಕುಲಕ್ಕಾಗುವ ದೊಡ್ಡ ಲಾಭವೆಂದರೆ ಇದೇ ಆಗಿರುತ್ತದೆ. ಓರ್ವ ವ್ಯಕ್ತಿಯು ಹೇಗಾದರೂ ಮಾಡಿ ಹರೇಕೃಷ್ಣ ಚಳುವಳಿಯ ಕಕ್ಷೆಯೊಳಗೆ ಬಂದುಬಿಟ್ಟರೆ ಆತನು ಶೂದ್ರನಾಗಿರಲಿ, ವೈಶ್ಯನಾಗಿರಲಿ ಅಥವಾ ಪರಕೀಯನಾಗಿರಲಿ. ಅವನು ಆಧ್ಯಾತ್ಮಿಕಪ್ರಜ್ಞೆಯ ಪ್ರಗತಿಪಥಕ್ಕೆ ಬಂದುಬಿಡುತ್ತಾನೆ. ಹಾಗೆಯೇ ಭಗವತ್ಪ್ರೇಮವನ್ನು ಬೆಳೆಸಿಕೊಳ್ಳುತ್ತಾನೆ. ಈ ನೆಲೆಯಿಂದಲೇ ಭಗವಂತನೂ ಕೂಡ ಕೊಡುಗೈದಾನಿಯಾಗುತ್ತಾನೆ. ಅಲ್ಲದೆ ಪರಮಪುರುಷನೆಂದೆನಿಸಿಕೊಳ್ಳುತ್ತಾನೆ.

ದೇವೋತ್ತಮ ಪರಮಪುರುಷನೆಂದು ಭಕ್ತನು ಒಪ್ಪಿಕೊಳ್ಳುವಲ್ಲಿ ಪರಿಶುದ್ಧ ಭಕ್ತನೊಬ್ಬನು ನೈಜಸ್ಥಾನವನ್ನು ಪಡೆದುಕೊಳ್ಳುತ್ತಾನೆ. ಇಲ್ಲಿಯ ಭಕ್ತನ ಆತ್ಮವೆನ್ನುವಂತಹುದು ಪರಮಪುರುಷನಿಗೆ ಶರಣಾಗತನಾದ ಆತ್ಮವಾಗಿರುತ್ತದೆ. ಅಲ್ಲಿಗೆ ಪರಮಪ್ರಭುವು ಚೈತ್ಯಗುರುವಾಗಿ ಮತ್ತು ವ್ಯಕ್ತಿಯ ಹೃದಯಸ್ಥ ಗುರುವಾಗಿ ಶರಣಾಗತನಾದ ಆತ್ಮನಿಗೆ ಆದೇಶವನ್ನು ನೀಡಲು ಮುಂದಾಗುತ್ತಾನೆ. ದೇವೋತ್ತಮ ಪರಮಪುರುಷನು ಭಕ್ತನಿಗೆ ಒಳಹೊರಗಲ್ಲಿ ಮಾರ್ಗದರ್ಶನವನ್ನು ನೀಡಲು ಸಂತೋಷಪಡುತ್ತಾನೆ. ಇಲ್ಲಿ ಗಮನಿಸಬೇಕಾದ ಮುಖ್ಯವಿಚಾರವೆಂದರೆ, ಭಕ್ತನ ಒಳಗಲ್ಲಿ ಪರಮಾತ್ಮನಾಗಿ, ಹೊರಗಲ್ಲಿ ಗುರುವಾಗಿ ಮಾರ್ಗದರ್ಶನದ ಫಲವು ಭಕ್ತನಿಗೆ ದೊರೆಯುತ್ತದೆ.

ಒಟ್ಟಿನಲ್ಲಿ ಭಗವಂತನ ಸ್ವಾಂಶ ವಿಸ್ತರಣೆಗಳ ಅನೇಕ ಹೆಸರುಗಳಲ್ಲಿ ಯಾವುದಾದರೂ ಒಂದನ್ನು ಹಿಡಿದು ಭಕ್ತನು ಸಂಬೋಧಿಸುವುದರಲ್ಲಿ ತಪ್ಪಿಲ್ಲ. ಚೈತನ್ಯ ಭಾಗವತದಲ್ಲಿ ಚೈತನ್ಯರು ಹೇಳುವಂತೆ, 'ನಾನು ಕ್ಷೀರಸಾಗರದಲ್ಲಿ ಮಲಗಿ ನಿದ್ರಿಸುತ್ತಿರಲು, ಶ್ರೀಅದ್ವೈತಪ್ರಭುಗಳ ನಾದದ ಕರೆಯು ಎಳಿಸಿತು'. ಹಾಗಾಗಿ ಕ್ಷೀರೋದಕಶಾಯಿಯಾದ ನಾನು ಅಂತೆಯೇ ಬಂದೆ ಎನ್ನುತ್ತಾರೆ. ಅಂದರೆ ಆತನನ್ನು ಕ್ಷೀರೋದಕಶಾಯಿ ವಿಷ್ಣು ಎಂದೂ, ಆದಿನಾರಾಯಣನೆಂದೂ, ಆದಿಮಪ್ರಭುಯೆಂದೂ ಕರೆಯಬಹುದಾಗಿದೆ. ಹಾಗಾಗಿ ದೇವೋತ್ತಮನಾಗಿ, ಪರಮಪುರಷನಾಗಿ ಲೌಕಿಕ ಮತ್ತು ಪಾರಲೌಕಿಕಗಳೆರಡರಲ್ಲೂ ಸರ್ವಸಮಾನನಾಗಿ ಉಳಿಯುತ್ತಾನೆ.

೪.೭ : ವರ್ತಮಾನದಲ್ಲಿ ಚೈತನ್ಯಪಂಥದ ಬೆಳವಣಿಗೆ

ಶ್ರೀಚೈತನ್ಯ ಮಹಾಪ್ರಭುಗಳು ಕೃಷ್ಣಭಕ್ತಿಯನ್ನು ಜನಗಳ ಹೃದಯದಲ್ಲಿ ತುಂಬಿಸಿದ್ದು ಅವರವರ ಜನ್ಮ ಸಾರ್ಥಕತೆಗಾಗಿ. ಇದೇ ನೆಲೆಯಲ್ಲಿ ಚೈತನ್ಯಪಂಥದಿಂದ ಬಂದ ಅಸಂಖ್ಯಾತ ಅನುಯಾಯಿಗಳು ಅಚಿಂತ್ಯಾತತ್ತ್ವದ ಪ್ರಚಾರದಲ್ಲಿ ಕಾರ್ಯವನ್ನು ನಿರ್ವಹಿಸಿದರು. ಮುಂದಿನ ಶತಮಾನಗಳಲ್ಲಿ ಭಾರತದಲ್ಲಲ್ಲದೆ ಹೊರದೇಶಗಳಲ್ಲೂ ತತ್ತ್ವ ಪ್ರಚಾರಕ್ಕಾಗಿ ಸಂಚರಿಸಿತು. ಆ ನೆಲದಲ್ಲಿಯೂ ಶ್ರೀಕೃಷ್ಣ ಸಂಕೀರ್ತನೆಯ ಆಂದೋಲನವನ್ನು ಮಾಡಿತು. ಅಲ್ಲದೆ ತನ್ನ ಕಾರ್ಯಚಟುವಟಿಕೆಯ ಕೇಂದ್ರಸ್ಥಾನವಾಗಿ 'ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾಸಂಘ'ವನ್ನು ಸ್ಥಾಪಿಸಿಕೊಂಡು ವಿಶ್ವದ ಉದ್ದಗಲದಲ್ಲಿ ಹೆಮ್ಮರವಾಗಿ ಬೆಳೆಯಿತು.

೪.೭ (ಅ) ಇಸ್ಕಾನ್ ಸ್ಥಾಪನೆ ಮತ್ತು ಉದ್ದೇಶ

೧೯೫೯ ರಲ್ಲಿ ಸಂನ್ಯಾಸದೀಕ್ಷೆಯನ್ನು ಸ್ವೀಕರಿಸಿದ ಅಭಯಚರಣಾರವಿಂದ ಭಕ್ತಿವೇದಾಂತ ಸ್ವಾಮಿ ಪ್ರಭುಪಾದರು ಕೃಷ್ಣಪ್ರಜ್ಞೆಯನ್ನು ಬೋಧಿಸಲು ದೇಶದ ಉದ್ದಗಲದಲ್ಲಿ ಓಡಾಡಿದರು. ಜನತೆಗೆ ವೇದಸಾರದ ಅನಿವಾರ್ಯತೆಯನ್ನು ಕಂಡುಕೊಂಡ ಶೀಲ ಪ್ರಭುಪಾದರು ಪುಸ್ತಕ ರಚನೆಗಾಗಿ ಪ್ರಕಾಶನದ ಮೊರೆ ಹೋದರು. ಶ್ರೀಮದ್ಭಾಗವತ, ಭಗವದ್ಗೀತೆ, ಶ್ರೀಚೈತನ್ಯ ಚರಿತಾಮೃತ ಕೃತಿಗಳನ್ನು ಇಂಗ್ಲೀಷಿಗೆ ಭಾಷಾಂತರಿಸಿದರು. ಈ ನಿಟ್ಟಿನಲ್ಲಿ ಅವರು ಆರಂಭಿಸಿದ 'ಭಕ್ತಿವೇದಾಂತ ಬುಕ್‌ಟ್ರಸ್ಟ್' ಗಮನಾರ್ಹವಾದುದು. ಇದು ಜಗತ್ತಿನಲ್ಲೇ ವೈದಿಕಸಾಹಿತ್ಯವನ್ನು ಪ್ರಕಟಿಸುವ ಅತ್ಯಂತ ದೊಡ್ಡ ಪ್ರಕಾಶನ ಸಂಸ್ಥೆಯಾಯಿತು.

ಕೃಷ್ಣಪ್ರಜ್ಞೆಯನ್ನು ಜಗತ್ತಿನಾದ್ಯಂತ ಸಾರಬೇಕೆಂಬ ದೃಷ್ಟಿ ಪ್ರಭುಪಾದರಲ್ಲಿದ್ದುದರಿಂದ ವಿದೇಶ ಪ್ರವಾಸ ಅವರಿಗೆ ಅನಿವಾರ್ಯವಾಯಿತು. ಈ ನಿಟ್ಟಿನಲ್ಲಿ ಆರ್ಥಿಕ ಸಂಕಷ್ಟವಿದ್ದರೂ ಭಗವಂತನು ಅವರ ಕೈಬಿಡಲಿಲ್ಲ. ಈ ಸಂದರ್ಭದಲ್ಲಿ 'ಸಿಂದಿಯಾ ಸ್ಟೀಮಶಿಪ್‌ಲೈನ್ಸ್'ನ ಒಡತಿಯಾದ ಸುಮತಿ ಮೊರಾರ್ಜಿ ಎಂಬಾಕೆ ಪ್ರಭುಪಾದರ ಅಮೇರಿಕಾಯಾತ್ರೆಯ ಖರ್ಚುವೆಚ್ಚವನ್ನು ಭರಿಸಿದರು. ಇದರ ಫಲವಾಗಿಯೇ ೧೯೬೫ ರ ಆಗಸ್ಟ್ ತಿಂಗಳಲ್ಲಿ ಪ್ರಭುಪಾದರು ಅಮೇರಿಕಾ ಯಾತ್ರೆಯನ್ನು ಆರಂಭಿಸಿದರು. ಆದರೆ ಅವರ ಜೇಬಿನಲ್ಲಿದ್ದುದು ಕೇವಲ ೪೦ ರೂಪಾಯಿ. ಕೈಯಲ್ಲಿದ್ದುದು ಒಂದು ಕೊಡೆ, ಒಂದುಪೆಟ್ಟಿಗೆ ಮತ್ತು ಬಂಗಾಳೀಭಾಷೆಯ ಶ್ರೀಚೈತನ್ಯ ಚರಿತಾಮೃತ.

ಇದನ್ನು ಬಿಟ್ಟರೆ ಶ್ರೀಕೃಷ್ಣ ಪ್ರಜ್ಞಾ ಅಭಿಯಾನದ ಚೈತನ್ಯಶಕ್ತಿ. ಇವಿಷ್ಟನ್ನು ಹಿಡಿದುಕೊಂಡು ಅಮೇರಿಕಾನೆಲಕ್ಕೆ ಬಂದಿಳಿದ ಪ್ರಭುಪಾದರಿಗೆ ಆಗ ೬೯ ವರ್ಷ. ಅಮೇರಿಕದ ನೆಲದಲ್ಲಿ ಕಾವಿಬಟ್ಟೆಯನ್ನು ಧರಿಸಿದ ಸಂನ್ಯಾಸಿಯೊಬ್ಬನನ್ನು ಕಂಡ ಪಾಶ್ಚಾತ್ಯ ಜನತೆಯು, ಆತನ 'ಹರೇರಾಮ ಹರೇಕೃಷ್ಣ'ಮಂತ್ರಕ್ಕೆ ಅಚ್ಚರಿಗೊಂಡಿತು. ಕ್ರಮೇಣ ಅಲ್ಲಿಯ ಜನತೆಯು ಪ್ರಭುಪಾದರ ಬೋಧೆಗೆ ಮಾರುಹೋಯಿತು. ಆ ಪಾಶ್ಚಾತ್ಯರ ಬೆಂಬಲದಿಂದ ಜಾತಿ, ಮತ, ಭೇದಗಳನ್ನು ದಾಟಿದ, ಭಗವದ್ಭಕ್ತಿಯೊಂದೇ ಸಾಧನವಾಗಿರುವ 'ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾಸಂಘ'(ಇಸ್ಕಾನ್)ವು ೧೯೬೬ ರ ಜುಲೈಯಲ್ಲಿ ಆರಂಭಗೊಂಡಿತು. ಇದರ ವಿಶ್ವಕೇಂದ್ರವು ನವದ್ವೀಪದ ಮಾಯಾಪುರದಲ್ಲಿದೆ. ಇಲ್ಲಿ ದಿನದ ೨೪ ಘಂಟೆಗಳ ಕಾಲವೂ ಹರೇಕೃಷ್ಣ ಮಹಾಮಂತ್ರದ ಜಪ ನಡೆಯುತ್ತಿರುವಂತೆ ಅಲ್ಲಿಯ ವ್ಯವಸ್ಥಾಪಕರು ನೋಡಿಕೊಳ್ಳುತ್ತಾರೆ. ಇದರ ಜೊತೆಗೆ 'ಹರಯೇ ನಮಃ, ಕೃಷ್ಣ ಯಾದವಾಯ ನಮಃ' ಎಂಬ ಶ್ಲೋಕವನ್ನು ಹೇಳಬೇಕು. ಆದರೆ ಸಂಕೀರ್ತನಕ್ಕೆ ಮುಂಚೆ ಪಂಚತತ್ತ್ವಗಳ ಮಂತ್ರವನ್ನು ಹೇಳುವ ಕ್ರಮವೊಂದು ಇಲ್ಲಿ ಮೊದಲು ಆಚರಣೆಯಲ್ಲಿ ಬಂದಿತು. ವಾಸ್ತವದಲ್ಲಿ ಚೈತನ್ಯಪಂಥದ ಮೇರು ಸದೃಶವಾದ ಬೆಳವಣಿಗೆಯೆಂದರೆ ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾಸಂಘವೆಂದೇ ಹೇಳಬೇಕು. ಅದು ತನ್ನೊಳಗಿಟ್ಟುಕೊಂಡಿದ್ದ ಏಳು ಉದ್ದೇಶಗಳು ಅಧ್ಯಾತ್ಮಿಕಕ್ರಾಂತಿಗೆ ಪೂರಕವಾದವುಗಳು.

ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾಸಂಘದ ಏಳು ಉದ್ದೇಶಗಳು.

ಇದು ಪ್ರಭುಪಾದರ ದೂರಾಲೋಚನೆಯ ಉದ್ದೇಶಗಳು. ಈ ಮೂಲಕವಾಗಿ ವ್ಯವಸ್ಥಿತವಾಗಿ ಹೊಸತನವನ್ನು ಸಾಧಿಸಲು ಮುಂದಾಗುತ್ತಾರೆ. ಅಲ್ಲದೆ ೧೯೫೪ರಲ್ಲಿ ಭಾರತದ ಝಾನ್ಸಿಯಲ್ಲಿ ಅವರು ರೂಪಿಸಿದ "ಲೀಗ್ ಆಫ್ ಡಿವ್ರೋಟಿಸ್"ನ ವಿವರಣ ಪತ್ರಿಕೆಯಲ್ಲಿ ನೀಡಿದ ಉದ್ದೇಶಗಳಿಗೆ ಅನುರೂಪವಾಗಿಯೇ ಈ ಏಳು ಉದ್ದೇಶಗಳು ಸಿದ್ಧಗೊಡವು.[೪೬]

೧. ವ್ಯಾಪಕ ಹಾಗೂ ವ್ಯವಸ್ಥಿತ ದೃಷ್ಟಿಯಿಂದ ಸಮಾಜದಲ್ಲಿ ಆಧ್ಯಾತ್ಮಿಕ ಜ್ಞಾನವನ್ನು ಪ್ರಸಾರ ಮಾಡುವುದು. ಜೀವಿಯ ಬದುಕಿನ ಮೌಲ್ಯಗಳ ಅಸಮತೋಲನವನ್ನು ನೀಗಿಸಲು ಮತ್ತು ಪ್ರಪಂಚದಲ್ಲಿ ನಿಜವಾದ ಏಕತೆ ಹಾಗೂ ಶಾಂತಿಯನ್ನು ಸಾಧಿಸಲು ಜನರಿಗೆ ಆಧ್ಯಾತ್ಮಿಕ ಜೀವನ ವಿಧಾನಗಳನ್ನು ಕುರಿತು ಶಿಕ್ಷಣವನ್ನು ಕೊಡುವುದು.

೨. ಭಗವದ್ಗೀತೆ ಹಾಗೂ ಶ್ರೀಮದ್ಭಾಗವತದಲ್ಲಿ ಹೇಳಿರುವಂತೆ ಕೃಷ್ಣಪ್ರಜ್ಞೆಯನ್ನು ಪ್ರಸಾರ ಮಾಡುವುದು.

೩. ಸಂಘದ ಸದಸ್ಯರನ್ನು ಪರಸ್ಪರ ಹತ್ತಿರ ತರುವುದು ಹಾಗೂ ಪರಮಪ್ರಭುವಾದ ಕೃಷ್ಣನ ಸಮೀಪ ತರುವುದು. ಪ್ರತಿಯೊಂದು ಆತ್ಮವು ದೇವೋತ್ತಮನ ಗುಣದ ವಿಭಿನ್ನಾಂಶವೆಂಬ ಭಾವನೆಯನ್ನು ಸದಸ್ಯರಲ್ಲಿ ಹಾಗೂ ಸಮಸ್ತ ಮಾನವ ಸಮುದಾಯದಲ್ಲಿ ಮೂಡಿಸುವುದು.

೪. ಶ್ರೀಚೈತನ್ಯ ಮಹಾಪ್ರಭುಗಳ ಬೋಧನೆಗಳಲ್ಲಿ ತಿಳಿಸಿರುವಂತೆ, ಭಗವಂತನ ಪಾವನ ನಾಮವನ್ನು ಸಾಮೂಹಿಕವಾಗಿ ಭಜಿಸುವುದು ಹಾಗೂ ಸಂಕೀರ್ತನಾಂದೋಲನವನ್ನು ಬೋಧಿಸಿ ಪ್ರೋತ್ಸಾಹಿಸುವುದು.

೫. ದೇವೋತ್ತಮಪುರುಷ ಕೃಷ್ಣನ ದಿವ್ಯಲೀಲೆಗಳಿಗೆ ಮುಡಿಪಾದ ಪವಿತ್ರ ಸ್ಥಳವೊಂದನ್ನು ಸದಸ್ಯರಿಗಾಗಿ ಹಾಗೂ ಸಮಸ್ತ ಸಮಾಜಕ್ಕಾಗಿ ನಿರ್ಮಿಸುವುದು.

೬. ಸರಳವಾದ ಮತ್ತು ಹೆಚ್ಚು ಸಹಜವಾದ ಜೀವನ ವಿಧಾನವನ್ನು ಮೊದಲು ಸದಸ್ಯರಿಗೆ ಬೋಧಿಸುವುದು.

೭. ಮೇಲೆ ಹೇಳಿದ ಉದ್ದೇಶಗಳನ್ನು ಸಾಧಿಸುವುದಕ್ಕಾಗಿ ನಿಯತಕಾಲಿಕೆಗಳು, ಪತ್ರಿಕೆಗಳು, ಪುಸ್ತಕಗಳು ಹಾಗೂ ಇತರ ಬರಹಗಳನ್ನು ಪ್ರಕಟಿಸಿ, ವಿತರಿಸುವುದು.

ಈ ಮೂಲಕವಾಗಿ ದೇಶದ ಒಳಹೊರಗಿನ ಸಮಾಜದ ಬೆಳವಣಿಗೆಯಲ್ಲಿ ಕೃಷ್ಣಪ್ರಜ್ಞೆಯನ್ನು ಬಿತ್ತರಿಸುವ ಹೊಸದಾದ ಕಾಯಕವೊಂದನ್ನು ಚೈತನ್ಯಪಂಥದ ಇಸ್ಕಾನ್ ಸಂಘವು ಸ್ವೀಕರಿಸಿ, ವರ್ತಮಾನದ ಹೊಸ ಬೆಳವಣಿಗೆಗೆ ಕಾರಣವಾಯಿತು.

೪.೬ (ಆ) ಸಾಮಾಜಿಕ ಕಳಕಳಿಯಲ್ಲಿ ಚೈತನ್ಯಪಂಥ

ಚೈತನ್ಯಪಂಥವು ತನ್ನ ಪ್ರಾಥಮಿಕ ಮುನ್ನಡೆಯಲ್ಲಿ ಹರಿಸಂಕೀರ್ತನೆಗೆ ಪ್ರಾಮುಖ್ಯತೆಯನ್ನು ನೀಡಿದ್ದರೂ, ಮುಂದುವರಿದಂತೆ ಅಧ್ಯಾತಿಕ ಬದುಕಿಗೆ ಪೂರಕವಾಗುವಂತೆ ಸಾಮಾಜಿಕ ಹಿತಚಿಂತನೆಯ ಕಾಳಜಿಯನ್ನು ಇಟ್ಟುಕೊಂಡಿತು. ದೇಶದ ಅಭಿವೃದ್ಧಿಯು ಬಡತನದ ನಿರ್ಮೂಲನೆಯಲ್ಲಿ ಮತ್ತು ಸಾರ್ವತ್ರಿಕ ಸಾಕ್ಷರತೆಯಲ್ಲಿ ಅಡಗಿರುವುದೆಂಬ ಕಲ್ಪನೆಯನ್ನಿಟ್ಟುಕೊಂಡು, ಶಿಕ್ಷಣ ಸಂಸ್ಥೆಗಳಲ್ಲಿರುವ ಬಡವಿದ್ಯಾರ್ಥಿಗಳ ಕುರಿತಾಗಿ ಯೋಚಿಸಿತು. ಅಲ್ಲದೆ ಅಲ್ಲಿರುವ ಸಮಸ್ಯೆಗಳನ್ನು ಅರ್ಥೈಸಿಕೊಂಡು ಅದಕ್ಕೆ ಪೂರಕವಾಗಿ ಸ್ಪಂದಿಸಿತು.

೪.೬ (ಆ:೧) ಬಡವರ ಪಾಲಿಗೆ 'ಅಕ್ಷಯ ಪಾತ್ರೆ'

ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾಸಂಘ(ಇಸ್ಕಾನ್)ದ ಸಾಮಾಜಿಕ ಕಳಕಳಿಯಲ್ಲಿ 'ಅಕ್ಷಯಪಾತ್ರೆ'ಯ ಪಾತ್ರ ಮುಖ್ಯವಾದುದು. ಹಸಿವಿನ ಕಾರಣದಿಂದ ಶಿಕ್ಷಣ ವಂಚಿತರಾಗಿರುವ ೬ ರಿಂದ ೧೬ ವಯೋಮಾನದ ಮಕ್ಕಳಿಗಾಗಿಯೇ ೨೦೦೦ನೇ ಇಸವಿಯಲ್ಲಿ ಬೆಂಗಳೂರಿನಲ್ಲಿ ಹುಟ್ಟಿಕೊಂಡ ಪ್ರತಿಷ್ಠಾನವಿದು. ಇದರ ಹಿಂದೆ ಹಸಿವು ಮತ್ತು ಬಡತನದ ಕುರಿತಾಗಿ ಸ್ಪಂದಿಸುವ ಮಾನವೀಯ ಮೌಲ್ಯವಿದೆ. ಶಾಲೆಗೆ ಹೋಗಲಾಗದ ಸ್ಥಿತಿಯಲ್ಲಿರುವ ಮಕ್ಕಳ ಕುರಿತಾದ ಮರುಕವಿದೆ. ಪೌಷ್ಟಿಕ ಆಹಾರ ದೊರೆಯದಂತಹ ಮಕ್ಕಳು ಶಾಲೆಗೆ ಹೋದರೂ ಸಹ ಏಕಾಗ್ರತೆಯ ಕೊರತೆಯಿಂದಾಗಿ ಸೂಕ್ತ ಶಿಕ್ಷಣವನ್ನು ಪಡೆಯಲಾರರೆಂಬ ಭವಿಷ್ಯತ್ತಿನ ಕಾಳಜಿಯಿದೆ. ಹಾಗಾಗಿ,

ಇದು ಸೌಲಭ್ಯವಂಚಿತರಾದ ಮಕ್ಕಳ ಪರವಾದುದು. ಪ್ರಾಯಶಃ ನಮ್ಮ ದೇಶದಲ್ಲೇ ಮಧಾಹ್ನದ ಬಿಸಿಯೂಟ ಒದಗಿಸುತ್ತಿರುವ, ಲಾಭರಹಿತವಾದ, ಜಾತ್ಯತೀತ ಮತ್ತು ಅತ್ಯಂತ ವಿಶ್ವಾಸಾರ್ಹವಾದ ಸಂಸ್ಥೆ.

ಬೆಂಗಳೂರಿನ ೫ ಶಾಲೆಗಳ ೧,೫೦೦ ವಿದ್ಯಾರ್ಥಿಗಳಿಗೆ ಊಣಬಡಿಸುವ ಮೂಲಕ ಆರಂಭಗೊಂಡ ಈ ಯೋಜನೆ ಇಂದು ದೇಶದ ವಿವಿಧೆಡೆಗಳಲ್ಲಿ ಸುಮಾರು ೧೧,೦೦,೦೦೦ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಒದಗಿಸುವಷ್ಟು ಬೃಹದಾಕಾರವಾಗಿ ಬೆಳೆದಿದೆ. ಭಾರತದ ೭ ರಾಜ್ಯಗಳ, ೧೬ ಕೇಂದ್ರಗಳ ಮೂಲಕ ೪,೫೦೦ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಮತ್ತು ಅಂಗನವಾಡಿಗಳಲ್ಲಿ ಪ್ರತೀದಿನ ಬಿಸಿಯೂಟ ವಿತರಿಸುತ್ತಿರುವ ಅಕ್ಷಯಪಾತ್ರ ಇದೀಗ ಜಗತ್ತಿನಲ್ಲೇ ಅತೀ ಹೆಚ್ಚು ಪ್ರಮಾಣದಲ್ಲಿ ಶಾಲಾಬಿಸಿಯೂಟ ವಿತರಿಸುತ್ತಿರುವ ಸರ್ಕಾರೇತರ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಅಕ್ಷಯ ಪಾತ್ರದ ವೈಶಿಷ್ಟ್ಯ

- ಇದು ಕೇಂದ್ರ ಹಾಗೂ ಅಯಾ ರಾಜ್ಯ ಸರ್ಕಾರಗಳ ಪಾಲುದಾರಿಕೆಯನ್ನು ಪಡೆದುಕೊಂಡು, ವಾರದಲ್ಲಿ ಆರು ದಿನಗಳ ಕಾಲ ಶುಚಿರುಚಿಯಾದ ಬಿಸಿಯೂಟವನ್ನು ಶಾಲಾ ಮಕ್ಕಳಿಗೆ ಒದಗಿಸಿ ಕೊಡುತ್ತದೆ.
- ಸುಸಜ್ಜಿತ, ಮೂಲ ಸೌಕರ್ಯಗಳುಳ್ಳ ಹಾಗೂ ಉತ್ತಮ ತಂತ್ರಕೌಶಲ್ಯದ ಅಡುಗೆ ಮನೆಗಳನ್ನು ಹೊಂದಿದೆ.
- ಅಡುಗೆ ಮನೆಗಳು ತಾಂತ್ರಿಕವಾಗಿ ಸಬಲವಾಗಿದ್ದು, ಕೇವಲ ೫ ಗಂಟೆಗಳಲ್ಲಿ ೧,೦೦,೦೦೦ ಜನರಿಗಾಗುವಷ್ಟು ಆಹಾರ ತಾಯಾರಿಕಾ ಸಾಮರ್ಥ್ಯವನ್ನು ಹೊಂದಿದೆ.
- ತಯಾರಾದ ಆಹಾರವು ಬಿಸಿಯನ್ನು ಕಾಯ್ದಿಟ್ಟುಕೊಂಡು, ವಿಶೇಷ ವಾಹನಗಳ ಮೂಲಕ ಶಾಲೆಗಳಿಗೆ ರವಾನೆಯಾಗುತ್ತದೆ.
- ಬಿಸಿಯೂಟವು ಆಯಾಯ ಪ್ರಾಂತ್ಯದ ಆಹಾರಶೈಲಿಗೆ ತಕ್ಕಷ್ಟು ಪದಾರ್ಥಗಳನ್ನು ಒಳಗೊಂಡಿರುತ್ತದೆ, ಹೀಗಾಗಿ ಉತ್ತರಭಾರತದಲ್ಲಿ ಒಂದು ಗಂಟೆಗೆ ೧೨,೫೦೦ ಚಪಾತಿಗಳನ್ನು ತಯಾರಿಸುವ ಯಂತ್ರಗಳನ್ನು ಅಳವಡಿಸಲಾಗಿದ್ದರೆ, ದಕ್ಷಿಣಭಾರತದ ಅಡುಗೆ ಮುನೆಗಳು ಅನ್ನ ಹಾಗೂ ಇತರ ಪದಾರ್ಥಗಳಿಂದ ವಿನ್ಯಾಸಗೊಂಡಿವೆ. ಆಯಾಯ ಪ್ರಾಂತ್ಯ ಹಾಗೂ ಕೇಂದ್ರಗಳ ಆಹಾರತಜ್ಞರ ಸಲಹೆಯಂತೆ ಪರಿಪೂರ್ಣ ಆಹಾರವನ್ನು ಆಯಾಯ ಕೇಂದ್ರಗಳಲ್ಲಿ ತಯಾರಿಸಲಾಗುತ್ತದೆ.
- ಇದು ಜಾತಾತೀತ ಮತ್ತು ಲಾಭ ನಿರಪೇಕ್ಷ ಕಾರ್ಯಯೋಜನೆಯಾಗಿರುತ್ತದೆ. ಜೊತೆಗೆ ಸರ್ಕಾರಿ ಶಾಲೆಗಳಲ್ಲಿ ಮಾತ್ರ ಬಿಸಿಯೂಟವನ್ನು ವಿತರಿಸುತ್ತದೆ.
- ಪೌಷ್ಠಿಕ ಆಹಾರ ಒದಗಿಸುವುದರ ಹೊರತಾಗಿ, ಶೈಕ್ಷಣಿಕ ಹಾಗೂ ವೈದ್ಯಕೀಯ ಸೌಲಭ್ಯಗಳನ್ನು ಮಕ್ಕಳಿಗೆ ಒದಗಿಸುವ ಮೂಲಕ ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಅಕ್ಷಯಪಾತ್ರವು ಶ್ರಮಿಸುತ್ತದೆ.

- ಈ ಯೋಜನೆಯು ವಿಶ್ವಸ್ತಮಂಡಳಿಯ ಸದಸ್ಯರಿಂದ ಸ್ವತಂತ್ರವಾಗಿ ನಿರ್ವಹಿಸಲ್ಪಡುತ್ತಿದ್ದು, ಉದ್ದಿಮೆಗಳು ಹಾಗೂ ಆಡಳಿತ ಕ್ಷೇತಗಳಲ್ಲಿನ ತಜ್ಞರ ಸಲಹಾಮಂಡಳಿಯನ್ನು ಹೊಂದಿದೆ. ಜೊತೆಗೆ ಸ್ವಯಂಸೇವಕರ ತಂಡವು ಇದರ ಕಾರ್ಯಗಳನ್ನು ಪೂರ್ಣಗೊಳಿಸುತ್ತದೆ.
- ೨೦೦೬ ರಲ್ಲಿ ಮುಂಬಯಿಯ ಎ.ಸಿ. ನೀಲ್ಸನ್ ಆರ್ಗ್ ಮಾರ್ಗನ್ ಪ್ರೈ. ಲಿಮಿಟೆಡ್ ನಡೆಸಿದ ಅಧ್ಯಯನ ವರದಿಯು ಅಕ್ಷಯಪಾತ್ರ ಸರಬರಾಜಾಗುವ ಶಾಲೆಗಳಲ್ಲಿ ಹಾಜರಾತಿ ಹೆಚ್ಚಳ, ಮಕ್ಕಳ ಪೌಷ್ಟಿಕ ಮಟ್ಟದಲ್ಲಿಯೂ ಸುಧಾರಣೆ ಹಾಗೂ ಅವರ ಗ್ರಹಣಸಾಮರ್ಥ್ಯದಲ್ಲಿ ಪ್ರಗತಿ ಉಂಟಾಗಿರುವುದನ್ನು, ಅಲ್ಲದೆ ಶಾಲೆ ತೊರೆಯುವವರ ಸಂಖ್ಯೆಯು ಅಲ್ಪಪ್ರಮಾಣಕ್ಕೆ ಇಳಿದಿರುವುದನ್ನು ಸಾರುತ್ತದೆ.
- ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವದೊಂದಿಗೆ ನಡೆಯುತ್ತಿರುವ ಅಕ್ಷಯಪಾತ್ರ ಯೋಜನೆಯು ಸರ್ಕಾರದಿಂದ ಧನಸಹಾಯವನ್ನು ಪಡೆಯುತ್ತಿರುವುದರ ಜೊತೆಗೆ, ಉದ್ದಿಮೆದಾರರು ಹಾಗೂ ಪ್ರತ್ಯೇಕ ದಾನಿಗಳಿಂದಲೂ ಧನಸಹಾಯವನ್ನು ಹಾಗೂ ಬೆಂಬಲವನ್ನು ಪಡೆಯುತ್ತಿದೆ.
- ಅಕ್ಷಯಪಾತ್ರ ಪ್ರತಿಷ್ಠಾನಕ್ಕೆ ನೀಡಲಾಗುವ ಎಲ್ಲ ದೇಣಿಗೆಗಳು ಭಾರತದಲ್ಲಿ 'ಇನ್‌ಕಮ್ ಟ್ಯಾಕ್ಸ್ ಕಾಯ್ದೆ– ೧೯೬೧' ರ ಸೆಕ್ಷನ್ ಅಡಿಯಲ್ಲಿ ಶೇ. ೧೦೦ ತೆರಿಗೆ ಕಡಿತಕ್ಕೆ ಒಳಪಡುತ್ತವೆ.

ಇತರ ಕೇಂದ್ರಗಳು ಮತ್ತು ಅನ್ನದಾನ

ಅಕ್ಷಯಪಾತ್ರವು ನಗರ ಮತ್ತು ಪಟ್ಟಣ ಪ್ರದೇಶಗಳಿಗೆ ಸೂಕ್ತವಾಗುವಂತಹ ಕೇಂದ್ರೀಕೃತ ಅಡುಗೆಮನೆಗಳನ್ನು ಯಶಸ್ವಿಯಾಗಿ ಅಳವಸಿಕೊಂಡಿದೆ. ದೇಶದಲ್ಲಿ ಇದು ೯ ಕೇಂದ್ರಗಳನ್ನು ಹೊಂದಿದ್ದು, ಬೆಂಗಳೂರಿನಲ್ಲಿ ಎರಡು, ಹುಬ್ಬಳ್ಳಿ, ಬಳ್ಳಾರಿ, ಮಂಗಳೂರು, ಮೈಸೂರು, ನಾಥದ್ವಾರ, ಜೈಪುರ(ರಾಜಸ್ಥಾನ), ಪುರಿ(ಒರಿಸ್ಸಾ) ಹಾಗೂ ವೃಂದಾವನ (ಉ.ಪ್ರದೇಶ)ಗಳಲ್ಲಿ ತಲಾ ಒಂದೊಂದು ಕೇಂದ್ರಗಳನ್ನು ಹೊಂದಿದೆ. ಇದು ಸಂಪೂರ್ಣ ಯಾಂತ್ರೀಕೃತ ನಿರ್ವಹಣೆಗೆ ಒಳಗಾಗಿದ್ದು, ಅತ್ಯಂತ ಕಡಿಮೆ ಮಾನವ ಸಹಕಾರವನ್ನು ಬಳಸುತ್ತದೆ. ಇದರಿಂದಾಗಿ ಕಡಿಮೆ ಅವಧಿಯಲ್ಲಿ ಹೆಚ್ಚು ಹಾಗೂ ಶುದ್ಧವಾದ ಆಹಾರವನ್ನು ತಯಾರಿಸುವುದು ಸಾಧ್ಯವಾಗುತ್ತದೆ. ಇದರೊಂದಿಗೆ ಉತ್ಪಾದನಾವೆಚ್ಚದಲ್ಲಿ ಕೂಡ ಕಡಿತವುಂಟಾಗುತ್ತದೆ.

'ಅಕ್ಷಯಪಾತ್ರೆ'ಯು ಸುಮಾರು ಒಂದು ಲಕ್ಷ ಮಕ್ಕಳಿಗಾಗುವಷ್ಟು ಆಹಾರ ತಯಾರಿಸಬಹುದಾದ ಸಾಮರ್ಥ್ಯವಿರುತ್ತದೆ. ಆಯಾಯ ಪ್ರಾಂತ್ಯಗಳ ಶೈಲಿಗೆ ತಕ್ಕಂತಹ ಆಹಾರವನ್ನು ತಯಾರಿಸಲು ಸೂಕ್ತವ್ಯವಸ್ಥೆಗಳನ್ನು ಹೊಂದಿರುತ್ತದೆ. ಒಂದು ಬಾರಿಗೆ ೧೨೦ ಕೆ.ಜಿ. ಅನ್ನ ತಯಾರಿಸಲು ಸಾಧ್ಯವಾಗುವಂತಹ ೮ ಬೃಹತ್‌ಪಾತ್ರೆಗಳು ಕರ್ನಾಟಕದ ಕನಕಪುರ ಅಡುಗೆ ಮನೆಯಲ್ಲಿವೆ. ಒಂದು ಬಾರಿಗೆ ೧೨೦೦ ಲೀಟರುಗಳಷ್ಟು ಸಾಂಬಾರು

ತಯಾರಿಸುವ ಸಾಮರ್ಥ್ಯವೂ ಈ ಅಡುಗೆಮನೆಗಿದೆ. ಇದು ೨ ಗಂಟೆಗಳಲ್ಲಿ ೬೦೦೦ ಮಕ್ಕಳಿಗಾಗುವಷ್ಟು ಸಾಂಬಾರನ್ನು ತಯಾರಿಸಬಲ್ಲದು. ಈ ಬಗೆಯ ೫ ಪಾತ್ರೆಗಳು ಕನಕಪುರದಲ್ಲಿದೆ.

ಉತ್ತರಭಾರತದಲ್ಲಿ ಒಂದು ಗಂಟೆ ಅವಧಿಯಲ್ಲಿ ೧೦,೦೦೦ ದಿಂದ ೧೨,೫೦೦ ಚಪಾತಿಗಳನ್ನು ತಯಾರಿಸುವ ಯಂತ್ರಗಳಿವೆ. ಹೀಗೆ ತಯಾರಾದ ಆಹಾರವನ್ನು ಬಿಸಿಯು ಆರದಂತೆ ಸ್ಟೇನ್‌ಲೆಸ್‌ಸ್ಟೀಲ್ ಕಂಟೈನರುಗಳಲ್ಲಿ ಪ್ಯಾಕ್ ಮಾಡಲಾಗುತ್ತದೆ. ಅನಂತರ ಇದನ್ನು ಆಹಾರ ಸರಬರಾಜಿಗಾಗಿಯೇ ವಿಶೇಷವಾಗಿ ವಿನ್ಯಾಸಗೊಳಿಸಲ್ಪಟ್ಟ ವಾಹನಗಳಲ್ಲಿ ಶಾಲೆಗಳಿಗೆ ತಲುಪಿಸಲಾಗುತ್ತದೆ. ಪ್ರತಿಯೊಂದು ವಾಹನವೂ ೫ ಸಾವಿರ ಮಕ್ಕಳಿಗೆ ಆಗುವಷ್ಟು ಆಹಾರ ಸಾಗಿಸುವ ಸಾಮರ್ಥ್ಯ ಹೊಂದಿದ್ದು ಮಾತ್ರವಲ್ಲದೆ, ಪ್ರತಿದಿನ ಅಡುಗೆಮನೆಯಿಂದ ೫೦ ಕಿ.ಮೀ. ದೂರ ಕ್ರಮಿಸಿ, ಶಾಲಾವಿದ್ಯಾರ್ಥಿಗಳಿಗೆ ಭೋಜನವನ್ನು ಒದಗಿಸುತ್ತದೆ. ಬೆಂಗಳೂರು ಒಂದರಲ್ಲೇ ೩೭ ಮಾರ್ಗಗಳಲ್ಲಿ ೬೩೭ ಶಾಲೆಗಳಿಗೆ ಈ ವಾಹನಗಳು ಬಿಸಿಯೂಟ ಸರಬರಾಜು ಮಾಡುತ್ತದೆ.

ಅಕ್ಷಯಪಾತ್ರದ ವಿಕೇಂದ್ರೀಕೃತ ಅಡುಗೆಮನೆಗಳ ವ್ಯವಸ್ಥೆಯು ಒಂದು ದೃಷ್ಟಿಯಿಂದ ನೋಡಿದರೆ ಸಾಮಾಜಿಕ ಸಮಾನತೆಯನ್ನು ಕಟ್ಟಿಕೊಡುವಂತದ್ದಾಗಿದೆ. ಇದು ಸಮಾಜದ ವಿವಿಧ ಸಮುದಾಯಗಳನ್ನು ಒಟ್ಟುಗೂಡಿಸುತ್ತದೆ. ಹಾಗೂ ಮಹಿಳೆಯರಲ್ಲಿ ಕೆಲಸದ ಲವಲವಿಕೆಯನ್ನು ಮೂಡಿಸಿ ವಿವಿಧ ಜಾತಿಮತಗಳ ಮಕ್ಕಳನ್ನು ಕೂಡ ಒಂದುಗೂಡುವಂತೆ ಮಾಡುತ್ತದೆ. ವಿಶೇಷವೆಂದರೆ ಪರ್ಯಾಯ ಅಡುಗೆ ಕೇಂದ್ರಗಳು ಕುಗ್ರಾಮಗಳಲ್ಲಿ ಕಾರ್ಯನಿರ್ವಹಿಸುವುದರಿಂದ ಮೂಲಭೂತ ಸೌಕರ್ಯಗಳಿಲ್ಲದಿರುವ ಪ್ರದೇಶಗಳಿಗೆ ಹೊಸದೊಂದು ಆಶ್ರಯ ದೊರಕಿದಂತಾಗುತ್ತದೆ.

ವಿಕೇಂದ್ರೀಕೃತ ಅಡುಗೆಮನೆಗಳಲ್ಲಿ ಮಹಿಳಾಸ್ವಸಹಾಯ ಗುಂಪುಗಳು ಶಾಲೆಗಳ ಬಳಿಯಲ್ಲಿಯೇ ಅಡುಗೆ ಮಾಡಲು ತರಬೇತಿ ಪಡೆದಿರುತ್ತವೆ. ಅವರು ಆಹಾರ ತಯಾರಿಸಿ ತಾವೇ ಶಾಲೆಗಳ ಮಕ್ಕಳಿಗೆ ಭೋಜನವನ್ನು ಬಡಿಸುತ್ತಾರೆ. ಇಂತಹ ಅಡುಗೆಮನೆಗಳನ್ನು ಸ್ಥಾಪಿಸುವ ಮೊದಲು ವಿಚಾರಣಾತಂಡವು ಹಳ್ಳಿಗಳಿಗೆ ತೆರಳಿ ಗ್ರಾಮಪಂಚಾಯಿತಿಯ ಸಲಹೆ ಸೂಚನೆಗಳೊಂದಿಗೆ ಅಡುಗೆ ಮಾಡಲು ಜನರನ್ನು ಆಯ್ಕೆ ಮಾಡುತ್ತದೆ. ಅದರ ಅನಂತರ ಮಹಿಳೆಯರಿಗೆ ಅಡುಗೆ ಮಾಡಲು ಒಂದು ವಾರದ ತರಬೇತಿ ನೀಡಲಾಗುತ್ತದೆ. ಈ ತರಬೇತಿಯಲ್ಲಿ ಲೆಕ್ಕಾಚಾರ ನಿರ್ವಹಣೆ, ಆಹಾರ ತಯಾರಿಕೆ ಹಾಗೂ ಶುಚಿತ್ವದ ನಿರ್ವಹಣೆಗಳು ಸೇರಿರುತ್ತವೆ.

ಈ ಅಡುಗೆಮನೆಗಳ ಉಸ್ತುವಾರಿಗೆ ಕ್ಲಸ್ಟರ್‌ಗಳನ್ನು ರಚಿಸಲಾಗುತ್ತದೆ. ಪ್ರತಿ ಕ್ಲಸ್ಟರ್‌ನಲ್ಲಿಯೂ ಒಬ್ಬರು ಕಾರ್ಯನಿರ್ವಾಹಕ ಮೇಲ್ವಿಚಾರಕರು ಮತ್ತು ಇಬ್ಬರು ಸಹಾಯಕರಿರುತ್ತಾರೆ. ಪ್ರತಿತಿಂಗಳು ಪ್ರತಿಯೊಂದು ಆಡುಗೆಮನೆಯ ವ್ಯವಹಾರ ಲೆಕ್ಕಪತ್ರ ಹಾಗೂ ಕಾರ್ಯವೈಖರಿಯ ವಿವರ ಸಲ್ಲಿಸಲಾಗುತ್ತದೆ. ರಾಜಾಸ್ತಾನದ ಬರಾನ್‌ನಲ್ಲಿ ಈ ಬಗೆಯ ೧೪ ಕ್ಲಸ್ಟರ್‌ಗಳಿವೆ. ಮೇಲ್ವಿಚಾರಕರು ಪ್ರತಿದಿವವೂ ತಮ್ಮ ಕ್ಲಸ್ಟರ್‌ಗಳಿಗೆ ಭೇಟಿ ನೀಡುತ್ತಾರೆ. ಮಹಿಳೆಯರ ದೈನಂದಿನ ಕಾರ್ಯಗಳನ್ನು ಪುಸ್ತಕದಲ್ಲಿ ಬರೆದಿಡುತ್ತಾರೆ. ಹೀಗೆ ವಿಕೇಂದ್ರೀಕೃತ ಅಡುಗೆಮನೆಗಳು ಸಾಮಾಜಿಕ ಹಾಗೂ ಆರ್ಥಿಕವಾಗಿ ಗ್ರಾಮೀಣ ಜೀವನದಲ್ಲಿ ಹೊಸ ಹುರುಪನ್ನು ಮೂಡಿಸಿವೆ.

೪.೭ (ಆ.೨) ಗೋ ಸಂರಕ್ಷಣೆ

ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾಸಂಘ(ಇಸ್ಕಾನ್)ದ ಸಾಮಾಜಿಕ ಸಮೃದ್ಧಿಯ ಧ್ಯೇಯಗಳಲ್ಲಿ ಗೋವಿನ ಸಂರಕ್ಷಣೆಯು ಕೂಡ ಪ್ರಮುಖವಾದುದಾಗಿದೆ. ಭಗವದ್ಗೀತೆ ಮತ್ತು ಭಾಗವತದ ದಾರಿಯಲ್ಲೇ ಸಾಗುತ್ತಿರುವ ಚೈತನ್ಯಪಂಥ ಅಥವಾ ಇಸ್ಕಾನ್ ಸಂಸ್ಥೆಯು ಗೋ ಸಂರಕ್ಷಣೆಯ ಮೂಲಕ ಸಮಾಜದಲ್ಲಿ ಧಾರ್ಮಿಕತೆಯನ್ನು ಉದ್ದೀಪನಗೊಳಿಸುವುದು ಇದರ ಆಂತರಿಕ ಉದ್ದೇಶವಾದರೆ, ಇನ್ನೊಂದು ಸಾಮಾಜಿಕರಿಗೆ ಸ್ವಾವಲಂಬಿ ಕೃಷಿಗಾರಿಕೆಯನ್ನು ತೋರಿಸಿಕೊಡುವುದರ ಮೂಲಕ ನಿರುದ್ಯೋಗವನ್ನು ನಿವಾರಿಸುವುದು ವಾಸ್ತವಿಕ ಉದ್ದೇಶ. ಈ ನಿಟ್ಟಿನಲ್ಲಿ ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗೋ ಸಂರಕ್ಷಣೆಗೆ ಪ್ರಮುಖ ಅದ್ಯತೆಯನ್ನು ನೀಡಲು ಮುಂದಾಗಿದೆ. ಪರಿಣಾಮವಾಗಿ ಜಾಗತಿಕ ಮಟ್ಟದಲ್ಲಿ ಸುಮಾರು ಐವತ್ತು ಪ್ರದೇಶಗಳಲ್ಲಿ ಕೃಷಿಭೂಮಿಯನ್ನು ಖರೀದಿಸಿ, ಅಸಂಖ್ಯಾತ ವಿವಿಧ ತಳಿಯ ಹಸುಗಳಿಗೆ ಉಲ್ಲಾಸಭರಿತ ಬದುಕು ಮತ್ತು ಸಮಾಜಕ್ಕೆ ಪರಿಶುದ್ಧ ಕ್ಷೀರವನ್ನು ನೀಡುತ್ತಿದೆ.

ಇಲ್ಲಿಯ ತಂತ್ರಗಾರಿಕೆಯು ತೀರ ಪಾರಂಪರಿಕವಾದುದು. ಆಧುನಿಕ ಯುಂತ್ರಗಳ ಬಳಕೆಗೆ ಪ್ರಾಧಾನ್ಯತೆ ಕಡಿಮೆ. ಪರಂಪರೆಯಂತೆ ಮನುಷ್ಯರು ಹಾಗೂ ಪ್ರಾಣಿಗಳು ಸೌಹಾರ್ದಯುತವಾಗಿ ಹೊಲದಲ್ಲಿ ದುಡಿಯುತ್ತಾರೆ. ಅಹಿಂಸೆ ಹಾಗೂ ಸಕಲ ಜೀವಜಂತುಗಳ ರಕ್ಷಣೆಯ ವೈದಿಕ ನಿರ್ದೇಶನವನ್ನು ಎಚ್ಚರಿಕೆಯಿಂದ ಪಾಲಿಸಲಾಗುತ್ತದೆ. ಪ್ರಾಣಿವಧೆಯ ಮಾತಿರಲಿ, ಸಸ್ಯಗಳನ್ನು ಕೂಡ ಅನವಶ್ಯಕವಾಗಿ ಕತ್ತರಿಸುವುದನ್ನು ಈ ಸಂಸ್ಥೆಯು ಸಮ್ಮತಿಸುವುದಿಲ್ಲ. ಕಾರ್ಯ ನಿರ್ವಹಣೆಗೆ ಒಳಗಿನ ಗಳಿಕೆಯ ಹಣವು ಕಡಿಮೆ ಬಿದ್ದರೆ, ಹೆಚ್ಚುವರಿ ಹಾಲನ್ನು ಮಾರುವುದರ ಮೂಲಕ ಅಗತ್ಯ ವಸ್ತುಗಳನ್ನು ಖರೀದಿಸಲಾಗುತ್ತದೆ. ಇಲ್ಲವಾದಲ್ಲಿ, ಹಾಲನ್ನು ದೀರ್ಘಕಾಲ ಬಾಳುವ ಖಾದ್ಯಗಳಾಗಿ ಸಂರಕ್ಷಿಸಿ ಮುಂದಿನ ಅಗತ್ಯಕ್ಕೆ ಬಳಸಲಾಗುತ್ತದೆ.[೪೮]

ಒಟ್ಟಿನಲ್ಲಿ ಇದೊಂದು ಪಾಚೀನ ಕಲ್ಪನೆ. ಇಲ್ಲಿ ಪ್ರಕೃತಿಯೊಂದಿಗೆ ಪ್ರೀತಿಯಿದೆ. ಸಸ್ಯಗಳೊಂದಿಗೆ ಪೂಜೆಯಿದೆ. ಗ್ರಾಮೀಣ ಜೀವನದಲ್ಲಿ ಬಾಂಧವ್ಯದ ಕಲ್ಪನೆಯಿದೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಹಸುವನ್ನು ಮುನುಕುಲದ ತಾಯಿ ಎಂದು ಭಾವಿಸುವ ವೈದಿಕ ಆಚರಣೆಯಿದೆ.

೪.೭ (ಆ: ೩) ಸಾವಯವ ಕೃಷಿ

ಚೈತನ್ಯಪಂಥದ ಸಾಮಾಜಿಕ ಕಳಕಳಿಯು ದಾಸಪಂಥದ ಎತ್ತರಕ್ಕೆ ಏರದಿದ್ದರೂ ಆ ಕುರಿತಾಗಿ ಮೌನವನ್ನು ತಳೆದಿಲ್ಲ. ಸಾಮಾಜಿಕ ಕಳಕಳಿಯಲ್ಲಿ ದಾಸಪಂಥವು ಪ್ರಥಮದಲ್ಲಿ ಸಾಮಾಜಿಕವಾಗಿ ಸ್ಪಂದಿಸಿದ್ದರೂ ಕೆಲವು ಶತಮಾನಗಳ ನಂತರದಲ್ಲಿ ಸ್ವಲ್ಪಮಟ್ಟಿಗೆ ತಟಸ್ಥ ದಾರಿಯನ್ನು ಹಿಡಿಯಿತೆಂದರೂ ತಪ್ಪಾಗಲಾರದು. ದಾಸಪಂಥಕ್ಕೆ ಚೈತನ್ಯಪಂಥವನ್ನು ಹೋಲಿಸಿದರೆ, ಚೈತನ್ಯಪಂಥವು ತನ್ನ ಸಾಮಾಜಿಕ ಕಳಕಳಿಯಲ್ಲಿ ಮೊದಲು ಸ್ವಲ್ಪಮಟ್ಟಿಗೆ ಸುಮ್ಮನಿದ್ದು, ಮುಂದಿನ ಶತಮಾನಗಳಲ್ಲಿ ಸಾಮಾಜಿಕವಾಗಿ ಸಮಾಧಾನಕರವಾಗಿಯೇ ಸ್ಪಂದಿಸಿತು. ಈ ನೆಲೆಯಲ್ಲಿ ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂಘ(ಇಸ್ಕಾನ್)ದ ಸಾಮಾಜಿಕಕಲ್ಪನೆ ಗಮನಾರ್ಹವಾದುದು.

ಇಸ್ಕಾನ್ ಸಂಸ್ಥಾಪನಾಚಾರ್ಯರಾದ ಶ್ರೀಲ ಪ್ರಭುಪಾದರು, ಭೂಮಿ ಮತ್ತು ಹಸುವನ್ನು ಅಧರಿಸಿದ ಆರ್ಥಿಕತೆಯಿಂದ ಬಡತನವನ್ನು ನಿರ್ಮೂಲನ ಗೊಳಿಸಬಹುದೆಂಬ ಕಲ್ಪನೆಯನ್ನು ಕಟ್ಟಿಕೊಂಡದ್ದು ಮತ್ತು ಸಾವಯವ ಕೃಷಿಯನ್ನು ಹುಟ್ಟಿಬೆಳೆಸಿದ್ದು ಸಾಮಾಜಿಕವಾದ ಕಳಕಳಿಯಿಂದ ಎನ್ನುವಂತಹುದು ಸುಸ್ಪಷ್ಟ.

ಸ್ವಾಮಿ ಪ್ರಭುಪಾದರು ವೈದಿಕ ಕಾಲದ ಸಾಂಪ್ರದಾಯಿಕ ವ್ಯವಸ್ಥೆಯನ್ನು ಇಂದಿನ ವೈಜ್ಞಾನಿಕ ಯುಗದಲ್ಲಿ ಮತ್ತೆ ಪ್ರತಿಷ್ಠಾಪಿಸಲು ಮುಂದಾಗಿದ್ದಾರೆ. ಇದರಿಂದ ಸಮಾಜದಲ್ಲಿ ಆಧ್ಯಾತ್ಮಿಕ ಹಾಗೂ ಲೌಕಿಕ ಬೆಳವಣಿಗೆಗಳೆರಡನ್ನೂ ಕಂಡುಕೊಳ್ಳಬಹುದೆಂಬುದು ಅವರ ನಿಲುವು. ಪ್ರಸ್ತುತ ಅತ್ಯಂತ ಕಡಿಮೆ ಅವಧಿಯಲ್ಲಿ ಕಡಿಮೆ ಜಾಗದಲ್ಲಿ ರಾಸಾಯನಿಕಗಳನ್ನು ಬಳಸಿ ಬೆಳೆಯನ್ನು ತೆಗೆಯುವ ಪರಿಪಾಠವನ್ನು ಅವರು ಅಲ್ಲಗಳೆಯುತ್ತಾರೆ. ರಸಾಯನಿಕ ಪದ್ದತಿಯ ಅಂಧಾನುಕರಣೆಯಿಂದ ಕೃಷಿಯ ಮೂಲಕವಾಗಿ ಮನುಕುಲಕ್ಕಾಗುವ ದುರಂತವನ್ನು ಸಾಬೀತುಪಡಿಸುತ್ತಾರೆ. ಈ ವೈಜ್ಞಾನಿಕತೆಯಿಂದ ಭೂಮಿಯು ಸಹಜವಾದ ಫಲವತ್ತತೆಯನ್ನು ಕಳೆದುಕೂಂಡು ಬರಡಾಗುವುದರೊಂದಿಗೆ, ಬೆಳೆದ ಪದಾರ್ಥಗಳಲ್ಲಿ ಪೌಷ್ಟಿಕಾಂಶವು ನಾಶವಾಗುತ್ತದೆಂಬ ಅಳಲು ಅವರದ್ದು. ಹಾಗಾಗಿ ರಾಸಾಯನಿಕ ಯುಕ್ತ ಪದಾರ್ಥಗಳನ್ನು ಸೇವಿಸಿದ ಮಾನವನು ನಿರೋಧಕ ಶಕ್ತಿಯನ್ನು ಕಳೆದುಕೊಂಡು ರೋಗಪೀಡಿತನಾಗುತ್ತಿದ್ದಾನೆಂದು ಇಸ್ಕಾನ್ ಸಂಸ್ಥೆಯ ಬೆಂಗಳೂರು ಶಾಖೆಯು ಹೇಳಲು ಮುಂದಾಗುತ್ತದೆ. ಅದಕ್ಕಾಗಿಯೇ, ಮಂಡ್ಯಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಮಹದೇವಪುರದಲ್ಲಿ ಸಾವಯವಕೃಷಿ ಭೂಮಿಯನ್ನು ಅಭಿವೃದ್ಧಿಪಡಿಸಿ, ಮಾದರಿ ಕೃಷಿ ಭೂಮಿಯನ್ನಾಗಿ ಮಾಡಲಾಗಿದೆ.[೪೯] ಇಲ್ಲಿಯ ಸ್ವಾವಲಂಬನೆಯ ಸಾವಯವಕೃಷಿಯು ಸಮಾಜಮುಖಿಯಾಗಿದೆ. ಅಲ್ಲದೆ ಆಧ್ಯಾತ್ಮಿಕ ಕೃಷಿಗಾರಿಕೆಯನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಈ ಸಂಸ್ಥೆಯು ಕಾರ್ಯೋನ್ಮುಖವಾಗಿದೆ. ಇದು ಮಾನವ ಜೀವನಮಟ್ಟದಲ್ಲಿ ಶಾಂತಿ ಸ್ಥಾಪನೆಯನ್ನೂ, ಹಿಂಸೆ ಮತ್ತು ಬಡತನಗಳಿಂದ ಬಿಡುಗಡೆಯನ್ನೂ ಕಂಡುಕೊಳ್ಳುವ ಪ್ರಯತ್ನ. ಮುಖ್ಯವಾಗಿ ಈ ಸಾವಯವಕೃಷಿ ಪದ್ಧತಿಯಿಂದ ಪ್ರಕೃತಿಗೆ ಹಾನಿಯಾಗದಂತೆ ಸುರಕ್ಷಿತ, ಆರೋಗ್ಯಕರ ಬೆಳೆಗಳನ್ನು ಬೆಳೆಸುವ ಕಲ್ಪನೆಯಿಲ್ಲಿದೆ. ಇದು ಕೃತಕ ರಾಸಾಯನಿಕ ಗೊಬ್ಬರದ ಬಳಕೆಯಿಂದ ಮುಕ್ತವಾಗಿದೆ. ಇಲ್ಲಿಯ ಮಿಶ್ರಬೆಳೆ ಪದ್ಧತಿಯಿಂದಾಗಿ ಭೂಮಿಯ ಫಲವತ್ತತೆಯನ್ನೂ ಕಾಯ್ದುಕೊಂಡು, ಆರೋಗ್ಯಕರ ಆಹಾರವನ್ನು ಬೆಳೆಸಿ, ಸಾಮಾಜಿಕ ಕಳಕಳಿಯನ್ನು ತೋರಿಸಲು ಮುಂದಾಗುತ್ತದೆ.

ಈ ರೀತಿಯ ಸಾವಯವ ಕೃಷಿಯಲ್ಲಿ ಇಸ್ಕಾನ್ ಸಂಸ್ಥೆಯು ಅಧ್ಯಾತ್ಮವನ್ನು ಪ್ರಕಟಿಸುತ್ತದೆ. ಅಹಿಂಸೆ, ಮುಕ್ತ ಜಲ ಹಾಗೂ ಗಾಳಿ ಸೇವನೆ, ಸ್ವಚ್ಛವಾದ ಬದುಕು ಮೊದಲಾದ ಮೂಲಭೂತ ವಿಚಾರಗಳಿಗೆ ಇಲ್ಲಿ ಹೊಸ ವ್ಯಾಖ್ಯಾನವಿದೆ. ಜೈವಿಕ ಸಮತೋಲವನ್ನು ಕಾಯ್ದುಕೊಂಡು ನೈಸರ್ಗಿಕವಾಗಿ ಕೀಟಗಳ, ಪ್ರಾಣಿಪಕ್ಷಿಗಳ ಸಹಬಾಳ್ವೆ, ಕೃತಕ ರಾಸಾಯನಿಕ ಬಳಕೆಯನ್ನು ಮಾಡದೆ ಇರುವುದರಿಂದ ಕಲುಷಿತ ಆಹಾರವನ್ನು ತಪ್ಪಿಸುವುದು, ಗಾಳಿಯ ಮೂಲಕ ಕೀಟನಿರೋಧಕಗಳನ್ನು ಬಳಸದೆ ಶುದ್ಧಗಾಳಿಯನ್ನು ಉಳಿಸಿಕೊಳ್ಳುವುದು, ಇವುಗಳೇ ಸಾವಯವ ಕೃಷಿಯ ಹಿಂದಿರುವ ತಾತ್ವಿಕತೆ.

ಇಕೋ ಅಗ್ರಿ ಪ್ರತಿಷ್ಠಾನ

ಸಾವಯವ ಆಹಾರೋತ್ಪನ್ನಗಳ ಕುರಿತಾಗಿ ಸಮಾಜದ ಮುಖಕ್ಕೆ ಅರಿವು ಮೂಡಿಸಲು ಇಸ್ಕಾನ್ ಸಂಸ್ಥೆಯು ಪ್ರತಿಷ್ಠಾಪಿಸಿದ ಪ್ರತಿಷ್ಠಾನವೆಂದರೆ ಇಕೋ ಅಗ್ರಿ ಪ್ರತಿಷ್ಠಾನ. ಇದು ಸಾವಯವ ಆಹಾರೋತ್ಪನ್ನಗಳ ಬಳಕೆಯಿಂದಾಗುವ ಪ್ರಯೋಜನ, ನೈಸರ್ಗಿಕ ಪರಿಶುದ್ಧ ಸ್ವಾದ, ಮಾನವನ ರಕ್ತವನ್ನು ಕಲುಷಿತಗೊಳಿಸಿ ಮಾರಕರೋಗಗಳಿಗೆ ದಾರಿ ಮಾಡಿಕೊಡುವ ರಾಸಾಯನಿಕ ಗೊಬ್ಬರ ವಿಚಾರ, ಮೊದಲಾದ ವಿಚಾರಗಳಲ್ಲಿ ಸಮಾಜಕ್ಕೆ ಮಾರ್ಗದರ್ಶನವನ್ನು ನೀಡುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಈ ಪ್ರತಿಷ್ಠಾನವು ಜನರಲ್ಲಿ ಸುರಕ್ಷಿತ ಹಾಗೂ ಸ್ವಾವಲಂಬಿ ಜೀವನಪದ್ಧತಿ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಕಾರ್ಯನಿರ್ವಹಿಸುತ್ತಿದೆ.[೫೦] ವಿಶೇಷವಾಗಿ, ಇಕೋ ಆಗ್ರಿ ಪ್ರತಿಷ್ಠಾನವು ಗೋಧಿ, ಧಾನ್ಯಗಳು, ಮಸಾಲೆ ಪದಾರ್ಥಗಳು, ಹಣ್ಣುಗಳು, ಇನ್ನೊ ಮುಂತಾದ ಸಾವಯವ ಉತ್ಪನ್ನಗಳನ್ನು ನಿಮ್ಮ ಮನೆ ಬಾಗಿಲಿಗೆ ತಲುಪಿಸಲು ಪ್ರಯತ್ನಿಸುತ್ತಿದೆ. ಒಟ್ಟಿನಲ್ಲಿ ಕೃಷಿ ಪರಂಪರೆಯಲ್ಲಿ ಜಾಗೃತಿಯನ್ನು ಮೂಡಿಸುವ ಪ್ರಯತ್ನ ಇಲ್ಲಿ ಕಾಣುತ್ತದೆ.

******

ಒಟ್ಟಿನಲ್ಲಿ ಭಾರತೀಯ ಭಕ್ತಿಪರಂಪರೆಯಲ್ಲಿ ಕನಾಟಕದ ದಾಸಪಂಥವು ಬೀರಿದ ಪ್ರಭಾವದಷ್ಟೇ ಬಂಗಾಳದ ಚೈತನ್ಯಪಂಥವು ತನ್ನ ಪ್ರಭಾವವನ್ನು ಬೀರಿತು. ಇತರ ಪಂಥಗಳಂತೆಯೇ ಈ ಪಂಥವೂ ಕೂಡ ತನ್ನ ಮೊದಲ ದಿನಗಳಲ್ಲಿ ಅಸಮಾನತೆಯ ಸಾಮಾಜಿಕ ಸ್ಥಿತಿಗತಿಗಳನ್ನು ಎದುರಿಸಬೇಕಾಯಿತು. ಅಂದು ಬಂಗಾಳದಲ್ಲಿ ಸಂನ್ಯಾಸಿಗಳು ಶೂದ್ರರ ಮನೆಯಲ್ಲಿ ತಂಗುವ ಹಾಗಿರಲಿಲ್ಲ. ಆದರೆ ಚೈತನ್ಯ ಪ್ರಭುಗಳು ಚಂದ್ರಶೇಖರನೆಂಬ ಶೂದ್ರನ ಮನೆಯಲ್ಲಿ ತಂಗುತ್ತಾರೆ. ಐನೂರು ವರ್ಷಗಳ ಹಿಂದೆ ಬಂಗಾಳದಲ್ಲಿ ಬ್ರಾಹ್ಮಣ ದಂಪತಿಗೆ ಹುಟ್ಟಿದವನನ್ನು ಮಾತ್ರ ಬ್ರಾಹ್ಮಣನೆಂದು ಒಪ್ಪಿಕೊಳ್ಳಲಾಗುತ್ತಿತ್ತು. ಅಂದರೆ ಇತರ ಯಾವುದೇ ಜಾತಿಯಲ್ಲಿ ಹುಟ್ಟಿದವರು ಅಬ್ರಾಹ್ಮಣರಾಗುತ್ತಿದ್ದರು. ಇಲ್ಲಿಯ ಚಂದ್ರಶೇಖರನೆಂಬ ಗುಮಾಸ್ತನು 'ಕಾಯಸ್ಥ'ವೆನ್ನುವಂತಹ ಜಾತಿಯಲ್ಲಿ ಹುಟ್ಟಿದ್ದರೂ ಆತ ಶೂದ್ರನೆನ್ನುವಂತಹ ಹೆಸರಿಗೆ ಒಳಗಾಗಿದ್ದನು. ಆ ಕಾಲದಲ್ಲಿ ಅಲ್ಲಿಯ ವೈಶ್ಯರು, ಸುವರ್ಣವಣಿಕರು, ವೈದ್ಯರುಗಳೆಲ್ಲರು ಶೂದ್ರರೆಂದೇ ಪರಿಗಣಿಸಲಾಗಿತ್ತು. ಆದರೆ ಈ ನೆಲೆಯಲ್ಲಿ ಬ್ರಾಹ್ಮಣನೆಂಬ ಶಬ್ದಕ್ಕೆ ಹೊಸ ವ್ಯಾಖ್ಯಾನವನ್ನು ನೀಡಿದವರು ಚೈತನ್ಯರೆಂದುಕೊಳ್ಳಬೇಕು. ಅವರ ಪ್ರಕಾರ ಬ್ರಾಹ್ಮಣ್ಯವು ಹುಟ್ಟಿನಿಂದಲ್ಲ. ಅದು ಪಾಲನೆಯಿಂದ ಎನ್ನುವುದು ಚೈತನ್ಯರ ನಿಲುವು. ಹಾಗಾಗಿ ಅವರು ಬಂಗಾಳದಲ್ಲಿ ಅಂದಿನ ಕೃತಕ ನೀತಿಗಳನ್ನು ಒಪ್ಪದೆ ಹೋದದ್ದು ದೊಡ್ಡ ಸುಧಾರಣೆ ಎಂದೇ ಭಾವಿಸಬೇಕು. ಅಲ್ಲದೆ, ವೈಶ್ಯರು, ಸುವರ್ಣವಣಿಕರು ಹಾಗೂ ವೈದ್ಯರೆಲ್ಲರೂ ಯಜ್ಞೋಪವೀತ ಧಾರಣೆಗೆ ಒಳಗಾದುದು ಆ ಕಾಲದ ಕ್ರಾಂತಿಯುಕ್ತ ಬದಲಾವಣೆಯೆನ್ನಬೇಕು.

ಮುಖ್ಯವಾಗಿ, ಭಾರತೀಯ ಭಕ್ತಿಪಂಥಗಳಿಂದ ಚೈತನ್ಯಪಂಥವು ಭಿನ್ನತೆಯನ್ನು ಸಾಧಿಸುವುದೇ ಹೊಸದಾದ ಚಿಂತನೆಗಳಲ್ಲಿ. ಕಾಲಘಟ್ಟದಲ್ಲಿ ಬಂದ ಇತರ ಸಂತರುಗಳು ಪಂಥದ ತಾತ್ವಿಕ ವಿಚಾರಧಾರೆಯನ್ನು

ಎತ್ತಿಹಿಡಿದು ಆ ಪಂಥವನ್ನು ಮುನ್ನಡೆಸಿದರು. ಅಧ್ಯಯನ ಯೋಗ್ಯವಾದ ಸಾಹಿತ್ಯವನ್ನು ರಚಿಸಿದರು. ವಿಶೇಷವೆಂದರೆ, ಚೈತನ್ಯಪಂಥದ ಕುರಿತಾದ ಸಾಹಿತ್ಯ ರಚನೆಗಳು ಬಂಗಾಳೀ, ಸಂಸ್ಕೃತ, ಕನ್ನಡ ಹಾಗೂ ಆಂಗ್ಲಭಾಷೆಗಳಲ್ಲಿ ಹೇರಳವಾಗಿ ಬಂದಿದ್ದುದು ಆ ಪಂಥಾವಲಂಬನೆಯ ವಿಸ್ತಾರವನ್ನು ತೋರಿಸುತ್ತದೆ.

ಚೈತನ್ಯರನ್ನು ಸಾಕ್ಷಾತ್ ಶ್ರೀಕೃಷ್ಣನೆಂದು ನಂಬಿದ ಇಲ್ಲಿಯ ಪಂಥಾನುಯಾಯಿಗಳ ಬದ್ಧತೆಯು ಮೆಚ್ಚಬೇಕಾದುದು. ಅವರ ಜೀವನದಲ್ಲಿ ಐಹಿಕ ದೇಹದ ಹಸಿವಿನ ಕಲ್ಪನೆಯು ಅವರನ್ನು ಬಾಧಿಸುವುದಿಲ್ಲ. ಅಲ್ಲಿಯ ಅನುಯಾಯಿಗಳೆಲ್ಲ ದೇವೋತ್ತಮ ಪರಮಪುರುಷರಾದ ಚೈತನ್ಯರನ್ನೇ ಅವಲಂಬಿಸಿಕೊಂಡರು. ಅಲ್ಲಿಯ ವೈರಾಗಿಗಳಿಗೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮತ್ತು ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸವು ಅವರಿಗೆ ಮುಖ್ಯವಲ್ಲವಾಗುತ್ತದೆ. ಆದರೂ ಅಲ್ಲಿಯ ಅನುಭಾವಿಗಳು ಸಂನ್ಯಾಸವನ್ನು ಸ್ವೀಕರಿಸಿಕೊಂಡರು. ಹರಿನಾಮ ಸಂಕೀರ್ತನೆಯ ಆಂದೋಲನವನ್ನೇ ಉಸಿರನ್ನಾಗಿಸಿಕೊಂಡರು.

ಇಲ್ಲಿಯ ಅಧ್ಯಯನದಲ್ಲಿ, ಮಾಯಾವಾದಿಗಳು ದೇವೋತ್ತಮ ಪರಮಪುರುಷನಾದ ಕೃಷ್ಣನ ದೇಹವು ಮಾಯೆಯಿಂದ ನಿರ್ಮಿತವಾಗಿದೆ ಎನ್ನುವುದು ಮತ್ತು ಅವನನ್ನು ಸಮೀಪಿಸಲು ಬಳಸುವ ಭಕ್ತಿಸೇವೆಯು ಮಾಯೆಯೆಂದೇ ಪರಿಗಣಸುವುದು ಪ್ರತ್ಯೇಕವಾದ ಅಧ್ಯಯನಕ್ಕೆ ಯೋಗ್ಯವಾದ ವಿಚಾರವಾಗುತ್ತದೆ. ಮಾಯೆಯು ಐಹಿಕ ಅಸ್ತಿತ್ವವನ್ನು ಕುರಿತದ್ದು. ಅದು ಕಾಮ್ಯಕರ್ಮಗಳ ಪ್ರತಿಕ್ರಿಯೆಗಳ ಫಲ. ಭಕ್ತಿಸೇವೆಯು ಕೂಡ ಅಂತಹ ಕಾಮ್ಯಕರ್ಮಗಳಲ್ಲಿ ಒಂದು ಎಂಬುದು ಮಾಯಾವಾದಿಗಳ ಇಂಗಿತ. ಅಲ್ಲದೆ ಭಕ್ತಿಸೇವೆಯ ಕುರಿತು ಜಿಜ್ಞಾಸೆಯನ್ನು ಮಾಡುವವರನ್ನು ಕುತರ್ಕಿಗಳೆಂದೂ, ಭಕ್ತಿಸೇವೆಯ ಕಾಮ್ಯಕರ್ಮಿಗಳನ್ನು ಕರ್ಮನಿಷ್ಠರೆಂದೂ ಟೀಕಿಸಲು ಮುಂದಾಗುವುದು ಅಧ್ಯಯನದ ವಿಸ್ತಾರವನ್ನು ಇನ್ನಷ್ಟು ಹೆಚ್ಚಿಸುತ್ತದೆ.

ಶ್ರೀಚೈತನ್ಯರು ಅದ್ವೈತಿಗಳೇ ಎನ್ನುವ ಪ್ರಶ್ನೆ ಇಂದಿಗೂ ಕೂಡ ವಿಚಾರವಂತರನ್ನು ಕಾಡುವಂತಹುದು. ಆದರೂ ಇತರ ಪಂಥಗಳಿಂದ ಈ ಪಂಥವು 'ಶರಣಾಗತಿ ಮತ್ತು ಭಕ್ತಿಸೇವೆ'ಯ ವಿಚಾರದಲ್ಲಿ ವಿಶೇಷತೆಯನ್ನು ಮೂಡಿಸಿದೆ. 'ನಿರಾಕಾರದ ಖಂಡನೆ ಮತ್ತು ಸ್ವರೂಪಾಕಾರದ ಮಂಡನೆ' ಎಂಬ ವಿಚಾರದಲ್ಲಿ ಇತರ ವೈಷ್ಣವ ಪಂಥಗಳ ಪ್ರಭಾವವಿದೆಯೆಂದೇ ಭಾವಿಸಬೇಕು. ಅಂತೆಯೇ 'ದೇವೋತ್ತಮ ಪರಮಪುರುಷ ಪರಿಕಲ್ಪನೆ'ಯೂ 'ಕೃಷ್ಣಂ ವಂದೇ ಜಗದ್ಗುರುಂ' ಹೇಳಿಕೆಯನ್ನು ಆಧರಿಸಿದ್ದುದೇ ಆಗಿದೆ. ಮುಖ್ಯವಾಗಿ ಚೈತನ್ಯಪಂಥದ ಹುಟ್ಟು, ಬೆಳವಣಿಗೆ, ತತ್ತ್ವನಿರ್ಣಯ ಮತ್ತು ವರ್ತಮಾನದಲ್ಲಿ ಅದು ಕಂಡುಕೊಂಡ ಸಾಮಾಜಿಕ ಸ್ಪಂದನಗಳೆಲ್ಲವೂ ಭಾರತೀಯ ಭಕ್ತಿಚರಿತ್ರೆಗಳಲ್ಲೊಂದು ಹೊಸ ಹೆಜ್ಜೆಯೆಂದು ಭಾವಿಸಿಕೊಳ್ಳಬೇಕಾಗುತ್ತದೆ.

****

ಅಧ್ಯಾಯ ೪ ರ ಅಡಿಟಿಪ್ಪಣಿಗಳು

೧. ಶ್ರೀ ಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೦೧, ಪುಟ ಸಂ–೧೩.

೨. ಶ್ರೀ ಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೧೧, ಪುಟ ಸಂ–೨೩೬/೨೩೭.

೩. ಶ್ರೀ ಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೧೩, ಪುಟ ಸಂ–೩೬೫.

೪. ಶ್ರೀ ಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೧೩, ಪು ಸಂ–೩೨೦.

ಚೈತನ್ಯರಿಗೆ ವಿದ್ಯಾಪತಿ, ಜಯದೇವ ಹಾಗೂ ಚಂಡೀದಾಸ ಕವಿಗಳ ಗ್ರಂಥಗಳು ಪ್ರಭಾವ ಬೀರಿದ್ದವು. ವಿದ್ಯಾಪತಿಯು ಕವಿ ಮಾತ್ರ ಆಗಿರದೆ ಹಾಡುಗಾರನೂ ಆಗಿದ್ದ. ರಾಧಾಕೃಷ್ಣರ ಪ್ರೇಮಲೀಲೆಗಳ ಕುರಿತಂತೆ ಗೀತಗಳನ್ನು ರಚಿಸಿ ಹಾಡುತ್ತಿದ್ದ. ಮಿಥಿಲಾದ ನಿವಾಸಿಯಾದ ಇವನು ಬ್ರಾಹ್ಮಣನಾಗಿದ್ದನು. ಚೈತನ್ಯರ ಅವತಾರದಿಂದ ಸುಮಾರು ನೂರು ವರುಷ ಮೊದಲು ಇವನಿದ್ದನೆಂದು ಚೈತನ್ಯ ಚರಿತಾಮೃತವು ಹೇಳುತ್ತದೆ. ಜಯದೇವನು ಇದ್ದದ್ದು ಬಂಗಾಳದ ದೊರೆ ಲಕ್ಷ್ಮಣಸೇನನ ಕಾಲದಲ್ಲಿ. ಅವನ ತಂದೆ ಭೋಜದೇವ. ತಾಯಿ ವಾಮದೇವಿ. ಜಯದೇವನ ಜನ್ಮಸ್ಥಳ ಕೆಂದುಬಿಲ್ವ. ಈತನು ತನ್ನ ಕೊನೆಯ ದಿನಗಳನ್ನು ಜಗನ್ನಾಥ ಪುರಿಯಲ್ಲಿ ಕಳೆದನು. ಈತನ ಗೀತಗೋವಿಂದವು ಚೈತನ್ಯರನ್ನು ಹೆಚ್ಚಾಗಿ ಆಕರ್ಷಿಸಿತ್ತು. ಚಂಡೀದಾಸನೂ ಕೂಡ ಕೃಷ್ಣಪ್ರೇಮದ ವಿರಹಭಾವದ ಕೃತಿಗಳನ್ನು ರಚಿಸಿದನು. ಈತನ ರಚನೆಗಳು ಚೈತನ್ಯರನ್ನು ಭಾವ ಪರವಶತೆಯಲ್ಲಿ ಮುಳುಗಿಸಿತು.

೫. ಶ್ರೀ ಚೈತನ್ಯ ಚರಿತಾಮೃತ, ಅಂತ್ಯಲೀಲಾ, ಅಧ್ಯಾಯ ೯, ಶ್ಲೋಕ ೮೯, ಪುಟ ಸಂ–೩೫.

೬. ಶ್ರೀ ಚೈತನ್ಯ ಚರಿತಾಮೃತ, ಅಂತ್ಯಲೀಲಾ, ಅಧ್ಯಾಯ ೯, ಶ್ಲೋಕ ೧೧೯, ಪುಟ ಸಂ–೪೫.

೭. ಶ್ರೀಮದ್ಭಾಗವತ ಮಹಾಪುರಾಣಮ್ (೧೧–೫–೩೨) ಪುಟ ಸಂ–೬೨೪.

೮. ಶ್ರೀ ಚೈತನ್ಯ ಚರಿತಾಮೃತ, ಅಂತ್ಯಲೀಲಾ, ಅಧ್ಯಾಯ ೯, ಶ್ಲೋಕ ೧೧೯, ಪುಟ ಸಂ–೪೫.

೯. ಶ್ರೀ ಚೈತನ್ಯ ಚರಿತಾಮೃತ, ಅಂತ್ಯಲೀಲಾ, ಅಧ್ಯಾಯ ೩, ಶ್ಲೋಕ ೩೪, ಪುಟ ಸಂ–೧೨೨.

೧೦. ಶ್ರೀ ಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೦೭, ಪುಟ ಸಂ–೫೬೯.

೧೧. ಭಕ್ತಿವೇದಾಂತ ದರ್ಶನ, ಸಂಪುಟ ೫, ಸಂಚಿಕೆ ೯, ನವರಿ–೨೦೦೮, ಪುಟ ಸಂ–೮,

೧೨. ವೇದಾಂತ ದರ್ಶನ, ಪುಟ ಸಂ–೩

೧೩. ಭಕ್ತಿವೇದಾಂತ ದರ್ಶನ, ಸಂಪುಟ ೪, ಸಂಚಿಕೆ ೧, ಮಾರ್ಚ್–೨೦೦೩, ಪುಟ ಸಂ–೧೨,

೧೪. ಭಕ್ತಿವೇದಾಂತ ದರ್ಶನ, ಸಂಪುಟ ೫, ಸಂಚಿಕೆ ೫, ಜೂನ್–೨೦೦೭, ಪುಟ ಸಂ–೯,

೧೫. ವೇದಾಂತ ದರ್ಶನ, ಪುಟ ಸಂ–೩೨.

೧೬. ಭಕ್ತಿವೇದಾಂತ ದರ್ಶನ, ಸಂಪುಟ ೫, ಸಂಚಿಕೆ ೧೧, ಮಾರ್ಚ್–೨೦೦೮, ಪುಟ ಸಂ–೮,

೧೭. ಶ್ರೀ ಚೈತನ್ಯ ಚರಿತಾಮೃತ–ಅಂತ್ಯಲಿಲಾ, ಅಧ್ಯಾಯ ೧೩, ಶ್ಲೋಕ ೧೦೧, ಪುಟ ಸಂ–೨೫೬.

೧೮. ಅಥರ್ವವೇದ, ಪುಟ ಸಂ–೧೧೮.

೧೯. ನವಯುಗದ ಆಚಾರ್ಯ ಪ್ರಭುಪಾದ ಪುಟ ಸಂ–೩೨೦.

೨೦. ಪ್ರಭುಪಾದ–ನವಯುಗದ ಆಚಾರ್ಯ, ಪುಟ ಸಂ–೨೦೫.

೨೧. ಈ ಕೀರ್ತನೆಯು ಸಂತ ಭದ್ರಗಿರಿ ಅಚ್ಯುತದಾಸರಿಂದ ಲಭ್ಯವಾದುದು. ಇದು ಕೇರವಾತಾಳ ಹಾಗೂ ಧಾನಿ ಎಂಬ ರಾಗದಿಂದ ರಚನೆಯಾಗಿದೆಯೆಂಬುದು ಅವರ ಅಭಿಪ್ರಾಯ.

೨೨. ಭಕ್ತಿವೇದಾಂತ ದರ್ಶನ, ಸಂಪುಟ ೫, ಸಂಚಿಕೆ ೭, ನವೆಂಬರ್, ಪುಟ ಸಂ–೦೫.

ನಾಡಿಗರ ಕನ್ನಡ ಶಿಕ್ಷಾಷ್ಟಕಾನುವಾದ–

ಚೈತನ್ಯ ಕನ್ನಡಿಯ ಶುದ್ಧಗೊಳಿಸುವ ಪ್ರಭುವೆ ಭವದ ದಾವಾಗ್ನಿಯನು ಕ್ಷೀಣಿಸುವನೆ ।
ಆನಂದ ಜಲಧಿಯನು ವರ್ಧಿಸುವ ಸ್ವಾಮಿಯೇ ನಿನ್ನ ಸ್ಮರಣೆಯು ನೈಜಸುಖದ ಹಾದಿ ‖ ೧‖
ನಿನ್ನ ಪ್ರತಿ ಹೆಸರಲ್ಲೂ ನಿನ್ನಷ್ಟೇ ಶಕಿಯಿದೆ ಯಾವ ಹೆಸರಿಂದಲೂ ಸ್ಮರಿಸಬಹುದು ।
ಆದರೂ ನನ್ನ ಮನ ನಿನ್ನ ನೆನೆಯದು ದೇವಾ ನನಗೇಕೆ ಬಡಿಯಿತು ಇಂಥ ದುರ್ದೈವ ‖ ೨ ‖
ಹರಿಯ ಕಡೆಗೇ ಮನಸು ಹರಿಯುತ್ತಲಿರಬೇಕು ಚಿತ್ತ ಅತ್ತಿಂದತ್ತ ಕದಲದಿರ ಬೇಕು ।
ಹುಲ್ಲುಗಿಂತಲು ನಾನು ಕಡಿಮೆ ಅನ್ನಿಸ ಬೇಕು ನಿನ್ನ ನಾಮಾಮೃತವೆ ಮನ ತುಂಬಬೇಕು ‖ ೩‖
ಹೆಣ್ಣು ಹೊನ್ನಿನ ಆಸೆ ನನಗಿಲ್ಲ ದೊರೆಯೇ, ಅನುಯಾಯಿಗಳ ಹಿಂಡು ಬೇಕಲ್ಲ ಹರಿಯೇ ।
ನಿಷ್ಕಾಮ ಪ್ರೀತಿ ನೆಲೆಸಲೇ ಬೇಕು ನಿನ್ನಲ್ಲಿ, ಯಾವುದಾದರೂ ಜನುಮದಲ್ಲಿ ‖ ೪ ‖
ನಂದ ಕುಮಾರನೇ ಕೇಳು ನಿನ್ನ ಕಿಂಕರ ನಾನು ವಿಷಮ ಭವಾಂಬುಧಿಯ ಪತಿತ ನಾನು ।
ದಯ ಮಾಡಿ ನಿನ್ನ ಕೃಪೆ ನನ್ನಲ್ಲಿ ಹರಿಸು, ನಿನ್ನ ಚರಣದ ಧೂಳಕಣವಾಗಿ ಇರಿಸು ‖ ೫ ‖
ನಿನ್ನ ಹೆಸರೆತ್ತಿದರೆ ನನ್ನ ನಯನಗಳಿಂದ ಗಳಗಳನೆ ಕಂಬನಿಯು ಹರಿವುದೆಂದು ।
ನಿನ್ನ ನಾಮವ ಸ್ಮರಿಸಿ ಕಂಠ ಗದ್ಗದಿತನಾಗಿ ರೋಮಾಂಚನದ ಸುಖವು ದೊರೆವುದೆಂದು ‖ ೬ ‖
ನಿನ್ನ ಅಗಲಿಕೆಯಿಂದ ಓ ನನ್ನ ಗೋವಿಂದ ಕ್ಷಣವೊಂದು ಯುಗವಾಗಿ ಕಾಣುತಿದೆ ನನಗೆ ।
ನಿನ್ನ ವಿರಹದಿ ಬೆಂದು ನೊಂದಿರುವೆ ಕೃಷ್ಣನೇ ಜಗವೆಲ್ಲ ಶೂನ್ಯವೆಂದೆನಿಸುತಿದೆ ನನಗೆ ‖ ೭ ‖
ಅಪ್ಪುವೆನು ನಾನಿನ್ನ ಚರಣಕಮಲಗಳನ್ನು ನೀನೊದ್ದರೂ ಸರಿಯೆ ನೂಕಿದರೂ ಸರಿಯೇ ।
ನನಗೆ ದರ್ಶನ ಕೊಡದೆ ಇರಬೇಡ ದೊರೆಯೇ, ಪ್ರಾಣನಾಥನು ನೀನೆ ಅನ್ಯರೆನಗಿಲ್ಲ ‖ ೮ ‖

೨೩. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ :೧, ಶ್ಲೋಕ– ೧೦೨, ಪುಟ–೫೮.

೨೪. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ :೧, ಶ್ಲೋಕ– ೧೦೫, ಪುಟ–೫೯.

೨೫. ಭಕ್ತಿಭಾರತೀ, ಪುಟ ಸಂ: ೨೪.

ಈ ಕಾಲನಿರ್ಣಯದ ಕುರಿತಾಗಿ ವಿದ್ವಾಂಸರ ನಿಲುವಿನಲ್ಲಿ ಭೇದವಿದೆ. ಚೈತನ್ಯರು ಉಡುಪಿಗೆ ಬಂದಿದ್ದರೆಂದು,ವಾದಿರಾಜ ಹಾಗೂ ವ್ಯಾಸ ತೀರ್ಥರ ಜೊತೆ ಸಂಪರ್ಕವಿತ್ತೆಂದೂ ಕೆಲವು ಕೃತಿಗಳು ಸಾದರಪಡಿಸುತ್ತವೆ.

೨೬. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ :೧, ಶ್ಲೋಕ– ೧೧೪, ಪುಟ–೬೩.

೨೭. ಭಕ್ತಿವೇದಾಂತ ದರ್ಶನ, ಹರೇಕೃಷ್ಣ ಆಂದೋಲನದ ಮಾಸ ಪತ್ರಿಕೆ, ಏಪ್ರಿಲ್–೨೦೦೫. ಪುಟ :೨೪.

೨೮. ವೇದಾಂತ ದರ್ಶನ, ಕನ್ನಡಾನುವಾದ, ಎಂ. ಕೆ. ಗೋಪಿನಾಥ್, ನಾಂದಿ, ಪುಟ ಸಂ–೨೨.

ಈ ವಿಚಾರಕ್ಕೆ ಸಂಬಂಧಿಸಿದಂತೆ ಮುಂಬಯಿ ರಾಜ್ಯ ಸರ್ಕಾರದ ಸೇವೆಯಲ್ಲಿದ್ದ ಸತ್ಯೇಂದ್ರನಾಥ ಠಾಗೋರ್ ಅವರು ತುಕಾರಾಮನ ಅಭಂಗಗಳನ್ನು ಸಂಕಲಿಸಿ ಪ್ರಕಟಿಸಿದ್ದಾರೆ. ಅಲ್ಲದೆ ಕೃಷ್ಣದಾಸ ಕವಿರಾಜ ಗೋಸ್ವಾಮಿಗಳ ಶ್ರೀ ಚೈತನ್ಯ ಚರಿತಾಮೃತ (ಮಧ್ಯಲೀಲಾ, ಅಧ್ಯಾಯ ೯, ಪು.೪೦) ವು ಈ ಕುರಿತು ಉಲ್ಲೇಖಿಸುತ್ತದೆ.

೨೯. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೬, ಪುಟ–೪೯೧.

೩೦. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಶ್ಲೋಕ ೭೨, ಪುಟ_೪೮೯.

೩೧. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೬, ಶ್ಲೋಕ ೭೬, ಪುಟ ಸಂಖ್ಯೆ–೪೯೨.

೩೨. ಶ್ರೀಮದ್ಭಗವದ್ಗೀತಾ–ಯಥಾರೂಪ, ಅಧ್ಯಾಯ ೧೮, ಶ್ಲೋಕ ೫೪, ಪುಟ ಸಂ–೭೬೭.

೩೩. ಭಕ್ತಿವೇದಾಂತ ದರ್ಶನ, ಸಂಪುಟ ೫, ಸಂಚಿಕೆ ೧೧, ಮಾರ್ಚ್–೨೦೦೭, ಪುಟ ಸಂ–೧೧,

೩೪. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೧, ಶ್ಲೋಕ ೫೫, ಪುಟ–೩೪.

೩೫. ಶ್ರೀ ಚೈತನ್ಯ ಚರಿತಾಮೃತ, ಅಂತ್ಯಲೀಲಾ, ಅಧ್ಯಾಯ ೨, ಶ್ಲೋಕ ೩೧, ಪುಟ–೧೨೧.

೩೬. ಶ್ರೀ ಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೦೮, ಪುಟ–೪೧.

೩೭. ಶ್ರೀಮದ್ಭಾಗವತ ಮಹಾಪುರಾಣಂ, ೩. ೨೫. ೩೮. ಪುಟ ಸಂ–೩೧೦.

೩೮. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೨, ಶ್ಲೋಕ ೩, ಪುಟ–೧೪೦.

೩೯. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೨, ಶ್ಲೋಕ ೯, ಪುಟ–೧೪೩.

ಚಟಕ ಪರ್ವತ ದೇಖಿ ಗೋವರ್ಧನ ಭ್ರಮೇ
ದಾಖಾ ಚಲೇ ಆರ್ತನಾದ ಕರಿಯಾ ಕ್ರನ್ದನೇ ॥

೪೦. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೪, ಶ್ಲೋಕ ೧೧೩ ಪುಟ–೩೪೧.

೪೧. ಶ್ರೀ ಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೧೦, ಪುಟ–೧೭೨/೧೭೩.

೪೨. ಭಗವದ್ಗೀತಾ–ಯಥಾರೂಪ, ಅಧ್ಯಾಯ ೧೦, ಶ್ಲೋಕ ೮, ಪುಟ ಸಂ–೪೭೬.

೪೩. ಶ್ರೀಮದ್ಭಾಗವತ ಮಹಾಪುರಾಣಂ, ಅಧ್ಯಾಯ ೧. ೭. ೧೦. ಪುಟ ಸಂ–೭೧.

೪೪. ಭಗವದ್ಗೀತಾ–ಯಥಾರೂಪ, ಅಧ್ಯಾಯ ೪, ಶ್ಲೋಕ ೯, ಪುಟ ಸಂ–೨೧೩.

೪೫. ಶ್ರೀಮದ್ಭಾಗವತ ಮಹಾಪುರಾಣಂ, ೧. ೮. ೧೮. ಪುಟ ಸಂ–೭೮.

೪೬. ಶ್ರೀಮದ್ಭಾಗವತ ಮಹಾಪುರಾಣಂ, ೧. ೮. ೩೦. ಪುಟ ಸಂ–೭೯.

೪೭. ನವಯುಗದ ಆಚಾರ್ಯ ಪ್ರಭುಪಾದ, ಪುಟ ಸಂ–೫೧.

೪೮. ಭಕ್ತಿವೇದಾಂತ ದರ್ಶನ, ಸಂಪುಟ ೭, ಸಂಚಿಕೆ ೧೦, ಫೆಬ್ರವರಿ, ಪುಟ ಸಂ–೩೯.

೪೯. ಭಕ್ತಿವೇದಾಂತ ದರ್ಶನ, ಸಂಪುಟ ೭, ಸಂಚಿಕೆ ೯, ಜನವರಿ, ಪುಟ ಸಂ–೩೯.

೫೦. ಭಕ್ತಿವೇದಾಂತ ದರ್ಶನ, ಸಂಪುಟ ೫, ಸಂಚಿಕೆ ೬, ಅಕ್ಟೋಬರ್–೨೦೦೭, ಪುಟ ಸಂ–೧೫,

****

ಅಧ್ಯಾಯ : ೫

ದಾಸಪಂಥ ಮತ್ತು ಚೈತನ್ಯಪಂಥಗಳ ಸಾದೃಶ್ಯ ಶೋಧ

ದಾಸಪಂಥವು ಭಕ್ತಿಪಂಥವಾಗಿ ಕರ್ನಾಟಕದಲ್ಲಿ ಪ್ರವಹಿಸಿದರೆ, ಚೈತನ್ಯಪಂಥವು ಬಂಗಾಳದಲ್ಲಿ ಹುಟ್ಟಿ ಶಾಖೋಪಶಾಖೆಗಳಾಗಿ ಹರಡಿ ಪ್ರಪಂಚದ ಬಹುಭಾಗಕ್ಕೆ ಭಕ್ತಿಜಲವನ್ನು ಪ್ರೋಕ್ಷಿಸಿತು. ಹಾಗೆಯೇ ಈ ಎರಡೂ ಪಂಥಗಳು ಭಕ್ತಸ್ತೋಮವನ್ನೂ ಸೃಷ್ಟಿಸಿತು. ಹೀಗೆ ನಡೆದು ಬಂದ ಈ ಎರಡೂ ಪಂಥಗಳ ಜನ್ಮಕ್ಷೇತ್ರಗಳು ಬೇರೆ ಬೇರೆಯಾಗಿದ್ದರೂ ಅವು ತಮ್ಮ ಭಕ್ತಿಸಿದ್ಧಾಂತದ ಪ್ರಕಟಣೆಯಲ್ಲಿ ಹಲವಷ್ಟು ವಿಚಾರಗಳನ್ನು ಸಮಾನವಾಗಿಯೇ ತೋರಿಸಿದವು. ಆದರೂ ಅವುಗಳ ಸಾಮ್ಯವನ್ನು ಆಧರಿಸಿ 'ವ್ಯಕ್ತಿನಿಷ್ಠ' ಮತ್ತು 'ತತ್ವನಿಷ್ಠ' ಎಂಬುದಾಗಿ ಪ್ರತ್ಯೇಕಿಸಬಹುದು.

೫.೧ ವ್ಯಕ್ತಿನಿಷ್ಠ ಸಾಮ್ಯ

'ಮಾನವ ಜನ್ಮ ದೊಡ್ಡದು, ಕುಲಕುಲಕುಲವೆಂದು ಹೊಡೆದಾಡದಿರಿ' ಎಂದು ಹೇಳಿದ ದಾಸಪಂಥಕ್ಕೂ ಮತ್ತು ಜಾತಿ, ಮತ, ಕುಟುಂಬದೊಳಗಿನ ಬಂಧನಗಳನ್ನು ಕಳಚಿಹಾಕಿದ ಚೈತನ್ಯಪಂಥಕ್ಕೂ ಪರಸ್ಪರವಾದ ಸಮಾನತೆಯನ್ನು ಕಾಣಬಹುದು. ಸಂಸಾರವನ್ನು ಲೊಳಲೊಟ್ಟೆಯೆಂದು, ಲಂಗೋಟಿ ಬಲುವೊಳ್ಳೆದೆಂದು ಹೇಳಿದ ದಾಸತತ್ತ್ವಕ್ಕೂ ಮತ್ತು ಕೇಶವಭಾರತಿಯವರಿಂದ ಸಂನ್ಯಾಸವನ್ನು ಸ್ವೀಕರಿಸಿ, ಕೌಪೀನ ಹಾಗೂ ಬಹಿರ್ವಾಸಗಳನ್ನೇ ಇಷ್ಟಪಟ್ಟ ಗೌಡೀಯಪಂಥದ ಶ್ರೀಕೃಷ್ಣಚೈತನ್ಯರ ವಿಶ್ವಮಾನವ ಸಂದೇಶಕ್ಕೂ ಒಂದು ರೀತಿಯ ಹತ್ತಿರದ ಸಂಬಂಧವಿದೆ. ಅಷ್ಟೇ ಅಲ್ಲದೆ, ಪರಸ್ಪರ ಪಂಥಗಳ ಅನುಯಾಯಿಗಳಲ್ಲಿ ವ್ಯಕ್ತವಾದ ವೈರಾಗ್ಯಕ್ಕೂ, ಆಧ್ಯಾತ್ಮಿಕ ಚಿಂತನೆಗೂ ಹಲವು ರೀತಿಯಲ್ಲಿ ಸಾಮ್ಯವನ್ನು ಗುರುತಿಸಬಹುದಾಗಿದೆ.

ಚೈತನ್ಯರು ಮೊದಲು ದಕ್ಷಿಣದೇಶಗಳ ತೀರ್ಥಯಾತ್ರೆಯನ್ನು ಪ್ರಾರಂಭಿಸಿ, ಕೂರ್ಮಕ್ಷೇತ್ರಕ್ಕೆ ಹೋಗಿ, ಅಲ್ಲಿ ವಾಸುದೇವನೆಂಬ ಕುಷ್ಠರೋಗಿಯೊಬ್ಬನ ರೋಗವನ್ನು ಗುಣಪಡಿಸಿದ ವಿಚಾರವು[೧] ದಾಸಪಂಥಕ್ಕೆ ಸಂಬಂಧಿಸಿದಂತೆ ಶ್ರೀವಾದಿರಾಜರ ಪವಾಡವೊಂದನ್ನು ನೆನಪಿಸುತ್ತದೆ. ಅಲ್ಲಿಯೂ ಕುಷ್ಠರೋಗಿಯೊಬ್ಬನು ಸುಬ್ರಹ್ಮಣ್ಯಾದಿ ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸಿ, ಅದು ಪರಿಹಾರವಾಗದಿರಲು, ಶ್ರೀವಾದಿರಾಜ ಯತಿಗಳನ್ನು ಮೊರೆಹೊಗುತ್ತಾನೆ. ಶ್ರೀವಾದಿರಾಜರು ತಮ್ಮಲ್ಲಿದ್ದ ಮೃತ್ತಿಕೆಯನ್ನು ರೋಗಿಯ ಕೈಗೆ ಕೊಟ್ಟು ಲೇಪಿಸಿಕೊಳ್ಳುವಂತೆ ಹೇಳಿ ಕುಷ್ಠರೋಗದ ಪರಿಹಾರಕ್ಕೆ ಕಾರಣರಾಗುತ್ತಾರೆ.[೨]

ಚೈತನ್ಯಪಂಥವು ಭಕ್ತಿಭಾವೋನ್ಮಾದಕ್ಕೆ ಹೆಸರಾದುದು. ಅಲ್ಲಿ ಚೈತನ್ಯರು ಕಂಡ ಭಗವದ್‌ಪಾರಮ್ಯಕ್ಕೆ ಸಮಾನವಾಗಿ ದಾಸಪಂಥವೂ ಒಳಗಾಗುತ್ತದೆ. ಪುರಂದರದಾಸರು ತಿರುಪತಿಯಲ್ಲಿ ವಿಮಾನ ಶ್ರೀನಿವಾಸನಿಗೆ ನಮಸ್ಕಾರ ಮಾಡಿ ಗರ್ಭಾಂಕಣವನ್ನು ಪ್ರವೇಶಿಸಿ, ಏಕಾಂತಸೇವೆಯಲ್ಲಿ ತೊಡಗಿಕೊಂಡು ಭಕ್ತಿಯ ಪರಾಕಾಷ್ಠೆಯಲ್ಲಿ ಮನತುಂಬಿ ಹಾಡುತ್ತಿದ್ದರು.[೩] ಭಾವಸಮಾಧಿಯಲ್ಲಿ ಒಮ್ಮೊಮ್ಮೆ ಮೈಮರೆತು ಬಿದ್ದುಬಿಡುತ್ತಿದ್ದರು. ಈ

ಸಂದರ್ಭದಲ್ಲಿ ಅವರ ಕೊನೆಯ ಮಗನಾದ ಮಧ್ವಪತಿಯು ಪುರಂದರದಾಸರ ಅರೈಕೆಯನ್ನು ಮಾಡುತ್ತಿದ್ದುದು ಮಾತ್ರವಲ್ಲದೆ ಅವರ ಬಾಯಿಂದ ಬರುತ್ತಿದ್ದ ಕೀರ್ತನೆಗಳನ್ನು ಬರೆದುಕೊಳ್ಳುತ್ತಿದ್ದನು. ಪುರಂದರದಾಸರು ಕಂಡುಂಡ ದೇವೋನ್ಮಾದವು ಬಂಗಾಳದ ಚೈತನ್ಯರ ಬದುಕನ್ನು ಬಲುಪಾಲುನೆನಪಿಸುತ್ತದೆ. ಚೈತನ್ಯರು ಭಕ್ತಿಯ ಪರಾಕಾಷ್ಠೆಯಲ್ಲಿ ಮೈಮರೆಯುತ್ತಿದ್ದುದು ಮತ್ತು ಅವರ ಬೋಧನೆಗಳನ್ನು ಇತರ ಗೋಸ್ವಾಮಿಗಳು ಸಂಗ್ರಹಿಸುತ್ತಿದ್ದುದರಲ್ಲಿ ಸಮಾನಾಂಶಗಳನ್ನು ಕಾಣಬಹುದು.

ಚೈತನ್ಯಪಂಥದಲ್ಲಿ ಬರುವ ಪಾತ್ರಗಳೆಲ್ಲ ಪುರಾಣಕಾಲದ ಪುರುಷ ಹಾಗೂ ಸ್ತ್ರೀವರ್ಗದ ಅವತಾರಗಳೆಂದು ಬಂಗಾಳೀಕೃತಿಗಳು ಸಾರುತ್ತವೆ. ಹಾಗೆಯೇ ದಾಸಪಂಥದಲ್ಲಿ ಬರುವ ಕೆಲವೊಂದು ದಾಸರುಗಳು ಅವತಾರಪುರುಷರುಗಳಾಗಿ ಜನ್ಮತಾಳಿದರೆಂದು ಕರ್ಣಾಟ ಭಕ್ತವಿಜಯವು ಹೇಳುತ್ತದೆ. ಚೈತನ್ಯಪಂಥದ ಅವತಾರಗಳ ವಿಚಾರವಾಗಿ ಅ ಕಾಲದ ಕವಿ ಕರ್ಣಾಪುರರ 'ಗೌರಘನೋದ್ದೇಶ ದೀಪಿಕಾ'ವೆಂಬ ಕೃತಿಯು ಹೆಚ್ಚಿನ ಮಾಹಿತಿಯನ್ನು ನೀಡುತ್ತದೆ. ಅಲ್ಲದೆ ಆ ಮಾಹಿತಿಯನ್ನು ಚೈತನ್ಯ ಚರಿತಾಮೃತವು ಒಪ್ಪಿಕೊಳ್ಳುತ್ತದೆ. ಅದರ ವಿವರ ಈ ಕೆಳಗಿನಂತಿದೆ.

ಶ್ರೀ ಕೃಷ್ಣನ ವ್ರಜಲೀಲೆಯ ಪಾತ್ರಗಳು		**ಚೈತನ್ಯ ಲೀಲೆಯ ಪಾತ್ರಗಳು**
ಪರ್ಜನ್ಯ (ಕೃಷ್ಣನ ಅಜ್ಜ)	->	ಶ್ರೀ ಉಪೇಂದ್ರ ಮಿತ್ರ (ಚೈತನ್ಯರ ಅಜ್ಜ)
ವರೀಯಸೀ ದೇವಿ (ಕೃಷ್ಣನ ಅಜ್ಜಿ)	->	ಶ್ರೀಮತಿ ಕಮಾಲವತಿ (ಚೈತನ್ಯರ ಅಜ್ಜಿ)
ಯಶೋದೆ (ಕೃಷ್ಣನ ಸಾಕುತಾಯಿ)	->	ಶ್ರೀಮತಿ ಶಚೀದೇವಿ (ಚೈತನ್ಯರ ತಾಯಿ)
ನಂದರಾಜ (ಕೃಷ್ಣನ ಸಾಕುತಂದೆ)	->	ಶ್ರೀ ಜಗನ್ನಾಥ ಮಿತ್ರ (ಚೈತನ್ಯರ ತಂದೆ)
ಶ್ರೀಮತಿ ರಾಧರಾಣಿ (ಕೃಷ್ಣನ ಆಪ್ತಸಖಿ)	->	ಶ್ರೀ ಗದಾಧರ ಪಂಡಿತ (ಚೈತನ್ಯರ ಆಪ್ತಭಕ್ತ)
ರಾಜಾ ಭೀಷ್ಮಕ (ರುಕ್ಮಿಣಿಯ ತಂದೆ)	->	ಶ್ರೀ ವಲ್ಲಭಾಚಾರ್ಯ (ಲಕ್ಷ್ಮೀದೇವಿಯ ತಂದೆ)
ರುಕ್ಮಿಣೀದೇವಿ (ಕೃಷ್ಣನ ಪತ್ನಿ)	->	ಶ್ರೀಮತಿ ಲಕ್ಷ್ಮೀದೇವಿ (ಚೈತನ್ಯರ ಪತ್ನಿ)
ಸತ್ರಾಜಿತ (ಸತ್ಯಭಾಮೆಯ ತಂದೆ)	->	ಶ್ರೀಸನಾತನ ಮಿತ್ರ (ವಿಷ್ಣುಪ್ರಿಯಾ ದೇವಿಯ ತಂದೆ)
ಭೂಶಕ್ತಿ (ಕೃಷ್ಣನ ಪತ್ನಿ)	->	ಶ್ರೀಜಗದಾನಂದ ಪಂಡಿತ (ಚೈತನ್ಯರ ಭಕ್ತ)
ಸಂಕರ್ಷಣ (ಕೃಷ್ಣನ ವಿಸ್ತರಣೆ)	->	ಶ್ರೀ ವಿಶ್ವರೂಪ (ಚೈತನ್ಯರ ಸಹೋದರ)
ಬಲರಾಮ (ಕೃಷ್ಣನ ಅಣ್ಣ)	->	ಶ್ರೀನಿತ್ಯಾನಂದ ಪ್ರಭು (ಚೈತನ್ಯರ ಸಹಚಾರ)
ವಾರುಣೀದೇವಿ (ಬಲರಾಮನ ಪತ್ನಿ)	->	ಶ್ರೀಮತಿ ವಸುಧಾದೇವಿ (ನಿತ್ಯಾನಂದರ ಪತ್ನಿ)
ರೇವತಿ (ಬಲರಾಮನ ಪತ್ನಿ)	->	ಶ್ರೀಮತಿ ಜಾಹ್ನವೀದೇವಿ (ನಿತ್ಯಾನಂದ ೨ನೇ ಪತ್ನಿ)
ಕುಕುಮ್ಮಿ (ರೇವತಿಯ ತಂದೆ)	->	ಶ್ರೀ ಸೂರ್ಯದಾಸ (ವಸುಧಾ, ಜಹ್ನವೀಯರ ತಂದೆ)
ಗಂಗೆ (ದೇವನದಿ)	->	ಶ್ರೀಮತಿ ಗಂಗಾದೇವಿ (ನಿತ್ಯಾನಂದರ ಪುತ್ರಿ)

ಪ್ರದ್ಯುಮ್ನ (ಕೃಷ್ಣನ ಮಗ)	–>	ಶ್ರೀ ರಘುನಂದನ ಠಾಕೂರ (ಸಖ ಭಕ್ತ)
ಅನಿರುದ್ಧ (ಕೃಷ್ಣನ ಮೊಮ್ಮಗ)	–>	ಶ್ರೀ ವಕ್ರೇಶ್ವರ ಪಂಡಿತ (ಭಕ್ತ)
ಸದಾಶಿವ (ಆವೇಶಾವತಾರ)	–>	ಶ್ರೀ ಅದ್ವೈತಾಚಾರ್ಯ (ಹಿರಿಯ ಭಕ್ತ)
ಸುದಾಮ (ಕೃಷ್ಣನ ಸ್ನೇಹಿತ)	–>	ಶ್ರೀವನಮಾಲೀ ಠಾಕೂರ (ಭಕ್ತ)
ಜಯ,ವಿಜಯರು (ವೈಕುಂಠ ದ್ವಾರಪಾಲಕರು)	–>	ಶ್ರೀ ಜಗನ್ನಾಥ, ಶ್ರೀಮಾಧವ (ಭಕ್ತರು)
ಗರುಡ (ಕೃಷ್ಣನ ವಾಹನ)	–>	ಶ್ರೀ ಗರುಡ ಪಂಡಿತ (ಭಕ್ತ)
ಅಕ್ರೂರ (ಹಿರಿಯ ಯಾದವ ಭಕ್ತಿ)	–>	ಶ್ರೀಗೋಪಿನಾಥ ಸಿಂಹ (ಭಕ್ತ)
ಉದ್ಧವ (ಕೃಷ್ಣನ ದಾಯಾದಿ –ಆಪ್ತೇಷ್ಟ)	–>	ಶ್ರೀಪರಮಾನಂದ ಪುರಿ (ಭಕ್ತ)
ಅರ್ಜುನ (ಕೃಷ್ಣನ ಭಕ್ತ)	–>	ಶ್ರೀರಮಾನಂದ ರಾಯ (ಭಕ್ತ)
ರೂಪಮಂಜರಿ	–>	ಶ್ರೀಲ ರೂಪ ಗೋಸ್ವಾಮಿ
ರತಿಮಂಜರಿ	–>	ಶ್ರೀಲ ಸನಾತನ ಗೋಸ್ವಾಮಿ
ಅನಂಗಮಂಜರಿ	–>	ಶ್ರೀಲ ಗೋಪಾಲ ಭಟ್ಟ ಗೋಸ್ವಾಮಿ
ರಾಗಮಂಜರಿ	–>	ಶ್ರೀಲ ರಘುನಾಥ ಭಟ್ಟ ಗೋಸ್ವಾಮಿ
ರಾಸಮಂಜರಿ	–>	ಶ್ರೀಲ ರಘುನಾಥ ದಾಸ ಗೋಸ್ವಾಮಿ
ಪ್ರೇಮಮಂಜರಿ	–>	ಶ್ರೀ ಭೂಗರ್ಭ ಠಾಕುರ
ಸುಭಾಹು	–>	ಶ್ರೀ ಉದ್ಧರಣ ದತ್ತ ಠಾಕೂರ
ಸ್ತೋಕ ಕೃಷ್ಣ	–>	ಶ್ರೀ ಪುರುಷೋತ್ತಮ ದಾಸ
ಶೈಬ್ಯಾಗೋಪಿ	–>	ಶ್ರೀ ದಾಮೋದರ ಪಂಡಿತ
ವಿಶಾಖಾಗೋಪಿ	–>	ಶ್ರೀ ಸ್ವರೂಪ ದಾಮೋದರ ಗೋಸ್ವಾಮಿ
ರಂಗಾದೇವಿ	–>	ಶ್ರೀ ಗದಾಧರ ಭಟ್ಟ
ಧನಿಷ್ಠಾದೇವಿ	–>	ಶ್ರೀ ರಾಘವ ಪಂಡಿತ
ಇಂದಿರಾಗೋಪಿ	–>	ಶ್ರೀ ಜೀವ ಪಂಡಿತ
ನಂದಿಮುಖಿ ದೇವಿ	–>	ಶ್ರೀ ಸಾರಂಗ ಠಾಕೂರ
ವೀರದೇವಿ	–>	ಶ್ರೀ ಶಿವಾನಂದ ಸೇನ
ಮಧುಮತಿದೇವಿ	–>	ಶ್ರೀ ನರಹರಿ ಸರ್ಕಾರ
ರತ್ನಾವಲೀದೇವಿ	–>	ಶ್ರೀ ಗೋಪಿನಾಥ ಆಚಾರ್ಯ
ಕುಬೇರ	–>	ಶ್ರೀ ಕುವೇರ ಪಂಡಿತ

ಅಚ್ಯುತಗೋಪಿ -> ಶ್ರೀ ಅಚ್ಯುತಾನಂದ

ಇಂದ್ರದ್ಯುಮ್ನ -> ಶ್ರೀ ಪ್ರತಾಪರುದ್ರ

ವಸುಧಾಮ -> ಶ್ರೀ ಧನಂಜಯ ಪಂಡಿತ

ಮಹಾಬಾಹು -> ಶ್ರೀ ಮಹೇಶ ಪಂಡಿತ

ದಾಮಗೋಪ -> ಶ್ರೀ ನಾಗರ ಪುರುಷೋತ್ತಮ

ಕುಸುಮಾಸವ -> ಶ್ರೀ ಲೋಲವೇಶ ಶ್ರೀಧರ

ಪ್ರಬಲ -> ಶ್ರೀ ಹಲಾಯುಧ ಠಾಕೂರ

ವರುತಪ -> ಶ್ರೀ ರುದ್ರಪಂಡಿತ

ಗಂಧರ್ವ -> ಶ್ರೀ ಕುಮುದಾನಂದ ಪಂಡಿತ

ಚಂದ್ರಕಾಂತಿ ದೇವಿ -> ಶ್ರೀ ಗದಾಧರ ದಾಸ

ತುಂಗ ವಿದ್ಯಾ ಗೋಪಿ -> ಶ್ರೀ ಪ್ರಬೋಧಾನಂದ ಸರಸ್ವತಿ

ಮಾಧವಿ ಗೋಪಿ -> ಶ್ರೀ ಮಧ್ವಾಚಾರ್ಯ

ಮಧುಕಾಂತ -> ಶ್ರೀ ಮುಕುಂದ ದತ್ತ

ಮಧುವ್ರತ -> ಶ್ರೀ ವಸುದೇವ ದತ್ತ

ಚಂದ್ರಮುಖ -> ಶ್ರೀ ಮಕರಧ್ವಜ ಕರ

ಸುಧಾಕರ -> ಶ್ರೀ ಶಂಕರ ಘೋಷ್

ಚಂದ್ರಹಾಸ -> ಶ್ರೀ ಜಗದೇಶ ಪಂಡಿತ

ಭೃಂಗರ -> ಶ್ರೀ ಕಾಶೀಶ್ವರ

ಶ್ರೀಭಂಗರ -> ಶ್ರೀ ಗೋವಿಂಬ್ಬ

ಋಷಿಗಳು ಹಾಗೂ ಭಕ್ತರು ಚೈತನ್ಯ ಪಂಥದಲ್ಲಿ ಸಂತರಾಗಿ, ಕೆಲವರು ಭಕ್ತರೇ ಆಗಿ ಅವತರಿಸಿದರು.

ವೇದವ್ಯಾಸರು -> ಶ್ರೀ ವೃಂದಾವನ ಠಾಕೂರ

ಶುಕ ಮಹರ್ಷಿಗಳು -> ಶ್ರೀ ವಲ್ಲಭ ಭಟ್ಟ

ನಾರದ -> ಶ್ರೀ ಶ್ರೀವಾಸ ಪಂಡಿತ

ಪರ್ವತ ಮುನಿ -> ಶ್ರೀ ರಾಮ ಪಂಡಿತ

ಸಾಂದೀಪನಿ -> ಶ್ರೀ ಕೇಶವ ಭಾರತಿ

ವಸಿಷ್ಠ -> ಶ್ರೀ ಗಂಗಾದಾಸ/ಸುದರ್ಶನ

ಭೃಗ ಮಹರ್ಷೀಗಳು -> ಶ್ರೀ ದೇವಾನಂದ ಪಂಡಿತ

ಬ್ರಹ್ಮ ಮಹಾತಪ -> ಶ್ರೀ ಹರಿದಾಸ ಠಾಕೂರ

ದೂರ್ವಾಸ -> ಶ್ರೀ ಜಗನ್ನಾಥ ಆಚಾರ್ಯ

ವಿಶ್ವಕರ್ಮ -> ಶ್ರೀ ಭಾಸ್ಕರ ಠಾಕೂರ

ಬೃಹಸ್ಪತಿ -> ಶ್ರೀ ಸಾರ್ವಭೌಮ ಭಟ್ಟಾಚಾರ್ಯ

ಹನೂಮಂತ -> ಶ್ರೀ ಮುರಾರಿ ಗುಪ್ತ

ಸುಗ್ರೀವ -> ಶ್ರೀ ಗೋವಿಂದಾನಂದ

ಅಂಗದ -> ಶ್ರೀ ಪುರಂದರ

ಕುಬ್ಜೆ -> ಶ್ರೀ ಕಾಶೀಮಿಶ್ರ

ದಕ್ಷ- ಗಿಳಿಗಳು -> ಶ್ರೀ ಚೈತನ್ಯದಾಸ- ಭಕ್ತರು

ವಿಚಕ್ಷಣರು- ಗಿಳಿಗಳು -> ಶ್ರೀ ರಾಮದಾಸ- ಭಕ್ತರು

ಶ್ರೀ ಕೃಷ್ಣನ ಕೊಳಲಿನ ಜೀವ ಚೈತನ್ಯ -> ಶ್ರೀ ವಂಕೀದಾಸಠಾಕೂರರು

ದ್ವಾಪರದಲ್ಲಿದ್ದ ರಾಧೆಯ ಆಪ್ತ ಸೇವಕಿಯರು ಶ್ರೀ ಚೈತನ್ಯ ಮಹಾಪ್ರಭುಗಳ ಆಪ್ತ ಸೇವಕರಾದ ವಿವರಗಳು.

ಮಾಲತಿ -> ಶ್ರೀ ಶುಭಾನಂದ ದ್ವಿಜ

ಚಂದ್ರಲತಿಕಾ -> ಶ್ರೀ ಶ್ರೀಧರ ಬ್ರಹ್ಮಾಚಾರಿ

ಮಂಜುಮೇಧಾ -> ಶ್ರೀ ಪರಮಾನಂದ ಗುಪ್ತ

ವರಾಂಗದಾ -> ಶ್ರೀ ರಘುನಾಥ ದ್ವಿಜ

ರತ್ನಾವಳೀ -> ಶ್ರೀ ಕಂಸಾರಿ ಸೇನ

ಕಮಲಾ -> ಶ್ರೀ ಜಗನ್ನಾಥ ಸೇನ ಮಹಾಶಯ

ಗುಣಚೂಡಾ -> ಶ್ರೀ ಸುಬುದ್ಧಿಮಿಶ್ರ

ಸುಕೇಶಿನೀ -> ಶ್ರೀ ಹರ್ಷ

ಕರ್ಪೂರ ಮಂಜರಿ -> ಶ್ರೀ ರಘುಮಿಶ್ರ

ಶ್ಯಾಮ ಮಂಜರಿ -> ಶ್ರೀ ಜಿತಮಿಶ್ರ

ಶ್ವೇತ ಮಂಜರಿ -> ಶ್ರೀ ಭಾಗವತಾಚಾರ್ಯ

ವಿಲಾಸ ಮಂಜರಿ -> ಶ್ರೀ ಜೀವಪಂಡಿತ

ಕಾಮ ಲೇಖಾ -> ಶ್ರೀ ವಾಣೀನಾಥ ದ್ವಿಜ

ಮೌನ ಮಂಜರಿ -> ಶ್ರೀ ಈಶಾನಾಚಾರ್ಯ

ಗಂಧೋನ್ಮಾದಾ -> ಶ್ರೀ ಕಮಲ

ರಸೋನ್ಮಾದಾ -> ಶ್ರೀ ಲಕ್ಷೀನಾಥ ಪಂಡಿತ

ಚಂದ್ರಿಕಾ -> ಶ್ರೀ ಗಂಗಾಮಂತ್ರಿ

ಚಂದ್ರಶೇಕರಾ -> ಶ್ರೀ ಜಗನ್ನಾಥ ಮಾಮು

ಈ ಅವತಾರ ವಿಚಾರಗಳಿಗೆ ಕವಿ ಕರ್ಣಾಪುರರ ಕೃತಿಯು ಆಧಾರ.[೪] ಈ ಕೃತಿಯು ಗೌಡೀಯ ವೈಷ್ಣವ ಕೃತಿಗಳಲ್ಲೇ ಪ್ರಮುಖಸ್ಥಾನವನ್ನು ಪಡೆದಿರುವಂತಹುದು. ಚೈತನ್ಯಪಂಥದಲ್ಲಿ ಉಲ್ಲೇಖಿತವಾಗಿರುವ ಅವತಾರ ವಿಚಾರಕ್ಕೆ ದಾಸಪಂಥದಲ್ಲೂ ಸಮಾನ ಉಲ್ಲೇಖಗಳು ದೊರೆಯುತ್ತದೆ. ದಾಸಪಂಥದ ಅದೆಷ್ಟೋ ದಾಸರುಗಳು ಪೂರ್ವಜನ್ಮದ ಸ್ಮರಣೆಯನ್ನು ಪಡೆದುಕೊಂಡು ಶ್ರೀಹರಿ ಸಂಕೀರ್ತನೆಯ ಕೈಂಕರ್ಯವನ್ನು ಹೊತ್ತರು. ಇನ್ನಷ್ಟು ದಾಸರುಗಳು ಪೂರ್ವಜನ್ಮದಲ್ಲಿ ಪ್ರಭಾವೀಪುರುಷರಾಗಿದ್ದು ದಾಸಪಂಥದ ಕಾಲಕ್ಕೆ ಪುನರ್ಜನ್ಮವನ್ನು ಪಡೆದು, ಅನುಭಾವಿಗಳಾಗಿ, ಸಮಾಜ ಸುಧಾರಕರಾಗಿ, ಹರಿಕೀರ್ತನಾಕಾರರಾಗಿ ಪಂಥವನ್ನು ಉದ್ಧರಿಸಿದರು. ಆದರೆ ದಾಸಪಂಥದ ಅವತಾರಗಳ ವಿವರಣೆ ಚೈತನ್ಯಪಂಥದಷ್ಟು ವಿವರವಾಗಿ ಸಿಗುತ್ತಿಲ್ಲ. ಸಿಕ್ಕಿದ ಕೆಲವೊಂದು ಉದಾಹರಣೆಗಳು ಇಂತಿವೆ.

ನಾರದಮುನಿ -> ಪುರಂದರದಾಸರು.[೫]

ಯಮಧರ್ಮರಾಯ -> ಕನಕದಾಸರು[೬]

ರಾಜಾ ಪ್ರಹ್ಲಾದ -> ವ್ಯಾಸ ಮುನಿ -> ಶ್ರೀ ರಾಘವೇಂದ್ರ ತೀರ್ಥರು.

ಮಹಾಗಣಪತಿ -> ಗೋಪಾಲದಾಸರು[೭]

ಭೃಗು ಮಹರ್ಷಿ -> ವಿಜಯದಾಸರು.

ಅರ್ಜುನನ ಅಂಶದಿಂದ -> ವೈಕುಂಠದಾಸರು.

ಉಲೂಪಿಯ ಅಂಶದಿಂದ -> ಸೌಮ್ಯಾ ನಾಯಕಿ.

ಒಟ್ಟಿನಲ್ಲಿ ಎರಡೂ ಪಂಥಗಳ ಒಟ್ಟು ಉದ್ದೇಶವು ಕೃಷ್ಣಚರಿತೆಯನ್ನು ಒಪ್ಪಿಕೊಂಡು, ಹರಿನಾಮಸಂಕೀರ್ತನೆಯ ವಿಶೇಷತೆಯನ್ನು ಲೋಕೋದ್ಧಾರಕ್ಕಾಗಿ ಪಸರಿಸುವುದೇ ಆಗಿದೆ. ಬಂಗಾಳದ ಗೌಡೀಯ ಅಥವಾ ಚೈತನ್ಯಪಂಥದ ಚೈತನ್ಯ ಮಹಾಪ್ರಭುಗಳಂತೆ ಕೃಷ್ಣನನ್ನು ಕಂಡುಕೊಂಡಂತೆ, ದಾಸಪಂಥದ ವೈಕುಂಠದಾಸರೂ ಕೂಡ ಬೇಲೂರಿನ ಕೇಶವನನ್ನು ತಮ್ಮ ಮನಃಶಕ್ತಿಯಿಂದ ನಾನಾ ರೂಪದಲ್ಲಿ ಕಂಡುಕೊಂಡವರು. ಕೆಲವೊಮ್ಮೆ ಕೇಶವನೂ ಕೂಡ ದಾಸರೊಂದಿಗೆ, ಸಖನಂತೆ, ಸ್ವಾಮಿಯಂತೆ, ಸೇವಕನಂತೆ ಅಲ್ಲದೆ ಎಳೆಯ ಶಿಶುವಾಗಿಯೂ ತೋರಿಬಿಟ್ಟವನು. ದಾಸರ ಪತ್ನಿಯಾದ ಸೌಮ್ಯನಾಯಕಿಯು ಶಿಶುರೂಪೀ ಕೇಶವನನ್ನು ತೊಡೆಯ ಮೇಲಿಟ್ಟು ಬಾಲಲೀಲೆಯನ್ನು ಸವಿದವಳು. ಅಲ್ಲದೆ, ತೊಟ್ಟಿಲಲ್ಲಿಟ್ಟು ತೂಗಿದವಳು.

ಇಂತಹ ಸಮಾನ ಭಾವಗಳನ್ನು ಇಲ್ಲಿಯ ಎರಡೂ ಪಂಥಗಳು ಸಮಾನವಾಗಿ ಸ್ವೀಕರಿಸುತ್ತವೆ. ಇದಕ್ಕೆ ಪ... ಕಾರಣವೆಂದರೆ ಭಾಗವತ ಪುರಾಣವನ್ನು ಪರಸ್ಪರ ಪಂಥಗಳು ಸಮಾನವಾಗಿ ಕಂಡಿದ್ದು.

ಪ್ರೀಣನಾಯ ಮುಕುಂದಸ್ಯ ನವೃತ್ತಂ ನ ಬಹುಜ್ಞತಾ ।
ನದಾನಂ ನ ತಪೋ ನೇಜ್ಯಾ ನ ಶೌಚಂ ನವ್ರತಾನಿಚ ।
ಪ್ರೀಯತೇ ಮಲಯಾ ಭಕ್ತ್ಯಾ ಹರಿರನ್ಯದ್ ವಿಡಂಬನಮ್ ॥[೮]

'ಕೃಷ್ಣಸ್ತು ಭಗವಾನ ಸ್ವಯಮ್' ಎಂಬಲ್ಲಿ ಶ್ರೀಕೃಷ್ಣನನ್ನು ಒಲಿಸಿಕೊಳ್ಳಲು ಪ್ರೇಮವೊಂದೇ ಸೂಕ್ತವೆಂಬುದು ಎರಡೂ ಪಂಥಗಳ ಅಭಿಮತ. ಹಾಗಾಗಿಯೇ ಆ ಎರಡೂ ಕಡೆಗಳಲ್ಲಿ ಹರಿನಾಮಸಂಕೀರ್ತನೆಯ ಜೊತೆಗೆ ಇತರ ತತ್ವನಿಷ್ಠ ಸಾಮ್ಯತೆಯು ಯಥೇಚ್ಛವಾಗಿಯೇ ತೋರುತ್ತದೆ. ಆದುದರಿಂದ ತತ್ವನಿಷ್ಠವಾದ ವಿಷಯ ಸಾಮ್ಯತೆಯನ್ನು ಪ್ರತ್ಯೇಕ ಅಧ್ಯಾಯಗಳನ್ನಾಗಿ ಶೋಧಿಸುವ ಪ್ರಯತ್ನವನ್ನು ಮಾಡಿದ್ದೇನೆ.

೫.೨ ಹರಿನಾಮ ಸಂಕೀರ್ತನೆ

ಕೃತೇ ಯದ್ ಧ್ಯಾಯತೋ ವಿಷ್ಣುಂ ತ್ರೇತಾಯಾಂ ಯಜತೋ ಮಖೈಃ ।
ದ್ವಾಪರೇ ಪರಿಚರ್ಯಾಯಾಂ ಕಲೌ ತದ್ ಹರಿಕೀರ್ತನಾತ್ ॥[೯]

(ಕೃತಯುಗದಲ್ಲಿ ಹರಿಯ ಧ್ಯಾನ, ತ್ರೇತೆಯಲ್ಲಿ ಯಜ್ಞ, ದ್ವಾಪರದಲ್ಲಿ ಸೇವೆ ಮತ್ತು ಕಲಿಯುಗದಲ್ಲಿ ಹರಿನಾಮ ಸಂಕೀರ್ತನೆಗಳಿಂದ ಭಗವಂತನನ್ನು ಭಜಿಸಬೇಕು).

ಕೀರ್ತನೆಯೆಂದರೆ ಕೀರ್ತಿಸುವಿಕೆ, ಹೊಗಳುವಿಕೆ ಎಂದರ್ಥ. ಹರಿಕೀರ್ತನೆ ಎಂದರೆ ಭಗವಂತನನ್ನು ಕೀರ್ತಿಸುವುದು ಎಂದರ್ಥೈಸಬೇಕು. ಇಲ್ಲಿ 'ಸಂ'ಎಂದರೆ ಸಾಮೂಹಿಕವಾಗಿ, 'ಸಂಕೀರ್ತನೆ' ಎಂದರೆ ಸಾಮೂಹಿಕವಾಗಿ ಕೀರ್ತಿಸುವುದೆಂದೂ, 'ಹರಿನಾಮ ಸಂಕೀರ್ತನೆ' ಎಂದರೆ ಸಾಮೂಹಿಕವಾಗಿ ಭಗವಂತನನ್ನು ಕೀರ್ತಿಸುವುದು ಎಂದು ಅರ್ಥವಿಸಬೇಕಾಗುತ್ತದೆ. ಒಟ್ಟಿನಲ್ಲಿ ಇದೊಂದು ಸಾಮೂಹಿಕ ಕೀರ್ತನೆ; ಹರಿನಾಮ ಸಂಕೀರ್ತನೆ.

ಕನ್ನಡನಾಡಿನಲ್ಲಿ ಹುಟ್ಟಿದ ದಾಸಪಂಥ ಹಾಗೂ ಬಂಗಾಳದಲ್ಲಿ ಹುಟ್ಟಿದ ಚೈತನ್ಯಪಂಥಗಳೆರಡರಲ್ಲಿಯೂ ಮುಖ್ಯವಾಗಿ ಗಮನಸೆಳೆಯುವುದು ಹರಿನಾಮಸಂಕೀರ್ತನೆ. ಇಲ್ಲಿ ಎರಡು ಪಂಥಗಳ ಅನುಭಾವಿಗಳು ಸಂಕೀರ್ತನೆಯ ಮೂಲಕ ಸಮಾಜಜಾಗೃತಿಯನ್ನು ಮೂಡಿಸಲು ಹೊರಡುತ್ತಾರೆ. ಜೊತೆಗೆ ಐಹಿಕದಿಂದ ಪಾರಾಗಿ ಪರಾತ್ಪರವನ್ನು ತಲುಪುವ ವಿಧಾನವನ್ನು ಮನವರಿಕೆ ಮಾಡಿಕೊಡುತ್ತಾರೆ.

ಕೃಷ್ಣವರ್ಣಂ ತ್ವಿಷಾಕೃಷ್ಣಂ ಸಾಂಗೋಪಾಂಗಾಸ್ತ್ರಪಾರ್ಷದಾಂ ।
ಯಜ್ಞೈಃ ಸಂಕೀರ್ತನ ಪ್ರಾಯೈರ್ಯಜನ್ತಿ ಹಿ ಸು ಮೇಧಸಾಂ ॥[೧೦]

(ಸಂಕೀರ್ತನ ಪ್ರಾಯೈಃ=ಪ್ರಮುಖವಾಗಿ ಸಾಮೂಹಿಕ ಕೀರ್ತನೆಯಿಂದ, ಯಜಂತಿ=ಅವರು ಆರಾಧಿಸುತ್ತಾರೆ).

ಇದು ಶ್ರೀಮದ್ಭಾಗವತದಲ್ಲಿ ಉಲ್ಲೇಖವಾಗಿರುವ ಶ್ಲೋಕವಾಗಿದ್ದು, ಚೈತನ್ಯಪಂಥದಲ್ಲಿ ಮುಖ್ಯರಾದ ಶ್ರೀಕೃಷ್ಣಚೈತನ್ಯರ ಅವತಾರವನ್ನು ಸೂಚಿಸುವ ಭವಿಷ್ಯವಾಣಿಯಂತೆ ಭಾಸವಾಗುತ್ತದೆ. ಇಲ್ಲಿ "ಭಗವಂತನು

ಕಲಿಯುಗದಲ್ಲಿ ಹಳದಿಬಣ್ಣದ ಮೈಕಾಂತಿಯಿಂದ ಕಂಗೊಳಿಸುತ್ತಾ ಸಂಕೀರ್ತನೆಯನ್ನು ಮಾಡುತ್ತಿರುತ್ತಾನೆ. ಬುದ್ಧಿವಂತರಾದ ಜೀವಿಗಳು ಆತ್ಮ ಸಾಕ್ಷಾತ್ಕಾರದ ಇದೇ ದಾರಿಯನ್ನು ಅವಲಂಬಿಸುತ್ತಾರೆ''. ಈ ಶ್ಲೋಕಾರ್ಥವನ್ನು ಗಮನಿಸಿದರೆ ಶ್ರೀಹರಿಯೇ ಚೈತನ್ಯರ ರೂಪದಲ್ಲಿ ಅವತರಿಸಿದನೆಂಬುದು ತಿಳಿದುಬರುತ್ತದೆ. ಅಷ್ಟೇ ಅಲ್ಲದೆ, ಕೃಷ್ಣನನ್ನು ಅವರು ಕಾಣುವ ರೀತಿಯೂ ಕೂಡ ಇಲ್ಲಿ ಮುಖ್ಯವಾಗುತ್ತದೆ. ಅವರೆನ್ನುವಂತೆ

ಕೃಷ್ಣ ಮೋರ ಜೀವನ, ಕೃಷ್ಣ ಮೋರ ಪ್ರಾಣ ಧನ,
ಕೃಷ್ಣ ಮೋರ ಪ್ರಾಣೇರ ಪರಾಣ ।
ಹೃದಯ ಉಪರೇ ಧರೋಜ್, ಸೇವಾ ಕರಿ ಸುಖೀ ಕರೋಜ್
ಏಇ ಮೋರ ಸದಾ ರಹೇ ಧ್ಯಾನ ॥[೧೧]

(ಕೃಷ್ಣ ನನ್ನ ಜೀವ ಮತ್ತು ಆತ್ಮ. ಕೃಷ್ಣ ನನ್ನ ಜೀವನದ ಸಂಪತ್ತು. ದಿಟದಲ್ಲಿ ಕೃಷ್ಣನು ನನ್ನ ಜೀವದ ಜೀವ. ಆದ್ದರಿಂದ ನಾನು ಅವನನ್ನು ಸದಾ ನನ್ನ ಹೃದಯದಲ್ಲಿ ಇಟ್ಟುಕೊಂಡಿರುತ್ತೇನೆ. ಅವನಿಗೆ ಸೇವೆಯನ್ನು ಸಲ್ಲಿಸುವ ಮೂಲಕ ಸಂತುಷ್ಟ ಪಡಿಸಲು ಪ್ರಯತ್ನಿಸುತ್ತೇನೆ. ಅದೇ ನನ್ನ ನಿರಂತರ ಧ್ಯಾನ).

ಹಾಗಾಗಿ ಚೈತನ್ಯಪಂಥವು ಹುಟ್ಟಿಕೊಂಡುದೇ ಹರಿನಾಮ ಸಂಕೀರ್ತನೆಗಾಗಿ. ಶ್ರೀಚೈತನ್ಯರ ಆವಿರ್ಭಾವದ ಮುಖ್ಯ ಉದ್ದೇಶವೇ ಮಾಯೆಯ ಭ್ರಾಂತಿಯನ್ನು ಹೋಗಲಾಡಿಸಲಿಕ್ಕೋಸ್ಕರವಾಗಿ. ಈ ಚಳುವಳಿಯ ಮೂಲಕವಾಗಿ ಪ್ರಪಂಚದ ಪ್ರತಿಯೊಬ್ಬನೂ ತಾನು ಭೌತವಸ್ತುವಿನಿಂದ ಉತ್ಪತ್ತಿಯಾದದ್ದೆಂದೂ ಹಾಗೂ ಅದರಿಂದ ಶರೀರಕ್ಕೆ ಸಂಬಂಧಿಸಿದ ಅನೇಕ ಕರ್ತವ್ಯಗಳನ್ನು ಪಾಲಿಸಲಿದೆಯೆಂದೂ ಯೋಚಿಸುವಂತಾಗುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಜೀವಿ ಎನ್ನುವುದೊಂದು ಲೌಕಿಕದೇಹವಲ್ಲ. ಅವನೊಂದು ಚೈತನ್ಯಾತ್ಮವೆಂದು ಭಾವಿಸಿಕೊಳ್ಳಬೇಕು. ಅಲ್ಲದೆ ಅವನಿಗೊಂದು ನಿರಂತರ ಪರಮಸುಖ ಮತ್ತು ಪರಿಪೂರ್ಣವೆನಿಸುವ ಆಧ್ಯಾತ್ಮಿಕಜ್ಞಾನದ ಅಗತ್ಯವಿದೆಯೆಂದು ಅರಿತುಕೊಳ್ಳಬೇಕು. ಆದರೆ, ದುರದೃಷ್ಟವಶದಿಂದ ಆತನು ತನ್ನ ಶರೀರದೊಳಗೆ ಹಲವು ರೀತಿಯ ಭ್ರಾಂತಿಯಲ್ಲಿ ತನ್ನನ್ನು ತಾನು ಸಮೀಕರಿಸಿಕೊಂಡುಬಿಡುತ್ತಾನೆ. ಹೀಗೆ ಶರೀರದ ಪ್ರತಿಯೊಂದು ಬೆಳವಣಿಗೆಯಲ್ಲೂ ಅವನು ಭಿನ್ನವಾದ ಆಲೋಚನೆಯನ್ನು ಸ್ವೀಕರಿಸಿಕೊಂಡು ಲೌಕಿಕದ ಅಸ್ತಿತ್ವದಲ್ಲಿ ಸಿಲುಕಿಕೊಂಡು ಬಿಟ್ಟಿರುತ್ತಾನೆ. ಜೊತೆಗೆ ಶಾಶ್ವತವಾಗಿ ಒಂದು ದೇಹದಿಂದ ಇನ್ನೊಂದು ದೇಹಕ್ಕೆ ದೇಹಾಂತರವನ್ನು ಹೊಂದುತ್ತಾ ಮುಂದುವರಿಯುತ್ತಾನೆ. ಮಾಯೆಯ ಮೋಹದಲ್ಲಿ ತನ್ನ ಭೂತ ಹಾಗೂ ಭವಿಷ್ಯತ್ಕಾಲಗಳ ಕುರಿತಾಗಿ ಚಿಂತಿಸದೆ, ವರ್ತಮಾನದಲ್ಲಿ ದೊರಕುವ ಸ್ವಲ್ಪಕಾಲದ ಬದುಕಿನಲ್ಲೇ ಸಂತೃಪ್ತಿಯನ್ನು ಪಡೆದುಕೊಳ್ಳುತ್ತಾನೆ. ಇಂತಹ ಭ್ರಾಂತಿಯನ್ನು ಕಳಚಲು ಶ್ರೀಚೈತನ್ಯ ಮಹಾಪ್ರಭುಗಳು ಹರಿನಾಮಸಂಕೀರ್ತನೆಯ ಆಂದೋಲನವನ್ನು ಸ್ವೀಕರಿಸುತ್ತಾರೆ. ಈ ದೃಷ್ಟಿಯಿಂದಲೇ, ಚೈತನ್ಯರು ಪುರಿಯಲ್ಲಿರುವಾಗ ಜಗನ್ನಾಥನನ್ನು ಸಂಕೀರ್ತನವನ್ನು ಮಾಡಲು ಏಳು ಸಂಕೀರ್ತನ ತಂಡಗಳನ್ನು ರಚಿಸಿ, ಅದಕ್ಕೆ 'ಬೇಡಾ ಸಂಕೀರ್ತನೆ' ಎಂದು ಹೆಸರಿಸುತ್ತಾರೆ.

ಇಡೀ ಪ್ರಪಂಚವನ್ನು ಹರಿನಾಮ ಸಂಕೀರ್ತನೆಗೆ ಒಳಪಡಿಸಬೇಕೆಂಬ ಉದ್ದೇಶವನ್ನು ಮೊದಲಿನಿಂದಲೇ ಇಟ್ಟುಕೊಂಡವರು ಶ್ರೀಚೈತನ್ಯ ಮಹಾಪ್ರಭುಗಳು. ಶ್ರೀಚೈತನ್ಯ ಭಾಗವತವು ಹೇಳುವಂತೆ, ಚೈತನ್ಯರು ಶಿಶುವಾಗಿದ್ದಾಗ ಅಳಲುಪಕ್ರಮಿಸಿದರೆ, ಮನೆಯ ಹೆಂಗಸರು ಹರೇಕೃಷ್ಣ ಮಹಾಮಂತ್ರವನ್ನು ಸಂಕೀರ್ತಿಸಿದೊಡನೆಯೇ ಅಳುವುದನ್ನು ನಿಲ್ಲಿಸುತ್ತಿದ್ದರು. ಹೆಂಗಸರು ಮಹಾಮಂತ್ರ ಹೇಳುವುದನ್ನು ನಿಲ್ಲಿಸಿದರೆ ಮಗುಚೈತನ್ಯರು ಮತ್ತೆ ಅಳಲು ಪ್ರಾರಂಭಿಸುತ್ತಿದ್ದರು. ಹೀಗೆ ಹರೇಕೃಷ್ಣ ಮಹಾಮಂತ್ರಕ್ಕಾಗಿ ಅಳು, ಅಳುವಿಗಾಗಿ ಮಹಾಮಂತ್ರದ ಸಂಕೀರ್ತನೆಯ ಆಟವು ನಿರಂತರವಾಗಿಯೇ ಮುಂದುವರಿಯುತ್ತಿತ್ತು. ಈ ಕಾರಣಕ್ಕಾಗಿಯೇ ನೆರೆಹೊರೆಯ ಮನೆಯ ಹೆಂಗಸರೆಲ್ಲ ಶಚೀಮಾತೆಯ ಮನೆಯನ್ನು ಸೇರುತ್ತಿದ್ದರು. ಒಟ್ಟಿನಲ್ಲಿ ಚೈತನ್ಯರು ತನ್ನ ಲೀಲಾವಸ್ಥೆಯಲ್ಲಿಯೇ ಸಮಾಜದ ಹೆಂಗಸರನ್ನು ಹರಿನಾಮಸಂಕೀರ್ತನೆಗೆ ಒಳಪಡಿಸಿದರು. ಇಂತಹ ಭಾವಗಳು ದಾಸಸಾಹಿತ್ಯದಲ್ಲೂ ಬಹಳವಾಗಿ ಸಿಗಲುಸಾಧ್ಯ. ವಾದಿರಾಜರು, ವೈಕುಂಠದಾಸರಾದಿಯಾಗಿ ಕೆಲವೊಂದು ಅನುಭಾವಿಗಳು ಇಂತಹ ಅನುಭವಜನ್ಯದಿಂದಲೇ ಕೀರ್ತನೆಗಳನ್ನು ರಚಿಸಲು ಮುಂದಾಗಿದ್ದಾರೆ.

ಚೈತನ್ಯರು ಆರಂಭಿಸಿದ ಪ್ರತಿಯೊಂದು ಸಂಕೀರ್ತನೆಯ ತಂಡದಲ್ಲಿ ಇಪ್ಪತ್ತೊಂದು ಜನರು ಇರುತ್ತಿದ್ದರು. ಅವರಲ್ಲಿ ನಾಲ್ಕು ಜನ ಮೃದಂಗ ಬಾರಿಸುವವರು, ಒಬ್ಬರು ಕೀರ್ತನೆಯ ಮುಂದಾಳತ್ವವನ್ನು ವಹಿಸುವವರು, ಇತರ ಹದಿನಾರು ಜನರು ಕರತಾಳಗಳನ್ನು ಭಾರಿಸುತ್ತಾ ಮುಂದಾಳನ್ನು ಅನುಸರಿಸಿ ಹಾಡುತ್ತಿದ್ದರು. ಅಲ್ಲದೆ ಅವರು ಭಕ್ತಿಯ ಮೂಲಕ ಭಗವಂತನನ್ನು ಒಲಿಸುವ 'ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ, ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ' ಎಂಬ ದಿವ್ಯನಾಮದ ಮಂತ್ರೋಚ್ಚಾರಣೆಯನ್ನೇ ಸಂಕೀರ್ತನ ಚಳುವಳಿಯನ್ನು ಮುಖ್ಯ ಮಂತ್ರವನ್ನಾಗಿ ಸ್ವೀಕರಿಸಿದರು. ಇಂತಹ ಮಹಾಮಂತ್ರಕ್ಕೆ ಶ್ರೀಮದ್ಭಾಗವತವೇ ಮುಖ್ಯ ಆಧಾರವಾಗಿ ನಿಲ್ಲುತ್ತದೆ. ಅದು ಶ್ರೀಹರಿಸಂಕೀರ್ತನೆಯ ಮಹತ್ವವನ್ನೇ ಸಾರಿದ್ದು ಮಾತ್ರವಲ್ಲದೆ, ಇತರ ಪಂಥಗಳ ತಾತ್ವಿಕ ನಿಲುವಿಗೆ ಆಧಾರವಾಗಿ ಬಿಡುತ್ತದೆ. ವಿಷ್ಣುಪುರಾಣವೂ ಕೂಡ 'ಕಲೌ ಸಂಕೀರ್ತ್ಯ ಕೇಶವಃ' ಎನ್ನುತ್ತದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಬಂಗಾಲದ ಚೈತನ್ಯಪಂಥ ಮತ್ತು ಕರ್ನಾಟಕದ ದಾಸಪಂಥಗಳು ಹರಿಸಂಕೀರ್ತನ ಸಂಪ್ರದಾಯವನ್ನು ಅನುಸರಿಸಿಕೊಂಡು ಬಂದು ಕಲಿಯುಗದಲ್ಲಿ ಹರಿನಾಮವನ್ನು ನೆನೆಯಲು ಹೇಳುತ್ತದೆ.

ದಾಸಸಾಹಿತ್ಯವು 'ಯಾಗ ಯಜ್ಞ ಮಾಡಲೇಕೆ, ಯೋಗಿ ಯತಿಯು ಆಗಲೇಕೆ, ನಾಗಶಯನ ನಾರದವಂದ್ಯನ ಕೂಗಿ ಭಜನೆ ಮಾಡೋ ಬೇಗ' ಎಂದು ಹೇಳುವ ಮೂಲಕ ಹರಿನಾಮಸಂಕೀರ್ತನೆಗೆ ಅಗ್ರಪ್ರಾಶಸ್ತ್ಯವನ್ನು ನೀಡುತ್ತದೆ. ಈ ಕಲ್ಪನೆಯಿಂದಲೇ, ಹರಿನಾಮ ಕೀರ್ತನೆಯನ್ನು ಅನುದಿನ ಮಾಳ್ಪಗೆ ನರಕದ ಭಯಗಳುಂಟೆ ? ಎಂದು ಪುರಂದರದಾಸರು ಪ್ರಶ್ನಿಸಿಯೇ ಬಿಡುತ್ತಾರೆ. ಹಾಗಾಗಿ ಅವರಿಗೆ ನಾರಾಯಣನ ನಾಮವು ಯಮನ ಆಳುಗಳನ್ನು ಒದೆಯುವಂತಹುದು, ಅಜಾಮಿಳನಂತಹವರಿಗೆ ಮೋಕ್ಷವನ್ನು ನೀಡುವಂತಹುದಾಗುತ್ತದೆ. ತಾಳತಂಬೂರಿಯನ್ನು ಹಿಡಿದು, ಕಾಲಿಗೆ ಗೆಜ್ಜೆಯನ್ನು ಕಟ್ಟಿ, ಗೋಪಾಲಬುಟ್ಟಿಯನ್ನು ಹಾಕಿಕೊಂಡು ಹೊರಟರೆ, ಅವರ ಬಾಯಲ್ಲಿ ಕೃಷ್ಣಾ, ಮುಕುಂದ, ಮುರಾರಿಯೆಂಬ ಹರಿನಾಮವಾಹಿನಿಯೇ

ಹರಿದುಬಿಡುತ್ತದೆ. ಹಾಗಾಗಿಯೇ ಅವರು ಮಾನವ ಬದುಕಿನ ಸಾರ್ಥಕತೆಗಾಗಿ, ಹರಿಯ ನೆನೆಯದ ನರಜನ್ಮವನ್ನು, ಹರಿಯ ಕೊಂಡಾಡದ ನಾಲಗೆಯನ್ನು, ವೇದವನ್ನು ಓದದ ವಿಪ್ರನನ್ನು ಮೂದಲಿಸಲು ಹೊರಡುತ್ತಾರೆ. ಪ್ರಾತಃಕಾಲದೊಳೆದ್ದು ನಾಲಗೆಗೆ ಸಿರಿಪತಿಯ ಸ್ಮರಣೆಯನ್ನು ಮಾಡುವಂತೆ ಕೇಳಿಕೊಳ್ಳುತ್ತಾರೆ. ಆಚಾರವಿಲ್ಲದವರ ನಾಲಗೆಗೆ, 'ಕೃಷ್ಣಾ ಎನಬಾರದೆ', 'ನಾರಾಯಣ ಎನಬಾರದೆ', 'ರಾಮಮಂತ್ರವ ಜಪಿಸೋ' ಎಂದು ಹೇಳಿ, ಆಮೂಲಕವಾಗಿ ಸಂಕಷ್ಟದ ಪರಿಹಾರಕ್ಕೆ ಹರಿನಾಮಸ್ಮರಣೆಯ ಅಮೃತಾಭಿಷೇಚನವನ್ನು ನೀಡುತ್ತಾರೆ. ಹೀಗೆ ಹರಿನಾಮಸಂಕೀರ್ತನೆಯು ದಾಸಸಾಹಿತ್ಯದ ಬಹುಭಾಗವನ್ನು ವ್ಯಾಪಿಸುವ ಮೂಲಕ ಬಹುಜನರಿಗೆ ಆನಂದವನ್ನೀಡುತ್ತದೆ.

ಚೈತನ್ಯಪಂಥದಲ್ಲೂ ಶ್ರೀಹರಿಯ ಚತುರ್ವಿಂಶತಿ ನಾಮೋಚ್ಚಾರಣೆಗೆ ಮಹತ್ವವಿದೆ. ಪ್ರಭುನಿತ್ಯಾನಂದ ಹಾಗೂ ಹರಿದಾಸರಿಗೆ ಚೈತನ್ಯರು ನೀಡಿದ ಮೊದಲ ಆದೇಶವೇ– 'ಮಿತ್ರರೇ,.. ಹೋಗಿ. ಬೀದಿಬೀದಿಗಳಲ್ಲಿ ಸುತ್ತಾಡಿ ಮನೆಯೊಡೆಯನನ್ನು ಮನೆಬಾಗಿಲಲ್ಲೇ ಸಂದರ್ಶಿಸಿ, ಹರಿನಾಮವನ್ನು ಕೀರ್ತಿಸುವಂತೆ ಮನವೊಲಿಸಿ' ಎಂಬುದಾಗಿದೆ. ಚೈತನ್ಯಪ್ರಭುಗಳಂತೂ ತನ್ನ ಶಿಷ್ಯವರ್ಗದೊಂದಿಗೆ ಭಾಗವತದ ಉದಾಹರಣೆಗಳನ್ನೇ ವಿವರಿಸಿ, ಉಪದೇಶಿಸಿರುವುದನ್ನು 'ಶ್ರೀಚೈತನ್ಯ ಚರಿತಾಮೃತ'ದಲ್ಲಿ ಕಾಣುತ್ತೇವೆ. ಅವರು ಚಂಡಾಲನಿಗೂ ಪರಿಶುದ್ಧ ಪ್ರೇಮವನ್ನು ತೋರಿಸಿ, 'ನಿರನ್ತರ ನೃತ್ಯಗೀತ ಕೀರ್ತನ ವಿಲಾಸ, ಆ ಚಣ್ಡಾಲೇ ಪ್ರೇಮಭಕ್ತಿ ಕರಿಲಾಪ್ರಕಾಶ'[೧೨]ವೆನ್ನುವ ಮೂಲಕ ತಾನೂ ನರ್ತಿಸಿ, ಅವನಲ್ಲೂ ಕೃಷ್ಣಪ್ರೇಮವನ್ನು ಮೂಡಿಸಿದುದನ್ನು ಕಾಣುತ್ತೇವೆ. ಇಂತಹ ನೃತ್ಯಸಂಕೀರ್ತನೆಯ ಸನ್ನಿವೇಶಗಳು ಚೈತನ್ಯಪಂಥದಲ್ಲಿ ಹಲವಷ್ಟು ಸಿಗಲುಸಾಧ್ಯ.

ಚಾತುರ್ಮಾಸ್ಯ ತಾಂಗ್ ಹಾ ಪ್ರಭು ಶ್ರೀ ವೈಷ್ಣವ ರೇರಸಮೋ ।
ಗೋಂಗಾಇಲ ನೃತ್ಯ ಗೀತ ಕೃಷ್ಣ ಸಂಕೀರ್ತನೇ ॥ –ಚೈತನ್ಯ ಚರಿತಾಮೃತ

(ಚಾತುರ್ಮಾಸ್ಯದ ತಿಂಗಳುಗಳನ್ನು ಪ್ರಭು ಶ್ರೀಚೈತನ್ಯರು ಶ್ರೀವೈಷ್ಣವ ಭಕ್ತರೊಂದಿಗೆ ಹಾಡುತ್ತಾ, ಪವಿತ್ರ ನಾಮವನ್ನು ಸ್ಮರಿಸುತ್ತಾ, ನರ್ತಿಸುತ್ತಾ ಪೂರ್ಣ ಸಮಯವನ್ನು ಕಳೆದರು.)

ಇದು ಚಾತುರ್ಮಾಸ್ಯದ ಸಂದರ್ಭದಲ್ಲಿ ಪ್ರಭು ಶ್ರೀಕೃಷ್ಣಚೈತನ್ಯರು ಶ್ರೀವೈಷ್ಣವ ಭಕ್ತರೊಂದಿಗೆ ಶ್ರೀಹರಿ ಸಂಕೀರ್ತನೆ ನಡೆಸಿದುದಕ್ಕೆ ಸಾಕ್ಷಿಯಾದರೆ,

ಪ್ರೇಮಾವೇಶೇ ನೃತ್ಯ ಗೀತ ಕೈಲ ಕತ ಕ್ಷಣ ।
ಆವಿಷ್ಟ ಹಂಚಾ ಕೈಲ ಗೋಪಾಲ ಸ್ತವನಾ ॥[೧೪]

(ಪ್ರೇಮಾವೇಶದಲ್ಲಿದ್ದ ಶ್ರೀಚೈತನ್ಯರು ನರ್ತನ ಮತ್ತು ಸಂಕೀರ್ತನೆಗಳಲ್ಲಿ ಸ್ವಲ್ಪ ಸಮಯ ತನ್ಮಯರಾದರು. ಭಕ್ತಿಭಾವಪರವಶರಾಗಿ ಗೋಪಾಲನಿಗೆ ಅನೇಕ ಪ್ರಾರ್ಥನೆಗಳನ್ನು ಸಲ್ಲಿಸಿದರು.)

ಈ ಸಂಕೀರ್ತನೆಯು ಕಟಕ್‌ನಗರದ ಸಾಕ್ಷಿಗೋಪಾಲನನ್ನು ಕಂಡು, ಆತನ ಚೆಲುವಿಗೆ ಮಾರುಹೋಗಿ ನೃತ್ಯ ಸಂಕೀರ್ತನೆ ಮಾಡಿದುದಕ್ಕೆ ಸಾಕ್ಷಿ. ಅವರಲ್ಲಿ ಹರಿನಾಮಸಂಕೀರ್ತನೆಯ ತಲ್ಲೀನತೆ ಎಷ್ಟೆಂದರೆ, ಅವರು ದಾರಿಯಲ್ಲಿ ನಡೆಯುವಾಗಲೂ ಅವರ ಕೈಯಲ್ಲಿ ಶ್ರೀಕೃಷ್ಣ ಸಂಕೀರ್ತನದ ಜಪಮಾಲೆ ಕ್ರಿಯಾಶೀಲವಾಗಿರುತ್ತಿತ್ತಂತೆ.

ಕೃಷ್ಣ ಕೃಷ್ಣ ಕೃಷ್ಣ ಕೃಷ್ಣ ಕೃಷ್ಣ ಕೃಷ್ಣ ಕೃಷ್ಣ ಹೇ ।
ಕೃಷ್ಣ ಕೃಷ್ಣ ಕೃಷ್ಣ ಕೃಷ್ಣ ಕೃಷ್ಣ ಕೃಷ್ಣ ಕೃಷ್ಣ ಹೇ ॥
ಕೃಷ್ಣ ಕೃಷ್ಣ ಕೃಷ್ಣ ಕೃಷ್ಣ ಕೃಷ್ಣ ಕೃಷ್ಣ ರಕ್ಷಮಾಂ ।
ಕೃಷ್ಣ ಕೃಷ್ಣ ಕೃಷ್ಣ ಕೃಷ್ಣ ಕೃಷ್ಣ ಕೃಷ್ಣ ಪಾಹಿಮಾಂ ॥
ರಾಮ ರಾಘವ ರಾಮ ರಾಘವ ರಾಮ ರಾಘವ ರಕ್ಷಮಾಂ ।
ರಾಮ ರಾಘವ ರಾಮ ರಾಘವ ರಾಮ ರಾಘವ ಪಾಹಿಮಾಂ ॥[೧೪]

ಇದು ಅವರ ಕಾಲ್ನಡಿಗೆಯ ಸಂಕೀರ್ತನೆಗೆ ಸಾಕ್ಷಿಯಾಗಿ ನಿಲ್ಲುತ್ತದೆ.

ದಾಸಕುಲದ ಪುರಂದರದಾಸರು, 'ದಾರಿಯ ನಡೆವಾಗ ಭಾರವ ಹೊರುವಾಗ ಕೃಷ್ಣಾ ಎನಬಾರದೆ' ಎಂದು ಹಾಡಿರುವಂತಹುದು ಚೈತನ್ಯರು ಸ್ವೀಕರಿಸಿದ ಭಕ್ತಭಾವದ ಸಾಮ್ರಾಜ್ಯದಲ್ಲಿಯೆ. ಅವರು ಬೂಟಕತನವನ್ನು ದೂರ ಎಸೆದು, ನಾಚಿಕೆಯನ್ನು ತ್ಯಜಿಸಿ, 'ಗೆಜ್ಜೆಕಾಲ ಕಟ್ಟಿರೆಂಬೋ ಕಾಗದ ಬಂದಿದೆ, ಹೆಜ್ಜೆಹೆಜ್ಜೆಗೆ ಹರಿಯೆನ್ನಿರೆಂಬೊ ಕಾಗದ ಬಂದಿದೆ'[೧೫] ಎಂದು ಲಜ್ಜೆಬಿಟ್ಟು ಕುಣಿದು ತೋರಿಸಿದ್ದು ಕೂಡ ಚೈತನ್ಯರು ಸ್ವೀಕರಿಸಿದಂತಹ ಭಾವಪ್ರಪಂಚದ ಅನುಭವದಿಂದ ಎನ್ನುವುದು ಮುಖ್ಯ. ಪುರಂದರದಾಸರಂತೆ, ಇಂತಹ ಭಾವುಕತೆಗೆ ಒಳಗಾಗಿ ಶ್ರೀಕೃಷ್ಣಸಂಕೀರ್ತನೆಯ ಛಾಯೆ ಮೂಡಿಸಿದವರೆಂದರೆ ಉಡುಪಿಯ ವಾದಿರಾಜ ಯತಿಗಳು.

ಲಕ್ಷುಮಿ ನಾರಾಯಣಾಯ । ಜಯ । ಲಕ್ಷುಮಿ ನಾರಾಯಣಾಯ ॥ ಪ ॥
ಸರ್ವಲೋಕ ಶರಣ್ಯ ಶಾಶ್ವತ । ಸರ್ವವಂದಿತ ಪಾದ ದಾನವ ।
ಗರ್ವಹರಣ ಗದಾರಿಧಾರಣ । ಪರ್ವತಾರಿ ವರಪ್ರದ ॥ ೧ ॥
ನಂಬಿಕೊಂಡಿಹೆ ನಿನ್ನ ದಿವ್ಯ ಪ । ದಾಂಬುಜಗಳನು ಸರ್ವಕಾಲದಿ ।
ಅಂಬುಜಾಲಯ ಸಹಿತ ಮನದೊಳ । ಗಿಂಬುಗೊಳು ಕಮಲಾಂಬಕ ॥ ೨ ॥

....

ಎಲ್ಲ ಕೂಡಿ ನಿನ್ನ ಪೂಜೆಗೆ । ಕಲ್ಲು ಹಾಕುತ್ತಲಿಹರು ।
ಚಲ್ಲುವ ಹಯವದನ ಅವರ । ಕೊಲ್ಲುಕೊಲ್ಲು ನಮ್ಮ ಗೆಲಿಸು ॥ ೨೪ ॥[೧೬]

ಅವರು ರಚಿಸಿದ ಈ ಸಂಕೀರ್ತನಾಮಾಲೆಯನ್ನು ಅಲ್ಲಿಯ ಅಷ್ಟಮಠಗಳ ಯತಿಗಳು ಇಂದಿಗೂ ಕೃಷ್ಣನ ಸನ್ನಿಧಿಯ ರಾತ್ರಿಪೂಜಾಕಾಲದಲ್ಲಿ ಹಾಡುವ ಸಂಪ್ರದಾಯವು ಮುಂದುವರಿದುಕೊಂಡು ಬಂದಿದೆ. ಇದೇ ರೀತಿಯ ಸಂಕೀರ್ತನೆಯನ್ನು ಪುರಿಯ ಜಗನ್ನಾಥ ದೇವಾಲಯದಲ್ಲಿ ಶ್ರೀಚೈತನ್ಯರು ಮಾಡುತ್ತಾರೆ.

ಸಾತ ದಿಕೇ ಸಾತ ಸಂಪ್ರದಾಯ ಗಾಯ, ಬಾಜಾಯ ।
ಮಧ್ಯೇ ಮಹಾಪ್ರೇಮಾವೇಶೇ ನಾಚೇ ಗೌರ ರಾಯ ॥[೧೭]

ಚೈತನ್ಯರು ನಡೆಸುವ ಸಂಕೀರ್ತನೆಯಲ್ಲಿ ಒಟ್ಟು ಏಳು ಸಂಕೀರ್ತನ ತಂಡಗಳ ಸದಸ್ಯರು ಏಳು ದಿಕ್ಕುಗಳಲ್ಲಿ ನಿಂತು ನರ್ತಿಸುತ್ತಾರೆ. ಹಾಗೆಯೇ ಮೃದಂಗಗಳನ್ನು ಬಾರಿಸುತ್ತಾರೆ. ಶ್ರೀಚೈತನ್ಯ ಮಹಾಪ್ರಭುಗಳು ಇವರೆಲ್ಲರ ಮಧ್ಯದಲ್ಲಿ ಸ್ಥಾಪಿತರಾಗಿ ಅಸಾಧಾರಣ ರಾಗಪರವಶ ದೈವಪ್ರೇಮದಿಂದ ನರ್ತಿಸುತ್ತಾ, ತಮ್ಮ ಆಶುರಚನೆಯಿಂದಲೇ ಭಗವಂತನನ್ನು ಕೀರ್ತಿಸಲು ಮುಂದಾಗುತ್ತಾರೆ.

ದಾಸಸಾಹಿತ್ಯದಲ್ಲಿ ಹರಿನಾಮಸಂಕೀರ್ತನೆಗೆ ಪೂರಕವಾದ ಕೀರ್ತನೆಗಳನ್ನು ರಚಿಸಿದವರಲ್ಲಿ ಕನಕದಾಸರು ಮುಖ್ಯರು. ಅವರ ರಚನೆಗಳಲ್ಲಿ, 'ಈಶ ನಿನ್ನ ಚರಣ ಭಜನೆ......' ಎನ್ನುವ ಕೀರ್ತನೆಯಲ್ಲಿ ವಿಷ್ಣುವಿನ ಇಪ್ಪತ್ತನಾಲ್ಕು ನಾಮಾವಳಿಗಳನ್ನು ಭಕ್ತಿಪಾರಮ್ಯದಲ್ಲಿ ಸ್ತುತಿಸಿರುವುದು ಕೀರ್ತನೆಯ ಹೆಚ್ಚುಗಾರಿಕೆಗೊಂದು ನಿದರ್ಶನವಾಗಿ ತೋರುತ್ತದೆ. ಈ ಕನಕಸಾಹಿತ್ಯಕ್ಕೆ ಸಾದೃಶ್ಯವಾಗಿ, ಶ್ರೀಚೈತನ್ಯ ಮಹಾಪ್ರಭುಗಳು ಕೂಡ ಸನಾತನ ಗೋಸ್ವಾಮಿಗಳಿಗೆ ಪರಾತ್ಪರ ಸತ್ಯಬೋಧನೆಯ ಸಂದರ್ಭದಲ್ಲಿ ಈ ಮೇಲಿನ ವಿಚಾರವನ್ನು ನಿರೂಪಿಸುತ್ತಾರೆ. ಜೊತೆಗೆ ವಿಷ್ಣುವು ತನ್ನ ನಾಲ್ಕು ಕೈಗಳಲ್ಲಿ ಬಳಸುವ ಶಂಖ, ಚಕ್ರ, ಗದಾ ಮತ್ತು ಪದ್ಮಗಳು ಇಪ್ಪತ್ತನಾಲ್ಕು ಹೆಸರುಗಳಿಗೆ ಸಂಬಂಧಿಸಿದಂತೆ ಹೇಗೆ ಬದಲಾಗುತ್ತವೆ ಎಂಬುದನ್ನು ಅವರು ತಿಳಿಸಿಕೊಡುತ್ತಾರೆ.

ವಿಷ್ಣುರೂಪ	**ಕೆಳಬಲಗೈ**	**ಮೇಲ್ಬಲಗೈ**	**ಮೇಲೆಡಗೈ**	**ಕೆಳಎಡಗೈ**
ವಾಸುದೇವ	ಗದಾ	ಶಂಖ	ಚಕ್ರ	ಪದ್ಮಧರ ।
ಸಂಕರ್ಷಣ	ಗದಾ	ಶಂಖ	ಪದ್ಮ	ಚಕ್ರಕರ ॥
ಪ್ರದ್ಯುಮ್ನ	ಚಕ್ರ	ಶಂಖ	ಗದಾ	ಪದ್ಮಧರ ।
ಅನಿರುದ್ಧ	ಚಕ್ರ	ಗದಾ	ಶಂಖ	ಪದ್ಮಕರ ॥
ಶ್ರೀಕೇಶವ	ಪದ್ಮ	ಶಂಖ	ಚಕ್ರ	ಗದಾಧರ ।
ನಾರಾಯಣ	ಶಂಖ	ಪದ್ಮ	ಗದಾ	ಚಕ್ರಧರ ॥
ಶ್ರೀಮಾಧವ	ಗದಾ	ಚಕ್ರ	ಶಂಖ	ಪದ್ಮಕರ ।
ಶ್ರೀಗೋವಿಂದ	ಚಕ್ರ	ಗದಾ	ಪದ್ಮ	ಶಂಖಧರ ॥
ವಿಷ್ಣುಮೂರ್ತಿ	ಗದಾ	ಪದ್ಮ	ಶಂಖ	ಚಕ್ರಕರ ।
ಮಧುಸೂದನ	ಚಕ್ರ	ಶಂಖ	ಪದ್ಮ	ಗದಾಧರ ॥
ತ್ರಿವಿಕ್ರಮ	ಪದ್ಮ	ಗದಾ	ಚಕ್ರ	ಶಂಖಕರ ।
ಶ್ರೀವಾಮನ	ಶಂಖ	ಚಕ್ರ	ಗದಾ	ಪದ್ಮಧರ ॥
ಶ್ರೀಧರ	ಪದ್ಮ	ಚಕ್ರ	ಗದಾ	ಶಂಖಕರ ।
ಹೃಷೀಕೇಶ	ಗದಾ	ಚಕ್ರ	ಪದ್ಮ	ಶಂಖಧರ ॥
ಪದ್ಮನಾಭ	ಶಂಖ	ಪದ್ಮ	ಚಕ್ರ	ಗದಾಕರ ।
ದಾಮೋದರ	ಪದ್ಮ	ಚಕ್ರ	ಗದಾ	ಶಂಖಧರ ॥
ಪುರುಷೋತ್ತಮ	ಚಕ್ರ	ಪದ್ಮ	ಶಂಖ	ಗದಾಧರ ।
ಶ್ರೀ ಅಚ್ಯುತ	ಗದಾ	ಪದ್ಮ	ಚಕ್ರ	ಶಂಖಧರ ॥
ಶ್ರೀನೃಸಿಂಹ	ಚಕ್ರ	ಪದ್ಮ	ಗದಾ	ಶಂಖಧರ ।
ಜನಾರ್ದನ	ಪದ್ಮ	ಚಕ್ರ	ಶಂಖ	ಗದಾಕರ ॥
ಶ್ರೀಹರಿ	ಶಂಖ	ಚಕ್ರ	ಪದ್ಮ	ಗದಾಕರ ।
ಶ್ರೀಕೃಷ್ಣ	ಶಂಖ	ಗದಾ	ಪದ್ಮ	ಚಕ್ರಕರ ॥
ಅಧೋಕ್ಷಜ	ಪದ್ಮ	ಗದಾ	ಶಂಖ	ಚಕ್ರಕರ ।
ಉಪೇಂದ್ರ	ಶಂಖ	ಗದಾ	ಚಕ್ರ	ಪದ್ಮಕರ ॥[೧೮]

ಚೈತನ್ಯಪಂಥದಲ್ಲಿ ಹರಿನಾಮಸಂಕೀರ್ತನೆಗೆ ಪ್ರಾಮುಖ್ಯತೆ ಇದೆಯಾದರೂ ದಾಸಸಾಹಿತ್ಯದಂತೆ ರಾಗತಾಳಗಳ, ರಚನಾವಸ್ತು ವಿನ್ಯಾಸಗಳ ವೈವಿಧ್ಯತೆಯಿಲ್ಲ. ಅಲ್ಲಿ ಸಂಕೀರ್ತನೆಯೆಂದರೆ ಕೃಷ್ಣಭಕ್ತಿ ಸೇವನೆ. ಅಲ್ಲದೆ ಅದೇ ಆ ಪಂಥದ ಮೂಲವಸ್ತುವೂ ಕೂಡ. ಅದಕ್ಕೆ ಅಲ್ಲಿಯ ಸಾಹಿತ್ಯ ಹೇಳುವ, ಕೃಷ್ಣನಲ್ಲಿರುವ ಕೋಟಿಮನ್ಮಥರ ಸೌಂದರ್ಯವೇ ಕಾರಣವಾಗಿ ನಿಲ್ಲುತ್ತದೆ. ಆತ ಕಾಣಿಸಿಕೊಂಡಾಗ ಅವನ ಎಲ್ಲ ಪೂರ್ಣವಿಸ್ತರಣೆಗಳೂ ಅವನೊಂದಿಗೆ ಕಾಣಿಸಿಕೊಳ್ಳುತ್ತದೆ. ಹಾಗಾಗಿಯೇ ಅಲ್ಲಿ ಮುಖ್ಯವಾಗಿ ಮೂಡಿಬಂದಿರುವಂತಹುದು 'ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ । ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ' ಎನ್ನುವ 'ಹರೇಕೃಷ್ಣ ಮಹಾಮಂತ್ರ'. ಈ ದಿವ್ಯಮಂತ್ರವೇ ಚೈತನ್ಯಪಂಥದವರಿಗೆ ಆಧ್ಯಾತ್ಮಾನುಭೂತಿಯ ಮಂತ್ರವಾಗುತ್ತದೆ. ಇದರಿಂದಲೇ ಅವರು ಪುನಃಶ್ಚೇತನಗೊಳ್ಳುತ್ತಾರೆ. ದೈವಿಕವಾಗಿ ಹಾಗೂ ಪಾರಲೌಕಿಕವಾಗಿ ಆನಂದವನ್ನು ಅನುಭವಿಸುತ್ತಾರೆ. ಇಲ್ಲಿ 'ಹರೇ' ಅಥವಾ 'ಹರಾ'ಎನುವುದು ರಾಧೆಯ ಸಂಬೋಧನಾತ್ಮಕ ಶಬ್ದರೂಪ. 'ಕೃಷ್ಣ'ನೆಂದರೆ ಸರ್ವಾಕರ್ಷಕ. 'ರಾಮ'ನೆಂದರೆ ಆನಂದವನ್ನುಂಟುಮಾಡುವ ಪರಮಪ್ರಭು. ಆ ದೃಷ್ಟಿಯಿಂದಲೇ ಈ ಮಂತ್ರದ ಪಠಣವು ಆಧ್ಯಾತ್ಮಿಕ ನೆಲೆಗಟ್ಟಿನ ಮೇಲೆ ನಡೆಯುತ್ತದೆ. ಭೌತಿಕಪ್ರಜ್ಞೆಯ ಎಲ್ಲಾ ಹಂತಗಳನ್ನು ದಾಟಿ ಚಿಮ್ಮುವುದರಿಂದಲೇ ವ್ಯಕ್ತಿಯು ಭಾವುಕನಾಗಿ ನರ್ತಿಸಲು ಪ್ರಾರಂಭಿಸುತ್ತಾನೆ. ದಾಸಪಂಥ ಮತ್ತು ಚೈತನ್ಯಪಂಥಗಳಲ್ಲದೆ, ಭಾರತೀಯ ಭಕ್ತಿಪರಂಪರೆಯಲ್ಲಿ, 'ಹರೇ, ಕೃಷ್ಣ ಮತ್ತು ರಾಮ' ಈ ಮೂರು ಶಬ್ದಗಳು ಪಾರಲೌಕಿಕ ಮಂತ್ರದ ಬೀಜಗಳು. ಈ ಮಹಾಮುಂತ್ರದಲ್ಲಿ ಒಂದು ರೀತಿಯ ಆಧ್ಯಾತ್ಮಿಕ ಕರೆಯಿದೆ. ಆತ್ಮನ ರಕ್ಷಣೆಯ ಮೊರೆಯಿದೆ. ಆದುದರಿಂದಲೇ ಇದು ಭಾರತೀಯ ಭಕ್ತಿಪಂಥಗಳಿಗೆ ಅಧ್ಯಾತ್ಮಿಕ ಸಾಕ್ಷಾತ್ಕಾರದ ಸಾಧನೆಗಿರುವ ಮಾರ್ಗವಾಗಿ ಪರಿಣಮಿಸಿದೆ.

ಶ್ರೀಲ ಭಕ್ತಿವಿನೋದಠಾಕೂರರು ತಮ್ಮ ಗೀತಾವಳಿಯಲ್ಲಿ ಪರಮಪುರುಷನ ಶ್ರೀನಾಮಸಂಕೀರ್ತನೆಯನ್ನು ನಡೆಸಿರುವುದು ದಾಸಸಾಹಿತ್ಯಕ್ಕೆ ತೀರ ಹತ್ತಿರವಾಗಿರುತ್ತದೆ.

ಯಶೋಮತಿನಂದನ, ಬ್ರಜ ಬರೋ ನಾಗರ ಗೋಕುಲ ರಂಜನ ಕಾನಾ ।
ಗೋಪೀ–ಪರಾಣ–ಧನ, ಮದನ ಮನೋಹರ ಕಾಲೀಯ ದಮನ–ವಿಧಾನ ॥[೧೯]

ಠಾಕೂರರೇ ಹೇಳಿರುವಂತೆ, ಶ್ರೀಕೃಷ್ಣನು ಯಶೋದೆಯ ಪ್ರೀತಿಯ ಮಗ. ವ್ರಜಭೂಮಿಯ ದಿವ್ಯಪ್ರೇಮಿ. ಗೋಕುಲದ ಸಂತಸದ ಕಾನ. ಇಲ್ಲಿ 'ಕಾನ'ನೆಂಬುದು ಕೃಷ್ಣನ ಅಡ್ಡ ಹೆಸರು. ಅವನು ಮನ್ಮಥನ ಮನಸ್ಸನ್ನೂ ಅಪಹರಿಸಬಲ್ಲ. ಕಾಲೀಯ ಸರ್ಪನನ್ನು ಶಿಕ್ಷಿಸಿದವನೂ ಅವನೇ. ಈ ರಚನಾಶೈಲಿಯು ಪುರಂದರದಾಸರ 'ಯಾದವ ನೀ ಬಾ ಯದುಕುಲ ನಂದನ ಮಾಧವ ಮಧುಸೂದನ ಬಾರೋ' ಎಂಬ ಕೀರ್ತನೆಯನ್ನು ನೆನಪಿಸುವಂತಿದೆ. ದಾಸಪಂಥವು ಸಂಕೀರ್ತನೆಗಾಗಿ ಹೊಸಬಗೆಯ ಸಾಹಿತ್ಯವನ್ನು ನಿರ್ಮಿಸಿ, ಉಡುಪಿ, ತಿರುಪತಿ, ಪಂಢರಾಪುರ ಮೊದಲಾದ ಮುಖ್ಯ ತಾಣಗಳಲ್ಲಿ ಸಂಕೀರ್ತನೆಗಳನ್ನು ನಡೆಸಿ,

ದೈವಸಾಕ್ಷಾತ್ಕಾರಕ್ಕೊಳಗಾದರೆ, ಗೌಡೀಯ ಪಂಥದವರ ಸಂಕೀರ್ತನೆಗೆ ಪುರಿಯ ಜಗನ್ನಾಥ ದೇಗುಲದ ದಿಕ್ಕಿಗೆ ಎರಡು ಮೈಲಿ ದೂರದಲ್ಲಿರುವ ಗುಂಡೀಚಾ ಮಂದಿರವೇ ಮುಖ್ಯ ಭೂಮಿಕೆಯಾಗುತ್ತದೆ. ಅಲ್ಲದೆ ಅವರಲ್ಲಿ ಕೀರ್ತನೆಯನ್ನು ನಡೆಸಲು ಪ್ರತ್ಯೇಕವಾದ ಹಜಾರವೊಂದನ್ನು ೩೨*೩೯ ಮೊಳದ ವಿಸ್ತೀರ್ಣದಲ್ಲಿ ನಿರ್ಮಿಸಿ, ಸಂಕೀರ್ತನೆಯ ಕುರಿತಾದ ಆಸಕ್ತಿಯನ್ನು ಇತರರಲ್ಲಿ ಇನ್ನೂ ಹೆಚ್ಚಾಗಿ ಮೂಡಿಸಲು ಪ್ರಯತ್ನಿಸುತ್ತಾರೆ.

ಒಟ್ಟಿನಲ್ಲಿ ಶ್ರೀಚೈತನ್ಯರು ಆರಂಭಿಸಿದ ಕೃಷ್ಣಪ್ರಜ್ಞೆಯ ಸಂಕೀರ್ತನಾಂದೋಲನವು ಆಧ್ಯಾತ್ಮಿಕಕ್ಷೇತ್ರದಲ್ಲಿ ಬಹಳ ಮುಖ್ಯವಾಗುತ್ತದೆ. ಇಲ್ಲಿಯ ಎರಡೂ ಪಂಥಗಳ ಮೂಲ ಉದ್ದೇಶವು ಹರಿನಾಮಸಂಕೀರ್ತನೆಯ ಮೂಲಕ ಭಗವದ್‌ಸಾನ್ನಿಧ್ಯಕ್ಕೆ ತೆರಳುವುದು ಮತ್ತು ಸಮಾಜಕ್ಕೆ ಅದನ್ನೇ ಬೋಧಿಸುವುದು. ವೈದೃಶ್ಯವೆಂದರೆ, ದಾಸಪಂಥವು ಸಂಕೀರ್ತನೆಯ ಮಹತ್ವವನ್ನು ನಮ್ಮ ದೇಶದೊಳಗೆ ಸಾರಿದರೆ, ಚೈತನ್ಯಪಂಥವು ಸಾಗರವನ್ನು ದಾಟಿಯೂ ಪ್ರಚಾರ ಮಾಡಿತು. ಏನಿದ್ದರೂ, 'ಹರಿನಾಮ ಕೀರ್ತನೆಯನ್ನು ಅನುದಿನ ಮಾಳ್ಪವಗೆ ನರಕದ ಭಯಗಳಿಲ್ಲ' ವೆಂಬುದು ಎರಡೂ ಪಂಥಗಳ ಖಚಿತ ನಿಲುವು.

ಈ ಕಲ್ಪನೆಯು ಹುಟ್ಟು, ಸಾವು ಮತ್ತು ಮುಪ್ಪುಗಳಿಂದ ಮುಕ್ತವಾಗುತ್ತದೆ. ಬದುಕಿನ ನಿಜವಾದ ಬೇಗುದಿಗಳಾದ ಹುಟ್ಟು, ಸಾವು, ಮುಪ್ಪು ಮತ್ತು ರೋಗ ಎನ್ನುವಂತಹ ನಾಲ್ಕು ಸಾಮಾನ್ಯ ನಿಯಮಗಳು ಇಲ್ಲಿಯ ಚಳುವಳಿಗಾರರನ್ನು ಬಾಧಿಸುವುದಿಲ್ಲ. ಇವರಿಗೆ ಹರೇಕೃಷ್ಣವೆಂಬ ದಿವ್ಯಮಂತ್ರವೇ ಸರ್ವಸಮಸ್ಯೆಗಳಿಗೂ ಪರಿಹಾರ ಮಂತ್ರವಾಗಿ ಪರಿಣಮಿಸುತ್ತದೆ. ಶ್ರೀಕೃಷ್ಣ ಚೈತನ್ಯರ ಶ್ರದ್ಧೆ ಮತ್ತು ಅಂದು ಹೇಳಿದ ಭವಿಷ್ಯನುಡಿಯು ವರ್ತಮಾನದಲ್ಲಿ ಸತ್ಯವಾಗುವಂತಿದೆ.

೩.೩ ಪಂಚಭಾವಗಳು

ದಾಸಪಂಥ ಮತು ಚೈತನ್ಯಪಂಥಗಳ ಬಹ್ವಂಶವು ಶ್ರೀಕೃಷ್ಣನ ವರ್ಣನೆಯೇ ಆಗಿದೆ. ಈ ಎರಡೂ ಪಂಥಗಳಲ್ಲಿ ಮೂಡಿ ಬಂದಿರುವ ದಾಸ್ಯ, ಸಖ್ಯ, ಮಧುರ, ವಾತ್ಸಲ್ಯ ಹಾಗೂ ಶಾಂತಗಳೆಂಬ ಪಂಚಭಾವಗಳಲ್ಲಿ ಪರಮಪುರುಷನಾದ ಶ್ರೀಕೃಷ್ಣನು ಗೋಪಾಲಬಾಲನಾಗಿ, ರಾಧಾಕೃಷ್ಣನಾಗಿ, ಸರ್ವಾಕರ್ಷಕನಾಗಿ ಕಂಡುಬರುತ್ತಾನೆ. ಅಲ್ಲದೆ ಉತ್ತಾರಕನಾಗಿ, ಉದ್ಧಾರಕನಾಗಿಯೂ ಗಮನ ಸೆಳೆಯುತ್ತಾನೆ.

ಕೃಷ್ಣನ ಮಹತ್ತು ಹಾಗೂ ಬೃಹತ್ತುಗಳೆರಡನ್ನು ದಾಸ ಮತ್ತು ಚೈತನ್ಯಪಂಥಗಳೆರಡು ಬಗೆಬಗೆಯಾಗಿ ಕಂಡರೂ, ಎರಡರ ಮೂಲದೃಷ್ಟಿ ಮಾತ್ರ 'ಪದುಮನಾಭನ ಪಾದ ಪದುಮ ಮಧುಪ'ವನ್ನಾಗಿಯೇ ಸೇವಿಸುತ್ತದೆ. ಎರಡೂ ಪಂಥಗಳ ಭಕ್ತರು ಕೃಷ್ಣನಾಮವಾಹಿನಿಯಲ್ಲಿ ಕುಣಿದು ತಣಿದಿದ್ದಾರೆ. ಕಾಲಿಗೆ ಗೆಜ್ಜೆಕಟ್ಟಿ ನೀಲವರ್ಣನ ಗುಣವನ್ನು ಅಲಾಪಿಸುತ್ತಾ ಹಾಡಿಕುಣಿದು ಬೀದಿಗಿಳಿದಿದ್ದಾರೆ. ಭಗವಂತನ ಅವತಾರ ಸ್ವರೂಪ, ಭಕ್ತರಕ್ಷಕತ್ವ, ಲೀಲಾವಿನೋದ, ತುಂಟತನ, ಸಾತ್ವಿಕ ಕುಟಿಲತನ, ದೇವಮಾನವ ಸಮ್ಮಿಶ್ರವರ್ತನ, ಗೋಪಾಲಕತ್ವ, ಶೌರ್ಯ, ಗಾಂಭೀರ್ಯ, ವೇದಾಂತಾಚಾರ್ಯತ್ವ, ಪ್ರೇಮಗಾನ, ಜೋಗುಳ, ಜಾನಪದೀಯತೆ.....ಹೀಗೆ ಎಲ್ಲಾ ವಿಶೇಷತೆಗಳನ್ನು ಕಾಣುವ ಮೂಲಕ ಪಂಚಭಾವಗಳಲ್ಲಿ ಸ್ತುತಿಕಾರ್ಯವನ್ನು, ಭಕ್ತಿಸೇವನೆಯನ್ನು ನಡೆಸಿದ್ದಾರೆ.

ಚೈತನ್ಯಪಂಥದ ಪ್ರಕಾರ ಈ ಪಂಚಭಾವಗಳು ವ್ಯಕ್ತಿಯನ್ನು ಸ್ಥಿರಗೊಳಿಸುತ್ತದೆ. ಇಲ್ಲಿಯ ಸ್ಥಿರತೆಯಲ್ಲಿ ಪತನದ ಭಯವಿಲ್ಲ. ಈ ಅರಿವಿನ ಭಾವಕ್ಕೆ 'ಸ್ಥಾಯೀಭಾವ'ವೆಂದು ಕರೆಯಲಾಯಿತು. ಇದನ್ನು ಮೀರಿ ಮುನ್ನಡೆದಾಗ ವಿಭಾವಾದಿ ವ್ಯಭಿಚಾರಿಭಾವಗಳು ಸಾಧಿತವಾಗಿ, ರಸವಿನಿಮಯದಿಂದ ಪರಮಪ್ರಭುವಿನ ಅಲೌಕಿಕ ಸಂಪರ್ಕವುಂಟಾಗುತ್ತದೆನ್ನುವುದು ಚೈತನ್ಯಪಂಥ. ಹಾಗಾಗಿ ಕೃಷ್ಣಭಕ್ತಿರಸವೆಂಬ ಅಲೌಕಿಕ ಪ್ರೇಮ ವಿನಿಮಯಕ್ಕೆ ಸ್ಥಾಯೀಭಾವವೇ ಭದ್ರಾಶ್ರಯ. ಆದುದರಿಂದ ಎರಡೂ ಪಂಥಗಳಲ್ಲಿ ನಾವು ಕಾಣುವ ಪಂಚಭಾವಗಳು ಭಗವತ್ಪ್ರೇಮದ ಭಾವತೀವ್ರತೆಯ ಕಾರಣಗಳೆಂದು ತಿಳಿದುಕೊಳ್ಳಬೇಕಾಗಿತ್ತದೆ.

೪.೩ (ಅ) ದಾಸ್ಯಭಾವ

ಈ ಭಾವವನ್ನು ಪರಿಚಾರಿಕಾಭಾವವೆಂದು ಕರೆಯುವುದುಂಟು. ಇಲ್ಲಿ ಭಕ್ತನು ಭಗವಂತನಲ್ಲಿ ಪೂರ್ಣಪ್ರಮಾಣದಲ್ಲಿ ಶರಣಾಗುತ್ತಾನೆ. ದಕ್ಷಿಣೋತ್ತರ ಭಾರತವನ್ನು ಸಮಾನವಾಗಿ ಸ್ಪಂಧಿಸಿದ ಬಂಗಾಲದ ಚೈತನ್ಯಪಂಥ ಹಾಗೂ ಕರ್ನಾಟಕದ ದಾಸಪಂಥದ ಅನುಭಾವ ಸಾಹಿತ್ಯದಲ್ಲಿ ಈ ದಾಸ್ಯಭಾವವು ಪೂರ್ಣಪ್ರಮಾಣದಲ್ಲಿ ಆವರಿಸಿದೆ.

ಮೋರ ಸುಖ ಸೇವನೇ, ಕೃಷ್ಣೇರ ಸುಖ ಸಂಗಮೇ
ಅತಏವ ದೇಹ ದೇಕ ದಾನ ।
ಕೃಷ್ಣಮೋರೇ 'ಕಾನ್ತಾ'ಕರಿ; ಕಹೇ ಮೋರೇ 'ಪ್ರಾಣೇಶ್ವರಿ',
ಮೋರ ಹಯ ದಾಸೀ ಅಭಿಮಾನ ॥ –ಚೈತನ್ಯ ಚರಿತಾಮೃತ.

"ನನ್ನ ಸುಖವು ಕೃಷ್ಣ ಸೇವೆಯಲ್ಲಿದೆ. ಕೃಷ್ಣ ಸುಖವು ನನ್ನೊಡನೆಯ ಸಮಾಗಮದಲ್ಲಿದೆ. ಈ ಕಾರಣಕ್ಕಾಗಿ ನಾನು ನನ್ನ ದೇಹವನ್ನು ಕೃಷ್ಣನ ಪಾದಕಮಲಗಳಿಗೆ ದಾನವಾಗಿ ನೀಡುತ್ತೇನೆ. ಅವನು ನನ್ನನ್ನು ಕಾಂತೆಯಾಗಿ ಸ್ವೀಕರಿಸಿಕೊಳ್ಳುತ್ತಾನೆ ಮತ್ತು ನನ್ನನ್ನು ಪ್ರಾಣೇಶ್ವರಿಯೆಂದು ಕರೆಯುತ್ತಾನೆ. ಆಗ ನಾನು ನನ್ನನ್ನು ಅವನ ದಾಸಿಯೆಂದು ಪರಿಗಣಿಸುತ್ತೇನೆ" ಎಂಬುದು ಚೈತನ್ಯ ಚರಿತಾಮೃತದಲ್ಲಿ ಅನುಭಾವೀ ಭಕ್ತನೋರ್ವನ ಮಾತು.

'ಏನ ಬೇಡಲಿ ನಿನ್ನ ಬಳಿಗೆ ಬಂದು' ಇದು ದಾಸ್ಯಭಕ್ತಿಯಲ್ಲಿ ದಾಸಪಂಥವು ಭಗವಂತನನ್ನು ಕಂಡ ರೀತಿ. ಇಲ್ಲಿ 'ಯಾರು ಬಿಟ್ಟರು ಕಯ್ಯ ನೀ ಬಿಡದಿರು' ಎಂಬ ಬೇಡಿಕೆಯಿದೆ. 'ದಾಸನ ಮಾಡಿಕೊ ಎನ್ನಾ' ಎಂಬ ವಿನಂತಿಯಿದೆ. ಭಗವಂತನ ಕೃಪಾಕಟಾಕ್ಷ ದೊರೆಯದೇ ಇದ್ದಾಗ 'ಇನ್ನೂ ದಯೆ ಬಾರದೇ ದಾಸನ ಮೇಲೆ' ಎಂಬ ಯಾಚನೆಯೂ ಇದೆ.

ನಿನ್ನ ದಾಸರ ದಾಸರು ಪೊದ್ದ ವಸನವೇ ಎನಗಾಗಲಿ
ನಿನ್ನ ದಾಸರು ಉಂಡ ಎಂಜಲು ಎನಗಾಗಲಿ
ನಿನ್ನ ದಾಸರ ಪಾದೋದಕವೇ ಎನಗಾಗಲಿ
ನಿನ್ನ ದಾಸರು ಇಟ್ಟಾಭರಣವೇ ಎನಗಾಗಲಿ ॥ –ವಿಜಯದಾಸರು

ಇದು ದಾಸ್ಯಭಾವಕ್ಕೆ ಸಲ್ಲುವ ನಿಜವಾದ ವ್ಯಾಖ್ಯಾನ. 'ಸಕಲವೆನಗೆ ನೀನೇ ಹರಿಯೆ' ಎನ್ನುವ ಮೂಲಕ ದಾಸ್ಯದ ಪರಾಕಾಷ್ಠೆಯನ್ನು ಮುಟ್ಟುತ್ತಾರೆ ಕನ್ನಡದ ದಾಸವರೇಣ್ಯರು. ಅಂತೆಯೇ ಚೈತನ್ಯಪಂಥವೂ ಕೂಡ ದಾಸ್ಯಸ್ಥಿತಿಯನ್ನು ಮೆಚ್ಚಿಕೊಳ್ಳುತ್ತದೆ. ಈ ಮೂಲಕವಾಗಿ ತಾನು ಶಾಶ್ವತವಾದ ಪರಮೋನ್ನತನ ಕರುಣಾಸಂಪರ್ಕವನ್ನು ಪಡೆಯಬಹುದೆಂದು ಭಾವಿಸಿಕೊಳ್ಳುತ್ತದೆ. ಹಾಗಾಗಿ ಇಲ್ಲಿ ಭಕ್ತನೋರ್ವನ ಸ್ವಾಭಾವಿಕವಾದ ಒಲವೊಂದು ಜಾಗೃತವಾಗಿ, ಮಾಯೆಯನ್ನು ಬಿಟ್ಟು ಪ್ರಭುಸೇವೆಯಲ್ಲಿ ನಿರತನಾಗಲು ತವಕಿಸುತ್ತದೆ.

ಪ್ರತ್ಯಹ ಚನ್ದನ ಪರಾಯ, ಯಾವತ್ ಹೈಲ ಅನ್ತ ।
ತಥಾಯ ರಹಿಲ ಪುರಿ ತಾವತ್ ಪರ್ಯನ್ತ ॥[೨೦]

ಗೋಪೀನಾಥನ ವಿಗ್ರಹಶರೀರಕ್ಕೆ ಮಾಧವೇಂದ್ರಪುರಿಯವರು ಶ್ರೀಗಂಧಚೂರ್ಣವನ್ನು ಲೇಪಿಸುವಲ್ಲಿ ದಾಸ ಸೇವೆಗೆ ಒಳಗಾಗುತ್ತಾರೆ. 'ನಮೋ ನಾರಾಯಣಾಯ ಬಲಿ ನಮಸ್ಕಾರ ಕೈಲ'[೨೧] ಎನ್ನುವ ಮಾತು, ಶ್ರೀಕೃಷ್ಣ ಚೈತನ್ಯರನ್ನು ಪರಮ ಪುರುಷನೆಂದು, ನಂದರಾಜನ ಮಗನಾದ ಶ್ರೀಕೃಷ್ಣನೆಂದು ತಿಳಿದ ಮೇಲೆ ಮೂಡಿಬರುತ್ತದೆ. 'ಕಾಶೀಮಿಶ್ರ ಆದಿಯುತ ನೀಲಾಚಲವಾಸೀ । ಶರಣ ಲ ಇಲ ಸಬೇ ಪ್ರಭುಪದೇ ಆಸಿ'[೨೨] ಎನ್ನುವ ಮೂಲಕ ಸಾರ್ವಭೌಮ ಭಟ್ಟಾಚಾರ್ಯರು ತಾನು ಹಿರಿಯನಾಗಿದ್ದರೂ ಅವರ ದಾಸ್ಯವನ್ನು ಬಯಸಿ ಅವರ ಪಾದಪದ್ಮಗಳಿಗೆ ಶರಣಾಗಿ ಬಿಡುತ್ತಾರೆ.

ದಾಸಪಂಥದಲ್ಲಿ ಬರುವ 'ದಾಸ ದಾಸರ ಮನೆಯ ದಾಸಿಯರ ಮಗನಾನು' ಎಂಬ ದಾಸ್ಯದ ತತ್ವಾರ್ಥವನ್ನು ಚೈತನ್ಯಪಂಥವು ಪೂರ್ಣವಾಗಿ ಸ್ವೀಕರಿಸಿಕೊಂಡಂತಿದೆ. ಈ ದೆಸೆಯಲ್ಲಿ, ಚೈತನ್ಯ ಚರಿತಾಮೃತವು ದಾಸ್ಯಭಾವಕ್ಕೆ ಕೊಡುವ ಉತ್ತಮ ಉದಾಹರಣೆಯೆಂದರೆ ಒರಿಸ್ಸಾದ ಪ್ರತಾಪರುದ್ರ ಮಹಾರಾಜನ ದಾಸತ್ವ. ಅವನು ಚೈತನ್ಯ ಮಹಾಪ್ರಭುಗಳಲ್ಲಿ 'ಪ್ರಭು, ನಾನು ನಿಮ್ಮ ಸೇವಕರ ಪರಮವಿಧೇಯನಾದ ಸೇವಕ. ನೀವು ನನ್ನನ್ನು ನಿಮ್ಮ ಸೇವಕರ ಸೇವಕನನ್ನಾಗಿ ಸ್ವೀಕರಿಸಬೇಕೆಂಬುದು ನನ್ನಾಸೆ' ಎಂದು ವಿನಂತಿಸಿ ಕೊಳ್ಳುತ್ತಾನೆ. ಈ ಕಲ್ಪನೆಯು ದಾಸಸಾಹಿತ್ಯದಲ್ಲಿ ಸಿಗುವ ಕೆಲವೊಂದು ಉದಾಹರಣೆಗಳಿಗೆ ಹತ್ತಿರವಾಗಿಯೇ ತೋರುತ್ತದೆ. ಪ್ರತಾಪರುದ್ರನಂತೆಯೇ ಚೈತನ್ಯಪಂಥದಲ್ಲಿ ಬರುವ ಖೋಲಾವೇಚಾ ಶ್ರೀಧರರದ್ದೂ ಪೂರ್ವದಲ್ಲಿ ವ್ಯಕ್ತವಾದದ್ದು ಅದೇ ರೀತಿಯ ಭಾವನೆ. ಅವರು ಕಡುಬಡವರಾಗಿದ್ದು, ಅನಂತರದಲ್ಲಿ ಸೇವಕರ ಸೇವಕನಾಗಿಯೇ ಉಳಿಯುವಂತೆ ಚೈತನ್ಯ ಮಹಾಪ್ರಭುಗಳಲ್ಲಿ ವರವನ್ನು ಕೇಳುತ್ತಾರೆ. ಹಾಗಾಗಿ ಸೇವಕರ ಸೇವೆಯೆನ್ನುವುದು ಅತ್ಯಂತ ಶ್ರೇಷ್ಠವಾದ ದಾಸತ್ವವಾಗಿದೆ. ಒಟ್ಟಿನಲ್ಲಿ ಇಲ್ಲಿ ಎರಡೂ ಪಂಥಗಳು ದಾಸ್ಯಭಾವದಲ್ಲಿ ಸಮಾನ ಆಸಕ್ತಿಯನ್ನು ತೋರಿಸುತ್ತವೆ ಎನ್ನಬೇಕು.

೫.೩ (ಆ) ಸಖ್ಯಭಾವ (ಸ್ನೇಹಭಾವ)

ದಾಸಪಂಥ ಮತ್ತು ಚೈತನ್ಯಪಂಥಗಳು ಪಂಚಭಾವಗಳಲ್ಲೊಂದಾದ ಸಖ್ಯಭಾವದಲ್ಲೂ ಸಮಾನವಾಗಿಯೇ ಸ್ಪಂದಿಸಿವೆ. ಅಲ್ಲಿಯ ಸಾಹಿತ್ಯ ವಿವೇಚನೆಯಲ್ಲಿ ಈ ಭಾವವು ಭಗವಂತನನ್ನು ಗೆಳೆಯನಾಗಿ ಕಂಡುಕೊಳ್ಳುತ್ತದೆ. ಹಾಗಾಗಿ ಈ ಭಾವವನ್ನು ಸ್ನೇಹಭಾವವೆಂದೂ ಕರೆದದ್ದಿದೆ. 'ಕರುಣಾಕರ ನೀನೆಂಬುವುದ್ಯಾಕೋ ಭರವಸೆ ಇಲ್ಲೆನಗೆ' ಎನ್ನುವ ಮೂಲಕ ದಾಸಶ್ರೇಷ್ಠರ ಭಾವವು ಸಖ್ಯತನಕ್ಕೆ ತೆರಳುತ್ತದೆ. 'ಎನಗೂ ಆಣೆ ರಂಗ ನಿನಗೂ ಆಣೆ', 'ಇವಗೇಕೆ ಪರಿಮಳ ಇವಗೇಕೆ ಶೃಂಗಾರ', 'ಕೊಟ್ಟು ಹೋಗೋ ಎನ್ನ ಸಾಲವ' ಈ ಎಲ್ಲಾ ರಚನೆಗಳು ಭಕ್ತನು ಭಗವಂತನೊಂದಿಗೆ ಕಂಡುಕೊಂಡ ಗೆಳೆತನದ ತೀವ್ರತೆಗೆ ಮತ್ತು ಸಹಜತೆಗೆ ಉತ್ತಮ ಮಾದರಿಗಳಾಗುತ್ತವೆ. 'ನಿನ್ನ ದರುಶನಕೆ ಬಂದವನಲ್ಲವೋ, ಮಹಾಪುಣ್ಯವಂತರ ದಿವ್ಯಚರಣ ನೋಡಲು ಬಂದೆ' ಎನ್ನುವಲ್ಲಿ ವಿಜಯದಾಸರು ಸಖ್ಯಭಾವದ ವ್ಯಾಪಕತೆಯನ್ನು ತೋರಿಸಿ ಕೊಟ್ಟಿದ್ದಾರೆ. ಅದೆಷ್ಟೋ ಕಡೆಗಳಲ್ಲಿ ಸಖ್ಯಭಾವದ ನಿಂದಾಸ್ತುತಿಯಲ್ಲೂ ಒಂದು ರೀತಿಯ ರಮ್ಯತೆಯನ್ನು ಕಂಡುಕೊಡವರು ಹರಿಕೀರ್ತನದಾಸರು. ಆದರೆ ಚೈತನ್ಯಪಂಥದ ಅನುಭಾವಿಗಳು ದಾಸ್ಯಭಾವದಿಂದ ಬಂದ ಅಲೌಕಿಕಪ್ರೇಮವು ಸಖ್ಯಭಾವದೊಂದಿಗೆ ಇನ್ನಷ್ಟು ವರ್ಧಿಸುತ್ತದೆ ಎನ್ನುತ್ತಾರೆ.

ಮಲಯಜ ಆನ ಯಾಇೌ ನೀಲಾಚಲಾ ಹೈತೇ ।
ಅನ್ಯೇ ಹೈತೇ ನಹೇ ತುಮಿ ಚಲಹ ತ್ವರಿತೇ ॥[೨೩]

(ಶ್ರೀಗಂಧದ ಚೆಕ್ಕೆಯನ್ನು ಜಗನ್ನಾಥಪುರಿಯಿಂದ ತೆಗೆದುಕೊಂಡು ಬಾ. ಬೇಗ ಹೋಗು. ಈ ಕೆಲಸ ಬೇರೆ ಯಾರೂ ಮಾಡಲಾರರು. ಆದ್ದರಿಂದ ನೀನೇ ಹೋಗಬೇಕು)

ಇಲ್ಲಿ ಗೌಡೀಯ ಪಂಥವೆನಿಸಿದ ಚೈತನ್ಯಪಂಥವು ದಾಸಪಂಥವನ್ನು ಹಿಂಬಾಲಿಸುತ್ತದೆ. ಹಾಸ್ಯ, ನಗು, ಚೇಷ್ಟೆಗಳೆಲ್ಲ ಪರಮಸ್ಥಾನದಲ್ಲಿದ್ದುಕೊಂಡು ಲೌಕಿಕಬಂಧನದಿಂದ ಮುಕ್ತವಾಗಿ ಬಿಡುತ್ತದೆ. ಒಂದೆಡೆ ಮಾಧವೇಂದ್ರಪುರಿಯವರಿಗೆ ಗೋಪಾಲ ವಿಗ್ರಹವು ಕನಸಿನಲ್ಲಿ ದರ್ಶನವಿತ್ತು, ನನ್ನ ದೇಹದ ಕಾವು ಇನ್ನೂ ತಗ್ಗಿಲ್ಲ. ಮಲಯಪ್ರಾಂತ್ಯದಿಂದ ಶ್ರೀಗಂಧವನ್ನು ತಂದು, ಅದನ್ನು ಅರೆದು ನನ್ನ ಮೈಗೆ ಲೇಪಿಸು. ಆಗ ನನ್ನ ಮೈಯ ಕಾವು ಕಡಿಮೆಯಾಗುತ್ತದೆ. 'ಮಲಯಜ ಚಂದನ ಲೇಪತಬೇ ಸೇ ಜುಡಾಯ'[೨೪] ಎಂಬ ಮಾತೊಂದು ಭಗವಂತನಿಂದಲೇ ಸಖ್ಯತನದ ರೂಪದಲ್ಲಿ ಮೂಡಿಬರುವುದು ವಿಶೇಷ. ಮಾಧವೇಂದ್ರಪುರಿಗಳು ಈ ಕೆಲಸವನ್ನು ಸಖ್ಯಭಾವದಿಂದಲೇ ಪೂರೈಸುತ್ತಾರೆ. ಆದುದರಿಂದಲೇ ಇದೊಂದು ಸ್ನೇಹಭಾವವಾಗಿಯೂ ತೋರುತ್ತದೆ. ಚೈತನ್ಯಪಂಥವು ಭಗವಂತನೊಂದಿಗೆ ನಂಟನ್ನು ಸ್ಥಾಪಿಸಿಕೊಳ್ಳಬೇಕೆಂದು ಒತ್ತಿಹೇಳುವುದರ ಉದ್ದೇಶವೇ ಸಖ್ಯಭಾವದ ಪ್ರಾಮುಖ್ಯತೆಗಾಗಿ. ಅದಕ್ಕೆ ಅರ್ಜುನನು ಕೃಷ್ಣನೊಂದಿಗೆ ಪರಮಾಪ್ತ ಸಖನಾಗಿದ್ದುದೇ ಚೈತನ್ಯ ಪಂಥದ ಸಮರ್ಥನೆಗೆ ಮುಖ್ಯಾಧಾರವಾಗುತ್ತದೆ. ಹೀಗಿದ್ದರೂ, ಈ ಕಲ್ಪನೆಗಿಂತಲೂ ಮುಂದೆ ಸರಿಯುತ್ತಾರೆ ಶ್ರೀಕೃಷ್ಣ ಚೈತನ್ಯರು. ಅವರ ಪ್ರಕಾರ ಭಗವಂತನ ಸಖ್ಯತನ ಸಂಪಾದನೆಗೆ ಪರಿಮಿತಿಗಳಿಲ್ಲ. ಅದು ಭಯದಿಂದಲೋ,

ಅಥವಾ ಅಭಿಮಾನದಿಂದಲೋ ಪಡೆಯಬೇಕಾಗಿಲ್ಲ. ಅದು ಕೇವಲ ಮುಕ್ತವಾದ ವಾತಾವರಣದಿಂದ ಸಿಗಲುಸಾಧ್ಯವೆಂಬುದು ಅವರ ನಿಲುವು. ದಾಸಪಂಥವು 'ನೀನ್ಯಾಕೋ ನಿನ್ನ ಹಂಗ್ಯಾಕೋ' ಎಂದು ಹೇಳಿಕೊಳ್ಳುವುದು ಇದೇ ಕಲ್ಪನೆಯಿಂದ. ಹೀಗೆ, ಸಖ್ಯಭಾವಕ್ಕೆ ಎರಡೂ ಪಂಥಗಳಲ್ಲಿ ಸಮಾನವಾದ ಪ್ರಾಶಸ್ತ್ಯವಿದೆ.

೫.೩ (ಇ) ವಾತ್ಸಲ್ಯಭಾವ

ವಾತ್ಸಲ್ಯಭಾವವನ್ನು ಮಾತೃಭಾವವೆಂದು ಕೆಲವರು ಕರೆಯುವುದುಂಟು. ಕಾರಣವೆಂದರೆ, ಈ ಭಾವವು ತಾಯಿ ಮತ್ತು ಮಗನಿಗೆ ಸಂಬಂಧಿಸಿದುದು. ಜಗತ್ತಿನಲ್ಲಿ ಇತರ ಯಾವುದೇ ಸಾಹಿತ್ಯವೂ ಕೂಡ ಭಗವಂತನನ್ನು ಮಗನೋಪಾದಿಯಾಗಿ ಕಂಡದ್ದಿಲ್ಲ. ಆದರೆ ಅಂತಹ ಅಪೂರ್ವವೆನಿಸಿದ ಕಲ್ಪನೆಯೊಂದು ಭಾರತೀಯ ಸಾಹಿತ್ಯದಲ್ಲಿದೆ. ಇಲ್ಲಿ ಕರ್ನಾಟಕದ ದಾಸಪಂಥ ಹಾಗೂ ಬಂಗಾಳದ ಚೈತನ್ಯಪಂಥಗಳು ಭಗವಂತನನ್ನು ವಾತ್ಸಲ್ಯಭಾವದಲ್ಲಿ ಕಂಡುಕೊಳ್ಳಲು ಮುಂದಾಗುತ್ತವೆ. ಮಗನಾದ ಭಗವಂತನಿಗೆ ಇಲ್ಲಿಯ ತಾಯಿಯು ಶುಚಿರುಚಿಯಾದ ಉಣಿಸನ್ನು ನೀಡಿ, ಶರೀರಕ್ಕಾಗಿ ಅಲಂಕಾರ, ಪ್ರಸಾಧನಗಳನ್ನು ತೊಡಿಸುತ್ತಾಳೆ. ಆ ತಾಯಿಗೆ ಮಗುವೆನಿಸುವ ರಂಗಯ್ಯನನ್ನು ಮುದ್ದಾಡುವ ಕನಸೊಂದೆಡೆಯಾದರೆ, ತಪ್ಪಿಸಿಕೊಂಡು ತಿರುಗಾಡುವ ತುಂಟ ಮಗನನ್ನು ಉಳಿದ ಮಾನಿನಿಯರು ತಡೆಯಬಾರದೆ? ಎಂಬ ಪ್ರಶ್ನೆಯು ಆಕೆಯಲ್ಲಿ ಹುಟ್ಟಿಕೊಳ್ಳುತ್ತದೆ.

ಎಂದಪ್ಪಿ ಕೊಂಬೆ । ರಂಗಯ್ಯನ । ಎಂದಪ್ಪಿಕೊಂಬೆ ॥
ಎಂದಪ್ಪಿಕೊಂಬೆ ನಾನೆಂದು ಮುದ್ದಾಡುವೆ
ಎಂದಿಗೆ ಸವಿ ಮಾತನಾಡಿ ನಾ ದಣಿವೆ ॥ –ಪುರಂದರದಾಸರು
ಮಗುವ ತಡೆಯಬಾರದೆ ಮಾನಿನಿಯರು
ಸುಗುಣ ಚೆನ್ನಿಗನೆಂಬ ಸೊಬಗುಳ್ಳ ಮಗುವ ॥ –ಕನಕದಾಸರು

ಯಾವುದೇ ಭಕ್ತಿಪಂಥವಿರಲಿ. ಭಗವಂತನ ಕುರಿತಾಗಿ ಭಕ್ತನಲ್ಲಿ ವಾತ್ಸಲ್ಯಭಾವವು ಮೂಡಿತೆಂದರೆ ಅದು ಸ್ವಭಾವೋಕ್ತಿಯಿಂದ ಮಾತ್ರಸಾಧ್ಯ. ದಾಸಪಂಥದಲ್ಲಿ ಕಾಣುವ 'ಆಡಿಸಿದಳಾ ಯಶೋದೆ', 'ಮುದ್ದು ತಾರೋ ರಂಗ', 'ಮೆಲ್ಲ ಮೆಲ್ಲನೆ ಬಂದನೆ', 'ಮನೆಯೊಳಗಾಡೋ ಗೋವಿಂದ', 'ಜೋ ಜೋ ಶ್ರೀಕೃಷ್ಣ ಪರಮಾನಂದ' ಮೊದಲಾದ ಪ್ರಯೋಗಗಳು ಮಾತೃವಾತ್ಸಲ್ಯದಿಂದ ಮೂಡಿಬಂದವುಗಳು. ಸಖ್ಯಪ್ರೇಮದಲ್ಲಿ ಸೃಜಿಸಿದ ಉತ್ತುಂಗ ಭಾವವು ಇಲ್ಲಿ ದೃಢಗೊಳ್ಳುತ್ತದೆ. ಇಲ್ಲಿ ಭಕ್ತನು ಭಗವಂತನ ಪೋಷಕವರ್ಗಕ್ಕೆ ಸೇರಿಕೊಳ್ಳುತ್ತಾನೆ. ಭಕ್ತನು ತಂದೆಯಾಗಿಯೋ ಅಥವಾ ತಾಯಿಯಾಗಿಯೋ ಉಳಿದುಕೊಂಡು ಭಗವಂತನನ್ನು ಶಿಶುವಾಗಿ ಕಂಡು ಜೋಗುಳವನ್ನು ಹಾಡುವ ಕ್ರಮವೊಂದು ಮುಂದುವರೆಯುತ್ತದೆ. ಕೆಲವೊಮ್ಮೆ ದೇವೋತ್ತಮನು ಪಾಲಕನಿಂದ ದಂಡನೆಗೂ ಗುರಿಯಾಗುತ್ತಾನೆ. ಹಾಗಾಗಿ ಇಲ್ಲಿ ಭಗವಂತನೂ ಕೂಡ ಭಕ್ತನಾಧೀನನಾಗುತ್ತಾನೆ.

ವಾತ್ಸಲ್ಯಭಾವದ ರಚನೆಗಳು ದಾಸಸಾಹಿತ್ಯದಲ್ಲಲ್ಲದೆ ಚೈತನ್ಯಪಂಥದ ಸಾಹಿತ್ಯದಲ್ಲೂ ಅತಿಯಾಗಿ ಸಿಗಲುಸಾಧ್ಯ. ಆದರೆ ಎರಡು ಪಂಥಗಳಲ್ಲಿ ಈ ಭಾವವು ನೆರವೇರುವುದು ಮಾತ್ರ ತಾಯಿ ಹಾಗೂ ಮಗುವಿನ ನಡುವೆ. ದಾಸಪಂಥದಲ್ಲಿ ಯಶೋದೆ ಹಾಗೂ ಕೃಷ್ಣನಲ್ಲಿ ಲಾಲಿತ್ಯಭಾವವು ಹೊಮ್ಮಿಕೊಂಡು ಸಾಹಿತ್ಯ ರೂಪದಲ್ಲಿ ಸಹಜಕ್ರಿಯೆಯನ್ನು ಮುಟ್ಟಿದರೆ, ಚೈತನ್ಯಪಂಥದಲ್ಲಿ, ಬಾಲಚೈತನ್ಯ ಹಾಗೂ ಶಚೀಮಾತೆಯರ ನಡುವೆ ಇಂತಹ ಪ್ರಸಂಗವು ನೆರವೇರುತ್ತದೆ.

ಏಕದಿನ ಶಚೀ ಖ–ಇ–ಸನ್ದೇಶ ಆನಿಯಾ ।
ಬಾಬಾ ಭರಿ ದಿಯಾ ಬೈಲ,–ಖಾಓ ತ ಬಸಿಯಾ ॥[೨೫]

ಇದು ಚೈತನ್ಯರ ಬಾಲಲೀಲೆಗೆ ಸಂಬಂಧಿಸಿದ ಮಾತು. ಚೈತನ್ಯರು ಓರಗೆಯ ಮಕ್ಕಳೊಡನೆ ಆಟವಾಡುವುದರಲ್ಲಿ ಮಗ್ನರಾಗಿದ್ದಾಗ, ಶಚೀಮಾತೆಯು ನೆನೆಸಿದ ಅವಲಕ್ಕಿಯನ್ನೂ, ಒಂದಿಷ್ಟು ಸಿಹಿತಿಂಡಿಯನ್ನೂ ಬಟ್ಟಲಲ್ಲಿ ತುಂಬಿಕೊಂಡು ಬಂದು ಮಗನಿಗೆ ಕೊಟ್ಟು, ಒಂದುಕಡೆ ಕುಳಿತು ತಿನ್ನುವಂತೆ ಹೇಳಿ, ಮನೆಗೆಲಸಕ್ಕೆ ತೆರಳಿದರು. ತಾಯಿಯು ಮರೆಯಾದುದನ್ನು ಕಂಡ ಬಾಲಚೈತನ್ಯರು ಅವಲಕ್ಕಿಯನ್ನು ಬಿಟ್ಟು ಮಣ್ಣನ್ನು ತಿನ್ನಲು ಪ್ರಾರಂಭಿಸಿದರು. ತಾಯಿ ಶಚೀಮಾತೆಯು ಧಾವಿಸಿಬಂದು ಕೈಯಲ್ಲಿದ್ದ ಮಣ್ಣನ್ನು ಕಿತ್ತುಕೊಂಡು ವಿಚಾರಿಸಲು ಮುಂದಾಗುತ್ತಾಳೆ. ದಾಸಸಾಹಿತ್ಯದಲ್ಲೂ ಇದಕ್ಕೆ ಪೂರಕವಾಗಿ, 'ಮಮ್ಮು ಉಣ್ಣುವುತೇನೆ, ಮಣ್ಣು ತಿನ್ನುವುದಿಲ್ಲ, ಅಮ್ಮ ಅಳುವುದಿಲ್ಲ' ಮುಂತಾದ ಮಾತುಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಲಾಲಿತ್ಯಭಾವಕ್ಕೆ ಚೈತನ್ಯಪಂಥದಲ್ಲಿ ಸಿಗುವ ಉತ್ತಮ ಉದಾಹರಣೆಯೆಂದರೆ, ಚೈತನ್ಯರು ತನ್ನ ಜೊತೆಗಾರರೊಂದಿಗೆ ಮಾಡಿದ ಹೊಡೆದಾಟ ಹಾಗೂ ಅಕ್ಕಪಕ್ಕದ ಮನೆಗಳಲ್ಲಿ ಮಾಡುವ ಕಳ್ಳತನಕ್ಕಾಗಿ ತನ್ನ ತಾಯಿಯಲ್ಲಿ ಮಾಡುವ ನಿವೇದನೆ. ಇಲ್ಲಿ ಬರುವ ಅಕ್ಕಪಕ್ಕದ ಮನೆಯವರ ದೂರು ಚೈತನ್ಯರ ಕುರಿತಾಗಿದ್ದು, ಶಚೀಮಾತೆಯು ಮಗನನ್ನು ಗದರಿಸುವಂತೆ ಮಾಡುತ್ತದೆ. ಆಕೆಯೇ ಹೇಳುವಂತೆ, 'ಇತರರ ವಸ್ತುಗಳನ್ನು ನೀನೇಕೆ ಕದಿಯುತ್ತೀಯೆ? ಜೊತೆಯ ಮಕ್ಕಳನ್ನು ನೀನೇಕೆ ಹೊಡೆಯುತ್ತೀಯೆ? ಇತರರ ಮನೆಗಳಿಗೆ ನೀನು ಹೋಗುವುದಾದರೂ ಏಕೆ? ಎಂಬ ಪ್ರಶ್ನೆಗಳು ದಾಸಸಾಹಿತ್ಯದಲ್ಲಿ ಬರುವ 'ಮನೆಯೊಳಗಾಡೋ ಗೋವಿಂದ ನೀನು ನೆರೆಮನೆಗಳಿಗೆ ಪೋಗುವುದ್ಯಾವ ಚೆಂದ' ಮೊದಲಾದ ರಚನೆಗಳಿಗೆ ಸಾಮ್ಯವನ್ನು ಕಲ್ಪಿಸುತ್ತದೆ.

ಒಟ್ಟಿನಲ್ಲಿ ಭಕ್ತಪಾಲಕನಾದ ಭಗವಂತನು ಭಕ್ತನಿಂದಲೇ ಪಾಲಿಸಿಕೊಳ್ಳಬೇಕಾದುದು ಮತ್ತು ಪಾಲಿಸಿಕೊಳ್ಳಬೇಕಾದವನೇ ಪಾಲಿಸಬೇಕಾದುದು ವಾತ್ಸಲ್ಯಭಾವದ ವಿಶೇಷತೆಯಾಗುತ್ತದೆ. ಚೈತನ್ಯಪಂಥದ ಶಚೀಕಂದನ ಬಾಲಲೀಲೆಗೂ ದಾಸಪಂಥದ ಯಶೋದೆಯ ಕಂದನ ಬಾಲಲೀಲೆಗೂ ಹೋಲಿಕೆಯೇ ಹೆಚ್ಚಾಗಿ ತೋರುತ್ತದೆ. ಚೈತನ್ಯರು ಮಗುವಾಗಿದ್ದಾಗ ನೆರೆಹೊರೆಯ ಮನೆಗಳಲ್ಲಿ ಮಾಡುವ ತಿನಿಸು, ಅನ್ನ ಹಾಗೂ ಹಾಲಿನ ಕಳ್ಳತನ, ಕೆಲವೊಮ್ಮೆ ಅನ್ನದ ಮಡಕೆಯನ್ನು ಒಡೆದು ಬಿಡುತ್ತಿದ್ದುದು, ಮಕ್ಕಳನ್ನು ಛೇಡಿಸಿ ಅಳಿಸುವುದು, ಮಕ್ಕಳನ್ನು ಹೊಡೆಯುವುದು.....ಇವೆಲ್ಲವುಗಳು ಲಾಲಿತ್ಯಭಾವಕ್ಕಾಗಿ ಚೈತನ್ಯಪಂಥದಲ್ಲಿ ಸಿಗುವ ಉತ್ತಮ

ಉದಾಹರಣೆಗಳು. ಅಲ್ಲದೆ ಈ ಎಲ್ಲಾ ರಚನೆಗಳಿಗೆ ಸಮತೂಕವಾಗಿ ದಾಸಸಾಹಿತ್ಯದಲ್ಲಿ ಸಿಗುವ ಲಾಲಿತ್ಯಭಾವದ ಉದಾಹರಣೆಗಳು ಸರ್ವ ಸಮಾನವಾಗಿ ಹೊದಾಣಿಕೆಯಾಗುವುದು ವಿಶೇಷ.

೫.೩ (ಈ) ಮಧುರಭಾವ

ಮಧುರಭಾವದ ವಿವೇಚನೆಯಲ್ಲಿ ಎರಡೂ ಪಂಥಗಳ ರಚನೆಗಳು ಪ್ರೇಮಗೀತೆಗಳಾಗಿ ಪರಿಣಮಿಸಿದೆ. ಆದರೂ ಅಧ್ಯಯನದ ದೃಷ್ಟಿಯಿಂದ ದಾಸಪಂಥದ ಮಧುರಭಾವ ಕೀರ್ತನೆಗಳನ್ನು, ಗೋಪಿಯ ಕೃಷ್ಣದರ್ಶನದ ಹಂಬಲ, ಗೋಪಿಯರ ಪ್ರೇಮೋನ್ಮಾದ, ಕೃಷ್ಣನ ಚೇಷ್ಟೆಯ ನಿಲುಗಡೆಗಾಗಿ ಗೋಪಿಯರಿಂದ ಪ್ರಾರ್ಥನೆ, ಇತ್ಯಾದಿಯಾಗಿ ವರ್ಗೀಕರಿಸಬಹುದು. 'ಸೆರಗ ಬಿಡೋ ರಂಗ', 'ಕಾಣದೆ ನಿಲ್ಲಲಾರೆ ಕಮನೀಯ ಮೂರ್ತಿಯ', 'ರಂಗನೇತಕೆ ಬಾರನು', ಈ ಮೊದಲಾದ ಕೀರ್ತನೆಗಳು ಇಲ್ಲಿಯ ಸುಂದರ ಪ್ರೇಮಗೀತೆಗಳು. ಇಲ್ಲಿ ಏನಿದ್ದರೂ ಭಕ್ತ ಹಾಗೂ ಭಗವಂತನ ನಡುವೆ ದಾಂಪತ್ಯಭಾವಕ್ಕೆ ಆದ್ಯತೆ. ಭಕ್ತನು ಇನಿಯಳಾದಾಗ ಭಗವಂತನು ಇನಿಯನಾಗುತ್ತಾನೆ. ಪರಸ್ಪರ ಪ್ರೇಮಾರಾಧನೆ ನಡೆದು ನಿಷ್ಕಲ್ಮಷ ಭಕ್ತಿಯೊಂದು ಹೆಚ್ಚು ಸ್ಫುಟಗೊಳ್ಳುತ್ತದೆ. ಆದರೂ ಹರಿಭಕ್ತಿಸಾರದ ಪ್ರೇಮೋನ್ಮಾದದ ಕ್ರಿಯೆಯು ದಾಸಸಾಹಿತ್ಯದಲ್ಲಿ ಹೆಚ್ಚಾಗಿ ನಡೆದಿದ್ದರೆ ಅದು ಶ್ರೀಪಾದರಾಜ ಮತ್ತು ವ್ಯಾಸರಾಯರ ರಚನೆಗಳಲ್ಲಿ ಎನ್ನುವುದು ಗಮನಾರ್ಹವಿಚಾರ. ಉದಾಹರಣೆಗೆ ಕೆಳಗಿನ ಕೀರ್ತನೆಗಳನ್ನು ಗಮನಿಸಬಹುದು.

ಇನ್ನಿವನು ಈಗ ಬರಲಿದಕೆ ಬಗೆಯೇನು
ಚೆನ್ನಾಗಿ ಪೇಳೆ ರಮಣಿ ।
ಮನ್ನಿಸಿ ಮಮತೆಯಲಿ ಮನವ ಸೆಳಕೊಂಡೊಯ್ದು
ಅನ್ಯರನು ಕೂಡುವನೆ ಕೆಳದಿ ಕೆಳದಿ ॥ – ಶ್ರೀಪಾದರಾಜರು

ಎಲ್ಲಿ ಮಾಯವಾದನೆ ರಂಗಯ್ಯನು । ಎಲ್ಲಿ ಮಾಯವಾದ ಫುಲ್ಲನಾಭ ಕೃಷ್ಣ ।
ಚಲ್ವಗಂಗಳೆಯರು ಹುಡುಕಹೋಗುವ ಬನ್ನಿ ॥
ಮಂದಗಮನೆಯರೆಲ್ಲ ಕೃಷ್ಣನ ಕೂಡೆ । ಚಂದದಿ ಇದ್ದೆವಲ್ಲ ।
ಕಂದರ್ಪನ ಬಾಧೆಗೆ ಗುರಿಯ ಮಾಡಿದನಲ್ಲ
ಮಂದಮತಿಯು ನಮಗೆ ಬಂದು ಒದಗಿತಲ್ಲ ॥ – ವ್ಯಾಸರಾಯರು

ಮಧುರಭಾವದ ಪ್ರೇಮಗಾನವು ಕೇವಲ ದಾಸಪಂಥಕ್ಕೆ ಮೀಸಲಾಗಿರದೆ ಚೈತನ್ಯಪಂಥದಲ್ಲೂ ಅದು ವಿಜೃಂಭಿಸುತ್ತದೆ. ಸ್ವತಃ ಶ್ರೀಕೃಷ್ಣಚೈತನ್ಯರೇ ಪರಮಪುರುಷನಾದ ಶ್ರೀಕೃಷ್ಣನನ್ನು ರಾಧಾರಾಣಿಯಂತೆ ಪ್ರೇಮಿಸಿ ಬದುಕಿದವರು. ರಾಧೆಯನ್ನು ಅರ್ಥೈಸುವ ಸಲುವಾಗಿಯೇ ಅವರು ಅವತರಿಸಿದರೆಂಬುದು ಗೌಡೀಯಸಾಹಿತ್ಯವು ಸಮರ್ಥಿಸುತ್ತದೆ.

ಸೇಇ ಭಾವ ಸೇಇ ಕೃಷ್ಣ ಸೇಇ ವೃಂದಾವನ ।
ಯಬೇ ಪಾಇ ತಬೇ ಹಯ ವಾಂಚಿತ ಪೂರಣ ॥[೨೬]

(ಅದೇ ಸನ್ನಿವೇಶ, ಅದೇ ಕೃಷ್ಣ, ಅದೇ ವೃಂದಾವನ. ನಾನು ಆತನನ್ನು ಮತ್ತೆ ಪಡೆದರೆ ಇಚ್ಛಿತೋದ್ದೇಶವು ಪೂರ್ಣವಾಗುತ್ತದೆ)

ಕೃಷ್ಣನೊಂದಿಗೆ ಸಮಾಗಮಿಸಲು ವೃಂದಾವನದ ಶಾಂತ ಪರಿಸರವನ್ನು ರಾಧಾರಾಣಿಯು ಇಷ್ಟ ಪಡುವ ರೀತಿಯಿದು.

ಯಾ ತೇ ಲೀಲ ರಸ ಪರಿಮಲೋದ್ಗಾರಿ ವನ್ಯಾಪರೀತಾ
ಧನ್ಯಾ ಕ್ಷೌಣಿ ವಿಲಸತಿ ವ್ರತಾ ಮಾಥುರೀ ಮೂಧುರೀ ಭಿಃ ।
ತತ್ರಾ ಸ್ಮಾಭಿಸ್ ಚಟುಲ ಪಶುಪೀ ಭಾವ ಮುಗ್ಧಾಂತರಾಭಿಃ
ಸಂವೀತಸ್ ತ್ವಂ ಕಲಯ ಮದನೋಲ್ಲಾಸಿ ವೇಣುರ್ ವಿಹಾರಮ್ ॥[೨೭]

ಇಲ್ಲಿ ಮಥುರೆಯ ವೈಭವೋಪೇತವಾದ ವೃಂದಾವನದ ವರ್ಣನೆಯಿದೆ. ಅಲ್ಲಿ ಕೃಷ್ಣನ ಲೀಲಾವಿನೋದಗಳ ಮಧುರರಸ ಪಸರಿಸಿದ ಪೂರ್ವಕ್ಷಣಗಳ ನೆನಹು ರಾಧೆಯನ್ನು ಕಾಡುತ್ತದೆ. ಅಂತಹ ಪರಿಸರದಲ್ಲಿ ಯಾವ ಹೃದಯಗಳು ನಿನ್ನ ಮೋಡಿಗೊಳಗಾಗಿವೆಯೋ ಅಂತಹ ಗೋಪಿಯರಿಂದ ಸುತ್ತುವರಿದವನಾಗಿ, ನಿನ್ನ ಮೃದು ಅಧರಗಳ ಮೇಲೆ ನರ್ತಿಸುವ ವೇಣುವಿನ ಇನಿದನಿಯೊಡಗೂಡಿ ನೀನು ನಿನ್ನ ಕ್ರೀಡೆಗಳನ್ನು ಅನುಭವಿಸಬಹುದೆಂಬ ರಾಧೆಯ ಕೃಷ್ಣಪ್ರೇಮವು ಇಲ್ಲಿ ಯಥೋಚಿತವಾಗಿಯೇ ಮೂಡಿಬಂದಿದೆ. ಬಿಲ್ವಮಂಗಲಠಾಕೂರರ 'ಕೃಷ್ಣ ಕರ್ಣಾಮೃತ'ವೆಂಬ ಕೃತಿಯು ಮಧುರಭಾವಾಭಿವ್ಯಕ್ತಿಯನ್ನು ಹೆಚ್ಚು ಸಮರ್ಥಿಸುತ್ತದೆ.

ಕಿಬಾ ಏ ಇ ಸಾಕ್ಷಾತ್ ಕಾಮ, ದ್ಯುತಿ ಬಿಮ್ಬ ಮೂರ್ತಿಮಾನ್
ಕಿ ಮಾಧುರ್ಯ ಸ್ವಯಂ ಮೂರ್ತಿಮನ್ತ ।
ಕಿ ಬಾ ಮನೋ ನೇತ್ರೋತ್ಸವ, ಕಿ ಬ ಪ್ರಾಣ ವಲ್ಲಭ
ಸತ್ಯಕೃಷ್ಣ ಆಇಲಾ ನೇತ್ರಾನನ್ದ ।[೨೮]

ಇಂತಹ ಸುಂದರ ಕಲ್ಪನೆಗಳು ದಾಸಪಂಥದಲ್ಲಿ ಬಹಳಷ್ಟು ಸಿಗಬಲ್ಲವು. 'ಪೊಂಗೊಳಲ ದನಿಗೆ ಸಿಲುಕಿ ಭಂಗಪಟ್ಟೆ' ಎನ್ನುವ ಕೀರ್ತನೆಯು ಚೈತನ್ಯಪಂಥದಲ್ಲಿ ಸಿಗುವ ವೃಂದಾವನದ ಗೋಪಿಕೆಯರ ಮಧುರಾಲಾಪನೆಗೇನೂ ಕಡಿಮೆ ಇಲ್ಲ. ಹಾಗೆಯೇ, ವಿದ್ಯಾಪ್ರಸನ್ನತೀರ್ಥರ 'ರಮಿಸುವೆವೆಂದಿಗೆ ಮುರಳೀಧರನ, ಸುಮನಸವಂದಿತ ವಿಮಲಚರಿತನ', ಹೆಳವನಕಟ್ಟೆ ಗಿರಿಯಮ್ಮನ 'ಅಂಗಜನಯ್ಯನ ಕಾಣದೆ ನಾನು ಹೀಂಗಿರಲಾರೆ, ನಮ್ಮ ಉತ್ತುಂಗ ಕುಚದ ಬಾಲೆ ರಂಗನಾ ಕರೆತಾರೆ, ರಂಗಮಾಣಿಕದ ಹರಳುಂಗುರವ ಕೊಡುವೆನು' ಮೊದಲಾದ ರಚನೆಗಳು ಚೈತನ್ಯಪಂಥದ ಸಾಹಿತ್ಯಕ್ಕೆ ಸಾಟಿಯಾಗಬಲ್ಲವು. ಅಲ್ಲಿ, 'ಹೇ ಗೋವಿಂದ, ನಿನ್ನನ್ನು ಅಗಲಿರುವ ಒಂದು ನಿಮಿಷದ ಕಾಲವು ನನಗೆ ಹನ್ನೆರಡು ವರ್ಷಗಳಷ್ಟು ದೀರ್ಘವಾಗಿ ಬಿಟ್ಟಿದೆ. ನನ್ನ ಕಣ್ಣುಗಳಿಂದ ವರ್ಷಧಾರೆಯಂತೆ ಶೋಕಜಲವು ಸ್ರವಿಸುತ್ತಿದೆ. ನೀನಿಲ್ಲದ ಈ ಇಡೀ ಜಗತ್ತು ನನಗೆ ಬರಿದಾಗಿ ಬಿಟ್ಟಿದೆ. ನಿನ್ನ ಪವಿತ್ರವಾದ ನಾಮಸ್ಮರಣೆಯಲ್ಲಿ ತೊಡಗಿರುವಾಗ ಆನಂದಭಾಷ್ಪಗಳು ನನ್ನ ಕಣ್ಣುಗಳನ್ನು ಅಲಂಕರಿಸಿ ತುಂಬಿ ಹರಿಯುವುದೆಂತು? ನನ್ನ ಗಂಟಲು ಗದ್ಗದಿತವಾಗುವುದೆಂತು? ನಿನ್ನ ನಾಮಸ್ಮರಣೆಯನ್ನು

ಮಾಡುತ್ತಾ ದಿವ್ಯವಾದ ರೋಮಾಂಚನವಾಗುವುದೆಂತು? ಈ ಎಲ್ಲ ರಚನೆಗಳು ದಾಸಸಾಹಿತ್ಯವನ್ನು ಸಮವಾಗಿ ತುಲನೆಮಾಡಬಲ್ಲವು.

ಒಟ್ಟಿನಲ್ಲಿ ದಾಸಸಾಹಿತ್ಯದಲ್ಲಿ ಕೃಷ್ಣನು ತೋರುವ ಮಧುರಭಾವಕ್ಕೂ ಚೈತನ್ಯಪಂಥದಲ್ಲಿ ಚೈತನ್ಯರು ತೋರುವ ಮಧುರಭಾವಕ್ಕೂ ಬಹ್ವಂಶದಲ್ಲಿ ಹೊಂದಾಣಿಕೆಯನ್ನು ಕಾಣುತ್ತೇವೆ. ಚೈತನ್ಯ ಸಾಹಿತ್ಯವು ಹೇಳುವಂತೆ, ಚೈತನ್ಯರು ಬಾಲಕಿಯರ ಕೈಯಲ್ಲಿರುವ ಶ್ರೀಗಂಧಚೂರ್ಣವನ್ನು ಅವರ ಅನುಮತಿ ಪಡೆಯಡೆಯದೆಯೇ ತೆಗೆದುಕೊಂಡು ತಮ್ಮ ದೇಹಕ್ಕೆ ಲೇಪಿಸಿಕೊಳ್ಳುತ್ತಾರೆ. ಬಾಲೆಯರ ಕೈಯಲ್ಲಿದ್ದ ತುಳಸೀಹಾರವನ್ನು ತಮ್ಮ ಕೊರಳಿಗೆ ಹಾಕಿಕೊಂಡುಬಿಡುತ್ತಾರೆ. ಅಲ್ಲದೆ ಬಾಲೆಯರು ಹಿಡಿದ ಸಿಹಿತಿಂಡಿ ಹಾಗೂ ಬಾಳೆಹಣ್ಣುಗಳನ್ನು ಕಸಿದುಕೊಂಡು ತಾವೇ ತಿಂದುಬಿಡುತ್ತಾರೆ. ಇಂತಹ ಕಲ್ಪನೆಗಳಿಗೆ ದಾಸಸಾಹಿತ್ಯದಲ್ಲಿ ನೂರಾರು ಉದಾಹರಣೆಗಳನ್ನು ನೀಡಬಹುದಾಗಿದೆ. ಏನಿದ್ದರೂ ಎರಡೂ ಪಂಥಗಳ ಮುಕ್ತಭಾವ ಭಕ್ತಿಯು ಕೃಷ್ಣನನ್ನು ಮಧುರವಾಗಿ ಪ್ರೇಮಿಸುತ್ತದೆ. ಇಲ್ಲಿ ಭಗವಂತನೊಂದಿಗೆ ವಿನಿಮಯ ಮಾಡಿಕೊಳ್ಳಲಾರದಷ್ಟು ಅಸಹಾಯಕತೆಗೆ ಜೀವಿಯು ಒಳಗಾಗುತ್ತಾನೆಂಬ ಚಿಂತನೆ ಮುಖ್ಯವಾಗುತ್ತದೆ.

೫.೩ (ಉ) ಶಾಂತ ಭಾವ

ಶಾಂತಭಾವವೆಂದರೆ ತಟಸ್ಥಭಾವ ಎಂದರ್ಥ. ಇದು ಭಕ್ತನ ಉನ್ನತಸ್ಥಿತಿಯ ಲಕ್ಷಣ. ದಾಸ ಹಾಗೂ ಚೈತನ್ಯಪಂಥಗಳೆರಡರಲ್ಲಿಯೂ ಇದು ಸಮಾನವಾಗಿಯೇ ಮೇಳವಿಸಿದೆ. ಇಲ್ಲಿ ಪ್ರಾಪಂಚಿಕ ಕಲ್ಮಷಗಳಿಂದ ಮುಕ್ತನಾದ ಜೀವಿಗೆ ಮೂಲತತ್ತ್ವಸ್ವರೂಪಿಯಾದ ಕೃಷ್ಣನು ಹತ್ತಿರವಾಗಿರುತ್ತಾನೆ. ದಾಸಸಾಹಿತ್ಯದಲ್ಲಿ ಬರುವ 'ಉದರ ವೈರಾಗ್ಯವಿದು', 'ಈಶ ನಿನ್ನ ಚರಣ ಭಜನೆ', 'ಒಂದೇ ನಾಮವು ಸಾಲದೆ' ಮೊದಲಾದ ಕೀರ್ತನೆಗಳು ಭಕ್ತನಲ್ಲಿ ಮೂಡಿಬಂದ ಶಾಂತಭಾವದ ಪ್ರಕಟನೆಗಳು. ಅಲ್ಲದೆ ತಮ್ಮ ಸತ್ಯದ ಹುಡುಕಾಟದಲ್ಲಿ ಕಂಡ ಮೂಲಸತ್ಯದ ರೂಪಗಳು. ಚೈತನ್ಯಪಂಥದಲ್ಲಿ ಶಾಂತಭಾವಕ್ಕೆ ಹೆಚ್ಚಿನ ಉದಾಹರಣೆಗಳು ಸಿಗುವುದು ಭಕ್ತಿವಿನೋದ ಠಾಕೂರರ ರಚನೆಯಲ್ಲಿ. ಅವರು ತಮ್ಮ ಗೀತಾವಳಿಯಲ್ಲಿ,

> ಶರೀರ ಅಬಿದ್ಯಾ ಜಾಲ್, ಜೋಡೇಂದ್ರಿಯ ತಾಹೇ ಕಾಲ್
> ಜೀವೇ ಫೇಲೆ ವಿಷಯ ಸಾಗೊರೆ ।
> ತಾ಼ ರ ಮಧ್ಯೆ ಜಿಹ್ವಾ ಅತಿ, ಲೋಭಮೊಯ್ ಸುದುರ್ಮತಿ
> ತಾ಼ ಕೆ ಚೇತಾ ಕಠಿನ ಸಂಸಾರೇ ॥[೨೯]

ಅವರು ಶಾಂತಭಾವದಲ್ಲಿ ಹೇಳುವಂತೆ, ಭೌತದೇಹವೊಂದು ಅಜ್ಞಾನದ ಬಲೆ. ಈ ದೇಹಕ್ಕೆ ಇಂದ್ರಿಯಗಳೇ ಬದ್ಧ ವೈರಿಗಳು. ನಾಲಗೆಯು ಬಕಾಸುರನ ಹಾಗೆ. ಹಾಗಾಗಿ ನಾಲಗೆಯನ್ನು ಗೆಲ್ಲುವುದು ತುಂಬಾ ಕಠಿಣ. ದಾಸಸಾಹಿತ್ಯದಲ್ಲಿ ಬರುವ 'ಗಿಳಿಯು ಪಂಜರದೊಳಗಿಲ್ಲ', 'ನೆಚ್ಚದಿರು ಸಂಸಾರ ನೆಲೆಯಿಲ್ಲವೀಕಾಯ'ವೆಂಬ ಕೀರ್ತನೆಗಳು ಇಂತಹ ಸ್ಥಿತಿಯಲ್ಲೇ ಮೂಡಿ ಬಂದವುಗಳು. ದಾಸಪಂಥ ಮತ್ತು ಚೈತನ್ಯಪಂಥಗಳೆರಡರ ತೌಲನಿಕ

ವಿವೇಚನೆಯಲ್ಲಿ ಈ ಭಾವಪಂಚಕಗಳು ಸಾದೃಶ್ಯಗಳಾಗಿ ಮೂಡಿಬಂದರೂ, ಅವು ನೆರವೇರುವುದು ಭಗವಂತನಲ್ಲಿ ಭಕ್ತನೊಬ್ಬನ ಸಂಬಂಧವು ಸರಿಯಾಗಿದ್ದಾಗ ಮಾತ್ರ. ಕೃಷ್ಣನ ಜೊತೆಯಲ್ಲಿ ಭಗವಂತನ ಸಂಬಂಧವು ಕಲುಷಿತವಾದಾಗ ಅದು 'ರಸಾಭಾಸ'ವೆಂದಾಗುತ್ತದೆ. ಆದರೆ ಇಲ್ಲಿ ರಸಗಳು ಭಾವೋನ್ಮುಖವಾಗಿ, ಪಂಚಭಾವಗಳಾಗಿ ವ್ಯವಹರಿಸಿ, ಪರಸ್ಪರ ಎರಡು ಪಂಥಗಳ ತಾತ್ವಿಕತೆಯ ಮುನ್ನಡೆಯಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತವೆ.

೩.೪ ಶ್ರೀಹರಿಸರ್ವೋತ್ತಮತ್ವ

ದಾಸಕೀರ್ತನೆ ಮತ್ತು ಚೈತನ್ಯಸಾಹಿತ್ಯಗಳಲ್ಲಿ ಹರಿಸರ್ವೋತ್ತಮತ್ವವು ಪ್ರತಿಪಾದನೆಯಾಗುವುದರ ಮೊದಲೇ ವೈದಿಕ ಸಂಸ್ಕೃತಿಯಲ್ಲಿ ಪೂಜೆಗೊಳ್ಳುತ್ತಿದ್ದ ಈಶ್ವರ ಸ್ವರೂಪಕ್ಕೆ ಎರಡು ರೂಪಗಳಿದ್ದವು. ಅದನ್ನೇ ಶಿವ (ಹರ) ಮತ್ತು ಕೇಶವ (ಹರಿ) ಎಂಬುದಾಗಿ ಕರೆಯುತ್ತಿದ್ದರು. ವೇದಗಳ ಕಾಲದಲ್ಲಿ ಈ ಹರಿ ಮತ್ತು ಹರರ ಜೊತೆಗೆ ಇಂದ್ರ, ವರುಣ, ಅಗ್ನಿ, ಸೂರ್ಯ ಮತ್ತು ಬ್ರಹ್ಮರುಗಳು ಪೂಜಾರ್ಹರಾಗಿದ್ದರು. ಆದರೆ ಕಾಲಕ್ರಮೇಣದಲ್ಲಿ, ಇಂದ್ರಾದಿ ದೇವರುಗಳೆಲ್ಲ ಹಿಂದೆ ಸರಿದು 'ಹರಿ ಹಾಗೂ ಹರ'ರಿಬ್ಬರನ್ನೇ ಪೂಜಿಸುವ ಕ್ರಮವೊಂದು ಮುಂದುವರಿಯಿತು. ಹರಿ ಮತ್ತು ಹರರನ್ನು ಸಮಾನವಾಗಿ ಕಾಣುವುದರ ಮೂಲಕ, ಅದಕ್ಕೆ 'ಬ್ರಹ್ಮ' ಎನ್ನುವುದಾಗಿಯೂ ಕರೆಯಲಾಯಿತು. ಅಲ್ಲದೆ ಹರಿ ಮತ್ತು ಹರರಲ್ಲಿ ಅಭೇದವನ್ನು ತೋರಿಸಿತು. ಆದರೆ ಕಾಲದ ಮುನ್ನಡೆಯಲ್ಲಿ ಹರಿಯನ್ನೇ ಸರ್ವವ್ಯಾಪಿಯಾಗಿ, ಪ್ರೇಮಸ್ವರೂಪಿಯಾಗಿ, ಸರ್ವಾಂತರ್ಯಾಮಿಯಾಗಿ ಕಾಣುವ ಕ್ರಮವೊಂದು ಪ್ರಾಚೀನರಿಂದಲೇ ಮುನ್ನಡೆಯಿತು. ಚೈತನ್ಯ ಹಾಗೂ ದಾಸತತ್ವಸಾಹಿತ್ಯವು ಅದನ್ನೇ ಸ್ವೀಕರಿಸಿತು.

'ವೇವೇಷ್ಟಿ ವ್ಯಾಪ್ನೋತಿ ಚರಾಚರಂ ಜಗತ್ ಸ ವಿಷ್ಣುಃ'[೩೦] ಎಂದು ವಿಷ್ಣುವನ್ನು ಋಗ್ವೇದವು ವರ್ಣಿಸಿದ್ದು ಮಾತ್ರವಲ್ಲದೆ, ಆತನನ್ನು 'ಶಿಪವಿಷ್ಟ' ಎಂಬ ಹೆಸರಿನ ಉಲ್ಲೇಖಿಸಿತು.[೩೧] 'ಶಿಪವಿಷ್ಟ' ನೆಂದರೆ ಹೆಚ್ಚು ಪ್ರಕಾಶವುಳ್ಳವನು ಎಂದರ್ಥ. ಯಾಸ್ಕನ ನಿರುಕ್ತವು 'ಅಥಯದ್ ವಿಷ್ಣುತೋ ಭವತಿ ತದ್ವಿಷ್ಣುರ್ಭವತ ವಿಷ್ಣುರ್ವಿಶತೇರ್ವಾ ವ್ಯಶ್ನೋ ತೇರ್ವಾ.....'[೩೨] ಎಂದು ಪ್ರತಿಪಾದಿಸಿದರೆ, ವಾಸುದೇವನೇ 'ದೇವದೇವ'ನೆಂದು ಹೊಗಳಿತು ಪತಂಜಲಿಯ ಮಹಾಭಾಷ್ಯ.[೩೩] ಬ್ರಹ್ಮಸಂಹಿತೆಯಲ್ಲಿ 'ಕ್ಷೀರಂ ಯಥಾ ದಧಿ ವಿಕಾರ ವಿಶೇಷ ಯೋಗಾತ್.......ಗೋವಿಂದಮ್ ಆದಿಪುರುಷಂ ತಮಹಂ ಭಜಾಮಿ' ಎಂಬ ಮಾತಿನಂತೆ, ಹಾಲಿಗೆ ಸ್ವಲ್ಪ ಮೊಸರನ್ನು ಬೆರೆಸಿದಾಗ ಆ ಹಾಲು ಮೊಸರಾಗಿ ರೂಪಾಂತರಗೊಳ್ಳುತ್ತದೆ. ಆದರೆ ತಥ್ಯದರ್ಶನದಲ್ಲಿ ಮೊಸರು ಸ್ವಭಾವತಃ ಹಾಲಲ್ಲದೆ ಬೇರೇನೂ ಅಲ್ಲ. ಅದೇ ರೀತಿ ಪರಮಪುರುಷನಾದ ಶ್ರೀಕೃಷ್ಣನು ಐಹಿಕ ವ್ಯವಹಾರಾರ್ಥವಾಗಿ ಶಿವನ ರೂಪವನ್ನು ಧರಿಸುತ್ತಾನೆ. ಹಾಲೆನಿಸಿದ ಶ್ರೀಕೃಷ್ಣನು ಮೊಸರೆನಿಸುವ ಶಿವನಾಗುತ್ತಾನೆ.

ಮೊಸರೆನಿಸಿದ ಶಿವನು ಲೌಕಿಕದ ತಮೋಗುಣದ ಸಂಸರ್ಗರೂಪವಾಗಿ ಬಿಡುತ್ತಾನೆ. ಆದುದರಿಂದ ಸರ್ವೋತ್ತಮ ರೂಪವಾಗುವುದು ಹಾಲೆನಿಸುವ ಕೃಷ್ಣನೇ ಹೊರತು ಶಿವನಲ್ಲವೆನ್ನುವುದು ಬ್ರಹ್ಮಸಂಹಿತೆ(೫-೪೫)ಯ ಮಾತು.

ಶ್ರೀಮದ್ಭಗವದ್ಗೀತೆಯಂತೂ ಏಕದೇವೋಪಾಸನೆಯನ್ನೇ ಪುಷ್ಟೀಕರಿಸುತ್ತದೆ. ದೇವೋತ್ತಮನಾದ ಶ್ರೀಕೃಷ್ಣನನ್ನೇ ಆರಾಧಿಸಬೇಕೆಂದು ಒತ್ತಾಯಿಸುತ್ತದೆ. ಆಗಮೋಕ್ತಾವರಣಪೂಜೆಯಲ್ಲಿ ಸಪ್ತಾವರಣಗಳ ಚಿಂತನೆಯಿದೆ. ಈ ಏಳು ಆವರಣ ದೇವತೆಗಳನ್ನು ಧ್ಯಾನಿಸುತ್ತಾ ನಾರಾಯಣಾಷ್ಟಾಕ್ಷರ ಮಂತ್ರವನ್ನು ಪಠಿಸುವ ಕ್ರಮದಲ್ಲಿ ಹರಿಸರ್ವೋತ್ತಮತ್ವದ ಪ್ರಾಧಾನ್ಯತೆಯೇ ಎದ್ದು ತೋರುತ್ತದೆ. ಇಲ್ಲಿಯ ಅಷ್ಟಾಕ್ಷರದಲ್ಲಿ ಪ್ರತಿ ಎಂಟು ಅಕ್ಷರಗಳಿಗೆ ಸಂಬಂಧಿಸಿದ, ವಿಶ್ವ, ತೈಜಸ. ಪ್ರಾಜ್ಞ, ತುರ್ಯ, ಆತ್ಮ, ಅಂತರಾತ್ಮ, ಪರಮಾತ್ಮ ಜ್ಞಾನಾತ್ಮನೆಂಬ ಎಂದು ರೂಪಗಳೂ ಕೂಡ ಹರಿಸರ್ವೋತ್ತಮತ್ವಕ್ಕೆ ಉತ್ತಮ ಉದಾಹರಣೆಗಳು. ವೈಷ್ಣವ ಬ್ರಾಹ್ಮಣನಾದವನು ತಾನು ಜಪಿಸಿದ ಗಾಯತ್ರೀಮುಂತ್ರದ ಮೂರು ಪಟ್ಟು ನಾರಾಯಣಾಷ್ಟಾಕ್ಷರವನ್ನು ದಿನವೊಂದಕ್ಕೆ ಜಪಿಸಬೇಕಾಗುತ್ತದೆ. ಇದನ್ನು ಚೈತನ್ಯಪಂಥವೂ ಸಮರ್ಥಿಸುತ್ತದೆ.

'ಗಾಯತ್ರಾತ್ರಿಗುಣಂ ವಿಷ್ಣುಂ ಧ್ಯಾಯನ್ನಷ್ಟಾಕ್ಷರಂ ಜಪೇತ್' ಎಂದು 'ಸದಾಚಾರ ಸ್ಮೃತಿ'ಯಲ್ಲಿ ಗಾಯತ್ರಿಯನ್ನು ಮೂರುಪಟ್ಟು ಪಠಿಸಬೇಕೆಂಬ ನಿಯಮವನ್ನು ಸಾರುತ್ತದೆ. ಇದು ಶೈವರಿಗೆ ಪಂಚಾಕ್ಷರೀಮಂತ್ರವಿದ್ದಂತೆ, ವೈಷ್ಣವರಿಗೆ ನಾರಾಯಣಾಷ್ಟಾಕ್ಷರ ಮಂತ್ರ. ಹಾಗಾಗಿ ಅವರಿಗೆ ನಾರಾಯಣನೇ ಸರ್ವೋತ್ತಮ. ಹೀಗೆ ಜಪತಪ, ಅನ್ನದಾನಗಳಲ್ಲಿಯ ಕೊನೆಯಲ್ಲಿ, ಸರ್ವದೋಷಗಳ ಪರಿಹಾರಕ್ಕಾಗಿ 'ಅಚ್ಯುತಾಯ ನಮಃ ಅನಂತಾಯ ನಮಃ ಗೋವಿಂದಾಯ ನಮಃ', ಇಲ್ಲವೇ 'ಶ್ರೀಕೃಷ್ಣಾರ್ಪಣಮಸ್ತು' ಎಂದು ಬ್ರಹ್ಮಾರ್ಪಣವನ್ನು ಬಿಡುವಕ್ರಮದಲ್ಲಿಯೂ ಹರಿಸರ್ವೋತ್ತಮತ್ವಕ್ಕೆ ಮೊದಲ ಮನ್ನಣೆಯಿದೆ. ಒಟ್ಟಿನಲ್ಲಿ ಶ್ರೀಕೃಷ್ಣಪಾರಮ್ಯಕ್ಕೆ ಪ್ರಾಚೀನಾಧಾರಗಳು ಹೇರಳವಾಗಿಯೇ ಸಿಗುತ್ತವೆ.

ದಾಸ ಹಾಗೂ ಚೈತನ್ಯಸಾಹಿತ್ಯವು 'ಶ್ರೀಹರಿಸರ್ವೋತ್ತಮತ್ವ'ದ ವೈಷ್ಣವದೀಕ್ಷೆಯನ್ನೇ ಕೈಗೊಂಡಿದೆ. ಇಲ್ಲಿಯ ಎರಡು ಕುಲಕ್ಕೂ ಬ್ರಹ್ಮಾಂಡವೇ ಪಿಂಡಾಂಡವಾಗಿದ್ದು, ಆ ಪಿಂಡಾಂಡವೇ ಪರಿಪೂರ್ಣ ಮಾನವ ಶರೀರವಾಗಿಯೂ ತೋರುತ್ತದೆ. ಇಲ್ಲಿ ಬ್ರಹ್ಮಾಂಡ ಹಾಗೂ ಪಿಂಡಾಂಡಗಳ ಉಚ್ಛ್ವಾಸ ಮತ್ತು ನಿಶ್ವಾಸಗಳು ಭಗವಂತನ ಉಸಿರಾಗುತ್ತದೆ. ಆದುದರಿಂದಲೇ ಈ ಎರಡೂ ಪಂಥಗಳು ಮಧ್ವತತ್ವವನ್ನು ಪರಿಪೂರ್ಣವಾಗಿ ಅವಲಂಬಿಸುತ್ತದೆ.

ದಾಸಸಾಹಿತ್ಯಕ್ಕೆ ನಿರ್ದಿಷ್ಟವಾದ ಆಕಾರವನ್ನು ಕೊಟ್ಟ ಶ್ರೀಪಾದರಾಜರು ಮಠಾಧಿಪತಿಗಳಾಗಿದ್ದವರು. ಅಂತೆಯೇ ಅವರು ಸಂಕೀರ್ತನಾಸಂಪ್ರದಾಯದ ಪ್ರವರ್ತಕರೆನಿಸಿದವರು. ಅವರ ರಚನೆಗಳ ಸಾರವೇ 'ಹರಿ ಸರ್ವೋತ್ತಮತ್ವ' ಸಿದ್ಧಾಂತ.

ಶ್ರೀ ಮನ್ಮಧ್ವಮತೇ ಹರಿಃ ಪರತರಃ ಸತ್ಯಂ ಜಗತ್ತತ್ವತೋ
ಭೇದೋ ಜೀವಗಣಾ ಹರೇರನುಚರಾಃ ನೀಚೋಚ್ಚ ಭಾವಂಗತಾಃ ।

ಮುಕ್ತಿರ್ನೈಜ ಸುಖಾನುಭೂತಿರಮಲಾ ಭಕ್ತಿಶ್ಚ ತತ್ಸಾಧನಂ
ಹ್ಯಕ್ಷಾದಿತ್ರಿತಯಂ ಪ್ರಮಾಣ ಮುಖಿಲಾಮ್ನಾಯೈಕ ವೇದ್ಯೋ ಹರಿಃ ॥[೩೪]

ದಾಸಸಾಹಿತ್ಯದ ಸಂಪೂರ್ಣಾಂಶವು ಈ ಮಧ್ವತತ್ವವನ್ನೇ ಪ್ರತಿನಿಧಿಸಿತು. ಚೈತನ್ಯಪಂಥವು ಅದನ್ನು ಅನುಮೋದಿಸಿ ಹರಿಯಲ್ಲೇ ಸರ್ವೋತ್ತಮತ್ವವನ್ನು ಕಂಡಿತು. ಜಗತ್ತು ಪಾರಮಾರ್ಥಿಕ ಸತ್ಯ; ಪಂಚಭೇದವು ಪಾರಮಾರ್ಥಿಕ ಸತ್ಯ ಮತ್ತು ನಿತ್ಯ. ಜೀವಗಣಗಳು ಶ್ರೀ ಹರಿಯ ಅನುಚರರು; ಸ್ವರೂಪ ಸುಖಾನುಭವವೇ ಮುಕ್ತಿ. ನಿರ್ಮಲವಾದ ಭಕ್ತಿಯು ಮುಕ್ತಿಗೆ ಸಾಧನ. ಪ್ರತ್ಯಕ್ಷ ಅನುಮಾನ ಆಗಮಗಳು ಸಾಧಕ ಪ್ರಮಾಣಗಳು ಶ್ರೀಹರಿಯು ಆಗಮವೇದ್ಯನೆಂಬ ತತ್ವಾರ್ಥವನ್ನೇ ಕೀರ್ತನೆಗಳ ಮೂಲಕ ಪ್ರತಿಪಾದಿಸಿತು.

ದಾಸಕುಲಕ್ಕೆ ಸಮಾಜಮುಖಕ್ಕಾಗಿ ಶ್ರೀಹರಿಸರ್ವೋತ್ತಮತ್ವವನ್ನು ಸಮರ್ಥಿಸಿಕೊಂಡು ಆಯಾಸವಾಗಿರಬೇಕು. ಸಮಾಜವು ಕಂಡ ಕಂಡ ಕಲ್ಲುಗಳಿಗೆ ಕೈಮುಗಿಯುತ್ತಿರುವುದನ್ನು ಗಮನಿಸಿದ ದಾಸರು 'ವಿವಿಧ ದೈವಗಳೆಲ್ಲ ವಿಷ್ಣುವಿನ ಹಿಂದೆ' ಎಂದು ಬೋಧಿಸಲು ಮುಂದಾದರು. 'ಮೂರ್ಖರಾದರು ಜನರು ಲೋಕದೊಳಗೆ, ಏಕದೈವವ ಬಿಟ್ಟು ಕಾಕು ದೈವವ ಭಜಿಸಿ' ಎಂಬ ಕೀರ್ತನೆಯನ್ನು ರಚಿಸಿ, ಸಾಮಾಜಿಕವಾಗಿ ಶ್ರೀಹರಿಸರ್ವೋತ್ತಮತ್ವವನ್ನು ಪ್ರತಿಷ್ಠಾಪಿಸಲು ಮುಂದಾಗುತ್ತಾರೆ.

ಚೈತನ್ಯಪಂಥವು ಶ್ರೀಹರಿಸರ್ವೋತ್ತಮತ್ವವನ್ನು ಸಾರಲು ಭಾಗವತ ಮತ್ತು ಭಗವದ್ಗೀತೆಯ ಉದಾಹರಣೆಗಳನ್ನೇ ಸ್ವೀಕರಿಸಿಕೊಂಡು ಸಮಾಜದ ಮುಂದಿಡುತ್ತದೆ. ದಾಸಪಂಥದಲ್ಲೂ ಇಂತಹ ಪ್ರಯೋಗಗಳು ಆಗಾಗ ಮರುಕಳಿಕೆಯಾಗಿದೆ. ಇದಕ್ಕೆ ಶ್ರೀಪಾದರಾಜರ ರಚನೆಗಳಲ್ಲಿ ತೋರುವ ಭೃಗುಮುನಿಯ ಕಥೆಯು ಉತ್ತಮ ಉದಾಹರಣೆ.[೩೫] ಇಷ್ಟೇ ಅಲ್ಲದೆ, ಗಜೇಂದ್ರನನ್ನು ವಿಷ್ಣುವು ಮೊಸಳೆಯ ಬಾಯಿಯಿಂದ ರಕ್ಷಿಸುವುದು, ರಾಜಸೂಯ ಯಾಗದಲ್ಲಿ ಭೀಷ್ಮನು ಕೃಷ್ಣನೇ ಅಗ್ರಪುಜೆಗೆ ಅರ್ಹನೆಂದು ಹೇಳುವುದು...ಹೀಗೆ ಈ ಮೊದಲಾದ ಸಂದರ್ಭಗಳನ್ನು ಉದಾಹರಿಸಿ, 'ಬಿಡಿಬಿಡಿ ಸಂದೇಹವನ್ನು ಪೊಡವಿ ಮನುಜರೆಲ್ಲ ಒಡೆಯನೊಬ್ಬನೆ ಜಗಕೆ ರಂಗವಿಠಲ'ನೆಂದು ಹೇಳಲು ಮುಂದಾಗುತ್ತಾರೆ. ಪುರಾಣದ ಕಥೆಗಳನ್ನು ಅಲ್ಲಲ್ಲಿ ನಿರೂಪಿಸುತ್ತಾ, ಹರಿಹರರನ್ನು ಪರಸ್ಪರ ತೂಗಿನೋಡಿ, ಹರಿಯೇ ಶ್ರೇಷ್ಠನೆಂದು ಪ್ರತಿಪಾದಿಸಿ, 'ಹರಿಹರರನು ಸರಿಯೆಂಬ ಮರುಳು ಜನರು ಹರಿಹರರ ಚರಿತೆಯನು ತಿಳಿದು ಭಜಿಸುವುದು'ದೆಂದು ಬೋಧಿಸುತ್ತಾರೆ. 'ಹರಿತಾತ ಹರ ಮೊಮ್ಮಗ'ನೆಂಬ ನಿಲುವು ಶ್ರೀಪಾದರಾಯರದು. ಒಂದೆಡೆ ಹರನನ್ನು ವರ್ಣಿಸುತ್ತಾ, 'ಹರಿಯ ದಯದಿಂದ ವಿಷವನ್ನು ಭಕ್ಷಿಸಿಯೂ ಉಳಿದುಕೊಂಡ' ಎಂದು ಹೇಳುತ್ತಾರೆ.

ಇಂತಹ ಪೌರಾಣಿಕ ಕಥಾಸಾಹಿತ್ಯವು ಚೈತನ್ಯಪಂಥದಲ್ಲೂ ಲಭ್ಯ. ಗೋಪೀನಾಥ ಆಚಾರ್ಯರು ಸಾರ್ವಭೌಮ ಭಟ್ಟಾಚಾರ್ಯರನ್ನುದ್ದೇಶಿಸಿ ಸಂವಾದಿಸುತ್ತಿರುವ ಸಂದರ್ಭದಲ್ಲಿ ಶ್ರೀಮದ್ಭಾಗವತದ ಉದಾಹರಣೆಯೊಂದನ್ನು ಕೃಷ್ಣ ಪಾರಮ್ಯದ ಮಹತ್ತನ್ನು ಸೂಚಿಸಲು ನೀಡುತ್ತಾರೆ. ಅಲ್ಲಿ, ಕೃಷ್ಣನ ಶಕ್ತಿಯನ್ನು

ಪರೀಕ್ಷಿಸಲು, ಬ್ರಹ್ಮನು ಒಮ್ಮೆ ಕೃಷ್ಣನಿಗೆ ಸೇರಿದ ಕರುಗಳನ್ನು ಮತ್ತು ಗೋಪಾಲ ಬಾಲರನ್ನು ಕದ್ದೊಯ್ದು ಬಚ್ಚಿಟ್ಟ. ಕೃಷ್ಣನು ತನ್ನ ದಿವ್ಯಶಕ್ತಿಯಿಂದ ತಿಳಿದು ಅದನ್ನು ಬಿಡಿಸಿಕೊಂಡ. ಇದರಿಂದ ಕೃಷ್ಣನ ಅಪರಿಮಿತ ಶಕ್ತಿಯೊಂದಿಗೆ ಹೋಲಿಸಿದರೆ ಸ್ವಯಂ ತಾನೇ ಹೊಂದಿದ್ದ ಶಕ್ತಿಯನ್ನು ಅಲ್ಪವೆಂದು ಬ್ರಹ್ಮನು ಒಪ್ಪಿಕೊಂಡ.[೩೬] ಹೀಗೆ ದಾಸಪಂಥದಲ್ಲಿ ಬರುವ ಭೃಗುಮುನಿಯ ಕಥೆ, ಚೈತನ್ಯಪಂಥದಲ್ಲಿ ಬರುವ ಬ್ರಹ್ಮದೇವನ ಕಥೆಗಳು ಎರಡೂ ಪಂಥಗಳಲ್ಲಿ ತೋರುವ ಶ್ರೀಹರಿ ಸರ್ವೋತ್ತಮತ್ವವನ್ನು ಸಮರ್ಥಿಸಿಕೊಳ್ಳುತ್ತದೆ.

ಹರಿದಾಸ ಪಂಥದವರಿಗೆ ಹರಿಪದವೇ ಮುಕ್ತಿಪದ. ಸರ್ವಸ್ವತಂತ್ರನಾದ ಹರಿಯನ್ನು ಹರಿದಾಸರು ಅವರವರ ಭಾವಕ್ಕೆ ಅವರವರ ಬಕುತಿಯಿಂದ ಸ್ವತಂತ್ರವಾಗಿ ಸ್ತುತಿಸಲು ಮುಂದಾಗುತ್ತಾರೆ. ಗೋಪಾಲದಾಸರಂತು ಹರಿಸರ್ವೋತ್ತಮತ್ವವನ್ನು ವಿಶ್ವತೋಮುಖವಾಗಿ ಕಾಣಲು ಮುಂದಾಗಿದ್ದಾರೆ.

ಶ್ರೀಹರಿ ಸರ್ವಸ್ವತಂತ್ರ ಸರ್ವಜ್ಞ ಸರ್ವವ್ಯಾಪ್ತ
....
ವಿಶ್ವತೋಮುಖ ನೀನೆ ವಿಶ್ವತೋ ಚಕ್ಷು ನೀನೆ
ವಿಶ್ವತೋ ಬಾಹು ನೀನೆ ವಿಶ್ವತೋಹಸ್ತ ನೀನೆ
ವಿಶ್ವತೋ ಶ್ರವಣನೆ ವಿಶ್ವಾಧಾರಕ ನೀನೆ
ವಿಶ್ವವ್ಯಾಪಕ ಸರ್ವ ವಿಶ್ವಮಯನು ನೀನೆ
ವಿಶ್ವನಾಮಕ ಹರಿ ಗೋಪಾಲ ವಿಠಲ
ವಿಶ್ವಾಸಕೊಡು ನಿನ್ನ ವಿಶ್ವಾಸ ಚರಣದಲ್ಲಿ ॥ –ಗೋಪಾಲದಾಸರು

ಇದು ವಿಶ್ವಾಧಾರಕನಾದ ವಿಷ್ಣುಸ್ತುತಿ. ಆದುದರಿಂದಲೇ ಕೀರ್ತನಕಾರರಿಗೆ ಆತ ವಿಶ್ವಾಸದಾಯಕನಾಗುತ್ತಾನೆ. ಇದು ಗೋಪಾಲದಾಸರ ಕೀರ್ತನೆಯಾಗಿದ್ದರೂ ಇತರ ದಾಸರ ಇಂಗಿತವೂ ಹೀಗೆಯೇ. ಉಡುಪಿಯ ಶ್ರೀವಾದಿರಾಜರಂತೂ ಶ್ರೀಹರಿ ಸರ್ವೋತ್ತಮತ್ವವನ್ನು ಕುರಿತು, 'ಹರಿಯೇ ಸರ್ವೋತ್ತಮ ಸುರರೆಲ್ಲ ಗುರುಗಳು ಸಿರಿಹಯವದನನೆ ಮಧ್ವಾಚಾರ್ಯರ ದೇವ'ನೆಂದು ಸಾರುತ್ತಾರೆ. ಅಲ್ಲದೆ, ಆ ಕುರಿತು ಸೊಗಸಾದ ಚಿಂತನೆ ಮತ್ತು ಸಮರ್ಥನೆಯನ್ನು ಉದಾಹರಣೆ ಸಹಿತವಾಗಿ ವಿವರಿಸುತ್ತಾರೆ.

ಒಬ್ಬನವನ ಮಗ ಮತ್ತೊಬ್ಬನವನ ಮೊಮ್ಮ
ಒಬ್ಬನವನನಿಗೆ ಶಯನಾದ
ಒಬ್ಬನವನ ಹೊರುವ ಮತ್ತಿಬ್ಬರವನಿಗಂಜಿ
ಅಬ್ಬರದಲಾವಾಗ ಸುಳಿವರು –ಶ್ರೀ ವಾದಿರಾಜರು

ಯಾರಿಗೆ ಬ್ರಹ್ಮನು ಮಗನೋ, ಯಾರಿಗೆ ರುದ್ರನು ಮೊಮ್ಮಗನೋ, ಯಾರಿಗೆ ಶೇಷನು ಹಾಸಿಗೆಯೋ, ಯಾರಿಗೆ ಗರುಡನು ವಾಹನವೋ, ಯಾರಿಗೆ ಹೆದರಿ ಇಂದ್ರಕಾಮರು ಯಾವಾಗಲೂ ಸಮೀಪದಲ್ಲಿ ಸುಳಿಯುತ್ತಿರುವರೋ, ಯಾರ ಹೆಸರು ಹೇಳಿದರೆ ಸಕಲ ದುಃಖ ಕಾರಣವಾದ ಕಲಿಯು ಬೆಚ್ಚಿಬೀಳುವನೋ, ಆ ಶ್ರೀಹರಿಯೊಬ್ಬನೇ ನಿರ್ದೋಷನು. ಅವನೇ ಸರ್ವರಿಗೂ ಮೋಕ್ಷವನ್ನು ಕೊಡತಕ್ಕವನು. ಆದುದರಿಂದ ಆತನೇ ಸರ್ವೋತ್ತಮ.

ಆದುದರಿಂದಲೇ ಅವರು 'ಹರಿಯೆನ್ನುವೆನು ಹರಿಯ ನಮಿಸುವೆನು, ಹರಿಕಥೆಗಳನೆ ನಾ ನುತಿಸುವೆ, ಮತಿಸುವೆ, ಪರಾಕ್ರಮಗಳನೆ ನಾ ಬಣ್ಣಿಸುವೆ' ಎನ್ನುತ್ತಾರೆ. 'ಸಿರಿಹಯವದನನ್ನ ಚರಣದ ಬಕುತಿಯು ದೊರಕೊಂಡರೆ ಸಾಕೆನ್ನ ಜನುಮ ಜನುಮಕಿನ್ನು' ಎನ್ನುವ ಮೂಲಕ ಹರಿಪದದ ಮಹಾತ್ಮೆಯನ್ನು ತಿಳಿಸುತ್ತಾರೆ. ಮುಂದುವರಿದು ತಮ್ಮ 'ಲೋಕಭರಿತನೋ...' ಎಂಬ ಕೀರ್ತನೆಯಲ್ಲಿ ರಾಜಸೂಯಯಾಗದ ಸನ್ನಿವೇಶವನ್ನು ಸ್ವೀಕರಿಸಿ, ಕೃಷ್ಣನಿಗೆ ಸಲ್ಲುವ ಅಗ್ರಪೂಜೆಯನ್ನು, ಪಾದಪೂಜೆಯನ್ನು ನೆನಪಿಸುತ್ತಾರೆ. ಒಟ್ಟಿನಲ್ಲಿ ಕೀರ್ತನಕಾರರ ಹಂಬಲವೇ ಹರಿಪದದ ಮುಕ್ತಿಪದ ಸೇವನೆ. ಇದೇ ಇಂಗಿತವನ್ನು ಚೈತನ್ಯಪಂಥವೂ ಪಾಲಿಸಿದೆ. ಚೈತನ್ಯ ಮಹಾಪ್ರಭುಗಳ ಹಾಗೂ ಸಾರ್ವಭೌಮ ಭಟ್ಟಾಚಾರ್ಯರ ಭಾಗವತ ಜಿಜ್ಞಾಸೆಯು ಹರಿಸರ್ವೋತ್ತಮತ್ವಕ್ಕೆ ಮೀಸಲಾಗುತ್ತದೆ. ಭಾಗವತದಲ್ಲಿನ 'ತತ್ತೇನು ಕಂಪಾಮ್.....' ಎನ್ನುವ ಪದ್ಯದ 'ಮುಕ್ತಿಪದ'ವೆನ್ನುವ ಶಬ್ದವನ್ನು ಭಟ್ಟಾಚಾರ್ಯರು 'ಭಕ್ತಿಪದ'ವೆಂದು ತಿದ್ದಲುಹೊರಟಾಗ, ಚೈತನ್ಯರು ದೇವೋತ್ತಮ ಪರಮಪುರುಷನಾದ ಶ್ರೀಕೃಷ್ಣನ ಪಾದಪದ್ಮಗಳನ್ನು 'ಮುಕ್ತಿಪದ'ವೆಂದು ಸಾರುವ ಭಾಗವತವನ್ನು ತಿದ್ದಲು ಅವಕಾಶಕೊಡದಿರುವುದು ಆ ಪಂಥದ ಹರಿಸರ್ವೋತ್ತಮ ತತ್ವದೃಷ್ಟಿಯನ್ನು ಸಾಬೀತುಪಡಿಸುತ್ತದೆ.

ಕೀರ್ತನಕಾರರು ಜನರಿಗೆ ವಿಷ್ಣುಪಾರಮ್ಯವನ್ನು ತಿಳಿಹೇಳುವಲ್ಲಿ ಕಣಿ ಹೇಳುವ ಪ್ರಯತ್ನವನ್ನು ನಡೆಸುತ್ತಾರೆ. ಆ ಮೂಲಕ 'ಬಣಗುದೈವದ ಗೊಡವೆಬೇಡ ನರಕತಪ್ಪದು' ಎನ್ನುವುದು ಅವರ ನಿಲುವು. ಹಾಗಾಗಿಯೇ ಅವರ ಪಾಲಿಗೆ ಕಲಿಯುಗದೊಳು ಹರಿನಾಮವ ನೆನೆದರೆ ಕುಲಕೋಟಿಗಳು ಉದ್ಧಾರವಾಗುತ್ತವೆ. ಆ ನೆಲೆಯಲ್ಲೇ ಹಿಂಡುದೈವದ ಗಂಡ ಉದ್ದಂಡ ಪಾಂಡುರಂಗನೆಂಬುದಾಗಿ ಡಂಗುರವನ್ನು ಹೊಡೆಸುವ ಪ್ರಯತ್ನವೊಂದು ದಾಸಪಂಥದಿಂದ ನಡೆಯುತ್ತದೆ. ಪುರಂದರದಾಸರಂತೂ ಶ್ರೀಹರಿಯ ಸರ್ವೋತ್ಕೃಷ್ಟತೆಯನ್ನು ವ್ಯಾಖ್ಯಾನಿಸುವ ಭರದಲ್ಲಿ 'ಆ ಪಾದ, ಆ ನಖ, ಆ ಜಾನು, ಆ ಜಂಘ, ಆ ಊರು, ಆ ಕಟಿ, ಆ ನಾಭಿ, ಆ ಕುಕ್ಷಿಗಳೆಲ್ಲವನ್ನೂ ಆನಂದಮಯವಾಗಿ ಕಂಡುಕೊಳ್ಳುತ್ತಾರೆ. ಅಲ್ಲದೆ,

ಭಾರತಮಲ್ಲ ಭೀಮನೆಂಬರು । ಭಾರತಮಲ್ಲ ಅರ್ಜುನ ವೆಂಬರು ।
ಭಾರತಮಲ್ಲ ಕರ್ಣನೆಂಬರು । ಭಾರತಮಲ್ಲರಿವರ್ಯಾರೂ ಅಲ್ಲ!
ಭಾರತಮಲ್ಲ ಪುರಂದರ ವಿಠಲ ಗದುಗಿನ । ವೀರ ನಾರಾಯಣ ಸ್ವಾಮಿ ಭಾರತಮಲ್ಲ ॥

ಎನ್ನುವ ಮೂಲಕ ಸಮಾಜಮುಖಕ್ಕೆ ನಿಜವಾದ ಭಾರತಮಲ್ಲನ ಪರಿಚಯವಾಗುತ್ತದೆ. ಚೈತನ್ಯಪಂಥದ ಭಕ್ತಿವಿನೋದ ಠಾಕೂರರು ಹರಿಸರ್ವೋತ್ತಮತ್ವಕ್ಕೆ ಸರ್ವತ್ಯಾಗಕ್ಕೂ ಸಿದ್ಧರಾಗುತ್ತಾರೆ. 'ಮಾನಸ, ದೇಹ, ಗೇಹ ಯೋ ಕಿಚು ಮೋರ, ಅರ್ಪಿಲುಣ್ ತುಯ ಪಾದೇ, ನಂದ ಕಿಶೋರ' ಎನ್ನುವ ಮೂಲಕ ತನ್ನ ದೇಹ, ಮನಸ್ಸು, ಮನೆ, ಪತ್ನೀ ಪುತ್ರರನ್ನೂ ಶ್ರೀಹರಿಗಾಗಿ ಅರ್ಪಿಸಿಬಿಡುತ್ತಾರೆ.

ಚೈತನ್ಯಪಂಥದ ಭಕ್ತನೋರ್ವನು ಲೌಕಿಕವಾದ ಯಾವುದೇ ಹೋರಾಟಕ್ಕೂ ಒಳಗಾಗದೆ, ಹರಿಸರ್ವೋತ್ತಮತ್ವವನ್ನು ಮನಗಂಡು ಶರಣಾಗಿಬಿಡುತ್ತಾನೆ. ಯಾಕೆಂದರೆ, 'ರಖೇ ಕೃಷ್ಣ ಮಾರೇ ಕೇ ಮಾರೇ ಕೃಷ್ಣ ರಖೇ ಕೇ' ಎಂಬುದು ಚೈತನ್ಯಪಂಥದ ನಿಲುವು. ಯಾರನ್ನು ಕೃಷ್ಣನು ರಕ್ಷಿಸುತ್ತಾನೋ ಅವರನ್ನು ಯಾರೂ ಕೊಲ್ಲಲಾರರು. ಆದರೆ ಕೃಷ್ಣನೇ ಯಾರನ್ನಾದರೂ ಕೊಲ್ಲಬಯಸಿದರೆ, ಅವನಿಗೆ ಯಾರೂ ರಕ್ಷಣೆ ನೀಡಲಾರರೆಂಬುದು ಗೌಡೀಯಪಂಥವು ಭಾವಿಸಿಕೊಳ್ಳುತ್ತದೆ. ಈ ಕಲ್ಪನೆಯು ಹರಿಸರ್ವೋತ್ತಮತ್ವವನ್ನು ಒಪ್ಪಿಕೊಂಡಾಗ ಮಾತ್ರ ಮೂಡಲುಸಾಧ್ಯ.

ಯಾವತ್ತೂ ಸರ್ವೋತ್ತಮತ್ವ ಸಿದ್ಧಿಸುವುದು ಮಹಾಶಕ್ತಿಗೆ ಮಾತ್ರ. ಮಹಾಶಕ್ತಿಯೊಂದು ತನ್ನ ಮಹತ್ತಿನೊಂದಿಗೆ ಸಾತ್ವಿಕರೂಪದ ಶರಣಶಕ್ತಿಗೆ ಸುಲಭವಾಗಿ ದೊರಕೊಂಡಾಗ ಆ ಶಬ್ದಾರ್ಥಕ್ಕೆ ಹೆಚ್ಚಿನ ಮಹತ್ವ. ಆ ನೆಲೆಯಲ್ಲಿಯೇ ಕೃಷ್ಣನಾಮಾಮೃತವು ಸರಳಭಕ್ತನೋರ್ವನಿಗೆ ಸುಲಭವಾಗಿ ಯಾವುದೇ ಸಮಯದಲ್ಲಿ ದೊರೆಯಬಲ್ಲುದೆಂದು ಚೈತನ್ಯಪಂಥವು ಸಾರುತ್ತದೆ. 'ನಾಮ್ನಾಂ ಅಕಾರಿ ಬಹುದಾ ನಿಜ ಸರ್ವ ಶಕ್ತಿಸ್ ತತ್ರಾರ್ಪಿತ ನಿಯಮಿತ ಸ್ಮರಣೇನ ಕಾಲಾಃ । ಏತದೃಷಿ ತವಕೃಪ ಭಗವನ್ ಮಮಾಪಿ ದುರ್ದೈವಂ ಈ ದೃಶಮ್ ಇಹಜಾನಿ ನಾನು ರಾಗಃ'[೩೭] ಎಂಬಲ್ಲಿ ಹಿರಿದಾದ ಶಕ್ತಿಯೊಂದು ಕಿರಿದಾದುದನ್ನು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ, ಸಮಯ ನಿರ್ಬಂಧವಿಲ್ಲದೆ ಸ್ಪಂದಿಸುತ್ತದೆಯೆಂದರೆ ಅದು ಆ ಶಕ್ತಿಯ ಉತ್ತಮತ್ವ. ಆದುದರಿಂದಲೇ ಶ್ರೀಕೃಷ್ಣನು ಸಮಸ್ತಜೀವಿಗಳಿಗೂ ಅನುಗ್ರಹಕಾರಕಶಕ್ತಿಯಾಗಿ, ಪವಿತ್ರನಾಮನಾಗಿ, ಸರ್ವೋತ್ತಮನಾಗಿ ಕಾಣುತ್ತಾನೆ.

ಚೈತನ್ಯರು ದಕ್ಷಿಣಭಾರತದ ಪರ್ಯಟನೆಯ ಸಮಯದಲ್ಲಿ ಶ್ರೀವೈಷ್ಣವ ಪಂಥದ ವೆಂಕಟಭಟ್ಟನಲ್ಲಿ ವೇದ ವೇದಾಂತಗಳ ಬಗ್ಗೆ ಚರ್ಚಿಸಿ, ಶ್ರೀಕೃಷ್ಣನೇ ಪರಮದೇವೋತ್ತಮ. ಸರ್ವಯುಗಗಳಲ್ಲೂ ಆತನೇ ಶಾಂತಿಧರ್ಮ ಪ್ರತಿಪಾದಕ. ಅನ್ಯದೈವತ್ವದಲ್ಲಿಲ್ಲದ ನಾಲ್ಕು ಅಸಾಧಾರಣ ಗುಣಗಳಾದ, ಗೋಪಾಲಕರೊಂದಿಗೆ ಬಾಲಲೀಲೆ, ಗೋಪಿಕೆಯರೊಂದಿಗೆ ರಾಸಲೀಲೆ, ತ್ರಿಲೋಕವನ್ನು ಆಕರ್ಷಿಸುವ ವೇಣುವಾದನ ಮತ್ತು ತ್ರಿಲೋಕವನ್ನು ಮೀರಿಸುವ ಅಸಾಧಾರಣ ಸ್ಫುರದ್ರೂಪ ಇವುಗಳಿಂದ ಪರಮಪುರುಷನಾದ ಕೃಷ್ಣನು ದೇವೋತ್ತಮನಾಗಿದ್ದಾನೆ ಎನ್ನುತ್ತಾರೆ.

ಏಕ ಈಶ್ವರ ಭಕ್ತೇರ ಧ್ಯಾನ – ಅನುರೂಪ ।
ಏಕ–ಇ ವಿಗ್ರಹೇ ಕರೇ ನಾನಾಕಾರ ರೂಪ ॥

ದೇವನೊಬ್ಬ ರೂಪ ಹಲವಾದರೂ 'ಸಿದ್ಧಾಂತಸ್ತ ಅಭೇದೇಪಿ' ಶ್ಲೋಕದ ಮೂಲಕ ದೇವೋತ್ತಮ ಕೃಷ್ಣನೆಂದು ಹೇಳುವುದು ಒಂದು ತೆರನಾದರೆ, ದಾಸಕೀರ್ತನೆಯು ಶ್ರೀಹರಿಯ ಅಸಾಧಾರಣವಾದ ಪೌರುಷವನ್ನು ಮುಂದಿಟ್ಟುಕೊಂಡು ಸರ್ವೋತ್ತಮತ್ವವನ್ನು ಪ್ರತಿಪಾದಿಸುತ್ತದೆ. ಈ ನೆಲೆಯಲ್ಲಿ ಪುರಂದರದಾಸರಿಗಂತೂ

ಹರಿಸರ್ವೋತ್ತಮತ್ವವನ್ನು ಸಾರಿದಷ್ಟು ತೀರದು. ಅದಕ್ಕಾಗಿ ಹರಿಯ ಇತರ ಅವತಾರಗಳ ವಿಶೇಷತೆಯನ್ನು ಅಲ್ಲಲ್ಲಿ ನೆನಪಿಸಿಕೊಳ್ಳುತ್ತಾರೆ.

ತಿರುಪತಿ ವೆಂಕಟರಮಣಾ.......
ಎಲ್ಲಾ ದೇವರ ಗಂಡ । ಅವ । ಚಿಲ್ಲರೆ ದೈವದ ಮಿಂಡ ।
ಒಲಿದವರಿಗೆ ಉದ್ದಂಡ । ಶಿವ । ಬಿಲ್ಲ ಮುರಿದ ಪ್ರಚಂಡ ॥
ರಾಮ ರಾಮ ಎನ್ನಿರೋ । ಇಂಥಾ ।
ಸ್ವಾಮಿಯ ನಾಮವ ಮುರೆಯದಿರೋ ॥ ಪ ॥
ಹರ ಬ್ರಹ್ಮಸುರಂಗೆ ವಂದ್ಯನು ಆಗಿಪ್ಪ ।
ಹರಿಸರ್ವೋತ್ತಮನೆಂದೆನ್ನಿರೋ ॥ –ಪುರಂದರದಾಸರು

ಹೀಗೆ ಹರಿಸರ್ವೋತ್ತಮತ್ವವನ್ನು ಸಾಬೀತು ಪಡಿಸುವಾಗ ಸಲುಗೆಯನ್ನೂ ಶ್ರೀಹರಿಯಲ್ಲಿ ತೋರಿಸುತ್ತಾರೆ. ಇವರಂತೆಯೇ ಹರಿಯ ಸರ್ವವ್ಯಾಪಕತ್ವವನ್ನು ತೋರಿಸುವ ಸಂಕಲ್ಪ ವಿಜಯದಾಸರದು.

ನಿನ್ನೊಳು ನೀನೆ ಎನ್ನಳು ನೀನೆ ಅನ್ಯರೊಳು ನೀನೆ ।
ಅನ್ಯೋನ್ಯನು ನೀನೆ ಚಿನ್ಮಯನು ನೀನೆ ॥
ತನ್ಮಯನು ನೀನೆ ಚಿನ್ನಯನು ನೀನೆ ವಿಜಯ ವಿಠಲನೆ ।
ಅಣುರೇಣು ನೀನೆ ಪರಮಾಣು ನೀನೆ ॥ –ವಿಜಯದಾಸರು

ಇಲ್ಲಿ ಎಲ್ಲರಲ್ಲೂ ಮತ್ತು ಎಲ್ಲದರಲ್ಲೂ ಭಗವಂತನನ್ನು ಹಡುಕುವ, ಸಾಕ್ಷಾತ್ಕರಿಸಿಕೊಳ್ಳುವ ಪ್ರಯತ್ನ ವಿಜಯದಾಸರದ್ದು. ಹಾಗಾಗಿ ಆತನನ್ನು ಸರ್ವಶಬ್ದವಾಚ್ಯಕನಾಗಿ ಕಾಣುತ್ತಾರೆ.

ಮುಕ್ತಿಪ್ರದನಾದ ನಾರಾಯಣನನ್ನು ಒಲಿಸಿಕೊಳ್ಳಬೇಕಾದರೂ ಶಿವನ ಸಹಾಯ ಅಗತ್ಯ. ಆದುದರಿಂದ ದಾಸಪಂಥವು ಹರಿಸರ್ವೋತ್ತಮತ್ವವನ್ನು ಸಾರುವಬರದಲ್ಲಿ ಶಿವನಿಂದ ಸಹಾಯವನ್ನು ಕೇಳುತ್ತದೆ. ಚೈತನ್ಯಪಂಥದ ಅನುಯಾಯಿಗಳು ಶ್ರೀಹರಿಯ ತೀರ್ಥಕ್ಷೇತ್ರ ಪರ್ಯಟನೆಯಲ್ಲಿ ಶಿವಾಲಯಕ್ಕೆ ಪ್ರವೇಶಗೈದದ್ದು ಬಿಟ್ಟರೆ, ಶಿವಸ್ತುತಿ ನಡೆಸಿದ್ದು ತೀರಾ ಕಡಿಮೆಯೆಂದೇ ಹೇಳಬೇಕು. ಆದರೆ ದಾಸಪಂಥವು ಇದಕ್ಕೆ ಒಂದಿಷ್ಟು ಭಿನ್ನ. ಕನಕದಾಸರು ತಮ್ಮ ಒಂದು ಕೀರ್ತನೆಯಲ್ಲಿ ಮನೋನಿಯಾಮಕನಾದ ಶಿವನಿಂದಲೇ ಹರಿಸರ್ವೋತ್ತಮತ್ವವನ್ನು ಸಾರಲುಹೊರಟಿದ್ದಾರೆ. ಇಲ್ಲಿ ಶಿವನ ನೆರವಿನಿಂದ ಮಾತ್ರ ಮುಕ್ತಿಸಾಧ್ಯವೆನ್ನುವುದು ಕನಕದಾಸರ ಪ್ರತಿಪಾದನೆ.

ಪೃಥ್ವಿಗೆ ಸದ್ಗುರು ಆಗಬೇಕಾದರೆ ಶಿವ ಶಿವ ಶಿವ ಎನ್ನಿರೋ । ನೀವು
ತತ್ತ್ವಪತಿ ಆದಿಕೇಶವನ ಕೂಡಬೇಕಾದರೆ ಶಿವ ಶಿವ ಶಿವ ಎನ್ನಿರೋ ॥ –ಕನಕದಾಸರು

ಪ್ರಾಣತತ್ವದ ಗುರುಸ್ಥಾನದಲ್ಲಿ ಶಿವನೇ ಉತ್ತಮತ್ತೋಮನಾದರೂ, ಮುಕ್ತಿಯನ್ನು ಪಡೆಯುವಲ್ಲಿ, ಆದಿಕೇಶವನನ್ನು ಕೂಡಬೇಕೆನ್ನುವ ಕಲ್ಪನೆ ಕನಕರದಾಸರದು.

ಹರಿಸರ್ವೋತ್ತಮತ್ವದ ಪ್ರತಿಪಾದನೆಗೆ ಮತ್ತು ಪ್ರಚಾರಕ್ಕೆ ಚೈತನ್ಯಪಂಥವು ಬೀದಿಬೀದಿಗಳಲ್ಲಿ ಸುಳಿದು ಮನೆಯ ಬಾಗಿಲಿಗೆ ತಲುಪುತ್ತದೆ. ಪ್ರಭುನಿತ್ಯಾನಂದ ಹಾಗೂ ಹರಿದಾಸಠಾಕೂರರಿಗೆ ಚೈತನ್ಯರು ನೀಡಿದ

ಮೊಟ್ಟಮೊದಲ ಆದೇಶವೆಂದರೆ, 'ಮಿತ್ರರೆ, ಬೀದಿಬೀದಿಗಳಲ್ಲಿ ಸುತ್ತಾಡಿ, ಪುರದ ಪ್ರತಿಯೊಬ್ಬ ವ್ಯಕ್ತಿಯನ್ನು ಅವನವನ ಮನೆಯ ಬಾಗಿಲಿಲ್ಲೇ ಸಂದರ್ಶಿಸಿ, ಹರಿನಾಮವನ್ನು ಕೀರ್ತಿಸುವಂತೆ ಮನವೊಲಿಸಿ. ಬಳಿಕ ಪ್ರತಿಸಂಜೆ ಏನಾಯಿತೆಂಬುದನ್ನು ನನ್ನಲ್ಲಿಗೆ ಬಂದು ವಿವರಿಸಿ' ಎನ್ನುತ್ತಾರೆ. ಚೈತನ್ಯರ ಆಜ್ಞೆಗೊಳಗಾದ ಜಗಾಯ್ ಮತ್ತು ಮಾಧಾಯ್ ಎಂಬ ಇಬ್ಬರು ಪಂಡಿತರು ತಮ್ಮ ದುರ್ಮಾರ್ಗವನ್ನು ತ್ಯಜಿಸಿ, ಶ್ರೀಕೃಷ್ಣಪಾರಮ್ಯವನ್ನು ಒಪ್ಪಿಕೊಂಡು ಹರಿಸರ್ವೋತ್ತಮತ್ವವನ್ನು ಬಿತ್ತರಿಸುವಲ್ಲಿ ಸಹಕರಿಸುತ್ತಾರೆ.

ಇಲ್ಲಿಯ ವಿಶೇಷವೆಂದರೆ, ಎರಡೂ ಪಂಥಗಳು ತಾವು ಕಂಡುಕೊಂಡ ಶ್ರೀಹರಿಸರ್ವೋತ್ತಮತ್ವವನ್ನು ಅನ್ಯ ಧರ್ಮೀಯರಿಗೆ ಉಣಬಡಿಸಿದ್ದು. ಚೈತನ್ಯಪಂಥದ ನಿಮಾಯ್ ಪಂಡಿತರ ಯಶಸ್ಸನ್ನು ಸಹಿಸದ ಸ್ಮಾರ್ತಬ್ರಾಹ್ಮಣನೊಬ್ಬ ಚೈತನ್ಯರ ವಿರುದ್ಧವಾಗಿ, ಮುಸಲ್ಮಾನದೊರೆ ಚಾಂದ್‌ಖಾಜಿಗೆ ದೂರಿಟ್ಟು, ಖಾಜಿಯ ಮೂಲಕವಾಗಿ ಸಂಕೀರ್ತನೆಯ ಪರಿಕರಗಳಾದ ಮೃದಂಗವನ್ನು ಒಡೆದುಹಾಕಿಸುತ್ತಾನೆ. ಅನಂತರದಲ್ಲಿ ಹರಿಸಂಕೀರ್ತನೆಯ ಮೆರವಣಿಗೆಯು ಖಾಜಿಯ ಮನೆಯ ಮುಂದೆಬರಲು, ಖಾಜಿಯು ವೈಷ್ಣವತತ್ತ್ವದ ಕುರಿತಾಗಿ ಶ್ರೀಚೈತನ್ಯರೊಂದಿಗೆ ಚರ್ಚಿಸಿ, ಹರಿಸರ್ವೋತ್ತಮತ್ವವನ್ನು ಒಪ್ಪಿಕೊಂಡು, ತಾನೂ ಸಂಕೀರ್ತನಾಚಳುವಳಿಗೆ ಸೇರಿಕೊಳ್ಳುತ್ತಾನೆ. ಇದೇ ರೀತಿಯಲ್ಲಿ ಸಾವಿರಾರು ವಿಧರ್ಮೀಯರು ಪರಿವರ್ತಿತರಾಗಿ ವಿಶ್ವಂಭರ ತತ್ತ್ವವನ್ನು ಸೇರಿಕೊಂಡಿದ್ದು, ನೈಯಾಯಿಕರಾಗಿದ್ದ ನದಿಯಾ ಗ್ರಾಮದ ಸಾರ್ವಭೌಮ ಭಟ್ಟಾರಕರು ತಮ್ಮ ಅದ್ವೈತವನ್ನು ಬಿಟ್ಟು, ಶ್ರೀಚೈತನ್ಯರ ಶಿಷ್ಯರಾಗಿ, ವೈಷ್ಣವರಾದದ್ದು. ಈ ಎಲ್ಲಾ ಉದಾಹರಣೆಗಳು ಚೈತನ್ಯಪಂಥದ ಹರಿಸರ್ವೋತ್ತಮತ್ವಕ್ಕೆ ಸಿಕ್ಕಿದ ಮುಖ್ಯಾಂಶಗಳು. ಇಂತಹ ವಿಧರ್ಮೀಯರ ಪ್ರವೇಶ, ಹರಿಸರ್ವೋತ್ತಮತ್ವದ ಒಪ್ಪಿಗೆ, ವಾದವಿವಾದದ ಸನ್ನಿವೇಶಗಳು ಹರಿದಾಸ ಸಾಹಿತ್ಯದಲ್ಲೂ ವಿಶೇಷವಾಗಿಯೇ ದೊರಕುತ್ತವೆ. ಏನೇಇದ್ದರೂ ದಾಸಪಂಥ ಮತ್ತು ಚೈತನ್ಯಪಂಥಗಳೆರಡರ ದೃಷ್ಟಿಯಲ್ಲಿ ಹರಿಸರ್ವೋತ್ತಮತ್ವದ ಕುರಿತಾಗಿ ಏಕತೆಯಿದೆ. 'ರಾಮಮಂತ್ರವ ಜಪಿಸೋ ಹೇ ಮನುಜ' ಎಂದು ದಾಸಪಂಥ ಹೇಳಿದರೆ, ಚೈತನ್ಯಪಂಥವು,

ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ ।
ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ ॥[೩೮]

ಎನ್ನುವಂತಹ ಪರಮಪುರುಷನ ಸ್ತುತಿಯನ್ನು ಪಠಿಸುವಂತೆ ಹೇಳಿತು. ಈ ಜಪದಿಂದಲೇ ಹೃದಯವನ್ನು ಪರಿಶುದ್ಧಗೊಳಿಸುವ ಉತ್ತಮತ್ವವಿದೆ ಎಂದುಸಾರಿತು.

ಒಟ್ಟಿನಲ್ಲಿ ಶ್ರೀಕೃಷ್ಣಕಥೆಯು ವೇದದಲ್ಲಿ ಮೊಳಕೆಯೊಡೆದು, ವೈದಿಕಪರಂಪರೆಗಳಲ್ಲಿ ಗಿಡವಾಗಿ ಬೆಳೆಯುತ್ತದೆ. ಸಂಸ್ಕೃತ ಹಾಗೂ ಪ್ರಾಕೃತಭಾಷೆಗಳಲ್ಲಿ ಶಾಖೋಪಶಾಖೆಗಳ ಮೂಲಕ ಹೆಮ್ಮರವಾಗುತ್ತದೆ. ಆತನ ವ್ಯಕ್ತಿತ್ವ ಹಾಗೂ ಬದುಕು ಅನಂತಮುಖವೆನಿಸುತ್ತದೆ. ಅದು ಸಂಕೀರ್ಣವೂ ಹೌದು; ಅನಂತತೆಯ ವರ್ಣರಂಜಕವೂ ಹೌದು. ಆತನ ಪೂರ್ಣಾವತಾರದಲ್ಲಿ ಕಮನೀಯತೆಯಿದೆ; ರಾಸಲೀಲೆಯ ಲಾಲಿತ್ಯದ ಆಕರ್ಷಣೆಯೂ ಇದೆ. ವಿಶ್ವಾಧ್ಯಯನಕ್ಕೆ ಪೂರಕವಾದ ಗೀತಬೋಧೆಯ ಭವ್ಯತೆಯು ಒಂದೆಡೆಯಾದರೆ,

ಪಾಂಚಜನ್ಯದ ಓಂಕಾರನಾದದೊಂದಿಗೆ ವಿಶ್ವರೂಪವನ್ನು ಧರಿಸಿದ ಮಹಾಭವ್ಯತೆಯು ಇನ್ನೊಂದು ಕಡೆ. ಆದುದರಿಂದಲೇ ಆತನನ್ನು ವೈದಿಕಧರ್ಮದ ಆರಾಧ್ಯದೇವತೆಯಾಗಿ ಕಂಡವರಂಟು. ಸಾಹಿತ್ಯಶಕ್ತಿರೂಪಿಯಾಗಿ ಉಲ್ಲೇಖಿಸಿ ಪರಿಗಣಿಸಿದವರುಂಟು. ಸಾಹಿತ್ಯರಚನೆಯ ತತ್ವಾದರ್ಶಗಳಲ್ಲಿ ಕೃಷ್ಣನನ್ನು ಸತ್ತ್ವಾಕರ್ಷಣೆಯಾಗಿ ಆಲೋಚಿಸಿಸವರುಂಟು. ಭಕ್ತನು ತನ್ನ ಐಹಿಕ ಮತ್ತು ಆಮುಷ್ಮಿಕ ಸಾಧನೆಗೆ ಕೃಷ್ಣನನ್ನು ಶಕ್ತಿದಾಯಕನೆಂದು ನಂಬಿದವರುಂಟು, ನಿತ್ಯಾಹ್ನಿಕದಲ್ಲಿ, ಪಕ್ಷ, ಪರ್ವ, ದಿನೋಪವಾಸದಲ್ಲಿ ಆತನಿರಬೇಕೆಂದು ಭಾವಿಸಿದವರುಂಟು. ಹಾಗಾಗಿ ಆತನ ವರ್ಣರಂಜಿತ ವ್ಯಕ್ತಿತ್ವಕ್ಕೆ ಕೇವಲ ಒಂದೇ ಧರ್ಮವು ಸೋತದ್ದಲ್ಲ. ಇನ್ನಿತರ ಪಂಥದವರೂ ಕೂಡ ಕೃಷ್ಣನ ವ್ಯಕ್ತಿತ್ವಕ್ಕೆ ಮಾರುಹೋದವರುಂಟು.[೪೯]

೫.೫ : ಸಾಮಾಜಿಕ ಕಳಕಳಿ

ಭಾರತೀಯ ಸ್ತೋತ್ರಪದ, ಉಪನಿಷತ್ತುಗಳು, ಪುರಾಣೇತಿಹಾಸಗಳಲ್ಲದೆ ಜಾನಪದನೆಲೆಯ ಧಾನ್ಯ ಕುಟ್ಟುವ ಹಾಡು, ಜೋಗುಳದ ಹಾಡು ಮೊದಲಾದ ಸಾಹಿತ್ಯ ಪ್ರಕಾರಗಳ ಮುಖ್ಯ ಕಾಳಜಿಯೆಂದರೆ ಸಾಮಾಜಿಕ ಕಳಕಳಿ. ಹಾಗೆಯೇ, ಬಂಗಾಳದ ಚೈತನ್ಯಪಂಥವೇ ಇರಬಹುದು ಅಥವಾ ಕರ್ನಾಟಕದ ದಾಸಪಂಥವೇ ಇರಬಹುದು. ಅವುಗಳ ನಿಜವಾದ ಕಾಳಜಿಯು ಸಮಾಜಮುಖಿಯಾದುದೆನ್ನುವುದರಲ್ಲಿ ಯಾವ ಸಂಶಯವು ಉಳಿಯುವುದಿಲ್ಲ. ಇದಕ್ಕೆ ಆಯಾಯ ಪಂಥಗಳು ಸ್ವೀಕರಿಸಿದ ತಾತ್ವಿಕನಿಲುವು, ಧರ್ಮಬೋಧೆ ಅಲ್ಲದೆ ಅವು ಹರಿಸಿರುವ ಸಾರ್ವತ್ರಿಕವಾದ ಸಾಮಾಜಿಕ ವಿಚಾರಧಾರೆಯೇ ಕಾರಣವಾಗಿದೆ.

ವೈದಿಕಪದ್ಧತಿಯ ಪ್ರಕಾರ ಸಾಮಾಜಿಕವಾಗಿ ನಾಲ್ಕು ವರ್ಣಗಳು. ಬೋಧನೆಗೆ ಬ್ರಾಹ್ಮಣರು, ಯೋಧರೆನಿಸಿದ ಕ್ಷತ್ರಿಯರು, ಕೃಷಿಕರಾದ ವೈಶ್ಯರು ಹಾಗೂ ದುಡಿಯುವವರಾದ ಶೂದ್ರರು. ಇದು ವೈದಿಕ ನಾಗರಿಕಕಲ್ಪನೆ. ಆದರೆ ಪ್ರಾಚೀನದಲ್ಲೇ ಚಾತುರ್ವರ್ಣ್ಯವೆಂಬ ಕಲ್ಪನೆಯು ಪತನವಾಗಿರುವುದಕ್ಕೆ ಆಧಾರಗಳು ಸಿಗಬಲ್ಲವು. ಆದರೆ ವರ್ಣಪಾವಿತ್ರ್ಯತೆಯನ್ನು ಕಳೆದುಕೊಂಡ ಸಮಾಜದಲ್ಲಿ ಬ್ರಾಹ್ಮಣರು ಅಪವಿತ್ರವನ್ನು ಒಪ್ಪಿಕೊಳ್ಳಲಿಲ್ಲ. ಈ ಸಂದರ್ಭದಲ್ಲಿ ಹೊಸಹೊಸ ಧರ್ಮಪಂಥಗಳು ಹುಟ್ಟಿಕೊಂಡು ಬಂದರೂ, ವರ್ಣದ ಕುರಿತಾಗಿ ನಿಖರವಾದ ನಿಲುವನ್ನು ತಾಳದೆ ತಮ್ಮ ತಮ್ಮ ತಾತ್ವಿಕತೆಗೆ ಪ್ರಾಮುಖ್ಯತೆಯನ್ನು ನೀಡಲಾರಂಭಿಸಿದವು. ಆದರೆ ಈ ಕುರಿತಾಗಿ ಬಂಗಾಳದ ಚೈತನ್ಯಪಂಥದ ನಿಲುವು ಸಾಮಾಜಿಕ ಕಳಕಳಿಯನ್ನು ಮಾತ್ರ ಹೆಚ್ಚಾಗಿ ಎತ್ತಿಹಿಡಿಯುವಂತಾಯಿತು.

ಈ ನೆಲೆಯಲ್ಲಿ ಚೈತನ್ಯಪಂಥವು ಬ್ರಾಹ್ಮಣನೆಂಬ ಶಬ್ದಕ್ಕೆ ಹೊಸ ವ್ಯಾಖ್ಯಾನವನ್ನು ನೀಡಿತು. ಆ ಪಂಥದ ಪ್ರಕಾರ, ಬ್ರಾಹ್ಮಣ್ಯವು ಹುಟ್ಟಿನಿಂದಲ್ಲ. ಅದು ಪಾಲನೆಯಿಂದ ಎನ್ನುವುದು ಅದರ ನಿಲುವು. ಎಲ್ಲರು ತಮ್ಮ ಶುದ್ಧಮನಸ್ಸಿನಿಂದ ವಿಷ್ಣುವಿನ ಆರಾಧನೆಯನ್ನು ಮಾಡಿ ವೈಷ್ಣವರಾಗುತ್ತಾರೆ. ವೈಷ್ಣವರೆಲ್ಲರು ಬ್ರಾಹ್ಮಣರಾಗುತ್ತಾರೆ. ಆದುದರಿಂದ ಆ ಪಂಥವು ನಿಜವಾದ ವಿಷ್ಣುಭಕ್ತನನ್ನು ಬ್ರಾಹ್ಮಣನೆಂದು ಕರೆಯಿತು. ಇದರ ತಾತ್ತ್ವಿಕ ಸಾಧನೆಗಾಗಿ ಚೈತನ್ಯಪಂಥವು ಬಂಗಾಳದಲ್ಲಿದ್ದ ಕೃತಕನೀತಿಗಳನ್ನು ಒಪ್ಪದೆ, ಭಕ್ತರೆನಿಸಿದ ವೈಶ್ಯ, ಸುವರ್ಣವಣಿಕ, ಹಾಗೂ

ವೈದ್ಯರೆಲ್ಲರೂ ಯಜ್ಞೋಪವೀತ ಧಾರಣೆಯನ್ನು ಆರಂಭಿಸಿ, ತನ್ನ ಪಂಥದ ಸಾಮಾಜಿಕ ಕಳಕಳಿಯನ್ನು ತೋರಿತು. ಸ್ವತಃ ಚೈತನ್ಯ ಮಹಾಪ್ರಭುಗಳೇ ಚಂದ್ರಶೇಖರನೆಂಬ ಶೂದ್ರನ ಮನೆಯಲ್ಲಿ ತಂಗುವುದರ ಮೂಲಕವಾಗಿ, ಭಕ್ತನಾದ ಆತನನ್ನು ಬ್ರಾಹ್ಮಣನೆಂದು ಒಪ್ಪಿಕೊಳ್ಳುತ್ತಾರೆ.

ಪೃಥ್ವಿತೆ ಆಚೆಯತಾ ನಗರಾದಿ ಗ್ರಾಮ
ಸರ್ವತ್ರ ಪ್ರಚಾರ ಹೈಟೆ ಮೊರೆ ನಾಮ ॥ –ಚೈತನ್ಯ ಚರಿತಾಮೃತ.

ಈ ಬಂಗಾಳೀ ಶ್ಲೋಕಕ್ಕೆ ಭಗವದ್ಗೀತೆಯ ವಿಚಾರಧಾರೆಯೇ ಮುಖ್ಯ ಕಾರಣವಾಗುತ್ತದೆ.

ಮಾಂ ಚ ಯೋ ವ್ಯಭಿಚಾರೇಣ ಭಕ್ತಿ ಯೋಗೇನ ಸೇವತೇ ।
ಸುಗುಣಾನ್ ಸಮಾತೀತ್ಯೈತಾನ್ ಬ್ರಹ್ಮ ಭೂಯಾಯ ಕಲ್ಪತೇ ॥[೪೦]

ಚೈತನ್ಯ ಮಹಾಪ್ರಭುಗಳೇ ಹೇಳುವಂತೆ, ಜಗತ್ತಿನಲ್ಲಿರುವ ಪ್ರತಿಯೊಂದು ನಗರ, ಪಟ್ಟಣ, ಹಳ್ಳಿಗಳಲ್ಲಿ ಕೃಷ್ಣಪ್ರಜ್ಞೆಯ ಚಳುವಳಿಯೊಂದನ್ನು ಆರಂಭಿಸಲಾಗಿದೆ. ಈ ಮೂಲಕವಾಗಿ ಕೃಷ್ಣಪ್ರಜ್ಞೆಗೆ ಸೇರಿದ ವ್ಯಕ್ತಿಯು ಬ್ರಾಹ್ಮಣನಾಗಿ ಕಂಗೊಳಿಸುತ್ತಾನೆ. ಇದು ಚೈತನ್ಯರ ವಿಶ್ವಮಾನ್ಯವೆನಿಸುವ ಸುಂದರಕಲ್ಪನೆ. ಭಗವದ್ಗೀತೆಯ ಆಧಾರದ ಮೂಲಕವಾಗಿ ಭಕ್ತರನ್ನೆಲ್ಲಾ ಬ್ರಾಹ್ಮಣರನ್ನಾಗಿ ಕಲ್ಪಿಸಿಕೊಳ್ಳುವ ವಿನೂತನ ಪ್ರಯೋಗವೊಂದು ಚೈತನ್ಯಪಂಥದಿಂದ ಸಾಧ್ಯವಾಯಿತು. ವಿಶೇಷವೆಂದರೆ, ಚೈತನ್ಯಪಂಥದ ಈ ನಿಲುನಿಂದ ಯುರೋಪಿಯನ್ನರು, ಅಮೇರಿಕನ್ನರು ಕೃಷ್ಣಪ್ರಜ್ಞೆಯನ್ನು ಪಡೆದುಕೊಳ್ಳುತ್ತಾರೆ. ಜೊತೆಗೆ, ಆ ಮೂಲಕವಾಗಿ ಅವರು ಬ್ರಾಹ್ಮಣರಾಗುತ್ತಾರೆ. ಇಂತಹ ಸಾಮಾಜಿಕ ಬದಲಾವಣೆಗಳು ದಾಸಪಂಥದಲ್ಲಿಯೂ ಲಭ್ಯವಿದೆ. ಉಡುಪಿಯ ಶ್ರೀವಾದಿರಾಜರು ಕೆಳವರ್ಗದ ಜನರಿಗೋಸ್ಕರವಾಗಿ ಕೆಲವೊಂದು ತಿದ್ದುಪಡಿಗಳನ್ನು ಮಾಡಿ ಭಾಗವತ ಧರ್ಮೋಪದೇಶವನ್ನು ನೀಡಿದುದು, ಅಸ್ಪೃಶ್ಯರಲ್ಲೂ ಭಜನೆ ಮೊದಲಾದ ದೇವತಾರಾಧನೆಯು ಮೂಡಿಬರಬೇಕೆಂಬ ದೃಷ್ಟಿಯಿಂದ ಅನೇಕ ದೇವರನಾಮಗಳನ್ನು ತುಳುಭಾಷೆಯಲ್ಲಿ ರಚಿಸಿದುದು ಸಾಮಾಜಿಕ ಸಾಮರಸ್ಯದ ಕಳಕಳಿಯನ್ನು ತೋರಿಸಿಕೊಡುತ್ತದೆ.

ಇಷ್ಟೇ ಅಲ್ಲದೆ, ಗೌಡೀಯಪಂಥದ ಶ್ರೀಕೃಷ್ಣ ಚೈತನ್ಯರನ್ನು ಮುಸಲ್ಮಾನರ ದೊರೆಯಾದ ಖಾಜಿಯು ಸಂಮ್ಮಾನಿಸಿದುದು ಮತ್ತು ದಾಸಪಂಥದ ಶ್ರೀವಾದಿರಾಜರಿಗೆ ದಿಲ್ಲಿಯ ದೊರೆಯಾದ ಬಾಬರನು ಒಂಟೆಗಳ ಮೇಲೆ ಸುವಸ್ತುಗಳನ್ನು ಕಳುಹಿಸಿಕೊಟ್ಟು ಸಂಮ್ಮಾನಿಸಿದುದು, ಸಂತರಿಬ್ಬರ ಸಾಮಾಜಿಕ ಹಿತಚಿಂತನೆಗೆ ಸಂದಿರುವ ಗೌರವವಾಗಿದೆ. ವಾದಿರಾಜರು ಹಂಪೆಯ ಮಾರ್ಗಮಧ್ಯದಲ್ಲಿ ಬ್ರಹ್ಮರಕ್ಕಸನ ಪ್ರಶ್ನೆಗೆ ಉತ್ತರಿಸಿ, ಆತನಿಂದ ಸಮಾಜಕ್ಕಾಗುತ್ತಿದ್ದ ತೊಂದರೆಯನ್ನು ನಿವಾರಿಸಿ, 'ಭೂತರಾಜ'ನನ್ನಾಗಿ ಪರಿವರ್ತಿಸಿದ್ದು ಅಲ್ಲಿಯ ಸಮಾಜದ ಏಳಿಗೆಗಾಗಿ ಎಂಬುದನ್ನು ಭಾವಿಸಬೇಕಾಗುತ್ತದೆ.

ಆಜಿ ಹೈತೇ ದುಂಗ್ ಹಾರ ನಾಮ 'ರೂಪ' 'ಸನಾತನ' ।
ದೈನ್ಯ ಭಾಡ ತೋಮಾರ ದೈನ್ಯೇ ಫಾತೇ ಮೋರ ಮನ ॥[೪೧]

ಇದು ಚೈತನ್ಯ ಚರಿತಾಮೃತದ ಮಾತು. ದಬೀರ್‌ಖಾಸ್ ಮತ್ತು ಸಾಕರಮಲ್ಲಿಕರ ಪ್ರಾರ್ಥನೆಯನ್ನು ಆಲಿಸಿದ ಚೈತನ್ಯರು ಅವರನ್ನು 'ಶ್ರೀಲ ರೂಪ' ಹಾಗೂ 'ಶ್ರೀಲ ಸನಾತನ'ರೆಂದು ನಾಮಕರಣ ಮಾಡುತ್ತಾರೆ. ಚೈತನ್ಯರು, "ನಿಮ್ಮ ದೀನತೆಯನ್ನು ನಿಲ್ಲಿಸಿ. ನಿಮ್ಮ ನಮ್ರತೆಗೆ ನನ್ನೆದೆಯು ಬಿರಿಯುತ್ತಿದೆ. ನಿಮಗೆ ನಾನು ನೀಡಿರುವ ದೀಕ್ಷೆಯು ಆಧ್ಯಾತ್ಮಿಕವಾದುದು. ಅದರ ಹಿಂದೆ ಸಾಮಾಜಿಕ ಕಾಳಜಿಯೊಂದು ಅಡಕವಾಗಿದೆ" ಎನ್ನುತ್ತಾರೆ. ಇಲ್ಲಿ ಮುಸಲ್ಮಾನರು ವೈಷ್ಣವಧರ್ಮವನ್ನು ಸ್ವೀಕರಿಸಿದರೆ, ದಾಸಪಂಥದಲ್ಲಿ ವೈಕುಂಠದಾಸರು ಈ ಕ್ರಮವನ್ನು ಮುಂದುವರಿಸುತ್ತಾರೆ. ಬೇಲೂರಿನ ನಂಜಪ್ಪ ಮತ್ತು ಮಾದಮ್ಮ ಎಂಬ ವೀರಶೈವ ದಂಪತಿಗಳನ್ನು ವೈಷ್ಣವಪಂಥಕ್ಕೆ ಬರಮಾಡಿಸಿ, ಜಾತ್ಯತೀತ ಕಾಳಜಿಗೆ ಅವರು ಪಾತ್ರರಾಗುತ್ತಾರೆ.[೨೨]

ವಾದಿರಾಜರ ಕನ್ನಡ ಪ್ರೇಮದ ಹಿಂದೆಯೂ ಜನಪರವಾದ ಒಂದು ಕಾಳಜಿಯಿದೆ. ಅವರು ಮಧ್ವಾಚಾರ್ಯರ 'ಮಹಾಭಾರತ ತಾತ್ಪರ್ಯ ನಿರ್ಣಯ', 'ಶ್ರೀಮದ್ಭಾಗವತ', 'ಪಂಚರಾತ್ರಾಗಮ'ಗಳನ್ನು ಸಂಸ್ಕೃತದಿಂದ ಕನ್ನಡಕ್ಕಿಳಿಸಿ, ಸಾಮಾನ್ಯಜನತೆಗೆ ಕನ್ನಡದಲ್ಲಿ ತಿಳಿಹೇಳುವ ಕ್ರಮವೊಂದು ಜನಪರ ನಿಲುವಿಗೆ ಸಾಕ್ಷಿಯಾಗುತ್ತದೆ.

ತತ್ವ ಸಾರದ ಸೊಬಗ ಧರೆಯೊಳು
ಬಿತ್ತರಿಸ ಬೇಕೆನುತ ಮುನಿಕುಲ
ರತ್ನಶ್ರೀ ಗುರು ವಾದಿರಾಜನು ಶ್ರುತಿ ಪುರಾಣಗಳ ।
ಮೊತ್ತವನು ನೆರೆ ಮಥಿಸಿ ಮೇಲಣ
ಮುಕ್ತಿ ಸೃಷ್ಟಿ ಸ್ಥಿತಿ ಲಯಂಗಳ
ಅರ್ಥಿಯಲಿ ಬಣ್ಣಿಸಿದ ಕಥೆಯನು ಕೇಳಿ ಸಜ್ಜನರು ॥

ವಾದಿರಾಜರು ಪುರಾಣಪುಣ್ಯಕಥೆಯನ್ನು ಜನತೆಯ ಹಿತಕ್ಕಾಗಿ, ಮುಕ್ತಿಯ ಪಥಕ್ಕಾಗಿ ಹೇಳಲು ಹೊರಟಿದ್ದಾರೆ. 'ಕನ್ನಡಿಯೊಲಿಪ್ಪಂತ ಪೂರ್ಣಪ್ರಜ್ಞರ ಮತದುನ್ನತ ತತ್ವಸಾರವನು ಕನ್ನಡದಿ ಬಣ್ಣಿಸಿ' ಗ್ರಾಮೀಣ ಜನರಿಗೆ ಹೇಳುವ ಪ್ರಯತ್ನವು ಶ್ರೀವಾದಿರಾಜರದ್ದಾದರೆ, ಚೈತನ್ಯಪಂಥದಲ್ಲಿ ತತ್ವಪ್ರಸಾರವು ಬಂಗಾಳಿಯಿಂದ ಸಂಸ್ಕೃತಕ್ಕೆ ತರ್ಜುಮೆಗೊಳ್ಳುತ್ತದೆ. ಈ ನೆಲೆಯಲ್ಲಿ ಇಸ್ಕಾನಿನ ಸಂಸ್ಥಾಪಕ ಪ್ರಭುಪಾದರ ಮೂಲಕವಾಗಿ ಚೈತನ್ಯತತ್ವವು ಆಂಗ್ಲಭಾಷೆಗೆ ಅನುವಾದಗೊಂಡು ಅಂತಾರಾಷ್ಟ್ರೀಯ ಮಟ್ಟದಲ್ಲಿ ಧಾರ್ಮಿಕವಾಗಿ ಸಾಮಾಜಿಕ ಕಳಕಳಿಯನ್ನು ಪ್ರತಿನಿಧಿಸಲು ಮುಂದಾಗುತ್ತದೆ.

ಪುರಂದರದಾಸರು ಸೊಲ್ಲಾಪುರದಲ್ಲಿ ಸಂಚರಿಸುವಾಗ ಅಲ್ಲಿಯ ಬ್ರಾಹ್ಮಣರಿಗೂ ಲಿಂಗಾಯತರಿಗೂ ಪರಸ್ಪರ ಮತಾವಲಂಬನೆಯಿಂದ ವಾಕ್‌ಕಲಹವೇರ್ಪಟ್ಟಿತು. ಈ ಉಭಯ ಪಂಗಡದ ಸಾಮರಸ್ಯಕ್ಕಾಗಿ ಪುರಂದರದಾಸರು ಕೀರ್ತನೆಗಳನ್ನು ರಚಿಸಿ, ಅಲ್ಲಿಯ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ಯಶಸ್ಸನ್ನು ಕಂಡರು.

ಜಂಗಮರು ನಾವು । ನೀವೇ ಕೇಳಿ ॥
ಜಂಗಮರು ನಾವು ಲಿಂಗಾಂಗಿಗಳು
ಮಂಗಳವಂತರ । ಭವಿಗಳೆಂಬಿರಿ ಬರಿದೆ ॥ ಅ. ಪ ॥

ಶಿವ ಗುರು ದೈವ ಕೇಶವ ನಮ್ಮ ಮನೆ ದೈವ
ವರದ ಮೋಹನ ನಮ್ಮ ಗುರು ಶಾಂತೇಶ ।
ಶಿವ ಗುರು ದ್ರೋಹ ಮಾಡಿದ ಪರವಾದಿಗೆ
ರವ ರವ ನರಕದೊಳುರುಳುವದೇ ಗತಿ ॥

ವಿಭೂತಿ ನಮಗುಂಟು ವಿಶ್ವೇಶ ನಮಗುಂಟು
ಶೋಭನ ಮುದ್ರೆಯು ನಮಗುಂಟು ।
ಶ್ರೀ ಭಾಗೀರಥಿ ಅಗ್ನಿ ಮಜ್ಜನ ನಮಗುಂಟು
ಸೌಭಾಗ್ಯವೀವ ಮಹಂತಿನ ಮಠದವರು ॥

ಇದು ಪುರಂದರದಾಸರು ಕಂಡುಕೊಂಡ ಸಾಮಾಜಿಕ ಸಾಮರಸ್ಯ. ಇವರ ಈ ಕಲ್ಪನೆ ಲಿಂಗಾಯತ ಕೇರಿಗಳಲ್ಲದೆ ಪಂಚಮರ ಕೇರಿಗಳಲ್ಲೂ ಪಸರಿಸಿತು. 'ಹೊಲೆಯ ಬಂದನೆಂದು ಒಳಗೆ ದೇವರ ಮಾಡಿ ಗಣಗಣ ಗಂಟೆಯ ಬಾರಿಸುವರಯ್ಯಾ' ಎಂಬ ಉಗಾಭೋಗವು ಪಂಚಮರೊಂದಿಗಿನ ಸಾಮರಸ್ಯಕ್ಕೆ ಉದಾಹರಣೆಯಾಗಿ ನಿಲ್ಲುತ್ತದೆ.

ವಿಜುಲೀಖಾನ್ ಎನ್ನುವ ಮುಸಲ್ಮಾನನೊಬ್ಬ ಚೈತನ್ಯ ಮಹಾಪ್ರಭುಗಳಿಗೆ ಶರಣಾಗತನಾಗಿ ವೈಷ್ಣವ ಪಂಥವನ್ನು ಸ್ವೀಕರಿಸಿದುದು ಮತ್ತು ಆ ಪ್ರಾಂತ್ಯವನ್ನು 'ಪಾಠಾಣ ವೈಷ್ಣವ ಗ್ರಾಮ'ವೆಂದು ಹೆಸರಿಸಿದುದು, ಡಕಾಯಿತರಾಗಿದ್ದ ಜಗಾಯಿ ಮತ್ತು ಮಾಧಾಯಿ ಎಂಬ ಬ್ರಾಹ್ಮಣ ಸಹೋದರರನ್ನು ಉದ್ಧರಿಸಿದುದು ಚೈತನ್ಯಪಂಥದ ಸಾಮಾಜಿಕ ಕಳಕಳಿಯಾಗಿದೆ. ದಾಸಪಂಥದಲ್ಲಿಯೂ, 'ಕುಡುಮಪುರ'ವನ್ನು ಧರ್ಮಸ್ಥಳವನ್ನಾಗಿ ಮಾರ್ಪಡಿಸಿದುದು, ಸಾಮಾಜಿಕವಾಗಿ ಕುಸಿತಕ್ಕೊಳಗಾದ ಮಟ್ಟು (ಪಾಪನಾಶಿನೀ ಮತ್ತು ಚಕ್ಷುಷ್ಮತೀ ನದಿಗಳ ದಕ್ಷಿಣಭಾಗ) ಗ್ರಾಮದ ಬ್ರಾಹ್ಮಣರಿಗೆ ಗುಳ್ಳದ ಬೀಜವನ್ನು ನೀಡಿ ಹೊಸವೃತ್ತಿಯ ಮೂಲಕ ಸಾಮಾಜಿಕ ಉನ್ನತಿಯನ್ನು ತಂದುದು ದಾಸಪಂಥದ ಸಮಾಜಮುಖೀ ಚಿಂತನೆಗೊಂದು ಸಾಕ್ಷಿಯಾಗುತ್ತದೆ.

ಈ ಎಲ್ಲಾ ವಿಚಾರಗಳಿಂದ ತಿಳಿಯುವುದೇನೆಂದರೆ, ಪರಸ್ಪರ ಪಂಥಗಳೆರಡರ ಅನುಯಾಯಿಗಳು ಭಗವಂತನನ್ನಷ್ಟೇ ಚಿಂತಿಸಲಿಲ್ಲ. ಸಾಮಾಜಿಕ ಬದುಕಿನ ಕಡೆಗೂ ಚಿಂತಿಸಿದರು. ಆ ಮೂಲಕವಾಗಿ ಸಮಾಜದ ಕೋರೆಯನ್ನು ತಿದ್ದುವುದೇ ತಮ್ಮ ಬದುಕಿನ ಸಾರ್ಥಕ್ಯವೆಂದು ಬಗೆದರು. ದಾಸಕುಲವು ತಮ್ಮ ರಚನೆಗಳಲ್ಲಿ 'ಸುಜ್ಞೆಯಿಂದಾಳಬೇಕಣ್ಣಾ, 'ರೊಕ್ಕ ಎರಡಕ್ಕು ದುಃಖ ಕಾಣಕ್ಕ', 'ತಂಗಿಗೇಳಿದ ಕೃಷ್ಣ ಚಂದದಲಿ ಬುದ್ಧಿ, ಅತ್ತೆಯ ಮನೆಯಲಿ ಇರುವಂತ ಸುದ್ಧಿ' ಎಂಬಲ್ಲಿ ಸುಂದರ ನೀತಿ ಬೋಧನೆಯನ್ನು ಸಮಾಜದ ಅಣ್ಣತಂಗಿಯರಿಗೆ ನೀಡಿದರು. ಅಲ್ಲದೆ, 'ಗುರುಮುಖವಿರಬೇಕು, ಹರಿದೈವವೆನಬೇಕು, ಪರ ಉಪಕಾರ ಇರಬೇಕು ಪ್ರತಿಕ್ಷಣ'ವೆಂಬ ಪಾಠವನ್ನೂ ಮಾಡಿದರು. ಆದರೂ ಕೀರ್ತನಸಾಹಿತ್ಯವು ತಮ್ಮ ಸಾಮಾಜಿಕ ಕಳಕಳಿಯಲ್ಲಿ ಭಾವರಮ್ಯತೆಯನ್ನು

ಮರೆಯಲಿಲ್ಲ. ಅದು ಭಾವರಮ್ಯತೆಯೊಂದಿಗೆ ಲೋಕಾನುಭವದ ಕಡೆಗೂ ತನ್ನ ಗಮನವನ್ನು ನೀಡಿತು. ಆ ಮೂಲಕವಾಗಿ ಸಾಮಾಜಿಕವಾದ ಕಾಳಜಿಯನ್ನು ತನ್ನ ಸಾಹಿತ್ಯದಲ್ಲಿ ಸೃಷ್ಟಿಸಿತು. ಈ ನಿಟ್ಟಿನಲ್ಲಿ ತನ್ನೊಡಲೊಳಗೆ ಸಮಾಜದಲ್ಲಿ ಅಳವಡಿಕೆಯಲ್ಲಿದ್ದ ಕೆಲವೊಂದು ಗಾದೆಗಳನ್ನು ಛಂದೋಬದ್ಧವಾಗಿ ಪ್ರಯೋಗಿಸಿ, ಸಮಾಜವನ್ನು ತಿದ್ದುವ ಪ್ರಯತ್ನವನ್ನು ಮಾಡಿತು.

'ಅಡಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು',
'ಅಂಬಲಿಯನುಂಬುವಗೆ ಅಮೃತಾನ್ನ ತಾನೇಕೆ',
'ಆಕಳು ಡೊಂಕಾದರೇನು ಹಾಲು ಡೊಂಕೆ',
'ಭಾಷೆ ಹೀನರ ಸಂಗ ಅಭಿಮಾನ ಭಂಗ',
'ನದಿಯು ಡೊಂಕಾದರೇನು ಉದಕ ಡೊಂಕೆ',
'ಕಬ್ಬು ಡೊಂಕಾದರೇನು ಸಿಹಿಯು ಡೊಂಕೆ',
'ಪುಷ್ಪ ಡೊಂಕಾದರೇನು ಪರಿಮಳ ಡೊಂಕೆ',
'ಗಾಳಿಗೆ ಗಿರಿಯು ಅಲ್ಲಾಡಬಲ್ಲುದೆ ರಂಗ',
'ಕೈಮೀರಿ ಹೋದ ಮಾತಿಗೆ ಹುಡುಕಬಾರದು',
'ಮೂಕ ತಾ ಮಾತಿನ ಸವಿಯೇನ ಬಲ್ಲನು',
'ಮಾಣಿಕವು ಕೋಡಗನ ಕೈಯಲ್ಲಿ ಇದ್ದಂತೆ',
'ಹೊಟ್ಟೆಗೆ ಹಿಟ್ಟಿಲ್ಲ ಜುಟ್ಟಿಗೆ ಮಲ್ಲಿಗೆಯು',
'ಮೂಗು ಸಣ್ಣದು ಮೂಗುತಿ ದೊಡ್ಡದು',
'ಹಸಿವೆಗಾರದೆ ಬೆಕ್ಕು ಹತ್ತಿಯನು ತಿಂದಂತೆ',
'ಕತ್ತೆ ಬಲ್ಲುದೆ ಕತ್ತುರಿಯ ಪರಿಮಳವ',
'ಹೇನು ಬಲ್ಲುದೆ ಮುಡಿದ ಹೂವಿನಾ ಪರಿಮಳವ',
'ಊರೆಲ್ಲ ತೊಳೆದರೆ ಮಸಿ ಬೆಳ್ಳಗಾಗುವುದೆ',
'ನೀರೊಳಗಿನ ಕಲ್ಲು ಮೃದುವಾಗ ಬಲ್ಲುದೆ',
'ತಾಳ ಬೇಕು ತಕ್ಕ ಮೇಳ ಬೇಕು',
'ಓದುವುದು ವೇದ ಹಾಕುವುದು ಗಾಳ'.

ಇಂತಹ ನೂರಾರು ಸೂಕ್ತಿಗಳನ್ನು ದಾಸರುಗಳು ತಮ್ಮ ಸಾಹಿತ್ಯದಲ್ಲಿ ಸಾಮಾಜಿಕ ಸ್ವಾಸ್ಥ್ಯಕ್ಕಾಗಿ ಬಳಸಿಕೊಂಡರು. ಇಲ್ಲಿರುವ ಗಾದೆಗಳು ಅಂದಿನ ಕಾಲದಲ್ಲಿ ದಿನನಿತ್ಯ ಪ್ರಯೋಗವಾಗುತ್ತಿದ್ದವುಗಳು. ಅವುಗಳನ್ನೇ ತಮ್ಮ ಕೀರ್ತನೆಗಳಲ್ಲಿ ಬಳಸಿಕೊಳ್ಳುವುದು ಹೆಚ್ಚು ಪರಿಣಾಮಕಾರಿ ಎಂಬ ಕಲ್ಪನೆ ದಾಸರದ್ದು. ಕೇವಲ ಗಾದೆಗಳಲ್ಲೇ ತಮ್ಮ ಕೀರ್ತನೆಗಳನ್ನು ವೈಭವೀಕರಿಸದೆ ಸಮಾಜ ಜನತೆಯ ನೈತಿಕ ಬದುಕಿಗಾಗಿ ನಿರಾಡಂಬರ ಶೈಲಿಯ ಆಡುಭಾಷೆಯ ಪದಗಳನ್ನೇ ಹೆಚ್ಚಾಗಿ ಬಳಸಿಕೊಂಡು ದೇಸೀ ಕಲ್ಪನೆಗೆ ಶರಣು ಹೋದುದು ದಾಸಸಾಹಿತ್ಯದ ಹೆಚ್ಚುಗಾರಿಕೆ.

'ಆಚಾರವಿಲ್ಲದ ನಾಲಗೆ ನಿನ್ನ ನೀಚ ಬುದ್ಧಿಯ ಬಿಡೊ ನಾಲಗೆ'

'ಅಜ್ಞಾನಿಗಳ ಕೂಡೆ ಅಧಿಕಸ್ನೇಹಕ್ಕಿಂತ ಸುಜ್ಞಾನಿಗಳ ಕೂಡೆ ಜಗಳವೇ ಲೇಸು'

'ವರಕವಿಗಳ ಮುಂದೆ ನರಕವಿಗಳ ವಿದ್ಯೆ ತೋರಬಾರದು'

'ತನುವ ನೀರೊಳಗದ್ದಿ ಫಲವೇನು ತನ್ನ ಮನದಲ್ಲಿ ದೃಢಭಕ್ತಿ ಇಲ್ಲದ ಮನುಜರು'

'ಹೆಣ್ಣುಕೊಟ್ಟತ್ತೆ ಮಾವಂದಿರ ಮನೆಯಲ್ಲಿ ಸೇರಿ ಇರುವರೆ ಎಲೆ ಮನುಜ'

'ಹೆತ್ತ ತಾಯ್ತಂದೆಗಳ ಚಿತ್ತವ ನೋಯಿಸಿ ನಿತ್ಯ ದಾನವ ಮಾಡಿ ಫಲವೇನು'

'ಮಾನವ ಜನ್ಮ ದೊಡ್ಡದು, ಇದ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ'

'ಕುಲಕುಲ ಕುಲವೆನ್ನುತಿಹರು, ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ'

ಇಂತಹ ರಚನೆಗಳಿಂದ ದಾಸರುಗಳಲ್ಲಿದ್ದ ಸಮಾಜ ಮತ್ತು ಸಂಸಾರಪರವಾದ ಧೋರಣೆಯ ಅರಿವಾಗುತ್ತದೆ. ಕೇವಲ ಬಾಯಿಮಾತನ್ನು ಬರವಣಿಗೆಗಳ ಮೂಲಕ ಸುಸ್ಥಿರಗೊಳಿಸುವ ಮತ್ತು ಆ ಮೂಲಕ ಸಾಮಾಜಿಕ ಪರಿಸರವನ್ನು ಹಸನಾಗಿಸುವ ಉದ್ದೇಶ ಸ್ಪಷ್ಟವಾಗಿ ಗೋಚರವಾಗುತ್ತದೆ.

ಇಂತಹ ಭಿನ್ನ ಸ್ವರೂಪದ ಸಾಮಾಜಿಕ ಕಾಳಜಿಯು ಚೈತನ್ಯಪಂಥದಲ್ಲಿ ಕಡಿಮೆಯೇನಿಲ್ಲ. ಅವರ ಗುರಿಯು ಕೃಷ್ಣಭಕ್ತಿಯ ಸೇವನೆಯಿಂದ ಸಮಾಜ ಜಾಗೃತಿಗೆ ಒತ್ತುನೀಡುವುದು. ಈ ದೃಷ್ಟಿಯಿಂದಲೇ ಗೌಡೀಯಪಂಥವು ಹರೇಕೃಷ್ಣ ಮಹಾಮಂತ್ರವನ್ನು ಭಜಿಸಿ ನರ್ತಿಸಲಿಕ್ಕಾಗಿ 'ಕಾನಾಯ್' ಎಂಬ ನಾಟ್ಯಶಾಲೆಯನ್ನು ಬಂಗಾಳದಲ್ಲಿ ಕಟ್ಟಿಸಿದ್ದು. ಇದು ಕೃಷ್ಣಲೀಲಾಚರಿತೆಯ ಪ್ರಕಟಣೆಗಾಗಿಯೇ ನಿರ್ಮಿಸಲಾದ 'ಹರಿಸಭಾ'ವೆನ್ನುವ ವೇದಿಕೆಗಳು. ಇದು ಚೈತನ್ಯಪಂಥವಿರಿಸಿದ ಹೊಸ ಸಾಮಾಜಿಕ ಕಳಕಳಿಯೆನ್ನಬಹುದು.

ಚೈತನ್ಯಪಂಥದ ಸಾಮಾಜಿಕ ಕಾಳಜಿಯಲ್ಲಿ ಎದ್ದುತೋರುವ ವಿಚಾರವೆಂದರೆ, ಧಾರ್ಮಿಕ ಕ್ಷೇತ್ರಗಳ ಜೀರ್ಣೋದ್ಧಾರ. ಚೈತನ್ಯಪಂಥವು ಈಗ ಹೇಳುವ 'ರಾಧಾಕುಂಡ'ವೆಂಬ ಸ್ಥಳವು ಚೈತನ್ಯರ ಕಾಲದಲ್ಲಿ ಕೃಷಿಭೂಮಿಯಾಗಿತ್ತು. ಅಲ್ಲಿದ್ದ ನೀರಿನ ಚಿಕ್ಕ ಹೊಂಡವನ್ನು ಚೈತನ್ಯರು ರಾಧಾಕುಂಡವೆಂದು ಗುರುತಿಸಿ, ಅಲ್ಲಿಯೇ ಸ್ನಾನ ಸಂಧ್ಯಾವಂದನೆಯನ್ನು ಪೂರೈಸುತ್ತಿದ್ದರು. ಮುಂದಿನ ದಿನಗಳಲ್ಲಿ ರೂಪ ಹಾಗೂ ಸನಾತನ ಗೋಸ್ವಾಮಿಗಳು ಚೈತನ್ಯರ ನಿರ್ದೇಶನದಂತೆ ಆ ರಾಧಾಕುಂಡವನ್ನು ಜೀರ್ಣೋದ್ಧಾರ ಮಾಡಿದರು. ಕಣ್ಮರೆಯಾಗಿದ್ದ

ಹಲವು ತೀರ್ಥಕ್ಷೇತ್ರಗಳನ್ನು ಗೋಸ್ವಾಮಿಗಳು ಉತ್ಖನನ ಮಾಡಿ ಜೀರ್ಣೋದ್ಧಾರ ಮಾಡಿದ್ದಾರೆ ಎನ್ನುವುದಕ್ಕೆ ಇದು ಜೀವಂತ ಉದಾಹರಣೆಯಾಗಿ ಬಿಡುತ್ತದೆ. ಚೈತನ್ಯಪಂಥವು ಮಾಡಿದ ಕ್ಷೇತ್ರ ಜೀರ್ಣೋದ್ಧಾರ ಮತ್ತು ದೇವಸ್ಥಾನಗಳ ನಿರ್ಮಾಣವು ಆಗಿನ ಜನತೆಗೆ ಧಾರ್ಮಿಕ ವಾತಾವರಣವನ್ನು ಕಲ್ಪಿಸುವ ಕಾಳಜಿಯೆಂದು ಭಾವಿಸಬೇಕಾಗುತ್ತದೆ.

ಚೈತನ್ಯಪಂಥವು ಸ್ವಸ್ಥಸಮಾಜದ ದೃಷ್ಟಿಯಲ್ಲಿ ನಿರಂಕುಶ ರಾಜರುಗಳಿಂದ ಸಾತ್ವಿಕರಿಗಾಗುತ್ತಿದ್ದ ಶಿಕ್ಷೆಯನ್ನು ತಪ್ಪಿಸುವ ಕಳಕಳಿಯನ್ನು ಹೊತ್ತಿತ್ತು. ಅಂತಹ ಒಂದು ಘಟನೆ ರಾಮಾನಂದರಾಯರ ತಮ್ಮನಾದ ಗೋಪೀನಾಥ ಪಟ್ಟನಾಯಕನ ಮರಣದಂಡನೆಯ ಶಿಕ್ಷೆಯನ್ನು ತಪ್ಪಿಸಿದ್ದು.

ಗೋಪೀನಾಥ ಪಟ್ಟನಾಯಕ ರಾಮಾನಂದ ಭ್ರಾತಾ ।
ರಾಜಾ ಮಾರಿತೇ ಛಿಲ ಪ್ರಭು ಹೈಲ ತ್ರಾತಾ ॥[೪೩]

ಇಲ್ಲಿ ಅಹಿತಕಾರೀ ಘಟನೆಯೊಂದನ್ನು ತಪ್ಪಿಸುವ ಕೆಲಸವೊಂದು ಚೈತನ್ಯಪಂಥದಿಂದ ನಡೆಯುತ್ತದೆ. ಇಂತಹ ಸಾವನ್ನು ತಪ್ಪಿಸುವ ಘಟನೆಗಳು ದಾಸಪಂಥದಲ್ಲೂ ಕೆಲವೊಂದು ನಡೆದಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಗೋಪಾಲದಾಸರು ತಮ್ಮ ಗುರು ವಿಜಯದಾಸರ ಆಜ್ಞೆಯಂತೆ ತಮ್ಮ ಆಯುಷ್ಯದ ನಲವತ್ತು ವರ್ಷವನ್ನು ಮೃತರಾದ ಶ್ರೀನಿವಾಸಾಚಾರ್ಯ(ಜಗನ್ನಾಥದಾಸ)ರಿಗೆ ನೀಡಿ, ಮೃತರಾದ ಆಚಾರ್ಯರನ್ನು ಬದುಕಿಸಿದ್ದು, ಬನ್ನೂರಿನ ಬ್ರಾಹ್ಮಣನಾದ ರಾಮಾಚಾರ್ಯನು ಅಸುನೀಗಲು, ಪತಿವಿಯೋಗವನ್ನು ಸಹಿಸಲಾಗದ ಆತನ ಹೆಂಡತಿಯು ಶ್ರೀಬ್ರಹ್ಮಣ್ಯತೀರ್ಥರಿಗೆ ನಮಸ್ಕರಿಸಲು, 'ದೀರ್ಘ ಸುಮಂಗಲೀಭವ'ವೆಂದು ಆಶೀರ್ವದಿಸಿ, ರಾಮಾಚಾರ್ಯನನ್ನು ಮತ್ತೆ ಪಡೆದದ್ದು.....ಈ ಎಲ್ಲ ಹಿತಕಾರ್ಯಗಳು ನಡೆದದ್ದು ಸ್ವಸ್ಥಸಮಾಜದ ಕಟ್ಟುವಿಕೆಗಾಗಿ.

ಒಟ್ಟಿನಲ್ಲಿ ಒಂದು ನಿರ್ದಿಷ್ಟ ಕಾಲಮಾನದಲ್ಲಿ ಹುಟ್ಟಿದ ಎರಡು ಪಂಥಗಳ ಸಾಮಾಜಿಕ ಕಳಕಳಿಯು ನಿಜಕ್ಕೂ ಮೆಚ್ಚುವಂತಹುದು. ಉಭಯ ಪಂಥಗಳೂ ಗುರುಶಿಷ್ಯ ಪರಂಪರೆಯಿಂದ ಬೆಳೆದುಕೊಂಡುಬಂದು, ತಮ್ಮತಮ್ಮ ತಾತ್ತ್ವಿಕ ನೆಲೆಯನ್ನು ಸಮಾಜಮುಖಕ್ಕೆ ಪರಿಚಯಿಸಿ, ಆ ಸಮಾಜವನ್ನು ಉದ್ಧರಿಸಿತು.

೫.೬: ಗುರುಶಿಷ್ಯ ಪರಿಕಲ್ಪನೆ

ಗುರುಕೃಷ್ಣ ರೂಪ ಹನ ಶಾಸ್ತ್ರೇರ ಪ್ರಮಾಣೇ ।
ಗುರುರೂಪೇ ಕೃಷ್ಣ ಕೃಪಾ ಕರೇನ ಭಕ್ತ ಗಣೇ ॥[೪೪]

(ಶಿಷ್ಯನಿಗೂ ಗುರುವಿಗೂ ಇರುವ ಸಂಬಂಧವು ಶಿಷ್ಯನಿಗೂ ಭಗವಂತನಿಗೂ ಇರುವ ಸಂಬಂಧದಂತೆಯೇ. ಗುರುವು ಯಾವಾಗಲೂ ತನ್ನನ್ನು ಭಗವಂತನ ಅತ್ಯಂತ ವಿನಮ್ರ ಸೇವಕನೆಂದು ಹೇಳಿಕೊಳ್ಳುತ್ತಾನೆ. ಆದರೆ ಶಿಷ್ಯನು ಗುರುವನ್ನು ಭಗವಂತನ ಅಭಿವ್ಯಕ್ತಿಯೆಂದು ಭಾವಿಸಿಕೊಳ್ಳಬೇಕು).

ದಾಸಪಂಥ ಮತ್ತು ಚೈತನ್ಯಪಂಥಗಳು ಮುಖ್ಯವಾಗಿ ವೈಷ್ಣವ ಪಂಥಗಳು. ಆದರೆ ಅವು ಪ್ರಕಟಗೊಂಡ ನೆಲೆಗಳು ಮಾತ್ರ ಬೇರೆಬೇರೆ. ಪಂಥಗಳ ಪರಸ್ಪರ ಮುನ್ನಡೆಯಲ್ಲಿ ಸಮಾನ ಮತ್ತು ಅಸಮಾನ ಅಂಶಗಳು ವಿಶೇಷವಾಗಿಯೇ ಗೋಚರವಾಗಲು ಸಾಧ್ಯ. ಆದರೆ ಅವುಗಳಲ್ಲಿ ಕೆಲವೊಂದು ಅಂಶಗಳು ಪ್ರಾಚೀನದ್ದಾದರೆ,

ಇನ್ನೂ ಕೆಲವು ನಂತರದ ಶತಮಾನದಲ್ಲಾದ ಬದಲಾವಣೆಗಳು. ಅಂತಹ ಹಲವು ವಿಚಾರಗಳಲ್ಲಿ ಗುರುಶಿಷ್ಯ ಪದ್ಧತಿ ಮತ್ತು ಅದರ ಪರಂಪರೆಯು ಒಂದು. ಇಲ್ಲಿ ಪರಸ್ಪರವಾಗಿ ಸಮಾನತೆಯೂ ಇದೆ; ಅಸಮಾನತೆಯೂ ಇದೆ.

ದಾಸಪಂಥದಲ್ಲಿ ಗುರುಶಿಷ್ಯ ಪರಂಪರೆ ಮತ್ತು ಅಲ್ಲಿಯ ದೀಕ್ಷಾಪದ್ಧತಿಯಲ್ಲಿ ಯಾವುದೇ ರೀತಿಯ ಲಿಖಿತ ಆದೇಶಗಳಿಗೆ ಆಸ್ಪದವಿರಲಿಲ್ಲ. ಅಲ್ಲೇನಿದ್ದರೂ ಕೇವಲ ಸಾಹಿತ್ಯಸಂದೇಶ. ಆದರೆ ದಾಸಕುಲದ ಮೊದಲಿಗೆ ಶಿಷ್ಯತ್ವ ಸ್ವೀಕಾರದಲ್ಲಿ ಸದ್ಗುರುವಿಗಾಗುವ ಶ್ರೀಹರಿಯ ಪ್ರೇರಣೆಯೇ ಅಲ್ಲಿ ಮುಖ್ಯವಾದುದು. ಶ್ರೀಪಾದರಾಜರನ್ನು ಶಿಷ್ಯರನ್ನಾಗಿ ಸ್ವೀಕರಿಸಿದ ಸ್ವರ್ಣವರ್ಣ ತೀರ್ಥರ ವಿಚಾರವಿರಬಹುದು, ವ್ಯಾಸರಾಯರನ್ನು ಶಿಷ್ಯರನ್ನಾಗಿ ಸ್ವೀಕರಿಸಿದ ಬ್ರಹ್ಮಣ್ಯತೀರ್ಥರ ವಿಚಾರವಿರಬಹುದು, ವಾದಿರಾಜರನ್ನು ಶಿಷ್ಯರನ್ನಾಗಿ ಸ್ವೀಕರಿಸಿದ ವಾಗೀಶತೀರ್ಥರ ವಿಚಾರವಿದ್ದಿರಬಹುದು. ಇವೆಲ್ಲವುಗಳ ಹಿಂದೆ ದೈವೀಪ್ರೇರಣೆಯೇ ಮುಖ್ಯವಾಗಿತ್ತು.

ಆದರೆ, ಚೈತನ್ಯಪಂಥದ ಮೊದಲಲ್ಲಿ ಶಿಷ್ಯತ್ವ ಸ್ವೀಕಾರಕ್ಕೆ ಲಿಖಿತ ಉಲ್ಲೇಖಗಳು ಇಲ್ಲದಿದ್ದರೂ ಇತ್ತೀಚಿನ ಕಾಲಾವಧಿಯಲ್ಲಿ ಅದು ಬಳಕೆಯಲ್ಲಿದೆ. ಈ ಲಿಖಿತ ವ್ಯವಸ್ಥೆಯ ಮುಖ್ಯಕರ್ತರು ಶ್ರೀಲ ಪ್ರಭುಪಾದರು. ಅವರೇ ಹೇಳುವಂತೆ ಗುರುಶಿಷ್ಯ ಪರಂಪರೆಯೊಂದು ಜೀವಂತ ವ್ಯವಸ್ಥೆ. ಶಿಷ್ಯನು ಯೋಗ್ಯ ಗುರುವೊಬ್ಬನನ್ನು ಸಂಪಾದಿಸಬೇಕು. ಆ ಗುರುವು ಶಿಷ್ಯನೊಂದಿಗೆ, ಶಿಷ್ಯನು ಗುರುವೊಂದಿಗೆ ಸಮಕ್ಷಮದಲ್ಲಿ ಇರಬೇಕು. ಆದರೆ ದೈಹಿಕ ಪ್ರತ್ಯಕ್ಷವೇ ಗುರುವಿನ ಜವಾಬ್ದಾರಿಯಲ್ಲ. ಶಿಷ್ಯನು ಬದ್ಧಸ್ಥಿತಿಯಿಂದ ಪ್ರಬುದ್ಧಸ್ಥಿತಿಗೆ ಬರುವಲ್ಲಿ ಮತ್ತು ಆತನನ್ನು ಶುದ್ಧಾಂಗನನ್ನಾಗಿ ಮಾಡುವಲ್ಲಿ ಗುರುಶಕ್ತಿಯು ಕಾರ್ಯನಿರ್ವಹಿಸಬೇಕು. ಶುದ್ಧಾಂಗನಾಗಲು ಬಯಸುವ ಶಿಷ್ಯನಿಗೆ ಶಿಸ್ತಿನ ನಿಯಮಗಳಲ್ಲಿ ಪ್ರೇಮವಿರಬೇಕು ಎನ್ನುತ್ತದೆ. ಅದಕ್ಕಾಗಿ ಚೈತನ್ಯಪಂಥವು ಹೇಳುವಂತೆ, ಭಕ್ತನೋರ್ವನಿಗೆ ಎರಡು ರೀತಿಯ ಗುರುಗಳಿರಬಹುದು. ಅವರುಗಳೆಂದರೆ, ೧. ದೀಕ್ಷಾಗುರು, ೨. ಶಿಕ್ಷಾಗುರು. ಆದರೆ ಭಕ್ತನೋರ್ವನಿಗೆ ದೀಕ್ಷಾಗುರು ಒಬ್ಬನೇ ಇರಬೇಕು. ಶಿಕ್ಷಾಗುರುಗಳನ್ನು ತನ್ನ ಅಧ್ಯಯನಾಸಕ್ತಿಗೆ ಸಮವಾಗಿ ಎಷ್ಟು ಬೇಕಾದರೂ ಸ್ವೀಕರಿಸಬಹುದು ಎಂದು ಭಾವಿಸುತ್ತದೆ.[೪೩] ಈ ನೆಲೆಯಲ್ಲಿ 'ಚೈತನ್ಯ ಚರಿತಾಮೃತ'ದ ಕರ್ತೃಗಳಾದ ಕೃಷ್ಣದಾಸ ಕವಿರಾಜ ಗೋಸ್ವಾಮಿಗಳು ಆರುಜನ ಶಿಕ್ಷಾಗುರುಗಳನ್ನು ಸ್ಮರಿಸುತ್ತಾರೆ. ಅವರುಗಳೆಂದರೆ,

ಶ್ರೀರೂಪ, ಸನಾತನ, ಭಟ್ಟ ರಘುನಾಥ ।
ಶ್ರೀಜೀವ, ಗೋಪಾಲ ಭಟ್ಟ, ದಾಸ ರಘುನಾಥ ॥
ಏಇ ಛಯ ಗುರು ಶಿಕ್ಷಾ ಗುರು ಯೇ ಆಮಾರ ।
ತಾಂಗ್ ಸಬಾರ ಪಾದ ಪದ್ಮೇ ಕೋಟಿ ನಮಸ್ಕಾರ ॥[೪೪]

ಈ ಆರುಜನ ಗೋಸ್ವಾಮಿಗಳು ಇಲ್ಲಿಯ ಶಿಕ್ಷಾಗುರುಗಳೆನಿಸಿಕೊಳ್ಳುತ್ತಾರೆ. ಅವರುಗಳಿಗೆ ವಿಧೇಯನಾಗದ ಶಿಷ್ಯ ಅಥವಾ ಭಕ್ತನನ್ನು 'ಗೌಡೀಯ ವೈಷ್ಣವ'ನೆಂದು ಪರಿಗಣಿಸಬಾರದೆಂದು ಲೇಖಕರು ಅರಿಕೆ ಮಾಡಿಕೊಳ್ಳುತ್ತಾರೆ.

ಇಲ್ಲಿ ಗೌಡೀಯ ವೈಷ್ಣವ ಸಂನ್ಯಾಸಿಗಳಾದ ಬಿಲ್ವಮಂಗಲ ಠಾಕೂರರು ತಮ್ಮ 'ಕೃಷ್ಣಕರ್ಣಾಮೃತ'ವೆಂಬ ಕೃತಿಯಲ್ಲಿ ದಾಖಲಿಸಿದ ವಿಚಾರವನ್ನು ನೆನಪಿಸಿಕೊಳ್ಳಲೇಬೇಕು. ಅದು ಶಿಕ್ಷಾಗುರುವಿಗೆ ಸಂಬಂಧಿಸಿದುದು. ಅವರು

ತಮ್ಮ ಕೃತಿಯಲ್ಲಿ ಹೆಸರಿಸುವ ಮೊದಲ ಶಿಕ್ಷಾಗುರುವೆಂದರೆ ಚಿಂತಾಮಣಿಯೆಂಬ ಸ್ತ್ರೀ. ಬಿಲ್ವಮಂಗಲರಿಗೆ ಆಕೆಯೇ ಮೊದಲಗುರು. ಆಕೆಯಿಂದಲೇ ಅವರು ಆಧ್ಯಾತ್ಮಿಕ ಮಾರ್ಗವನ್ನು ಅನುಸರಿಸುವಂತಾದುದು. ಇಷ್ಟಾಗಿಯೂ ಚಿಂತಾಮಣಿಯೊಬ್ಬಳು ವೇಶ್ಯೆ. ಬಿಲ್ವಮಂಗಲರು ತಮ್ಮ ಪೂರ್ವಾಶ್ರಮದಲ್ಲಿ ಆಕೆಯೊಂದಿಗೆ ಸಲುಗೆಯಿಂದ ಇದ್ದವರು. ಅನಂತರದಲ್ಲಿ ಆಕೆಯಿಂದಲೇ ಭಕ್ತಿಮಾರ್ಗವನ್ನು ಹಿಡಿಯಲು ಸ್ಫೂರ್ತಿಯನ್ನು ಪಡೆದವರು. ಇವರು ಐಹಿಕ ಜೀವನವನ್ನು ತೊರೆಯಲು, ಕೃಷ್ಣಪ್ರೇಮದಲ್ಲಿ ಮನವರಿಕೆ ಹುಟ್ಟುವಂತೆ ಮಾಡಲು ಕಾರಣಳಾದವಳು ಚಿಂತಾಮಣಿಯೆಂಬ ವೇಶ್ಯೆ. ಹಾಗಾಗಿ ಅವರು ಮೊದಲ ಶಿಕ್ಷಾಗುರುವನ್ನಾಗಿ ಚಿಂತಾಮಣಿಯನ್ನೇ ನೆನೆಯುತ್ತಾರೆ. ಅನಂತರದಲ್ಲಿ ತಮ್ಮ ದೀಕ್ಷಾಗುರುಗಳಾದ ಸೋಮಗಿರಿಗೆ ಪ್ರಣಾಮವನ್ನು ಸಲ್ಲಿಸುತ್ತಾರೆ.[೪೭]

ಈ ಎಲ್ಲಾ ಕಲ್ಪನೆಯಿಂದ ಶ್ರೀಲ ಭಕ್ತಿವೇದಾಂತ ಪ್ರಭುಪಾದರು 'ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂಘ'ದ ಮೂಲಕ 'ಋತ್ವಿಕ'ರಿಂದ ದೀಕ್ಷಾಪದ್ಧತಿಯನ್ನು ಮುಂದುವರಿಸಬೇಕೆಂದು ಹೇಳಿದರು. ಇಲ್ಲಿ 'ಋತ್ವಿಕ'ರೆಂದರೆ ಆಚಾರ್ಯರ ಪ್ರತಿನಿಧಿ. ಕ್ರಿ.ಶಕ ೧೯೭೭ ರಲ್ಲಿ ಪ್ರಭುಪಾದರು ತಮ್ಮ ಹನ್ನೊಂದುಮಂದಿ ಶಿಷ್ಯರನ್ನು 'ಋತ್ವಿಕ್'ಗಳನ್ನಾಗಿ ನಿಯಮಿಸಿ, ಅವರಿಗಿರಬೇಕಾದ ಅರ್ಹತೆಯನ್ನು ಒತ್ತಿಹೇಳಿದರು.

"ಮಹಾ ಭಾಗವತನ ಅತ್ಯುನ್ನತ ಪದವಿಯನ್ನು ವ್ಯಕ್ತಿಯು ಸಾಧಿಸಿದಾಗ ಆತನನ್ನು ಗುರುವಾಗಿ ಸ್ವೀಕರಿಸಬೇಕು ಮತ್ತು ಆತನು ದೇವೋತ್ತಮ ಪರಮಪುರುಷ ಹರಿಯೇ ಎಂದು ಪೂಜಿಸಬೇಕು. ಇಂತಹ ವ್ಯಕ್ತಿಯೊಬ್ಬನು ಮಾತ್ರ ಗುರುಪದವಿಯನ್ನು ಅಲಂಕರಿಸಲು ಸಾಧ್ಯ.[೪೮] "ತನ್ನ ಹಿಂದಿನ ಗುರುವಿನಿಂದ ಅಧಿಕಾರ ಪಡೆದವನೂ, ಗುರುಶಿಷ್ಯ ಪರಂಪರೆಯಲ್ಲಿ ಬಂದವನು ಸದ್ಗುರುವಿನಿಂದ ವ್ಯಕ್ತಿಯು ದೀಕ್ಷೆಯನ್ನು ಪಡೆಯಬೇಕು. ಇದನ್ನು ದೀಕ್ಷಾವಿಧಾನ ಎನ್ನುತ್ತಾರೆ".[೪೯] ಇಲ್ಲಿಯ ಆಚರಣೆಯಲ್ಲಿ 'ಪುರಶ್ಚರ್ಯಾ' ಎಂಬ ಮಾತು ಮುಖ್ಯವಾಗುತ್ತದೆ. 'ಪುರಃ' ಎಂದರೆ 'ಮೊದಲು', 'ಚರ್ಯಾ' ಎಂದರೆ 'ಕಾರ್ಯ'ಎಂದರ್ಥ. ಅಂದರೆ ಮೊದಲ ಕೆಲಸವೆಂದರ್ಥ. ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಂಜೆ ವಿಗ್ರಾಹಾರ್ಚನೆ ಮಾಡಬೇಕು. ಹರೇಕೃಷ್ಣ ಮಹಾಮಂತ್ರವನ್ನು ಜಪಿಸಬೇಕು. ತರ್ಪಣ ಬಿಡಬೇಕು. ಹೋಮಮಾಡಿ ಬ್ರಾಹ್ಮಣರಿಗೆ ಊಟವನ್ನು ಹಾಕಬೇಕು. ಈ ಐದು ಕ್ರಿಯೆಗಳನ್ನು 'ಪುರಶ್ಚರ್ಯಾ' ಎನ್ನುತ್ತಾರೆ. ಶಿಷ್ಯನೊಬ್ಬನು ತನ್ನ ಗುರುವಿನಿಂದ ಪಡೆದ ದೀಕ್ಷೆಯು ಯಶಸ್ವಿಯಾಗಬೇಕಾದರೆ ಈ ಪುರಶ್ಚರ್ಯಾ ಕಾರ್ಯಗಳನ್ನು ಮಾಡಲೇಬೇಕು.

ಈ ಎಲ್ಲಾ ವಿಚಾರಗಳು ಚೈತನ್ಯಪಂಥದಲ್ಲಿ ಕಾರ್ಯಪ್ರವೃತ್ತನಾಗಲು ಬಯಸುವವನ ಅರ್ಹತೆಗಳು. ಆದರೆ ದಾಸಪಂಥದ ದೀಕ್ಷೆಯನ್ನು ಬಯಸುವವನು, ಮುಖ್ಯವಾಗಿ ತ್ರಿಕರಣ ಪೂರ್ವಕವಾಗಿ ಬದಲಾದರೆ ಸಾಕಾಗುತ್ತದೆ. ಆದುದರಿಂದ ದಾಸಪಂಥದಲ್ಲಿ ಗುರುವಾಗುವ ಮೊದಲು ಆತನಿಗೆ ದಾಸ್ಯದ ಪರಿಚಯ ಚೆನ್ನಾಗಿರಬೇಕಾಗುತ್ತದೆ. ಇದಕ್ಕಿಂತಲೂ ಮುಖ್ಯವಾಗಿ ಹರಿದಾಸರೆಲ್ಲರೂ ಹರಿಯನ್ನೇ ನಂಬಿ ಬದುಕುತ್ತಾ, ಕೀರ್ತನೆಗಳನ್ನು ರಚಿಸುತ್ತಾ, ದ್ವೈತಸಿದ್ಧಾಂತವನ್ನು ಪ್ರತಿಪಾದಿಸುತ್ತಾ ಸಾಗಿದವರು. ಹಾಗಾಗಿಯೇ ಪೂರ್ಣವಾದ

ದಾಸಕೀರ್ತನಕುಲಕ್ಕೆ ಗುರುಗಳೆಂದರೆ ಶ್ರೀಮಧ್ವಾಚಾರ್ಯರು.[೫೦] ದಾಸಪರಂಪರೆ ಮುಂದುವರಿದಂತೆ, ಹಿಂದಿನ ದಾಸಶ್ರೇಷ್ಠರೆಲ್ಲ ಮುಂದಿನ ದಾಸರುಗಳಿಗೆ ಶ್ರೇಷ್ಠಗುರುಗಳಾಗಿ ಕಾಣುತ್ತಾರೆ. ಆದರೂ ಅಯೋಗ್ಯ ಗುರುವಿನ ಬೂಟಕತನದ ಪ್ರಭಾವ ಅಂದಿನ ಸಮಾಜದಲ್ಲಿ ಹೆಚ್ಚು ಪ್ರಭಾವವಿದ್ದುದರಿಂದಲೋ ಏನೋ ಹರಿದಾಸರು ದಾಸದೀಕ್ಷೆಗೆ ಕೊಟ್ಟ ಗಮನವನ್ನು ಗುರುವಿನ ಸ್ವೀಕಾರಕ್ಕೆ ಕೊಡಲಿಲ್ಲವೆಂದೇ ಹೇಳಬೇಕು.

ಗೋಪಾಲದಾಸರಂತೂ ಗುರುವೆನಿಸಿಕೊಳ್ಳುವ ಮೊದಲು ಆತನ ನಡತೆಯನ್ನೇ ಆತನು ತಿದ್ದಿಕೊಳ್ಳಬೇಕೆನ್ನುತ್ತಾರೆ. ಆದಕ್ಕಾಗಿ ಅವರು ಕೊಡುವ ಗುರುಬೋಧೆಯೆಂದರೆ, 'ಮಡಿ ಮಾಡಬೇಕು ಒಳ್ಳೆ ನಡತೆ ಕಲಿಯಬೇಕು, ಎಡಹಿ ಮುಗ್ಗುತ ನೀರ ಮಡುವಿನೊಳಗೆ ಪೋಗಿ' ಎನ್ನುವಲ್ಲಿ, ಬುಡುಗುಳಿಯಂತೆ ಮಿಂದು ಗುಡುಗುಡು ಗುಟ್ಟುತ ಮಡಿ ಮಾಡುವ ಕಪಟ ಗುರುವಿನ ವಿರುದ್ಧವಾಗಿ ದನಿಯನ್ನು ಎತ್ತುತ್ತಾರೆ.

ದಾಸಪಂಥದಲ್ಲಿ ಗುರುಕಲ್ಪನೆಯ ಕುರಿತು ವಿಶೇಷ ವಿವರಣೆಯಿಲ್ಲ. ಆದರೆ, ಗುರುಭಕ್ತಿಯಿದೆ. ಅದಕ್ಕೆ ಲಿಖಿತ ರೂಪದ ಕಟ್ಟುಪಾಡುಗಳಿಲ್ಲ, ನಿರ್ಬಂಧವಿಲ್ಲ. ಅಲ್ಲಿರುವುದು ಕೇವಲ ಮನವರಿಕೆಯ ಮಾತು. ದಾಸಪಂಥದ ಗುರುಶಿಷ್ಯ ಪರಿಕಲ್ಪನೆಯ ಕುರಿತಾಗಿ ಪುರಂದರದಾಸರು, ಕಾಖಂಡಕಿ ಕೃಷ್ಣರಾಯರು, ಮೋಹನದಾಸರು, ಅಸ್ಕಿಹಾಳ ಗೋವಿಂದದಾಸರು, ಮೊದಲಕಲ್ಲು ಶೇಷದಾಸರು ಇವರುಗಳೆಲ್ಲ ಕೊಡುವ ಮೌಲ್ಯಾಧಾರಿತ ತೀರ್ಮಾನ ಮಾತ್ರ ಸತ್ವಪೂರ್ಣವಾಗಿ ಬಿಡುತ್ತದೆ.

ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ।
ಪರಿ ಪರಿ ಶಾಸ್ತ್ರವ ನೋದಿದರೇನು ವ್ಯರ್ಥವಾಯಿತು ಬಕುತಿ ॥
ಆರು ಶಾಸ್ತ್ರವನೋದಿದರಿಲ್ಲ, ಮೂರಾರು ಪುರಾಣದ ಮುಗಿಸಿದರಿಲ್ಲ ।
ಸಾರಿ ಸಜ್ಜನರ ಸಂಗವ ಮಾಡದೆ ಧೀರನಾಗಿ ಮೆರೆದರೆ ಎಲ್ಲ. ॥ – ಪುರಂದರದಾಸರು

ಶಿಷ್ಯನ ಬದುಕು ಮುಕ್ತಿಮುಖವಾಗಬೇಕು. ಅದಕ್ಕಾಗಿ ಗುರುವಿನಲ್ಲಿ ದಾಸ್ಯಭಾವವು ಅಂಕುರಿಸಬೇಕು. ಶಾಸ್ತ್ರ ಸಂಹಿತೆ, ಪುರಾಣಗಳ ಓದಿಗಿಂತಲೂ ಮುಖ್ಯವಾಗಿ ಗುಲಾಮಭಾವ ಶಿಷ್ಯನಲ್ಲಿ ತೋರದಿದ್ದರೆ ಮುಕ್ತಿದರ್ಶನ ಆತನಿಗೆ ಲಭಿಸಲಾಗದೆಂಬುದು ಪುರಂದರದಾಸರ ಇಂಗಿತ. ಅದಕ್ಕಾಗಿ ಅವರು ಶಿಷ್ಯನಿಗೆ ಕೊಡುವ ನಿರ್ದೇಶನವೆಂದರೆ ಸಜ್ಜನರ ಸಂಗದ ಸಹವಾಸ. ಇವರಂತೆಯೇ ಇಷ್ಟೇ ಮೌಲಿಕವಾಗಿ ತಮ್ಮ ರಚನೆಗಳಲ್ಲಿ ಗುರುಭಕ್ತಿಯನ್ನು ತೋರಿಸಿದವರಲ್ಲಿ ಕಾಖಂಡಕಿ ದಾಸರುಗಳು ಮುಖ್ಯರು. ಮಹೀಪತಿದಾಸರ ರಚನೆಗಳಲ್ಲಿ ಅವರ ಗುರುಗಳಾದ ಅವಧೂತ ಭಾಸ್ಕರಸ್ವಾಮಿಗಳ ಪ್ರಭಾವವು ಹೆಚ್ಚಾಗಿ ತೋರುತ್ತದೆ. ಮಹಿಪತಿದಾಸರ ಮಗನಾದ ಕೃಷ್ಣದಾಸರಂತೂ ಗುರುವನ್ನು ಮರೆಯದಂತೆ, 'ಮರೆತರೆ ಸಿರಿಯರಸನ ಶುಭಚರಣವನ್ನು ಮರೆತಂತೆ' ಎಂದು ಶಿಷ್ಯಪರಂಪರೆಗೆ ವಿವೇಕದ ನುಡಿಗಳನ್ನು ಆಡುತ್ತಾರೆ.

ಗುರುವಿನ ಕಾಣದೆ ಪರಗತಿದೊರೆಯದು ॥
ಚಾರು ಕರ್ಮ ಧರ್ಮ ಹಾರ ಯಜ್ಞದಿ ಭೂರಿಯಶವನೆ ಪಡೆದನು ।

ಏರಿ ಸ್ವರ್ಗದಿ ಜಾರಿಬಿದ್ದ ಸಂಸಾರವಾದಿಯ ಸೇರಿದನು ॥ – ಕಾಖಂಡಕಿ ಕೃಷ್ಣರಾಯರು
ಗುರುವಿನ ಮನೆಯ ದಾಸಿಯಾಗುವೆ ॥
....
ವಿವೇಕದ ಕೊಡದೊಳು ಭಾವವೆಂಬ ಜಲವನು ತುಂಬಿ
ಸಾವಧಾನ ಸಿಂಬಿಲಿರಿಸಿ ಕೊಂಡು ಬರುತಾ ।
ದೇವ ಗುರುರಾಯ ನುಡಿದಾವರೆಯ ಊಳಿಗಕ
ಆವಾಗ ತಂದೆರೆವೆನು ಹರುಷದಲಿ ॥ –ಕಾಖಂಡಕಿ ಕೃಷ್ಣರಾಯರು

ಕಾಖಂಡಕಿ ಕೃಷ್ಣದಾಸರ ರಚನೆಗಳಲ್ಲಿ ರೂಪಕ ಉಪಮಾದಿಗಳ ಹೂರಣವೇ ಎದ್ದು ತೋರುತ್ತದೆ. 'ಅರುಹು ಎಂಬ ಸೀರೆಯುಟ್ಟು ಕುರುಹು ಎಂಬ ಕುಪ್ಪಸದಲ್ಲಿ ಗುರುಬೋಧೆಯೆಂಬ ಪಡಿಯನ್ನವನ್ನು ಉಣ್ಣುವಂತೆ' ಹೇಳುತ್ತಾರೆ. ಅವರ ಪ್ರಕಾರ ಇಹಪರಗಳೆರಡನ್ನು ಗೆಲ್ಲುವುದು ಗುರುವಿನ ಶುಭಾಶೀರ್ವಾದದಿಂದ.

ಗುರುವಿನ ಧರ್ಮ ಕೋರಾಣ್ಯದ ಭಿಕ್ಷೆ ಅರಿತು ನೀಡಲು ಮೋಕ್ಷ ।
ಮರೆತು ಬಿಟ್ಟರೆ ಕಪಾಳ ಮೋಕ್ಷ ಯಮನಲ್ಲಾಹೋದು ಶಿಕ್ಷ ॥ –
ಮೋಹನದಾಸರು
ಗುರುಪದೇಶವಿಲ್ಲದಂಥ ದಾಸ ನೇತಕೆ ।
ಅರಿತು ವಿದ್ಯೆ ಪೇಳದಂಥಗುರುವು ಏತಕೆ ॥ – ಮೋಹನದಾಸರು
ಗುರು ಕೃಪೆ ಪಡೆದವಗೆ ಪರ ಸೌಖ್ಯ ತಪ್ಪದೆ ।
ಹರಿಯ ಸ್ಮರಿಸುವ ನರಗೆ ನರಕಭಯವೆ ॥ –ಅಸ್ಕಿಹಾಳ ಗೋವಿಂದದಾಸರು
ಗುರುವೆ ನಿಮ್ಮಯ ಕರುಣವೃಕ್ಷ ನೆಳಲಾ ।
ಹೊರತಾದ ಕಾರಣದಿ ಹೀನನಾದೆ. ॥ – ಮೊದಕಲ್ಲುಶೇಷದಾಸರು

ಇವೆಲ್ಲವು ಗುರುಶಿಷ್ಯರ ಕುರಿತಾದ ಇತರ ದಾಸರ ರಚನೆಗಳು. ಈ ಎಲ್ಲಾ ರಚನೆಗಳು ನಮ್ಮ ಸಂಸ್ಕೃತಿಯ ಗುರುಶಿಷ್ಯ ಪದ್ಧತಿಯ ಮಹಿಮೆಯನ್ನು ಸಾರುವಂತಹುದು. ಇಲ್ಲಿ ಗುರುಸ್ತುತಿಗೆ ಒಳಗಾದವನಿಗೆ ಪಾರಮಾರ್ಥದ ಸೌಖ್ಯವಿದೆ. ಅಂತೆಯೇ ನಿಂದಕನಿಗೆ ದುರ್ಗತಿಯೂ ಇದೆ. ಹಾಗಾಗಿ ನಿತ್ಯಕರುಣಾವೃಕ್ಷದ ನೆರಳಾದ ಗುರುವಿನ ಸಾನ್ನಿಧ್ಯವನ್ನು ಶಿಷ್ಯನೋರ್ವನು ಪಡೆಯಲೇಬೇಕಾಗುತ್ತದೆ.

ಚೈತನ್ಯಪಂಥದ ಗುರುಶಿಷ್ಯ ಪರಂಪರೆಯಲ್ಲಿರುವವನು ತನ್ನದೇ ಆದ ಪದ್ಧತಿಯನ್ನು ಪ್ರಾರಂಭಿಸುವಂತಿಲ್ಲ. ಅವರು ಪಂಥದ ಸಂಪ್ರದಾಯದ ಚೌಕಟ್ಟಿಗೆ ಒಳಗೊಂಡಿರಬೇಕಾಗುತ್ತದೆ. ಪಂಥದೊಳಗಡೆ ವೈಷ್ಣವ ಪಂಥದ ಅನುಯಾಯಿಗಳೆಂದು ಹೇಳಿಕೊಳ್ಳುವ ಆವುಲ, ಬಾವುಲ, ಕರ್ತಭಜಾ, ನೇಡಾ, ದರವೇಶ, ಸಹಜಿಯಾ, ಸಖಿಬೇಕೀ, ಸ್ಮಾರ್ತ, ಜಾಟ, ಅತಿವಾಡಿ, ಚೂಡಾಧಾರೀ, ಗೌರಾಂಗ ನಾಗರೀ ಎನ್ನುವಂತಹ ಕೆಲವೊಂದು ಜನಪಂಗಡಗಳಿವೆ. ಅವರು ಚೈತನ್ಯಪಂಥದ ಸಂಪ್ರದಾಯಗಳನ್ನು ಅನುಸರಿಸದೆ ಇರುವವರು. ಇವರನ್ನು ಪಂಥವು ಅಸಂಪ್ರದಾಯದವರೆಂದು ಪರಿಗಣಿಸುತ್ತದೆ. ಚೈತನ್ಯಪಂಥದ ಗುರುಶಿಷ್ಯ ಪರಂಪರೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾದರೆ ಆ ವ್ಯಕ್ತಿಯು ಅಸಂಪ್ರದಾಯ ಜನಾಂಗದ ಸಹವಾಸದಿಂದ

ದೂರವಿರಬೇಕಾಗುತ್ತದೆ. ಒಟ್ಟಿನಲ್ಲಿ, ದೇವೋತ್ತಮ ಪರಮಪುರುಷ ಮತ್ತು ಗುರು ಇವರಿಬ್ಬರಲ್ಲೂ ಅಖಂಡವಾದ ನಂಬಿಕೆಯನ್ನುಳ್ಳ ಶಿಷ್ಯನಿಗೆ ಮಾತ್ರ ಧರ್ಮಗ್ರಂಥಗಳ ಧ್ವನಿತಾರ್ಥವು ಅನಾವರಣಗೊಳ್ಳುತ್ತದೆಂಬುದನ್ನು ಗೌಡೀಯಪಂಥವು ಸಮರ್ಥಿಸುತ್ತದೆ.

ಇಲ್ಲಿಯ ಕೆಲವೊಂದು ವಿಚಾರಗಳಲ್ಲಿ ವಿರೋಧಾಭಾಸಗಳು ಪಂಥಗಳೆರಡರಲ್ಲಿ ಕಂಡುಬಂದರೂ ಮುಕ್ತಿಯನ್ನು ಪಡೆಯುವ ವಿಚಾರದಲ್ಲಿ ಎರಡರಲ್ಲೂ ಸಾಮ್ಯವಿದೆ ಎಂದುಕೊಳ್ಳಬೇಕು.

೫.೭ ಆತ್ಮವಿಮರ್ಶೆಯ ಅನಾವರಣ

ಆತ್ಮವಿಮರ್ಶೆ ಅಥವಾ ಆತ್ಮಾವಲೋಕನವೆಂಬ ಈ ಕ್ರಿಯೆಯು ಎಲ್ಲ ಅನುಭಾವಿಗಳಲ್ಲೂ ಇದೆ. ಇದು ಎಲ್ಲಾ ಮುಮುಕ್ಷುಗಳಿಗೆ ಬಿಡುಗಡೆಯ ದಾರಿಯನ್ನು ಸುಗಮಗೊಳಿಸುತ್ತದೆ. 'ಇಹ'ದ ನಡೆಯನ್ನು ಗಟ್ಟಿಗೊಳಿಸುವ ಮೂಲಕ 'ಪರ'ದ ಕಡೆಗೆ ಸಾಗಲು ಅದು ಅನುವು ಮಾಡಿಕೊಡುತ್ತದೆ.

ಅನುಭಾವಿಯು ತನ್ನನ್ನು ತಾನೇ ಶೋಧಿಸಿಕೊಳ್ಳುವ ಪ್ರಯತ್ನಕ್ಕೆ ಮುಂದಾಗುವ ಕಲ್ಪನೆಯೊಂದು ಅನುಭಾವ ಸಾಹಿತ್ಯ ಪರಂಪರೆಯಿಂದಲೇ ಬೆಳೆದುಕೊಂಡು ಬಂದಿದೆ. ಇದಕ್ಕೆ ಆ ಕಾಲದ ದಾಸಿಮಯ್ಯ, ಬಸವಣ್ಣ, ಅಲ್ಲಮ, ಅಕ್ಕನ ವಚನಗಳೇ ಸಾಕ್ಷಿ. ಇದನ್ನು ಕೆಲವರು ಆತ್ಮಶೋಧನೆ, ಆತ್ಮನಿವೇದನೆ ಎಂದು ಕರೆದರು. ಅಲ್ಲದೆ ವಚನಯುಗದ ನಂತರದಲ್ಲಿ ಬಂದ ದಾಸಯುಗವು ಈ ಪ್ರಯತ್ನವನ್ನು ಮುಂದುವರಿಸಿತು. ಇದೇ ಕ್ರಮವನ್ನು ಬಂಗಾಳದಲ್ಲಿ ಹುಟ್ಟಿದ ಚೈತನ್ಯಪಂಥವೂ ಅನುಸರಿಸಿತು. ಪ್ರಾಯಶಃ ಈ ಎರಡೂ ಪಂಥಗಳ ಅನುಭಾವಿಗಳೆಲ್ಲ ತಮ್ಮನ್ನು ಕಾಡುವ ಪಾಪಪ್ರಜ್ಞೆಯಿಂದ ಮುಕ್ತರಾಗಲು ಆತ್ಮವಿಮರ್ಶೆಯ ಕ್ರಮವೊಂದನ್ನು ಅನುಸರಿಸಿರಬಹುದು.

ಈ ಆತ್ಮವಿಮರ್ಶೆಗೆ ಇನ್ನೊಂದು ಕಾರಣವೆಂದರೆ, ಎರಡೂ ಪಂಥಗಳಲ್ಲಿ ಬಂದ ಕೆಲವಾರು ಅನುಭಾವಿಗಳು ತಮ್ಮ ಕುಲನಿರ್ಲಕ್ಷ್ಯಕ್ಕೆ ಗುರಿಯಾಗಿದ್ದಿರಬಹುದು. ವೇದಪುರಾಣಗಳನ್ನು ಹೆಚ್ಚಾಗಿ ಅನುಸರಿಸಿದ ವ್ಯಾಸಕೂಟದಿಂದಲೂ ನಿರ್ಲಕ್ಷ್ಯಕ್ಕೆ ಒಳಗಾಗಿರಬಹುದು. ಕನಕದಾಸರು ಹೇಳುವ 'ಜಪವ ನಾನರಿಯೆನು ತಪವ ನಾನರಿಯೆ, ವೇದಶಾಸ್ತ್ರವ ಮೊದಲರಿಯೆ' ಎಂಬಲ್ಲಿ ಈ ಮೇಲಿನ ಯೋಚನೆಯು ಒಮ್ಮೆ ಹಾದುಹೋದಂತಾಗುತ್ತದೆ. ಇದೇನೇ ಇದ್ದರೂ ಚೈತನ್ಯಪಂಥದಲ್ಲಿ ಸ್ವತಃ ಚೈತನ್ಯರೇ ಕೃಷ್ಣನನ್ನು ಕಾಣುವ ತವಕದಲ್ಲಿ ಆತ್ಮಾವಲೋಕನ ಮಾಡಿಕೊಳ್ಳುತ್ತಾರೆ. ಅದನ್ನು ಚೈತನ್ಯ ಚರಿತಾಮೃತವು ಹೀಗೆ ಹೇಳುತ್ತದೆ.

ಹಾಹಾ ಕೃಷ್ಣ ಪ್ರಾಣ ನಾಥವ್ರಜೇಂದ್ರ ನಂದನ ।
ಕಾಹಾಗ್ ಯಾನು ಕಾಹಾಗ್ ಪಾಗ ಮುರಲೀವದನ ॥[೫೧]

ಓ ನನ್ನ ಪ್ರಭು ಕೃಷ್ಣನೇ, ನನ್ನ ಜೀವವೇ, ನನ್ನ ಆತ್ಮವೇ ! ಓ ನಂದ ಮಹಾರಾಜನ ಪುತ್ರನೇ, ನಾನು ಎಲ್ಲಿಗೆ ಹೋಗಲಿ? ಓ ಪರಮಪುರುಷನೇ, ತುಟಿಗಿಟ್ಟುಕೊಂಡಿರುವ ಕೊಳಲನ್ನು ನುಡಿಸುವ ಪ್ರಭುವೇ, ನಾನು ಎಲ್ಲಿ ನಿನ್ನನ್ನು ಪಡೆಯಲಿ ? ಎಂಬ ಆತ್ಮಾವಲೋಕನದ ಕೂಗು ಶ್ರೀಚೈತನ್ಯರದ್ದು. ಅಂತೆಯೇ ಚೈತನ್ಯಪಂಥದಲ್ಲಿ ಬರುವ

ಸಾಕರಮಲ್ಲಿಕ್ ಮತ್ತು ದಬೀರ್‌ಖಾಸ್ ಎಂಬಿಬ್ಬರು ಸಹೋದರರು ಮುಸಲ್ಮಾನ ರಾಜ್ಯದ ಅಧಿಕಾರಿಗಳಾಗಿದ್ದುಕೊಂಡು, ಪರಿಸ್ಥಿತಿಯ ಅನಿವಾರ್ಯತೆಯುಲ್ಲಿ ಆತ್ಮಾವಲೋಕನಕ್ಕೆ ಒಳಗಾಗಿ, ಅವರು ಶ್ರೀಚೈತನ್ಯರ ಕೃಪೆಗೆ ಪಾತ್ರರಾಗುತ್ತಾರೆ. ಇದಕ್ಕೆ

ಮತ್‌ತುಲ್ಯೋ ನಾಸ್ತಿ ಪಾಪಾತ್ಮಾನಾಪರಾಧೀ ಚ ಕಶ್ಚನ ।
ಪರಿಹಾರೇ ಪಿ ಲಜ್ಜಾಮೇ ಕಿಂ ಬ್ರುವೇ ಪುರುಷೋತ್ತಮ ॥[೩೨]

ಭಕ್ತಿರಸಾಮೃತದ ಈ ಮಾತೇ ಆಧಾರ. ಇದೇ ರೀತಿಯಲ್ಲಿ ಚೈತನ್ಯಪಂಥದ ಇನ್ನಿಬ್ಬರು ಸೋದರರುಗಳಾದ ಜಗಾಯ್ ಮತ್ತು ಮಾಧಾಯ್ ಎಂಬವರು ಆತ್ಮಾವಲೋಕನಕ್ಕೆ ಒಳಗಾಗುವುದನ್ನು ನಾವು ಕಾಣುತ್ತೇವೆ.

ಹೀಗೆ ಇಲ್ಲಿಯ ಅನುಭಾವಿಗಳ ಆತ್ಮಾವಲೋಕನದಲ್ಲಿ ಭಕ್ತಿಯು ವಿಜೃಂಭಿಸುತ್ತದೆ. ವಿರಕ್ತಿಯು ಹೆಚ್ಚುತ್ತದೆ. ಇದರ ಪರಿಣಾಮವಾಗಿ ವಿಶ್ವಧರ್ಮ, ವಿಶ್ವಚಿಂತನವೆಂಬ ಸಾರ್ವಕಾಲಿಕ ಸತ್ಯದೆಡೆಗೆ ಎರಡೂ ಪಂಥದ ಅನುಭಾವಿಗಳು ಸಾಗುತ್ತಾರೆ. ಜೊತೆಗೆ,

ಭೂಮಿಯ ಚಿನ್ನದ ತೊಟ್ಟಿಲ ಮಾಡಿ
ಸೋಮ ಸೂರ್ಯರೆಂಬ ಕಲಶವ ಹೂಡಿ
ನೇಮದಿ ವೇದಗಳ ಸರಪಣಿ ಮಾಡಿ
ಆ ಮಹಾಕಾಶಕ್ಕೆ ಕೊಡಿಗಳ ಹಾಕಿ ॥ -ಶ್ರೀಪಾದರಾಜರು

ಅಲ್ಲದೆ, ಸರಸಿಜೋದ್ಭವ ಸರಸ್ವತಿ ಭಾರತಿಯನ್ನಾಗಿ ನೋಡುವ ದೃಷ್ಟಿಯೊಂದು ಅವರಲ್ಲಿ ಮೂಡುತ್ತದೆ.

ಇಲ್ಲಿಯ ಎರಡೂ ಪಂಥಾನುಭಾವಿಗಳಲ್ಲಿ ಎದ್ದುತೋರುವ ಅಂಶವೆಂದರೆ ಸಾರ್ವಕಾಲಿಕವಾಗಿ ಕಾಣುವ ವಿಶ್ವಮಾನವ ವಿಶ್ವಧರ್ಮ. ಇವೆರಡು ಪಂಥಗಳು ಸಾಂಸಾರಿಕ ದುಃಖದರ್ಶನವನ್ನು ಬೇಡವೆಂದು ಹೇಳುವುದಿಲ್ಲ. ಆದರೆ ಅದರಲ್ಲೇ ಬಿದ್ದು ಜೀವನವನ್ನು ಹಾಳುಗೆಡಹಬೇಡಿ ಎಂದುಹೇಳಲು ಮುಂದಾಗುತ್ತದೆ. ಈಸಬೇಕು ಇದ್ದು ಜೈಸಬೇಕು ಎಂದೂ ಹೇಳುತ್ತಾರೆ, ನೆಚ್ಚದಿರು ಸಂಸಾರ ನೆಲೆಯಿಲ್ಲದ ಕಾಯವೆಂದೂ ಎಚ್ಚರಿಕೆಯನ್ನು ಮೂಡಿಸುತ್ತಾರೆ. ಮುಖ್ಯವಾಗಿ ಆತ್ಮಾವಲೋಕನದಲ್ಲಿ ಮನಸ್ಸು ಭಾವುಕತೆಗೆ ಇಳಿಯುತ್ತದೆ. ಬಂಗಾಲದ ಕವಿಗಳಾದ ಶ್ರೀಲ ಕೃಷ್ಣದಾಸ ಕವಿರಾಜ ಗೋಸ್ವಾಮಿಯವರು 'ಶ್ರೀಚೈತನ್ಯಚರಿತಾಮೃತ'ವನ್ನು ಬರೆಯುವುದರ ಮೊದಲು ಆತ್ಮಾವಲೋಕನಕ್ಕೆ ಮುಂದಾಗುತ್ತಾರೆ. ಅದು ಕವಿ ಮನಸ್ಸಿನ ಸಹಜತೆಯೂ ಕೂಡ. ಆ ಕಾವ್ಯವೇ ಹೇಳುವಂತೆ,

ಮೂರ್ಖ ನೀಚ ಕ್ಷುದ್ರಮುಯಿೀ ವಿಷಯ ಲಾಲಸ ।
ವೈಷ್ಣವಾಜ್ಞಾ ಬಲೇ ಕರಿ ಏತೇಕ ಸಾಹಸ ॥[೩೩]

ಎನ್ನುವಲ್ಲಿ ಕವಿಯು ಸಹಜವಾಗಿ ಆತ್ಮವಿಮರ್ಶೆಯನ್ನು ಮಾಡಿಕೊಳ್ಳುವುದು ಆತನ ಹೆಚ್ಚುಗಾರಿಕೆಯಾಗುತ್ತದೆ. ಇದೇ ರೀತಿಯಲ್ಲಿ ಚೈತನ್ಯರ ಲೀಲೆಗಳನ್ನು ಬರೆಯಲು ಹೊರಟ ವೃಂದಾವನದಾಸ ಠಾಕೂರರದ್ದು ಅಧಿಕಾರಯುಕ್ತ

ಬರವಣಿಗೆ. ಆದರೂ ಆಧ್ಯಾತ್ಮಿಕ ಸಾಹಿತ್ಯ ಕೃತಿಯನ್ನು ಬರೆಯುವ ಮೊದಲು ಅವರು ಆತ್ಮಾವಲೋಕನವನ್ನು ಮಾಡಿಕೊಳ್ಳುತ್ತಾರೆ.

ಮೂರ್ಖ ನೀಚ ಕ್ಷುದ್ರ ಮುಞಿ ವಿಷಯ ಲಾಲಸ ।
ವೈಷ್ಣವಾಜ್ಞಾ ಬಲೇ ಕರಿ ಏತೇಕ ಸಾಹಸ ॥[೩೪]

ಅವರೇ ಹೇಳಿಕೊಳ್ಳುವಂತೆ, ನಾನೊಬ್ಬ ಮೂಢ, ಹೀನಕುಲಸಂಜಾತ, ಹಾಗೂ ಯಾರ ನಡುವೆಯೂ ಗಣನೆಗೆ ಬಾರದವನು. ಅಲ್ಲದೆ ನಾನು ಭೋಗಜೀವನವನ್ನು ಅಪೇಕ್ಷಿಸುವವನು. ಹೀಗಿದ್ದೂ ವೈಷ್ಣವರ ಅನುಜ್ಞೆಯು ದೊರಕಿದುದರಿಂದ ಆಧ್ಯಾತ್ಮಿಕ ಸಾಹಿತ್ಯಕೃತಿಯ ರಚನೆಯನ್ನು ಮಾಡಲು ಮುಂದಾಗಿದ್ದೇನೆಂದು ಹೇಳಿಕೊಳ್ಳುತ್ತಾರೆ.

ಇಂತಹ ಸಹಜವಾದ ಮನೋಸ್ಥಿತಿಗಳು ಯಾವುದೇ ಪಂಥದ ಅನುಭಾವಿಗಳಲ್ಲಿ ಸಹಜವಾಗಿ ನೆರವೇರುತ್ತಿರುತ್ತವೆ. ಇದೇ ಪಂಥದಲ್ಲಿ ಬರುವ ಇನ್ನೊಬ್ಬ ಅನುಭಾವಿಗಳಾದ ಹರಿದಾಸಠಾಕೂರರು ಕೂಡ ತನ್ನ ಕೆಳಜಾತಿಯನ್ನು ನೆನೆದು ಶ್ರೀಚೈತನ್ಯ ಪ್ರಭುವರ್ಯರಲ್ಲಿ ಹೀಗೆ ನಿವೇದಿಸಿಕೊಳ್ಳುತ್ತಾರೆ.

ಜನ್ಮ ಮೋರ ನಿನ್ದ್ಯ ಕಲೇವರ ।
ಹೀನ ಕರ್ಮೇರತ ಮುಞಿ ಅಧಮ ಪಾಮರ ॥[೩೫]

ನಾನು ಒಂದು ಹೀನಜಾತಿಯಲ್ಲಿ ಜನಿಸಿದೆ. ನನ್ನ ಶರೀರವು ಬಹು ಅಸಹ್ಯಕರವಾದುದು. ನಾನು ಸದಾ ನಿಂದ್ಯಕಾರ್ಯಗಳಲ್ಲಿ ತೊಡಗಿರುತ್ತೇನೆ. ಆದ್ದರಿಂದ ನಾನು ಮನುಷ್ಯರಲ್ಲೇ ಅತ್ಯಂತ ಕೀಳಾದವನು, ದೂಷಿತನೂ ಆಗಿದ್ದೇನೆ. ನಾನು ಇತರರ ಕಣ್ಣಿಗೆ ತೋರದವನು ಹಾಗೂ ಇತರರಿಂದ ಸ್ಪರ್ಶಿಸಿಕೊಳ್ಳದವನು. ಆದರೆ ನೀವು ನನ್ನನ್ನು ನಿಮ್ಮ ಸೇವಕನಾಗಿ ಸ್ವೀಕರಿಸಿದ್ದೀರಿ ಎಂದಮೇಲೆ ನೀವು ನನ್ನನ್ನು ನರಕಸದೃಶಸ್ಥಿತಿಯಿಂದ ಉದ್ಧರಿಸಿದ್ದೀರಿ. ಅಷ್ಟೇ ಅಲ್ಲ, ವೈಕುಂಠದ ಎತ್ತರಕ್ಕೆ ಏರಿಸಿದ್ದೀರಿ ಎಂದಾಯಿತು.

ಆತ್ಮಶೋಧನೆಯಲ್ಲಿ ತೊಡಗಿದ ವಿಜಯದಾಸರು ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಪಂಚಭೂತಾತ್ಮಗಳು, ಮನಚಿತ್ತಗಳು, ಸಕಲ ಚೇತನಗಳೆಲ್ಲವನ್ನು ಹರಿಯಾಧೀನವೆನ್ನಲು ಮುಂದಾಗುತ್ತಾರೆ. ದೈವವು ಕುಣಿಸಿದರೆ ಕುಣಿವೆ, ನಗಿಸಿದರೆ ನಗುವೆ, ಮಣಿಸಿದರೆ ಮಣಿವೆ, ಅಳಿಸಿದರೆ ಅಳುವೆನೆನ್ನುವ ಶರಣ್ಯಭಾವ ಅವರದ್ದು. ಪುರಂದರದಾಸರಂತೂ ಮನವ ಶೋಧಿಸಬೇಕು ಎನ್ನುತ್ತಾರೆ. ಚೈತನ್ಯರು ಇಂತಹ ಶೋಧನೆಗೆ ಒಳಗಾಗಿ ತನುವನ್ನು ಖಂಡಿಸಿ, ಮನವನ್ನು ದಂಡಿಸಿ ಪರಮಾತ್ಮನನ್ನು ಕಾಣುವ ಪ್ರಯತ್ನವನ್ನು ಮಾಡುತ್ತಾರೆ. ಅವರೇ ಹೇಳುವಂತೆ, 'ನಾನು ವೈರಾಗ್ಯ ಜೀವನದಲ್ಲಿದ್ದೇನೆ. ಆದ್ದರಿಂದ ನಾನು ನೆಲದಮೇಲೆ ಮಲಗಬೇಕು. ಮಂಚ, ಹಾಸಿಗೆ ಅಥವಾ ದಿಂಬನ್ನು ಉಪಯೋಗಿಸುವುದು ನನಗೆ ಬಹಳ ಅಪಮಾನಕಾರಿ' ಎಂಬ ಕಠಿಣವಾದ ಆತ್ಮತೀರ್ಮಾನವನ್ನು ಕೈಗೊಳ್ಳುತ್ತಾರೆ.[೩೬] ಅದೇ ಪಂಥದ ನಿತ್ಯಾನಂದಪ್ರಭುಗಳು ಶಿವಾನಂದಸೇನರ ಮೇಲಿನ ಸಿಟ್ಟಿನಿಂದ, ನಿಮ್ಮ ಮಕ್ಕಳು ಸತ್ತುಹೋಗಲೆಂದು ಶಪಿಸಿ, ಅವರ ಎದೆಗೆ ಒದೆದಾಗ, ಶಿವಾನಂದಸೇನರು ಪತ್ನಿಯನ್ನು ಸಮಾಧಾನಿಸುತ್ತಾ ತಮ್ಮ ಆತ್ಮವಿಮರ್ಶೆಗೆ ಮುಂದಾಗುತ್ತಾರೆ. 'ನಿತ್ಯಾನಂದಪ್ರಭುಗಳಿಗೆ

ಉಂಟುಮಾಡಿದ ಅನನುಕೂಲಗಳಿಗೆ ಪ್ರತಿಫಲವಾಗಿ ನನ್ನ ಮೂವರು ಮಕ್ಕಳೂ ಸಾಯಲಿಬಿಡು' ಎಂದು ಒಪ್ಪಿಕೊಳ್ಳುವಲ್ಲಿ ಶಿವಾನಂದಸೇನರ ಆತ್ಮವಿಮರ್ಶೆಯು ಎದ್ದು ತೋರುತ್ತದೆ.

ಎರಡು ಪಂಥಗಳು ಮಾಡುವ ಆತ್ಮಶೋಧನೆಯಲ್ಲಿ ದಿನನಿತ್ಯದಲ್ಲಿ ಮಾಡುವ ಪಾಪಪುಣ್ಯದ ವಿವರವಿದೆ. ತಮ್ಮೊಳಗಿನ ಡೊಂಕನ್ನು ತಿದ್ದಬೇಕೆಂಬ ಅರಿಕೆಯಿದೆ. ಅದಕ್ಕಾಗಿ, ಗುಡುಗುಡಿಯನು ಸೇದಿನೋಡಿ ತಮ್ಮೊಳಗಿನ ಕಾಮಕ್ರೋಧವನ್ನು ಈಡಾಡುವಂತೆ ಕೇಳಿಕೊಳ್ಳುತ್ತಾರೆ. ಈ ದೃಷ್ಟಿಯಿಂದಲೇ 'ಮನವೆಂಬ ಸಂಚಿಯಬಿಚ್ಚಿ ನಿನ್ನ ದಿನದ ಪಾಪಗಳೆಂಬ ಭಂಗಿಯ ಕೊಚ್ಚಿ.....ಅಚ್ಚುತನ ಧ್ಯಾನವೆಂತೆಂಬ ಕಿಚ್ಚನು ಹಚ್ಚಿ'ಎನ್ನುತ್ತಾರೆ ಪುರಂದರದಾಸರು.

ದಾಸಪಂಥಾನುಯಾಯಿಗಳಲ್ಲಿ ತೋರಿಬರುವ ಆತ್ಮಶೋಧನೆಯೆಂಬ ಮುಕ್ತಚಿಂತನೆ ಚೈತನ್ಯಪಂಥದುದ್ದಕ್ಕೂ ಅಲ್ಲಲ್ಲಿ ಗೋಚರವಾಗುತ್ತವೆ. ಈ ನೆಲೆಯಲ್ಲಿ ಊಟದ ಚಿಂತೆ, ಭೋಗದ ಚಿಂತೆ, ಲೋಕವನ್ನು ಆಳಬೇಕೆಂಬ ಚಿಂತೆಗಳು ಪಾಪಪುಣ್ಯದ ಭಯವಿಲ್ಲದ ಹೃದಯದಲ್ಲಿ ಸಮಾನವಾಗಿ ಆವರಿಸಿಕೊಳ್ಳುತ್ತದೆ. ಇಲ್ಲಿಯ ಎರಡು ಪಂಥದ ಅನುಭಾವಿಗಳು ಪುಣ್ಯಸಂಪಾದನೆಗೋಸ್ಕರವಾಗಿ ನಾರಾಯಣನೆಂಬ ನಾಮದ ಬೀಜವನ್ನು ನಾಲಗೆಯ ತುದಿಯಲ್ಲಿ ಬಿತ್ತಲು ಮುಂದಾಗುತ್ತದೆ. ಆಗ ಅವರು ಹೃದಯವನ್ನು ಹೊಲವನ್ನಾಗಿ, ಮನಸ್ಸನ್ನು ನೇಗಿಲನ್ನಾಗಿ, ಶ್ವಾಸೋಚ್ಛ್ವಾಸಗಳನ್ನು ಎರಡೆತ್ತುಗಳನ್ನಾಗಿ, ಜ್ಞಾನವೆಂಬುದನ್ನು ಹಗ್ಗವನ್ನಾಗಿ ಮಾಡಿಕೊಂಡು, ನಿರ್ಮಲವಾದ ಹೊಲದಲ್ಲಿ ಹರವಲು ಮುಂದಾಗುತ್ತಾರೆ. 'ಹೃದಯವೆಂಬೊ ಪಾತ್ರೆಯೊಳಗೆ ಭಾವವೆಂಬ ಹೆಸರನಿಟ್ಟು ಬುದ್ಧಿಯಿಂದ ಪಾಕಮಾಡಿ' ರಾಮನಾಮಪಾಯಸ ಮತ್ತು ವಿಠಲನಾಮವೆಂಬ ತುಪ್ಪವನ್ನು ಹರಿವಾಣದಲ್ಲಿಟ್ಟುಕೊಂಡ ಉಭಯ ಪಂಥಗಳ ಆತ್ಮಶೋಧನಾಕ್ರಮ ಮಾತ್ರ ಸಮಾನವಾಗಿಯೇ ಗೋಚರಿಸುತ್ತದೆ.

೫.೮ : ಶಾಕಪಾಕ ಪದಾರ್ಥ ವಿಚಾರ

ದಾಸಪಂಥ ಮತ್ತು ಚೈತನ್ಯಪಂಥಗಳ ಸಾಹಿತ್ಯಾವಲೋಕನದಲ್ಲಿ ಆಹಾರದ ಶಾಕಪಾಕ ಪದಾರ್ಥಗಳು ರೂಪಕವಾಗಿ ಅನಾವರಣಗೊಳ್ಳುತ್ತವೆ. ಅಲ್ಲದೆ ಉಭಯ ಪಂಥಗಳಲ್ಲೂ ಆಯಾಯ ಪ್ರಾಂತ್ಯದ ಶಾಕಪಾಕ ಪದಾರ್ಥಗಳ ವಿಚಾರಗಳು ಸಮಾನವಾಗಿಯೇ ಮೂಡಿಬಂದಿವೆ. ಇಲ್ಲಿ ಪರಿಚಯಿಸಲ್ಪಟ್ಟ ಆಹಾರಪದ್ಧತಿಗಳು ಮತ್ತು ಮಾದರಿಗಳು ಆಗಿನ ಕಾಲದ ಪ್ರಾದೇಶಿಕ ಸಂಸ್ಕೃತಿಯನ್ನು ಪರಿಚಯಿಸುತ್ತವೆ. ಜೊತೆಗೆ ಎರಡೂ ಪಂಥಗಳ ಅನುಭಾವಿಗಳು ಪಾಕಶಾಸ್ತ್ರಪಂಡಿತರಂತೆ ಆಹಾರವನ್ನು ಸಿದ್ಧಪಡಿಸುವ ವಿಧಿವಿಧಾನಗಳನ್ನು ಹೇಳುತ್ತಾರೆ. ಕೆಲವೊಮ್ಮೆ ಆಹಾರದ ವಿಚಾರವನ್ನು ಮಾತ್ರ ನೀಡದೆ, ಅಲ್ಲಿರುವ ಪ್ರಾದೇಶಿಕ ಸಂಸ್ಕೃತಿಯಲ್ಲಿ ಆಹಾರ ಪದ್ಧತಿಗಿರುವ ವೈಚಾರಿಕತೆಯನ್ನು ಅನಾವರಣಗೊಳಿಸುತ್ತಾರೆ. ಅರಮನೆಯಲ್ಲಿ ನಡೆಯುವ ಆಹಾರ ಪದಾರ್ಥಗಳ ರಚನೆಗಳಿಂದ ಹಿಡಿದು ಅಡವಿಯ ಆಹಾರಪದಾರ್ಥಗಳ ತನಕ, ಪ್ರಧಾನ ನಾಗರಿಕತೆಯಿಂದ

ಹಿಡಿದು ಬುಡಕಟ್ಟು ನಾಗರಿಕತೆಯ ತನಕ ಶಾಕಪಾಕಪದಾರ್ಥಗಳ ವಿವರಣೆಯನ್ನು ಎರಡೂ ಪಂಥಗಳು ನಮಗೆ ಒದಗಿಸಿಕೊಡುತ್ತವೆ.

ದ್ರಾಕ್ಷೆ, ಖರ್ಜೂರ, ಕಲ್ಲುಸಕ್ಕರೆಗಳು ಮೇಲ್ವರ್ಗದ ಆಹಾರ ಕ್ರಮಗಳಾದರೆ, ಮಾದಲ, ಪಲಸು, ನೇರಲೆಗಳೆಲ್ಲ ಬಡಜನರ ಆಹಾರ ಪದ್ಧತಿಯನ್ನು ಪ್ರತಿನಿಧಿಸುತ್ತದೆ. ವಿಶೇಷವೆಂದರೆ, ಕರ್ನಾಟಕದ ದಾಸಪಂಥದಲ್ಲಿ ಹೆಚ್ಚಿನ ದಾಸರುಗಳು ಉತ್ತರ ಕರ್ನಾಟಕದವರಾದರೂ ಅವರು ಆಹಾರಪದ್ಧತಿಯನ್ನು ವಿವರಿಸುವಾಗ ದಕ್ಷಿಣ ಕರ್ನಾಟಕದ ಆಹಾರ ಪದ್ಧತಿಗಳನ್ನೇ ಹೆಚ್ಚಾಗಿ ವಿವರಿಸುತ್ತಾರೆ.

ಈ ಎರಡು ಭಕ್ತಿಪಂಥಗಳ ಆಹಾರ ರಚನೆಯಲ್ಲಿ ಸಾದೃಶ್ಯವಿದ್ದರೂ ಕೆಲವೊಂದು ಸೂಕ್ಷ್ಮವಾದ ಭಿನ್ನತೆಗಳು ಅಲ್ಲಲ್ಲಿ ಕಾಣಲು ಸಾಧ್ಯ. ಚೈತನ್ಯಪಂಥದಲ್ಲಿ ಕೃಷ್ಣಪ್ರಜ್ಞೆಯಿಂದಲೇ ಭೋಜನವ್ಯವಸ್ಥೆ ಸಿದ್ಧಗೊಂಡರೆ, ದಾಸಪಂಥದಲ್ಲಿ ಕೃಷ್ಣನಾಮಾಮೃತವೇ ಭೋಜನವಾಗಿ ಪರಿಣಮಿಸುತ್ತದೆ.

ತಿನ ಠಾಂಗ್ ಭೋಗ ಬಾಡಾಇಲ ಸಮಕರಿ ।
ಕೃಷ್ಣೇರ ಭೋಗ ಬಾಡಾ ಇಲ ಧಾತು ಪಾತ್ರೋಪರಿ ॥[೫೭]

ಇಲ್ಲಿ 'ಕೃಷ್ಣೇರ ಭೋಗ' ಅಂದರೆ ಕೃಷ್ಣನಿಗೆ ಅರ್ಪಿತವಾದ ಆಹಾರವೆಂದು ಭಾವಿಸಬೇಕಾಗುತ್ತದೆ. ಆದರೆ ದಾಸಸಾಹಿತ್ಯದ ಕಲ್ಪನೆಯಲ್ಲಿ ಸ್ವಲ್ಪ ಭಿನ್ನತೆಯಿದೆ. ಇಲ್ಲಿ ಸಕ್ಕರೆ ತುಪ್ಪಗಳೆಲ್ಲ ರೂಪಕಗಳಾಗಿಯೇ ಬಳಕೆಯಾಗಿವೆ.

ರಾಮನಾಮ ಪಾಯಸಕ್ಕೆ ಕೃಷ್ಣ ನಾಮ ಸಕ್ಕರೆ ।
ವಿಠಲನಾಮ ತುಪ್ಪವ ಬೆರೆಸಿ ಬಾಯ ಚಪ್ಪರೀಸಿರೋ ॥
ಒಮ್ಮನ ಗೋಧಿಯ ತಂದು ವೈರಾಗ್ಯ ಕಲ್ಲಲಿ ಬೀಸಿ ।
ಸುಮ್ಮನ ಸಜ್ಜಿಗೆ ತೆಗೆದು ಸಣ್ಣ ಶ್ಯಾವಿಗೆ ಹೊಸೆಯಿರೊ ॥ –ಪುರಂದರದಾಸರು

ಈ ಉದಾಹರಣೆಗಳಲ್ಲಿ ಮೇಲೆ ಹೇಳಿರುವ ವ್ಯತ್ಯಾಸಗಳನ್ನು ಗಮನಿಸಬಹುದು.

ಚೈತನ್ಯಪಂಥದಲ್ಲಿ ಭೋಜನಕ್ಕಾಗಿ ಬಳಸುವ ಬಾಳೆಎಲೆಗೂ ಪರಿಮಿತಿಯಿದೆ. ಅಲ್ಲಿ ಕನಿಷ್ಠ ಮೂವತ್ತೆರಡು ಹಣ್ಣಿನ ಗೊಂಚಲಿದ್ದ ಕದಳೀವೃಕ್ಷದ ಎಲೆಯನ್ನೇ ಭೋಜನಕ್ಕಾಗಿ ಮೀಸಲಿಡಬೇಕಾಗುತ್ತದೆ.

ಮುದ್ಯೇ ಪೀತ ಘೃತ ಸಿಕ್ತ ಶಾಲಿ ಅನ್ನೇರ ಸ್ತೂಪ ।
ಚಾರಿ ದಿಕೇ ವ್ಯಂಜನ ಡೋಂಗಾ ಆರ ಮುದ್ಗ ಸೂಪ ॥
ಸಾರ್ದ್ರಕ ವಾಸ್ತುಕ ಶಾಕ ವಿವಿಧ ಪ್ರಕಾರ ।
ಪಡೋಲ ಕೂಷ್ಮಾಂಡ ಬಡಿ ಮಾನಕಚು ಆರ ॥
ಕೋಮಲ ನಿಂಬ ಪತ್ರಸಹ ಭಾಜಾ ವಾರ್ತಾ ಕೀ ।
ಪಡೋಲ ಪುರಿ ಬಡಿ ಭಾಜಾ ಕೂಷ್ಮಾಂಡ ಮಾನಚಾಕಿ ॥[೫೮]

ಅಕ್ಕಿಯಿಂದ ಸಿದ್ಧಪಡಿಸಿದ ಅನ್ನದ ರಾಶಿ, ಅದರ ಮುಧ್ಯ ಗೋದುಗ್ಧದಲ್ಲಿ ಸಿದ್ಧಪಡಿಸಿದ ಹಳದಿ ತುಪ್ಪ, ಅನ್ನದ ರಾಶಿಯ ಸುತ್ತಲೂ ಬಾಳೆಲೆಯ ದೊನ್ನೆಗಳಲ್ಲಿ ಹಾಕಿದ ವೈವಿಧ್ಯ ಮೇಲೋಗರಗಳ ವಿಚಾರಗಳು, ಶಾಕಪಾಕಗಳಲ್ಲಿ ಚಿಕ್ಕ ಪಡುವಲ, ಕಚುವೃಕ್ಷದ ಕಾಂಡ, ಹಸಿಶುಂಠಿಯಲ್ಲಿ ತಯಾರಿಸಿದ ಕೋಸಂಬರಿ, ವಿವಿಧ ಕುಂಬಳಕಾಯಿ

ಬಜ್ಜಿಗಳು, ಚಿಗುರು ಬೇವಿನೆಲೆ ಮತ್ತು ಬದನೆಕಾಯಿ ಬೆರಸಿ ಬೇಯಿಸಿದ ಪಲ್ಯ, ಪಟೋಲ ಹಣ್ಣಿನೊಂದಿಗೆ ಮಾಡಿದ ತೋವೆ ಮೊದಲಾದ ಆಹಾರ ಪದಾರ್ಥಗಳು ಕೃಷ್ಣಪ್ರಜ್ಞೆಯಿಂದ ಸಿದ್ಧಗೊಳ್ಳುವ ವಿಧಾನವನ್ನು ಚೈತನ್ಯಪಂಥದ ಸಾಹಿತ್ಯ ಕೃತಿಗಳು ದೊರಕಿಸಿಕೊಡುತ್ತವೆ. ಆದರೆ ದಾಸಪಂಥದ ಆಹಾರ ಪದಾರ್ಥಕ್ಕೆ ಕೃಷ್ಣನಾಮಾಮೃತವೇ ಇಲ್ಲಿ ತರಕಾರಿಯಾಗುತ್ತದೆ. ಕನಕದಾಸರು ಒಂದೆಡೆ ಕಾಯಿಗಳ ಮಾಲೆಯಲ್ಲಿಯೇ ಬೆಡಗನ್ನು ಸಾಧಿಸಿ ಬಿಡುತ್ತಾರೆ.

ಪರಮಪುರುಷ ನೀನೆಲ್ಲಿಕಾಯಿ ।
ಸರಸಿಯೊಳಗೆ ಕರಿ ಕೂಗಲು ಕಾಯಿ ॥
ಹಿರಿದು ಮಾಡಿದ ಪಾಪ ನುಗ್ಗೇಕಾಯಿ ।
ಹರಿ ನಿನ್ನ ಧ್ಯಾನ ಬಾಳೇಕಾಯಿ ॥
ಸರುವ ಜೀವರಿಗುಣಿಸಿಯುಂಬದನೆ ಕಾಯಿ ।
ಅರಿಷಡ್ವರ್ಗಗಳೊದಗಿಲಿ ಕಾಯಿ ॥[೫೯] —ಕನಕದಾಸರು

ಇದು ಬೆಡಗಿನ ವಚನವನ್ನು ಹೋಲುವಂತಿದ್ದು, 'ಕಾಯಿ' ಎಂಬಲ್ಲಿ 'ಕಾಪಾಡು' ಎಂಬರ್ಥವನ್ನು ಕೊಡುತ್ತದೆ. ವಾದಿರಾಜರಂತೂ ರಕ್ಕಸಾರಿಯ ಧ್ಯಾನವನ್ನು ಸಕ್ಕರೆ ಬೆರೆಸಿದ ಚೊಕ್ಕ ಪಾನಕವನ್ನಾಗಿ ಮಾಡಿ 'ಪಾನವ ಮಾಡುವೆನು' ಎನ್ನುತ್ತಾರೆ. ಇದೇ ಕಲ್ಪನೆಯನ್ನು ಕಟ್ಟಿಕೊಂಡು ಪುರಂದರದಾಸರು 'ಹೂರಣ ಕಡುಬನು.....' ಮಾಡಲು ಹೊರಡುತ್ತಾರೆ. ರೋಮದ ಮಧ್ಯದಿ ಒಲೆಗಳ ಹೂಡಿ, ಈಡಿಲ್ಲದೆ ಅಗ್ನಿಯನ್ನು ತುಂಬಿಸುತ್ತಾರೆ. ಜೊತೆಗೆ ಗುರುಕರಣದಿಂದಲೇ–

ವರದನೆಂಬೆಣ್ಣೆ ಬಾಂಡ್ಲೆಯೊಳಗೆ
ಕರಹಾಮೃತದ ತುಪ್ಪವ ಹಾಕಿ
ತಿರಿ ಹೊರಗೆ ಮುರಿಗೆಯ ಕರಿದು
ಪುರಂದರ ವಿಠಲಗೆ ಎಡೆಯ ಮಾಡಿದೆನು ॥ —ಪುರಂದರದಾಸರು

ಎನ್ನುತ್ತಾರೆ. ಇಲ್ಲಿ ಭಗವಂತನನ್ನು ತೈಲಭಕ್ಷ್ಯದಲ್ಲಿ ತೃಪ್ತಿಪಡಿಸುವ ರೀತಿಯನ್ನು ಕಾಣುತ್ತೇವಾದರೂ ರೂಪಕ ಹಾಗೂ ಪ್ರತಿಮೆಗಳೇ ಇಲ್ಲಿ ಸೊಗಸಿವೆ. ಚೈತನ್ಯಪಂಥದಲ್ಲೂ ಅನುಭಾವಿಗಳು ಕೃಷ್ಣಪ್ರಜ್ಞೆಯ ಮೂಲಕವಾಗಿ ತೈಲಭಕ್ಷ್ಯದಲ್ಲಿ ಭಗವಂತನನ್ನು ತೃಪ್ತಿಪಡಿಸುತ್ತಾರೆ.

ಮುದ್ಗ ಬಡಾ ಕಲಾ ಬಡಾ ಮಾಷ ಬಡಾ ಮಿಷ್ಟ ।
ಕ್ಷೀರ ಪುಲೀ ನಾರಿಕೇಲ ಯತಪಿಠಾ ಇಷ್ಟ ॥ –ಶ್ರೀಚೈತನ್ಯ ಚರಿತಾಮೃತ

ಭಗವಂತನ ಆರೋಗಣೆಗೆ ಹೆಸರುಬೇಳೆಯ ಮೃದುವಡೆಗಳು, ಕಳಿತ ಬಾಳೆಹಣ್ಣಿನ ಮೃದುವಡೆಗಳು, ಉದ್ದಿನಬೇಳೆಯ ಮೆತ್ತನೆಯ ವಡೆಗಳು, ಅಟ್ಟಹಾಲಿನಲ್ಲಿ ಅನ್ನವನ್ನು ಬೆರೆಸಿ ಮಾಡಿದ ವಡೆಗಳು, ಹಸಿಕೊಬ್ಬರಿ ಭಕ್ಷ್ಯಗಳು–ಹೀಗೆ ಭಗವಂತನಿಗಾಗಿ ಊಟೋಪಚಾರದ ಸಿದ್ಧತೆಗಳು ಇಲ್ಲಿ ನಡೆಯುತ್ತದೆ. ಎರಡು ಪಂಥಗಳಲ್ಲಿ

ಪಾಕಭಕ್ಷ್ಯಗಳ ವಿಚಾರ ನೈವೇದ್ಯಗಳು ಕೃಷ್ಣನಿಗಾಗಿ ನಡೆದರೆ, ದಾಸಪಂಥದಲ್ಲಿ ಕೃಷ್ಣನಾಮಾಮೃತವೇ ಪಾಕಭಕ್ಷ್ಯಗಳಾಗುತ್ತವೆ, ಕಲ್ಲುಸಕ್ಕರೆಯಾಗುತ್ತದೆ.

ಒಟ್ಟಿನಲ್ಲಿ ಗೌಡೀಯ ಸಾಹಿತ್ಯದಲ್ಲಿ ಸಿದ್ಧಗೊಳ್ಳುವ ಅಡುಗೆಯಲ್ಲಿ ಔಷಧೀಯ ಕಲ್ಪನೆಯಿಂದ ಕೂಡಿದ ಶಾಖಪಾಕವು ವಿಶೇಷವಾಗುತ್ತದೆ. ಇಲ್ಲಿ ಅನುಭಾವಿಗಳಾದ ರಾಘವಪಂಡಿತರ ಸೋದರಿ ದಮಯಂತಿಯು ಅಡುಗೆ ನಿರ್ವಹಣೆಯಲ್ಲಿ ಪ್ರಧಾನ ಪಾತ್ರವಹಿಸಿದರೆ, ದಾಸಪಂಥದಲ್ಲಿ ಕನಕದಾಸರು ಅಡಿಗೆಯವರನ್ನು ಬೋನಗಿತ್ತಿಯರು ಎಂದು ವರ್ಣಿಸುತ್ತಾರೆ.[೬೦]

೫.೯ : ಶಾರೀರಿಕ ಚಿಂತನೆ

ಚೈತನ್ಯ ಹಾಗೂ ದಾಸಪಂಥಗಳ ಆಧ್ಯಾತ್ಮಿಕ ಸಾಹಿತ್ಯರಚನೆಯಲ್ಲಿ ಜೀವಿಯ ದೇಹದ ಕುರಿತಾದ ವಿಚಾರಗಳು ವಿವರವಾಗಿ ಹೇಳಿದೆ. ಆ ವಿವರಣೆಗಳು ಕೆಲವೊಮ್ಮೆ ಜನ್ಮ ನಿರಾಕರಣೆಗಾಗಿ, ಜನ್ಮ ಸಾರ್ಥಕ್ಯಕ್ಕಾಗಿ, ಭಗವದ್ದರುಷನದ ಭಾವಾತಿರೇಕದಲ್ಲಿ ನಡೆದಿರುವುದನ್ನು ಕಾಣುತ್ತೇವೆ. ಜೀವ, ದೇಹ ಮತ್ತು ಪರಮಾತ್ಮನೆಂಬೀ ವಿಷಯಗಳ ಸುತ್ತಲು ಈ ವಿವರಗಳು ಸುತ್ತುತ್ತಿರುತ್ತವೆ. ಭಗವಂತನನ್ನು ಕಾಣುವ ಹಸಿವು ಚೈತನ್ಯರನ್ನು ಕಾಡಿದಾಗ ಅವರ ಅಂಗಾಂಗಗಳ ಸ್ವರೂಪವು ಬದಲಾಗುತ್ತದೆಂಬ ವಿಚಾರವನ್ನು ಅಲ್ಲಿಯ ಸಾಹಿತ್ಯಕೃತಿಗಳು ನಮಗೆ ಪರಿಚಯಿಸುತ್ತವೆ.

ಹಸ್ತ ಪಡೇರ ಸನ್ದಿ ಸಬ ವಿತಸ್ತಿ ಪ್ರಮಾಣೇ ।
ಸನ್ದಿ ಚಾಡಿ 'ಭಿನ್ನಹಯೇ' ಚರ್ಮ ರಹೇ ಸ್ಥಾನೇ ॥
ಹಸ್ತ ಪದ ಶಿರ ಸಬ ಶರೀರ ಭಿತರೇ ।
ಪ್ರವಿಷ್ಟಹಯ ಕೂರ್ಮ ರೂಪ ದೇಖಿಯೇ ಪ್ರಭುರೇ ॥[೬೧]

ಚೈತನ್ಯರು ಭಾವಾತಿರೇಕಕ್ಕೊಳಗಾದಾಗ ಅವರ ಕೈ ಕಾಲುಗಳ ಗಂಟುಗಳು ಒಮ್ಮೊಮ್ಮೆ ಎಂಟು ಅಂಗುಲ ಉದ್ದದಷ್ಟು ಬೇರೆಯಾಗಿ ಬಿಡುತ್ತಿದ್ದವಂತೆ. ಆಮೆಯಂತೆ ತನ್ನ ಕೈಕಾಲು, ಶಿರವನ್ನು ದೇಹದೊಳಗೆ ಸೇರಿಸಿಕೊಂಡು ಬಿಡುತ್ತಿದ್ದರಂತೆ. ಇದೆಲ್ಲದಕ್ಕೂ ಮುಖ್ಯಕಾರಣವೆಂದರೆ ಭಗವಂತನನ್ನು ಕಾಣಲು ಹೊರಟ ಚೈತನ್ಯರ ಭಾವಾವೇಶವೆಂದುಕೊಳ್ಳಬಹುದು.

ದಾಸಪಂಥದ ಪ್ರಮುಖರಾದ ಶ್ರೀಪಾದರಾಯ, ವ್ಯಾಸರಾಯ, ಪುರಂದರದಾಸರಾದಿಯಾಗಿ ಹಲವರು ಭಗವದ್‌ಪಾರಮ್ಯವನ್ನು ಕಂಡವರು. ಕೆಲವರು ಭಗವಂತನನ್ನು ಬಿಂಬಮೂರುತಿಯಗಿ ಸ್ವೀಕರಿಸಿದವರು. ಭಗವಂತನನ್ನು ಹಾಡಿಹೊಗಳಿ, ಮುಕ್ತಿ ಸಂಪಾದಿಸುವ ಬೇಡಿಕೆಯಲ್ಲಿ ಇಂದ್ರಿಯಗಳ ಕರ್ತವ್ಯಗಳ ಕುರಿತು ಚಿಂತಿಸಿ, ಎಚ್ಚರಿಕೆಯನ್ನಿತ್ತರು. ನಾಲಗೆಗೆ ನಾರಾಯಣನ ನಾಮ, ಕಾಲಿಗೆ ಹರಿಯಾತ್ರೆ, ಕರ್ಣಕೆ ವಿಷ್ಣುಕಥೆ, ಹಸ್ತಗಳಿಗೆ ದಾನವೇ ಭೂಷಣವೆಂದು ಶ್ರೀಪಾದರಾಯರು ಹೇಳಿದರು. ವ್ಯಾಸರಾಯರು ಬಿಂಬಮೂರುತಿಯನ್ನು ಪೂಜಿಸಲು ತಮ್ಮ ಹೃದಯವನ್ನೇ ಮಂಟಪವನ್ನಾಗಿ ಕಂಡುಕೊಳ್ಳುತ್ತಾರೆ. ಅವರಿಗೆ, ನೇತ್ರವು ಮಹದೀಪ, ಹಸ್ತವು

ಚಾಮರ, ಯಾತ್ರೆಯು ಪ್ರದಕ್ಷಿಣೆ, ಶಯನವೆ ನಮಸ್ಕಾರ, ಶ್ರೋತೃ ಮಾತುಗಳೆಲ್ಲ ಮಂತ್ರಗಳಾಗಿ, ಸ್ವರೂಪವೇ ರನ್ನಗನ್ನಡಿಯಾಗಿ, ಹರಿಸ್ಮರಣೆಯೇ ತೀರ್ಥವಾಗಿ, ಶಬ್ದಗಳೆಲ್ಲ ಪುಷ್ಪಗಳಾಗಿ ನಿರ್ಮಾಣವಾಗುತ್ತವೆ. ಐಹಿಕ ಭೋಗಭಾಗ್ಯಗಳ ನಿಸ್ಸಾರತೆಯನ್ನು ಸಾರಿಹೇಳುವ ದಾಸಕೀರ್ತನೆಗಳು ಶರೀರದ ಅಂಗಾಂಗಗಳಿಗೂ ಎಚ್ಚರಿಕೆಯನ್ನು ನೀಡಲು ಮುಂದಾಗುತ್ತವೆ.

ಭಗವಂತನನ್ನೇ ಅಂಬಿಗನನ್ನಾಗಿ ಕಂಡುಕೊಡ ದಾಸರು ಸಂಸಾರವೆಂಬ ಸಾಗರವನ್ನು ದಾಟಿಸಲು ವಿನಂತಿಸಿಕೊಳ್ಳುವಲ್ಲಿ ಶರೀರಚಿಂತನೆಯನ್ನು ನಡೆಸುತ್ತಾರೆ. ಅಲ್ಲಿ, 'ಒಂಬತ್ತುಛಿದ್ರ ನೋಡಂಬಿಗ', 'ಮತ್ತೈವರೀರ್ವರು ನೋಡಂಬಿಗ' ಇಂತಹ ಪ್ರಯೋಗಗಳೆಲ್ಲ ಅಂಗಾಂಗಗಳನ್ನು ನಿಗ್ರಹಿಸಿ, ತನುವೆಂಬ ಭಾಂಡವನ್ನು ತೊಳೆಯಬೇಕೆನ್ನುವ ಹಂಬಲವನ್ನು ಸೂಚಿಸುವಂತಹವು. ಇಲ್ಲಿ ಎರಡು ಪಂಥಗಳು ಮನಕ್ಕೆ ಆವರಿಸಿದ ಚಂಚಲವೆಂಬ ಮುಸುರೆಯನ್ನು ತೊಳೆಯಲು ಮುಂದಾಗುತ್ತವೆ. ಇದಕ್ಕೋಸ್ಕರವಾಗಿ ಇಲ್ಲಿಯ ಅನುಭಾವಿಗಳು ವಿರಕ್ತಿಯೆಂಬ ಮಡಿ, ಹರಿಭಕ್ತಿಯೆಂಬ ಜಲವನ್ನುಪಯೋಗಿಸಿಕೊಂಡು ಶಾರೀರಿಕ ಕಾರ್ಯಸೌಂದರ್ಯಕ್ಕಾಗಿ ತಪಸ್ಸು ಮಾಡುತ್ತಾರೆ. ಈ ಮೂಲಕವಾಗಿ 'ಕೃಷ್ಣ ಕರ ಪದತಲ ಕೋಟಿಚಂದ್ರ ಸುಶೀತಲ, ತಾರಸ್ಪರ್ಶಯೇನ ಸ್ಪರ್ಶಮಣ'[೬] ಕೃಷ್ಣನ ಅಂಗೈ ಅಂಗಾಲುಗಳ ಶೀತಸತ್ವವು ಕೋಟಿ ಚಂದ್ರರಿಗೆ ಸರ್ವಸಮವೆಂಬ ನಿಲುವನ್ನು ತೆಗೆದು ಕೊಳ್ಳುತ್ತಾರೆ.

ವಾದಿರಾಜರು ಭಕ್ತಿಯ ಭರದಲ್ಲಿ ಭಗವಂತನ ಅಂಗಾಂಗಗಳ ಸೊಬಗನ್ನು ವರ್ಣಿಸುವುದರಲ್ಲಿ ಮಗ್ನರಾಗಿ ಬಿಡುತ್ತಾರೆ.

> ಈ ಮುದ್ದು ಕೃಷ್ಣನ ಕ್ಷಣದ ಸುಖವೆ ಸಾಕು......
> ಚೆಲುವ ಚರಣ ದ್ವಂದ್ವ ಜಂಘೆ ಜಾನೂರು ಕಟಿ
> ವಳಿಪಂಕ್ತಿ ಜಠರ ಪಕ್ಷ ಕಂಬುಕಂಧರದಿ ।
> ನಳಿತೋಳು ಮುದ್ದು ಮುಖನಯನ ನಾಸಿಕ ಕರ್ಣ
> ಸುಳಿಗುರುಳು ಮಸ್ತಕದ ನಳಿನನಾಭನ ಸೊಬಗು ॥ –ವಾದಿರಾಜರು

ಪಂಥಗಳೆರಡರ ದೇಹದ ಬಗೆಗಿನ ತಾತ್ವಿಕ ಚಿಂತನೆಯಲ್ಲಿ ದೇಹಕ್ಕೆ ಅಸ್ತಿತ್ವವಿಲ್ಲವೆಂದು ಹೇಳಲಾಗುತ್ತದೆ. ಈ ನೆಲೆಯಲ್ಲೇ ಕನಕದಾಸರು 'ಎಂದಿದ್ದರೀ ಕೊಂಪೆ ನನಗೆ ನಂಬಿಕೆಯಿಲ್ಲ ಮುಂದರಿತು ಶ್ರೀಹರಿಯ ಭಜಿಸುವುದು ಲೇಸು' ಎಂದು ಭಾವಿಸುತ್ತಾರೆ. ಇದೇ ನಿಲುವು ಚೈತನ್ಯಪಂಥದ್ದು ಕೂಡ. ಈ ಪಂಥಗಳು ಆತ್ಮಕ್ಕೆ ನೀಡುವ ಮಹತ್ವವನ್ನು ದೇಹಕ್ಕೆ ನೀಡಲಾರವು. ಇಲ್ಲಿ ಕನಕದಾಸರ ನಿಲುವೆನ್ನುವುದು ಸಮಗ್ರ ದಾಸಪಂಥದ ನಿಲುವೆಂದು ಭಾವಿಸಿಕೊಳ್ಳಬೇಕು. ಆದರೆ ವಿಮರ್ಶಕರಾದ ಡಿ.ಆರ್.ನಾಗರಾಜ್ ಅವರು ಕನಕತತ್ತ್ವಕ್ಕೆ ಉತ್ತರವಾಗಿ, 'ಕನಕನ ಸಮಸ್ಯೆ ಎಂದರೆ, ಆತನ ಶರೀರ ಮೀಮಾಂಸೆಯು ತುಂಬ ಸರಳ. ಪದದ ಅಥವಾ ಕೀರ್ತನೆಯ ರೂಪದಲ್ಲಿ ಬರೆಯುವಾಗ ಆತ ಶರೀರದ ಬಗ್ಗೆ ಸರಳ ಆಧ್ಯಾತ್ಮಿಕ ನಿರಾಕರಣೆಯ ನಿಲುವನ್ನು

ತಾಳುತ್ತಾನೆ. ಶರೀರ ಎನ್ನುವುದು ಸಾಮಾಜಿಕ ಜೀವನವೆಂದು ಆತ ಭಾಷಾಂತರಿಸಿ ಬಿಡುತ್ತಾನೆ. ಆ ಸಾಮಾಜಿಕವಾದ ಆದಿಮಸುಖ ಸಂಕಟಗಳ ಕ್ಷೇತ್ರವಾಗಿ ಶರೀರವನ್ನು ಕಾಣದೇ ಇರುವುದು ಕನಕದಾಸ ಹಾಗೂ ದಾಸಪಂಥದ ಮುಖ್ಯಲಕ್ಷಣ'[೬೩] ಎನ್ನುತ್ತಾರೆ. ಪ್ರಾಯಶಃ ಡಿ. ಆರ್. ನಾಗರಾಜ್ ಅವರ ಈ ನಿಲುವು ಕನಕದಾಸರ ಸಾಹಿತ್ಯ ಭಾಷೆಯ ನಡೆಯನ್ನು ಆಧರಿಸಿರಬೇಕೆಂದು ಕಾಣುತ್ತದೆ. ವಿಮರ್ಶಕರ ಚಿಂತನೆಗಳೇನೇ ಇದ್ದರೂ ಚೈತನ್ಯ ಹಾಗೂ ದಾಸಪಂಥಗಳೆರಡರ ಶರೀರಮೀಮಾಂಸೆಯ ಅಂತಿಮದೃಷ್ಟಿ ಭಗವಂತನೆಡೆಗೆ ಎಂದು ಭಾವಿಸಿಕೊಳ್ಳಬೇಕಾಗುತ್ತದೆ.

ಚೈತನ್ಯಸಾಹಿತ್ಯದಲ್ಲಿ ಶಾರೀರಿಕ ಚಿಂತನೆಯು ಮುಖ್ಯವಾಗಿ ನಡೆಯುವುದು ಅದರ ತತ್ತ್ವಾಧಾರಿತ ಪ್ರಕಟನೆಯಲ್ಲಿ. ಇಲ್ಲಿಯ ತತ್ತ್ವಾಧಾರಿತವಾದ ಭಕ್ತಿಪ್ರೇಮ, ಶರಣಾಗತಿ, ರಾಧಾಮಾಧವ ಪ್ರೇಮ ಮುಂತಾದ ಮುಖ್ಯ ವಿಚಾರಗಳು ಶಾರೀರಿಕ ಚಿಂತನೆಗೆ ಮುಖ್ಯವಸ್ತುಗಳು. ಶ್ರೀಲ ರೂಪ ಗೋಸ್ವಾಮಿಗಳು ತಮ್ಮ 'ಲಲಿತ ಮಾಧವ'ದಲ್ಲಿ ಹೇಳಿದ ವಿಚಾರವನ್ನೇ ಚೈತನ್ಯಪಂಥದ ಆದಿಲೀಲೆಯಲ್ಲಿ ಮತ್ತೆ ಪ್ರಸ್ತಾವಿಸಲಾಗಿದೆ.

ರೂಪೇ ಕಂಸ ಹರಸ್ಯ ಲುಬ್ಧ ನಯನಾಂ ಸ್ಪರ್ಶೇ ತಿಹೃಷ್ಯತ್ ತ್ವಚಂ
ವಾಣ್ಯಾಮ್ ಉತ್ಕಲಿತ ಶ್ರುತಿಂ ಪರಿಮಲೇ ಸಂಹೃಷ್ಟ ನಾಸಾಪುಟಾಮ್
ಆರಜ್ಯದ್ ರಸನಾಂ ಕಿಲಾಧರಪುಟೇ ನ್ಯಂಚನ್ಮುಖಾಂಬೋರುಹಾಮ್
ದಂಬೋದ್ಗೀರ್ಣ ಮಹಾಧೃತಿಂ ಬಹಿರಪಿ ಪ್ರೋದ್ಯದ್ ವಿಕಾರ ಕುಲಮ್ ॥[೬೪]

(ಕೃಷ್ಣನ ಸೌಂದರ್ಯದಿಂದ ಆಕೆಯ ಕಣ್ಣುಗಳು ಮಂತ್ರಮುಗ್ಧವಾಗಿವೆ. ಕೃಷ್ಣನು ಅವಳನ್ನು ಸ್ಪರ್ಶಿಸಿದಾಗ ಆಕೆಯ ದೇಹವು ಹರ್ಷದಿಂದ ರೋಮಾಂಚಿತವಾಗುತ್ತದೆ. ಅವನ ಮಧುರ ಸ್ವರಕ್ಕೆ ಆಕೆಯ ಕಿವಿಗಳು ಆಕರ್ಷಿತವಾಗುತ್ತವೆ. ಅವನ ಮೈಯ ಕಂಪಿನಿಂದ ಆಕೆಯ ನಾಸಿಕಾಗ್ರದ ಹೊಳ್ಳೆಗಳು ಮಾಟಕ್ಕೊಳಪಟ್ಟಂತಾಗುತ್ತವೆ. ಅವನ ಮೃದುತಲ ತುಟಿಗಳ ಮಾಧುರ್ಯವನ್ನು ಹೀರಲು ಆಕೆಯ ನಾಲಗೆಯು ಚಡಪಡಿಸುತ್ತವೆ. ಸ್ವನಿಯಂತ್ರಣವನ್ನು ನಟನೆಯಲ್ಲಿ ಮಾತ್ರ ತೋರುತ್ತಾ ಆಕೆಯು ತನ್ನ ಕಮಲ ಸದೃಶವಾದ ಮುಖವನ್ನು ನೆಲಕ್ಕೆ ಬಾಗಿಸುತ್ತಾಳೆ. ಆದರೆ ಕೃಷ್ಣನಲ್ಲಿ ಆಕೆಗಿರುವ ನೈಜ ಪ್ರೇಮದ ಬಾಹ್ಯ ಚಹರೆಗಳನ್ನು ತೋರದೆ ಇರುವುದು ಆಕೆಗೆ ಸಾಧ್ಯವಾಗುತ್ತಿಲ್ಲ).

ಒಟ್ಟಿನಲ್ಲಿ ಎರಡು ಪಂಥಗಳಲ್ಲಿ ಹೇಳಲಾಗುವ ಜೀವಿಯ ಶರೀರಾಂಗಗಳು ಆ ಜೀವಿಯ ಆತ್ಮೋದ್ಧಾರಕ್ಕಾಗಿ ಮೀಸಲಾಗುತ್ತದೆ. ನಾಲಿಗೆಗೆ ಹರಿನಾಮ ಸ್ಮರಣೆ, ಕಾಲಿಗೆ ಹರಿಯಾತ್ರೆ, ಕಿವಿಗೆ ವಿಷ್ಣುಕಥೆ, ಹಸ್ತಗಳಿಗೆ ದಾನವಲ್ಲದೆ, ಶಿರವು ಪರಮಪುರುಷನಿಗೆ ಮಣಿದರೆ ಮಾತ್ರ ಆ ಜೀವಿಯ ಜೀವನವು ಭೂಷಣವಾಗುತ್ತದೆ ಎಂಬುದು ಪಂಥಗಳೆರಡರ ಅನುಭಾವಿಗಳ ಮಾತು.

೫.೧೦ : ಪವಾಡಗಳಲ್ಲಿ ಸಾಮ್ಯತೆ

ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ಪವಾಡಗಳ ವಿಚಾರವು ಹಿಂದಿನಿಂದಲೇ ಬಂದಿರುತ್ತದೆ. ಆದರೆ ಈ ಪವಾಡಗಳು ನಡೆದಿರುವಂತಹುದು ಸಮಾಜದ ಮುಖಕ್ಕೆ ಕೇವಲ ಅಚ್ಚರಿಯನ್ನು ಉಂಟುಮಾಡುವುದಕ್ಕಷ್ಟೇ ಅಲ್ಲ. ಅದರ ಹಿಂದೆ ಮುಖ್ಯವಾದ ಉದ್ದೇಶವಿದೆ; ತಾತ್ವಿಕತೆಯಿದೆ. ಭಾರತೀಯ ಇತರ ಭಾಷೆಗಳಲ್ಲಿ ಪವಾಡಗಳ ಕುರಿತಾಗಿ ಸಂಶೋಧನೆಯು ನಡೆದಿದ್ದರೂ ಕನ್ನಡದಲ್ಲಿ ಆ ಕೆಲಸವು ಸ್ವಲ್ಪ ಕಡಿಮೆಯೆಂದೇ ಹೇಳಬೇಕು. ಆದರೂ

ವೀರಶೈವ ಸಾಹಿತ್ಯ ಸಂಶೋಧನೆಗೆ ಸಂಬಂಧಿಸಿದಂತೆ ಡಾ, ವ್ಹಿ .ಜಿ. ಪೂಜಾರ ಅವರು ಸಂಶೋಧಿಸಿದ 'ವೀರಶೈವ ಸಾಹಿತ್ಯದಲ್ಲಿ ಪವಾಡಕಥೆಗಳು' ಮತ್ತು ಕನ್ನಡಕ್ಕೆ ಅನುವಾದಗೊಡ ಬಿ. ಎಸ್. ಸತ್ಯನಾರಾಯಣ ಅವರ 'ವಿಶ್ವವಿಖ್ಯಾತ ನಿಗೂಢ ಘಟನೆಗಳು' ಎಂಬ ಕೃತಿಗಳು ಮುಖ್ಯವಾಗುತ್ತವೆ. ಆದರೆ ನಾನು ಸ್ವೀಕರಿಸಿಕೊಂಡ ಉಭಯ ಪಂಥಗಳಲ್ಲಿ ಬರುವ ಪವಾಡಗಳ ಕುರಿತಾಗಿ ಸತ್ಯಾಸತ್ಯತೆಯ ಸಂಶೋಧನೆಯನ್ನು ನಡೆಸುವುದು ಅಥವಾ ಅವುಗಳನ್ನು ವೈಜ್ಞಾನಿಕ ಪರಿಭಾಷೆಯಲ್ಲಿ ಅರ್ಥೈಸುವುದು ನನ್ನ ಉದ್ದೇಶವಲ್ಲ. ಜೊತೆಗೆ ಈ ಸಂದರ್ಭಕ್ಕೆ ಅದು ಸೂಕ್ತವೂ ಅಲ್ಲವೆನ್ನುವುದು ನನ್ನ ಭಾವನೆ. ಹಾಗಾಗಿ ಎರಡು ಪಂಥಗಳಿಗೆ ಸಂಬಂಧಿಸಿದಂತೆ ನಡೆದಿರುವ ಪವಾಡಗಳಲ್ಲಿ ತೋರಿಬರುವ ಸಾಮ್ಯವನ್ನು ಮತ್ತು ಅದರ ಹಿಂದಿರುವ ಹರಿಸರ್ವೋತ್ತಮತ್ವದ ತಾತ್ವಿಕತೆಯನ್ನು ಹೇಳುವ ಉದ್ದೇಶ ಮಾತ್ರ ನನ್ನದೆಂದುಕೊಳ್ಳುತ್ತೇನೆ. ಅದೇನೇ ಇದ್ದರೂ ಇಲ್ಲಿ ತೋರಿಬರುವ ಪವಾಡಗಳಲ್ಲಿ ಅಲೌಕಿಕ ಜನನ, ಆರ್ತರಕ್ಷಣೆ, ವ್ಯಕ್ತಿತ್ವದ ಮಹಿಮೆ, ಧಾರ್ಮಿಕ ವಾದವಿವಾದಗಳು, ಸತ್ತ ದೇಹಕ್ಕೆ ಮರುಜೀವವನ್ನು ನೀಡುವುದು, ಉತ್ಸವಾದಿಗಳಲ್ಲಿ ಸ್ಥಗಿತಗೊಂಡ ರಥವನ್ನು ಚಲಿಸುವಂತೆ ಮಾಡುವುದು, ಆಯುಷ್ಯದ ವರ್ಗಾವಣೆ ಮೊದಲಾದವುಗಳು ಮುಖ್ಯವೆನಿಸುತ್ತವೆ.

ಒಂಬತ್ತನೆಯ ಶತಮಾನದಲ್ಲಿದ್ದರೆಂದು ಹೇಳಲಾಗುವ 'ಅಚಲಾನಂದದಾಸರು' ಹೈಗಣ ಪುರವಾಸಿಗಳಾಗಿದ್ದು ತಮ್ಮ ಉತ್ತರಭಾರತದ ತೀರ್ಥಯಾತ್ರೆಯನ್ನು ಮುಗಿಸಿ ನೇಪಾಳಕ್ಕೆ ಹೋದಾಗ ಅಲ್ಲಿಯ ರಾಜಪುತ್ರನು ನಾಗರಹಾವೊಂದು ಕಚ್ಚಲ್ಪಟ್ಟು ಅಸುನೀಗುತ್ತಾನೆ. ಅದೇ ಸಂದರ್ಭದಲ್ಲಿ ಅಚಲಾನಂದರು ನರಸಿಂಹಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟುಕೊಂಡು ಭಜನೆಯನ್ನು ಮಾಡುತ್ತಾ ಸಂಚರಿಸುತ್ತಿರುವಾಗ ವ್ಯಸನಕ್ರಾಂತನಾದ ರಾಜನು ದಾಸರಲ್ಲಿ ಪುತ್ರಭಿಕ್ಷೆಯನ್ನು ಕೇಳುತ್ತಾರೆ. ಅಚಲಾನಂದರು ಗರುಡಮಂತ್ರವನ್ನು ಪಠಿಸಿ, ಸರ್ಪವನ್ನು ಅಭಿಮಂತ್ರಿಸಿ, ಮೃತನ ದೇಹದಿಂದ ವಿಷವನ್ನು ಹೊರಗೆಡಿಹಿ ರಾಜಕುಮಾರನನ್ನು ಬದುಕಿಸುತ್ತಾರೆ.[೬] ಇದರಿಂದ ಅಪೂರ್ವವಾದ ಮಂತ್ರವೊಂದು ಮತ್ತು ಆ ಮಂತ್ರಕ್ಕಿರುವ ಶಕ್ತಿಯೊಂದು ಗೋಚರವಾಗುತ್ತದೆ. ಅಲ್ಲದೆ ಆ ಮಂತ್ರಶಕ್ತಿಯನ್ನು ಕರಗತ ಮಾಡಿಕೊಂಡು, ಅದರಿಂದ ಕಾರ್ಯಸಾಧನೆಯನ್ನು ಮಾಡುವಲ್ಲಿ ಅಡಕವಾಗಿರುವ ಮನೋಸ್ಥೈರ್ಯವು ಅಚ್ಚರಿಯನ್ನು ಮೂಡಿಸುತ್ತದೆ.

ಈ ರೀತಿಯ ಪವಾಡ ಚೈತನ್ಯಪಂಥದಲ್ಲೂ ನಡೆಯುತ್ತದೆ. ಚೈತನ್ಯ ವೃಕ್ಷದ ಮೂವತ್ತೇಳನೆಯ ಶಾಖೆಯಲ್ಲಿ ಬರುವ ಗರುಡ ಪಂಡಿತರ ಪಾತ್ರವು ತುಂಬಾ ಮಹತ್ವಪೂರ್ಣವಾದದ್ದು. ಅವರ ಜೀವನದಲ್ಲಿ ವಿಷಸರ್ಪವೊಂದು ಅವರನ್ನು ಕಚ್ಚುತ್ತದೆ. ಆದರ ವಿಷವು ಪಂಡಿತರ ದೇಹವನ್ನು ಆವರಿಸಲು, ಅವರು ಹರೇಕೃಷ್ಣ ಸಂಕೀರ್ತನೆಯಲ್ಲೇ ತಮ್ಮನ್ನು ತಾವು ಮುಳುಗಿಸಿಕೊಳ್ಳುತ್ತಾರೆ. ಪರಿಣಾಮವಾಗಿ ದೇಹವನ್ನಾವರಿಸಿದ ಸರ್ಪವಿಷವು ಹೆಚ್ಚಿನ ಪ್ರಭಾವವನ್ನು ಬೀರದೆ ಇಳಿಮುಖವಾಗಿ ಬಿಡುತ್ತದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದೇನೆಂದರೆ ಸಂಕೀರ್ತನೆಯಲ್ಲಿ ಜೀವಭಯವೂ ನಾಶವಾಗುತ್ತದೆನ್ನುವುದು. ಇಂತಹ ಹಲವು ಸನ್ನಿವೇಶಗಳು ಚೈತನ್ಯಪಂಥದ ಪವಾಡಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ.

ಭಾಗವತ ಪ್ರಚಾರದೀಕ್ಷೆಯನ್ನು ಹೊತ್ತಿದ್ದ ಶ್ರೀಪಾದರಾಯರು ಮುಳುಬಾಗಿಲಿಗೆ ಬಂದಾಗ ಅಲ್ಲಿಯ ಬಡಶಿಷ್ಯರು ಶ್ರೀಗಳ ದಿಗ್ವಿಜಯ ಚರಿತ್ರೆಯನ್ನು ಕೇಳಿ ಹರ್ಷಿತರಾಗಿ, ತಲಕಾವೇರಿ ಸ್ನಾನವನ್ನೇ ಮಾಡಲು ಅಶಕ್ತರಾದ ನಮಗೆ ಗಂಗಾಸ್ನಾನ, ಗಂಗಾದರ್ಶನವು ಹೇಗೆ ಲಭಿಸೀತೆಂದು ಕೇಳಲು, ಶ್ರೀಪಾದರಾಯರು ಆ ಶಿಷ್ಯರಿಗೆ ನಾಳೆ ಪ್ರಾತಃಕಾಲ 'ಶ್ರೀನರಸಿಂಹತೀರ್ಥ'ಕ್ಕೆ ಬರುವಂತೆ ಸೂಚಿಸಿ, ಸರೋವರದ ನೀರು ಕಪ್ಪಾಗಿಯೂ, ಗಂಗೆಯ ನೀರು ಬೆಳ್ಳಗಾಗಿಯೂ ಇರುತ್ತದೆ. ಹಾಗೆಯೇ ನಾಳೆ ನಡೆದರೆ ಗಂಗೆ ಬಂದಂತೆ ಎಂದು ಭಾವಿಸಬೇಕೆಂದು ಹೇಳಿ ಭಜನೆಯೊಂದಿಗೆ ರಾತ್ರಿ ಜಾಗರಣಮಾಡಿ ಗಂಗಾಪಾರಾಯಣವನ್ನು ಮಾಡುತ್ತಾರೆ. ಈ ಮೂಲಕ ಗಂಗಾಪ್ರವಾಹವೇ ಶ್ವೇತಜಲವಾಗಿ ತೋರುತ್ತದೆ. ಭಕ್ತರ ಗಂಗಾದರ್ಶನ ಈಡೇರುತ್ತದೆ. ಇಷ್ಟೇ ಅಲ್ಲದೆ, ಶಂಖೋದಕ ಪ್ರೋಕ್ಷಣೆಯಿಂದ ಬ್ರಹ್ಮಹತ್ಯಾಪಾತಕಿಯಾದ ಬ್ರಾಹ್ಮಣನೊಬ್ಬನ ಬ್ರಹ್ಮಹತ್ಯಾಪಾಪವನ್ನು ಪರಿಹರಿಸಿದುದು, ಪುರುಷೋತ್ತಮತೀರ್ಥ ಗುಹೆಯಲ್ಲಿ ಬಾಲಕ ವ್ಯಾಸರಾಯರು ನಿದ್ದೆಯಲ್ಲಿರುವ ಸಂದರ್ಭ ಉಗ್ರರೂಪೀಹಾವೊಂದು ನುಂಗಲು ಹವಣಿಸುತ್ತಿದ್ದಾಗ ಶ್ರೀಪಾದರಾಯರು ಸರ್ಪಭಾಷೆಯಲ್ಲಿ ಸರ್ಪದೊಂದಿಗೆ ಸಂವಾದಿಸಿದ್ದು, ಬಲುಬಗೆಯ ಪದಾರ್ಥಗಳನ್ನು ಭಗವಂತನಿಗೆ ನೈವೇದ್ಯ ಮಾಡಿಸಿ, ಅನಂತರದಲ್ಲಿ ಭಿಕ್ಷೆ ಸ್ವೀಕರಿಸುತ್ತಿದ್ದ ಶ್ರೀಪಾದರಾಜರನ್ನು ಪರೀಕ್ಷಿಸಿದ ರಾಜನಿಗೆ ಪವಾಡವನ್ನು ತೋರಿಸಿ, ಅನಂತರದಲ್ಲಿ ಶರಣಾಗುವಂತೆ ಮಾಡಿದುದು, ಇವೆಲ್ಲವು ದಾಸಪಂಥ ನಿರ್ವಹಿಸಿದ ಪವಾಡ ವಿಚಾರವೆನಿಸುತ್ತದೆ.

ಚೈತನ್ಯಪಂಥದ ಅನುಯಾಯಿಗಳಲ್ಲಿ ಠಾಕೂರ ಸಾರಂಗದಾಸರ ಹೆಸರು ಮುಖ್ಯವಾದುದು. ಅವರು ನವದ್ವೀಪದ ಮೋದದ್ರುಮ ದ್ವೀಪದಲ್ಲಿ ವಾಸಿಸುತ್ತಿದ್ದವರು. ಆದರೆ ಶಿಷ್ಯರನ್ನಾಗಿ ಯಾರನ್ನೂ ಸ್ವೀಕರಿಸಿದವರಲ್ಲ. ಗಂಗಾನದಿಯ ದಂಡೆಯಲ್ಲೊಮ್ಮೆ ಪರಮಪ್ರಭುವನ್ನು ಪೂಜಿಸುತ್ತಿರಲು, ಅಂತರಂಗದಲ್ಲಿದ್ದ ದೇವೋತ್ತಮನು ಶಿಷ್ಯನನ್ನು ಸ್ವೀಕರಿಸುವಂತೆ ಪ್ರೇರೇಪಣೆ ನೀಡಿದನು. ಈ ಕಾರಣದಿಂದಲೇ 'ಮುಂದಿನ ಬೆಳಿಗ್ಗೆ ನಾನು ಯಾರನ್ನು ನೋಡುತ್ತೇನೋ ಅವನನ್ನೇ ನನ್ನ ಶಿಷ್ಯನನ್ನಾಗಿ ಮಾಡಿಕೊಳ್ಳುತ್ತೇನೆಂದು ಸಂಕಲ್ಪಿಸಿಕೊಂಡರು. ಅಂತೆಯೇ ಮರುದಿನ ಗಂಗಾನದಿಯ ಸ್ನಾನಕ್ಕಾಗಿ ಹೋದಾಗ ನೀರಿನಲ್ಲಿ ತೇಲುತ್ತಿದ್ದ ಮೃತದೇಹವೊಂದನ್ನು ಆಕಸ್ಮಿಕವಾಗಿ ಕಂಡರು. ಅಲ್ಲದೆ ಹತ್ತಿರ ಬರುತ್ತಿದ್ದ ಆ ಮೃತದೇಹವನ್ನು ತಮ್ಮ ಪಾದದಿಂದ ಸ್ಪರ್ಶಿಸಿದರು. ಅಚ್ಚರಿಯೆಂದರೆ, ಆ ದೇಹದಲ್ಲಿ ಆ ಕೂಡಲೇ ಜೀವ ಸಂಚಾರವಾಯಿತು. ಠಾಕೂರ ಸಾರಂಗರು ಆತನನ್ನೇ ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿ, ಠಾಕೂರ ಮುರಾರಿ ಎಂದು ನಾಮಕರಣವನ್ನು ಮಾಡಿದರು.[೧೧]

ಒಂದು ನೆಲೆಯಲ್ಲಿ ಅವತಾರವೆಂಬ ಕಲ್ಪನೆಯು ಪವಾಡವೆ. ಇಲ್ಲಿಯ ಅವತಾರ ವಿಚಾರವು ಎರಡು ಪಂಥಗಳಿಗೂ ಮೀಸಲಾಗುತ್ತದೆ. ದ್ವಾಪರದಲ್ಲಿ ಪರಮಪುರುಷನಾದ ಶ್ರೀಕೃಷ್ಣನು ಚೈತನ್ಯಪಂಥದಲ್ಲಿ ಚೈತನ್ಯ ಮಹಾಪ್ರಭುಗಳಾಗಿ, ಬಲರಾಮನೇ ನಿತ್ಯಾನಂದರಾಗಿ ಬಂಗಾಲ ಪ್ರಾಂತ್ಯದಲ್ಲಿ ಅವತರಿಸುತ್ತಾರೆ. ಹಾಗೆಯೇ ದಾಸಪಂಥದಲ್ಲೂ ಈ ಅವತಾರ ಕಲ್ಪನೆ ಮುಂದುವರಿಯುತ್ತದೆ. ಮಧ್ವಪತಿದಾಸರು ತಮ್ಮ ಉಗಾಭೋಗ ರಚನೆಯಲ್ಲಿ ಅವತಾರ ಕುರಿತಾದ ವಿಚಾರವನ್ನು ಹೀಗೆ ಹೇಳುತ್ತಾರೆ.

ವರಧ್ರುವನವತಾರ ಶ್ರೀಪಾದರಾಯರು । ಶಿರಿರಂಗವಿಠಲನ ಉಪಾಸಕರು ।
ತರಳ ಪ್ರಹ್ಲಾದನೆನಿಸಿದ ಶೇಷಾವೇಶ ಗುರುವ್ಯಾಸರಾಯರೆ ಕೃಷ್ಣೋಪಾಸಕರು ।
ಸುರವಲನಿಯವತಾರವೆನಿಸಿದ ಪುರಂದರದಾಸರು ವಿಠಲನ ಉಪಾಸಕರು ।
ಧರೆಯೊಳು ಇವರ ನರರೆಂದವರನು ನರಕಕ್ಕೈದಿಸುವನು ಗುರುಮಧ್ವಪತಿವಿಠಲ ॥

–ಮಧ್ವಪತಿದಾಸರು

ವಿಜಯದಾಸರ ರಚನೆಯಲ್ಲೂ ವ್ಯಾಸರಾಯರು ಪ್ರಹ್ಲಾದನ ಅವತಾರವೆನ್ನುವುದಕ್ಕೆ ಸಾಕ್ಷಿ ಪದ್ಯವನ್ನು ಕಾಣಬಹುದು.

ವ್ಯಾಸರಾಯರ ಭಜಿಸಿರೋ......
ವೃಕೋದರನಿಂದ ದೇಹವನು ಬಿಡುವಾಗ ಬಾ ।
ಹ್ಲೀಕರಾಯನಾಗಿ ಹುಟ್ಟಿದ್ದ ಪ್ರಹ್ಲಾದನು ।
ಉಕುತಿಯಲ್ಲಿ ಪೊಗಳಿದವರನ್ನು ಬೇಡಿದನು ವೈದಿಕ ಮಾರ್ಗವನ್ನೇ ಧರಿಸಿ ॥ –ವಿಜಯದಾಸರು

ಭೂಪಾಳಿ ರಾಗಸಂಯೋಜನೆಯೊಂದಿಗೆ ರಚನೆಯಾದ ಈ ಪಾದದಲ್ಲಿ ವ್ಯಾಸರಾಯರ ಅವತಾರದ ಸಮರ್ಥನೆಯನ್ನು ಕಾಣುತ್ತೇವೆ.

ಮಧ್ವಚಾರ್ಯರ ಮೂಲಪೀಠಸ್ಥರಾದ ಬ್ರಹ್ಮಣ್ಯತೀರ್ಥರ ಬದುಕಿನಲ್ಲಿಯೂ ಅತಿಮಾನುಷಮಹಿಮೆಗಳು ಬಹಳಷ್ಟು ನಡೆದಿದೆ. ಕಾವೇರಿತೀರದ ಬನ್ನೂರಿನ ಕಾಶ್ಯಪಗೋತ್ರೋದ್ಭವನಾದ ರಾಮಾಚಾರ್ಯನು ಕಿರುಹರೆಯದಲ್ಲೇ ಕಾಲವಾಗಲು, ಆತನ ಸತಿಯು ಸಹಗಮನಕ್ಕೆ ಸಿದ್ಧಳಾಗುತ್ತಾಳೆ. ಆದರೆ ಸಹಗಮನದ ಪೂರ್ವದಲ್ಲಿ ಹಿರಿಯರ ಆಜ್ಞೆಯನ್ನು ಪಡೆಯಬೇಕಾದುದು ಸಹಗಮನದ ಪದ್ಧತಿಯಾಗಿತ್ತು. ಈ ನಿಟ್ಟಿನಲ್ಲಿ, ಯಾವುದೇ ವಿಚಾರವನ್ನು ತಿಳಿಯದ ಶ್ರೀಬ್ರಹ್ಮಣ್ಯತೀರ್ಥರಲ್ಲಿಗೆ ಬಂದ ರಾಮಾಚಾರ್ಯನ ಸತಿಗೆ 'ದೀರ್ಘ ಸುಮಂಗಲೀಭವ' ಎಂದು ಹರಸುತ್ತಾರೆ. ಸತಿಯು ತನ್ನ ಪತಿವಿಯೋಗದ ನೋವನ್ನು ವಿಸ್ತರಿಸಿಹೇಳಲು, ಯತಿಗಳು ಧನ್ವಂತರೀಜಪವನ್ನು ಜಪಿಸುತ್ತಾ, ಕಮಂಡಲೋದಕವನ್ನು ಮೃತಶರೀರದ ಮೇಲೆರಚಿ, ರಾಮಾಚಾರ್ಯನನ್ನು ಮತ್ತೆ ಬದುಕಿಸುತ್ತಾರೆ.

ಆ ಕಾಲದಲ್ಲಿ ಸಂತರಿಗೆ ಮತ್ತು ಸಂನ್ಯಾಸಿಗಳಿಗೆ ತಮ್ಮ ವೈರಿಗಳಿಂದ ನಡೆಯುತ್ತಿದ್ದ ಪರೀಕ್ಷೆಯೆಂದರೆ ವಿಷಪ್ರಾಶನ ಹಾಗೂ ಮಾಂಸಾಹಾರ ಸ್ವೀಕಾರ. ವಿಷ್ಣು ಮತ್ತು ಶಿವಕಂಚಿಯಲ್ಲಿ ವ್ಯಾಸರಾಯರಿಗೆ ಗುರುಮರ್ಯಾದೆ ಸಿಕ್ಕಿದರೂ ಅದನ್ನು ಸಹಿಸದ ಚೋಳಿಯನೋರ್ವನು ನೈವೇದ್ಯದ ಅಡುಗೆಗೆ ವಿಷವನ್ನು ಬೆರಸಿದನು. ಸ್ವಾಮಿಗಳು ಭಿಕ್ಷಾಸ್ವೀಕಾರಕ್ಕೆ ಕುಳಿತಾಗ, ನೈವೇದ್ಯ ಬಡಿಸುವ ಹಸ್ತವು ನಡುಗಲಾರಂಭಿಸಿದಾಗ, ತಮ್ಮ ದಿವ್ಯಶಕ್ತಿಯಿಂದ ಸತ್ಯವಿಚಾರವನ್ನು ತಿಳಿದು, ದೇವನೇ ವಿಷಾನ್ನವನ್ನು ಸ್ವೀಕರಿಸಿರುವಾಗ ನನಗೇಕೆ ನಿಷಿದ್ಧ? ಎಂದು ಭಾವಿಸಿ, ವಿಷಾನ್ನವನ್ನು ಭುಂಜಿಸಿ, ಭಜನೆಯೊಂದಿಗೆ ವಿಷಾನ್ನವನ್ನು ಜೀರ್ಣಮಾಡಿಕೊಂಡರು.

ಅಂತೆಯೇ ಚೈತನ್ಯರೂ ತೀರ್ಥಯಾತ್ರೆಯಲ್ಲಿದ್ದಾಗ ಬೌದ್ಧರ ನಾಯಕನೊಬ್ಬನು ಮಹಾಪ್ರಭುಗಳೊಂದಿಗೆ ವಾದಕ್ಕಿಳಿದು ಸೋಲನ್ನನುಭವಿಸುತ್ತಾನೆ. ತನಗಾದ ಅವಮಾನವನ್ನು ತೀರಿಸಿಕೊಳ್ಳಲು ಮುಂದೊಂದು ಸಭೆಯಲ್ಲಿ

ಕೃಷ್ಣಪ್ರಸಾದವೆಂದು ಮಾಂಸಯುಕ್ತ ಆಹಾರವನ್ನು ಪ್ರಭುಗಳಿಗೆ ನೀಡುತ್ತಾನೆ. ಆ ಸಂದರ್ಭದಲ್ಲಿ ಹಕ್ಕಿಯೊಂದು ಹಾರಿಬಂದು ತಟ್ಟೆಯನ್ನೆತ್ತಿಕೊಂಡು ಹಾರಿ ಹೋಗಿ ಬೌದ್ಧಗುರುವಿಗೆ ಘಾಸಿ ಮಾಡುತ್ತದೆ. ಈ ಘಟನಾನಂತರದಲ್ಲಿ ಬೌದ್ಧಪಾಂಥಿಕರು ತಮ್ಮ ಅಪರಾಧಕ್ಕೆ ಪ್ರಾಯಶ್ಚಿತ್ತವನ್ನು ಬಯಸಿ, ಕೃಷ್ಣನಾಮಸ್ಮರಣೆಯಿಂದ ಶುದ್ಧಾತ್ಮರಾಗುತ್ತಾರೆ.

ಚೈತನ್ಯ ಮತ್ತು ದಾಸಪಂಥಗಳೆರಡರಲ್ಲೂ ಭಗವಂತನ ಸ್ವಪ್ನದರ್ಶನದ ಉಲ್ಲೇಖಗಳು ಹೇರಳವಾಗಿಯೇ ಲಭ್ಯ. ನಿರಂತರ ಚಕ್ರತೀರ್ಥದಲ್ಲಿ ಸ್ನಾನಮಾಡುತ್ತಿದ್ದ ವ್ಯಾಸರಾಯರಿಗೆ ರಾತ್ರಿನಿದ್ದೆಯಲ್ಲಿ ಮಾರುತಿಯು ಮಧ್ವಾಚಾರ್ಯರ ರೂಪದಿಂದ ದರ್ಶನವನ್ನು ನೀಡಿ ಮಾರುತಿಯ ಮೂರ್ತಿಯನ್ನು ಪ್ರತಿಷ್ಠೆ ಮಾಡುವಂತೆ ಆಜ್ಞೆಯಾಯಿತು. ಆಜ್ಞೆಯಂತೆ ದಿಗ್ಬಂಧನ ಮೂಲಕವಾಗಿ ಮೂರ್ತಿಯನ್ನು ರಚಿಸಿ ದ್ವಾದಶನಾಮ ತಿಲಕವನ್ನಿಟ್ಟು ಮೂರ್ತಿಪ್ರತಿಷ್ಠೆಯನ್ನು ವ್ಯಾಸರಾಯರು ಮಾಡಿದರೆ, ಚೈತನ್ಯಪಂಥದಲ್ಲಿ ಗೋವರ್ಧನದಲ್ಲಿದ್ದ ಶ್ರೀಮಾಧವೇಂದ್ರಪುರಿಯವರಿಗೆ ಕಾಡಿನಲ್ಲಿದ್ದ ಶ್ರೀಗೋಪಾಲನ ಮೂರ್ತಿಯನ್ನು ಗೋವರ್ಧನಗಿರಿಯಲ್ಲಿ ಪ್ರತಿಷ್ಠಾಪಿಸುವಂತೆ ಕನಸುಬೀಳುತ್ತದೆ. ಪ್ರತಿಷ್ಠಾನಂತರದಲ್ಲಿ ಮಾಧವೇಂದ್ರರಿಗೆ ಶ್ರೀಗೋಪಾಲನು ಪುನಃ ಕನಸಿನಲ್ಲಿ ಬಂದು ಪುರಿಯಿಂದ ಶ್ರೀಗಂಧಚೂರ್ಣವನ್ನು ಸಂಪಾದಿಸಿಕೊಂಡು ಬಂದು ತನಗೆ ಲೇಪಿಸಬೇಕೆಂದೂ ಆಜ್ಞೆಯಾಗುತ್ತದೆ. ಇಂತಹ ಸ್ವಪ್ನದರ್ಶನವು ಚೈತನ್ಯಪಂಥದಲ್ಲಿ ಇನ್ನಷ್ಟು ತೋರಿಬರಲು ಸಾಧ್ಯ.

ಚೈತನ್ಯರ ಸಂಕೀರ್ತನಾಚಳುವಳಿಯನ್ನು ವಿರೋಧಿಸಿದ ಖಾಜಿಯು ಹಿಂದೂಗಳು ಸಂಕೀರ್ತನೆಗೆ ಬಳಸುತ್ತಿದ್ದ ಮೃದಂಗವನ್ನು ಮುರಿದುಹಾಕಿ ಪ್ರತಿಭಟಿಸುತ್ತಾನೆ. ಆದರೆ ಖಾಜಿಗೆ ಅದೇ ದಿನರಾತ್ರಿಯಲ್ಲಿ ಕನಸೊಂದು ಬಿದ್ದು, ಮಾನವ ಶರೀರದ ಭಯಂಕರವಾದ ಸಿಂಹವೊಂದು ಆತನ ಮೇಲೆರಗಿ, 'ನೀನು ಮೃದಂಗವನ್ನು ಮುರಿದು ಹಾಕಿದಂತೆ, ನಾನು ನಿನ್ನ ಎದೆಯನ್ನು ಸೀಳಿಬಿಡುತ್ತೇನೆ' ಎಂದು ಹೇಳಿ, ಆತನ ಎದೆಯನ್ನು ತನ್ನ ಉಗುರುಗಳಿಂದ ಘಾಸಿಗೊಳಿಸಿ ಹೋದಂತೆ ಭಾಸವಾಗುತ್ತದೆ. ಇವನಂತೆಯೇ ಸಂಕೀರ್ತನೆಯನ್ನು ವಿರೋಧಿಸಿದ ಇತರ ಕೆಲವೊಂದು ಮುಸಲ್ಮಾನರಿಗೂ ಒಂದೊಂದು ರೀತಿಯ ಅನುಭವವಾಗುತ್ತದೆ. ಅವರಲ್ಲಿ ಒಬ್ಬನಿಗೆ, ಬೆಂಕಿಯ ಜ್ವಾಲೆಯೊಂದು ಆತನ ಮುಖಕ್ಕೆ ಹೊಡೆದಂತೆ, ಇನ್ನೊಬ್ಬನಿಗೆ ಗಡ್ಡವು ಸುಟ್ಟುಹೋದಂತೆ ಭಾಸವಾಯಿತು. ಈ ಘಟನಾನಂತರದಲ್ಲಿ ಎಲ್ಲ ಮುಸಲ್ಮಾನರು ಸಂಕೀರ್ತನೆಯನ್ನು ಪುರಸ್ಕರಿಸಿದರು. ಶ್ರೀವಾಸಠಾಕೂರರ ಮನೆಯ ಹತ್ತಿರವಿದ್ದ ಓರ್ವ ಮುಸಲ್ಮಾನ ದರ್ಜಿಗೂ ಶ್ರೀಚೈತನ್ಯರು ತಮ್ಮ ಮೂಲರೂಪವಾದ ಕೃಷ್ಣರೂಪವನ್ನು ತೋರಿಸಿದರು. ಇದರಿಂದಾಗಿ ಆತನೂ ಕೃಷ್ಣಸಂಕೀರ್ತನೆಗೆ ಒಳಗಾದನು.

ಬೇಲೂರಿನ ವೈಕುಂಠದಾಸರ ಬದುಕಿನಲ್ಲೂ ಅತಿಮಾನುಷ ಮಹಿಮೆಗಳ ವಿಚಾರ ಸಾಕಷ್ಟಿವೆ. ಅವರ ಮಗನಾದ ನಂಜುಂಡನು ತಾಳೇಪುಷ್ಪವನ್ನು ಕೊಯ್ಯಲುಹೋಗಿ ಕೃಷ್ಣಸರ್ಪ ಕಚ್ಚಿ ಅಸುನೀಗಲು, ಆ ಕಳೇಬರವನ್ನು ಚೆನ್ನಕೇಶವ ದೇವಾಲಯದ ಬಲಿಕಲ್ಲಿನ ಬಳಿ ತಂದು, ದಾಸರು ಭಗವಂತನನ್ನು ಕೈಜೋಡಿಸಿ ಪ್ರಾರ್ಥಿಸುತ್ತಾರೆ.

ಏಳಿಸು ನಂಜನನ । ನೀ ಬೇಗದೊ । ಳೆಬ್ಬಿಸು ನಂಜನನ ॥ ಪ ॥
ಬಾಳುವ ಮಗನನು ತೋಳಪಿಡಿದ ಯಮ । ದಾಳಿ ದೊಡೆಯ ವೇಲಾಪುರದರಸ ॥ ಅ.ಪ ॥
ಮರಣದ ನೈದಿದ ನಂಜುಡನ । ಕರುಣೆಸದಿರ್ದೊಡೆ ಶಿರವನರಿದು ನಾ
ಚರಣದೊಳಿಡುವೆನು ದುರಿತ ಬಹುದು ನಿನ । ಗೆರೆಯನೆ ವೈಕುಂಠದರಸ ಚನ್ನಿಗನೆ ॥

ಹೀಗೆ ಸ್ತೋತ್ರವನ್ನು ಮಾಡಿ ತನ್ನ ತಲೆಯನ್ನು ಶಿಲೆಗೆ ಬಡಿಯುವಾಗ ಶ್ರೀಚೆನ್ನಕೇಶವನು ದಾಸರ ಕೈಹಿಡಿದು ಶಠಾರಿಯನ್ನು, ತೀರ್ಥವನ್ನು ಮಗನಿಗೆ ಪ್ರೋಕ್ಷಿಸೆಂದು ಅಭಯನೀಡುತ್ತಾನೆ. ವೈಕುಂಠದಾಸರು ಭಗವದ್‌ಪ್ರೇರಣೆಯಂತೆ ನಡೆಯಲು, ನಂಜುಡನು ಬದುಕುತ್ತಾನೆ. ಮಾನಸಿಕವಾಗಿ ಆನಂದತುಂದಿಲರಾದ ವೈಕುಂಠದಾಸರು ಮಗ ನಂಜುಂಡನಿಗೆ ನೂರುವರುಷ ಬಾಳಿಬದುಕೆಂದು ಆಶೀರ್ವಾದವನ್ನು ಮಾಡುತ್ತಾರೆ.

ಬದುಕು ಬದುಕು ನಂಜುಂಡ ನೀ ।
ನೊದಗೆ ಮತ್ತೆ ನೂರು । ವರುಷ ಪರ್ಯಂತರ ॥
ಹರಿಗೆರಗುತ ಹರಿ ಶರಣರ್ಗೆ ನಮಿಸುತ್ತ । ಹರಿಕಥೆಗಳ ನಿತ್ಯ ಹೇಳುತ್ತ ಕೇಳುತ್ತ ।
ಹರಿ ಸರ್ವೋತ್ತಮನೆಂದು ನೀನಿರು ಕಂಡ್ಯ । ವರ ವೈಕುಂಠ ಕೇಶವ ರಕ್ಷಿಸುವ ನಂಜ ॥

ಇಲ್ಲಿ ಕೊನೆಗೂ ವೈಕುಂಠದಾಸರು ಭಗವಂತನ ಮೂಲಕ ತನ್ನ ಮಗನನ್ನು ಬದುಕಿಸುತ್ತಾರೆ. ಇಂತಹ ಪವಾಡಗಳು ದಾಸಸಾಹಿತ್ಯದಲ್ಲಿ ಮಾತ್ರವಲ್ಲದೆ ಚೈತನ್ಯಪಂಥದಲ್ಲೂ ಕೆಲವೊಂದು ಉದಾಹರಣೆಗಳು ಸಿಗಲುಸಾಧ್ಯ.

ಇಲ್ಲಿಯ ಪಂಥಗಳಲ್ಲಿ ಅನುಭಾವಿಗಳು ತಮ್ಮ ಬದುಕಿನ ಕೊನೆಯಲ್ಲಿ ಅದೃಶ್ಯರಾಗಿ ಹೋಗುವ ಕ್ರಮಮಾತ್ರ ನಿಜಕ್ಕೂ ಸೋಜಿಗ. ಪುರಂದರದಾಸರು ತಿರುಪತಿಯ ವೆಂಕಟೇಶನ ಸನ್ನಿಧಿಯಲ್ಲಿ ಅದೃಶ್ಯರಾದಂತೆ, ೧೪೮೬ ರಲ್ಲಿ ಬಂಗಾಳದಲ್ಲಿ ಜನಿಸಿದ ಚೈತನ್ಯ ಮಹಾಪ್ರಭುಗಳು ೧೫೩೪ ರಲ್ಲಿ ಪುರಿಯ ತೋತಾ ಗೋಪೀನಾಥ ಸ್ವಾಮಿಯ ಗುಡಿಯ ಒಳಹೊಕ್ಕವರು ಅಲ್ಲೇ ಅದೃಶ್ಯರಾಗುತ್ತಾರೆ.

ಎರಡೂ ಪಂಥಗಳಲ್ಲಿ ರಥೋತ್ಸವ ಸಂದರ್ಭಗಳಲ್ಲಿ ನಡೆಯುವ ಪವಾಡಗಳಲ್ಲಿ ಏಕಮುಖವಿದೆ. ತಿರುಪತಿಯ ಬಹ್ಮರಥೋತ್ಸವದಲ್ಲಿ ಚಲಿಸದ ರಥವನ್ನು ವಿಜಯದಾಸರು 'ಸಾಗಿ ಬಾರಯ್ಯ ಭವರೋಗದ ವೈದ್ಯನೆ' ಎಂದು ಹಾಡಿ ಪ್ರಾರ್ಥಿಸುವ ಮೂಲಕ ಮುಂದಕ್ಕೆ ಚಲಿಸುವಂತೆ ಮಾಡಿದರೆ, ಬಂಗಾಳದ ಗುಂಡೀಚಾದಲ್ಲಿ ನಡೆಯುವ ರಥೋತ್ಸವದಲ್ಲಿ ಚಲಿಸದ ರಥವನ್ನು ಶ್ರೀಚೈತನ್ಯ ಮಹಾಪ್ರಭುಗಳು ತಮ್ಮ ಭಗವದ್‌ಪ್ರಾರ್ಥನೆಯಿಂದ ಮುಂದುವರಿಯುವಂತೆ ಮಾಡುತ್ತಾರೆ.

ದಾಸಸಾಹಿತ್ಯದ ಪವಾಡಗಳಲ್ಲಿ ಆಯುಷ್ಯ ಸಮರ್ಪಣೆಯ ವಿಚಾರವು ಮುಖ್ಯವಾದುದು. ಪ್ರಾಯಶಃ ಇಲ್ಲಿಯ ಎರಡು ಪಂಥಗಳನ್ನು ಬಿಟ್ಟರೆ ಬೇರೆಡೆಗಳಲ್ಲಿ ಇಂತಹ ಸನ್ನಿವೇಶಗಳು ಅಭಾವವೆಂದೇ ಹೇಳಬೇಕು. ಕರ್ನಾಟಕದ ಕೀರ್ತನಾಪರಂಪರೆಯಲ್ಲಿ ಗೋಪಾಲದಾಸರದ್ದು ಮುಖ್ಯಹೆಸರು. ಗೋಪಾಲದಾಸರು ಪ್ರತಿವರ್ಷವು ತಿರುಪತಿ ಬ್ರಹ್ಮೋತ್ಸವಕ್ಕೆ ಯಾತ್ರೆ ತೆರಳುತ್ತಿದ್ದುದು ರೂಢಿ. ಅವರನ್ನು ಹಿಂಬಾಲಿಸುವವರೂ ಕೂಡ ನೂರಾರುಜನ.

ಗಂಟುಮೂಟೆಗಳೆಲ್ಲ ಕುದುರೆ, ಎತ್ತುಗಳ ಮೇಲೆ. ಗೋಪಾಲದಾಸರೊಂದಿಗೆ ಯಾತ್ರೆ ಹೊರಡುವವರೆಲ್ಲ ಪಾದಚಾರಿಗಳಾಗಿಯೇ ಸಾಗಬೇಕಿತ್ತು. ಆದರೂ ದೇಹಕ್ಷೇಮವಿಲ್ಲದ ಶ್ರೀನಿವಾಸಾಚಾರ್ಯರು ಗೋಪಾಲದಾಸರೊಂದಿಗೆ ಕಾಲ್ನಡಿಗೆಯಲ್ಲೇ ತಿರುಪತಿಗೆ ನಡೆಯಲು ಮುಂದಾದರು. ಗೋಪಾಲದಾಸರು ಶ್ರೀನಿವಾಸಾಚಾರ್ಯರಿಗೆ ಅಶ್ವಾರೂಢರಾಗಿ ಬನ್ನಿರೆಂದರೂ ಕೇಳದೆ, ಕಾಲ್ನಡಿಗೆಯಲ್ಲೇ ಹೊರಟು ತಿರುಪತಿಯನ್ನು ಮುಟ್ಟಿದರು. ಆದರೆ ಅವರ ದೇಹ ಆಲಸ್ಯಕ್ಕೊಳಪಟ್ಟಿದ್ದುದರಿಂದ ಬಿಡಾರದಲ್ಲೇ ವಿಶ್ರಾಂತಿಗಾಗಿ ನಿಂತು, ಉಳಿದವರನ್ನು ಶ್ರೀನಿವಾಸನ ಭಜನೆಯ ಕಾರ್ಯಕ್ರಮಕ್ಕಾಗಿ ಕಳುಹಿಸಿಕೊಟ್ಟರು. ಗೋಪಾಲದಾಸರು ಭಜನೆಯ ಮಧ್ಯೆಯಲ್ಲಿಯೇ ಶ್ರೀನಿವಾಸಚಾರ್ಯರ ಆರೋಗ್ಯವನ್ನು ವಿಚಾರಿಸಲು ಬಿಡಾರಕ್ಕೆ ಬರಲು, ಆಚಾರ್ಯರು ಮೃತರಾಗಿರುವುದನ್ನು ಕಂಡು ದುಃಖಿತರಾದರು. ಜೊತೆಗೆ, ಆಚಾರ್ಯರ ಸಾವಿಗೆ ತಾನೇ ಕಾರಣನಾದೆನೆಂಬ ಸಂಕಟವು ಅವರನ್ನು ಕಾಡಲಾರಂಭಿಸಿತು. ಅಷ್ಟರಲ್ಲಿ ಅವರ ಗುರುವಾದ ವಿಜಯದಾಸರು ಸೂಕ್ಷ್ಮಶರೀರದಿಂದ ಬಂದು ಗೋಪಾಲದಾಸರಿಗೆ, 'ಭಾಗಣ್ಣ, ನಿನ್ನ ಆಯುಷ್ಯದಲ್ಲಿ ೪೦ ವರ್ಷ ಆಚಾರ್ಯರಿಗೆ ಕೊಟ್ಟು ಅವರನ್ನು ಬದುಕಿಸು' ಎಂದು ಆಜ್ಞೆಮಾಡಿದರು. ಗುರುಗಳ ಆಜ್ಞೆಯನ್ನು ಶಿರಸಾವಹಿಸಿದ ಗೋಪಾಲದಾಸರು 'ಆಯುರ್ದಾತ ಆಯುರ್ದಾತ'ನೆಂದು ಶ್ರೀನಿವಾಸನನ್ನು ಹೀಗೆಂದು ಪ್ರಾರ್ಥಿಸಿದರು.

ಎನ್ನ ಬಿನ್ನಪ ಕೇಳೊ । ಧನ್ವಂತ್ರಿ ದಯ ಮಾಡೋ ।
ಸಣ್ಣವನು ಇವ ಕೇವಲ । ಪ ॥
ಬನ್ನ ಬಡಿಸುವ ರೋಗ । ವನ್ನು ದೋಚನ ಮಾಡು
ಚೆನ್ನಾಗಿ ಪಾಲಿಸುವುದೋ ಕರುಣಿ ॥ ಅ.ಪ ॥ -ಗೋಪಾಲದಾಸರು

ಈ ಕೀರ್ತನೆಯು ಮೇಲಿನ ಘಟನೆಗೆ ಸಾಕ್ಷಿ. ಇಂತಹ ವಿಚಾರವು ಚೈತನ್ಯಸಾಹಿತ್ಯದಲ್ಲೂ ಬೆಳಕಿಗೆ ಬರುತ್ತದೆ. ಅವುಗಳಲ್ಲಿ ಒಂದೆರಡನ್ನು ಮಾತ್ರ ಇಲ್ಲಿ ಪ್ರಸ್ತಾವಿಸಿದ್ದೇನೆ.

ಜಗನ್ನಾಥಪುರಿಯಲ್ಲಿ ಚೈತನ್ಯರು, ಅದ್ವೈತ ಆಚಾರ್ಯರು ನರ್ತನಸಂಕೀರ್ತನೆ ಮಾಡುತ್ತಿರುವಾಗ ಅದ್ವೈತರ ಮಗನಾದ ಗೋಪಾಲನು ನರ್ತಿಸುತ್ತಲೇ ನೆಲದಮೇಲೆ ಕುಸಿದು ಮೂರ್ಛೆಹೋದನು. ಮಗನನ್ನು ತೊಡೆಯ ಮೇಲೆ ಮಲಗಿಸಿಕೊಂಡು ನೃಸಿಂಹಮಂತ್ರವನ್ನು ಜಪಿಸಿದರೂ ಗೋಪಾಲನಿಗೆ ಪ್ರಜ್ಞೆಯು ಬಾರದೆ ಹೋಯಿತು. ಆಗ ಚೈತನ್ಯ ಮಹಾಪ್ರಭುಗಳು ಗೋಪಾಲನ ಎದೆಯ ಮೇಲೆ ತಮ್ಮ ಕೈಯನ್ನಿಟ್ಟು " ಪ್ರಿಯ ಗೋಪಾಲ, ಎದ್ದೇಳು, ಪವಿತ್ರವಾದ ಭಗವನ್ನಾಮವನ್ನು ಸ್ಮರಣೆಮಾಡು" (ಉಠಹ, ಗೋಪಾಲ, ಕೈಲಬಲ ಹರಿಹರಿ) ಎಂದರು. ಆಗ ಮಹಾಪ್ರಭುಗಳ ಕರಸ್ಪರ್ಶ ಹಾಗೂ ಧ್ವನಿಯನ್ನು ಕೇಳಿ ಗೋಪಾಲನು ಕೂಡಲೇ ಎಚ್ಚರಗೊಂಡನು.

ಇದೇ ಪಂಥಕ್ಕೆ ಅನ್ವಯಿಸುವಂತೆ ಇಂತಹ ಇನ್ನೊಂದು ಘಟನೆಯು ಚೈತನ್ಯರ ಕಾಲಾವಧಿಯಲ್ಲಿ ನಡೆಯುತ್ತದೆ. ಶ್ರೀಚೈತನ್ಯರು ಶ್ರೀವಾಸ ಠಾಕೂರರ ಮನೆಯಲ್ಲಿ ಭಕ್ತರ ಜೊತೆ ನರ್ತಿಸುತ್ತಿದ್ದಾಗ, ಶ್ರೀವಾಸ ಠಾಕೂರರ

ಓರ್ವ ಪುತ್ರನು ತೀರಿಕೊಂಡು ಬಿಡುತ್ತಾನೆ. ಆದರೆ ಸಂಕೀರ್ತನೆಗೆ ಅಡ್ಡಿಯಾಗಬಾರದೆಂಬ ಕಾರಣದಿಂದ ಶ್ರೀವಾಸರು ಸಂಯಮವನ್ನು ಕಾಪಾಡಿಕೊಳ್ಳುತ್ತಾರೆ. ಕೀರ್ತನೆಯ ಬಳಿಕ ಚೈತನ್ಯರು ಠಾಕೂರರ ಮಗನ ನಿಧನದ ವಾರ್ತೆಯನ್ನು ಕೇಳಿ, ಆ ಶವದ ಬಳಿಬಂದು, 'ಪ್ರೀತಿಯ ಮಗನೇ, ನೀನು ಶ್ರೀವಾಸ ಠಾಕೂರರ ಮನೆಯನ್ನು ಬಿಟ್ಟು ಏಕೆ ಹೋಗುತ್ತಿದ್ದೀಯೇ ? ಎಂದು ಕೇಳಲು, ಒಡನೆಯೇ ಸತ್ತ ಮಗನು 'ಈ ಮನೆಯಲ್ಲಿ ಎಲ್ಲಿಯವರೆಗೆ ನಾನು ಬದುಕಿರಬೇಕೆಂದು ನನ್ನ ಹಣೆಯಲ್ಲಿ ಬರೆದಿತ್ತೋ ಅಷ್ಟು ದಿನ ನಾನು ಇಲ್ಲಿದ್ದೆ. ಆ ಕಾಲವು ಮುಗಿದಿರುವುದರಿಂದ ನಿಮ್ಮ ಆದೇಶದಂತೆ ನಾನು ಬೇರೆ ಕಡೆಗೆ ಹೋಗುತ್ತಿದ್ದೇನೆ' ಎಂದು ಹೇಳಿದ'. ಇದು ಪವಾಡವೆಂದೆನಿಸಿದರೂ ಅದರ ಹಿಂದೆ ಇರುವ ತಾತ್ತ್ವಿಕತೆ ಎಂದರೆ, ಎಲ್ಲವೂ ಭಗವನ್ನಿಯಮವೆಂಬುದು. ಆ ಭಗವಂತನೇ ಚೈತನ್ಯರು ಎಂಬುದು ಇನ್ನೊಂದು ವಿಚಾರ.

ಪರಸ್ಪರ ಎರಡು ಪಂಥಗಳಲ್ಲಿ ಸಂಕೀರ್ತನೆಗೆ ಸಂಬಂಧಿಸಿದಂತೆ ನಡೆದ ಪವಾಡಗಳು ನೂರಾರು. ಅವುಗಳಲ್ಲಿ ಚೈತನ್ಯರ ಸಂಕೀರ್ತನೆಯ ಚಳುವಳಿಯಲ್ಲಿ ನಡೆದ ಘಟನೆಯೊಂದು ಅಚ್ಚರಿಯನ್ನು ಮೂಡಿಸುತ್ತದೆ. ಅವರು ತಮ್ಮ ಶಿಷ್ಯರೊಂದಿಗೆ 'ತಾರಣವಾಸ' ಎಂಬ ಹಳ್ಳಿಯಲ್ಲಿ ಸಂಕೀರ್ತನೆಯನ್ನು ನಡೆಸುತ್ತಿರುವಾಗ, ಮಳೆಬರುವ ಸೂಚನೆಯೋ ಎಂಬಂತೆ ಆಕಾಶದಲ್ಲಿ ಮೋಡಗಳು ಆವರಿಸಿದವು. ಸಂಕೀರ್ತನೆಗೆ ಮಳೆಯಿಂದ ಅಡ್ಡಿಯಾಗಬಹುದೆಂದು ವೈಷ್ಣವರೆಲ್ಲರೂ ಹೆದರಿದರು. ಆದರೆ ಈ ಸಂದರ್ಭದಲ್ಲಿ ಚೈತನ್ಯರು, ಊರ್ಧ್ವಲೋಕಗಳ ದೇವತೆಗಳನ್ನು ಆಕಾಶದ ಮೂಲಕ ನೋಡುತ್ತಾ, ತಮ್ಮ ಕೈಗಳಿಂದ ಕರತಾಲವಾದನ ಮಾಡುತ್ತ ಹರೇಕೃಷ್ಣ ಮಹಾಮಂತ್ರವನ್ನು ಹೇಳಲಾರಂಭಿಸಿದರು. ಆಗಲೇ ಆಕಾಶದಲ್ಲಿ ಅವರಿಸಿದ್ದ ಮೋಡಗಳೆಲ್ಲ ಚದುರಿಹೋಗಿ, ಸ್ವಚ್ಛವಾಯಿತು. ಜೊತೆಗೆ ಚಂದ್ರೋದಯವೂ ಆಯಿತು. ತಾರಣವಾಸದ ಜನ ಆನಂದ ತುಂದಿಲರಾದರು. ಇಂತಹ ಪವಾಡವೊಂದು ನಡೆದ ಬಳಿಕ ಆ ಊರಿಗೆ 'ಮೇಘೇರ ಚರ'ವೆಂಬ ಹೆಸರಾಯಿತು.

ಚೈತನ್ಯರ ಬದುಕಿನಲ್ಲಿ ನಡೆದ ಮುಖ್ಯವಾದ ಪವಾಡಗಳಲ್ಲಿ ದಂಡಕಾರಣ್ಯದ 'ಸಪ್ತತಾಲ'ವೆಂಬ ಸ್ಥಳದಲ್ಲಿ ನಡೆದ ಪವಾಡವು ಒಂದು. ಸಪ್ತತಾಲವು ರಾಮಾಯಣ ಮಹಾಕಾವ್ಯದಲ್ಲಾದರೆ ಕಿಷ್ಕಿಂಧಾಕಾಂಡದಲ್ಲಿ ಬರುವ ವಿಚಾರವೆನಿಸುತ್ತದೆ. ಚೈತನ್ಯರು ದಕ್ಷಿಣಭಾರತದ ತೀರ್ಥಕ್ಷೇತ್ರದ ಸಂಚಾರದಲ್ಲಿ ಋಷ್ಯಮೂಕಪರ್ವತವನ್ನು ದಾಟಿ ದಂಡಕಾರಣ್ಯ ಪ್ರದೇಶಕ್ಕೆ ಬಂದು, ಅತ್ಯಂತ ಹಳೆಯದಾದ ಹಾಗೂ ಅತ್ಯಂತ ಎತ್ತರವಾಗಿ ಬೆಳೆದ ಏಳು ತಾಳೆವೃಕ್ಷಗಳನ್ನು ಗಮನಿಸುತ್ತಾ ಅವುಗಳನ್ನು ಅಪ್ಪಿಕೊಳ್ಳುತ್ತಾರೆ. ಕೇವಲ ಚೈತನ್ಯರ ಸ್ಪರ್ಶದಿಂದಲೇ ಆ ಸಪ್ತತಾಲವೃಕ್ಷಗಳು ವೈಕುಂಠಲೋಕಕ್ಕೆ ಮರಳಿಬಿಡುತ್ತವೆ. ಇದರಿಂದ ಆ ಕಾಲದ ಜನತೆಯು ಚೈತನ್ಯ ಮಹಾಪ್ರಭುಗಳನ್ನು ತ್ರೇತಾಯುಗದ ಶ್ರೀರಾಮಚಂದ್ರನೇ ಆಗಿರಬೇಕೆಂದು ಭಾವಿಸಿಕೊಳ್ಳುತ್ತದೆ.

ಮುಖ್ಯವಾಗಿ ಪ್ರಾಚೀನವಾದ ಈ ಉಭಯ ಪಂಥಗಳ ಅವಲೋಕನದಲ್ಲಿ ಪವಾಡಗಳ ಹಿಂದೆ ಸೂಕ್ಷ್ಮವಾದ ತತ್ವಾರ್ಥವೊಂದು ಗೋಚರಿಸುತ್ತದೆ. ಜೊತೆಗೆ ಅವುಗಳಲ್ಲಿ ಭಾವಸಂಕೇತಗಳು ಸೂಕ್ಷ್ಮವಾಗಿ ಅಡಕವಾಗಿದೆ ಎಂಬುದನ್ನು ಮರೆಯಬಾರದು. ಅಲ್ಲದೆ ಈ ಪವಾಡಗಳ ಮೂಲಕ ಈ ಎರಡು ಪಂಥಗಳು

ಭಗವಂತನನ್ನು ಭಕ್ತಿಯ ಸೆರೆಯಾಳಾಗಿ ಕಂಡುಕೊಂಡು, ಭಕ್ತಿಯೊಂದೇ ಭಕ್ತನನ್ನು ಭಗವಂತನತ್ತ ಕೊಂಡೊಯ್ಯಬಲ್ಲುದೆಂದು ತಾತ್ವಿಕವಾಗಿ ತೋರಿಸಿಕೊಟ್ಟವು. ಇದರಿಂದಾಗಿ ಎರಡೂ ಪಂಥಗಳು ಸ್ವೀಕರಿಸಿದ ಪರಮಭಕ್ತಿ ಪ್ರದರ್ಶನದ ದಾರಿಯಲ್ಲಿ ಸಮಾನಾಂಶಗಳು ವಿಶೇಷಾಧ್ಯಯನಕ್ಕೆ ದಾರಿಮಾಡಿ ಕೊಟ್ಟವು.

*****

ಒಟ್ಟಿನಲ್ಲಿ, ಉಭಯ ಪಂಥಗಳಲ್ಲಿ ಹರಿನಾಮಸಂಕೀರ್ತನೆ, ಪಂಚಭಾವಗಳು, ಹರಿಸರ್ವೋತ್ತಮತ್ವಗಳೆಲ್ಲವೂ ತಾತ್ವಿಕವಾಗಿ ಸಮಾನರೂಪವನ್ನು ಪಡೆಯುತ್ತವೆ. ದಾಸಪಂಥವು ಹರಿಸರ್ವೋತ್ತಮತ್ವಕ್ಕಾಗಿ ಅಲ್ಲಲ್ಲಿ ಶೈವಸಂಕೀರ್ತನೆಯನ್ನು ನಡೆಸಿದಂತೆ, ಚೈತನ್ಯಪಂಥವೂ ಶಿವಾರಾಧನೆಗೆ ಮುಂದಾಗುತ್ತದೆ. ಇದಕ್ಕೆ ಜ್ಯೇಷ್ಠಮಾಸದಲ್ಲಿ ಜಗನ್ನಾಥಪುರಿಯಲ್ಲಿರುವ ಯಮೇಶ್ವರನ ಉದ್ಯಾನಕ್ಕೆ ಚೈತನ್ಯರು ಬಂದು ಭಕ್ತರ ಕೋರಿಕೆಯ ಮೇರೆಗೆ ಪ್ರಸಾದ ಸ್ವೀಕರಿಸುವಂತಹ ವಿಚಾರ (ಜ್ಯೇಷ್ಠ ಮಾಸೇ ಪ್ರಭು ಯಮೇಶ್ವರ ಟೋಟಾ ಆಇಲಾ, ಭಕ್ತ ಅನುರೋಧೇ ತಾಹಾಂಗ್ ಭಿಕ್ಷಾಯೇ ಕರಿಲಾ), ಕಲ್ಕತ್ತೆಯ ನಾರೀಕೇಳಡಾಂಗಾ ವಂಶಜರಾದ ಶ್ರೀಮಧುಸೂದನ ಮುಲ್ಲಿಕ್ ಎಂಬವರ ಮಗನಾದ ಬಲಾಇಚಂದ್ರ ಮುಲ್ಲಿಕ್‌ರವರು ಕ್ರಿ.ಶ. ೧೯೦೫ ರಲ್ಲಿ ಗೌರ ಹಾಗೂ ನಿತ್ಯಾನಂದ ವಿಗ್ರಹಗಳನ್ನು ಪ್ರತಿಷ್ಠಾಪಿಸಿ, ಅಂತೆಯೇ ಆ ದೇವಸ್ಥಾನದಲ್ಲಿ ಗೋಪೇಶ್ವರನ ರೂಪದಲ್ಲಿರುವ ಶಿವನ ಒಂದು ಪುಟ್ಟವಿಗ್ರಹವನ್ನು ಪ್ರತಿಷ್ಠಾಪನೆ ಮಾಡಿದ ವಿಚಾರ, ಹಾಡಾಇ ಪಂಡಿತರಿಂದ ಆರಾಧನೆಗೊಳ್ಳುತ್ತಿದ್ದ ಬಂಗಾಲದ ಏಕಚಕ್ರಗ್ರಾಮದ ಶ್ರೀಕೃಷ್ಣನ ದೇವಾಲಯದ ಉತ್ತರಭಾಗದಲ್ಲಿ ಭಂಡೀಶ್ವರನೆಂದು ಕರೆಯಲಾಗುವ ಶಿವಮೂರ್ತಿ, ಈ ಮೊದಲಾದ ವಿಚಾರಗಳು ಸಾಕ್ಷಿಯಾಗಿ ನಿಲ್ಲುತ್ತವೆ. ಹೀಗೆ ಪಂಥಗಳೆರಡರ ಅವಲೋಕನದಲ್ಲಿ ಸಮಾನಾಂಶಗಳೇ ಹೆಚ್ಚಾಗಿ ಗೋಚರಿಸುತ್ತವೆ.

****

ಅಧ್ಯಾಯ ೫: ಅಡಿಟಿಪ್ಪಣಿಗಳು

೧. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೭, ಪುಟ ಸಂ– ೬೪.

೨. ಶ್ರೀ ಕರ್ನಾಟಕ ಭಕ್ತವಿಜಯ, ಪುಟ ಸಂ–೧೩೮.

೩. ಶ್ರೀ ಕರ್ನಾಟಕ ಭಕ್ತವಿಜಯ, ಪುಟ ಸಂ–೨೦೧.

೪. ಭಕ್ತಿವೇದಾಂತದರ್ಶನ ದರ್ಶನ,ಸಂಪುಟ ೫,ಸಂಚಿಕೆ ೯,ಫೆಬ್ರವರಿ/ಮಾರ್ಚ್–೨೦೦೮,ಪುಟ ಸಂ–೮. ಗೌರಘನೋದ್ದೇಶದೀಪಿಕಾ–೨೧೩ ಶ್ಲೋಕದ ವಿವರಣೆಯನ್ನು ಭಕ್ತಿವೇದಾಂತದರ್ಶನ ಮಾಸಪತ್ರಿಕೆಯ 'ಮಕರಂದ' ಅಂಕಣದಿಂದ ಸ್ವೀಕರಿಸಲಾಗಿದೆ.

೫. ಶ್ರೀ ಕರ್ನಾಟ ಭಕ್ತವಿಜಯ,(ಸುರಮುನಿಯವತಾರವೆನಿಸಿದ ಪುರಂದರದಾಸರು...)ಪುಟ ಸಂ–೪೩.

೬. ದಾಸಸಾಹಿತ್ಯ ದರ್ಶನ, ಪುಟ ಸಂ–೧೪೪.

ನಾರದರ ಅಂಶವೇ ಪುರಂದರದಾಸರು, ನಾ ಯಮನು ಮುಂದೆ
ಮಾಂಡವ್ಯ ಶಾಪದಿಂದ ಏರಡು ಜನ್ಮ ಶೂದ್ರ ಯೋನಿಯಲ್ಲಿ ಪೊಕ್ಕೆನು
ಒಂದು ಜನುಮ ವಿದುರನಾಗಿ ಕುರುಬರ ಕುಲದಲ್ಲೀಗ ಹುಟ್ಟಿದೆ
ಏನಗೆ ಈ ಜನ್ಮದಲಿ ಮುಕುತಿ ಏಂತೆಂಬೆ.....(ಕನಕದಾಸರ ಉಗಾಭೋಗ).

೭. ಶ್ರೀ ಕರ್ನಾಟ ಭಕ್ತವಿಜಯ, (ಪೂರ್ವದ ೧೪ ಜನ್ಮಗಳ ವಿವರ ಸಿಗುತ್ತದೆ)ಪುಟ ಸಂ–೪೧೧.

೮. ಶ್ರೀಮದ್ಭಾಗವತ ಮಹಾಪುರಾಣಂ, ಭಾಗ ೭. ೭–೫೧/೫೨. ಪುಟ ಸ–೭೫೨.

೯. ಶ್ರೀ ಮದ್ಭಾಗವತ ಮಹಾಪುರಾಣಂ, ೧೧–೫–೩೨, ಪುಟ ಸಂ–೬೨೪.

೧೦. ಶ್ರೀ ಮದ್ಭಾಗವತ ಮಹಾಪುರಾಣಂ, ೧೨–೩–೫೨, ಪುಟ ಸಂ–೭೮೯.

೧೧. ಶ್ರೀ ಚೈತನ್ಯ ಚರಿತಾಮೃತ, ಅಂತ್ಯಲೀಲಾ, ಅಧ್ಯಾಯ ೨೦, ಶ್ಲೋಕ ೫೮, ಪುಟ ಸಂ–೫೯೮.

೧೨. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೧, ಶ್ಲೋಕ ೨೫೧, ಪುಟ ಸಂ–೧೨೪.

೧೩. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೫. ಶ್ಲೋಕ ೬, ಪುಟ ಸಂ–೩೯೨.

೧೪. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೭, ಶ್ಲೋಕ ೯೬, ಪುಟ ಸಂ–೪೨.

೧೫. ಕರ್ನಾಟಕ ಭಕ್ತವಿಜಯ, ಪುಟ ಸಂ–೩೩.

ಶ್ರೀಪಾದರಾಯರು ಕೀರ್ತನೆಗಳನ್ನು ರಚಿಸಿ ಹಾಡುವಾಗ ಕಾಲಿಗೆ ಗೆಜ್ಜೆಕಟ್ಟಿಕೊಂಡು ಕುಣಿಯುತ್ತಿದ್ದರಂತೆ.

೧೬. ಕರ್ನಾಟಕ ಭಕ್ತ ವಿಜಯ. ಪುಟ ಸಂ–೧೨೧.

ಈ ಸಂಕೀರ್ತನೆಯನ್ನು ಹೆಚ್ಚಾಗಿ ನರ್ತನಸೇವೆಯಲ್ಲಿ ಹಾಡುತ್ತಾರೆ. ತಾಳವನ್ನು ಹಿಡಿದು ಮೈಮರೆತು ಹಾಡುವ ಈ ಸಂಕೀರ್ತನೆಯ ಕೆಲವೊಂದು ಚರಣದಲ್ಲಿ ಛಂದೋದೋಷವನ್ನು ಕಾಣುತ್ತೇವೆ. ಮುದ್ರಣ ದೋಷವೂ ಇದಕ್ಕೆ ಕಾರಣವಿರಬಹುದು. ಒಟ್ಟಿನಲ್ಲಿ ಇದು ಉಡುಪಿ ಮಠದಲ್ಲಿ ಯತಿಗಳೂ ಸೇರಿ ಹಾಡುವ ಮುಖ್ಯ ಕೀರ್ತನೆ.

೧೭. ಶ್ರೀ ಚೈತನ್ಯ ಚರಿತಾಮೃತ, ಅಂತ್ಯಲೀಲಾ, ಅಧ್ಯಾಯ ೧೦, ಶ್ಲೋಕ ೬೬, ಪುಟ ಸಂ–೮೩.

೧೮. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೨೦, ಶ್ಲೋಕ-೨೨೪ ರಿಂದ ೨೩೬,
ಪುಟ ಸಂ- ೪೬೫,೪೬೬,೪೬೭,೪೬೮,೪೬೯.

೧೯. ಭಕ್ತಿವೇದಾಂತ ದರ್ಶನ, ಸಂಪುಟ ೫, ಸಂಚಿಕೆ ೬, ಮಾರ್ಚ್ ೨೦೦೬, ಪುಟ ಸಂ-೮,

.೨೦. ಶ್ರೀಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೪, ಶ್ಲೋಕ ೧೬೮, ಪುಟ ಸಂ-೩೬೮.

೨೧. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೬, ಶ್ಲೋಕ ೪೮, ಪುಟ ಸಂ-೪೭೯.

೨೨. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೬, ಶ್ಲೋಕ ೨೮೧, ಪುಟ ಸಂ-೬೧೧.

೨೩. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೪, ಶ್ಲೋಕ ೧೦೮, ಪುಟ ಸಂ-೩೩೯.

೨೪. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೪, ಶ್ಲೋಕ ೧೦೬, ಪುಟ ಸಂ-೩೩೮.

೨೫. ಶ್ರೀ ಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೧೪, ಶ್ಲೋಕ ೨೪, ಪುಟ ಸಂ-೩೯೧.

೨೬. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲ, ಅಧ್ಯಾಯ ೧, ಶ್ಲೋಕ ೮೦, ಪುಟ ಸಂ-೪೬.

೨೭. ಶ್ರೀ ಚೈತನ್ಯ ಚರಿತಾಮೃತ. ಮಧ್ಯಲೀಲಾ, ಅಧ್ಯಾಯ ೧, ಶ್ಲೋಕ ೮೪, ಪುಟ ಸಂ-೪೯.

೨೮. ಭಕ್ತಿವೇದಾಂತ ದರ್ಶನ, ಸಂಪುಟ ೫, ಸಂಚಿಕೆ ೩, ಮಾರ್ಚ್ ೨೦೦೮, ಪುಟ ಸಂ-೧೦,

೨೯. ಭಕ್ತಿವೇದಾಂತ ದರ್ಶನ, ಸಂಪುಟ ೫, ಸಂಚಿಕೆ ೬, ಮಾರ್ಚ್ ೨೦೦೬, ಪುಟ ಸಂ-೮,

೩೦. ಋಗ್ವೇದ ಸಂಹಿತಾ- ಭಾಗ ೩, ಪುಟ ಸಂ-೧೬೭.

೩೧. ವೃಷ್ಣೀನಾಂ ವಾಸುದೇವ್ರೋಸ್ಮಿ..ಭಗವದ್ಗಿತಾ ೧೦.೨೭. ಋಗ್ವೇದ ಸಂಹಿತಾ. ಪೂರ್ವಪೀಠಿಕೆ,
ಪುಟ ಸಂ-೨೧೮.

೩೨. ಶ್ರೀಕೃಷ್ಣ ಕಥೆಯ ಉಗಮ ಮತ್ತು ವಿಕಾಸ, ಪುಟ ಸಂ-೦೮.

೩೩. Memories of the Archaeological Survey of India (MASI). Vol.5,
Page no-152.

೩೪. ದಾಸಸಾಹಿತ್ಯ ದರ್ಶನ, ಪುಟ ಸಂ-೩೬೭.

೩೫. ದಾಸಸಾಹಿತ್ಯ ದರ್ಶನ, ಪುಟ ಸಂ-೯೦/೯೧.

ಹರಿಹರಬ್ರಹ್ಮರಲ್ಲಿ ಯಾರು ಶ್ರೇಷ್ಠರೆಂದು ಮುನಿವೃಂದದಲ್ಲಿ ತರ್ಕ ಪ್ರಾರಂಭವಾಗಲು, ಅದನ್ನು ನಿಶ್ಚಯಿಸಲು ಭೃಗುಮುನಿಯು ಆರಿಸಲ್ಪಡುತ್ತಾನೆ. ಈ ಕುರಿತಾಗಿ ಭೃಗುವು ಬ್ರಹ್ಮನಲ್ಲಿಗೆ ಬಂದು ವಂದಿಸಲು, ಬ್ರಹ್ಮನು ಕೋಪೋದ್ರೇನಾಗುತ್ತಾನೆ. ಭೃಗುಮುನಿಯು ಬ್ರಹ್ಮನನ್ನು ಪರತತ್ತ್ವವಲ್ಲವೆಂದು ಬಗೆದು, ಮುಂದೆ ಹರನಲ್ಲಿಗೆ ಬರುತ್ತಾನೆ. ಭೃಗುವನ್ನು ಹರನು ತನ್ನ ತಮ್ಮನೆಂದು ತಿಳಿದು ಅಪ್ಪಿಕೊಳ್ಳಲುಬರಲು, ಭೃಗುಮುನಿಯು ನಿರಾಕರಿಸಲು, ಹರನು ಆತನನ್ನು ಕೊಲ್ಲಲು ಮುಂದಾಗುತ್ತಾನೆ. ಅಲ್ಲಿಗೆ ಹರನನ್ನೂ ಪರತತ್ತ್ವನಲ್ಲವೆಂದು ನಿಶ್ಚೈಯಿಸಿ, ಹರಿಯ ಬಳಿಗೆ ಮುನಿ ಬರಲು, ಮುನಿಯೇ ಕಾಲು ಕೆರೆದು ಜಗಳಕ್ಕೆ ಹರಿಯನ್ನು ಆಹ್ವಾನಿಸುತ್ತಾನೆ. ಅಲ್ಲದೆ ಶ್ರೀಹರಿಯ ವಕ್ಷಸ್ಥಳಕ್ಕೆ ಒದೆಯುತ್ತಾನೆ. ಆದರೂ ಹರಿಯು ಅದನ್ನು

ಲೆಕ್ಕಿಸದೆ ಮುನಿಯ ಕಾಲಿಗೆ ಭಕ್ತಿಯಿಂದ ಪೂಜೆಗೈಯಲು, ಭೃಗುಮುನಿಯು ಶ್ರೀಹರಿಯೇ ಸರ್ವೋತ್ತಮನೆಂಬ ನಿರ್ಧಾರಕ್ಕೆ ಬರುತ್ತಾನೆ.

೩೬. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ–೬, ಪುಟ ಸಂ–೫೦೦.

೩೭. ಉಪದೇಶಾಮೃತ, ಪುಟ ಸಂ–೩೮.

೩೮. ಭಕ್ತಿವೇದಾಂತ ದರ್ಶನ, ಸಂಪುಟ ೩, ಸಂಚಿಕೆ ೭, ಸಪ್ಟೆಂಬರ್, ಪುಟ ಸಂ–೧೬.

ನಾಮಾಚಾರ್ಯರೆಂದೇ ಕರೆಯಲ್ಪಡುತ್ತಿದ್ದ ಹರಿದಾಸ ಠಾಕೂರರು ಈ ಮಂತ್ರವನ್ನು ೩ ಲಕ್ಷ ಬಾರಿ ಪಠಿಸಬೇಕೆನ್ನುತ್ತಾರೆ. ಈ ಪಠಣೆಗೆ ದಿನದ ೨೩ ಘಂಟೆ ವ್ಯಯವಾಗುತ್ತದೆ ಎಂದು ಅಲ್ಲಿಯ ಸಾಹಿತ್ಯ ಹೇಳುತ್ತದೆ.

೩೯. ಶ್ರೀಕೃಷ್ಣ ಕಥೆಯ ಉಗಮ ಮತ್ತು ವಿಕಾಸ, ಪ್ರವೇಶ, ಪುಟ ಸಂ–೨೨.

ಖಾನ್ ಖಾನಾ ಅಬ್ದುರ್ ರಹೀಮ್, ಎಂಬ ಮುಸಲ್ಮಾನ ಕವಿಯೊಬ್ಬ ಕೃಷ್ಣನನ್ನು ಕುರಿತು ಸುಂದರ ಗೀತೆಗಳನ್ನು ರಚಿಸಿದ್ದಾನೆ. ಅಕ್ಬರ್ ಇಲಾಹಾಬಾದಿ....ಗಾಂಧೀಯವರನ್ನು ಕೃಷ್ಣನಿಗೆ ಹೋಲಿಸಿ, ತನ್ನನ್ನು ಗೋಪಿಕೆಯನ್ನಾಗಿ ಕಂಡಿರಿಸಿದ್ದಾನೆ. ಇಲ್ಲಿ ಶ್ರೀರಾಮದಾಸರು ಮೂಲತಃ ಮುಸಲ್ಮಾನರೆನ್ನುವ ವಿಚಾರ ಮುಖ್ಯವಾದುದು.

೪೦. ಭಗವದ್ಗೀತೆ–ಯಥಾರೂಪ, ಅಧ್ಯಾಯ ೧೪, ಶ್ಲೋಕ ೨೬, ಪುಟ ಸಂ–೬೪೯.

೪೧. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೧, ಶ್ಲೋಕ–೨೦೮, ಪುಟ ಸಂ–೧೦೬.

೪೨. ಶ್ರೀ ಕರ್ನಾಟಕ ಭಕ್ತ ವಿಜಯ, ಬೇಲೂರು ಕೇಶವ ದಾಸರು, ಪುಟ ಸಂ–೨೨೧.

೪೩. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೧, ಶ್ಲೋಕ ೨೬೫, ಪುಟ ಸಂ–೧೨೯.

೪೪. ಶ್ರೀ ಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೦೧, ಶ್ಲೋಕ ೪೫, ಪುಟ ಸಂ–೨೬.

೪೫. ಶ್ರೀ ಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೦೧, ಪುಟ ಸಂ–೨೧.

೪೬. ಶ್ರೀ ಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೦೧, ಶ್ಲೋಕ ೩೬,೩೭, ಪುಟ ಸಂ–೧೩

೪೭. ಶ್ರೀ ಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೦೧, ಪುಟ ಸಂ–೪೩.

೪೮. ಶ್ರೀ ಚೈತನ್ಯ ಚರಿತಾಮೃತ–ಮಧ್ಯಲೀಲಾ ೨೪, ಶ್ಲೋಕ ೩೩೦, ಪುಟ ಸಂ–೩೯೩.

ಗುರುಲಕ್ಷಣ ಶಿಷ್ಯಲಕ್ಷಣ ದೋಗ್‌ಹಾರ ಪರೀಕ್ಷಣ । ಸೇವ್ಯ ಭಗವಾನ್ ಸರ್ವಮಂತ್ರ ವಿಚಾರಣ ॥

೪೯. ಶ್ರೀ ಮದ್ಭಾಗವತ ಮಹಾಪುರಾಣಂ, ೪. ೮. ೫೪, ಪುಟ ಸಂ–೩೯೦.

೫೦. ದಾಸಸಾಹಿತ್ಯ ದರ್ಶನ, ಪುಟ ಸಂ–೩೧೨.

೫೧. ಶ್ರೀ ಚೈತನ್ಯ ಚರಿತಾಮೃತ, ಅಂತ್ಯಲೀಲಾ, ಅಧ್ಯಾಯ ೧೨, ಶ್ಲೋಕ ೦೫, ಪುಟ ಸಂ–೧೬೫.

೫೨. ಭಕ್ತಿರಸಾಮೃತ ಸಿಂಧು, ೧–೨–೧೫೪. ಪುಟ ಸಂ–೨೭.

೫೩. ಶ್ರೀ ಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೦೮, ಶ್ಲೋಕ ೮೩, ಪುಟ ಸಂ–೬೧.

೫೪. ಶ್ರೀ ಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೦೮, ಪುಟ ಸಂ–೬೦.

೫೫. ಶ್ರೀ ಚೈತನ್ಯ ಚರಿತಾಮೃತ, ಅಂತ್ಯಲೀಲಾ, ಅಧ್ಯಾಯ ೧೧, ಶ್ಲೋಕ ೨೭, ಪುಟ ಸಂ–೧೩೨.

೫೬. ಶ್ರೀ ಚೈತನ್ಯ ಚರಿತಾಮೃತ, ಅಂತ್ಯಲೀಲಾ, ಅಧ್ಯಾಯ ೧೩, ಪುಟ ಸಂ–೨೨೫.

೫೭. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೩, ಶ್ಲೋಕ ೪೨, ಪುಟ ಸಂ–೨೧೮.

೫೮. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೩, ಶ್ಲೋಕ ೪೪,೪೫,೪೭,
ಪುಟ ಸಂ–೨೧೯/೨೨೦.

೫೯. ಕನಕೋಪನಿಷತ್ತು, ಪುಟ ಸಂ–೧೮೪, ೧೮೫.

ಇಲ್ಲಿ 'ಇಲಿಕಾಯಿ' ಎಂದರೆ ಕಾಡುಹಾಗಲ ಅಥವಾ ಕರ್ಚಿಕಾಯಿಯೆಂದೂ ಇದರ ಆಕಾರ ಇಲಿಮರಿಯಂತಿದೆಯೆಂದೂ ಬನ್ನಂಜೆ ಗೋವಿಂದಾಚಾರ್ಯರು ಸಮರ್ಥಿಸುತ್ತಾರೆ.

೬೦. ಮುತ್ತು ಬಂದಿದೆ ಕೇರಿಗೆ, ಕನಕದಾಸರು: ಸಾಂಸ್ಕೃತಿಕ ಅಧ್ಯಯನ, ಪುಟ ಸಂ–೨೧೭.

೬೧. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೨, ಶ್ಲೋಕ ೧೨, ಪುಟ ಸಂ–೧೪೪.

೬೨. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೨, ಶ್ಲೋಕ ೩೪, ಪುಟ ಸಂ–೧೫೭.

೬೩. ಅಲ್ಲಮಪ್ರಭು ಮತ್ತು ಶೈವಪ್ರತಿಭೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಪುಟ ಸಂ–೨೩೦.

೬೪. ಶ್ರೀ ಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೦೪, ಶ್ಲೋಕ ೨೬೦, ಪುಟ ಸಂ–೩೪೦.

೬೫. ಶ್ರೀಕರ್ಣಾಟಕ ಭಕ್ತ ವಿಜಯ, ಪುಟ ಸಂ–೧೮.

೬೬. ಶ್ರೀ ಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೧೦, ಪುಟ ಸಂ–೧೮೨.

****

ಅಧ್ಯಾಯ : ೬

ದಾಸಪಂಥ ಮತ್ತು ಚೈತನ್ಯಪಂಥಗಳಲ್ಲಿ ವೈದೃಶ್ಯ ಶೋಧ

ಬಂಗಾಳದ ಚೈತನ್ಯಪಂಥವು ಕರ್ನಾಟಕದ ದಾಸಪಂಥದ ತತ್ವವನ್ನೇ ಹಿಂಬಾಲಿಸಿಕೊಂಡು ಬಂದಿರುವಂತಹುದು. ವೇದಾಂತಕ್ಕೆ 'ಭಾಗವತ ಪುರಾಣ'ವೇ ಭಾಷ್ಯದಂತಿರುವುದರಿಂದ 'ಪ್ರಸ್ಥಾನ ತ್ರಯೀ'ಗೆ ಹೊಸ ಭಾಷ್ಯರಚನೆಯ ಅಗತ್ಯವಿಲ್ಲವೆಂದು ಹೇಳಿದ ಶ್ರೀಚೈತನ್ಯ ಮಹಾಪ್ರಭುಗಳೇ ಗೌಡೀಯ ಭಕ್ತಿಚಳುವಳಿಯ ಹರಿಕಾರರಾಗಿ ಮೂಡಿಬಂದರು. ಭಾರತೀಯ ಭಕ್ತಿಪಂಥಗಳ ಸಾಮೂಹಿಕದೃಷ್ಟಿಯಲ್ಲಿ ಈ ಎರಡು ಪಂಥಗಳು ಗಮನಾರ್ಹವಾದವು. ತೌಲನಿಕವಾಗಿ ಈ ಎರಡೂ ಪಂಥಗಳನ್ನು ವಿವೇಚಿಸಿದಾಗ, ಎರಡರಲ್ಲೂ ಸರ್ವಸಮಾನವಾದ ಭಿನ್ನಾಂಶಗಳು ಕಾಣಲುಸಾಧ್ಯ. ಅವುಗಳಲ್ಲಿ ಕೆಲವು ವಿಚಾರಗಳು ಪಂಥವು ನಡೆದುಕೊಂಡು ಬಂದ ಬಾಹ್ಯನಡೆಗೆ ಸಂಬಂಧಿಸಿದರೆ, ಇನ್ನೂ ಕೆಲವು ವಿಚಾರಗಳು ಪಂಥದ ಆಂತರಿಕ ವಿಚಾರಕ್ಕೆ ಸೇರಿದವುಗಳಾಗಿರುತ್ತವೆ.

ಪಂಥಗಳ ತಾತ್ವಿಕತೆಗೆ ಸಂಬಂಧಿಸಿದ ಆಂತರಿಕ ವೈದೃಶ್ಯಗಳನ್ನು ಪ್ರಸ್ತಾಪಿಸುವ ಮೊದಲು ಅವುಗಳ ಹೊರಗಿನಲ್ಲಿ ಮೇಲ್ನೋಟಕ್ಕೆ ಕಾಣುವ ಕೆಲವೊಂದು ಭಿನ್ನಾಂಶಗಳನ್ನು ಪ್ರಸ್ತಾವಿಸಬೇಕಾಗುತ್ತದೆ. ಅವುಗಳಲ್ಲಿ ಸಂಗೀತ ಅಥವಾ ಗೇಯಾಂಶದ ದೃಷ್ಟಿಯಿಂದ ದಾಸಪಂಥವು ಚೈತನ್ಯಪಂಥಕ್ಕಿಂತ ವಿಶೇಷವಾಗಿ ಭಿನ್ನತೆಯನ್ನು ಸಾಧಿಸಿದೆ. ಸಂಗೀತಶಾಸ್ತ್ರಕ್ಕೆ ಪೂರಕವಾದ ರಾಗ, ತಾಳ, ಛಂದೋಶಾಸ್ತ್ರಗಳ ಕೌಶಲ್ಯ, ಪಲ್ಲವಿ, ಅನುಪಲ್ಲವಿ, ಹಾಗೂ ಕೊನೆಯಲ್ಲಿ ಕೀರ್ತನಕಾರನ ಅಂಕಿತಗಳು ದಾಸಸಾಹಿತ್ಯದಲ್ಲಿ ಗೋಚರವಾದರೂ ಗೌಡೀಯಸಾಹಿತ್ಯದಲ್ಲಿ ಕಾಣಿಸದು. ಗೌಡೀಯಸಾಹಿತ್ಯವು ಸಂಗೀತಗಾರರ ಉಲ್ಲೇಖವನ್ನು ಮಾಡಿದರೂ ಸಂಗೀತಶಾಸ್ತ್ರಲಕ್ಷಣಕ್ಕೆ ಅನ್ವಯವಾಗುವ ಸಾಹಿತ್ಯರಚನೆಯು ಅಲ್ಲಿಲ್ಲವೆಂದೇ ಹೇಳಬೇಕು.

ದಾಸಪಂಥವು ಬ್ರಹ್ಮಾನಂದವನ್ನು ಕಾಣುವುದೇ ಸಂಗೀತಕಲೆಯಲ್ಲಿ. ಹಾಗಾಗಿ ದಾಸರು ತಮ್ಮ ತತ್ವೋಪದೇಶಕ್ಕಾಗಿ ಸಂಗೀತವನ್ನೇ ಮಾಧ್ಯಮವನ್ನಾಗಿ ಮಾಡಿಕೊಂಡರು. ಅವರು ತಮ್ಮ ಮಾತಿಗೆ ಗೀತವನ್ನು, ವಾಕ್ಯದ ವಾಕ್ಕುಗಳಿಗೆ ಗೇಯತೆಯನ್ನು ನೀಡಿ ವಾಗ್ಗೇಯಕಾರರೆನಿಸಿದರು. ಆದರೆ, ಚೈತನ್ಯಪಂಥದಲ್ಲಿ ಶ್ರೀಚೈತನ್ಯ ಮಹಾಪ್ರಭುಗಳ ಉಪದೇಶದ ಮಾತುಗಳೇ ಅಮೃತನುಡಿಗಳಾಗಿ ವಿಜೃಂಭಿಸಿದವು. ಅವರು ಹೇಳಿದುದನ್ನು ಉಳಿದ ವ್ಯಾಖ್ಯಾನಕಾರರು ಅಂತ್ಯಪ್ರಾಸದಿಂದ ಕೂಡಿದ ದ್ವಿಪದಿಯ ಮೂಲಕ ಕಾವ್ಯರೂಪಕೊಟ್ಟರು. ಆದುದರಿಂದ ಚೈತನ್ಯಪಂಥದಲ್ಲಿ ಸಂಗೀತಕ್ಕೆ ಸಂಬಂಧಿಸಿದ ರಾಗತಾಳಗಳ ವೈವಿಧ್ಯತೆಗಳು ವಿಶೇಷವಾಗಿ ಇಲ್ಲವಾದವು. ಆದರೂ ಚೈತನ್ಯಪಂಥಕ್ಕೆ ಸಂಬಂಧಿಸಿದಂತೆ, ನೀಲಾಚಲದಲ್ಲಿ ಹರಿಭಕ್ತರಾದ ಬಡಹರಿದಾಸ ಮತ್ತು ಛೋಟಹರಿದಾಸರೆಂಬಂತಹ ಒಳ್ಳೆಯ ಸಂಗೀತಗಾರರು ಇದ್ದರೆನ್ನುವುದನ್ನು ಮರೆಯುವಂತಿಲ್ಲ.

ದಾಸಪಂಥದಲ್ಲಿ ಸಶರೀರವಾಗಿ ಬೃಂದಾವನವನ್ನು ಪ್ರವೇಶಮಾಡುವ ಉಲ್ಲೇಖಗಳು ಹೇರಳವಾಗಿಲ್ಲದಿದ್ದರೂ ಒಂದೆರಡು ಉದಾಹರಣೆಗಳು ಸಿಗುತ್ತವೆ. ಅಂತಹವರಲ್ಲಿ ಉಡುಪಿಯ ವಾದಿರಾಜರು

ಮೊದಲಿಗರು. ಭಾರತೀಯ ಯತಿಪರಂಪರೆಯಲ್ಲಿ ಸಶರೀರವಾಗಿ ಬೃಂದಾವನ ಪ್ರವೇಶದ ಉಲ್ಲೇಖಕ್ಕೆ ಇದು ಮೊದಲನೆಯದಾಗುತ್ತದೆ. ಇವರ ಅನಂತರ ಏಷ್ಟೋಕಾಲದ ನಂತರದಲ್ಲಿ ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳೂ ಕೂಡ ವಾದಿರಾಜರಂತೆ ಸಶರೀರರಾಗಿ ಬೃಂದಾವನ ಪ್ರವೇಶಮಾಡಿದರು.[೧] ಉಳಿದಂತೆ, ಕೆಲವು ದಾಸರುಗಳ ಹೆಸರಲ್ಲಿ ಕೆಲವು ಬೃಂದಾವನಗಳು ಗೋಚರವಾದರೂ ಅವು ಸಶರೀರವಾಗಿ ನಡೆದಿಲ್ಲವೆನ್ನುವುದು ಸತ್ಯವಿಚಾರ. ಆದರೆ ಇಂತಹ ಸಶರೀರವಾದ ಬೃಂದಾವನ ಪ್ರವೇಶದ ಕುರಿತು ಚೈತನ್ಯಪಂಥದಲ್ಲಿ ಯಾವ ಉಲ್ಲೇಖಗಳು ಸಿಗದಿರುವುದು ವಿಶೇಷ.

೬.೧ : ತಾತ್ವಿಕ ವ್ಯತ್ಯಾಸಗಳು

ದಾಸಪಂಥದ ತಾತ್ವಿಕತೆಯಲ್ಲಿ ದ್ವೈತಸಿದ್ಧಾಂತವು ಹಾಸುಹೊಕ್ಕಾಗಿದ್ದರೆ, ಚೈತನ್ಯಪಂಥದ ತತ್ತ್ವಾರ್ಥದಲ್ಲಿ ಅಚಿಂತ್ಯಾಭೇದಾಭೇದವೆಂಬ ಗೌಡೀಯ ವೈಷ್ಣವತತ್ವವು ಕಂಡುಬರುತ್ತದೆ. ದಾಸಪಂಥವು ತನ್ನ ತಾತ್ತ್ವಿಕನೆಲೆಯಲ್ಲಿ 'ದೇವ ಮತ್ತು ಜೀವ'ನನ್ನು ಬೇರೆಬೇರೆಯಾಗಿ ನೋಡಲು ಮುಂದಾಗುತ್ತದೆ. ಅದರ ಪ್ರಕಾರ, ಜೀವ–ಜೀವ ಭೇದ, ಜಡ–ಜಡ ಭೇದ, ಜೀವ_ಜಡ ಭೇದ, ಜೀವ–ದೇವ ಭೇದ ಮತ್ತು ಜಡ–ದೇವ ಭೇದಗಳೆಂದು ಅಭಿಪ್ರಾಯ ಪಡುತ್ತದೆ. ಅಲ್ಲದೆ ಅದನ್ನು 'ಪಂಚಭೇದತತ್ವ'ವೆಂದು ಕರೆಯುತ್ತದೆ. ಅಚಿಂತ್ಯಾಭೇದಾಭೇದ ವೇದಾಂತವನ್ನು ಪಡೆದುಕೊಂಡ ಚೈತನ್ಯಪಂಥವು ಅಭೇದದಲ್ಲಿಯೂ ಭೇದವಿದೆಯೆಂದೂ, ಆದರೆ ಅದು ಅಚಿಂತ್ಯವಾಗಿದೆಯೆಂದು ಹೇಳುತ್ತದೆ. ಸೃಷ್ಟಿಯು ಭಗವಂತನ ನಿರ್ಮಿತಿಯೇ ಆಗಿರುವುದರಿಂದ ಅದು ಅವನ ಹಾಗೆಯೇ ಇದೆ. ಆದರೂ ಆತನು ಅದಕ್ಕಿಂತ ಭಿನ್ನನಾಗಿದ್ದಾನೆ. ಹೀಗೆ ಏಕಕಾಲದಲ್ಲಿ ಹೋಲಿಕೆ ಹಾಗೂ ವ್ಯತ್ಯಾಸಗಳನ್ನು ತೋರಿಸುವುದೇ ಅಚಿಂತ್ಯಾರ್ಥವೆನಿಸುತ್ತದೆ. ಇದು ಅತಾರ್ಕಿಕತೆಯಲ್ಲ; ತರ್ಕಾತೀತತೆ ಎಂದು ಭಾವಿಸಬೇಕಾಗುತ್ತದೆ.

ಶಂಕರಾಚಾರ್ಯರ ಅದ್ವೈತದಲ್ಲಿ ಈ ರೀತಿಯ ವ್ಯತ್ಯಾಸವಿಲ್ಲ. ಆದರೆ ಮಧ್ವಾಚಾರ್ಯರ ದ್ವೈತದಲ್ಲಿ ವ್ಯತ್ಯಾಸವೇ ಎಲ್ಲ. ಈ ಮಧ್ಯದಲ್ಲಿ ರಾಮಾನುಜಾಚಾರ್ಯರು ಜೀವ–ದೇವರ ನಡುವಿನ ಸಾಮ್ಯವನ್ನು, ವ್ಯತ್ಯಾಸವನ್ನು ಮೊದಲು ಹೇಳಿ ವಿಶಿಷ್ಟಾದ್ವೈತವನ್ನು ಪ್ರತಿಪಾದಿಸಿದರು. ಇದನ್ನೇ ಚೈತನ್ಯ ಮಹಾಪ್ರಭುಗಳು ಮುಂದುವರಿಸಿ, ಜೀವನು ಗುಣದಲ್ಲಿ ದೇವನನ್ನು ಹೋಲುತ್ತಾನೆ. ಆದರೆ ಗಾತ್ರದಲ್ಲಿ ಭಿನ್ನನೆಂದು ಹೇಳಿದರು. ಭಗವಂತನಿಗೆ ಪೂರ್ಣಜ್ಞಾನವಿದ್ದರೆ, ಮನುಷ್ಯನಿಗೆ ಅಲ್ಪಜ್ಞಾನವಿರುತ್ತದೆ. ಭಗವಂತನು ಸಂಪೂರ್ಣ ಆಕರ್ಷಕನಾದರೆ, ಮನುಷ್ಯನಲ್ಲಿ ಕಿಂಚಿತ್ ಆಕರ್ಷಣೆಯಿದೆ. ಭಗವಂತ ಸರ್ವವ್ಯಾಪಿಯೂದರೆ, ಮನುಷ್ಯನ ವ್ಯಾಪ್ತಿಯಲ್ಲಿ ನಿರ್ದಿಷ್ಟತೆಯಿದೆ. ಇದೇ ಅಚಿಂತ್ಯಾಭೇದಾಭೇದ ಸಿದ್ಧಾಂತವಾಗಿದೆ.

ಇಲ್ಲಿ ದೇಹದೊಳಗೆ ಆತ್ಮವಿರುತ್ತದೆ. ಶರೀರವು ಹೇಗೆ ಸತತವಾಗಿ ಬಾಲ್ಯದಿಂದ ಯೌವನಕ್ಕೆ, ಯೌವನದಿಂದ ಮುಪ್ಪಿಗೆ ಹೋಗುವಂತೆ, ದೇಹವು ಸತ್ತಾಗ ಆ ಆತ್ಮವು ಬೇರೊಂದು ದೇಹಕ್ಕೆ ಹೋಗುತ್ತದೆ ಎಂಬುದನ್ನು ಒಪ್ಪಿಕೊಳ್ಳುತ್ತದೆ. ಆದರೆ ಆತ್ಮಸಾಕ್ಷಾತ್ಕಾರ ಮಾಡಿಕೊಂಡವನು ಅಂತಹ ಬದಲಾವಣೆಯಿಂದ ಹೆದರುವುದಿಲ್ಲ. ದೇಹ ಸಾಯುತ್ತಿರುತ್ತದೆ. ಆತ್ಮವು ದೇಹದಿಂದ ದೇಹಕ್ಕೆ ಹಾರುತ್ತಿರುತ್ತದೆ. ಆದುದರಿಂದ ಆತ್ಮವು

ಸಾಯುವುದಿಲ್ಲ. ಇದಕ್ಕೆ ಆತ್ಮದ 'ದೇಹಾಂತರ ಪ್ರವೇಶ'ವೆಂದು ಕರೆಯುತ್ತಾರೆ. ಆತ್ಮವು ಇಲ್ಲಿಯ ಭೌತಜಗತ್ತಿಗೆ ಬಂದು ತಂದೆ, ತಾಯಿ, ಸೋದರ, ಸೋದರಿಯರು, ಹೆಂಡತಿ ಮಕ್ಕಳ ಜೊತೆ ದೈಹಿಕಸಂಬಂಧವನ್ನು ಕಲ್ಪಿಸಿಕೊಳ್ಳುತ್ತದೆ. ಆದರೆ ಆ ಸಂಬಂಧಗಳೆಲ್ಲವು ದೇಹಕ್ಕೆ ಸೇರಿದವೇ ಹೊರತು ಆತ್ಮಕ್ಕಲ್ಲವೆಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳುತ್ತದೆ. ಚೈತನ್ಯಪಂಥದ ಪ್ರಕಾರ, ವಿವೇಕಪ್ರಜ್ಞೆಯನ್ನು ಪಡೆದ ಮಾನವನು ಭೌತಜಗತ್ತಿನೊಳಗೆ ಇಂದ್ರಿಯ ಗೋಚರವಾದ ಬದಲಾವಣೆಗಳಿಂದ ಆತಂಕಗೊಳ್ಳುವುದಿಲ್ಲ.

ದಾಸಪಂಥದಲ್ಲಿ ನವವಿಧಭಕ್ತಿಯು ಪ್ರಧಾನಪಾತ್ರವಹಿಸಿದರೆ, ಚೈತನ್ಯಪಂಥದ ಭಕ್ತಿಯಲ್ಲಿ ಪಂಚಭಾವವೇ ಪ್ರಧಾನವಾಗುತ್ತದೆ. ಅದರಲ್ಲೂ ಆ ಭಾವಭಕ್ತಿಯಲ್ಲಿ ಮುಖ್ಯವಾಗಿ ತೋರುವುದು 'ಮಧುರ ರತಿ'. ಭಗವಂತನ ಧ್ಯಾನ ಹಾಗೂ ಶ್ರೀಹರಿಸಂಕೀರ್ತನಾದಿಗಳಿಂದ ಭಗವಂತನನ್ನು ಗಾಢವಾಗಿ ಪ್ರೀತಿಸುವ ಭಕ್ತಿಭಾವಸಿದ್ಧಾಂತವೇ ಚೈತನ್ಯಪಂಥದ ಮುಖ್ಯತತ್ತ್ವ. ಇಲ್ಲಿಯ ಪ್ರಾರ್ಥನೆಯಲ್ಲಿ ಬೇಡಿಕೆಗಳ ಪಟ್ಟಿಯಿಲ್ಲ; ಅದರ ಬದಲು ಸರ್ವಸಮರ್ಪಣೆಯ ನಿಷ್ಠೆಯಿದೆ. ಇದನ್ನು 'ಷರತ್ತುಗಳಿಲ್ಲದ ಪ್ರೇಮ'ವೆನ್ನಬಹುದು. ಇದೇ ಭಗವದ್ಗೀತೆಯ ಸಾರವೂ ಕೂಡ.

ಶ್ರೀಕೃಷ್ಣನನ್ನು ಅವತಾರಪುರುಷನೆಂದು ಭಾವಿಸದೆ, 'ಸ್ವಯಂರೂಪ'ನೆಂದು ಗ್ರಹಿಸಿದ್ದು ಚೈತನ್ಯಪಂಥದ ಮತ್ತೊಂದು ವಿಶೇಷತೆ. ಆದರೆ ದಾಸಪಂಥವು ಶ್ರೀಕೃಷ್ಣನನ್ನು ಹರಿಯ ಹತ್ತಾವತಾರಗಳಲ್ಲಿ ಎಂಟನೆಯ ಅವತಾರವೆಂದು ಭಾವಿಸಿತು. ಚೈತನ್ಯಪಂಥವು ಸಂಪತ್ತು ಮತ್ತು ರಾಜಕಾರಣದ ಅಧಿಕಾರವನ್ನು ಎಂದೂ ಅಸ್ಪೃಶ್ಯವೆಂದು ಭಾವಿಸಿಲ್ಲ. ಆದರೆ ಅದು ಭಗವದ್ಭಕ್ತಿಗೆ ಮೀಸಲಾಗಿರಬೇಕೆಂದು ಹೇಳಿತು. ದಿವಾಕರದತ್ತನೆಂಬ ಶ್ರೀಮಂತ ಚಿನ್ನದ ವ್ಯಾಪಾರಿಯಿಂದ ಚೈತನ್ಯ ಮಹಾಪ್ರಭುಗಳ ಭಕ್ತಿಚಳುವಳಿಗೆ ಉದಾರವಾದ ಧನಸಹಾಯ ದೊರಕಿರುವುದನ್ನು, ರೂಪ–ಸನಾತನ ಗೋಸ್ವಾಮಿಗಳು, ರಘುನಾಥಭಟ್ಟ ಈ ಮುಂತಾದವರೆಲ್ಲ ಉನ್ನತಾಧಿಕಾರಿಗಳಾಗಿದ್ದುಕೊಂಡು ಅಚಿಂತ್ಯತತ್ತ್ವಕ್ಕೆ ಶರಣಾದರೆಂಬುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು. ಇಸ್ಕಾನ್ ಸಂಸ್ಥಾಪಕರಾದ ಭಕ್ತಿವೇದಾಂತ ಪ್ರಭುಪಾದರೂ ಇದೇ ದೃಷ್ಟಿಕೋನವನ್ನು ಪಡೆದಿದ್ದರೆಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಆದರೆ ದಾಸಪಂಥವು ಸಂಪತ್ತು ಮತ್ತು ಅಧಿಕಾರವನ್ನು ಲೊಳಲೊಟ್ಟೆಯೆಂದು ಹಳಿಯಿತು. 'ನಿಮ್ಮಭಾಗ್ಯ ಲಕ್ಷ್ಮೀದೇವಿ, ನಮ್ಮಭಾಗ್ಯ ನಾರಾಯಣ' ಎಂದು ಸಾರಿತು. 'ಹಣವೇ ನಿನ್ನಯ ಗುಣವೇನು' ಎನ್ನುವ ಮೂಲಕ ಶ್ರೀಮಂತಿಕೆಯನ್ನು ಹಂಗಿಸಿತು.

ಒಟ್ಟಿನಲ್ಲಿ ದಾಸಪಂಥಕ್ಕಿಂತ ಚೈತನ್ಯಪಂಥವು ಒಂದಿಷ್ಟು ಭಿನ್ನತೆಯನ್ನು ತೋರಿಸಿಕೊಡುತ್ತದೆ. ಎರಡರಲ್ಲೂ ಕೃಷ್ಣಪಾರಮ್ಯವೇ ಮೆರೆದರೂ, ಆಯಾಯ ಪಂಥಗಳ ತಾತ್ವಿಕನಡೆಯಲ್ಲಿ ಒಳಸಂಘರ್ಷವಿದೆ; ಅಂತೆಯೇ ವಿಶೇಷತೆಯೂ ಇದೆ.

೬.೨ : ಪಂಚತತ್ತ್ವ ಪರಿಕಲ್ಪನೆ

ಪಂಚತತ್ತ್ವ ಅವತೀರ್ಣ ಚೈತನ್ಯೇರ ಸಂಗೇ ।
ಪಂಚತ್ತ್ವ ಲನಾಕರೇನ ಸಂಕೀರ್ತನ ರಂಗೇ ॥[೪]

ಚೈತನ್ಯಪಂಥದ ಪ್ರಮುಖವಾದ ಪರಿಕಲ್ಪನೆಗಳಲ್ಲಿ 'ಪಂಚತತ್ತ್ವ'ವೆಂಬುದು ಹೊಸಬಗೆಯದು. ಇಲ್ಲಿಯ ಕೆಲವೊಂದು ವಿಚಾರವು ದಾಸಸಾಹಿತ್ಯದಲ್ಲಿ ಗೋಚರಿಸುವುದಾದರೂ ಅದು ಗೌಡೀಯಪಂಥಕ್ಕಿಂತ ಭಿನ್ನವೆಂದೇ ಭಾವಿಸಿಕೊಳ್ಳಬೇಕು. ಆದರೂ ಚೈತನ್ಯಪಂಥವು ವ್ಯಕ್ತಪಡಿಸುವ ತಾತ್ತ್ವಿಕತೆ ಮತ್ತು ಆಧ್ಯಾತ್ಮ ವಿಚಾರದಲ್ಲಿ ಹೊಸಬಗೆಯ ಚಿಂತನೆಗೆ ಅವಕಾಶವನ್ನು ಕಲ್ಪಿಸುತ್ತದೆ.

ಇಲ್ಲಿ ಐಹಿಕ ಅಸ್ತಿತ್ವದೊಳಗೆ ಬದ್ಧಸ್ಥಿತಿಯಲ್ಲಿರುವ ವ್ಯಕ್ತಿಯು ಬದ್ಧಾತ್ಮನೆಂದು ಪರಿಗಣಿಸಲ್ಪಡುತ್ತಾನೆ. ಆತನ ಸುತ್ತಲಿರುವ ಬಾಹ್ಯಶಕ್ತಿಯೆನಿಸಿದ ತನ್ನ ದೇಶ, ಸಮಾಜ, ಸ್ನೇಹ ಹಾಗೂ ಪ್ರೀತಿಯೊಂದಿಗಿನ ಸಂರಕ್ಷಣೆಯನ್ನೇ ಸತ್ಯವೆಂದುಕೊಂಡು ಅಧರ ಮಾಯಾಬಂಧದಲ್ಲಿ ಅಂಟಿಕೊಂಡಿರುತ್ತಾನೆ. ಐಹಿಕಶಕ್ತಿಯ ಪ್ರಕೃತಿನಿಯಮಗಳನ್ನೇ ಪ್ರಬಲವೆಂದು ನಂಬಿಕೊಳ್ಳುತ್ತಾನೆ. ಜನನ, ಮರಣ, ವೃದ್ಧಾಪ್ಯ ಹಾಗೂ ವ್ಯಾಧಿಗಳು ಯಾತನಾಮಯವೆಂದು ಆತನೆಂದೂ ಪರಿಗಣಿಸುವುದಿಲ್ಲ. ಇಂತಹ ಯಾತನೆಗಳಿಂದ ರಕ್ಷಿಸಲ್ಪಡಬೇಕಾದ್ದಲ್ಲಿ ಅಂತಹ ಬದ್ಧಾತ್ಮರಿಗೊಂದು ಆಶ್ರಯಬೇಕಾಗುತ್ತದೆ. ಆ ಆಶ್ರಯಕ್ಕಾಗಿಯೇ ಗೌಡೀಯಪಂಥವು ಶ್ರೀಚೈತನ್ಯ ಮಹಾಪ್ರಭುಗಳನ್ನು ಹಾತೊರೆಯುತ್ತದೆ. ಅಂತಹ ಪರಮಪ್ರಭುವನ್ನು ಆಶ್ರಯಿಸುವ ಆಶ್ರಿತನನ್ನೇ 'ಅಕಿಂಚನ'ನೆಂದು, ಆಶ್ರಯನಾದ ದೇವೋತ್ತಮ ಪುರುಷನನ್ನೇ 'ಅಕಿಂಚನ ಗೋಚರ'ನೆಂದೂ ಚೈತನ್ಯಪಂಥವು ಕರೆಯುತ್ತದೆ. ಈ ಕಲ್ಪನೆಯಲ್ಲಿ ಬದ್ಧಾತ್ಮರ ಉದ್ಧಾರಕ್ಕಾಗಿಯೇ ಮೂಡಿಬಂದಿರುವಂತಹುದು 'ಪಂಚತತ್ತ್ವ'ವೆಂಬ ಪರಿಕಲ್ಪನೆ.

ದಾಸಪಂಥವು ಕೂಡ ಐಹಿಕ ಅಸ್ಥಿತ್ವವನ್ನು ಅಲ್ಲಗಳೆಯುತ್ತದೆ. ಈ ಕುರಿತು 'ಏನುಭ್ರಮೆ ಮನುಜರಿಗೆ.......?' ಎಂದು ಪ್ರಶ್ನಿಸುತ್ತದೆ. ಈ ಪಂಥದ ಪಾಲಿಗೆ 'ವಿಗಡಸಂಸಾರ ಹಗರಣ ನೀರಗುಳ್ಳೆಯಂತೆ' ಎಂದು ಭಾವಿಸುತ್ತದೆ. ಆದರೆ ಚೈತನ್ಯಪಂಥದ ಚಿಂತನೆಯು ಇದಕ್ಕಿಂತ ಮುಂದೆಹೋಗಿ ಭೌತಜೀವಿಗಳನ್ನು ಬಂಧನದಿಂದ ಪಾರುಮಾಡುವುದರ ಕುರಿತು ಚಿಂತಿಸುತ್ತದೆ.

ಈ ಪರಿಕಲ್ಪನೆಯಲ್ಲಿ ಬರುವ ಐದುತತ್ತ್ವಗಳು ಚೈತನ್ಯರ ಒಡನೆಯೇ ಅವತರಿಸಿದವುಗಳು. ಅವುಗಳೆಂದರೆ, ೧. ಈಶತತ್ತ್ವ (ಪರಮಪ್ರಭು), ೨. ವಿಸ್ತರಣೆಯತತ್ತ್ವ, ೩. ಅವತಾರತತ್ತ್ವ, ೪. ಶಕ್ತಿತತ್ತ್ವ ಹಾಗೂ ೫. ಭಕ್ತತತ್ತ್ವವೆನ್ನುವವು. ಇಲ್ಲಿ ಶ್ರೀಚೈತನ್ಯ ಮಹಾಪ್ರಭುಗಳು ಭಕ್ತನ ರೂಪವೆಂದೂ, ನಿತ್ಯಾನಂದಪ್ರಭುಗಳು ಭಕ್ತಸ್ವರೂಪವೆಂದೂ, ಶ್ರೀಅದ್ವೈತಪ್ರಭುಗಳು ಭಕ್ತನ ಅವತಾರ ರೂಪವೆಂದೂ, ಗದಾಧರಪ್ರಭುಗಳು ಭಕ್ತನ ಶಕ್ತಿಯೆಂದೂ, ಶ್ರೀವಾಸಠಾಕೂರರು ಪರಿಶುದ್ಧಭಕ್ತರೆಂದೂ ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಗೌಡೀಯ ತತ್ತ್ವಾರ್ಥ ಚಿಂತನೆಯು ಇವೆಲ್ಲವನ್ನು ದೇವೋತ್ತಮ ಪರಮಪುರುಷನ ಸ್ವಾಂಶ ವಿಸ್ತರಣೆಗಳೆಂದು ಹೇಳುತ್ತದೆ.

ಇಲ್ಲಿ ಮಹಾವಿಷ್ಣುವೇ ಮೂಲಾಧಿಕಾರಿ. ತತ್ತ್ವಾಧಾರರೆಲ್ಲ ವಿಷ್ಣುವಿನ ಆಧೀನರು. ಅಲ್ಲದೆ ತತ್ತ್ವಾಂಶಜರು ಒಂದೇ ನೆಲೆಯಲ್ಲಿದ್ದರೂ ದಿವ್ಯರಸಗಳನ್ನು ಆಸ್ವಾದಿಸಲು ಬಗೆಬಗೆಯಾಗಿ ಅವತರಿಸಿದ್ದಾರೆ. ವಾಸ್ತವದಲ್ಲಿ ಒಬ್ಬರಿಗಿಂತ ಒಬ್ಬರು ಬೇರೆಯಾಗಿರುವ ಸಾಧ್ಯತೆಗಳಿಲ್ಲ. ಏಕೆಂದರೆ ಆರಾಧಕ ಮತ್ತು ಆರಾಧ್ಯದೈವವನ್ನು ಯಾವುದೇ ಹಂತದಲ್ಲೂ ಪ್ರತ್ಯೇಕಿಸಲು ಸಾಧವಿಲ್ಲ. ಪರಮನೆಲೆಯಲ್ಲಿ ಒಬ್ಬರನ್ನು ಬಿಟ್ಟು ಇನ್ನೊಬ್ಬರನ್ನು ಅರ್ಥಮಾಡಿಕೊಳ್ಳಲಾಗುವುದಿಲ್ಲ.

ಕಲಿಯುಗದಲ್ಲಿ ಬುದ್ಧಿವಂತರಾದ ಜನರು ಸಂಕೀರ್ತನಯಜ್ಞವನ್ನು ಮಾಡುವ ಮೂಲಕವಾಗಿ ಸಂಗಾತಿಗಳಿಂದ ಒಡಗೂಡಿದ ಭಗವಂತನನ್ನು ಆರಾಧಿಸುತ್ತಾರೆ. ಶ್ರೀಚೈತನ್ಯ ಮಹಾಪ್ರಭುಗಳು ಸದಾ ತಮ್ಮ ಸ್ವಾಂಶ ವಿಸ್ತರಣೆಯಾದ ಶ್ರೀ ನಿತ್ಯಾನಂದಪ್ರಭು, ತಮ್ಮ ಅವತಾರವಾದ ಶ್ರೀಅದ್ವೈತಪ್ರಭು, ತಮ್ಮ ಅಂತರಂಗ ಶಕ್ತಿಯಾದ ಶ್ರೀಗದಾಧರಪ್ರಭು, ಮತ್ತು ತಮ್ಮ ತಟಸ್ಥಶಕ್ತಿಯಾದ ಶ್ರೀವಾಸಪ್ರಭುಗಳಿಂದ ಒಡಗೂಡಿರುತ್ತಾರೆ. ಅವರು ಇವರೆಲ್ಲರ ನಡುವೆ ದೇವೋತ್ತಮ ಪರಮಪುರುಷನಾಗಿ ತೋರಿಬರುತ್ತಾರೆ. ಶ್ರೀಚೈತನ್ಯ ಮಹಾಪ್ರಭುಗಳು ಇತರ ತತ್ತ್ವಗಳಿಂದ ಸದಾಕಾಲದಲ್ಲಿ ಒಡಗೂಡಿರುತ್ತಾರೆಂಬುದೇ ಇಲ್ಲಿಯ ಮುಖ್ಯವಿಚಾರ.

ಇಲ್ಲಿ ಗಮನಿಸಬೇಕಾದ ಮತ್ತೊಂದು ವಿಷಯವೆಂದರೆ, ಶ್ರೀಚೈತನ್ಯ ಮಹಾಪ್ರಭುಗಳು, ಶ್ರೀನಿತ್ಯಾನಂದಪ್ರಭುಗಳು ಮತ್ತು ಶ್ರೀಅದ್ವೈತಪ್ರಭುಗಳು ವಿಷ್ಣುವರ್ಗಕ್ಕೆ ಸೇರಿದವರು. ಆದರೂ ಇಲ್ಲಿ ಶ್ರೀಚೈತನ್ಯರನ್ನು ಮಾತ್ರ ಶ್ರೇಷ್ಠರೆಂದು ನಾವು ಭಾವಿಸಿಕೊಳ್ಳಬೇಕು. ಹಾಗಾಗಿಯೇ ಅವರು ಮಹಾಪ್ರಭುಗಳು. ಉಳಿದವರಿಬ್ಬರು ಶ್ರೀಚೈತನ್ಯ ಮಹಾಪ್ರಭುಗಳಿಗೆ ಆಧೀನರಾಗಿದ್ದುಕೊಂಡು ಸಾಧಾರಣ ಜೀವಿಗಳಿಗೆ ಬೋಧಿಸುವುದಕ್ಕಾಗಿ ಹಾಗೂ ಅವರ ದಿವ್ಯಪ್ರೇಮಸೇವೆಯಲ್ಲಿ ನಿರತರಾಗುತ್ತಾರೆ. ಆದುದರಿಂದ ಅವರು ಕೇವಲ ಪ್ರಭುಗಳೆನಿಸುತ್ತಾರಷ್ಟೆ. ಅಂದರೆ ಪರಮಪ್ರಭುವೆನಿಸುವವನು ಶ್ರೀಕೃಷ್ಣನೊಬ್ಬನೆ. ವಿಷ್ಣುತತ್ತ್ವ (ನಿತ್ಯಾನಂದಪ್ರಭು ಮತ್ತು ಅದ್ವೈತರು) ಹಾಗೂ ಜೀವತತ್ತ್ವ (ಶ್ರೀವಾಸಾದಿ ಗೌರಭಕ್ತವೃಂದ) ಗಳೆಲ್ಲವೂ ಪರಮಪ್ರಭುವಿನ ಸೇವೆಯಲ್ಲಿ ಮಗ್ನರಾಗಿರುತ್ತಾರೆ. ಆದರೂ ವಿಷ್ಣುತತ್ತ್ವ ಭಕ್ತರಿಗೂ ಮತ್ತು ಜೀವತತ್ತ್ವ ಭಕ್ತರಿಗೂ ನಡುವೆ ಇರುವ ವ್ಯತ್ಯಾಸವನ್ನು ಗಮನಿಸಬೇಕು. ಜೀವತತ್ತ್ವ ಸಂಬಂಧಿತ ಭಕ್ತರಾದ ಗುರುಗಳು ಇಲ್ಲಿ ಭಕ್ತದೇವರೆನಿಸಿಕೊಳ್ಳುತ್ತಾರೆ. ಪರಮಪುರುಷನನ್ನು ಅವನ ಅಧೀನರಿಂದ ಪ್ರತ್ಯೇಕಿಸಿ ನೋಡುವ ಪ್ರಯತ್ನವೊಂದು ಇಲ್ಲಿ ನಡೆಯುತ್ತದೆ.

ಪಂಚತತ್ತ್ವಗಳಲ್ಲೊಂದಾದ ಶಕ್ತಿತತ್ತ್ವದಲ್ಲಿ ಪ್ರಭುವಿನ ಎಲ್ಲ ಶುದ್ಧಭಕ್ತರು ಸೇರಿಕೊಳ್ಳುತ್ತಾರೆ. ಆದರೆ ಇಲ್ಲಿ ಅಂತರಂಗ ಭಕ್ತರು ಮತ್ತು ಶುದ್ಧಭಕ್ತರೆನ್ನುವ ಪ್ರಭೇದವೊಂದು ತೋರಿಬರಲುಸಾಧ್ಯ. ಪ್ರಭುವಿನ ಶಕ್ತಿತತ್ತ್ವಗಳಲ್ಲಿ ಕೆಲವರು ಮಧುರಭಾವದಲ್ಲಿ ಸ್ಥಿತರಾಗುತ್ತಾರೆ. ಉಳಿದವರು ಮಕ್ಕಳ ವಾತ್ಸಲ್ಯದಲ್ಲಿ, ಕೆಲವರು ಭ್ರಾತೃತ್ವದಲ್ಲಿ, ಇನ್ನೂ ಕೆಲವರು ಅನುಚರಭಾವದಲ್ಲಿ ಸ್ಥಿತರಾಗುತ್ತಾರೆ. ಆದರೂ ಅವರೆಲ್ಲರು ಬಕ್ತರೆನ್ನುವುದು ನಿಶ್ಚಿತ. ಆದರೆ ಚೈತನ್ಯ ತತ್ತ್ವಾಧಾರಿತವಾಗಿ ತುಲನಾತ್ಮಕ ಅಧ್ಯಯನ ಮಾಡಿದಾಗ ಮಧುರಭಾವದಲ್ಲಿರುವ ಭಕ್ತರು ಇತರರಿಗಿಂತ ಉತ್ತಮ ಸ್ಥಾನದಲ್ಲಿದ್ದಾರೆನ್ನುವುದು ಸ್ಪಷ್ಟವಾಗುತ್ತದೆ. ದೇವೋತ್ತಮ ಪರಮಪುರುಷನಲ್ಲಿ ಮಧುರಭಾವದ

ಸಂಬಂಧವನ್ನು ಪಡೆದಿರುವ ಭಕ್ತರು ಚೈತನ್ಯ ಮಹಾಪ್ರಭುಗಳ ಅಂತರಂಗದ ಭಕ್ತರೆನಿಸಿಕೊಳ್ಳುತ್ತಾರೆ. ನಿತ್ಯಾನಂದಪ್ರಭುಗಳ ಹಾಗೂ ಅದ್ವೈತಪ್ರಭುಗಳ ಸೇವೆಯಲ್ಲಿ ಮಗ್ನರಾಗಿರುವ ಭಕ್ತರು ಸಾಮಾನ್ಯವಾಗಿ ಭ್ರಾತೃತ್ವ ಮೊದಲಾದ ಕೌಟುಂಬಿಕ ಪ್ರೀತಿ, ಅನುಚಾರಭಾವ ಮತ್ತು ತಾಟಸ್ಥ್ಯ ಸಂಬಂಧಗಳಲ್ಲಿರುತ್ತಾರೆ. ಅಂತಹ ಭಕ್ತರು ಶ್ರೀಚೈತನ್ಯ ಮಹಾಪ್ರಭುಗಳ ಮೇಲೆ ಅಪಾರವಾದ ಮಮತೆಯನ್ನು ಬೆಳೆಸಿಕೊಂಡಲ್ಲಿ, ಆ ಭಕ್ತರು ಕೂಡ ಮಧುರಭಾವದ ಭಕ್ತನೆಲೆಯಲ್ಲಿ ನೆಲೆಗೊಳ್ಳುತ್ತಾರೆಂದು ಪಂಚತತ್ತ್ವವು ಸ್ಪಷ್ಟಪಡಿಸುತ್ತದೆ.

ಗೌಡೀಯ ಪೂಜಾರಾಧನೆಯಲ್ಲಿ ಪಂಚತತ್ತ್ವಕ್ಕೊಂದು ಪ್ರಮುಖಸ್ಥಾನವಿದೆ. ಇಲ್ಲಿ 'ಶ್ರೀಕೃಷ್ಣಚೈತನ್ಯ ಪ್ರಭುನಿತ್ಯಾನಂದ ಶ್ರೀಅದ್ವೈತ ಗದಾಧರ ಶ್ರೀವಾಸಾದಿ ಗೌರಭಕ್ತವೃಂದ'ವೆನ್ನುವ ಪಂಚತತ್ತ್ವಮಂತ್ರದ ನಂತರದಲ್ಲಿ ಹದಿನಾರು ಶಬ್ದಗಳಿಂದ ಕೂಡಿದ 'ಹರೇ ಕೃಷ್ಣ.....'ಮಹಾಮಂತ್ರವನ್ನು ಪಠಿಸುವುದು ಪೂಜಾಕ್ರಮವೆನಿಸುತ್ತದೆ.

ಪಂಚತತ್ತ್ವ ಏಕವಸ್ತು ನಾಹಿ ಕಿಛು ಭೇದ ।
ರಸ ಆಸ್ವಾದಿತೇ ತಬು ವಿವಿಧ ವಿಭೇದ ॥

ಆಧ್ಯಾತ್ಮಿಕವಾಗಿ ನೋಡಿದರೆ ಇಲ್ಲಿಯ ಪಂಚತತ್ತ್ವಗಳಲ್ಲಿ ಹೆಚ್ಚೇನು ವ್ಯತ್ಯಾಸವಿಲ್ಲ. ಏಕೆಂದರೆ ಲೋಕೋತ್ತರವಾದ ನೆಲೆಯಲ್ಲಿ ಎಲ್ಲವೂ ಪರಾತ್ಪರವೇ ಆಗಿರುತ್ತದೆ. ಆದರೂ ಆಧ್ಯಾತ್ಮಿಕ ಜಗತ್ತಿನಲ್ಲಿ ವೈವಿಧ್ಯಗಳಿವೆ. ಆದ್ದರಿಂದ ಈ ಆಧ್ಯಾತ್ಮಿಕ ವೈವಿಧ್ಯಗಳನ್ನು ಆಸ್ವಾದಿಸಲು ನಾವು ಅವುಗಳ ನಡುವಣ ವ್ಯತ್ಯಾಸವನ್ನು ಗುರುತಿಸಬೇಕಾಗುತ್ತದೆ.

ಒಟ್ಟನಲ್ಲಿ ಚೈತನ್ಯಪಂಥದ ಪಂಚತತ್ತ್ವ ವಿಚಾರವು ಒಂದು ರೀತಿಯಲ್ಲಿ ಆಧ್ಯಾತ್ಮಿಕವಾದ ಆಂದೋಲನ. ದಾಸಪಂಥವು ಹೇಳುವ 'ನಿತ್ಯವಲ್ಲ ನಿತ್ಯವಲ್ಲ ಅನಿತ್ಯ ದೇಹವಿದಣ್ಣ' ಎನ್ನುವ ಕಲ್ಪನೆಯಲ್ಲಿ 'ನರನಾದ ಮೇಲೆ ಹರಿನಾಮ ಜಿಹ್ವೆಯೊಳಿರಬೇಕು, ಮಾತು ಮಾತಿಗೆ ಹರಿಯ ನೆನೆಯಬೇಕು, ಮಾಧವನ ಸ್ಮರಣೆಯನು ಮಾಡಲುಬೇಕು' ಎಂಬ ಕಲ್ಪನೆಯ ಹಾದಿಯಲ್ಲೇ ಗೌಡೀಯಪಂಥವೂ ಸಾಗುತ್ತದೆ. ಈ ತಾತ್ತ್ವಿಕ ಆಂದೋಲನವು ಇಡೀ ಜಗತ್ತನ್ನು ವ್ಯಾಪಿಸಬೇಕೆಂಬುದು ಪಂಥದ ಮುಖ್ಯ ನಿಲುವು. ಹಾಗಾಗಿಯೇ ಚೈತನ್ಯಪಂಥವು ಅಂತಾರಾಷ್ಟ್ರೀಯವಾಗಿ ಬೆಳೆಯುತ್ತದೆ. ಐರೋಪ್ಯರಿಗೆ, ಅಮೇರಿಕನ್ನರಿಗೆ ಯಜ್ಞೋಪವೀತ ಧಾರಣೆಯನ್ನು ಮಾಡಿಸಿ ಸಂನ್ಯಾಸದೀಕ್ಷೆಯನ್ನೂ ನೀಡುತ್ತದೆ. ಈ ಮೂಲಕ ಐಹಿಕ ಅನುಭೋಗದ ಬೀಜವನ್ನು ಜೀವಿಗಳಿಂದ ಸಂಪೂರ್ಣವಾಗಿ ನಾಶಪಡಿಸುವ ಕಾರ್ಯವನ್ನು ಸುಗಮವಾಗಿ ನೆರವೇರಿಸಿಕೊಳ್ಳುತ್ತದೆ.

೬.೩ : ಕೃಷ್ಣ ಅವತಾರಿಯಲ್ಲ

ನಾವು ಕಾಣುವ, ಕೇಳುವ ಹಾಗೂ ಹೇಳುವ ಶ್ರೀಕೃಷ್ಣನು ಕೇವಲ ಬರಿಯ ಕೃಷ್ಣನಲ್ಲ. ಭಾಗವತೋತ್ತಮರಿಗೆ, ಅನುಭಾವಿಗಳಿಗೆ ಆತ ಗೋಪಬಾಲನಾಗಿ, ಗೋಪೀಲೋಲನಾಗಿ, ಅಧ್ಯಾತ್ಮಿಕ ಅನುಭೂತಿಯನ್ನು ಕರುಣಿಸುವವನು. ಅಲ್ಲಿ ಆತ ಕರ್ಷಕಶಕ್ತಿಯಾಗಿ, ಉದ್ಧಾರಕಶಕ್ತಿಯಾಗುತ್ತಾನೆ. ಅಲ್ಲದೆ

ಸತ್ಯಸನಾತನನಾಗುತ್ತಾನೆ. ಲೋಕಭರಿತನಾಗಿ ಲೀಲಾವತಾರಿಯಾಗುತ್ತಾನೆ. ಸರ್ವಜೀವಚಿತ್ತಾಪಹಾರಿಯಾಗುತ್ತಾನೆ. ಎಲ್ಲಕ್ಕಿಂತ ಮಿಗಿಲಾಗಿ ಆತನು ಅವತಾರಪುರುಷನಾಗಿಬಿಡುತ್ತಾನೆ. ಆತನಿಗೆ ಭಾರತವೆನ್ನುವುದು ಹುಟ್ಟು, ಮಹಾಭಾರತವೆನ್ನುವುದು ಬೆಳವಣಿಗೆ, ಭಾಗವತವೆನ್ನುವುದು ವಿಜೃಂಭಣೆಯಾಗುತ್ತದೆ. ಆದರೆ ಈತನನ್ನು ಸಮಸ್ತರೂ ತಿಳಿಯಲಿಲ್ಲ, ತಿಳಿದವರೆಲ್ಲರೂ ಕಾಣಲಿಲ್ಲ. ಆತನನ್ನು ಕಾಣುವಪ್ರಯತ್ನ ಹೆಚ್ಚಾದಂತೆ, ಆತನು ಗೂಢವೂ ಗಾಢವೂ ಆಗಿಬಿಡುತ್ತಾನೆ. ಈ ನೆಲೆಯಲ್ಲಿ ಶ್ರೀಕೃಷ್ಣನ ಮಹತ್ತನ್ನು ಬೃಹತ್ತಾಗಿ ಕಂಡವರು ಕರ್ನಾಟಕದ ಹರಿದಾಸರುಗಳು.

ಆದರೆ ೫೦೦ ವರ್ಷಗಳ ಹಿಂದೆ ಬಂಗಾಳದಲ್ಲಿ ಶ್ರೀಕೃಷ್ಣಚೈತನ್ಯರಿಂದ ಜನ್ಮತಾಳಿದ ಚೈತನ್ಯಪಂಥಕ್ಕೆ ಕೃಷ್ಣ ಆಕರ್ಷಕ ವ್ಯಕ್ತಿಯಾಗಿ, ಉದ್ಧಾರಕನಾಗಿ, ನಿತ್ಯನೂತನನಾಗಿ, ಲೋಕವಿಸ್ಮಯಚರಿತನಾಗಿ ಕಂಡರೂ, ಆತ ಆ ಪಂಥಕ್ಕೆ ಅವತಾರಪುರುಷನಲ್ಲ. ಆತನು ಕರುಣೆಯ ಕಡಲಾಗಿ; ಆನಂದದ ಒಡಲಾಗಿ ಮೂಡಿಬಂದರೂ ಅಸಾಧಾರಣ ಮಾನವನಾಗಿ ತೋರುತ್ತಾನೆಯೇ ಹೊರತು ದೈವತ್ವಕ್ಕೆ ಗುರಿಯಾಗುವುದಿಲ್ಲ. ಆದುದರಿಂದಲೇ ಶ್ರೀಚೈತನ್ಯರು ಭಗವಂತನೊಂದಿಗೆ ನಂಟನ್ನು ಸ್ಥಾಪಿಸಿಕೊಳ್ಳುತ್ತಾರೆ. ಸಖ್ಯವನ್ನು ಬೆಳೆಸಿಕೊಳ್ಳುತ್ತಾರೆ. ಅದಕ್ಕಾಗಿ ಚೈತನ್ಯರು ರಾಧಾರಾಣಿಯ ಪಾತ್ರಮುಖೇನ ಕೃಷ್ಣನನ್ನು ಪ್ರೇಮಿಸಲು ಮುಂದಾಗುತ್ತಾರೆ. ಇಲ್ಲಿಯ ರಾಧೆ ಹಾಗೂ ಇಲ್ಲಿಯ ಕೃಷ್ಣರಲ್ಲಿ ನಾವು ಕಾಣುವುದು ಪ್ರೇಮದ ವಿನಿಮಯವನ್ನು. ಅವು ಅಂತರಂಗ, ಬಹಿರಂಗ ಮತ್ತು ತಟಸ್ಥಶಕ್ತಿಗಳ ಮೂಲಕ ಹರಿಯುತ್ತದೆ. ಭಗವದ್ಗೀತೆಯಲ್ಲಿ ತೋರುವ ಕೃಷ್ಣನ ವಿಶ್ವರೂಪ, ಬ್ರಹ್ಮಾಂಡ ರೂಪಗಳನ್ನು ಚೈತನ್ಯರು ದಾಟಿ ಮುಂದೆ ಹೋಗುತ್ತಾರೆ. ಚೈತನ್ಯರ ದೃಷ್ಟಿಯಲ್ಲಿ, ನಾವು ಕೃಷ್ಣಸಖರಾಗಬಹುದು. ಈ ಸಖ್ಯಭಾವವನ್ನು ಭಯಗ್ರಸ್ತರಾಗಿ, ಅಭಿಮಾನಿಗಳಾಗಿಯೇ ಸಾಧಿಸಬೇಕಾಗಿಲ್ಲ. ಸಂಪೂರ್ಣ ಮುಕ್ತಮಾರ್ಗದಿಂದ ಆತನ ಸಖರಾಗಬಹುದೆಂದೂ, ತಂದೆಯಾಗಬಹುದೆಂದೂ, ಮುಖ್ಯವಾಗಿ ಆತನ ಬಾಂಧವ್ಯವನ್ನು ಹೊಂದಬಹುದೆಂಬುದನ್ನು ಅವರು ಒತ್ತಿಹೇಳುತ್ತಾರೆ.

ದಾಸಪಂಥದಲ್ಲಿ ಕೃಷ್ಣನು ಅವತಾರಪುರುಷನಾಗಿ ತೋರುತ್ತಾನೆ. ಆತನಲ್ಲಿಯೇ 'ನೀನೇ ಅನಾಥಬಂಧು ಕಾರುಣ್ಯಸಿಂಧು' ಎಂದುಕೊಂಡು ತಮ್ಮ ಅನಾಥಪ್ರಜ್ಞೆಯನ್ನು ಹೋಗಲಾಡಿಸಿಕೊಳ್ಳುತ್ತಾರೆ. ಆ ಅವತಾರಪುರುಷನನ್ನು ಒಲಿಸಿಕೊಳ್ಳಲು ತಮ್ಮ ಮನದ ಮುಸುರೆಯನ್ನು ತೊಳೆದುಕೊಳ್ಳುತ್ತಾರೆ, ಮನವನ್ನು ಶೋಧಿಸಲು ಮುಂದಾಗುತ್ತಾರೆ. ಆದರೆ, ಚೈತನ್ಯಪಂಥವು ದೇವೋತ್ತಮನಲ್ಲಿ ಶರಣಾಗತಿಯನ್ನು ಕಂಡುಕೊಂಡು ಆತನನ್ನು ಭಕ್ತಿಪೂರ್ವಕವಾಗಿ ಪ್ರೀತಿಸಲು ಮುಂದಾಗುತ್ತದೆ. 'ದೇವೋತ್ತಮನಲ್ಲಿ ಪ್ರೇಮ'ವೆಂಬ ಪದಪ್ರಯೋಗವನ್ನು ನಾವು ಗಮನಿಸುವುದೇ ಚೈತನ್ಯಪಂಥದಲ್ಲಿ. ದೈವಪ್ರೇಮವನ್ನು ಹೇಗೆ ಮೈಗೂಡಿಸಿ ಕೊಳ್ಳಬಹುದೆಂಬುದನ್ನು ವೈಷ್ಣವ ಸಿದ್ಧಾಂತದಲ್ಲಿ ಹಾಗೂ ತಾತ್ವಿಕ ಜ್ಞಾನದ ಹಲವು ಧರ್ಮಗ್ರಂಥಗಳಲ್ಲಿ ಪ್ರತಿಪಾದಿಸಿದ್ದರೂ ಏಕಮೇವ ಹಾಗೂ ಅತ್ಯುನ್ನತ ದೈವಪ್ರೇಮದ ವ್ಯಾಖ್ಯಾನ ಸಿಗುವುದು ಚೈತನ್ಯ ಮಹಾಪ್ರಭುಗಳ ವಿಚಾರಧಾರೆಯಲ್ಲಿ. ಲೌಕಿಕಪ್ರಜ್ಞೆಯಲ್ಲಿ ಪ್ರೇಮಾರ್ಹವಲ್ಲದಿರುವುದನ್ನೇ ನಾವು ಪ್ರೇಮಿಸುತ್ತಿರುತ್ತೇವೆ.

ಆದರೆ ಕೃಷ್ಣನನ್ನು ಉದ್ದೇಶಿಸದ ಪ್ರೇಮವು ನಮ್ಮನ್ನು ಅಧಃಪತನಕ್ಕೆ ಇಳಿಸುತ್ತದೆ. ದೈವವೆಂಬುದು ಅಗೋಚರವಾಗಿದ್ದುಕೊಂಡು ಲಭ್ಯವಾಗುವ ವಸ್ತುವಲ್ಲ. ಪ್ರತಿಯೊಂದು ಧರ್ಮಗ್ರಂಥಗಳಲ್ಲೂ ಭಗವಂತನನ್ನು ಕುರಿತಾದ ಪ್ರೇಮೋನ್ಮಾದದ ಕಥೆಯಿದೆಯೆಂದು ಶ್ರೀಚೈತನ್ಯರು ಹೇಳುತ್ತಾರೆ. ಆದರೆ ಭಗವಂತನನ್ನು ಹೇಗೆ ಪ್ರೇಮಿಸಬೇಕೆಂಬುದನ್ನು ಆ ಧರ್ಮಗ್ರಂಥಗಳು ತಿಳಿಹೇಳುವುದಿಲ್ಲ ಎನ್ನುತ್ತಾರೆ. ಹಾಗಾಗಿ ಪರಮಪ್ರಭುವಾದ ಶ್ರೀಕೃಷ್ಣನನ್ನು ಪ್ರೇಮಿಯಾಗಿಯೂ ಕಲ್ಪಿಸಿಕೊಳ್ಳಬಹುದೆಂಬುದು ಚೈತನ್ಯರ ಅಭಿಮತ. ಈ ನಂಟಿನಲ್ಲಿ ಕೃಷ್ಣನು ಎಂತಹ ಪ್ರೇಮಮಯಿಯಾಗುತ್ತಾನೆ ಎಂದರೆ ವಿನಿಮಯ ತೋರಲಾರದಷ್ಟು ಅಸಹಾಯಕತೆಗೆ ಒಳಗಾಗುತ್ತಾನೆ. ಒಮ್ಮೆ ವೃಂದಾವನದ ಗೋಪಬಾಲೆಯರಿಗೆ 'ನಿಮ್ಮ ಪ್ರೇಮವನ್ನು ಹಿಂದಿರುಗಿಸಲಾರೆ. ಹಿಂದಿರುಗಿಸಲು ಬೇಕಾದಷ್ಟು ಸಂಪತ್ತೇ ತನ್ನಲ್ಲಿಲ್ಲ'ವೆಂಬ ಪರಮಪುರುಷನ ಸರಳ ಉತ್ತರವು ಇಲ್ಲಿ ಮೂಡಿಬರುತ್ತದೆ. ಇಲ್ಲಿಯ ಕೃಷ್ಣನು ಕೆಲವೊಮ್ಮೆ ಅಸಹಾಯಕತೆಗೆ ಗುರಿಯಾಗುವುದು ವಿಶೇಷವೆನಿಸುತ್ತದೆ.

ಕೃಷ್ಣನನ್ನು ಭಕ್ತನೋರ್ವನು ತನ್ನ ಮಗನಂತೆ ಕಾಣುವ ಸಾಹಿತ್ಯವಾಗಲೀ, ಪಂಥವಾಗಲೀ ಜಗತ್ತಿನಲ್ಲಿ ವಿರಳ. ದಾಸಪಂಥವು ಕೆಲವೊಂದು ಕಡೆಯಲ್ಲಿ ಕೃಷ್ಣನನ್ನು ಯಶೋದೆಯ ಮಗನಾಗಿ, ದೇವಕಿಯ ಕಂದನಾಗಿ ಸ್ತುತಿ ಮಾಡಿದ್ದಿದೆ. ಆದರೆ, ಚೈತನ್ಯರು ಕಂಡ ಕೃಷ್ಣನು, ಕೆಲವೊಮ್ಮೆ ಮಕ್ಕಳು ಕೇಳಿದ್ದನ್ನೆಲ್ಲ ಕೊಡುವ ಸರ್ವಶಕ್ತ ತಂದೆಯೂಗುತ್ತಾನೆ. ಇನ್ನೂ ಕೆಲವೊಮ್ಮೆ ಭಕ್ತರಾದ ತಂದೆತಾಯಿಯರಿಗೆ ಮಗನಾಗಿ ಬಿಡುತ್ತಾನೆ. ಬಾಂಧವ್ಯದ ನೆಲೆಯಲ್ಲೊಮ್ಮೆ ಕೃಷ್ಣನ ತಾಯಿಯಾದ ಯಶೋದೆಯು ಪ್ರಭುವಿಗೆ–'ಇಗೋ ನಾನು ಕೊಟ್ಟದ್ದನ್ನು ತಿನ್ನು, ಇಲ್ಲವೇ ನೀನು ಸಾಯುವೆ, ಚೆನ್ನಾಗಿ ತಿನ್ನು' ಎಂದು ಬೈಯುತ್ತಾಳೆ. ಹೀಗೆ, ಎಲ್ಲದರ ಒಡೆಯನಾದ ಕೃಷ್ಣನು ಭಕ್ತನ ಅನುಗ್ರಹವನ್ನು ಅವಲಂಬಿಸುತ್ತಾನೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಅಸಾಧಾರಣ ಮಟ್ಟದ ಸ್ನೇಹಭಾವದ ವಿಜೃಂಭಣೆಯನ್ನು, ಇಲ್ಲಿ ಭಕ್ತರು ಭಗವಂತನ ಪೋಷಕವರ್ಗಕ್ಕೆ ಸೇರಿಕೊಂಡು ಬಿಡುತ್ತಾರೆ.

ದಾಸಪಂಥವು ಕೃಷ್ಣನನ್ನು 'ಎಲ್ಲ ದೇವರ ವಲ್ಲಭನೆಂದು' ಕರೆದು ಬಿಡುತ್ತದೆ. ಅಲ್ಲದೆ,

ಸೃಷ್ಟಿಯ ಕರ್ತನೆಂದು ಜಗದೊಳಗೆ ।
ಶಿಷ್ಟ ಸಂತುಷ್ಟನೆಂದು ।
ದೃಷ್ಟಾಂತರಹಿತನೆಂದು ತೂಗಿದರು ।
ಕೃಷ್ಣಾವತಾರ ಹರಿಯ ॥ –ಶ್ರೀಪಾದರಾಯರು

ಎನ್ನುವ ಮೂಲಕ ಆತನನ್ನು ದಶಾವತಾರದಲ್ಲಿ ಒಬ್ಬನನ್ನಾಗಿ, ಅವತಾರ ಪುರುಷನನ್ನಾಗಿ ಕಾಣಲು ಮುಂದಾಗುತ್ತದೆ. ಆದರೆ ಚೈತನ್ಯಪಂಥವು ಕೃಷ್ಣನನ್ನು ಅವತಾರಪುರುಷನಾಗಿ ಕಾಣದಿರುವುದಕ್ಕೆ ವಿಶ್ವರೂಪದ ಸಂದರ್ಭವೊಂದನ್ನು ನೆನಪಿಸಿಕೊಳ್ಳುತ್ತದೆ. ವಿಸ್ಮಯಕರವಾದ ವಿಶ್ವರೂಪವನ್ನು ಅರ್ಜುನನು ಕಂಡಾಗ,

ಸಖೇತಿ ಮತ್ವಾ ಪ್ರಸಭಮ್‌ಯದ್ ಉಕ್ತಮ್ ಹೇ ಕೃಷ್ಣ ಹೇ ಯಾದವ ಹೇ ಸಖೇತಿ ।
ಅಜಾನತಾ ಮಹಿಮಾನಂ ತವೇದಮ್ ಮಯಾ ಪ್ರಮಾದಾತ್ ಪ್ರಣಯೇನ ವಾಪಿ ॥
ಯಚ್ಚಾವಹಾಸಾರ್ಥಮ್ ಅಸತ್ಕೃತೋಸಿ ವಿಹಾರ ಶಯ್ಯಾಸನ ಭೋಜನೇಷು ।

ಏಕೋಥವಾಪಿ ಅಚ್ಯುತ ತತ್ ಸಮಕ್ಷಮಮ್ ತತ್ ಕ್ಷಾಮಯೇ ತ್ವಾಮ್ ಅಹಮ್ ಅಪ್ರಮೇಯಮ್ ॥

ಎನ್ನುವ ಮಾತಿನಲ್ಲಿ, ಈ ಮೊದಲು ಕೃಷ್ಣನನ್ನು ಪ್ರೇಮಭಾವದಿಂದ ಸಖನನ್ನಾಗಿ ನೋಡಿದ್ದಕ್ಕೆ, ಒಂದೇ ಹಾಸಿಗೆಯಲ್ಲಿ ವಿರಮಿಸಿದ್ದಕ್ಕೆ, ಒಟ್ಟಾಗಿ ಉಣ್ಣುತ್ತಿದ್ದುದಕ್ಕೆ, ಗೆಳೆಯರ ಸಮ್ಮುಖದಲ್ಲಿ ಸಲುಗೆಯಿಂದ ಮಾತನಾಡಿಸಿದುದಕ್ಕೆ ಕ್ಷಮಾಪಣೆಯ ಕೇಳಿಕೆಯಿದೆ. ಆದರೆ ಈ ಕ್ರಮವೇ ಸೂಕ್ತವೆಂಬ ಉತ್ತರ ಕೃಷ್ಣನದ್ದು ಮತ್ತು ಚೈತನ್ಯಪಂಥದ್ದು. ಅಲ್ಲದೆ, ತಾಯಿ ಯಶೋದೆಯು ತನ್ನ ಕಂದನನ್ನು ಸಾಮಾನ್ಯ ಶಿಶುವೆಂದೆಣಿಸಿ, ಅವನನ್ನು ಹಗ್ಗದಿಂದ ಕಟ್ಟಿಹಾಕಿದಳಂತೆ. ಕೃಷ್ಣನು ಗೋವಳರೊಡನೆ ಆಟದಲ್ಲಿ ಸೋತಾಗ ಶ್ರೀದಾಮನನ್ನು ಭುಜಗಳ ಮೇಲೆ ಹೊತ್ತುಕೊಂಡು ತಿರುಗಿದನಂತೆ. ಹೀಗೆ ಭಾಗವತದ ಅದೆಷ್ಟೋ ಶ್ಲೋಕಗಳು ಕೃಷ್ಣನನ್ನು ಸಾಮಾನ್ಯ ವ್ಯಕ್ತಿಯಂತೆ ಭಾವಿಸಿಕೊಂಡಿರುವುದನ್ನು ಚೈತನ್ಯಪಂಥವು ನೆನಪಿಸಿಕೊಳ್ಳುತ್ತದೆ. ಮತ್ತು ತನ್ನ ತಾತ್ವಿಕತೆಗೆ ಅದನ್ನು ಒಳಪಡಿಸಿಕೊಳ್ಳುತ್ತದೆ.

ಹೀಗೆ ದಾಸಪಂಥವೊಂದು ಕರ್ನಾಟಕದಲ್ಲಿ ಹುಟ್ಟಿಬೆಳೆದು ಕೃಷ್ಣನನ್ನು ಅವತಾರಪುರುಷನನ್ನಾಗಿ ಕಂಡರೆ, ಸುಮಾರು ಅದೇ ಕಾಲದ ಹತ್ತಿರದಲ್ಲಿ ಬಂಗಾಳದಲ್ಲಿ ಹುಟ್ಟಿದ ಚೈತನ್ಯಪಂಥವು ಆತನನ್ನು ಅವತಾರಪುರುಷನಲ್ಲದ ರೀತಿಯಲ್ಲಿ ನೋಡುತ್ತದೆ.

೬.೪ : ರಾಧಾಮಾಧವ ಪ್ರೇಮ

'ರಾಧಾಮಾಧವ ಪ್ರೇಮ'ವೆನ್ನುವುದು ಉತ್ತರಭಾರತೀಯ ಪರಿಕಲ್ಪನೆ. ಅದು ದಕ್ಷಿಣಭಾರತದಲ್ಲಿ ಪ್ರಭಾವವನ್ನು ಬೀರಿದ್ದರೆ, ಅದನ್ನು ಉತ್ತರದ ಕೊಡುಗೆಯೆಂದೇ ಭಾವಿಸಬೇಕಾಗುತ್ತದೆ. ಇಲ್ಲಿ ರಾಧೆಯನ್ನು ಶ್ರೀಕೃಷ್ಣನ ಆತ್ಮಶಕ್ತಿಯ ರೂಪದಲ್ಲಿ ಮತ್ತು ಅಭಿನ್ನವಾಗಿ ಕಲ್ಪಿಸಿಕೊಂಡು ಉಪಾಸನೆ ಮಾಡುವಂತಹುದು ಹೊಸದು. ಬ್ರಹ್ಮವೈವರ್ತ ಪುರಾಣದ ಅನುವಾದದಲ್ಲಿ ಬಿ.ಎಸ್.ಕೃಷ್ಣಪ್ಪನವರು 'ನಿತ್ಯಗೋಲೋಕದಲ್ಲಿ ಮೂಲರಾಧೆಯು ಕೃಷ್ಣನ ವಾಮಭಾಗದಿಂದ ಆವಿರ್ಭವಿಸಿದಳೆಂದು'[೪] ಬರೆಯುತ್ತಾರೆ. ದಾಸಸಾಹಿತ್ಯ ದರ್ಶನದಲ್ಲಿ, 'ಉತ್ತರಭಾರತದ ರಾಧಾಕೃಷ್ಣಭಕ್ತಿಯೇ ಕರ್ನಾಟಕದ ಶಿವಶರಣೆಯಾದ ಅಕ್ಕಮಹಾದೇವಿಯ 'ಶರಣಸತಿ ಲಿಂಗಪತಿ' ಎಂಬ ಕಲ್ಪನಾಭಕ್ತಿಗೆ ಮೂಲವಾಯಿತು' ಎನ್ನುವ ಹೇಳಿಕೆಯೂ ಇದೆ.[೫] ಮುಖ್ಯವಾಗಿ ಈ ಕಲ್ಪನೆಯು ಬಂಗಾಲದಲ್ಲಿ ಹುಟ್ಟಿ, ಬಂಗಾಲದಲ್ಲೇ ಬೆಳೆದು, ಉತ್ತರಭಾರತದ ಇತರ ಕಡೆಗೆ ಅದು ವ್ಯಾಪಿಸಿತು. ಆದುದರಿಂದ ಆ ಕುರಿತಾದ ಅಧ್ಯಯನವು ಈ ಸಂದರ್ಭದಲ್ಲಿ ಮುಖ್ಯವೆಂದೆನಿಸುತ್ತದೆ.

ಶ್ರೀರಾಧಾಯಾಃ ಪ್ರಣಯ ಮಹಿಮಾ ಕೀದೃಶೋ ವಾನಯೈವಾ–
ಸ್ವಾದ್ಯೋ ಯೇನಾದ್ಭುತ ಮಧುರಿಮಾ ಕೀದೃಶೋ ವಾ ಮದೀಯಃ ।
ಸೌಖ್ಯಂ ಚಾಸ್ಯಾ ಮದ್‌ಅನುಭವತಃ ಕೀದೃಶಂ ವೇತಿ ಲೋಭಾತ್
ತದ್ ಭಾವಾಢ್ಯಃ ಸಮಜನಿ ಶಚೀಗರ್ಭಸಿನ್ಧೌ ಹರೀನ್ದುಃ ॥[೬]

(ರಾಧಾರಾಣಿಯ ಪ್ರೇಮದ ಮಹಿಮೆಯನ್ನು ಅರ್ಥ ಮಾಡಿಕೊಳ್ಳುವ ಅಪೇಕ್ಷೆಯು ಕೃಷ್ಣನಲ್ಲಿ ಹುಟ್ಟಿತು. ಅಲ್ಲದೆ ಸ್ವಯಂ ತನ್ನಲ್ಲಿನ ಅದ್ಭುತ ಗುಣಗಳನ್ನು ರಾಧೆಯು ಆಕೆಯ ಪ್ರೇಮದಿಂದ ಆಕೆ ಮಾತ್ರ ಆಸ್ವಾದಿಸುವ ಬಗೆಯನ್ನು ತಿಳಿಯುವ ಆಸೆಯೂ ಮೊಳೆತಿತು. ತಾನು ರಾಧೆಯಲ್ಲಿರಿಸಿರುವ ಪ್ರೇಮದಿಂದ ಆಕೆಗುಂಟಾಗುವ ಸುಖವು ಯಾವ ಬಗೆಯದು ಎಂದು ತಿಳಿದುಕೊಳ್ಳುವ ಬಯಕೆಯೂ ಮೂಡಿತು. ಈ ಎಲ್ಲ ಅಪೇಕ್ಷೆಗಳನ್ನು ಪೂರೈಸಿಕೊಳ್ಳಲು ಪರಮಪ್ರಭುವಾದ ಹರಿಯು ರಾಧೆಯ ಭಾವಗಳಿಂದ ಪರಿಪುಷ್ಟನಾಗಿ ಶಚೀದೇವಿಯ ಗರ್ಭದಲ್ಲಿ ಜನ್ಮ ತಾಳಿದನು. ಅದು ಶರಧಿಯಿಂದ ಚಂದ್ರನು ಉದಯಿಸಿದ ಹಾಗೆ ಎನ್ನುತ್ತದೆ ಚೈತನ್ಯ ಚರಿತಾಮೃತ).

ಪುರಾಣದಲ್ಲಿ ಬರುವ ರಾಧೆಗೆ ಚೈತನ್ಯಪಂಥದಲ್ಲೊಂದು ವಿಶಿಷ್ಟವಾದ ಸ್ಥಾನವಿದೆ. ಇಲ್ಲಿಯ ಸಾಹಿತ್ಯದಲ್ಲಿ ಮತ್ತು ತತ್ತ್ವಪ್ರತಿಪಾದನೆಯಲ್ಲಿ ಆಕೆಗೆ ಮೊದಲಸ್ಥಾನ. ಆಕೆ ಇಲ್ಲಿ ಕೇವಲ ರಾಧೆಯಲ್ಲ. ಆಕೆ ಇಲ್ಲಿ ಶ್ರೀಮತಿ ರಾಧಾದೇವಿಯಾಗಿ ಮೆರೆಯುತ್ತಾಳೆ. ಅಂತಹ ಶ್ರೀಮತಿ ರಾಧಾರಾಣಿಯು ವೃಂದಾವನದ ಸಮಸ್ತ ಚಟುವಟಿಕೆಗಳ ಕೇಂದ್ರಬಿಂದುವಾಗುತ್ತಾಳೆ. ಅಲ್ಲದೆ ಕೃಷ್ಣನಿಲ್ಲಿ ರಾಧಾರಾಣಿಯ ಕೈಗೊಂಬೆಯಾಗಿ ಬಿಡುತ್ತಾನೆ. ಆದ್ದರಿಂದ ವೃಂದಾವನದ ನಿವಾಸಿಗಳೆಲ್ಲರೂ ಆಕೆಯನ್ನು 'ಜಯರಾಧೆ'ಯೆಂದೇ ಸಂಕೀರ್ತಿಸುತ್ತಾರೆ.

ದಾಸಪಂಥದಲ್ಲಿ ಶ್ರೀಕೃಷ್ಣನು ಗೋಪಬಾಲಿಕೆಯರೊಂದಿಗೆ ರಾಸಲೀಲೆಯನ್ನು ತೋರಿದರೆ, ಬಂಗಾಳದ ಚೈತನ್ಯಪಂಥದಲ್ಲಿ ಶ್ರೀಕೃಷ್ಣನ ರಾಸಲೀಲೋತ್ಸವವು ರಾಧಾದೇವಿಯೊಂದಿಗೆ ನೆರವೇರುತ್ತದೆ. 'ಭಕ್ತಿರತ್ನಾಕರ'(ಜನೆಯ ಅಲೆ) ಎಂಬ ಕೃತಿಯ ಪ್ರಕಾರ ಬಂಗಾಳದ 'ಬಿಲಚು' ಮತ್ತು 'ಗೋಪಾಲಪುರ'ವೆಂಬ ಎರಡು ಗ್ರಾಮಗಳ ಮಧ್ಯದಲ್ಲಿ ಬರುವ 'ಗಾಂಟುಲೀ' ಎಂಬ ಗ್ರಾಮದಲ್ಲಿ ರಾಧೆ ಮತ್ತು ಕೃಷ್ಣರು ಮೊದಲು ಸಂಧಿಸಿದರೆಂದೂ, ಅವರಿಬ್ಬರೂ ತಮ್ಮ ಮೇಲಿನ ಉಡುಪುಗಳಿಂದ ಕಟ್ಟಿಕೊಂಡು ತಮ್ಮನ್ನು ಮುಚ್ಚಿಕೊಂಡರೆಂದು ವರ್ಣಿಸುತ್ತದೆ.

ರಾಧಾಕೃಷ್ಣ ವಿಕೃತಿರಸ್ಮಾತ್ ಏಕಾತ್ಮಾನಾಮಪಿ ಪುರಾದೇಹ ಭೇದಮ್ ಗತೌ ತೌ ।
ರಾಧಾಭಾವ ದ್ಯುತಿ ಸುವಲಿತ ನೌಮಿ ಕೃಷ್ಣ ಸ್ವರೂಪಮ್ ॥[೧೦]

ಇಲ್ಲಿಯ ರಾಧಾಕೃಷ್ಣ ಪ್ರಣಯಲೀಲೆಗಳು ಭಗವಂತನ ಇಂಗಿತದ ಹ್ಲಾದಿನಿ ಹಾಗೂ ಆನಂದದ ಅಭಿವ್ಯಕ್ತಿಗಳು. ಈ ಅಭಿವ್ಯಕ್ತಿಯುಲ್ಲಿ ಭೇದವಿಲ್ಲ, ಅಭೇದ ಎಲ್ಲ. ಇಲ್ಲಿ ಪರಮಪುರುಷನ ವಿವಿಧ ಶಕ್ತಿಯೊಂದಿಗೆ ಯೋಗಮಾಯೆಯ ವಿವಿಧ ಶಕ್ತಿಗಳಾದ, ಸಂವಿತ್(ಅಸ್ತಿತ್ವ ಶಕ್ತಿ), ಸಂಧಿನಿ(ಜ್ಞಾನ ಶಕ್ತಿ) ಮತ್ತು ಆಹ್ಲಾದಿನೀ(ಆನಂದ ಶಕ್ತಿ)ಗಳು ವೈವಿಧ್ಯತೆಯಲ್ಲಿ ಕಾರ್ಯವೆಸಗುತ್ತವೆ. ಇಲ್ಲಿಯ ಆಹ್ಲಾದಿನೀ ಶಕ್ತಿಯೇ ಶ್ರೀಮತಿ ರಾಧಾರಾಣಿಯಾಗಿ ಪರಿಣಮಿಸುತ್ತಾಳೆ.

ದಾಸಸಾಹಿತ್ಯದಲ್ಲಿ ಕೃಷ್ಣಪ್ರಣಯವೇನಿದ್ದರೂ ಅದು ಗೋಪಿಕೆಯರೊಂದಿಗೆ ನೆರವೇರುತ್ತದೆ. ಅಲ್ಲಿ 'ಅಂಗನೆಯರೆಲ್ಲ ನೆರೆದು...ಕಾಮಿನಿಯರೆಲ್ಲ ನೆರೆದು ಕಂದನಾಟಗಳನಾಡಿ ಪ್ರೇಮದಿಂದ ಬಿಗಿದಪ್ಪಿ ಮುದ್ದಾಡಿ' ಕೊಳ್ಳುತ್ತಾರೆ. ಇಲ್ಲಿಯ ಕೃಷ್ಣನು ಅದೆಷ್ಟೋ ಬಾರಿ ಗ್ರಾಮೀಣ ಪರಿಸರದ ಪಡ್ಡೆ ಹುಡುಗರಂತೆ ಕಾಣಿಸಿಕೊಳ್ಳುತ್ತಾನೆ. ವೃಂದಾವನದ ಗೋಪಬಾಲೆಯರಲ್ಲಿ ಸುಳ್ಳುಗಾರನಾಗಿಯೇ ತನ್ನ ತಂತ್ರಗಾರಿಕೆಯನ್ನು ತೋರಿಸುತ್ತಾನೆ. ಈ ತಂತ್ರದ ಸತ್ಯವನ್ನು ಅರಿತ ಮೇಲೆಯೂ ಆ ಗೋಪಿಕೆಯರಿಗೆ ಕೃಷ್ಣನೆಂದರೆ ಪಂಚಪ್ರಾಣವೇ ಆಗಿರುತ್ತದೆ.

ಎಸಳು ಕಂಗಳ ಕಾಂತಿ ....
ವಸ್ತುವ್ಯಾತಕೆ ಪರವಸ್ತುವೆ ನಾ ನಿನ್ನ
ಮೆಚ್ಚಿ ಬಂದೇನೆಂದಳು ।
ಭಕ್ತರ ಸಿರಿಕೃಷ್ಣ ಕುಕ್ಷಿಯೊಳಗೆ ಇಟ್ಟು
ರಕ್ಷಿಸು ಎಂದಳಾಕೆ ॥ – ವ್ಯಾಸರಾಯರು

ಆದರೆ ಚೈತನ್ಯಪಂಥ ಹೇಳುವ ರಾಧೆಯ ಪ್ರಣಯ ಪರಿಕಲ್ಪನೆಯು ದಾಸಸಾಹಿತ್ಯದಲ್ಲಿ ಗೋಚರವಾಗುವುದಿಲ್ಲ. ಅಲ್ಲಿಯ ರಾಧೆಯು ಕೃಷ್ಣನಷ್ಟೇ ಆಧ್ಯಾತ್ಮಿಕಳು. ಆಕೆಯನ್ನು ಇಹಲೋಕದವಳೆಂದು ಪರಿಗಣಿಸುವಂತಿಲ್ಲ. ಆಕೆಯು ಬದ್ಧಜೀವಿಗಳಂತೆಯೂ ಅಲ್ಲ. ಬದ್ಧಜೀವಿಗಳಿಗೆ ಐಹಿಕ ಇಂದ್ರಿಯಗಳಿರುತ್ತವೆ. ಇಲ್ಲಿ ರಾಧೆಯದ್ದು ಶುದ್ಧಾಂಗ. ಆಕೆಯ ದೇಹವು ಆಧ್ಯಾತ್ಮಿಕವಾದುದರಿಂದ ಆಕೆಯ ಇಂದ್ರಿಯಗಳೂ ಆಧ್ಯಾತ್ಮಿಕವಾಗಿರುತ್ತವೆ. ಆಕೆಯ ದೇಹ, ಮನಸ್ಸು ಹಾಗೂ ಇಂದ್ರಿಯಗಳು ಕೃಷ್ಣಪ್ರೇಮದಿಂದ ಬೆಳಗುತ್ತವೆ. ಕೃಷ್ಣನ ಸಂತೋಷವೇ ಆಕೆಯಿಂದ ಉಗಮಿಸುತ್ತದೆ. ಆದುದರಿಂದ ರಾಧೆ ಮತ್ತು ಕೃಷ್ಣರಿಬ್ಬರೂ ಸಮಾನಸ್ಕಂಧರು. ಕೃಷ್ಣನಿಂದ ಹೇಗೆ ಇತರ ಅವತಾರಗಳು ವಿಸ್ತರಣಾಂಶಗಳಾಗುವವೋ ಹಾಗೆಯೇ ರಾಧೆಗೂ ಕೂಡ ವೃಂದಾವನದ ಗೆಳತಿಯರು ವಿಸ್ತರಣೆಗಳೇ ಆಗುತ್ತಾರೆ. ಕೃಷ್ಣನ ಮಡದಿಯರಲ್ಲಿ ಐಶ್ವರ್ಯ ದೇವತೆಯರು, ರಾಣಿಯರು ಹಾಗೂ ವ್ರಜದ ಗೊಲ್ಲತಿಯರೆಂಬುವವರು ಸೇರಿದ್ದರೂ ಅವರಲ್ಲಿ ರಾಧೆಯೇ ಮುಖ್ಯಳಾಗುತ್ತಾಳೆ. ಕೃಷ್ಣನು ಇತರ ಅವತಾರಗಳಿಗೆ ಮೂಲವಾದಂತೆ, ರಾಧೆಯು ಕೃಷ್ಣನ ಇತರ ಮಡದಿಯರಿಗೆ ಮೂಲವಾಗುತ್ತಾಳೆ.

ಗೌಡೀಯ ಸಾಹಿತ್ಯವು ಹೇಳುವಂತೆ, ವ್ರಜಗೋಪಿಕೆಯರನ್ನು ಐದು ವಿಧವಾಗಿ ಕಾಣಬಹುದಂತೆ. ಅವರೆಂದರೆ, ೧. ಸಖಿಯರು, ೨. ನಿತ್ಯಸಖಿಯರು, ೩. ಪ್ರಾಣಸಖಿಯರು, ೪. ಪ್ರಿಯಸಖಿಯರು ಹಾಗೂ ೫. ಪರಮಶ್ರೇಷ್ಠಸಖಿಯರು. ಈ ಐವರೂ ಕೂಡ ಶ್ವೇತವರ್ಣೆಯರು. ಅಲ್ಲದೆ ವೃಂದಾವನದ ಸಾಮ್ರಾಜ್ಞಿಯ ಸಂಗಾತಿಗಳು. ಈ ಸಖಿಯರಿಗೆ ಕೃಷ್ಣನಲ್ಲಿ ಸುರತದ ಭಾವಗಳನ್ನು ಉತ್ಪಾದಿಸುವುದೇ ಮುಖ್ಯ ಕೆಲಸವಾಗಿರುತ್ತದೆ. ಇಲ್ಲಿಯ ಪರಮಶ್ರೇಷ್ಠ ಸಖಿಯರಲ್ಲಿ ಎಂಟುಮಂದಿ. ಇವರುಗಳು ರಾಧಾಕೃಷ್ಣರ ದೇವೋನ್ಮಾದದ ಲೀಲೆಯಲ್ಲಿ ಕೆಲವೊಮ್ಮೆ ಕೃಷ್ಣನ ಪರವಾಗಿಯೂ ಕೆಲವೊಮ್ಮೆ ರಾಧೆಯ ಪರವಾಗಿಯೂ ನಿಲ್ಲುತ್ತಾರೆ. ಈ ರೀತಿಯ ಪಕ್ಷ ಬದಲಾವಣೆಯಲ್ಲಿ ರಸವಿನಿಮಯದ ಆಸ್ವಾದನೆಯು ಸುಲಭಸಾಧ್ಯವೆನ್ನುವುದು ಮುಖ್ಯಗ್ರಹಿಕೆಯಾಗಿರುತ್ತದೆ.

ಇವರಿಬ್ಬರ ಪ್ರೇಮವಿನಿಮಯದಲ್ಲಿ 'ವಿಷಯ' ಹಾಗೂ 'ಆಶ್ರಯ' ಎನ್ನುವ ಎರಡು ಶಬ್ದಗಳು ಮಹತ್ವದ್ದಾಗುತ್ತವೆ. ಇಲ್ಲಿ ಭಕ್ತನನ್ನು 'ಆಶ್ರಯ'ನೆಂದೂ ಅವನ ಪ್ರೇಮದ ಶಕ್ತಿಯನ್ನು 'ವಿಷಯ'ವೆಂದೂ ಕರೆಯಲಾಗುತ್ತದೆ. ಆಶ್ರಯ ಹಾಗೂ ವಿಷಯಗಳ ಪ್ರೇಮ ವಿನಿಮಯದ ಘಟಕಾಂಶಗಳನ್ನು 'ವಿಭಾವ', 'ಅನುಭಾವ', 'ಸಾತ್ವಿಕ' ಹಾಗೂ 'ವ್ಯಭಿಚಾರೀ' ಎಂದು ಹೇಳಲಾಗುತ್ತದೆ. ಒಟ್ಟನಲ್ಲಿ ಇಲ್ಲಿಯ ಪ್ರಣಯ ವ್ಯವಹಾರದಲ್ಲಿ ರಾಧಾರಾಣಿಯು 'ಆಶ್ರಯ'ದ ಲಕ್ಷಣಗಳನ್ನುಳ್ಳವಳಾಗಿಯೂ ಕೃಷ್ಣನು 'ವಿಷಯ'ದ

ಲಕ್ಷಣಗಳನ್ನುಳ್ಳವನಾಗಿಯೂ ತೋರಿಬರುತ್ತಾರೆ. ಹೀಗಿದ್ದರೂ ಇದು ಲೌಕಿಕ ಪ್ರೇಮವಲ್ಲ. ಅದು ಆಧ್ಯಾತ್ಮಿಕವಾದುದು.

ಕಾಮ ಪ್ರೇಮ ದೋಂಗ್‌ಹಾಕಾರ ವಿಬಭಿನ್ನ ಲಕ್ಷಣ ।
ಲೌಹ ಆರ ಹೇಮ ಯ್ಯೆಥೇ ಸ್ವರೂಪೇ ವಿಲಕ್ಷಣ ॥[೧೧]

ಇಲ್ಲಿ ಕಾಮಲೋಲುಪತೆಗೂ ಪರಿಶುದ್ಧ ಪ್ರೇಮಕ್ಕೂ ವ್ಯತ್ಯಾಸವಿದೆ. ಲೌಕಿಕ ವ್ಯಕ್ತಿಯು ತನ್ನ ಸ್ವಂತದ ಇಂದ್ರಿಯಗಳ ತೃಪ್ತ್ಯಾರ್ಥವಾಗಿ ಗಳಿಸುವುದೆಲ್ಲವೂ ವಿಷಯಾಭಿಲಾಷೆಯಿಂದ ಕೂಡಿದ ಕಾಮವೆನಿಸುತ್ತದೆ. ಆದರೆ ಪರಮಪುರುಷನೆನಿಸಿದ ಶ್ರೀಕೃಷ್ಣನು ತನ್ನ ಇಂದ್ರಿಯಗಳ ತೃಪ್ತ್ಯಾರ್ಥವಾಗಿ ಮಾಡುವುದೆಲ್ಲವೂ ಪ್ರೇಮವೆಂದೆನಿಸುತ್ತದೆ. ಪ್ರೇಮಕ್ಕೆ ಆಶ್ರಯ ನೀಡುವ ಸ್ಥಾನದಲ್ಲಿದ್ದ ಗೋಪಿಯರು ಅಂತಹ ಪರಿಶುದ್ಧಪ್ರಣಯದಲ್ಲಿ ಇಲ್ಲಿ ಕಟ್ಟುಬೀಳುತ್ತಾರೆ. ಯಾವುದೇ ಕಾರಣಕ್ಕೂ ಕಾಮಾಸಕ್ತಿಯನ್ನು ಆಧರಿಸಿದ ಇಂದ್ರಿಯಪೇಕ್ಷೆಯ ಮೇಲುಗೈ ಪಡೆದಿದ್ದ ಪ್ರೇಮದ ಪ್ರಶ್ನೆಯೇ ಇಲ್ಲಿ ಉದ್ಭವಿಸುವುದಿಲ್ಲ. ಕೃಷ್ಣನು ಸರ್ವರೀತಿಯಲ್ಲಿಯೂ ಸುಖವಾಗಿರುವುದನ್ನು ಕಾಣುವುದು ಗೋಪಿಯರ ಮುಖ್ಯಕಾರ್ಯಕ್ರಮವಾಗುತ್ತದೆ. ಇಲ್ಲಿ ಅವರಿಗೆ ಸ್ವಂತದ ಹಿತಾಸಕ್ತಿಗಳ ಬಾಧೆಯಿಲ್ಲ. ಗೋಪಿಯರು ಕೇವಲ ತಮ್ಮ ಆತ್ಮಗಳನ್ನು ದೇವೋತ್ತಮನೆನಿಸುವ ಶ್ರೀಕೃಷ್ಣನಿಗೆ ಸಮರ್ಪಿಸಿಕೊಂಡು ಬಿಟ್ಟಿರುತ್ತಾರೆ. ಹಾಗಾಗಿ ಕೃಷ್ಣ ಹಾಗೂ ರಾಧೆಯರ ಪ್ರೇಮಲೀಲೆ ಪರಿಶುದ್ಧವೆನಿಸುತ್ತದೆ.

ಕೃಷ್ಣಪ್ರೇಮವೆನ್ನುವುದು ಪಾರಮಾರ್ಥಿಕವಾದುದು. ಲೌಕಿಕದ ಪ್ರೇಮವಾದರೆ, ವಿಷಯಸುಖದ ಗುರಿಯಲ್ಲಿ ಇಂದ್ರಿಯಗಳು ತಣ್ಣಗಾಗುತ್ತವೆ. ಆದರೆ ಪಾರಮಾರ್ಥಿಕವೆನಿಸುವ ಕೃಷ್ಣಪ್ರೇಮವು ಅತಿಯಾದ ಸಂತೋಷವನ್ನು ಸಾಧಿಸುತ್ತದೆ.

ಲೋಕಧರ್ಮ ವೇದಧರ್ಮ ದೇಹಧರ್ಮ ಕರ್ಮ ।
ಲಜ್ಜಾ ಧೈರ್ಯ ದೇಹಸುಖ ಆತ್ಮಸುಖ ಮರ್ಮ ॥
ದುಸ್ತ್ಯಜ ಆರ್ಯಪಥ ನಿಜ ಪರಿಜನ ।
ಸ್ವ–ಜನೇ ಕರಯೇ ಯತ ತಾಡನ ಭರ್ತ್ಸನ ॥
ಸರ್ವತ್ಯಾಗ ಕರಿ ಕರೇ ಕೃಷ್ಣೇರ ಭಜನ ।
ಕೃಷ್ಣ ಸುಖ ಹೇತು ಕರೇ ಪ್ರೇಮ ಸೇವನ ॥[೧೨]

ಲೌಕಿಕದಲ್ಲಿ ಸಾಮಾಜಿಕಪದ್ಧತಿ, ಧರ್ಮಗ್ರಂಥಗಳ ಆದೇಶ, ದೈಹಿಕ ಬಯಕೆ, ಕಾಮ್ಯಕರ್ಮ, ಲಜ್ಜೆ, ತಾಳ್ಮೆ, ದೈಹಿಕಸುಖ, ವರ್ಣಾಶ್ರಮಧರ್ಮ ಈ ಮೊದಲಾದವುಗಳನ್ನು ತ್ಯಜಿಸುವ ಕ್ರಮಮಾತ್ರ ತೀರ ಕಷ್ಟಕರವಾದುದು. ಆದರೆ ಕೃಷ್ಣನ ಸೇವೆಗೋಸ್ಕರವಾಗಿ ರಾಧೆ ಹಾಗೂ ಆಕೆಯ ವಿಸ್ತರಣಾಂಶಗಳೆನಿಸುವ ಗೋಪಿಕೆಯರು ಅವೆಲ್ಲವನ್ನೂ ತ್ಯಜಿಸಿದ್ದಾರೆ. ಅಷ್ಟೇ ಅಲ್ಲದೆ, ತಮ್ಮ ಬಂಧುಬಾಂಧವರನ್ನು ಮರೆಯುತ್ತಾರೆ. ನೆಂಟರಿಷ್ಟರು ಮಾಡಿದ ನಿಂದೆಯನ್ನು ಸಹಿಸಿಕೊಂಡಿದ್ದಾರೆ. ವಿಧಿಸಿದ ಶಿಕ್ಷೆಗಳನ್ನು ಅಲಕ್ಷಿಸಿದ್ದಾರೆ. ಇದು ರಾಧೆಯನ್ನು ಒಳಗೊಂಡಂತೆ ಎಲ್ಲಾ ಗೋಪಿಯರು ಕೃಷ್ಣಪ್ರೇಮಕ್ಕಾಗಿ ತಮ್ಮನ್ನು ಪರಿಶುದ್ಧ ಹೃದಯದೊಂದಿಗೆ ಸಿದ್ಧಗೊಳಿಸಿಕೊಂಡ ರೀತಿ. ಇದನ್ನು

ಚೈತನ್ಯಪಂಥವು 'ದೃಢ ಕೃಷ್ಣಪ್ರೇಮ' ಎಂದು ಕರೆಯುತ್ತದೆ. ಚೈತನ್ಯ ಚರಿತಾಮೃತದ ಲೇಖಕರಾದ ಕೃಷ್ಣದಾಸ ಕವಿರಾಜ ಗೋಸ್ವಾಮಿಯವರು ಕೂಡ ಇತರರೆಲ್ಲರೂ ಗೋಪಿಯರಂತೆ ಇಂದ್ರಿಯತುಷ್ಟಿಯ ಕಾರ್ಯಗಳನ್ನು ಬಿಟ್ಟುಕೊಟ್ಟು ತಮ್ಮನ್ನು ಸಂಪೂರ್ಣವಾಗಿ ಪರಮಪುರುಷನ ಸಂಕಲ್ಪಕ್ಕೆ ಒಪ್ಪಿಸಿಕೊಳ್ಳಬೇಕೆಂದು ಅರಿಕೆಮಾಡಿಕೊಳ್ಳುತ್ತಾರೆ.

ಚೈತನ್ಯಪಂಥದ ರಾಧಾಕೃಷ್ಣಪ್ರೇಮವೆಂಬ ಪರಿಕಲ್ಪನೆಯಲ್ಲಿ ರಾಧೆ ಹಾಗೂ ಗೋಪಿಯರ ಚೆಲುವನ್ನು ಕೃಷ್ಣನು ನೋಡಿದಾಗ ಆತನ ಚೆಲುವು ವೃದ್ಧಿಸುತ್ತದೆ. ಅಂತೆಯೇ ಕೃಷ್ಣನ ಚೆಲುವನ್ನು ರಾಧೆ ಹಾಗೂ ಗೋಪಿಯರು ನೋಡಿದಾಗಲೂ ಅವರ ಚೆಲುವು ಹೆಚ್ಚಾಗುತ್ತದೆ. ಇಲ್ಲಿ ರಾಧೆಯ ಲಾವಣ್ಯವೆನ್ನುವುದು ಕೃಷ್ಣನ ಆನಂದಕ್ಕೊಂದು ಕಾರಣ. ಆದರೆ ಇಂತಹ ಪ್ರೇಮವ್ಯವಹಾರಗಳು ಪ್ರಾಪಂಚಿಕರ ದೃಷ್ಟಿಯಲ್ಲಿ ಲೌಕಿಕ ಶೃಂಗಾರವೆಂಬ ರೀತಿಯಲ್ಲಿ ತಪ್ಪಾಗಿ ತೋರಬಹುದು. ಆದರೆ ಇದು ಯಾವ ರೀತಿಯಲ್ಲೂ ಲೌಕಿಕವಲ್ಲ. ಏಕೆಂದರೆ ಕೃಷ್ಣನನ್ನು ತೃಪ್ತಿಪಡಿಸಬೇಕೆನ್ನುವ ರಾಧೆಯ ದೈವೀಪ್ರೇಮದ ಛಾಯೆಯಲ್ಲಿ ಲೌಕಿಕತೆಯ ವಿಮುಖತೆಯಿದೆ. ಆ ನಿಷ್ಕಾಮಪ್ರೇಮಕ್ಕೆ ಕೆಳಗಿನ ಶ್ಲೋಕವು ಕನ್ನಡಿ ಹಿಡಿಯುತ್ತದೆ.

ಉಪೇತ್ಯ ಪಥಿ ಸುನ್ದರೀ ತತಿಭಿರ್ಆಭಿರ್ ಅಭ್ಯರ್ಚಿತಂ
ಸ್ಮಿತಾಂಕುರ ಕರಂಬಿತೈರ್ ನಟದ್ ಅಪಾಂಗ ಭಂಗೇ ಶತೈಃ ।
ಸ್ತನಸ್ತವಕ ಸಂಚರನ್ ನಯನ ಚಂಚರೀಕಾಂಚಲಂ ।
ವ್ರಜೇ ವಿಜಯಿನಂ ಭಜೇ ವಿಪಿನ ದೇಶತಃ ಕೇಶವಂ ॥[೧೩]

(ವ್ರಜದ ಅರಣ್ಯದಿಂದ ಹಿಂದಿರುಗಿ ಬರುತ್ತಿರುವ ಪ್ರಭುಕೇಶವನನ್ನು ನಾನು ಪೂಜಿಸುತ್ತೇನೆ. ಅವನನ್ನು ಗೋಪಿಯರು ಪೂಜಿಸುತ್ತಾರೆ. ಅವನನ್ನು ನೋಡಲೆಂದು ತಮ್ಮ ಅರಮನೆಗಳ ಉಪ್ಪರಿಗೆಗಳ ಮೇಲೆ ಹತ್ತಿ ನಿಲ್ಲುತ್ತಾರೆ. ಅಲ್ಲದೆ ನೂರಾರು ರೀತಿಯ ನಾಟ್ಯಮಯ ನೋಟಗಳಿಂದ ಹಾಗೂ ಮೃದು ಮಂದಹಾಸದಿಂದ ಕೇಶವನನ್ನು ಮಾರ್ಗಮಧ್ಯದಲ್ಲಿ ಸಂಧಿಸುತ್ತಾರೆ. ಇತ್ತ ಕೇಶವನ ಕುಡಿಗಣ್ಣ ನೋಟವು ಕರಿಯಬಣ್ಣದ ದೊಡ್ಡ ದೊಡ್ಡ ಭೃಂಗಗಳಂತೆ ಗೋಪಿಯರ ಸ್ತನಗಳ ಮೇಲೆ ಹರಿಯುತ್ತದೆ.)

ಚೈತನ್ಯಪಂಥದ ಸಾಹಿತ್ಯದಲ್ಲಿ 'ರಾಧಾಕೃಷ್ಣ ಪ್ರಣಯ ವಿಕೃತಿರ್ ಹ್ಲಾದಿನೀ ಶಕ್ತಿರಸ್ಮಾತ್'[೧೪] ಎಂದಿದೆ. ಇಲ್ಲಿ ರಾಧೆ ಮತ್ತು ಕೃಷ್ಣರಿಬ್ಬರೂ ಒಬ್ಬರೇ ಆಗಿರುತ್ತಾರೆ. ಪರಮಪುರುಷನಾದ ಶ್ರೀಕೃಷ್ಣನು ತನ್ನ ಆಹ್ಲಾದಿನೀಶಕ್ತಿಯನ್ನು ವಿಸ್ತರಿಸುತ್ತಾ ರಾಧಾರಾಣಿಯೇ ಆಗಿ ಬಿಡುತ್ತಾನೆ. ತನ್ನ ಕೋಮಲ ಹೃದಯವನ್ನು ಸ್ತ್ರೀರೂಪಗೊಳಿಸುತ್ತಾನೆ. ಹಾಗಾಗಿ ಇಲ್ಲಿ ರಾಧೆಯೇ ಕೃಷ್ಣನ ಶಕ್ತಿ. ಪರಮಪುರುಷನಾದ ಶ್ರೀಕೃಷ್ಣನೇ ಆ ಶಕ್ತಿಗೆ ಆಕರರೂಪ. ಶಕ್ತಿಯಿಲ್ಲದೆ ಶಕ್ತಿವಂತನಿಲ್ಲ; ಶಕ್ತಿವಂತನಿಲ್ಲದೆ ಶಕ್ತಿಯಿಲ್ಲ. ಕೃಷ್ಣನಿಲ್ಲದೆ ರಾಧೆಯಿಲ್ಲ, ರಾಧೆಯಿಲ್ಲದೆ ಕೃಷ್ಣನಿಲ್ಲ. ಆದುದರಿಂದಲೇ ಅದೊಂದು ಅಭಿನ್ನ, ಅಭೇದವೆನಿಸುವ ಪ್ರೇಮ. ಅಲ್ಲದೆ ಇದೊಂದು ಪ್ರೇಮವಿನಿಮಯದ ಅವಿನಾಶೀನಿಯಮದ ಪ್ರೇಮವಾಗುತ್ತದೆ. ಗೌಡೀಯ ವೈಷ್ಣವಸಂಪ್ರದಾಯದಲ್ಲಿ ಮೊದಲಿಗೆ ರಾಧೆಗೆ ನಮಿಸಿ, ಅನಂತರದಲ್ಲಿ ಶ್ರೀಕೃಷ್ಣನನ್ನು ಪೂಜಿಸುವ ಪದ್ಧತಿ ಬೆಳೆದುಕೊಂಡು ಬಂದಿದೆ. ಇಲ್ಲಿ ಶಕ್ತಿವಂತನಿಗಿಂತಲೂ ಮೊದಲು ಶಕ್ತಿ ಆರಾಧನೆಗೆ ಹೆಚ್ಚು ಮನ್ನಣೆ ಸಿಗುತ್ತದೆ.

ರಾಧೆಯ ಕುರಿತಾದ ಸುಂದರ ಪ್ರೇಮೋನ್ಮಾದವನ್ನು ದಾಸಪಂಥದಲ್ಲಿ ಹೆಚ್ಚಾಗಿ ಕಾಣಲು ಸಾಧ್ಯವಿಲ್ಲ. ಅಲ್ಲಿ 'ಯಾದವರಾಯ ಬೃಂದಾವನದೊಳು ವೇಣುನಾದವ ಮಾಡುತಿರೆ, ರಾಧೆ ಮುಂತಾದ ಗೋಪಿಯರೆಲ್ಲ ಮಧುಸೂದನ ನಿಮ್ಮನು ಸೇವಿಸುತಿರೆ'(ಕನಕದಾಸ), ಕಾದನು ವತ್ಸವ ಹರಿ ಕಾದನಾ, ವೇದವೇದ್ಯ ಸಾಧುವಿನುತ ರಾಧಿಕಾರಮಣ ಕೃಷ್ಣ'(ವಿಜಯದಾಸರು) ಇವರಿಬ್ಬರ ಎರಡು ಕೀರ್ತನೆಗಳಲ್ಲಿಯೇ ರಾಧಾಸ್ತುತಿ ಮುಗಿಯುತ್ತದೆ. ಉಳಿದವರಾರೂ ರಾಧೆಯ ಕುರಿತು ಪ್ರಸ್ತಾವಿಸುದೇ ಇಲ್ಲ. ಅವರಿಗೆ ಗೋಪಿಯರೇ ಮುಖ್ಯರಾಗುತ್ತಾರೆ. ಅಲ್ಲಿಯ ದಾಸರಿಗೆ ಕೃಷ್ಣನು ಪುರಾಣಪುರುಷನಾದರೂ ಆತನ ಕಿಲಾಡಿತನ, ಗೋಪೀವಸ್ತ್ರಾಪಹರಣವನ್ನು ವರ್ಣಿಸುವಾಗ ಗ್ರಾಮೀಣ ಭಾಷಾಶೈಲಿಯೊಂದಿಗೆ ಗ್ರಾಮೀಣ ಚಿತ್ರವೊಂದು ಎದುರಾಗುತ್ತದೆ.

ಓರಗೆ ಹೆಂಗಳು ನಾವು ಸೀರೆ ಬಿಚ್ಚಿ ದಡದಲಿಟ್ಟು
ನೀರಾಟವಾಡಲಿಕೆಂದು ಸರವ ಧುಮುಕಿದೆವೆ ।
ಚೋರ ನಿನ್ನಯ ಕಂದ ಸೀರೆಗಳ ಕೊಂಡು ಹೋಗಿ
ತೋರದುಂಚ ಕಡಹದ ಮರವೇರಿ ನೋಡುತ್ತ ನಿಂತನೋಡು ॥ –ಕನಕದಾಸರು

ಈ ಕನಕದಾಸರ ಕೀರ್ತನೆಯ ಮುಂಗಡೆಯಲ್ಲಿ ಬರುವ 'ಕಿಟ್ಟನ ಕೈಚಳಕವೆಂದು', 'ಕೊಂಬೇಲಿ ಕುಂತಿರುವ ಪುಟ್ಟನ್ನ', 'ಪಗಡೆಕಾಯಿ ಕುಚದ ದಗಡಿಯರೆ ಪುಗಡಿ ಹಾಕಿರೆನ್ನ ಮುಂದೆ' ಮೊದಲಾದ ಪ್ರಯೋಗಗಳು ಗ್ರಾಮೀಣ ಚಿತ್ರವನ್ನು ನಮ್ಮ ಕಣ್ಣಮುಂದೆ ಕಟ್ಟಿಬಿಡುತ್ತದೆ. ಇಲ್ಲಿ ನೀರಾಟವಾಡುವ ಯಮುನೆಯು ಕಣ್ಣಮುಂದೆ ಬಾರದೆ, ಹಳ್ಳಿಯ ಕೊಳವೊಂದರ ಚಿತ್ರವೊಂದು ನಿರ್ಮಾಣವಾಗುತ್ತದೆ. ಅಲ್ಲದೆ, 'ಸೆರಗಬಿಡೋ ರಂಗ ಸೆರಗಬಿಡೋ', 'ಅತ್ತೆ ಕಂಡರೆ ಎನ್ನ ಹತ್ತಿರ ಸೇರಳು ಮಾವ ಕಂಡರೆ ಎನ್ನ ಮಾನವ ಕಳೆವ', 'ಮೆಲ್ಲಮೆಲ್ಲನೆ ಬಂದು ಗಲ್ಲಕ್ಕೆ ಮುತ್ತಕೊಟ್ಟು' ಈ ಮುಂತಾದ ಪ್ರಯೋಗಗಳು ದಾಸಪಂಥದಲ್ಲಿ ಸಿಗುವ ಮಧುರವಾದ ಭಕ್ತಿಗೀತೆಗಳು.

ಭಾರತೀಯ ಭಕ್ತಿಪಂಥದಲ್ಲಿ ಕೃಷ್ಣಪ್ರೇಮಕ್ಕೆ ವಿಶೇಷತೆ ಹೆಚ್ಚು. ಈ ನೆಲೆಯಲ್ಲಿ ಚೈತನ್ಯಸಾಹಿತ್ಯಕ್ಕೆ ಸಂಬಂಧಿಸಿದಂತೆ 'ವೇದಾಂತ ದರ್ಶನ' ಎಂಬ ಕೃತಿಯು "ಕೃಷ್ಣನ ಪ್ರೇಮಕ್ಕೆ ಇಬ್ಬರು ಪ್ರತಿಸ್ಪರ್ಧಿಗಳು. ರಾಧಾರಾಣಿ ಮತ್ತು ಚಂದ್ರಾವಳಿಯರೇ ಆ ಇಬ್ಬರು. ಅವರಿಬ್ಬರನ್ನು ಹೋಲಿಸಿದಾಗ ರಾಧಾರಾಣಿಯು ಮೇಲಾದವಳೆಂದು" ಸಾರುತ್ತದೆ.[೪] ಚೈತನ್ಯಸಾಹಿತ್ಯ ತಿಳಿಸುವಂತೆ ಕೃಷ್ಣಪ್ರೇಮಕ್ಕಾಗಿ ರಾಧೆಯು ಕುರುಕ್ಷೇತ್ರದಲ್ಲಿ ಕಾಯುತ್ತಾಳೆ. ಕೃಷ್ಣನನ್ನು ಸಂಧಿಸಬೇಕೆಂಬ ವಾಂಛೆಯು ರಾಧೆಯದ್ದು. ಅದರ ಈಡೇರಿಕೆಗಾಗಿ ಹರಿಯುವ ಯಮುನಾನದಿಯೆಡೆ ಆತನನ್ನು ಕರೆದೊಯ್ಯುತ್ತಾಳೆ. ಅಂತೆಯೇ ಅಲ್ಲಿಯ ನದಿದಡದ ಮರಗಳ ಮಧ್ಯೆ ವಿರಮಿಸುತ್ತಾರೆ. ಕೃಷ್ಣನ ಮುರಳಿಯ ಪಂಚಮದಿಂಚರವು ರಾಧೆಯ ಮನಸ್ಸನ್ನು ಇನ್ನಷ್ಟು ಮಧುರಗೊಳಿಸುತ್ತದೆ. ಆದರೆ ಇಂತಹ ಪ್ರೇಮೋನ್ಮಾದವು ದಾಸಸಾಹಿತ್ಯದಲ್ಲಿದ್ದರೂ, ಅದು ರಾಧೆಯ ಮೂಲಕವಾಗಿ ಮಾತ್ರ ಗೋಚರವಾಗುವುದಿಲ್ಲ. ಕರ್ನಾಟಕದ ದಾಸರಿಗೆ ರಾಧೆಯ ಪರಿಚಯವು ಇಲ್ಲವಾಗುತ್ತದೆ. ಹಾಗೆಂದು ಹೇಳಿ

ಪ್ರೇಮಾಲಾಪವಿಲ್ಲವೆಂದಲ್ಲ. ಪುರಂದರದಾಸರಂತೂ 'ಕೇಳನೋ ಹರಿ ತಾಳನೋ, ತಾಳಮೇಳಗಳಿದ್ದು ಪ್ರೇಮವಿಲ್ಲದ ಪೂಜೆ' ಎನ್ನುವ ಮೂಲಕ ಪೂಜೆಯಲ್ಲಿ ಪ್ರೇಮವನ್ನು ಕಾಣುತ್ತಾರಾದರೂ ಅದು ಚೈತನ್ಯಪಂಥದಂತಲ್ಲ. ದಾಸರಿಗೆ ಗೋಪೀಕೃಷ್ಣನಾದರೆ ಚೈತನ್ಯರಿಗೆ ರಾಧಾಕೃಷ್ಣ. ಭಕ್ತೋತ್ತಮಳಾದ ಶ್ರೀಮತಿ ರಾಧೆಯ ಉತ್ಕಟಭಕ್ತಿಯ ಮಧುರಭಾವವನ್ನು ಅಸ್ವಾದಿಸಲು ಪರಮಪುರುಷನಾದ ಶ್ರೀಕೃಷ್ಣನಿಲ್ಲಿ ಶ್ರೀಚೈತನ್ಯ ಮಹಾಪ್ರಭುಗಳ ರೂಪದಲ್ಲಿ ಅವತರಿಸುತ್ತಾನೆ.

ಇಲ್ಲಿ ದಾಸಪಂಥವು ಹೆಚ್ಚಾಗಿ ಕಂಡರಿಯದ ರಾಧಾದೇವಿಯ ವಿಶಿಷ್ಟಗುಣಗಳನ್ನು ಚೈತನ್ಯಪಂಥವು ಕಾಣುವಂತಾಗುತ್ತದೆ. ಚೈತನ್ಯ ಚರಿತಾಮೃತವು ಹೇಳುವಂತೆ, 'ಇಲ್ಲಿ ರಾಧೆಯೇ ಐಶ್ವರ್ಯದೇವತೆ. ಆಕೆಯ ಆಂಶಿಕ ಅಭಿವ್ಯಕ್ತಿಗಳು ಮುತ್ತು ದ್ವಾರಕೆಯ ಇತರ ರಾಣಿಯರೆಲ್ಲರೂ ಪ್ರತಿಬಿಂಬಗಳು. ವೃಂದಾವನದ ಗೋಪಿಕೆಯರೆಲ್ಲ ಆಕೆಯ ದೇಹದ ವಿಸ್ತರಣಾಂಶಗಳು. ಇಲ್ಲಿ ಪರಮೋನ್ನತಳಾದ ರಾಧೆಯೇ ದೈವತ್ವದ ಕೇಂದ್ರಬಿಂದು. ಆಕೆ ಕೇವಲ ವ್ರಜಭೂಮಿಯ ಗೋಪಿಯಾಗಿ ಕಾಣದೆ, ಕೃಷ್ಣನ ಪ್ರೇಯಸಿಯರಲ್ಲಿ ಒಬ್ಬಳಾಗಿ ತೋರದೆ, ಸರ್ವಾಕರ್ಷಕನ ಆಕರ್ಷಕ ಆದ್ಯಶಕ್ತಿಯಾಗಿ ಪರಿಣಮಿಸುತ್ತಾಳೆ. ಅಂದರೆ ಶಕ್ತಿಯು ಶಕ್ತಿವಂತನ ಅಂತರ್ಯದಲ್ಲಿರುತ್ತದೆ. ಯಾವಾಗ ಕೃಷ್ಣನು ಸಂತೋಷವನ್ನು ಅನುಭವಿಸಲು ಇಚ್ಛಿಸುತ್ತಾನೋ ಆಗ ಅವನು ರಾಧಾರಾಣಿಯಾಗಿ ಆವಿರ್ಭವಿಸುತ್ತಾನೆ. ಬಹುಶಃ ರಾಧಾಕೃಷ್ಣರ ಪರಮೋನ್ನತ ಪ್ರೇಮಲೀಲೆಯನ್ನು ಲೌಕಿಕಜನತೆಯು ತಪ್ಪಾಗಿ ಗ್ರಹಿಸಬಹುದೆಂಬ ಭಾವನೆಯಿಂದಲೋ ಏನೋ ದಾಸಸಾಹಿತ್ಯಾದಿ ಇತರ ದಕ್ಷಿಣದ ಕವಿಗಳು ಇವರ ಪ್ರೇಮೋನ್ಮಾದವನ್ನು ತಿಳಿಸುವಲ್ಲಿ ಮೌನತಳೆದಿದ್ದಾರೆ.

ರಾಮ, ವಿಷ್ಣು, ಶಿವ ಮೊದಲಾದವರುಗಳೆಲ್ಲ ಶ್ರೀಕೃಷ್ಣನ ವಿಸ್ತರಣೆಗಳಾಗಿರುವಂತೆ, ಸೀತಾ, ಲಕ್ಷ್ಮೀ, ಪಾರ್ವತಿ ಮೊದಲಾದ ಭಾಗ್ಯದೇವತೆಗಳೆಲ್ಲ ರಾಧಾರಾಣಿಯ ವಿಸ್ತರಣೆಗಳೆಂದು ಚೈತನ್ಯಪಂಥವು ಹೇಳುತ್ತದೆ. ಸಮಸ್ತ ಲಕ್ಷ್ಮಿಯರೂ ರಾಧೆಯ ಉಜ್ವಲಶರೀರದಿಂದಲೇ ಕಾಂತಿಯನ್ನು ಪಡೆದರೆ, ಶ್ರೀಕೃಷ್ಣನ ಎಲ್ಲಾ ಕಾಮನೆಗಳು ರಾಧಾರಾಣಿಯ ರೂಪದಲ್ಲಿ ಸುಪ್ತವಾಗಿರುತ್ತದೆಂದು ಈ ಪಂಥವು ಸಾರುತ್ತದೆ. ಭಗವಂತನು ತನ್ನ ಸೌಂದರ್ಯ ಮತ್ತು ತೇಜಸ್ಸಿನಿಂದ ಜಗತ್ತನ್ನು ಮೋಹಗೊಳಿಸಿದರೆ, ರಾಧಾರಾಣಿಯು ಭಗವಾನ್ ಕೃಷ್ಣನನ್ನೇ ತನ್ನ ರೂಪದಿಂದ ಮೋಹಗೊಳಿಸುತ್ತಾಳೆ. ಆದುದರಿಂದ ಇಲ್ಲಿ ಪರಮೋನ್ನತಪಾರಮ್ಯ ರಾಧಾರಾಣಿಯದ್ದೇ ಆಗಿರುತ್ತದೆ. ಅಲ್ಲದೆ ಶ್ರೀಕೃಷ್ಣನು ರಾಧೆಯ ಅಜ್ಞಾನುಧಾರಕ. ಇದಕ್ಕೆ ಈ ಕೆಳಗಿನ ಮಹಾಮಂತ್ರವು ಹೆಚ್ಚು ಪುಷ್ಟಿ ಕೊಡುತ್ತದೆ.

ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ ।
ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ ॥
ಶ್ರೀರೂಪಾ ಶ್ರೀ ಹರಾ ಶ್ರೀದಾ ಶ್ರೀಕಾಮಾ ಶ್ರೀ ಸ್ವರೂಪಿಣಿ ।
ಶ್ರೀ ಧಾಮಾನಂದ ಧಾತ್ರೀ ಚ ಶ್ರೀ ಧಾಮೇಶ್ವರ ವಲ್ಲಭಾ ॥[೧೬]

ಇಲ್ಲಿ 'ಹರಾ' ಎಂದರೆ 'ರಾಧಾ' ಎನ್ನುವ ಅರ್ಥವಿದೆ. ರಾಧಾರಾಣಿಯ ಮೂಲಕವಾಗಿ ಕೃಷ್ಣನ ಸೇವಾ ಭಾಗ್ಯ ಲಭ್ಯವೆಂಬುದು ಚೈತನ್ಯಪಂಥದ ಭಾವನೆ.

ಪೂರ್ವ ಸಾಹಿತ್ಯದಲ್ಲಿ ರಾಧೆ

ದಾಸಸಾಹಿತ್ಯದಲ್ಲಿ ಆರಾಧನೆಗೊಳಗಾಗದ ರಾಧೆಯು ಚೈತನ್ಯಪಂಥದಲ್ಲಿ ಆರಾಧನೆಗೊಳಗಾದರೂ ಆಕೆಯ ಮೊದಲಸ್ತುತಿ ನಡೆದದ್ದು ವೇದಗಳ ಕಾಲದಲ್ಲಿ. ಆದರೂ ಶ್ರೀಕೃಷ್ಣನ ಲೀಲಾವಿನೋದದ ಬಗ್ಗೆ ಮುಖ್ಯವಾಗಿ ಪ್ರತಿಪಾದಿಸಲ್ಪಡಬೇಕಾಗಿದ್ದ ಶ್ರೀಮದ್ಭಾಗವತದಲ್ಲಿ ರಾಧೆಯ ಕುರಿತಾಗಿ ಹೆಚ್ಚಿನ ವಿಚಾರವೇನೂ ಉಲ್ಲೇಖವಾಗದಿರುವುದು ಅಚ್ಚರಿಯ ಸಂಗತಿ. ಶುಕಮುನಿಗಳು ಭಾಗವತವನ್ನು ರಾಜಾಪರೀಕ್ಷಿತನಿಗೆ ತಿಳಿಸುವ ಸಂದರ್ಭದಲ್ಲಿ ರಾಧೆಯ ಸ್ಮರಣೆಯನ್ನು ಮಾಡುತ್ತಿದ್ದಂತೆಯೇ ಆರು ತಿಂಗಳುಗಳ ಕಾಲ ಮೂರ್ಛಾವಸ್ಥೆಗೆ ಹೋಗಿಬಿಡುತ್ತಿದ್ದರಂತೆ. ಆದರೆ ಪರೀಕ್ಷಿತನಿಗೆ ಕಾಲಾವಕಾಶವಿದ್ದುದು ಕೇವಲ ಒಂದೇ ವಾರದ ಅವಧಿಯಾದುದರಿಂದ ರಾಧೆಯ ಕುರಿತಾದ ಪ್ರಸ್ತಾಪ ಹಾಗೆಯೇ ಉಳಿದುಕೊಂಡಿರಬೇಕು. ಆದರೂ ಭಾಗವತದದಲ್ಲಿ ಒಂದೆಡೆ ಮಾತ್ರ ರಾಧೆಯ ಕುರಿತಾದ ಉಲ್ಲೇಖವನ್ನು ಕಾಣಬಹುದಾಗಿದೆ.

ಅನಯಾರಾಧಿತೋ ನೂನಮ್ ಭಗವಾನ್ ಹರೀಶ್ವರಃ ।
ಯನ್ ನೋವಿಹಾಯ ಗೋವಿಂದಃ ಪ್ರೀತೋಯಮ್ ಅನಯಾದ್‌ರಹಃ ॥[೧೭]

ಇಲ್ಲಿ'ಅನಯಾರಾಧಿತ' ಅಂದರೆ 'ಆಕೆಯನ್ನು ಆರಾಧಿಸಲ್ಪಟ್ಟ ಭಗವಂತ' ಎಂದು ಅರ್ಥವಿಸಬೇಕೆಂದು ಶುಕಮುನಿಗಳು ಅಭಿಪ್ರಾಯಪಡುತ್ತಾರೆ. 'ಅನಯಾರಾಧಿತಃ' ಯಾರು ಪರಮಪುರುಷನಾದ ಶ್ರೀಕೃಷ್ಣನ ಆರಾಧನೆಯಲ್ಲಿ ಪರಿಪೂರ್ಣಳೋ ಅವಳೇ ರಾಧೆ ಎಂಬುದು ಶುಕಮುನಿಗಳ ವ್ಯಾಖ್ಯಾನ. ಆದರೆ ಇದು ಕೇವಲ ಅಲ್ಪ ಪ್ರಮಾಣದ ಸಮಾಧಾನದ ಉತ್ತರ. ಆಶ್ಚರ್ಯವೆಂದರೆ ಬ್ರಹ್ಮವೈವರ್ತಪುರಾಣ ಮತ್ತು ಪದ್ಮಪುರಾಣಗಳಲ್ಲಿ ಈ ಕುರಿತಾದ ವಿಚಾರ ಕಂಡುಬರುವುದಿಲ್ಲ. 'ಋಕ್ ಪರಿಶಿಷ್ಟ'ವು ರಾಧಾಮಾಧವರ ಪರಿಪೂರ್ಣತೆಗೆ ವಿವರವನ್ನು ನೀಡುತ್ತದೆ. 'ರಾಧಾಯ ಮಾಧವೋ ದೇವೋ ಮಾಧವೇ ನೈವ ರಾಧಿಕಾ...ವಿಭ್ರಾ ಜಂತೇ ಜನೇಷು' (ಋಕ್ ಪರಿಶಿಷ್ಟ) ಎಂಬಲ್ಲಿ ಮಾಧವನು ರಾಧೆಯ ಜತೆಗಿದ್ದಾಗ ಮಾತ್ರ ಪರಿಪೂರ್ಣನಾಗಿರುತ್ತಾನೆ. ಹಾಗೆಯೇ ರಾಧಾರಾಣಿಯೂ ಕೂಡ ಎಂಬುದು ಇದರ ಕಲ್ಪನೆ.

ಅಗ್ನಿಪುರಾಣವು 'ಗೋಪ್ಯಾಃ ಪ್ರಪ್ರಚುರುಪತಿ ಕೃಷ್ಣಾನುಚರಮ್ ಉದ್ಧವಮ್ । ಹರಿ ಲೀಲಾ ವಿಹಾರಾಂಶ್ಚತತ್ಯೆಕಾಂ ರಾಧಿಕಾಂ ವಿನಾ' (ಅಗ್ನಿ ಪುರಾಣ) ಸೂರ್ಯೋದಯ ಕಾಲದಲ್ಲಿ ಎಲ್ಲ ಗೋಪಿಕೆಯರೂ ಉದ್ಧವನನ್ನು ಪಶ್ನಿಸಿದರೆ, ರಾಧಿಕೆಯು ಮಾತ್ರ ಕೃಷ್ಣನ ನೆನಪಿನಲ್ಲೇ ಮುಳುಗಿರುತ್ತಾಳೆ ಎಂದು ವರ್ಣಿಸುತ್ತದೆ. ದ್ವಾರಕೆಯಲ್ಲಿ ಕೃಷ್ಣನಿಗೆ ರುಕ್ಮಿಣಿಯು ಕಾಂತೆಯಾದಂತೆ, ವೃಂದಾವನದಲ್ಲಿ ಕೃಷ್ಣನಿಗೆ ರಾಧೆಯೇ ಕಾಂತೆಯೆಂದು 'ರುಕ್ಮಿಣೀ ದ್ವಾರವತ್ಯಾಂ ರಾಧಾವೃಂದಾವನೇವನೇ' ಎಂದು ಸ್ಕಂಧಪುರಾಣವು ಸ್ಮರಿಸಿಕೊಳ್ಳುತ್ತದೆ. ಅಂತೆಯೇ, 'ಬೃಹತ್‌ಗೌತಮೀಯತಂತ್ರ'ವೆಂಬ ಕೃತಿಯು 'ದೇವಿ ಕೃಷ್ಣಮಯೀಪ್ರೋಕ್ತಾ ರಾಧಿಕಾಪರದೇವತಾ । ಸರ್ವಲಕ್ಷ್ಮೀಮಯೀ ಸರ್ವಕಾಂತಿಃ ಸಮ್ಮೋಹಿನೀಪರಾ' ರಾಧೆಯೇ ಕೃಷ್ಣನಿಗೆ ನೇರಸಂಗಾತಿ, ಆಕೆಯೇ

ಸರ್ವಲಕ್ಷ್ಮಿಯರ ಕೇಂದ್ರಬಿಂದುವೆಂದು ಹೇಳಿಕೊಳ್ಳುತ್ತದೆ. ಈ ಎಲ್ಲಾ ಕೃತಿಗಳನ್ನು ಹೊರತು ಪಡಿಸಿದರೆ, ನಂತರದಲ್ಲಿ ರಾಧೆಯ ಕುರಿತಾಗಿ ವರ್ಣಿತವಾಗಿರುವ ಮುಖ್ಯ ಕಾವ್ಯಗಳು ಐದೆನ್ನಬಹುದು. ಅವುಗಳಲ್ಲಿ ನಾವು ಕಾಣುವುದು ಆಕೆಯ ಸೌಂದರ್ಯ ಪ್ರತಿಪಾದನೆಯನ್ನು ಎಂಬುದು ವಿಶೇಷ.

ವಿದಗ್ಧ ಮಾಧವ : ಕಂಗಳ ಕಾಂತಿಯಿಂದ 'ನೀಲಕಮಲ'ಳಾಗಿ, ವದನ ಸೌಂದರ್ಯವು 'ಅರಳಿದ ಕಮಲವನ'ವಾಗಿ ತೋರಿಬರುತ್ತಾಳೆ.

ಉಜ್ವಲ ನೀಲಮಣಿ : ಈಕೆ ಗೋಪಿಯರಲ್ಲೆಲ್ಲ ಪ್ರಮುಖಳಾಗುತ್ತಾಳೆ. ಆಕೆಯ ಪ್ರೇಮಾಭಿವ್ಯಕ್ತಿಯಲ್ಲಿ ನೈಜತೆಯಿದೆ. ಆಕೆ ಇಲ್ಲಿ ಅಗಣಿತ ಗುಣಸಾಗರಿಯಾಗುತ್ತಾಳೆ. 'ಮಾಧುರ್ಯ, ತಾರುಣ್ಯ, ಚಂಚಲ, ಮಂದಹಾಸ, ಮಂಗಳಕರ ರೇಖೆಗಳು, ಸೌಗಂಧ, ಇನಿದನಿ, ಮಾತುಗಾರಿಕೆ, ತಿಳಿಹಾಸ್ಯ, ಸಾತ್ವಿಕತೆ, ಕಾರುಣ್ಯ, ಚಾತುರ್ಯ, ಕರ್ತವ್ಯಪರತೆ, ಲಜ್ಜೆ, ಗೌರವಾದರ, ಶಾಂತತೆ, ಆಪ್ತತೆ, ಆನಂದಾನುಭೂತಿ, ಅತ್ಯುನ್ನತ ಪ್ರೇಮ, ಗೋಕುಲ ಪ್ರೇಮಖನಿ, ಭಕ್ತಾಗ್ರಣಿ, ವಿನಮ್ರತೆ, ಸ್ನೇಹಮಯಿ, ಪ್ರಮುಖ ಗೋಪಿ...ಇವುಗಳಿಂದ ಶ್ರೀಕೃಷ್ಣನನ್ನು ನಿಯಂತ್ರಿಸಬಲ್ಲವಳು.'[೧೮]

ಚೈತನ್ಯ ಚರಿತಾಮೃತ : ರಾಧಾರಾಣಿಯು ಗೋವಿಂದನಿಗೆ ಆನಂದವನ್ನು ನೀಡುವವಳಾದುದರಿಂದ 'ಗೋವಿಂದ ಆನಂದಿನಿ'ಯಾಗಿ, ಗೋವಿಂದನನ್ನು ದಿಗ್ಭ್ರಮೆಗೊಳಿಸಿದುದರಿಂದ 'ಗೋವಿಂದ ಮೋಹಿನಿ'ಯಾಗಿ, ಗೋವಿಂದನಿದೆ ಆಕೆ ಸಕಲವೂ ಆದುದರಿಂದ 'ಗೋವಿಂದ ಸರ್ವಸ್ವ'ಳಾಗಿ, ಆತನ ಸಂಗಾತಿಗಳಲ್ಲಿ ಪ್ರಮುಖಳಾದುದರಿಂದ 'ಸರ್ವಕಾಂತಾ ಶಿರೋಮಣಿ'ಯಾಗಿ, ಆರಾಧನೆಯ ವಿಶೇಷತೆಯಿಂದ 'ರಾಧಿಕಾ'ಳಾಗಿ, ಭಾಗ್ಯದೇವತೆಗಳ ಮೂಲಕ 'ಸರ್ವಲಕ್ಷ್ಮೀ'ಯಾಗಿ, ಒಳಹೊರಗೂ ಅವಳೇ ಆದುದರಿಂದ 'ಕೃಷ್ಣಮಯೀ'ಯಾಗಿ, ರೂಪಲಾವಣ್ಯ ಮೋಹಕತೆಯಿಂದ 'ಸರ್ವಕಾಂತಿ'ಯಾಗಿ ವರ್ಣಿತಳಾಗಿದ್ದಾಳೆ.

ಪ್ರೇಮಭಕ್ತಿ ಚಂದ್ರಿಕಾ : ರಾಧಿಕಾ ಚರಣ ರೇಣು, ಭೂಷಣ ಕರಿಯ ತನು
ಅನಾಯಾಸೇ ಪಾಬೇ ಗಿರಿಧಾರೀ ।
ರಾಧಿಕಾ ಚರಣಾಶ್ರಯ ಯೇ ಕರೇ ಸೇ ಮಹಾಶಯ
ತನ್ರೇ ಮುನಿ ಯಾವ್ರೋನ್ ಬಲಿಹರಿ ॥ –ಶ್ರೀನರೋತ್ತಮದಾಸ ಠಾಕೂರರು

ಇಲ್ಲಿ "ಯಾರು ರಾಧೆಯ ಪಾದಪದ್ಮಗಳ ಧೂಳನ್ನು ಮೈಗೆ ಲೇಪಿಸಿಕೊಳ್ಳುತ್ತಾರೆಯೋ ಅವರು ಗಿರಿಧಾರಿಯೆನಿಸಿದ ಶ್ರೀಕೃಷ್ಣನನ್ನು ಪಡೆಯುತ್ತಾರೆ. ಆಕೆಯ ಪಾದಾಶ್ರಯ ಪಡೆಯುವವನೇ ನಿಜವಾದ ಭಕ್ತನೆನಿಸಿಕೊಳ್ಳುತ್ತಾನೆ." ಇಲ್ಲಿಯ ರಾಧಾದೇವಿಗೆ ವೃಂದಾವನವೇ ದೈವೀಧಾಮವಾಗಿ ಪರಿಣಮಿಸುತ್ತದೆ. ಶ್ರೀಕೃಷ್ಣನ ಆನಂದದ ಲೀಲೋತ್ಸವಕ್ಕೆ ಆಕೆಯೇ ತವನಿಧಿಯಾಗುತ್ತಾಳೆ.

ಕೃಷ್ಣ ನಾಮ ಗಾನೇ ಭಾಯ್, ರಾಧಿಕಾ ಚರಣ ಪಾಯ್
ರಾಧಾ ನಾಮ ಗಾನೇ ಕೃಷ್ಣ ಚಂದ್ರ ।

ಸಂಕ್ಷೇಪೇ ಕಹಿನುಕಥಾ, ಗುಚಾವ್ ಮುನೇರ ವ್ಯಾಥ
ದುಃಖಮಯ ಅನ್ಯ ಕಥಾ ದ್ವಂದ್ವಾ ॥ –ಶ್ರೀನರೋತ್ತಮದಾಸ ಠಾಕೂರರು

ಕೃಷ್ಣನಾಮ ಜಪದಿಂದ ರಾಧೆಯ ಚರಣಕಮಲ, ರಾಧಾಸ್ಮರಣೆಯಿಂದ ಕೃಷ್ಣಚಂದ್ರನ ಪಾದಪದ್ಮ ಸ್ವೀಕಾರವಾಗುತ್ತದೆ ಎನ್ನುತ್ತಾರೆ ಶ್ರೀನರೋತ್ತಮದಾಸರು. ಸಾಯುಜ್ಯಕ್ಕೆ ಈರ್ವರ ಪಾದಕಮಲ ಭಜನೆಯು ಮುಖ್ಯವೆಂಬುದು ಇವರ ಅಭಿಪ್ರಾಯ. ಅಂತೆಯೇ ಇದು ಗೌಡೀಯ ತತ್ವನಿರ್ಣಯವೂ ಕೂಡ.

ಉಪದೇಶಾಮೃತ : 'ಯಥಾ ರಾಧಾಪ್ರಿಯಾ ವಿಷ್ಣೇಸ್ತಸ್ಯಾಃ ಕುಂಡಮ್ ಪ್ರಿಯಮ್ ಕಥಾ । ಸರ್ವ ಗೋಪೀಷು ಸೈವೈಕಾ ವಿಷ್ಣೋರತ್ಯಂತೆ ವಲ್ಲಭಾ' ಎನ್ನುವ ಮೂಲಕ ಕೃಷ್ಣನಿಗೆ ರಾಧೆ ಮಾತ್ರವಲ್ಲ, ಆಕೆಯ ಕುಂಡವೂ ಅತೀ ಪ್ರಿಯವೆಂದು' ಒಪ್ಪಿಕೊಳ್ಳುತ್ತದೆ.

ರಾಧೆ ಮತ್ತು ಇಸ್ಲಾಂ ಭಕ್ತಿ

ರಾಧೆಯು ಹಿಂದೂ ಪುರಾಣಪಾತ್ರಳಾದರೂ ಕೂಡ ಆಕೆಯ ಕುರಿತು ಅನ್ಯಮತೀಯರೂ ಭಾವಪರವಶತೆಗೆ ಒಳಗಾಗಿದ್ದುಂಟು. ಮೊಗಲ್ ಬಾದಷಹ ಅಕ್ಬರನ ಆಸ್ಥಾನದ 'ನವರತ್ನ'ಗಳೆಂಬಂತಿದ್ದ ಒಂಬತ್ತು ಜನ ವಿದ್ವಾಂಸರಲ್ಲಿ ಒಬ್ಬರಾದ ರಹೀಮ್‌ಖಾನರು ರಾಧೆಯ ಕುರಿತು ಚೆಲ್ಲಿದ ಭಕ್ತಿಭಾವ ನಿಜಕ್ಕೂ ಅನುಪಮವಾದುದು.[೯]

ಕಿಂ ದೇಯ ಮಸ್ತಿ ಭವತೇ ಜಗದೀಶ್ವರಾಯ ।
ರಾಧಾ ಗೃಹೀತ ಮನಸೇ ಮನಸೇ ಚ ತುಭ್ಯಾಂ ।
ದತ್ತಂ ಮಯಾ ನಿಜಯವಾಸ್ತದಿದಂ ಗೃಹಾಯೇ ॥ –ರಹೀಮ್‌ಖಾನರು

ಹೇ ಭಗವನ್, ನಿನ್ನ ವಾಸಸ್ಥಾನವೇನೋ ಸಮುದ್ರವಾಗಿದೆ. ಆ ಸಮುದ್ರವನ್ನು ರತ್ನಗರ್ಭವೆಂದೇ ವಿದ್ವಾಂಸರು ಭಾವಿಸುತ್ತಾರೆ. ಮೇಲಾಗಿ ಲಕ್ಷ್ಮೀದೇವಿಯು ನಿನ್ನ ನೆಚ್ಚಿನ ಮಡದಿಯಾಗಿ ಸೇವೆ ಮಾಡುತ್ತಿರುವಾಗ, ರಾಧೆಯು ನಿನ್ನ ಮನವನ್ನು ಕದ್ದಿರುವಾಗ ನನ್ನಂತಹ ಪಾಮರನು ಏನು ಕೊಡಲುಸಾಧ್ಯ? ಎಂದು ಭಾವುಕತೆಗೆ ಒಳಗಾಗುತ್ತಾರೆ. ಇದು ಅವರ ರಾಧಾಭಕ್ತಿಯಾದರೆ, ಅವರ ಕೃಷ್ಣಭಕ್ತಿಯು, 'ಜೋ ರಹೀಂ ಕರೀಜೇ ಹುತೇ ವ್ರಜಕೋ ಇಹ್ಯೆ ಹವಾಲ, ತಾತಹೀ ಕದ ಪರಧ ದಯಾ ಗೋವರ್ದನ ಗೋಪಾಲ' ಎನ್ನುವಲ್ಲಿ–ಕೃಷ್ಣಾ ನೀನು ಮಥುರೆಗೆ ಹೋದುದರಿಂದ ಗೋಕುಲ ನಿವಾಸಿಗಳ ಮನಸು ಚಂಚಲಗೊಂಡಿದೆ. ನಿನ್ನ ವಿರಹವನ್ನು ಅವರು ತಾಳಲಾರದವರಾಗಿದ್ದಾರೆ. ಗೋವರ್ಧನಗಿರಿಯನ್ನೆತ್ತಿ ಅವರೆಲ್ಲರನ್ನು ಕಾಪಾಡಿದವನಾದ ನೀನು, ಈಗ ನಮ್ಮನ್ನು ಕಾಯಬೇಕೆಂದು ನಿವೇದಿಸಿ ಕೊಳ್ಳುತ್ತಾರೆ.

ಒಟ್ಟಿನಲ್ಲಿ ಭರತಭೂಮಿಯ ಪುರಾಣನಾರಿಯಾದ ರಾಧೆಯು ಕೇವಲ ಸೀಮಿತವಾದ ಪಂಥದಲ್ಲಿ ಆರಾಧನೆಗೊಂಡವಳಲ್ಲ. ಆಕೆ ಬಹುಪಂಥದ ಅನುಭಾವಿಗಳಿಂದ ಪೂಜಿಸಿಕೊಂಡವಳು. ಆದರೂ ಗೌಡೀಯ ಪಂಥದಲ್ಲಿ ಆಕೆಯ ವಿಜೃಂಭಣೆ ಮಾತ್ರ ತಾತ್ವಿಕವಾದುದು. ಅಲ್ಲಿಯ ತತ್ತ್ವಾರ್ಥದಲ್ಲಿ ರಾಧೆಯು ಕೃಷ್ಣನಲ್ಲಿ, ಕೃಷ್ಣನು

ರಾಧೆಯಲ್ಲಿ ಒಂದಾಗುತ್ತಾರೆ. ಹಾಗಾಗಿ ಅವರು 'ರಾಧಾಕೃಷ್ಣ'ರಾಗುತ್ತಾರೆ. 'ರಾಧಾಕೃಷ್ಣ' ಎಂದರೆ ಪ್ರೇಮದ ವಿನಿಮಯವಾಗಿ, ಅಸಾಧಾರಣ ಶಕ್ತಿಯಾಗಿ ಚೈತನ್ಯಪಂಥದಲ್ಲಿ ವ್ಯವಹರಿಸುತ್ತದೆ. ಆದರೂ ಅದು ಕಾಮತೃಷೆಯಲ್ಲವೆನ್ನುವುದು ಮುಖ್ಯ ವಿಚಾರ. ದಾಸಪಂಥವು ಕಾಣದ ರಾಧಾಕಲ್ಪನೆ ಚೈತನ್ಯಪಂಥದಲ್ಲಿ ಮೊಳಕೆಯೊಡೆದು ಹೆಮ್ಮರವಾಗಿ ಬಲಿತು ಉದ್ದಗಲಕ್ಕೆ ಪಸರಿಸುತ್ತದೆ. ಚೈತನ್ಯಪಂಥದಲ್ಲಿ 'ರಾಧಾಕೃಷ್ಣ ಪ್ರೇಮ'ವು ಪುಷ್ಟಿಗೊಂಡಂತೆ, ದಾಸಪಂಥದಲ್ಲಿ 'ಗೋಪೀಕೃಷ್ಣ' ಕಲ್ಪನೆಯು ಬಲಗೊಳ್ಳುತ್ತದೆ.

ಉತ್ತರಭಾರತದ 'ರಾಧಾಕೃಷ್ಣ' ದೇವಾಲಯಗಳು

ರಾಧಾಕೃಷ್ಣ ಪರಿಕಲ್ಪನೆಯು ಆಧ್ಯಾತ್ಮ ಪ್ರಪಂಚಕ್ಕೆ ಉತ್ತರಭಾರತದ ಕೊಡುಗೆ. ಇಲ್ಲಿ ಕಾಣಸಿಗುವ ರಾಧಾಕೃಷ್ಣ ದೇವಾಲಯಗಳು ದಕ್ಷಿಣಭಾರತದಲ್ಲಿ ಅಪರೂಪವೆಂದೇ ಹೇಳಬೇಕು. ರಾಧಾಕೃಷ್ಣಪ್ರೇಮ ಪರಿಕಲ್ಪನೆಯನ್ನು ಪುಷ್ಟೀಕರಿಸಲು ಕಾಣಸಿಗುವ ಹೆಚ್ಚಿನ ದೇವಾಲಯಗಳಿರುವುದು ಉತ್ತರಭಾರತದ ವೃಂದಾವನ ಪ್ರಾಂತ್ಯದಲ್ಲಿ. ಈ ಪ್ರಾಂತ್ಯ ೫೦೦೦ ವರ್ಷಗಳಷ್ಟು ಹಿಂದೆ ಕೃಷ್ಣಲೀಲೆಗೆ ಸಾಕ್ಷಿಯಾದ ಪವಿತ್ರ ಧಾಮಗಳಲ್ಲಿ ಒಂದು. 'ವೃಂದಾ' ಎಂದರೆ ತುಳಸಿ. 'ವನ'ವೆಂದರೆ ಕಾಡು ಎಂದರ್ಥ. ತುಳಸಿಯೇ ಪ್ರಧಾನವಾಗಿ ಬೆಳೆದಿರುವ ಈ ಕಾಡೇ ವೃಂದಾವನವಾಯಿತು. ಸುಮಾರು ೪೨ ಕಿಲೋಮೀಟರುಗಳಲ್ಲಿ ಪಸರಿಸಿರುವ ಈ ವೃಂದಾವನವು ರಾಧಾಕೃಷ್ಣರ ಪ್ರಣಯಲೀಲೆಗಳಿಗೆ ಹೆಸರುವಾಸಿಯಾಯಿತು. ಭದ್ರವನ, ಬಿಲ್ವವನ, ಕುಮುದವನಾದಿಯಾಗಿ ಹನ್ನೆರಡು ವನಗಳಲ್ಲದೆ ರಾಧಾರಾಣಿಯ ಜನ್ಮ ಸ್ಥಳವಾದ ರಾವಲ್, ರಾಧಾಕುಂಡ, ರಾಧಾರಾಣಿಯು ವಾಸಿಸುತ್ತಿದ್ದ ವರ್ಷಾನ ಹಾಗೂ ಜಾವತ್ ಮೊದಲಾದ ಲೀಲಾಸ್ಥಳಗಳು ಇಲ್ಲಿಯ ಪವಿತ್ರತಾಣಗಳು. ಹದಿನೈದನೆಯ ಶತಮಾನದಲ್ಲಿ ಬಂಗಾಳದ ಶ್ರೀಚೈತನ್ಯರು ಈ ಪ್ರದೇಶದ ವಿಶೇಷತೆಗೆ ಮಾರುಹೋಗಿ ಪ್ರಜ್ಞಾಶೂನ್ಯರಾದದ್ದು, ಪ್ರತಿ ಕಣಕಣದಲ್ಲೂ ಪರಮಪುರುಷನಾದ ಶ್ರೀಕೃಷ್ಣನನ್ನು ಕಾಣುತ್ತಿದ್ದುದು, ಅಷ್ಟಸಾತ್ವಿಕ ವಿಕಾರಗಳಿಗೆ ಒಳಗಾಗುತ್ತಿದ್ದುದು, ಅಲ್ಲಿಯ ಮರಳಿನಲ್ಲಿ ಹೊರಳಾಡುತ್ತಿದ್ದುದು ಇಲ್ಲಿಯ ಕ್ಷೇತ್ರಮಹಿಮೆಯಿಂದಲೇ ಇರಬೇಕು.

'ರಾಧಾಕೃಷ್ಣ'ವೆಂಬ ಪರಿಕಲ್ಪನೆಯನ್ನು ಒಪ್ಪಿಕೊಂಡು ಬಂದ ಚೈತನ್ಯಪಂಥದ ಅನುಯಾಯಿಗಳು ರಾಧಾಕೃಷ್ಣರ ವಿಲಾಸವಿಭ್ರಮವು ನಡೆದ ಪ್ರದೇಶದಲ್ಲೇ ತಮ್ಮ ಜೀವನ್ಮುಕ್ತಿಯನ್ನು ಕಾಣಬಯಸಿದರು. ಆ ದೃಷ್ಟಿಯಿಂದಲೇ ರಾಧಾಕೃಷ್ಣರ ದೇವಾಲಯವನ್ನು ನಿರ್ಮಿಸಿ, ತಮ್ಮ ಭಕ್ತಿಯನ್ನು ತೋರಿದರು. ಆದರೆ ಇಂತಹ ಕೆಲಸಗಳು ಕರ್ನಾಟಕದ ಹರಿದಾಸರಿಂದ ನಡೆಯಲಿಲ್ಲವೆನ್ನುವ ವಿಚಾರಮಾತ್ರ ಸತ್ಯ. ಉತ್ತರಭಾರತಕ್ಕೆ ಸಂಬಂಧಿಸಿದ ರಾಧಾಕೃಷ್ಣ ಪರಿಕಲ್ಪನೆಯನ್ನು ಸಮರ್ಥಿಸುವ ಕೆಲವು ದೇವಾಲಯಗಳ ವಿವರ ಇಂತಿದೆ.

ಮದನಮೋಹನ ದೇವಾಲಯ

ವೃಂದಾವನದಲ್ಲಿ ಮೊದಲು ನಿರ್ಮಾಣಗೊಂಡ ದೇವಾಲಯಗಳಲ್ಲಿ ಇದೂ ಒಂದು. ಇದನ್ನು ನಿರ್ಮಿಸಿದವರು ಷಡ್‌ಗೋಸ್ವಾಮಿಗಳಲ್ಲೊಬ್ಬರಾದ ಸನಾತನ ಗೋಸ್ವಾಮಿಗಳು. ಈ ದೇವಾಲಯದಲ್ಲಿ ಮದನಮೋಹನ, ರಾಧಾರಾಣೀ ಮತ್ತು ಲಲಿತಾವಿಗ್ರಹಗಳಿವೆ. ಯಮುನಾತೀರದಲ್ಲಿ ಐವತ್ತು ಅಡಿ ಎತ್ತರದ

ಬೆಟ್ಟದ ಮೇಲಿರುವ ಈ ದೇವಾಲಯವನ್ನು ಕ್ರಿ. ಶ. ೧೫೮೦ ರಲ್ಲಿ ನಿರ್ಮಿಸಲಾಯಿತು. ಸನಾತನ ಗೋಸ್ವಾಮಿಗಳು ಇಹಲೋಕ ತ್ಯಜಿಸಿದ ಬಳಿಕ ಕೃಷ್ಣದಾಸ ಇದರ ಪೂಜೆಯ ಉಸ್ತುವಾರಿ ವಹಿಸಿಕೊಂಡರು. ಇದೊಂದು ಐತಿಹಾಸಿಕ ದೇವಾಲಯ ಎಂದು ಪರಿಗಣಿಸಲಾಗಿದ್ದು, ಭಾರತ ಸರಕಾರದ ಅಧೀನಕ್ಕೆ ಒಳಪಟ್ಟಿದೆ.

ಇಮ್ಲಿತಾಲಾ

ಶ್ರೀಕೃಷ್ಣನ ಕಾಲಕ್ಕೆ ಸೇರಿದ ಹುಣಸೇಮರವೊಂದು ಈ ವೃಂದಾವನದಲ್ಲಿದೆ. ಅದಕ್ಕೆ 'ಇಮ್ಲಿತಾಲ'ವೆಂದು ಹೆಸರು. ಚೈತನ್ಯ ಮಹಾಪ್ರಭುಗಳು ವೃಂದಾವನದಲ್ಲಿದ್ದಾಗ ಈ ಮರದಡಿ ಕುಳಿತು ಶ್ರೀಕೃಷ್ಣ ಜಪವನ್ನು ಮಾಡುತ್ತಿದ್ದರು. ಆ ಕಾಲದಲ್ಲಿ ಇದೊಂದು ನಿರ್ಜನ ಅರಣ್ಯವಾಗಿತ್ತು. ಪಾವನೆಯಾದ ಯಮುನಾನದಿಯು ಇಮ್ಲಿತಾಲಾದ ಪಕ್ಕದಲ್ಲೇ ಹರಿಯುತ್ತಿತ್ತು. ಈಗ ಅದು ಇಲ್ಲಿಂದ ಅರ್ಧ ಕಿ.ಮೀ ದೂರ ಸರಿದಿದೆ. ಇಲ್ಲಿ ಗೌರನಿತಾಯ್ ಮತ್ತು ರಾಧಾಕೃಷ್ಣ ವಿಗ್ರಹಗಳನ್ನೊಳಗೊಂಡ ಚಿಕ್ಕ ದೇವಾಲಯವಿದೆ. ಈ ಇಮ್ಲಿತಾಲಾವು ಮದನಮೋಹನ ದೇವಾಲಯದಿಂದ ಒಂದು ಕಿ.ಮೀ ದೂರದಲ್ಲಿದೆ.

ರಾಧಾದಾಮೋದರ ದೇವಾಲಯ

ರೂಪ ಗೋಸ್ವಾಮಿ ಮತ್ತು ಸನಾತನ ಗೋಸ್ವಾಮಿಗಳ ಸೋದರಿಯ ಮಗನಾದ ಜೀವ ಗೋಸ್ವಾಮಿ ಈ ದೇವಾಲಯದ ಸ್ಥಾಪಕರು. ಇಲ್ಲಿ ರಾಧಾಕೃಷ್ಣಚಂದ್ರರ ಸುಂದರ ವಿಗ್ರಹಗಳಿವೆ. ಇದಲ್ಲದೆ ಕೃಷ್ಣದಾಸ ಕವಿರಾಜ ಗೋಸ್ವಾಮಿಯವರ ರಾಧಾಮಾಧವ ಮತ್ತು ಭೂಗರ್ಭ ಗೋಸ್ವಾಮಿಯವರ ರಾಧಾಚಲಚಿಕಾನ ವಿಗ್ರಹಗಳೂ ಇಲ್ಲಿವೆ. ಇಲ್ಲಿನ ಮೂಲವಿಗ್ರಹಗಳನ್ನೆಲ್ಲಾ ಜೈಪುರಕ್ಕೆ ಸ್ಥಳಾಂತರಿಸಲಾಗಿದೆಯಂತೆ. ಇಲ್ಲಿರುವುದು 'ಪ್ರತಿಭಾಮೂರ್ತಿ' ಎಂದು ಕರೆಯಲಾಗುವ ಪ್ರತಿರೂಪಗಳು. ಇಲ್ಲಿ ಶ್ರೀಕೃಷ್ಣನ ಹೆಜ್ಜೆಗುರುತಿನ 'ಗಿರಿಚರಣ ಶಿಲೆ' ಇದೆ ಇದನ್ನು ಗೋವರ್ಧನ ಶಿಲೆ ಎಂದೂ ಕರೆಯುತ್ತಾರೆ. ಇದನ್ನು ಸನಾತನ ಗೋಸ್ವಾಮಿಗಳು ನಿತ್ಯವೂ ಪೂಜಿಸುತ್ತಿದ್ದರಂತೆ. ಈ ದೇವಾಲಯವೂ ಸೇವಾಕುಂಜದಲ್ಲಿದೆ. ಜೀವ ಗೋಸ್ವಾಮಿ, ಭೂಗರ್ಭ ಗೋಸ್ವಾಮಿಗಳ ಸಮಾಧಿ, ಶ್ರೀಲ ಪ್ರಭುಪಾದರು ಮತ್ತು ರೂಪ ಗೋಸ್ವಾಮಿಗಳ ಭಜನಾಕುಟೀರಗಳು ಇಲ್ಲಿವೆ. ಚೈತನ್ಯರ ಅನುಯಾಯಿಗಳಾದ ಗೋಸ್ವಾಮಿಗಳೆಲ್ಲ ಇಲ್ಲಿ ಸೇರಿಕೊಂಡು ಕೃಷ್ಣಪ್ರಜ್ಞೆಯ ಪ್ರಸಾರದ ಬಗ್ಗೆ ಚರ್ಚಿಸುತ್ತಿದ್ದರಂತೆ. ಅಂಬರ್(ಜೈಪುರ)ನ ಮುಹಾರಾಜ ಮಾನ್‌ಸಿಂಗ್ ಈ ದೇಮಾಲಯ ನಿರ್ಮಾಣಕ್ಕೆ ಹಣ ನೀಡಿದನೆಂದು ಅಲ್ಲಿಯ ದಾಖಲೆಗಳು ತಿಳಿಸುತ್ತವೆ.

ಸೇವಾಕುಂಜ

ಕೃಷ್ಣ ತನಗಾಗಿ ಓಡೋಡಿ ಬರುವ ರಾಧಾರಾಣಿಯ ಪಾದಗಳನ್ನು ಒತ್ತುತ್ತಿದ್ದುದು ಮತ್ತು ಆಕೆಯ ಜಡೆಯನ್ನು ಹೂಗಳಿಂದ ಅಲಂಕರಿಸುತ್ತಿದ್ದುದು ಈ ಸ್ಥಳದಲ್ಲೆಂಬ ನಂಬಿಕೆ ಇದೆ. ಈ ಸ್ಥಳಕ್ಕೆ ನಿಕುಂಜವನ ಎಂಬ ಹೆಸರೂ ಇದೆ. ರಾಧಾಕೃಷ್ಣರು ಪ್ರತೀರಾತ್ರಿ ಸಂಧಿಸುತ್ತಿದ್ದುದು ಇದೇ ಹೂದೋಟದಲ್ಲಿ. ಅಲ್ಲದೇ ಕಾರ್ತಿಕಮಾಸದ ಹುಣ್ಣಿಮೆಯ ದಿನ ಶ್ರೀಕೃಷ್ಣನು ರಾಧೆ ಮತ್ತು ಇತರ ಗೋಪಿಕೆಯರ ಜತೆ ರಾಸಲೀಲಾನೃತ್ಯ ಮಾಡುತ್ತಿದ್ದುದೂ

ಪೀಠಗಳಿವೆ. ಇವುಗಳನ್ನು ಜಗನ್ನಾಥಪುರಿಯಿಂದ ತಂದು ಇಲ್ಲಿರಿಸಿದವರು ಗೋಪಾಲಭಟ್ಟ ಗೋಸ್ವಾಮಿ. ಗೋಪಾಲಭಟ್ಟ ಗೋಸ್ವಾಮಿಯವರ ಸಮಾಧಿಯೂ ಈ ದೇವಾಲಯದ ಬಳಿಯೇ ಇದೆ.

ರಾಧಾವಲ್ಲಭ ದೇವಾಲಯ

ಗೋಪಾಲ ಭಟ್ಟ ಗೋಸ್ವಾಮಿಯವರ ಶಿಷ್ಯರಾದ ಹಿತ್‌ಹರಿವಂಶ ಗೋಸ್ವಾಮಿಯವರು ಈ ದೇವಾಲಯವನ್ನು ಸ್ಥಾಪಿಸಿದರು. 'ರಾಧಾವಲ್ಲಭ'ವೆಂಬ ನೂತನ ಪಂಥವನ್ನು ಆರಂಭಿಸಿದವರೂ ಇವರೇ. ಹರಿವಂಶ ಗೋಸ್ವಾಮಿಗಳು ಮನೆಯನ್ನು ತೊರೆದು ಕೃಷ್ಣಸೇವೆಯಲ್ಲಿ ತೊಡಗುವ ಉದ್ದೇಶದಿಂದ ವೃಂದಾವನದತ್ತ ತೆರಳುತ್ತಿದ್ದಾಗ ದಾರಿಯಲ್ಲಿ ಆತ್ಮದೇವ ಎಂಬ ಬ್ರಾಹ್ಮಣನ ಪರಿಚಯವಾಯಿತು. ಆತ್ಮದೇವನ ಬಳಿ ರಾಧಾವಲ್ಲಭ ವಿಗ್ರಹವಿತ್ತು. ಆತ ನಿತ್ಯವೂ ಅದನ್ನು ಪೂಜಿಸುತ್ತಿದ್ದ. ಆತನಿಗೆ ಮದುವೆ ವಯಸ್ಸಿನ ಇಬ್ಬರು ಹೆಣ್ಣುಮಕ್ಕಳು ಇದ್ದರು. ಒಂದು ದಿನ ಕನಸಿನಲ್ಲಿ ಭಗವಂತ ಕಾಣಿಸಿಕೊಂಡು, ರಾಧಾವಲ್ಲಭ ವಿಗ್ರಹವನ್ನು ಹರಿವಂಶ ಗೋಸ್ವಾಮಿಗಳಿಗೆ ನೀಡಬೇಕು ಮತ್ತು ಒಬ್ಬ ಮಗಳನ್ನು ಅವರಿಗೆ ಮದುವೆ ಮಾಡಿಕೊಡಬೇಕು ಎಂದು ಸೂಚನೆಯಾಯಿತು. ಅನಂತರ ಆತ್ಮದೇವನು ಸೇವಾಕುಂಜದ ಬಳಿಬಂದು ಒಂದು ಗುಡಿಯನ್ನು ನಿರ್ಮಿಸಿ ರಾಧಾವಲ್ಲಭ ವಿಗ್ರಹವನ್ನು ಅಲ್ಲಿ ಪ್ರತಿಷ್ಠಾಪಿಸಿದ. ಕ್ರಿ. ಶ. ೧೬೨೬ ರಲ್ಲಿ ಈ ದೇವಾಲಯವನ್ನು ಸುಸಜ್ಜಿತ ದೇವಾಲಯವನ್ನಾಗಿ ನಿರ್ಮಿಸಲಾಯಿತು. ಆದರೆ ಕ್ರಿ. ಶ. ೧೬೭೦ ರಲ್ಲಿ ಮತಾಂಧ ಔರಂಗಾಜೇಬನ ಸೈನಿಕರು ಈ ದೇವಾಲಯವನ್ನು ಅಪವಿತ್ರಗೊಳಿಸಿದರು. ಆದ್ದರಿಂದ ಮೂಲ ದೇವಾಲಯದ ಪಕ್ಕದಲ್ಲಿ ಹೊಸ ದೇವಾಲಯವನ್ನು ನಿರ್ಮಿಸಿ, ವಿಗ್ರಹವನ್ನು ಅಲ್ಲಿಗೆ ಸ್ಥಳಾಂತರಿಸಿ ಪೂಜಾವಿಧಾನಗಳನ್ನು ಮುಂದುವರಿಸಲಾಯಿತು. ೧೮೭೧–೭೨ ರಲ್ಲಿ ಈ ದೇವಾಲಯದ ನಿರ್ಮಾಣ ಪೂರ್ಣಗೊಂಡಿತು. ಇಲ್ಲಿ ರಾಧಾರಾಣಿಯ ವಿಗ್ರಹವಿಲ್ಲ, ಬದಲಾಗಿ ಮಂಟಪದಲ್ಲಿ ಒಂದು ಕಿರೀಟವನ್ನು ಇರಿಸಲಾಗಿದೆ. ಈ ದೇವಾಲಯವು ಬಾಂಕೆಬಿಹಾರಿ ದೇವಾಯದ ಸಮೀಪದಲ್ಲಿದೆ.

ನಿಧಿವನ

ಸೇವಾಕುಂಜದಂತೆಯೇ ಇದು ಒಂದು ಚಿಕ್ಕ ವನ ಅಥವಾ ತೋಪು. ರಾಧಾಕೃಷ್ಣರು ನೃತ್ಯ ಮತ್ತಿತರ ಪ್ರಣಯಲೀಲೆಗಳ ಬಳಿಕ ಇಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು ಎಂದು ಹೇಳಲಾಗಿದೆ. ಇಲ್ಲಿ ನಿದ್ರಿಸುವ ದೇವಾಲಯ ಎಂಬ ಒಂದು ವಿಶಿಷ್ಟದೇಗುಲವಿದೆ. ಇಲ್ಲೊಂದು ಪಲ್ಲಂಗವಿದ್ದು, ರಾಧಾಕೃಷ್ಣರು ಇಲ್ಲಿ ವಿಶ್ರಾಂತಿ ಪಡೆಯುತ್ತಿದ್ದುದು ಈ ಸ್ಥಳದಲ್ಲೇ. ನಿಧಿವನದಲ್ಲಿ ವಿಶಾಖಕುಂಡವಿದೆ. ರಾಸನೃತ್ಯದ ಬಳಿಕ ವಿಶಾಖಾದೇವಿಯ ದಾಹವನ್ನು ತಣಿಸಲು ಕೃಷ್ಣನು ತನ್ನ ಕೊಳಲಿನಿಂದ ಭೂಮಿಯನ್ನು ಬಗೆದ ಜಾಗವಿದು. ನಿಧಿವನದ ಪ್ರವೇಶದ್ವಾರದ ಬಳಿಯೇ ಹರಿದಾಸಸ್ವಾಮಿಗಳ ಸಮಾಧಿಯಿದೆ. ಶಹಜಿ ದೇವಾಲಯ ಮತ್ತು ಲೋಯಿಬಜಾರ್ ನಡುವೆ ನಿಧಿವನವಿದೆ. ಇದರ ಸಮೀದಲ್ಲೇ ರಾಧಾರಮಣಾ ದೇವಾಲಯವೂ ಇದೆ.

ಇಲ್ಲೇ. ರಾಧಾಕೃಷ್ಣರು ಪ್ರತಿರಾತ್ರಿ ಸಂಧಿಸುತ್ತಿದ್ದ ಸ್ಥಳವಾದ್ದರಿಂದ ರಾತ್ರಿವೇಳೆಯಲ್ಲಿ ಈ ಪ್ರದೇಶಕ್ಕೆ ಪ್ರವೇಶ ನಿಷಿದ್ಧ. ಯಾರಾದರೂ ರಾತ್ರಿಹೊತ್ತು ಇಲ್ಲಿಗೆ ಅಕ್ರಮವಾಗಿ ಪ್ರವೇಶಿದರೆ ಅವರು ಬುದ್ಧಿಭ್ರಮಣೆಗೆ ಒಳಗಾತ್ತಾರೆಂಬ ನಂಬಿಕೆಯಿದೆ. ರಾಧಾಕೃಷ್ಣರ ವಿಗ್ರಹಗಳುಳ್ಳ 'ರಂಗಮಹಲ್' ಎಂಬ ಚಿಕ್ಕ ದೇವಾಲಯವೂ ಇಲ್ಲಿದೆ. ಈ ಸ್ಥಳ ರಾಧಾದಾಮೋದರ ದೇವಾಲಯದಿಂದ ಸುಮಾರು ಇನ್ನೂರು ಮೀಟರ್ ದೂರದಲ್ಲಿದೆ.

ರಾಧಾಶ್ಯಾಮಸುಂದರ ದೇವಾಲಯ

ವೃಂದಾವನದ ಏಳು ಮುಖ್ಯವಾದ ದೇವಾಲಯಗಳಲ್ಲಿ ಇದು ಒಂದು. ಇಲ್ಲಿ ಚೈತನ್ಯರ ಮಹಾನ್‌ಭಕ್ತರಾದ ಶ್ಯಾಮಾನಂದ ಪಂಡಿತರು ಪೂಜಿಸುತ್ತಿದ್ದ ರಾಧಾಶ್ಯಾಮ ಸುಂದರ ವಿಗ್ರಹವಿದೆ. ದೇವಾಲಯದ ಪಕ್ಕದಲ್ಲಿ ಶ್ಯಾಮಾನಂದರ ಸಮಾಧಿ ಮತ್ತು ಭಜನಾಕುಟೀರಗಳಿವೆ.

ರಾಧಾಗೋಪಿನಾಥ ದೇವಾಲಯ

ಇಲ್ಲಿ ಗೋಪಿನಾಥ, ರಾಧಾರಾಣಿ ಮತ್ತು ಆಕೆಯ ಸೋದರಿ ಅನಂಗಮಂಜರಿಯ ವಿಗ್ರಹಗಳಿವೆ. ಈ ದೇವಾಲಯ ನಿರ್ಮಿಸಿದವರು ಮಧುಪಂಡಿತರು. ವಾಸ್ತವವಾಗಿ ಗೋಪಿನಾಥ ವಿಗ್ರಹವನ್ನು ವೃಂದಾವನದಲ್ಲಿ ಮೊದಲು ಸ್ಥಾಪಿಸಿದ್ದು ಕೃಷ್ಣನ ಮರಿಮಗ ವಜ್ರನಾಭನೆಂಬ ಐತಿಹ್ಯವಿದೆ. ಆದರೆ ಕ್ರಿ. ಶ. ೧೬೭೦ ರಲ್ಲಿ ಮುಸ್ಲಿಮರು ಇಲ್ಲಿಗೆ ದಾಳಿ ಮಾಡಿದಾಗ ಮೂಲವಿಗ್ರಹವನ್ನು ಜೈಪುರಕ್ಕೆ ಸಾಗಿಸಲಾಯಿತು. ಈ ದೇವಾಲಯವು ರಾಧಾರಮಣ ದೇವಾಲಯ ಮತ್ತು ಗೋಪಿನಾಥ ಬಜಾರ್ ಮಧ್ಯದಲ್ಲಿದೆ.

ರಾಧಾಗೋಕುಲಾನಂದ ಮಂದಿರ

ಈ ದೇವಾಲಯದಲ್ಲಿ ಶ್ರೀಚೈತನ್ಯರ ಎರಡನೆಯ ಪೀಳಿಗೆಯಲ್ಲಿ ಪ್ರಮುಖ ಅನುಯಾಯಿಗಳಾದ ಶ್ರೀಲ ವಿಶ್ವನಾಥ ಚಕ್ರವರ್ತಿ ಠಾಕುರ, ಶ್ರೀಲ ನರೋತ್ತಮದಾಸ ಠಾಕುರ, ಶ್ರೀಲ ಬಲದೇವ ವಿದ್ಯಾಭೂಷಣ ಮತ್ತು ಶ್ರೀಲ ಲೋಕನಾಥ ಗೋಸ್ವಾಮಿಯವರು ಸ್ಥಾಪಿಸಿದ ಶ್ರೀರಾಧಾಗೋಕುಲಾನಂದ, ಶ್ರೀರಾಧಾಮಾಧವ ಮತ್ತು ಶ್ರೀರಾಧಾವಿನೋದ ವಿಗ್ರಹಗಳಿವೆ.

ರಾಧಾರಮಣ ದೇವಾಲಯ

ಇದನ್ನು ಸ್ಥಾಪಿಸಿದವರು ಗೋಪಾಲಭಟ್ಟ ಗೋಸ್ವಾಮಿ. ಕ್ರಿ.ಶ. ೧೫೪೨ರ ವೈಶಾಖಮಾಸದ ಪೂರ್ಣಿಮೆಯಂದು ಈ ವಿಗ್ರಹದ ಪ್ರತಿಷ್ಠಾಪನೆಯಾಯಿತು. ಪ್ರತಿವರ್ಷ ಈ ದಿನದಂದು ಶ್ರೀರಾಧಾರಮಣ ವಿಗ್ರಹಕ್ಕೆ ವಿಶೇಷಾಭಿಷೇಕ ನೆರವೇರುತ್ತದೆ. ವೃಂದಾವನದಲ್ಲಿರುವ ಕೆಲವೇ ಮೂಲವಿಗ್ರಹಗಳಲ್ಲಿ ಇದೂ ಒಂದು. ಈಗ ಅಸ್ತಿತ್ವದಲ್ಲಿರುವ ದೇವಾಲಯವನ್ನು ಲಖನೌನ ಶಾಹ್‌ಬಿಹಾರಿ ಲಾಲ್‌ಜಿ ಎಂಬುವರು ಕ್ರಿ.ಶ. ೧೮೨೬ರಲ್ಲಿ ಎಂಬತ್ತುಸಾವಿರ ರೂಪಾಯಿಗಳ ಖರ್ಚಿನಲ್ಲಿ ನಿರ್ಮಿಸಿದರು. ಈ ದೇವಾಲಯದ ಇನ್ನೊಂದು ವಿಶೇಷವೆಂದರೆ ಇಲ್ಲಿ ಚೈತನ್ಯ ಮಹಾಪ್ರಭುಗಳು ಧರಿಸುತ್ತಿದ್ದ ಕೌಪೀನ ಮತ್ತು ಅವರು ಕುಳಿತುಕೊಳ್ಳುತ್ತಿದ್ದ ಕಪ್ಪುಮರದ

ರಾಧಾ ಗೋಕುಲಾನಂದ ದೇವಾಲಯ

ಲೋಕನಾಥ ಗೋಸ್ವಾಮಿಯವರ ರಾಧಾವಿನೋದ ವಿಗ್ರಹಗಳು, ಬಲದೇವ ವಿದ್ಯಾಭೂಷಣರ ವಿಜಯಗೋವಿಂದ, ವಿಶ್ವನಾಥ ಚಕ್ರವರ್ತಿಯವರ ರಾಧಾಗೋಕುಲಾನಂದ ವಿಗ್ರಹಗಳೂ ಈ ದೇವಾಲಯದಲ್ಲಿವೆ. ನರೋತ್ತಮದಾಸ ಠಾಕುರರು ಪೂಜಿಸುತ್ತಿದ್ದ ಶ್ರೀಕೃಷ್ಣ ಮತ್ತು ಚೈತನ್ಯ ಮಹಾಪ್ರಭುಗಳ ವಿಗ್ರಹಗಳೂ ಇಲ್ಲಿವೆ. ಇವೆಲ್ಲಾ ಬೇರೆಬೇರೆ ಮೂಲ ದೇವಾಲಯಗಳಲ್ಲಿ ಪೂಜಿಸಲ್ಪಡುತ್ತಿದ್ದ ವಿಗ್ರಹಗಳು. ನಂತರ ಆ ವಿಗ್ರಹಗಳನ್ನು ಪೂಜಿಸುತ್ತಿದ್ದ ಗೋಸ್ವಾಮಿಗಳು ಅವುಗಳನ್ನು ಇಲ್ಲಿಗೆ ತಂದು ಪ್ರತಿಷ್ಠಾಪಿಸಿದರು. ಚೈತನ್ಯ ಮಹಾಪ್ರಭುಗಳು ರಘುನಾಥದಾಸ ಗೋಸ್ವಾಮಿಗಳಿಗೆ ನೀಡಿದ ಗೋವರ್ಧನ ಶಿಲೆಯು ಇಲ್ಲಿದೆ. ಈ ಶಿಲೆಯ ಮೇಲೆ ಚೈತನ್ಯರ ಹೆಬ್ಬೆರಳ ಗುರುತು ಇದೆ. ಚೈತನ್ಯರು ಈ ಶಿಲೆಯನ್ನು ತಮ್ಮ ಎದೆ ಅಥಾವಾ ಕಣ್ಣಿಗೆ ಒತ್ತಿಕೊಂಡು ಕೃಷ್ಣಜಪ ಮಾಡುತ್ತಿದ್ದರೆಂಬುದು ಪ್ರತೀತಿ. ಕೇಶೀಘಟ್ಟ ಮತ್ತು ರಾಧಾರಮಣ ದೇವಾಲಯಗಳ ನಡುವೆ ಈ ದೇವಾಲಯವಿದೆ.

ಈ ಎಲ್ಲಾ ದೇವಾಲಯಗಳು ರಾಧಾಕೃಷ್ಣರ ಪ್ರೇಮ ಪರಿಕಲ್ಪನೆಯನ್ನು ಹೆಚ್ಚು ಸಮರ್ಥಿಸಿಕೊಳ್ಳುವ ಕೇಂದ್ರಗಳು. ಅಲ್ಲದೆ ಇವೆಲ್ಲವು ಉತ್ತರಭಾರತದಲ್ಲೇ ಇರುವುದರಿಂದ ರಾಧಾಕೃಷ್ಣ ಪ್ರೇಮವೆನ್ನುವಂತಹ ಪರಿಕಲ್ಪನೆ ಉತ್ತರಭಾರತದ ಮೂಲಕವಾಗಿ ಜಗತ್ತಿನ ಇತರ ಕಡೆಗೆ ಪರಿಚಯವಾಯಿತು. ಈ ಕಲ್ಪನೆ ದಕ್ಷಿಣಭಾರತದಲ್ಲಿ ಮುಖ್ಯವಾಗಿ ಅಂಕುರಿಸಲಿಲ್ಲ. ಆದುದರಿಂದಲೇ ಹರಿದಾಸ ಸಾಹಿತ್ಯವು ರಾಧೆಯ ವಿಚಾರವನ್ನು ಕೇವಲ ಎರಡು ಕೀರ್ತನೆಗಳಿಗೆ ಮೀಸಲಾಗಿರಿಸಿ ಉಳಿದಂತೆ ಮೌನವನ್ನೇ ತಳೆಯಿತು ಎನ್ನಬೇಕು.

೬.೫ : ದೇವೋನ್ಮಾದ

ದಾಸಪಂಥಕ್ಕಿಂತ ಚೈತನ್ಯಪಂಥವು ದೇವೋನ್ಮಾದದ ವಿಚಾರದಲ್ಲಿ ಒಂದಿಷ್ಟು ಭಿನ್ನತೆಯನ್ನು ಕಂಡುಕೊಳ್ಳುತ್ತದೆ. ಅಂದರೆ ದಾಸಕುಲವು ದೇವೋನ್ಮಾದಕ್ಕೆ ಒಳಗಾಗಿಲ್ಲ ಎಂದಲ್ಲ. ಕೆಲವೊಂದು ದಾಸರು ದೇವೋನ್ಮಾದಕ್ಕೊಳಗಾದುದಕ್ಕೆ ಉದಾಹರಣೆಗಳಿದ್ದರೂ ಅದು ಚೈತನ್ಯಪಂಥದಷ್ಟಲ್ಲ. ಚೈತನ್ಯಪಂಥದಲ್ಲಿ ದೇವೋನ್ಮಾದವೇ ಮುಖ್ಯವಾಗಿ ಬಿಡುತ್ತದೆ. ಅಲ್ಲಿಯ ಭಕ್ತನೊಬ್ಬನು ಭಗವಂತನನ್ನು ಪ್ರೇಮಭಕ್ತಿಯಿಂದ ಕಂಡುಕೊಳ್ಳುವುದರಿಂದ ದೇವೋನ್ಮಾದವೇ ಆ ಪಂಥದ ಜೀವಾಳವಾಗುತ್ತದೆ. ಇಲ್ಲಿ ಭಕ್ತನೊಬ್ಬನು ಒಳಗಾಗುವ ಉನ್ಮಾದಸ್ಥಿತಿಯನ್ನು ಪ್ರೇಮೋನ್ಮಾದ, ದೈವೋನ್ಮಾದ, ಭಾವೋನ್ಮಾದ ಮೊದಲಾದ ರೀತಿಯಲ್ಲಿ ಕರೆಯಲಾಗುತ್ತದೆ. ದಾಸಪಂಥದಲ್ಲಿ ದಾಸರಿಗೆ ತಮ್ಮ ಸಾಮಾಜಿಕ ಕಾಳಜಿಯೇ ಮುಖ್ಯವಾಗಿದ್ದುದರಿಂದ ಅಲ್ಲಿ ದೇವೋನ್ಮಾದ ಒಂದೇ ಮುಖ್ಯವಾಗಿರುವುದಿಲ್ಲ. ಆದರೆ ಶರಣಾಗತಿ ಮತ್ತು ಭಕ್ತಿಸೇವೆಯನ್ನೇ ಪ್ರಧಾನವಾಗಿರಿಸಿಕೊಂಡ ಚೈತನ್ಯಪಂಥಕ್ಕೆ ದೇವೋನ್ಮಾದವೇ ಮುಖ್ಯವಾಗುತ್ತದೆ. ಈ ದೃಷ್ಟಿಯಿಂದಲೇ ಶ್ರೀಚೈತನ್ಯ ಮಹಾಪ್ರಭುಗಳ ಆವಿರ್ಭಾವವು ಆಗುತ್ತದೆ. ಕಾಶೀಕ್ಷೇತ್ರಕ್ಕೆ ಆಗಮಿಸಿದ ಚೈತನ್ಯರು,

ಭಾವಕಾಲಿ ವೇಚಿತೇ ಆಮಿ ಆಇಲಾಗ ಕಾಶೀಪುರೇ ।
ಗ್ರಾಹಕ ನಾಹಿ ನಾ ವಿಕಾಯ, ಲಇಾಯಬ ಘರೇ ॥[೨೦]

'ನನ್ನ ಭಾವುಕ ಪ್ರೇಮಾವೇಶದ ಭಾವನೆಗಳನ್ನು ಮಾರಲು ನಾನು ಈ ಕಾಶೀಪುರಕ್ಕೆ ಬಂದಿದ್ದೇನೆ. ಆದರೆ ಇಲ್ಲಿ ಕೊಳ್ಳುವ ಗ್ರಾಹಕರೇ ಕಾಣುತ್ತಿಲ್ಲ. ಅವು ಮಾರಾಟವಾಗದಿದ್ದರೆ ಅವನ್ನು ನಾನು ಮರಳಿಮನೆಗೆ ಒಯ್ಯಬೇಕು' ಎನ್ನುತ್ತಾರೆ. ಅಂದರೆ, ತಾನು ದೈವೋನ್ಮಾದಕ್ಕೆ ಒಳಗಾಗುವುದರ ಜೊತೆಗೆ ಲೌಕಿಕದಲ್ಲಿರುವ ಇತರರನ್ನು ಒಳಗಾಗಿಸಬೇಕೆಂಬುದು ಅವರ ನಿಲುವು. ಆದುದರಿಂದಲೇ ಅವರು ಪರಮಪ್ರಭುವಿನ ದಿವ್ಯನಾಮವನ್ನು ಮಾರಲು ಮಾಯಾವಾದಿಗಳ ನಗರವಾದ ಕಾಶೀಕ್ಷೇತ್ರ ಮಾತ್ರವಲ್ಲದೆ, ಇತರ ಭೂಭಾಗದಲ್ಲೂ ಸಂಚರಿಸಿದರು. ಕೇವಲ ಹಿಂದೂಗಳಲ್ಲದೆ ವಿಧರ್ಮೀಯರನ್ನೂ ಸಂಕೀರ್ತನೆಯ ಮೂಲಕ ದೇವೋನ್ಮಾದಕ್ಕೆ ಒಳಗಾಗಿಸಿದರು. ಜೊತೆಗೆ ತಾವೂ ದೈವೋನ್ಮಾದಕ್ಕೊಳಗಾದರು.

ಹರಿದಾಸಪಂಥವನ್ನು ಚೈತನ್ಯಪಂಥಕ್ಕೆ ಹೋಲಿಸಿದಾಗ, ದಾಸಪಂಥದ ಅನುಭಾವಿಗಳಲ್ಲಿ ವ್ಯಕ್ತವಾಗುವ ದೇವೋನ್ಮಾದವು ಚೈತನ್ಯಾನುಯಾಯಿಗಳಷ್ಟು ತೀವ್ರತೆಗೆ ಒಳಗಾಗುವುದಿಲ್ಲ. ಆದರೂ ಭಕ್ತಿಯ ವಿವಿಧಾನುಭವದ ಆಲಿಂಗನದಲ್ಲಿ ಭಕ್ತ ಮತ್ತು ಭಗವಂತನ ಸಂಬಂಧಗಳು ಹಲವು ಭಾವಗಳಲ್ಲಿ ಪ್ರಕಟಗೊಳ್ಳುತ್ತವೆ. ಇಲ್ಲಿಯ ದಾಸರ ಭಕ್ತಿಯ ಉನ್ಮಾದದಲ್ಲಿ ಭಗವಂತನು ಒಡೆಯನಾಗಿಯೂ, ಒಡನಾಡಿಯಾಗಿಯೂ ಭಕ್ತಕುಲಕ್ಕೆ ಸಹಕರಿಸುತ್ತಾನೆ. ಇಲ್ಲಿ ಭಗವಂತನ ಒಡನಾಟ ಒಂದಿಷ್ಟು ತಡವಾದರೂ ಭಕ್ತ ಸಹಿಸುವುದಿಲ್ಲ. 'ಬಾರಯ್ಯ ಎನ್ನ ಮನಮಂದಿರಕೆ ಬೇರೊಂದು ಯೋಚನೆ ಮಾಡದೆ ಸಿರಿಪತಿ' ಎಂದು ವ್ಯಾಸರಾಯರು ಹಾಡಿಹೊಗಳಲಿಕ್ಕೆ ದೇವೋನ್ಮಾದವೇ ಕಾರಣವಾಗುತ್ತದೆ.

ಈ ದೈವೋನ್ಮಾದವನ್ನು ಚೈತನ್ಯಪಂಥವು 'ಕೃಷ್ಣಾನುರಕ್ತಿ'ಯೆಂದು ಕರೆಯುತ್ತದೆ. ಈ ಕೃಷ್ಣಾನುರಕ್ತಿಯು ನಶಿಸುವುದಿಲ್ಲ. ಬದಲಾಗಿ ಅದು ವರ್ಧಿಸುತ್ತಾ ಹೋಗುತ್ತದೆ. ಶ್ರವಣ ಕೀರ್ತನಾದಿಯಾಗಿ ಒಂಬತ್ತು ರೀತಿಯ ಭಕ್ತಿಸೇವೆಗಳೊಂದಿಗೆ ದೈವಪ್ರೇಮವು ಸೇರಿಕೊಂಡಾಗ ಅಲ್ಲಿ ವಿಭಾವ, ಅನುಭಾವ, ಸಾತ್ವಿಕ ಹಾಗೂ ವ್ಯಭಿಚಾರೀಭಾವಗಳು ಹುಟ್ಟಿಕೊಳ್ಳುತ್ತವೆ. ಈ ಭಾವಗಳಿಂದಲೇ ಭಕ್ತನೋರ್ವನು ಪಾರಮಾರ್ಥಿಕ ಆನಂದವನ್ನು ಅನುಭವಿಸಲು ಮುಂದಾಗುತ್ತಾನೆ. ಕೃಷ್ಣಾನುರಕ್ತಿ ಅಥವಾ ದೈವೋನ್ಮಾದದ ಅನುಭಾವವನ್ನು ಗೌಡೀಯಪಂಥದ ಶ್ರೀಲ ಭಕ್ತಿವಿನೋದ ಠಾಕೂರರು ತಮ್ಮ 'ಅಮೃತ ಪ್ರವಾಹ ಭಾಷ್ಯ'ದಲ್ಲಿ ಹದಿಮೂರು ವರ್ಗಗಳಾಗಿ ವಿಂಗಡಿಸುತ್ತಾರೆ. ಅವುಗಳೆಂದರೆ, ೧. ನರ್ತನ, ೨. ನೆಲದಮೇಲೆ ಹೊರಳಾಡುವುದು, ೩. ಗಾಯನ, ೪. ಕಿರುಚಿಕೊಳ್ಳುವುದು, ೫. ಜಿಗಿಯುವುದು, ೬. ಗಟ್ಟಿಯಾಗಿ ಸದ್ದುಮಾಡುವುದು, ೭. ಆಕಳಿಸುವುದು, ೮. ವೇಗದ ಉಸಿರಾಟ, ೯. ಮಂದಿಯ ಮಾತಿನ ಬಗೆಗೆ ಅಲಕ್ಷ್ಯ, ೧೦. ಜೊಲ್ಲು ಸುರಿಸುವುದು, ೧೧. ಗರ್ಜಿಸುತ್ತಾ ನಗುವುದು, ೧೨. ಅಸ್ಥಿರತೆ ಹಾಗೂ ೧೩. ಬಿಕ್ಕಳಿಕೆ. ಇವೆಲ್ಲವುಗಳು ಹರಿಪಾರಮ್ಯವನ್ನು ಪಡೆಯುವಲ್ಲಿ

ಭಕ್ತನೋರ್ವನಿಗೆ ಆಗುವ ರಸಾನುಭವಗಳು. ಇವಲ್ಲದೆ, ದೇವೋನ್ಮಾದವು ಶಾಂತ, ದಾಸ್ಯ, ಸಖ್ಯ, ವಾತ್ಸಲ್ಯ ಹಾಗೂ ಮಧುರವೆಂಬ ವಿಧಗಳಿಂದಲೂ ದೇವೋತ್ತಮ ಪರಮಪುರುಷನಲ್ಲಿ ಅನುರಕ್ತಿಗೊಳ್ಳಬಲ್ಲವು.

ದಾಸಕುಲದ ಶ್ರೀಪಾದರಾಯರು ಕೀರ್ತನೆಗಳನ್ನು ರಚಿಸಿ ಹಾಡುವಾಗ ತಮ್ಮ ಕಾಲಿಗೆ ಗೆಜ್ಜೆಯನ್ನು ಕಟ್ಟಿಕೊಂಡು ಕುಣಿಯುತ್ತಿದ್ದುದು ದೇವೋನ್ಮಾದಕ್ಕೆ ಒಳಗಾಗಿ ಎಂದುಕೊಳ್ಳಬೇಕು. ಪುರಂದರದಾಸರು ಕೂಡ ದೇವೋನ್ಮಾದಕ್ಕೆ ಒಳಗಾಗಿ,

ಗೆಜ್ಜೆ ಕಾಲ್ಕಟ್ಟಿರೆಂಬೊ ಕಾಗದ ಬಂದಿದೆ ।
ಹೆಜ್ಜೆಹೆಜ್ಜೆಗೆ ಹರಿಯೆನ್ನಿರೆಂಬೊ ಕಾಗದ ಬಂದಿದೆ ॥

ಎನ್ನುವ ಮೂಲಕ ಸಮಾಜದ ಜನರನ್ನು ದೇವೋನ್ಮಾದಕ್ಕೆ ಒಳಗಾಗಿಸಲು ಪ್ರಯತ್ನಿಸುತ್ತಾರೆ.

ಚೈತನ್ಯಪಂಥದಲ್ಲಿ ಶ್ರೀಲ ಗದಾಧರದಾಸ ಪ್ರಭುಗಳ ಹೆಸರು ಬಹಳ ಮುಖ್ಯವಾಗುತ್ತದೆ. ಒಮ್ಮೆ ಗದಾಧರರು ನಿತ್ಯಾನಂದಪ್ರಭುಗಳೊಡನೆ ಜಗನ್ನಾಥಪುರಿಯಿಂದ ಬಂಗಾಳಕ್ಕೆ ಹಿಂದಿರುಗುತ್ತಿರುವಾಗ ತಮ್ಮನ್ನೇ ತಾವು ಮರೆತು, ವ್ರಜಭೂಮಿಯ ಮೊಸರನ್ನು ಮಾರುವ ಹುಡುಗಿಯಂತೆ ಮಾತಾಡತೊಡಗುತ್ತಾರೆ. ಇನ್ನೊಮ್ಮೆ ಗೋಪಿಯರ ದೇವೋನ್ಮಾದದಲ್ಲಿ ತನ್ಮಯರಾದ ಗದಾಧರರು ಗಂಗಾಜಲ ತುಂಬಿದ ಒಂದು ಕುಂಭವನ್ನು ಹಾಲು ಮಾರುವವರಂತೆ ತಲೆಮೇಲೆ ಹೊತ್ತು ತಿರುಗಲಾರಂಭಿಸುತ್ತಾರೆ. ಅಂತೆಯೇ ಚೈತನ್ಯರು ಕಲ್ಕತ್ತದ ಉಪನಗರವೆನಿಸಿದ ವರಾಹನಗರದ ಬ್ರಾಹ್ಮಣರೊಬ್ಬರ ಮನೆಯಲ್ಲಿ ಶ್ರೀಮದ್ಭಾಗವತದ ಭಕ್ತಿಯೋಗ ಪ್ರತಿಪಾದನೆಯ ವ್ಯಾಖ್ಯಾನವನ್ನು ನೀಡುತ್ತಿದ್ದಂತೆಯೇ ದೇವೋನ್ಮಾದಕ್ಕೆ ಒಳಗಾಗಿ ಪ್ರಜ್ಞೆತಪ್ಪಿ ಬಿದ್ದುಬಿಡುತ್ತಾರೆ.

ದೇವೋನ್ಮಾದದಿಂದ ಭಕ್ತನೊಬ್ಬನು ತನ್ನ ದೈಹಿಕ ಶ್ರಮವನ್ನು ಮರೆತು ಬಿಡುತ್ತಾನೆ. ಅಲ್ಲದೆ ಅವನ ಆಂಗಿಕಕ್ರಿಯೆಗಳು ಆತನ ಹತೋಟಿಯನ್ನು ಮೀರಿರುತ್ತದೆ. ಇದೊಂದು ರೀತಿಯಲ್ಲಿ ಭಕ್ತಿಯಾಲಿಂಗನವೆನ್ನಬಹುದು. ಈ ರೀತಿಯ ಭಕ್ತಿಯಾಲಿಂಗನಕ್ಕೆ ಚೈತನ್ಯಪಂಥದಲ್ಲಿ ಹಲವು ಉದಾಹರಣೆಗಳು ಸಿಗಲುಸಾಧ್ಯ. ಶ್ರೀಚೈತನ್ಯ ಮಹಾಪ್ರಭುಗಳು ಕೃಷ್ಣಸಂಕೀರ್ತನೆಯ ದೇವೋನ್ಮಾದಕ್ಕೆ ಒಳಗಾಗಿ ಗುಂಡೀಚಾ ಮಂದಿರದ ಮಾರ್ಜನದಲ್ಲಿ ನೂರಾರು ಜನರ ಕೆಲಸವನ್ನು ತಾವೊಬ್ಬರೇ ಮಾಡುತ್ತಿದ್ದರಂತೆ.

ಶತಹಸ್ತೇ ಕರೇನ ಯೇನಕ್ಷಾಲನ ಮಾರ್ಜನ
ಪ್ರತಿಜನ ಪಾಶೇ ಯಾಇ ಕರಾನ ಶಿಕ್ಷಣ ॥[೨೦]

ಆ ಸನ್ನಿವೇಶವು ನೋಟಕರ ಕಣ್ಣಿಗೆ, ಚೈತನ್ಯ ಮಹಾಪ್ರಭುಗಳು ನೂರಾರು ಕೈಗಳಿಂದ ಕೆಲಸವನ್ನು ಮಾಡುತ್ತಿರುವಂತೆ ತೋರುತ್ತಿತ್ತೆಂದು ಚೈತನ್ಯ ಚರಿತಾಮೃತವು ಹೇಳುತ್ತದೆ. ಅಂತೆಯೇ ಗೌಡೀಯಾನುಯಾಯಿಗಳಾಗಿದ್ದ ಸ್ವರೂಪ ದಾಮೋದರರು ಭಾವಸಮಾಧಿಯಲ್ಲಿ ಹಾಡುತ್ತಿದ್ದಾಗ, ಅವರೊಂದಿಗಿದ್ದ ಶ್ರೀಕೃಷ್ಣ ಚೈತನ್ಯರು ಹಗಲಿರುಳೆನ್ನದೆ ಅದನ್ನು ಸವಿಯುತ್ತಿದ್ದರಂತೆ. ಅಂತಹ ಕೆಲವೊಂದು ಸಂದರ್ಭಗಳಲ್ಲಿ ಚೈತನ್ಯ ಮಹಾಪ್ರಭುಗಳು ಭಾವೋನ್ಮಾದಪರವಶರಾಗಿ ನೆಲದ ಮೇಲೆ ಕುಳಿತು ತಮ್ಮ ತೋರುಬೆರಳಿನಿಂದ ನೆಲದಲ್ಲಿ ಏನೇನನ್ನೋ ಬರೆಯುತ್ತಿದ್ದರೆಂದು ಅಲ್ಲಿಯ ಸಾಹಿತ್ಯವು ದಾಖಲೆಯನ್ನೊದಗಿಸುತ್ತದೆ.

ಭಾವೇರ ಆವೇಶೇ ಕಭು ಭೂಮಿತೇ ವಸಿಯಾ ।
ತರ್ಜನೀತೇ ಭೂಮೇಲಿಖೇ ಅಧೋಮುಖ ಹಇಾ ॥[೨೨]

ಶ್ರೀಚೈತನ್ಯ ಮಹಾಪ್ರಭುಗಳು ಪುರಿ ಜಗನ್ನಾಥನನ್ನು ಗರುಡಗಂಬದ ಹಿಂದಿನಿಂದಲೇ ನೋಡುತ್ತಿದ್ದುದು ರೂಢಿ. ಆದರೆ ಒಂದು ಬಾರಿ ಜಗನ್ನಾಥನನ್ನು ಕಾಣುವ ಭಾವೋನ್ಮಾದದಲ್ಲಿ ದೇವರ ಸಭಾಂಗಣವನ್ನು ಹಾದುಹೋಗಿ, ದೇವರ ನೈವೇದ್ಯವಿಡುವ ಕೊಠಡಿಯನ್ನು ಪ್ರವೇಶಿಸುತ್ತಾರೆ. ಇದನ್ನು ಚೈತನ್ಯಪಂಥವು 'ಮರ್ಯಾದಾಲಂಘನ'ವೆಂದು ಕರೆಯುತ್ತದೆ. ಅಂದರೆ ಭಕ್ತನೋರ್ವನು ಭಗವಂತ ಹಾಗೂ ಗುರುವನ್ನು ದೂರದಿಂದಲೇ ನೋಡಬೇಕು. ಈ ಕ್ರಮವನ್ನು 'ಮರ್ಯಾದಾ'ವೆಂದು ಕರೆಯುತ್ತಾರೆ. ಆದರೂ ಮರ್ಯಾದಾಲಂಘನವನ್ನು ಮಾಡಿದ ವಿಚಾರ ಮಾತ್ರ ತನ್ನನ್ನು ತಾನು ಮರೆತು, ತನ್ನನ್ನು ದೇವೋನ್ಮಾದಕ್ಕೆ ಒಳಗಾಗಿಸಿದುದಕ್ಕೆ ಉದಾಹರಣೆಯಾಗುತ್ತದೆ.

ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ, ಭಾವೋನ್ಮಾದಕ್ಕೆ ಒಳಗಾದ ವ್ಯಕ್ತಿಯು ಭಾವುಕತೆಯ ವಸ್ತುಸ್ಥಿತಿಗೆ ಅನುಗುಣವಾಗಿ ಬದಲಾಗುತ್ತಿರುತ್ತಾನೆ. ಇದಕ್ಕೆ, ಚೈತನ್ಯ ಮಹಾಪ್ರಭುಗಳಲ್ಲಿ ಭಗವಂತನ ಕುರಿತು ಉನ್ಮಾದವು ಹೆಚ್ಚಿದಾಗ, ಅವರಲ್ಲಿಯ ಭಾವಾವೇಶವು ಶಾಂತತೆ, ಜಂಟೀಭಾವ, ಲೋಕೋತ್ತರ, ಸ್ವಭಾವಜನ್ಯ ಹಾಗೂ ಭಾವ ಪ್ರೇರಕಗಳು ಒಮ್ಮಿಂದೊಮ್ಮೆಲೆ ಜಾಗೃತವಾಗಿ ಬಿಡುತ್ತಿದ್ದುದೇ ಕಾರಣವಾಗುತ್ತದೆ. ಅಲ್ಲದೆ ಅವರಲ್ಲಾಗುತ್ತಿದ್ದ ಬದಲಾವಣೆಗಳು ಇತರರ ಹೃನ್ಮನಗಳನ್ನು ಆಕರ್ಷಿಸುತ್ತಿದ್ದವು. ಅದಕ್ಕೆ ಅವರು ದೇವೋನ್ಮಾದದ ಭಾವಸ್ಪರ್ಶದಿಂದಾಗಿ ಅವರ ದೇಹವು ಹೂತಳೆದ ಮರಗಳಿರುವ ಪರ್ವತದಂತೆ ಕಾಣುತ್ತಿದ್ದುದೇ ನಿದರ್ಶನವಾಗುತ್ತದೆ.

ಭಾವೋನ್ಮಾದದಲ್ಲಿ ಆಂಗಿಕ ಚಿಹ್ನೆಗಳು ವೈವಿಧ್ಯವಾಗಿ ಪ್ರಕಟವಾಗುತ್ತವೆ ಎನ್ನುವುದಕ್ಕೆ ಸಾರ್ವಭೌಮ ಭಟ್ಟಾಚಾರ್ಯರ ಅಳಿಯನಾದ ಅಮೋಘನ ಬದುಕಿನ ಘಟನೆಗಳೇ ಸಾಕ್ಷಿಯಾಗುತ್ತವೆ. ಆತನು ಚೈತನ್ಯರನ್ನು ನಿಂದಿಸಿದುದರ ಪರಿಣಾಮವಾಗಿ, ತನ್ನ ಮಾವನ ಅತಿಯಾದ ಕೋಪ ಹಾಗೂ ದುಃಖಕ್ಕೆ ಕಾರಣನಾಗಿ ಮುಂದೆ ಕಾಲರಾರೋಗಕ್ಕೆ ಗುರಿಯಾಗಿ ಸಾಯುವ ಸ್ಥಿತಿಗೆ ಬರುತ್ತಾನೆ. ಇನ್ನೇನು, ಆತನು ಸಾಯುವ ಸ್ಥಿತಿಯಲ್ಲಿದ್ದಾಗ ಸ್ವತಃ ಚೈತನ್ಯ ಮಹಾಪ್ರಭುಗಳೇ ಆತನಿದ್ದಲ್ಲಿಗೆ ಬಂದು, ಆತನ ಎದೆಯ ಮೇಲೆ ಬಲಗೈಯ್ಯನ್ನಿಟ್ಟು ಹರೇಕೃಷ್ಣ ಮಹಾಮಂತ್ರವನ್ನು ಉಚ್ಚರಿಸುವಂತೆ ಹೇಳುತ್ತಾರೆ. ಮೃತ್ಯುಶಯ್ಯೆಯಲ್ಲಿದ್ದ ಅಮೋಘನು, ಚೈತನ್ಯರ ಕರಸ್ಪರ್ಶದಿಂದ ದೇವೋನ್ಮಾದಕ್ಕೊಳಗಾಗಿ, ಅಳು, ನಡುಕ, ಪುಲಕ, ಸ್ತಂಭನ, ಬೆವರುವಿಕೆ, ಗದ್ಗದಸ್ವರ ಮೊದಲಾದ ಉನ್ಮಾದದ ಚಿಹ್ನೆಗಳಿಗೊಳಗಾಗುತ್ತಾನೆ.

ದೇವೋನ್ಮಾದದಲ್ಲಿ ಮುಳುಗಿದವರಲ್ಲಿ ಕಾಡಿನ ಮೃಗಪಕ್ಷಿಗಳು ಮುಖ್ಯವಾಗುತ್ತವೆ. ಶ್ರೀಜಗನ್ನಾಥನ ರಥೋತ್ಸವದಲ್ಲಿ ಪಾಲ್ಗೊಂಡ ಮೇಲೆ ಚೈತನ್ಯ ಮಹಾಪ್ರಭುಗಳು ಬಲಭದ್ರ ಭಟ್ಟಾಚಾರ್ಯ ಎಂಬ ಬ್ರಾಹ್ಮಣನೊಂದಿಗೆ ವೃಂದಾವನದ ಕಡೆಗೆ ತೆರಳುವಾಗ ಕಟಕ್‌ನಗರದ ಉತ್ತರಭಾಗದಲ್ಲಿರುವ ದಟ್ಟ ಅರಣ್ಯವನ್ನು

ಪ್ರವೇಶ ಮಾಡುತ್ತಾರೆ. ಈ ಕಾಡಿನ ಮಧ್ಯದಲ್ಲಿ ಚೈತನ್ಯರ ಸಂಕೀರ್ತನೆಯನ್ನು ಆಲಿಸಿದ ಹೆಣ್ಣುಜಿಂಕೆಗಳು ಅವರನ್ನೇ ಹಿಂಬಾಲಿಸಲು ಪ್ರಾರಂಭಿಸಿದವು. ಅಂತೆಯೇ ಅವರ ಸಂಕೀರ್ತನೆಯ ಮಧುರಸ್ವರಕ್ಕೆ ಐದಾರು ಹುಲಿಗಳೂ ಅವರಲ್ಲಿಗೆ ಬಂದವು.

ಹೇನ ಕಾಲೇ ವ್ಯಾಘ್ರ ತಥಾ ಆಇಲ ಪಾಂಚಸಾತ ।
ವ್ಯಾಘ್ರ ಮೃಗೀ ಮಿಲಿ ಚಲೇ ಮಹಾಪ್ರಭುರ ಸಾಥ ॥[೨೩]

ಇಲ್ಲಿ ಬಂದಿರುವ ಮೃಗಗಳೆಲ್ಲವು ತಮ್ಮ ವೈರತ್ವವನ್ನು ಮರೆತು ಆಲಿಂಗಿಸಿಕೊಳ್ಳುತ್ತವೆ. ಈ ಸಂದರ್ಭದಲ್ಲಿ ಚೈತನ್ಯರು ಆ ಮೃಗಗಳಿಗೆ 'ಕೃಷ್ಣ ಕೃಷ್ಣ' ಎಂದು ಸಂಕೀರ್ತನೆಯನ್ನು ಮಾಡಿ ಎಂದಾಕ್ಷಣ, ದೇವೋನ್ಮಾದಕ್ಕೊಳಗಾದ ಆ ಮೃಗಗಳು 'ಕೃಷ್ಣ' ಎಂದು ಹೇಳುತ್ತಾ ಸಂಕೀರ್ತನೆಗೆ ಮುಂದಾಗುತ್ತವೆ. ಇದೇ ರೀತಿಯಾಗಿ ಚೈತನ್ಯರ ಮುಂದಿನ ದಾರಿಯಲ್ಲಿ ಬಂದ ಗೋವುಗಳು, ಗಿಣಿ ಕೋಗಿಲೆಗಳು, ದುಂಬಿಗಳು ತಮ್ಮ ಕೆಲಸವನ್ನು ಮರೆತು, ದೇವೋನ್ಮಾದದಿಂದ ಕೃಷ್ಣನಾಮ ಸಂಕೀರ್ತನೆಗೆ ಒಳಗಾಗುವುದನ್ನು ಕಾಣುತ್ತೇವೆ.

ಕನ್ನಡದ ದಾಸಕುಲಕ್ಕೆ ತಿರುಪತಿಬೆಟ್ಟದ ಕುರಿತು ಪೂಜ್ಯಭಾವವಿದ್ದಂತೆ, ಗೌಡೀಯ ಭಕ್ತರಿಗೆ ಗೋವರ್ಧನಗಿರಿ ಎಂದರೆ ಅಷ್ಟೇ ಪರಮಭಕ್ತಿ. ವಾದಿರಾಜರು ತಿರುಮಲೆಯನ್ನು ಸಾಲಿಗ್ರಾಮ ಶಿಲೆಯೆಂದು ಭಾವಿಸಿ ದೈವೋನ್ಮಾದಕ್ಕೆ ಒಳಗಾದಂತೆ, ಚೈತನ್ಯ ಮಹಾಪ್ರಭುಗಳು ಗೋವರ್ಧನಗಿರಿಯ ಪ್ರತಿಯೊಂದು ವಸ್ತುವಿನಲ್ಲೂ ಕೃಷ್ಣಪ್ರೇಮವನ್ನು ಕಾಣುತ್ತಾರೆ. ಗಿರಿಯ ಏಕಶಿಲೆಯೊಂದನ್ನು ಆಲಿಂಗಿಸಿಕೊಂಡು ದೈವಪ್ರೇಮದಲ್ಲಿ ಮುಳುಗಿಬಿಡುತ್ತಾರೆ. ಅಷ್ಟೇ ಅಲ್ಲದೆ, ವೃಂದಾವನದಿಂದ ಮಹಾವನವೆನಿಸಿದ ಗೋಕುಲಕ್ಕೆ ಬಲಭದ್ರ ಭಟ್ಟಾಚಾರ್ಯರೊಂದಿಗೆ ಚೈತನ್ಯರು ತೆರಳುವ ದಾರಿಮಧ್ಯದಲ್ಲಿ ಒಬ್ಬ ಗೋಪಾಲಕನ ಕೊಳಲಗಾನವನ್ನು ಕೇಳಿಸಿಕೊಂಡು ದೇವೋನ್ಮಾದದ ಪ್ರೇಮಭಾವದಲ್ಲಿ ಮುಳುಗಿಬಿಡುತ್ತಾರೆ. ಅದರ ಪರಿಣಾಮವಾಗಿ, ಪ್ರಜ್ಞೆತಪ್ಪಿ ನೆಲಕ್ಕುರುಳಿ ಬಿಡುತ್ತಾರೆ.

ಚೈತನ್ಯರು ಮಥುರೆಗೆ ಹೋಗುವ ಮಾರ್ಗ ಮಧ್ಯದಲ್ಲಿ ಯಮುನಾನದಿಯ ದರ್ಶನವಾಗಲು, ಕೃಷ್ಣನನ್ನು ಕುರಿತ ಪ್ರೇಮೋನ್ಮಾದದಲ್ಲಿ ನದಿಗೆ ಹಾರಿಬಿಡುತ್ತಿದ್ದರು. ಕೃಷ್ಣನ ರಾಸಲೀಲೆಯನ್ನು ನೆನೆದು ಯಮುನೆಯ ದಡದಲ್ಲಿರುವ ಇಪ್ಪತ್ತನಾಲ್ಕು ಸ್ನಾನಘಟ್ಟ(ಅವಿಮುಕ್ತ, ಅಧಿರೂಢ, ಗುಹ್ಯ, ಯೋಗ, ಕನಖಲ, ತಿಂಡುಕ, ಸೂರ್ಯ, ವಟ, ಧ್ರುವಘಾಟ, ಋಷಿ, ಮೋಕ್ಷ, ಬೋಧ, ಗೋಕರ್ಣ, ಕೃಷ್ಣಗಂಗಾ, ವೈಕುಂಠ, ಅಸಿಕುಂಡ, ಚತುಃಸಾಮುದ್ರಿಕ ಕೂಪ, ಅಕ್ರೂರ, ಯಾಜ್ಞಿಕ ವಿಪ್ರಸ್ಥಾನ, ಕುಬ್ಜಾಕೂಪ, ರಂಗಸ್ಥಲ, ಮಂಚಸ್ಥಲ, ಮಲ್ಲಯುದ್ಧಸ್ಥಾನ ಮತ್ತು ದಶಾಶ್ವಮೇಧತೀರ್ಥ)ಗಳಲ್ಲೂ ಪ್ರೇಮೋನ್ಮಾದದಿಂದ ಸ್ನಾನವನ್ನು ಮಾಡಲು ಮುಂದಾಗುತ್ತಾರೆ.

ರಾಧಾಕುಂಡವನ್ನು ಕಂಡಕೂಡಲೆ ಚೈತನ್ಯರಿಗೆ ದ್ವಾಪರದ ನೆನಪಾಗುತ್ತದೆ. ತೀವ್ರವಾದ ದಿವ್ಯೋನ್ಮಾದದಿಂದ ರಾಧಾಕುಂಡದಲ್ಲಿ ಸ್ನಾನವನ್ನು ಪೂರೈಸಿಕೊಂಡು ಅಲ್ಲಿಯ ಮೃತ್ತಿಕೆಯನ್ನೇ ತನ್ನ ದೇಹಕ್ಕೆ ಹಚ್ಚಿಕೊಳ್ಳುತ್ತಾರೆ.

ಯಮುನಾನದಿಯ ಹತ್ತಿರದಲ್ಲಿ ವಾಸಿಸುತ್ತಿದ್ದ ರಜಪೂತ ಜಾತಿಗೆ ಸೇರಿದ ಕೃಷ್ಣದಾಸರಿಗೆ ಕನಸೊಂದು ಬಿದ್ದು ಅದರಂತೆ, ನದಿಯ ಇನ್ನೊಂದು ಪಾರ್ಶ್ವದಲ್ಲಿ ಚೈತನ್ಯರನ್ನು ಕಾಣುತ್ತಾರೆ. ಆಗ ಪ್ರಭುಗಳು ಬೀರಿದ ಕರುಣೆಯಿಂದ ಕೃಷ್ಣದಾಸರಲ್ಲಿ ದೈವೋನ್ಮಾದ ಪ್ರೇಮವು ಹೆಚ್ಚಾಗಿ ಹರಿನಾಮಸ್ಮರಣೆಗೆ ತೊಡಗುತ್ತಾರೆ. ಮುಖ್ಯವಾಗಿ ಚೈತನ್ಯಪಂಥವು ದೇವೋನ್ಮಾದಕ್ಕೆ ಹೆಸರಾದುದು. ದಾಸಪಂಥವು ದೇವೋನ್ಮಾದಕ್ಕೆ ಒಳಗಾದರೂ ಚೈತನ್ಯಪಂಥವು ಕಂಡು ಸ್ವೀಕರಿಸಿಕೊಂಡ ದೇವೋನ್ಮಾದಕ್ಕೆ ಸಮಾನವಲ್ಲವೆಂದೇ ಹೇಳಬೇಕು.

೬.೬ : ಸಾಹಿತ್ಯದಲ್ಲಿ ಪುರಾಣಕತೆ ಮತ್ತು ಪ್ರಹೇಳಿಕೆಗಳು

ದಾಸಸಾಹಿತ್ಯವು ಚೈತನ್ಯಪಂಥದ ಸಾಹಿತ್ಯಕ್ಕಿಂತ ಹಲವು ರೀತಿಯಲ್ಲಿ ಭಿನ್ನ. ಅವುಗಳಲ್ಲೊಂದು ಕೀರ್ತನೆಗಳು ಸಾರುವ ಪುರಾಣಕತೆ ಹಾಗೂ ಪ್ರಹೇಳಿಕೆಗಳು. ದಾಸಸಾಹಿತ್ಯದಲ್ಲಿ ರಚಿತಗೊಂಡಿರುವ ಪೌರಾಣಿಕ ಕಥಾವಿಚಾರವು ಹಲವು ಬಾರಿ ಒಗಟಿನಂತೆಯೇ ಕಂಡುಬರುತ್ತದೆ. ಆದರೆ ಇಂತಹ ವೈಶಿಷ್ಟ್ಯಗಳು ಚೈತನ್ಯಪಂಥಕ್ಕೆ ಹೋಲಿಸಿದರೆದಲ್ಲಿ ಒಂದಿಷ್ಟು ಕಡಿಮೆಯೆಂದೇ ಹೇಳಬೇಕು. ಅದರೂ ಅಪರೂಪಕ್ಕೊಮ್ಮೆ ಪ್ರಹೇಳಿಕೆಯಂತೆ ಗೋಚರವಾಗುವ ಚೈತನ್ಯಸಾಹಿತ್ಯವು ಸಿಕ್ಕಿದರೂ, ಅದು ಚಿಂತನೆಯಲ್ಲಿ ಆಳಕ್ಕಿಳಿಯದೆ, ಬಲುಬೇಗನೆ ಅದರ ಅಂತರಾರ್ಥವನ್ನು ಬಿಟ್ಟುಕೊಡುತ್ತದೆ.

ಚೈತನ್ಯ ಚರಿತಾಮೃತದಲ್ಲಿ ಬರುವ ಕೇಶವ ಕಾಶ್ಮೀರಿಪಂಡಿತರ ಗಂಗೆಯ ಕುರಿತಾದ ಸಾಹಿತ್ಯದಲ್ಲಿ ಪೌರಾಣಿಕ ಹುಡುಕಾಟವನ್ನು ಒಂದಿಷ್ಟು ಮಾಡಬಹುದು. ಗೌಡೀಯಸಾಹಿತ್ಯದಲ್ಲಿ ಇಂತಹ ರಚನೆಗಳು ಬಹಳಷ್ಟಿಲ್ಲದಿದ್ದರೂ ಅಪರೂಪವಾಗಿ ಕಂಡುಬರಲುಸಾಧ್ಯ.

ಮಹತ್ತ್ವಂ ಗಂಗಾಯಾಃ ಸತತಮ್ ಇದಮ್ ಆಭಾತಿ ನಿತರಾಂ
ಯದ್ ಏಷಾ ಶ್ರೀವಿಷ್ಣೋಶ್ಚರಣ ಕಮಲೋತ್ಪತ್ತಿ ಸುಭಗಾ ।
ದ್ವಿತೀಯ ಶ್ರೀಲಕ್ಷ್ಮೀರ್ ಇವ ಸುರ ನರೈರ್ ಅರ್ಚ್ಯ ಚರಣಾ
ಭವಾನೀ–ಭರ್ತುರ್ ಯಾ ಶಿರಸಿ ವಿಭವತಿ ಅದ್ಭುತ ಗುಣಾ ॥ –ಚೈತನ್ಯ ಚರಿತಾಮೃತ

ಇಲ್ಲಿ, ಗಂಗಾಮಾತೆಯ ಗರಿಮೆ ಎಂದೆಂದಿಗೂ ಇರುತ್ತದೆ. ಆಕೆ ಅತ್ಯಂತ ಧನ್ಯಳು. ಏಕೆಂದರೆ ಆಕೆ ಭಗವಾನ್ ವಿಷ್ಣುವಿನ ಪಾದಾರವಿಂದಗಳಲ್ಲಿ ಹುಟ್ಟಿದವಳು. ಆಕೆ ದ್ವಿತೀಯ ಲಕ್ಷ್ಮಿಯಾದ್ದರಿಂದಲೇ ಆಕೆಯು ಸುರರಿಂದಲೂ ಮಾನವರಿಂದಲೂ ಆರಾಧಿಸಲ್ಪಡುತ್ತಾಳೆ. ಅದ್ಭುತ ಗುಣಸಂಪನ್ನೆಯಾದ್ದರಿಂದ ಆಕೆಯು ಶಿವನ ತಲೆಯನ್ನು ಅಲಂಕರಿಸಿದ್ದಾಳೆ ಎನ್ನುವಲ್ಲಿ, ದಾಸಪಂಥದ 'ಹರಿಪದನಖದಿಂದ ಹರಿದು ಬಂದಳು ಗಂಗೆ.....' ಎನ್ನುವ ಕೀರ್ತನೆಯನ್ನು ನೆನಪಿಸುತ್ತದೆ. ಹೀಗೆ ಚೈತನ್ಯ ಸಾಹಿತ್ಯದಲ್ಲಿ ಬರುವ ಪೌರಾಣಿಕ ಕಥೆಗಳು ಸಂಕ್ಷಿಪ್ತವಾಗಿ ಮುಗಿದು ಬಿಡುತ್ತದೆ.

ಕೀರ್ತನಾಸಾಹಿತ್ಯದಲ್ಲಿ ಕೆಲವೊಂದು ಪುರಾಣಕತೆಗಳು ಮೇಲ್ನೋಟಕ್ಕೆ ಗೋಚರವಾಗದೆ, ಅದರ ಅಂತರಾರ್ಥದಲ್ಲಿ ಹುದುಗಿರುವುದನ್ನು ವಿಶೇಷ ಪರಿಶ್ರಮದಿಂದ ಅರ್ಥೈಸಿಕೊಳ್ಳಬಹುದಾಗಿದೆ. ಸಾಮಾನ್ಯವಾಗಿ

ಕಾವ್ಯಾರ್ಥವು ರೂಢಾರ್ಥ, ಯೋಗಾರ್ಥ, ಯೋಗ ರೂಢಾರ್ಥ ಎಂಬ ಮೂರು ಅರ್ಥಗಳನ್ನು ಪಡೆದಿರಬೇಕಾಗುತ್ತದೆ. ಅಂತಹ ಪ್ರಯೋಗಾರ್ಥಗಳು ಇಲ್ಲಿ ಹೇರಳವಾಗಿದ್ದರೂ ಅವುಗಳಲ್ಲಿ ಕೆಲವು ತಾತ್ತ್ವಿಕತೆಗೆ ಉದಾಹರಣೆಗಳಾಗಿ ನಿಲ್ಲಬಲ್ಲವುಗಳು. ಇನ್ನೂ ಕೆಲವು ಲೌಕಿಕಕ್ಕೆ ಸಂಬಂಧ ಪಟ್ಟವು. ಆದರೆ ಇವುಗಳಿಂದ ಹೊರತಾದ ಹೆಚ್ಚಿನ ಕೀರ್ತನೆಗಳು ಪುರಾಣ ಸಂದರ್ಭಗಳನ್ನು ನೆನಪಿಸುವಂತಹವು. ಇಂತಹ ವಿಚಾರಗಳನ್ನು ದಾಸರುಗಳು ತಮ್ಮ ಕೀರ್ತನೆಯ ಒಂದು ಪಾದದಲ್ಲಿ, ಪಲ್ಲವಿ ಅಥವಾ ಚರಣದಲ್ಲಿ ಒಗಟಿನಂತೆ ಹೇಳಿ ಬಿಟ್ಟರು. ಇದರ ಮುಖ್ಯ ಉದ್ದೇಶವೆಂದರೆ ಪ್ರಾಚೀನದಲ್ಲಿದ್ದ 'ಒಗಟು' ಎಂಬ ಮಾಧ್ಯಮವನ್ನು ಕೀರ್ತನೆಗಳ ಮೂಲಕ ಪ್ರಸ್ತುತ ಪಡಿಸಿ, ಪುರಾಣದ ಅರಿವನ್ನು ಮೂಡಿಸುವುದು. ಈ ನೆಲೆಯಲ್ಲಿ ಅದರ ಸಾಂಕೇತಿಕ ರೂಪವಾಗಿ ಕೆಲವು ಕೀರ್ತನೆಗಳ ಒಗಟನ್ನು ಬಿಡಿಸುವ ಪ್ರಯತ್ನವನ್ನು ಇಲ್ಲಿ ಮಾಡಿದ್ದೇನೆ.

ಕೀರ್ತನೆ : ೧. –(ಕನಕದಾಸರು)

> ಈತನೀಗ ವಾಸುದೇವನು । ಲೋಕದೊಡೆಯ ....
> ದನುಜೆಯಾಳ್ದ ಅಣ್ಣನಯ್ಯನ । ಪಿತನ ಮುಂದೆ ಕೌರವೇಂದ್ರನ
> ನನುಜೆಯಾಳಿದವನ ಶಿರವ ಕತ್ತರಿಸುತ ।
> ಅನುಜೆಯಾಳಿದವನ ಬೆಂಕಿ ಮುಟ್ಟದಂತೆ ಕಾಯ್ದರುಕ್ಮ
> ನನುಜೆಯಾಳಿದವನ ಮೂರ್ತಿಯನ್ನು ನೋಡಿರೋ ॥ ೧ ॥

ದನುಜೆಯಾಳ್ದನ = ಹಿಡಿಂಬೆಯನ್ನು ಆಳಿದವ ಭೀಮ. ಅಣ್ಣ = ಧರ್ಮರಾಯ, ಅವನ ಅಯ್ಯ = ಯಮ, ಅವನ ಪಿತ = ಸೂರ್ಯ. ಕೌರವೇಂದ್ರನನುಜೆ = ದುಶ್ಯಲೆ, ಆಳಿದವನು = ಜಯದ್ರಥ.(ಉಳಿದ ವಿಚಾರಗಳು ಸರಳವಾಗಿಯೇ ಇದೆ).

> ನರವ ಸುತನರಣ್ಯದಲ್ಲಿ ಗಿರಿಯೊಳ್ಗಿಂತು ತನ್ನ ರೋಷದಿ
> ಶರಗಳನ್ನು ತೀಟುತಿಪ್ಪನ ಯೋಚಿಸಿ ।
> ಭರದಲವನ ಕರೆದು ಕುರುಹು ತೋರಿ ಪತ್ರವನ್ನು ಹಾರಿಸಿದವನ
> ಶಿರವನ್ನು ಛೇದಿಸಿದ ದೇವಕಾಣಿರೋ ॥ ೨ ॥

ಇಲ್ಲಿ 'ನರನ' ಎಂದರೆ ಮನುಷ್ಯನಿಗೆ ಸಂಬಂಧಿಸಿದ (ಘಟೋತ್ಕಜ) ಎಂದರ್ಥ. ಘಟೋತ್ಕಜ ಹಾಗೂ ಕಾಮಕಟಂಕಟೆಯಲ್ಲಿ ಹುಟ್ಟಿದ ಬರ್ಬರೀಕ (ಬಭ್ರಬಾಹು) ವಿಜಯ (ನರ)ನೆಂಬ ಬ್ರಾಹ್ಮಣನ ಮೂಲಕ, ಮಹೀಸಾಗರ ಸಂಗಮ ಕ್ಷೇತ್ರದಲ್ಲಿ ಸಕಲ ಮಂತ್ರ ಸಿದ್ಧಿ ಪಡೆದು ದುರ್ಗೆಯ ಅನುಗ್ರಹಕ್ಕೆ ಪಾತ್ರನಾದ, ಇಲ್ಲಿ ವಿಜಯ ನೆಂಬ ಬ್ರಾಹ್ಮಣನಿಗೆ ಬರ್ಬರೀಕ (ಬಭ್ರಬಾಹು) ಶಿಷ್ಯನಾದುದರಿಂದ ವಿಜಯನಿಗೆ ಬರ್ಬರೀಕನು ಮಗನಿಗೆ ಸಮಾನ. ಹಾಗಾಗಿ, ನರನ ಮಗನು = ವಿಜಯನ ಶಿಷ್ಯನು. ಬರ್ಬರೀಕನು, ಅರಣ್ಯದಲ್ಲಿ ಗಿರಿಯೊಳ್ಗಿಂತು ತನ್ನ ರೋಷದಿ, ಭಾರತ ಯುದ್ಧಕಾಲಕ್ಕಾಗಿ ತನ್ನ ಆಯುಧ, ಬಾಣಗಳನ್ನು ಮಸೆಯುತ್ತಿರುವುದನ್ನು ಶ್ರೀಕೃಷ್ಣನು ತನ್ನ ಪರಮ ಜ್ಞಾನದಿಂದ ಯೋಚಿಸಿ (ಶರಗಳನ್ನು ತೀಟುತಿಪ್ಪನ ಯೋಚಿಸಿ), ಭರದಲವನ ಕರೆದು =

ಬರ್ಬರೀಕನನ್ನು ಕರೆದು, ಅವನ ಮನದ ಅಭಿಪ್ರಾಯವನ್ನು ಕೇಳಲಾಗಿ, ಬರ್ಬರೀಕನು ತನ್ನ ಸಾಮರ್ಥ್ಯದ ಬಗ್ಗೆ ಹೇಳಲು, ಇದರ ಸತ್ಯಾಸತ್ಯತೆಯನ್ನು ಹೇಳಿದಾಗ , ಮಾಯಾಜಾಲದ ಮೂಲಕ (ಇಂದ್ರಜಾಲ), ಕುರುಪ = ಕುರುಹು ತೋರಿಸಲು, ಬರ್ಬರೀಕನು ಬಿಟ್ಟ ಒಂದೇ ಬಾಣವು ಭೀಷ್ಮನ ಎದೆ, ದ್ರೋಣನ ಕೈ, ಕರ್ಣನ ಕಂಠ, ದುಶ್ಯಾಸನನ ಉದರ, ಕೌರವನ ತೊಡೆ, ಶಲ್ಯನ ಸೊಂಟ ಮಾತ್ರವಲದೆ ಕೌರವ ಪಕ್ಷದ ಎಲ್ಲರನ್ನು ಗೆದ್ದು, ಅಶ್ವತ್ಥಾಮನ ಶಿಖೆಯನ್ನು ಹಾರಿಸಿ, ಪಾಂಡವ ಪಕ್ಷದಲ್ಲಿ ಪಾಂಡವರೈವರನ್ನು ಬಿಟ್ಟು, ಉಳಿದೆಲ್ಲರನ್ನು ಕೊಂದು ಕೊನೆಗೆ ಕೃಷ್ಣನ ಕಾಲಿಗೆ ಆ ಬಾಣ ಬಂದು ತಾಗುವ ತನಕದ ಎಲ್ಲಾ ವಿವರಗಳನ್ನು ಕೊಡುತ್ತಾನೆ. ಇದು ಅಸಂಗತವೆಂದು ಕೃಷ್ಣನು ಭಾವಿಸಿ ಬರ್ಬರೀಕನ ಶಿರವನ್ನು ಛೇದಿಸುತ್ತಾನೆ. ಇಲ್ಲಿ ಪತ್ರವೆಂದರೆ ಎಲೆ ಎಂಬ ಅರ್ಥದಿಂದಲೇ ಪ್ರಯೋಗವಾಗಿರಬೇಕು.

ಸೃಷ್ಟಿಕರ್ತಗೆ ಮಗನಾದವನಿಗಿಷ್ಟ ಭೂಷಣ ಅಶನವಾದನ
ಜ್ಯೇಷ್ಠ ಪುತ್ರಗೆ ವೈರಿ ತೊಡೆಯ ಛೇದಿಸೆಂದು ಭೋದಿಸಿ ।
ಕಷ್ಟವನ್ನು ಕಳೆದು ಭಕ್ತರಿಷ್ಟವನ್ನು ಕಾದು ಉ
ತ್ಕೃಷ್ಟ ಮಹಿಮನಾದ ದೇವ ಕಾಶಿರೋ ॥ ೩ ॥

ಸೃಷ್ಟಿಕರ್ತ (ಶಿವನೆಂದು ಭಾವಿಸ ಬೇಕು) ನ ಮಗ = ಗಣಪತಿ. ಅವನ ಇಷ್ಟ ಭೂಷಣ = ಸರ್ಪ ; ಅದರ ಅಶನ= ಗಾಳಿ. ಜ್ಯೇಷ್ಠಪುತ್ರ = ವಾಯುವಿನ ಜ್ಯೇಷ್ಠ ಪುತ್ರ = ಭೀಮ. ವೈರಿತೊಡೆಯ ಛೇದಿಸೆಂದು ಭೋದಿಸಿದವ = ಕೌರವನ ತೊಡೆಯನ್ನು ಛೇದಿಸೆಂದು ಹೇಳಿದವ, ಶ್ರೀಕೃಷ್ಣ.

ಕ್ರೂರನಾದ ಪಣಿಪ ಬಾಣ ತರಣಿಜನು ನಿರೀಕ್ಷಿಸ್ಯಾಗ
ವೀರನೆಚ್ಚೆಯೆಸುಗೆ ಬಪ್ಪುದನ್ನು ವೀಕ್ಷಿಸಿ ।
ಧಾರಿಣಿಯ ಪದದೊಳೌಕಿ ಚರಣ ಭಜಕ ನರನಕಾಯ್ದ
ಭಾರ ಕರ್ತನಾದ ದೇವನೀತ ಕಾಣಿರೋ ॥ ೪ ॥

ಪಣಿಪಬಾಣ = ಸರ್ಪಾಸ್ತ್ರ ; ತರಣಿಜನು = ಕರ್ಣನು ನಿರೀಕ್ಷಿಸಿ ; ನೆಚ್ಚನೆಸುಗೆ = ಬಿಟ್ಟ ಗುರಿ ; ಇದು ಬರುವುದನ್ನು ಕಂಡ ಕೃಷ್ಣನು .....ಧಾರಿಣಿಯ ಪಾದದೊಳೌಕಿ ಚರಣಭಜಕ ನರನಕಾಯ್ದ = ಭೂಮಿಯನ್ನು ಪಾದದಿಂದ ಒತ್ತಿ ಅರ್ಜುನನನ್ನು ಕಾಯ್ದವ.

ವ್ಯೋಮಕೇಶನಿಪ್ಪದೆಸೆಯ ಆ ಮಹಾಮಹಿಮೆಯುಳ್ಳ
ಸಾಮಜವ ನೇರಿ ಬರುವ ಶಕ್ತಿಯನೀಕ್ಷಿಸಿ ।
ಪ್ರೇಮದಿಂದ ಉರವನೊಡ್ಡಿ ಡಿಂಗರಿಗನ ಕಾಯ್ದ ಸಾರ್ವ
ಭೌಮ ಬಾಡದಾದಿ ಕೇಶವನ್ನ ನೋಡಿರೋ ॥ ೫ ॥

ವ್ಯೋಮಕೇಶನಿಪ್ಪ = ಈಶನಂತಿರುವ ಭಗದತ್ತ ; ಸಾಮಜವನೇರಿ = ಸುಪ್ರತೀಕಗಜವನ್ನು ಏರಿಬರುವ ; ಶಕ್ತಿಯನೀಕ್ಷಿಸಿ = ಶಕ್ತ್ಯಾಯುಧವನ್ನು ವೀಕ್ಷಿಸಿ ; ಶ್ರೀಕೃಷ್ಣ ತನ್ನ ಉರವನ್ನು ಒಡ್ಡಿ ಭಕ್ತರನ್ನು ಕಾಪಾಡಿದ.

ಕೀರ್ತನೆ : ೨. –(ಪುರಂದರದಾಸರು)

ಅಂಜಿಕಿನ್ಯಾತಕಯ್ಯಾ । ಸಜ್ಜನರಿಗೆ । ಅಂಜಿಕೆ ಇನ್ಯಾತಾಯ್ಯಾ ॥ ಪ ॥
ಸಂಜೀವ ರಾಯರ ಸ್ಮರಣೆ ಮಾಡಿದ ಮೇಲೆ ॥ ಅ ಪ ॥
ಕನಸಲಿ ಮನಸಲಿ ಕಳವಳವಾದರೆ ।
ಹನುಮನ ನೆನೆದರೆ ಹಾರಿ ಹೋಗದೆ ಭೀತಿ ॥ ೧ ॥
ರೋಮ ರೋಮಕೆ ಕೋಟಿ ಲಿಂಗವುದುರಿಸಿದ ।
ಭೀಮನ ನೆನೆದರೆ ಬಿಟ್ಟು ಹೋಗದೆ ಭೀತಿ ॥ ೨ ॥

ರೋಮ ರೋಮಕೆ ಕೋಟಿ : ಹಸ್ತಿನಾವತಿ(ಇಂದ್ರಪ್ರಸ್ಥ)ಯಲ್ಲಿ ರಾಜಸೂಯಯಾಗಕ್ಕೆ ಪುರುಷಮೃಗದ ಅವಶ್ಯಕತೆಯಿತ್ತು. ಆ ಮೃಗವನ್ನು ತರಲು ಕೃಷ್ಣನಿಂದ ಆಜ್ಞಾಪಿತನಾಗಿ ಭೀಮನು ಕಾಡುದಾರಿಯಲ್ಲಿ ಹೋಗುವಾಗ ಹನುಮಂತ ಸಿಗುತ್ತಾನೆ. ಭೀಮನ ಉದ್ದೇಶ ತಿಳಿದ ಹನುಮಂತನು ತನ್ನ ದೇಹದ ಕೆಲವು ರೋಮಗಳನ್ನು ಕಿತ್ತುಕೊಟ್ಟು, ಪುರುಷಾಮೃಗದ ವಿಶೇಷತೆಯನ್ನು ವಿವರಿಸುತ್ತಾನೆ. ಪುರುಷಮೃಗವು ರಾಕ್ಷಸೀಗುಣದಿಂದ ನಿನ್ನನ್ನು ಓಡಿಸಿಕೊಂಡು ಬರಲು, ನೀನು ಹಸ್ತಿನಾವತಿ ಕಡೆಗೆ ಓಡಬೇಕೆಂದು ನಿರ್ದೇಶಿಸುತ್ತಾನೆ. ಆ ಮೃಗವು ನಿನಗೆ ಹತ್ತಿರವಾದಾಗ ನಾನು (ಹನುಮಂತ) ಕೊಟ್ಟ ಒಂದು ರೋಮವನ್ನು ನೆಲದಮೇಲೆ ಹಾಕೆಂದೂ, ಆಗ ಲಿಂಗೋದ್ಭವವಾಗುವುದೆಂದೂ ವಿವರಿಸುತ್ತಾನೆ. ಶಿವಲಿಂಗವನ್ನು ಕಂಡ ಪುರುಷಮೃಗವು ಆ ಲಿಂಗಕ್ಕೆ ಪೂಜೆ ಸಲ್ಲಿಸದೆ ಮುಂದೆ ಹೋಗದು ಎಂದು ಭೀಮನಿಗೆ ತಿಳಿಸುತ್ತಾನೆ. ಭೀಮನು ಇದೇ ಕ್ರಮವನ್ನು ಆಗಾಗ ಗೈಯುತ್ತಾ, ಹಸ್ತಿನಾಪುರದ ಕಡೆಗೆ ಓಡುತ್ತಾ, ಕೊನೆಯಲ್ಲಿ ತನ್ನ ಕೈಯಲ್ಲಿದ ಎಲ್ಲಾ ರೋಮವನ್ನು ಹಸ್ತಿನಾಪುರದಲ್ಲಿ ಹಾಕಲು, ಲಿಂಗ ಉದ್ಭವಿಸಲು, ಪುರುಷಮೃಗವು ಲಿಂಗವನ್ನು ಪೂಜಿಸಲು, ಸರಪಳಿಯಿಂದ ಕಟ್ಟಿಹಾಕುತ್ತಾರೆ. ಇದು ಹನುಮಂತನು ಭೀಮನಿಗೆ ಹೇಳಿದ ಪುರುಷಮೃಗದ ಪ್ರಸಂಗ. ಈ ನಿಟ್ಟಿನಲ್ಲಿ ಭೀಮನ ನೆನೆದರೆ ಭೀತಿಯು ಹೊರಟು ಹೋಗುತ್ತದೆ. ಹಾಗಾಗಿ ಅಂಜಿಕಿನ್ಯಾತಕಯ್ಯಾ ....

ಪುರಂದರ ವಿಠಲನ ಪೂಜೆ ಮಾಡುವ
ಗುರು ಮಧ್ವರಾಯರ ಸ್ಮರಣೆ ಮಾಡಿದ ಮೇಲೆ ॥ ೩ ॥

ಇಲ್ಲಿ ಹನುಮ, ಭೀಮ, ಮಧ್ವರುಗಳು ವಾಯುಸಂಭೂತರು ಎನ್ನುವ ವಿಚಾರಕ್ಕೆ ಪುಷ್ಠಿ ಸಿಗುತ್ತದೆ.

ಕೀರ್ತನೆ : ೩. –(ಪುರಂದರದಾಸರು)

ಹೇವವೆಲ್ಲಿಹುದಯ್ಯ ವೈಕುಂಠಪತಿಗೆ । ಪ ।
ಮೌನದಿಂ ಭಾರ್ಗವನು ಮಾತೆಯ ಶಿರ ತರಿದ ॥ ಅ.ಪ ॥
ಒಬ್ಬ ಮಾವನ ಕೊಂದ ಒಬ್ಬ ಮಾವನ ಎಸೆದ
ಒಬ್ಬ ಮಾವನ ಕೂಡೆ ಕಡಿದಾಡಿದ ।
ಒಬ್ಬ ಭಾವನ ಹಿಡಿದು ಹೆಡೆ ಮುರಿಯ ಕಟ್ಟಿದ
ಒಬ್ಬ ಮೈದುನಗೆ ಬಂಡಿಯ ಬೋವನಾದ ॥ ೧ ॥

ಒಬ್ಬ ಮಾವನ ಕೊಂದ = ಕಂಸವಧೆಯ ವಿಚಾರ ; ಒಬ್ಬ ಮಾವನ ಎಸೆದ = ಸೇತು ಬಂಧದ ಸಮಯದಲ್ಲಿ ಸಮುದ್ರ ರಾಜನನ್ನು ಶ್ರೀರಾಮನು ಬಾಣಬಿಟ್ಟು ಅಡ್ಡಿಪಡಿಸದ ರೀತಿಯಲ್ಲಿ ದೂರಸರಿದ. ಲಕ್ಷ್ಮಿಯೂ ಸಮುದ್ರರಾಜನ ಮಗಳು. ಹಾಗಾಗಿ ವಿಷ್ಣುಗೆ ಸಮುದ್ರರಾಜನು ಮಾವ ; ಒಬ್ಬ ಮಾವನ ಕೂಡೆ ಕಡಿದಾಡಿದ = ಜಾಂಬವತಿ ಕಲ್ಯಾಣಪ್ರಸಂಗ ; ಒಬ್ಬ ಭಾವನ ಹಿಡಿದು = ರುಕ್ಮ (ರುಕ್ಮಿಣೀ ಸ್ವಯಂಬರ); ಒಬ್ಬ ಮೈದುನಗೆ = ಪಾರ್ಥಸಾರಥ್ಯ.

ಕುಂಭಿನಿಗೆ ಪತಿಯಾದ ಕುಂಭಿನಿಗೆ ಸುತನಾದ
ಕುಂಭಿನೀ ಮಗನ ಸಂಹಾರ ಮಾಡಿದ ।
ಅಂಬುಧಿಗೆ ಪಿತನಾದ ಅಂಬುಧಿಗೆ ಸುತನಾದ
ಅಂಬುಧೀ ಜಾತೆಗೆ ಸ್ವಾಮಿಯಾದ ॥ ೨ ॥

ಕುಂಭಿನಿ = ಭೂದೇವಿ. (ಸೀತೆ); ಕುಂಭಿನಿಗೆ ಪತಿ = ಸೀತಾರಾಮ; ಕುಂಭಿನಿಗೆ ಸುತ = ಕುಂಭದಲ್ಲಿ ಹಾಲು ಮೊಸರು ಮಾರುವವರನ್ನು 'ಕುಂಭಿ' ಎನ್ನುತ್ತರೆ. ಇದು ನಂದಗೋಪನಿಗೆ ಅನ್ವರ್ಥನಾಮ. ನಂದಗೋಪ 'ಕುಂಭಿ'ಯಾದಲ್ಲಿ, ಯಶೋದೆಯು 'ಕುಂಭಿನಿ' ಯಾಗುತ್ತಾಳೆ. ಹಾಗಾಗಿ ಕೃಷ್ಣನು ಕುಂಭಿನಿಗೆ ಸುತನಾದ ; ಕುಂಭಿನೀ ಮಗನ ಸಂಹಾರ = ಇಲ್ಲಿ ಎರಡು ಉದಾಹರಣೆಯನ್ನು ಗಮನಿಸಬಹುದು.

೧.ಕುಂಭಿನಿ ಸುತ = ನರಕಾಸುರವಧೆ ಪ್ರಸಂಗ ; ೨. ಯದುವಂಶದ ದುಮಘೋಷನ ಹೆಂಡತಿ ಶತ್ರುಶವೆಗೆ 'ಕುಂಭಿನಿ' ಎಂಬ ಅನ್ವರ್ಥನಾಮವಿದೆ. ಶ್ರುತಶ್ರವೆಯ ಮಗ 'ಶಿಶುಪಾಲ'ನ ಕಥೆಯನ್ನು ಇಲ್ಲಿ ಉದಾಹರಿಸಬಹುದಾಗಿದೆ ; ಅಂಬುಧಿಗೆ ಪಿತನಾದ = ಗಂಗೆಗೆ ಪಿತ (ವಿಷ್ಣು); ಅಂಬುಧಿಗೆ ಸುತನಾದ = ಮತ್ಸ್ಯಾವತಾರ ; ಅಂಬುಧೀ ಜಾತೆಗೆ ಸ್ವಾಮಿ = ಲಕ್ಷ್ಮಿಯು ಸಮುದ್ರ ಮಥನದಲ್ಲಿ ಹುಟ್ಟಿದವಳು. ಆದುದರಿಂದ ಲಕ್ಷ್ಮಿಗೆ ವಿಷ್ಣುವು ಗಂಡನಾದ.

ಬೊಮ್ಮನಾ ಸಂಹರಿಸಿ ಅವನ ಮಕ್ಕಳನು
ಈ ಮಹಿಯೊಳಗವರ ಹತಮಾಡಿದ ।
ರಮ್ಮೆ ವೈಕುಂಠಪತಿ ಪುರಂದರ ವಿಠಲ
ಬೊಮ್ಮ ಮಾರುತಿಗೇಕೆ ಬಂಧುಬಳಗ ॥ ೩ ॥

ಬೊಮ್ಮನ ಸಂಹರಿಸಿ = ಬೊಮ್ಮನೆಂದರೆ ಬ್ರಾಹ್ಮಣನೆಂಬ ಅರ್ಥವಿದೆ. ರಾವಣ ಬ್ರಾಹ್ಮಣನಾದುದರಿಂದ ರಾವಣನ ವಧೆಯನ್ನು ಹಾಗೂ ಅವನ ಬಂಧುಬಳಗ, ಮಕ್ಕಳು – ಎಲ್ಲರನ್ನು ಹತಮಾಡಿದನೆಂಬುದು ಈ ಪದ್ಯಕ್ಕೆ ಹೆಚ್ಚು ಒಪ್ಪುತ್ತದೆ. ರಾವಣನನ್ನು ಕೊಂದ ಬ್ರಹ್ಮ ಹತ್ಯಾ ದೋಷ ನಿವಾರಣೆಗೆ ಶ್ರೀ ರಾಮ ಅಶ್ವಮೇಧ ಯಾಗವನ್ನು ಕೈಗೊಳ್ಳುವುದು ಉತ್ತರ ರಾಮಾಯಣದಲ್ಲಿ ಕಾಣಬಹುದು.

ದಾಸಕೀರ್ತನೆಗಳಲ್ಲಿ ಅನ್ಯಭಾಷಾಭಕ್ತರ ರಚನೆಯ ಲಕ್ಷಣಗಳೂ ಕೂಡ ಆಲ್ಲಲ್ಲಿ ಎದ್ದು ತೋರಿದ್ದುಂಟು. ಅದಕ್ಕೆ ದಾಸಸಾಹಿತ್ಯದಲ್ಲಿ ತೋರಿಬರುವ 'ಆವ ಕುಲವು ತಿಳಿಯಲಾಗದು' ಎಂಬ ಕೀರ್ತನೆಯೇ ಸಾಕ್ಷಿ. ಇದರಲ್ಲಿ

ತುಳಸೀದಾಸರು ರಚಿಸಿದ 'ದೋ ಚಲಚರ್ ದೋ ವನಚರ್, ದೋ ಬೊಮ್ಮನ್ ದೋ ರಾಜ, ಏಕ್ ನಂಗ, ಏಕ್‌ಪಿಂಗ ದಶ ಅವತಾರಕಿಯಾ ರಾಮ್ ನೇ'ಕೀರ್ತನೆಯ ಧಾಟಿಯು ದಾಸಕೀರ್ತನೆಯ ಪ್ರಭಾವಕ್ಕೊಳಗಾಗಿದ್ದಿರಬಹುದು. ವಿಷ್ಣುವಿಗೆ (ಭಗವಂತ) ಯಾವ ಜಾತಿಯೂ ಇಲ್ಲ. ಆತನ ಕುಲ ಯಾವುದೆಂದೂ ತಿಳಿಯುವುದಿಲ್ಲ. ವಿಷ್ಣುವಿನ ೨೪ ಅವತಾರಗಳಲ್ಲಿ ಮುಖ್ಯವಾದ ಅವತಾರಗಳು ಹತ್ತು. ಅವುಗಳಲ್ಲಿ, ಎರಡು ಅವತಾರಗಳು ಜಲಚರವಾಗಿ (ಮತ್ಸ್ಯ, ಕೂರ್ಮ); ಎರಡು ಅವತಾರಗಳು ವನಚರನಾಗಿ (ವರಾಹ, ನಾರಸಿಂಹ); ಎರಡು ಅವತಾರಗಳು ಬ್ರಾಹ್ಮಣನಾಗಿ (ವಾಮನ, ಪರಶುರಾಮ); ಎರಡು ಅವತಾರಗಳು ಕ್ಷತ್ರಿಯರಾಗಿ (ಶ್ರೀರಾಮ, ಶ್ರೀಕೃಷ್ಣ); ಒಂದು ಅವತಾರ ನಂಗನಾಗಿ (ಬುದ್ಧ); ಒಂದು ಅವತಾರ ಪಿಂಗನಾಗಿ (ಕಲ್ಕಿ) ಪುರಾಣಪೂರ್ವಕ ಲಭ್ಯ. ಹಾಗಾಗಿ ಪರಮಾತ್ಮನಿಗೆ ಕುಲವಿಲ್ಲ. ಸರ್ವಾಂತರ್ಯಾಮಿಯ ಇರುವಿಕೆಯೇ ಹಾಗೇ. ಅದೇ ವಿಚಾರವನ್ನು ಪುರಂದರದಾಸರು ತಮ್ಮ ಕೀರ್ತನೆಯಲ್ಲಿ ಚೆಲುವಾಗಿ ಕಂಡಿರಿಸಿದ್ದಾರೆ.

ಕೀರ್ತನೆ : ೪.

ಆವ ಕುಲವು ತಿಳಿಯಲಾಗದು ॥ ಪ ॥
ಕಡಲ ಮಗಳಗಂಡನಂತೆ । ಅಡವಿಯೊಳಗೆ ಮಡದಿಯಂತೆ ।
ಪೊಡವಿಗೆ ತಾನೊಡೆಯನಂತೆ । ಕೊಡೆಯ ಪಿಡಿದು ಬೇಡಿದನಂತೆ ॥ ೧ ॥

ಕಡಲ ಮಗಳಗಂಡ = ಸಮುದ್ರರಾಜನ ಮಗಳು ಲಕ್ಷ್ಮೀ. ಲಕ್ಷ್ಮಿಯ ಗಂಡ ವಿಷ್ಣು; ಅಡವಿಯೊಳಗೆ ಮಡದಿಯಂತೆ = ಶ್ರೀ ರಾಮ ಸೀತೆಯನ್ನು ಕಾಡಿಗೆ ಕಳುಹಿಸಿದ ಸಂದರ್ಭ; ಪೊಡವಿಗೆ ತಾನೊಡೆಯ = ಭೂರಮಣ; ಕೊಡೆಯ ಹಿಡಿದು ಬೇಡಿದ್ದು = ವಾಮನಾವತಾರ.

ರಕ್ಕಸರಲ್ಲಿ ಕಾಳಗವಂತೆ । ಮರ್ಕಟರೆಲ್ಲ ಬಂದರಂತೆ ।
ಪಕ್ಷಿಯನೇರಿ ಮೆರೆದರಂತೆ । ಮುಕ್ಕಣ್ಣೇಶ್ವರ ಮೊಮ್ಮಗನಂತೆ ॥೨॥

ರಕ್ಕಸರಲ್ಲಿ ಕಾಳಗವಂತೆ = ರಾಮಾವತಾರದ ಕಥೆ; ಮರ್ಕಟರೆಲ್ಲ ಬಂದರಂತೆ = ರಾಮಾವತಾರ; ಪಕ್ಷಿಯನೇರಿ ಮೆರೆದನಂತೆ = ಕೃಷ್ಣಾವತಾರ; ಮುಕ್ಕಣ್ಣೇಶ್ವರ ಮೊಮ್ಮಗನಂತೆ = ಶಿವ ಬ್ರಹ್ಮನ ಮಗ. ಹಾಗಾಗಿ ಈಶ್ವರನು ಹರಿಗೆ ಮೊಮ್ಮಗ.

ಕೀರ್ತನೆ : ೫. –(ಪುರಂದರದಾಸರು)

ನೀನಿರಲು ನಮಗೇತರದ ಭಯವೋ ।
ಸನಕಾದಿಗಳ ಪ್ರಿಯ ತಿರುವೇಂಗಳಯ್ಯ ॥ ಪ ॥

ತಿರುವೆಂಗಡದ ಒಡೆಯ = ವೆಂಕಟಾಚಲಪತಿ

ಚರಣದಿಂದುದಿಸಿದವಳ ಸುತನ ಮೊಮ್ಮಗನ ಸತಿ
ಭರದಿಂದ ನಿಮ್ಮ ಸ್ತೋತ್ರವ ಮಾಡಲು ।

ಹರುಷದಿಂದ ಕೇಳಿ ನಲಿದೈವರ
ನಾರಿ ಲಜ್ಜೆಯ ಕಾಯಿದ ಕರುಣ ದಯಾಸಿಂಧು ॥ ೧ ॥

ಚರಣದಿಂದುದಿಸಿದವಳು = ಗಂಗೆ; ಅವಳ ಸುತನ = ಭೀಷ್ಮನ; ಮೊಮ್ಮಗನ ಸತಿ = ಭೀಷ್ಮನ ಮೊಮ್ಮಗನಾದ ಅರ್ಜುನನ ಸತಿ ದ್ರೌಪದಿ; ಲಜ್ಜೆಯ ಕಾಯ್ದ ಕರುಣದಯಾಸಿಂಧು = ದ್ರೌಪದಿಯ ವಸ್ತ್ರಾಪಹಾರದಲ್ಲಿ ಆಕೆಯ ಮಾನವನ್ನು ಕಾಯ್ದುವ, ಶ್ರೀಕೃಷ್ಣ.

ಕ್ಷುಧೆಯಿಂದ ಬಂದ ಅಗಸ್ತ್ಯಮುನಿ ಶಾಪದಲಿ
ಮದಯುತನಾಗಿ ತಾನು ಗಜವಾಗಿರೆ ।
ಅಘಟವಾಗಿದ್ದ ನೆಗಳಿಗೆ ಸಿಲ್ಕಿ ಧೇನಿಸಲು
ನಿಜ ಚಕ್ರದಲಿ ಕಾಯಿದ ಗಜರಾಜ ವರದ ॥ ೨ ॥

ಪಾಂಡ್ಯದೇಶದ ದೊರೆಯಾದ ಇಂದ್ರದ್ಯುಮ್ನನು ತನ್ನ ಅರಮನೆಗೆ ಬಂದ ಅಗಸ್ತ್ಯರನ್ನು ಸರಿಯಾಗಿ ಸತ್ಕರಿಸದಿರಲು, ಕೋಪಗೊಂಡ ಮುನಿಯು ದೊರೆಗೆ ಶಾಪವನ್ನಿಯಲು, ಆತ ಗಜನಾದ. (ಆತ ಪೂರ್ವದಲ್ಲಿ ವಿಷ್ಣುಭಕ್ತನಾಗಿದ್ದ.) ಈ ಗಜವು ನೀರು ಕುಡಿಯಲು ನೀರಿಗಿಳಿದಾಗ ನೆಗಳೆ (ಮೊಸಳೆ)ಗೆ ಸಿಲುಕಿ, ಪೂರ್ವಜನ್ಮದ ಸ್ಮರಣೆಯಿಂದ ವಿಷ್ಣುವನ್ನು ಸ್ಮರಿಸಲು..... ಹರಿಕಾಯ್ದ (ಗಜೇಂದ್ರ ಮೋಕ್ಷದ ಕಥೆ).

ನೀರಬೊಬ್ಬುಳಿಯಂತೆ ನಿತ್ಯವಲ್ಲವೋ ದೇಹ
ಘೋರ ಸಂಸಾರದೊಳು ತೊಳಲ ಬೇಡ ।
ಶ್ರೀ ರಮಣ ಪುರಂದರ ವಿಠಲ ಪರದೈವವೆಂದು
ಸಾರುತಿರಲು ಮನವೆ ಸುಮ್ಮನಿರಲು ಬೇಡ ॥ ೩ ॥

ಈ ಕೀರ್ತನೆಯು ನಿತ್ಯವಲ್ಲದ ದೇಹಕ್ಕೆ ಸಂಸಾರದ ನಿಸ್ಸಾರತೆಯನ್ನು ಬಯಸಿ, ಪರದೈವವನ್ನು ಸ್ತುತಿಸುವಂತೆ ಸಾರುತ್ತದೆ. ಇಂತಹ ನೂರಾರು ಕೀರ್ತನೆಗಳು ದಾಸಸಾಹಿತ್ಯದಲ್ಲಿ ಲಭ್ಯ. ಕನಕದಾಸರ 'ಏನು ಕಾರಣ ಬಾಯಿ ತೆರೆದಿ', 'ನಮಗೆಲ್ಲಿ ಮನೆಗಳಯ್ಯ.....ಜಲನಿಧಿ ಸುತನ ಮೊಮ್ಮಗನ ಕೊಂದ ಶೂರನ', ವಿಜಯದಾಸರ 'ಏಳು ಬೆಳಗಾಯಿತು.....ವೇದವನು ತಮ ಕದ್ದು ಒಯ್ದನು', ಗಲಗಲಿ ಅವ್ವನವರ 'ಸಾಕೋ ರಂಗ ಅರಸುತನ', ಹೆಳವನಕಟ್ಟೆ ಗಿರಿಯಮ್ಮನ 'ಅರುಹ ಬಾರದೆ ನಿಮ್ಮ ಚರಿತೆಯನು' ಮೊದಲಾದವುಗಳು ಪೌರಾಣಿಕ ಕಥೆಯನ್ನಾಧರಿಸಿದ ಕೀರ್ತನಾಪ್ರಹೇಳಿಕೆಗಳು. ಇವುಗಳಿಂದ ಪುರಾಣ ಕಲ್ಪನೆಯನ್ನು ಸಮಾಜಕ್ಕೆ ತಿಳಿಸಿಕೊಡುವ ಪ್ರಯತ್ನವೊಂದು ದಾಸಸಾಹಿತ್ಯದಿಂದ ನೆರವೇರುತ್ತದೆ. ಆದರೆ ಇಂತಹ ಪ್ರಯತ್ನಗಳು ಚೈತನ್ಯಪಂಥದಿಂದ ನೆರವೇರಲಿಲ್ಲವೆಂಬುದು ಸ್ಪಷ್ಟ.

೬.೭ : ಕ್ಷೇತ್ರದರ್ಶನ ಕೀರ್ತನೆಗಳು

ಚೈತನ್ಯಪಂಥ ಮತ್ತು ದಾಸಪಂಥದ ಅನುಭಾವಿಗಳು ತೀರ್ಥಕ್ಷೇತ್ರಗಳ ದರ್ಶನವನ್ನು ಮಾಡಿ ಮುಕ್ತಿಯನ್ನು ಪಡೆಯಲು ಹೊರಟವರು. ಉತ್ತರದ ಚೈತನ್ಯಪಂಥದ ಅನುಯಾಯಿಗಳು ದಕ್ಷಿಣಭಾರತದ ಪುಣ್ಯಕ್ಷೇತ್ರಗಳನ್ನು ದರ್ಶಿಸಿದರು. ಅಂತೆಯೇ ಕರ್ನಾಟಕದ ದಾಸಪಂಥದ ಕೆಲವರು ಉತ್ತರಭಾರತದ

ಪುಣ್ಯಕ್ಷೇತ್ರವನ್ನು ಕಂಡರು. ಸ್ವತಃ ಚೈತನ್ಯರೇ ದಕ್ಷಿಣಭಾರತದ ಎಲ್ಲಾ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿದರೆಂದು ಶ್ರೀಚೈತನ್ಯ ಚರಿತಾಮೃತ ಹೇಳುತ್ತದೆ.

ಜಿಯಡ ನೃಸಿಂಹೇ ಕೈಲ ನೃಸಿಂಹ ಸ್ತವನ ।
ಪಥೇ ಪಥೇ ಗ್ರಾಮೇ ಗ್ರಾಮೇ ನಾಮಪ್ರವರ್ತನ ॥[೨೪]

ಈ ವಿಚಾರದಲ್ಲಿ ದಾಸಪಂಥಕ್ಕೂ ಚೈತನ್ಯಪಂಥಕ್ಕೂ ಮುಖ್ಯವಾದ ವ್ಯತ್ಯಾಸವೊಂದಿದೆ. ಎರಡು ಪಂಥಗಳ ಅನುಭಾವಿಗಳು ಕ್ಷೇತ್ರದರ್ಶನವನ್ನು ಮಾಡಿದ್ದರೂ ಕ್ಷೇತ್ರದೈವದ ಕುರಿತು ಸಾಹಿತ್ಯರಚನೆ ಮಾಡಿದ್ದು ದಾಸಕುಲಮಾತ್ರ. ಚೈತನ್ಯಪಂಥದ ಅನುಭಾವಿಗಳು ತಿರುಮಲೆ, ಅಹೋಬಲ, ಕಂಚಿ, ಕಾಳಹಸ್ತಿ, ಶ್ರೀರಂಗ, ಉಡುಪಿ, ರಾಮೇಶ್ವರ ಮೊದಲಾದ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದುದಕ್ಕೆ ಅಲ್ಲಿಯ ಶ್ಲೋಕಾಧಾರಿತವಾದ ದ್ವಿಪದಿ ಛಂದೋಬಂಧದ ಸಾಹಿತ್ಯ ಉಲ್ಲೇಖಗಳಿವೆಯೇ ಹೊರತು, ಅನುಭಾವಿಗಳೇ ರಚಿಸಿದ ದೀರ್ಘಸ್ತುತಿಪದ್ಯಗಳಿಲ್ಲ. ಅದೇನಿದ್ದರೂ ದಾಸಪಂಥದಲ್ಲಿ. ದಾಸಕುಲದ ಈ ಸಾಹಿತ್ಯ ನಿಲುವಿಗೆ ಭಗವಂತನನ್ನು ಕಾಣುವ ಬಯಕೆ ಒಂದೆಡೆಯಾದರೆ, ಇನ್ನೊಂದು ಮೌಲ್ಯಾಧಾರಿತವಾದ ಸಮಾಜವನ್ನು ಕಟ್ಟುವ ಬಯಕೆಯಿದ್ದಿರಬಹುದು. ಆದರೆ ಚೈತನ್ಯಪಂಥದ ಸಾಹಿತ್ಯವು ಕ್ಷೇತ್ರದರ್ಶನದ ದಿನಚರಿಯನ್ನು ತಿಳಿಸುತ್ತ, ಆ ಕ್ಷೇತ್ರದೈವಕ್ಕೆ ಶರಣಾಗಿ, ಶರಣಾಗತಭಾವಕ್ಕೆ ಮಾತ್ರ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವುದರ ಮೂಲಕವಾಗಿ ಅಲ್ಲಿಯ ರಚನೆಗಳು ಮುಕ್ತಾಯವಾಗಿ ಬಿಡುತ್ತವೆ.

ದಾಸಪಂಥವು ಕ್ಷೇತ್ರದರ್ಶನವನ್ನು ಮಾಡಿ ಆ ಕುರಿತಾದ ಸಾಹಿತ್ಯ ನಿರ್ಮಾಣ ಮಾಡಲು ಅಂದಿನ ಸಾಮಾಜಿಕ ದುಸ್ಥಿತಿಯೂ ಕಾರಣವಾಗಿದ್ದಿರಬಹುದು. ಆಗಲೇ ಕನ್ನಡನಾಡಿನ ನಾಲ್ಕುದಿಕ್ಕುಗಳು ಮುಸಲ್ಮಾನ ದೊರೆಗಳಿಂದ ತತ್ತರವಾಗಿತ್ತು. ಹೈದರಾಬಾದಿನಲ್ಲಿ ಹಜರತರು, ಸವಣೂರಿನಲ್ಲಿ ಪಠಾಣರು, ಆದವಾನಿಯಲ್ಲಿ ಖಾನರು, ಮೈಸೂರಿನಲ್ಲಿ ಸುಲ್ತಾನರುಗಳು ಮತ್ತು ಬ್ರಿಟೀಷರು ಹಿಂದೂಗಳ ಧಾರ್ಮಿಕ ಜೀವನಕ್ಕೆ ಕಳಂಕಪ್ರಾಯರಾಗಿದ್ದರು. ಈ ನಿಟ್ಟಿನಲ್ಲಿ ಕರ್ನಾಟಕದ ಹರಿದಾಸರುಗಳಿಗೆ ಧರ್ಮಕ್ಷೇತ್ರಗಳ ಸಂದರ್ಶನ ಅನಿವಾರ್ಯವಾಗಿತ್ತು. ಹಾಗೆ ಸಂದರ್ಶಿಸಿದ ದಾಖಲೆಗಳಿಗೆ ಹರಿದಾಸರುಗಳು ರಚಿಸಿದ ಕೆಲವೊಂದು ಕೀರ್ತನೆಗಳೇ ಸಾಕ್ಷಿ. ಹೀಗೆ ರಚಿಸಿದ ಕೀರ್ತನೆಗಳ ಅಧ್ಯಯನದಲ್ಲಿ ವ್ಯಕ್ತವಾಗುವ ಮುಖ್ಯ ದರ್ಶನಕ್ಷೇತ್ರಗಳಲ್ಲಿ ಆರು ಕ್ಷೇತ್ರಗಳು ಮುಖ್ಯವಾಗುತ್ತವೆ. ಅವುಗಳಲ್ಲಿ ನಾಲ್ಕು ಹರಿಕ್ಷೇತ್ರಗಳು (ತಿರುಪತಿ, ಬೇಲೂರು, ಉಡುಪಿ ಹಾಗೂ ಫಂಡರಾಪುರ), ಒಂದು ಶೈವಕ್ಷೇತ್ರ (ಪಂಪಾಪುರ), ಹಾಗೂ ಇನ್ನೊಂದು ಯತಿಕ್ಷೇತ್ರ (ಮಂತ್ರಾಲಯ).

ಕನ್ನಡನಾಡಿನಲ್ಲಿ ಆಗಿಹೋದ ಹೆಚ್ಚಿನ ದಾಸರುಗಳೆಲ್ಲ ತಮ್ಮ ಜೀವಿತಕಾಲದಲ್ಲಿ ಈ ಎಲ್ಲಾ ಕ್ಷೇತ್ರಗಳಿಗೆ ಸಂಚರಿಸಿ, ಶ್ರವಣ, ಸ್ಮರಣ, ಕೀರ್ತನ ಮೊದಲಾದ ಭಾವಗಳಿಂದ ಕೀರ್ತನೆಗಳನ್ನು ರಚಿಸಿ, ಹಾಡಿಹೋಗಳಿದ್ದುಂಟು. ಆದರೆ ಅದು ಹೆಚ್ಚಾಗಿ ನಡೆದದ್ದು ವೈಷ್ಣವ ಕ್ಷೇತ್ರಗಳಾದ ತಿರುಪತಿ, ಬೇಲೂರು, ಪಂಢರಾಪುರ ಹಾಗೂ ಉಡುಪಿಗಳಲ್ಲಿ. ಎಲ್ಲೋ ಕೆಲವೊಂದು ಕೀರ್ತನೆಗಳು ಶೈವಸಂಬಂಧಿಯಾಗಿ ಹಂಪೆಯ ವಿರೂಪಾಕ್ಷನನ್ನು ಕುರಿತು

ರಚಿತವಾಯಿತು. ಅಂತೆಯೇ ಯತಿಕ್ಷೇತ್ರವಾದ ಮಂತ್ರಾಲಯದ ರಾಘವೇಂದ್ರಸ್ವಾಮಿಗಳ ಮಹಾತ್ಮೆಯ ಕುರಿತಾಗಿಯೂ ರಚಿತವಾಯಿತು. ಈ ಕುರಿತಾದ ಯತಿಸ್ತುತಿಯನ್ನು ರಚಿಸಿದವರಲ್ಲಿ ಗೋಪಾಲದಾಸ ಹಾಗೂ ಅವರ ಶಿಷ್ಯರುಗಳೇ ಮುಖ್ಯರು. ಅಲ್ಲದೆ ಕಾಶಿ, ನಂಜನಗೂಡು, ರಾಮೇಶ್ವರ, ಹರಿಹರ, ಶ್ರೀರಂಗಪಟ್ಟಣ, ಮೇಲುಕೋಟೆ ಹಾಗೂ ಸುಬ್ರಹ್ಮಣ್ಯಕ್ಷೇತ್ರಗಳ ಕುರಿತಾಗಿಯೂ ಕೀರ್ತನೆಗಳು ಅಲ್ಲಲ್ಲಿ ರಚನೆಯಾದದ್ದಿದೆ. ಆದರೆ ಈ ರೀತಿಯ ಸಂಚಾರ ಮತ್ತು ಕ್ಷೇತ್ರದರ್ಶನವು ದೀರ್ಘವಾದ ಸಾಹಿತ್ಯರಚನೆಗಳ ಮೂಲಕವಾಗಿ ಚೈತನ್ಯಪಂಥದ ಅನುಯಾಯಿಗಳಿಂದ ನಡೆದದ್ದಿಲ್ಲ. ಅಲ್ಲಿಯ ರಚನೆಗಳು ಕೇವಲ ದ್ವಿಪದಿಗಳಿಂದ ಸಂಕ್ಷಿಪ್ತವಾಗಿ ತೋರಿಬರುತ್ತವೆ. ಆದರೆ ದೀರ್ಘವಾದ ಸಾಹಿತ್ಯರಚನೆಗಳು ದಾಸಪಂಥದಲ್ಲಿ ನೆರವೇರಿತು. ಅದಕ್ಕೆ ದಾಸರುಗಳಿಗೊದಗಿದ ಆಪತ್ತಿನ ನಿವಾರಣೆಯ ಕುರಿತಾದ ಕಾಳಜಿಯೂ ಇರಬಹುದು. ಆದರೆ ಅವರು ರಚಿಸಿದ ಸಾಹಿತ್ಯವು ಯಾವುದೇ ಭಾವಗಳಿಗೆ ಸಂಬಂಧಿಸಿದ್ದರೂ ಅದು ಆ ದಾಸರ ಅನುಭವ ನಿರ್ಮಿತಿ. ಇದನ್ನೇ ಬಸವರಾಜ ಕಲ್ಗುಡಿಯವರು "ಧಾರ್ಮಿಕ ಮನುಷ್ಯನ ಮಾತುಗಳು ಅವನ ಜೀವನಾನುಭವದ ಅಭಿವ್ಯಕ್ತಿಗಳಾಗಿರುತ್ತವೆ. ಇಲ್ಲಿ ತಾತ್ವಿಕ ವಿಚಾರಗಳು ಮುಖ್ಯವಲ್ಲ. ಬದಲಿಗೆ ಅವನ ಅಭಿವ್ಯಕ್ತಿ ಎಷ್ಟರ ಮಟ್ಟಿಗೆ ಅವನ ಅನುಭವವನ್ನು ಹೇಳಬಲ್ಲುದು ಎನ್ನುವುದೇ ಮುಖ್ಯವಾಗಿರುತ್ತದೆ" ಎಂದು ವಿಶ್ಲೇಷಿಸುತ್ತಾರೆ.[೨೫]

ಚೈತನ್ಯಪಂಥದಲ್ಲಿ 'ತ್ರಿಮಲ್ಲ ತ್ರಿಪದೀಸ್ಥಾನ ಕೈಲದರ್ಶನ । ಸರ್ವತ್ರಕರಿಲ ಕೃಷ್ಣನಾಮ ಪ್ರಚಾರಣ'[೨೬] ಎನ್ನುವ ಮೂಲಕವಾಗಿ ತಿರುಪತಿಯ ವಿವರಣೆಯು ಎರಡೇ ಸಾಲುಗಳಲ್ಲಿ ಮುಗಿಯುತ್ತದೆ. ಅಲ್ಲದೆ, ಇನ್ನಿತರ ಕ್ಷೇತ್ರಗಳ ಪರಿಚಯವು ಅಷ್ಟೇ ಸಂಕ್ಷಿಪ್ತವಾಗಿ ಮುಗಿದು ಹೋಗುತ್ತದೆ.

ಮಥುರಾತೇ ಕೇಶವೇರ ನಿತ್ಯ ಸನ್ನಿಧಾನ ।
ನೀಲಾಚಲೇ ಪುರುಷೋತ್ತಮ–ಜಗನ್ನಾಥ ನಾಮ ॥[೨೭]

(ಮಥುರಾದಲ್ಲಿ ಕೇಶವನು, ನೀಲಾಚಲದಲ್ಲಿ ಜಗನ್ನಾಥನು ವಾಸಮಾಡುತ್ತಾರೆ).

ಪ್ರಯಾಗೇ ಮಾಧವ ಮನ್ದಾರೇ ಶ್ರೀಮಧುಸೂದನ ।
ಆನನ್ದಾರಣ್ಯೇ ವಾಸುದೇವ ಪದ್ಮನಾಭ ಜನಾರ್ದನ ॥ –ಚೈತನ್ಯ ಚರಿತಾಮೃತ

(ಪ್ರಯಾಗದಲ್ಲಿ ಬಿಂದುಮಾಧವನು, ಮಂದಾರ ಪರ್ವತದಲ್ಲಿ ಮಧುಸೂದನನು, ಕೇರಳದ ಆನಂದಾರಣ್ಯದಲ್ಲಿ ವಾಸುದೇವ, ಪದ್ಮನಾಭ ಮತ್ತು ಜನಾರ್ದನರು ವಾಸಮಾಡುತ್ತಾರೆ).

ವಿಷ್ಣು ಕಾಂಞ್ಚೆತೇ ವಿಷ್ಣು ಹರಿರಹೇ ಮಾಯಾಪುರೇ ।
ಐಛೇ ಆರ ನಾನಾ ಮೂರ್ತಿ ಬ್ರಹ್ಮಾಣ್ಡ ಭಿತರೇ ॥ –ಚೈತನ್ಯ ಚರಿತಾಮೃತ

(ವಿಷ್ಣುಕಂಚಿಯಲ್ಲಿ ವಿಷ್ಣುವು, ಮಾಯಾಪುರದಲ್ಲಿ ಪ್ರಭುಹರಿಯು ಇರುತ್ತಾರೆ).

ಹೀಗೆ ಇಲ್ಲಿಯ ರಚನೆಗಳಲ್ಲಿ ಹೆಚ್ಚಿನ ವಿವರಣೆಗಳಿಲ್ಲ. ಆದರೆ ದಾಸಸಾಹಿತ್ಯದಲ್ಲಿ ಆಯಾಯ ಕ್ಷೇತ್ರದೈವ ಹಾಗೂ ಭಕ್ತನೊಂದಿಗೆ ನಡೆಯುವ ಕೆಲವೊಂದು ಘಟನೆಗಳು ಕೀರ್ತನೆಯ ರೂಪದಲ್ಲಿ ಸಿಗಲುಸಾಧ್ಯ.

ದಾಸಸಾಹಿತ್ಯದಲ್ಲಿ ತಿರುಪತಿಕ್ಷೇತ್ರಮಹಾತ್ಮೆಗೆ ಮೊದಲಮಣೆ. ತಿರುಪತಿ ಕುರಿತಾಗಿ ಹೆಚ್ಚು ಕೀರ್ತನೆಗಳನ್ನು ರಚಿಸಿದವರೆಂದರೆ ಪುರಂದರದಾಸರು ಮತ್ತು ಕನಕದಾಸರು. ಈ ಕುರಿತು ಇತರ ದಾಸರ ರಚನೆಯಂತೂ ಕಡಿಮೆಯೆಂದೇ ಹೇಳಬೇಕು. ಕನಕದಾಸರು ತಿರುಪತಿಗೆ ಹೋದಾಗ ಅಲ್ಲಿಯ ಮಹಂತನು 'ನೀವು ಯಾತರವರು' ಎಂದು ಪ್ರಶ್ನಿಸಲು, ಕನಕದಾಸರು ಏಕತಾರೆಯನ್ನು ಮೀಟುತ್ತಾ, 'ಯಾತರವನೆಂದುಸುರಲಿ ಜಗನ್ನಾಥ ಮಾಡಿದನು ನರಜನ್ಮವ' ಎಂದು ಉತ್ತರಿಸಿದರು. ಅಲ್ಲದೆ ಪದ್ಮಾವತೀಕಲ್ಯಾಣಕ್ಕಾಗಿ ಬಂದರೂ, ಕನಕದಾಸರಿಗೆ ತುತ್ತನ್ನ ದೊರೆಯದಿರಲು ಭಗವಂತನನ್ನೇ ಪರಿಹಾಸ್ಯ ಮಾಡಿ, ದೀರ್ಘವಾದ ಕೀರ್ತನೆಯನ್ನು ರಚಿಸುತ್ತಾರೆ.

ಬಂದೆವಯ್ಯಾ ಗೋವಿಂದ ಶೆಟ್ಟಿ । ಇಂದು ನಿನ್ನ ಮದುವೆಗೆ ಬಾರೆಂದೆಂದೆನೆ ॥ ಅ ಪ ॥
ಅಪ್ಪವು ಅತಿರಸ ತುಪ್ಪವು ಚೆನ್ನಪಾಲು । ಒಪ್ಪುವ ಸಕ್ಕರೆಯಾಲಕ್ಕಿಯು ।
ಅಪ್ಪು ರೂಪವಾದ ಕಜ್ಜಾಯವನ್ನೆಲ್ಲ । ಚಪ್ಪನ್ನ ದೇಶಕ್ಕೆ ಮಾರುವ ಶೆಟ್ಟಿ ॥

ಇದು ಕನಕದಾಸರು ಭಗವಂತನಿಗೆ ಮಾಡುವ ಹಾಸ್ಯ. ಅತ್ತ ಹೊಟ್ಟೆಗೆ ಆಹಾರವಿಲ್ಲ. ಇತ್ತ ವಿಪರೀತ ಛಳಿ. ಆ ರಾತ್ರಿಯಲ್ಲಿ ಕನಕದಾಸರ ಸಂಕಷ್ಟವನ್ನರಿತ ಭಗವಂತ ಸಾಧಾರಣ ಮಾನವನಂತೆ ಬಂದು, ಆಹಾರವನ್ನಿತ್ತು, ಗರ್ಭಗುಡಿಯಲ್ಲಿ ತನಗುಡಿಸಿದ್ದ ರೇಷ್ಮೆಬಟ್ಟೆಯನ್ನು ಹೊದ್ದುಕೊಳ್ಳುವಂತೆ ಕೊಟ್ಟುಹೋಗಲು, ಮಾರನೆಯ ದಿನ ಅಲ್ಲಿಯ ಆಳುಗಳು ದೇವರ ಮೈಮೇಲಿದ್ದ ಬಟ್ಟೆಯು ಕನಕದಾಸರ ಮೈಮೇಲೆ ಕಾಣಲು, ದಾಸರನ್ನು ಪ್ರಹಾರಿಸಲು ಮುಂದಾಗುತ್ತಾರೆ. ಆಗ ಕನಕದಾಸರು, 'ಗೋವಿಂದ ಸಲಹೆನ್ನನು, ಸದಾನಂದ ಗೋವಿಂದ ಸಲಹೆನ್ನನು' ಎಂದು ಕೀರ್ತನೆಯನ್ನು ದುಃಖದಿಂದ ರಚಿಸತೊಡಗುತ್ತಾರೆ. ಹೀಗೆ ತಿರುಪತಿಗೆ ಸಂಬಂಧಿಸಿದಂತೆ, ಕನಕದಾಸರು ರಚಿಸಿದ ಕೀರ್ತನೆಗಳು ಹತ್ತುಹಲವು. ಅವುಗಳಲ್ಲಿ 'ಏನೆಂದು ಕೊಂಡಾಡಿ ಸ್ತುತಿಸುವೆನೋ ದೇವ', 'ನಾನೇನು ಬಲ್ಲೆ ನಿಮ್ಮ ನಾಮದ ಸ್ಮರಣೆಯನು', 'ನಿನ್ನ ನೋಡಿ ಧನ್ಯನಾದೆನೋ', 'ಮುಟ್ಟಬೇಡ ಮುಟ್ಟಬೇಡ ಮುರಹರನ ದಾಸರನು' ರಚನೆಗಳು ಮುಖ್ಯವಾದವುಗಳು.

ಪುರಂದರದಾಸರು ಯಾವಕಡೆ ಸಂಚಾರದಲ್ಲಿದ್ದರೂ ತಿರುಪತಿಯ ಬ್ರಹ್ಮೋತ್ಸವವನ್ನು ಮಾತ್ರ ತಪ್ಪಿಸುತ್ತಿರಲಿಲ್ಲ. ಹಾಗೆ ಬಂದ ಪುರಂದರದಾಸರು ಬ್ರಹ್ಮೋತ್ಸವದ ಭೋಜನಪಂಕ್ತಿಯಲ್ಲಿ ತಮ್ಮ ಶಿಷ್ಯನಾದ ಅಪ್ಪಣ್ಣ ಭಾಗವತನಿಗೆ ತುಪ್ಪವನ್ನು ಬಡಿಸುವಂತೆ ಹೇಳುತ್ತಾರೆ. ಆದರೆ ಅಪ್ಪಣ್ಣಭಾಗವತನು ಆ ಸಮಯದಲ್ಲಿಲ್ಲದಿದ್ದುದರಿಂದ, ಭಗವಂತನೇ ಅಪ್ಪಣ್ಣಭಾಗವತನಾಗಿ ಆ ಕೆಲಸವನ್ನು ನಿರ್ವಹಿಸುತ್ತಾನೆ. ಆ ನಂತರದಲ್ಲಿ ಭಗವದ್‌ಪಾರಮ್ಯವನ್ನು ಅರಿತು,

ಏಂದಪ್ಪಿಕೊಂಬೆ । ರಂಗಯ್ಯನ । ಏಂದಪ್ಪಿಕೊಂಬೆ ॥
ಏಂದಪ್ಪಿಕೊಂಬೆ ನಾನೆಂದು ಮುದ್ದಾಡುವೆ । ಏಂದಿಗೆ ಸವಿ ಮಾತನಾಡಿ ನಾ ದಣಿವೆ ॥

ಏಂದು ವಾತ್ಸಲ್ಯಭಾವದ ಕೀರ್ತನೆಯನ್ನು ರಚಿಸುತ್ತಾರೆ. 'ಆ ಪಾದ ಆನಂದ ಆ ನಖ ಆನಂದ, ಆ ಜಾನು ಆ ಜಂಘ ಆನಂದಮಯವಯ್ಯಾ' ಇದು ಪ್ರತ್ಯಕ್ಷವಾಗಿ ಶ್ರೀನಿವಾಸನನ್ನು ಕಂಡ ಪುರಂದರದಾಸರಲ್ಲಿ ರಚನೆಯಾದ

ಸುಳಾದಿ. ಇವಲ್ಲದೆ, 'ಕಲಿಯುಗದ ಮಹಿಮೆಯು ಕಾಣಬಂತೀಗ, ಜಲಜಾಕ್ಷ ಮೇಲ್ಗಿರಿಯ ಶ್ರೀವೆಂಕಟೇಶ', 'ನಿನ್ನ ನೋಡಿ ಧನ್ಯನಾದೆನೋ ಹೇ ಶ್ರೀನಿವಾಸ', 'ವೆಂಕಟಾಚಲನಿಲಯಂ ವೈಕುಂಠಪುರವಾಸಂ', 'ವೆಂಕಟರಮಣನೆ ಬಾರೋ ಶೇಷಾಚಲವಾಸನೆ ಬಾರೋ' ಇವೆಲ್ಲವುಗಳು ತಿರುಪತಿಯ ಆರಾಧ್ಯನನ್ನು ಕುರಿತಾದುದು.

ತಿರುಪತಿಯ ಕುರಿತು ಶ್ರೀವಾದಿರಾಜ ಯತಿಗಳು ಸಾಹಿತ್ಯವನ್ನು ರಚಿಸದೆ ಬಿಟ್ಟವರಲ್ಲ. ಅವರು ತಮ್ಮ ಸಂಚಾರದ ವೇಳೆ ತಿರುಪತಿಗೆ ಆಗಮಿಸಿದ ದಿನ ಶ್ರೀರಾಮನವಮಿಯ ದಿನವಾಗಿತ್ತು. ಅಂದು ಅವರು ರಚಿಸಿದ ಸಖ್ಯಭಕ್ತಿಯ ಕೀರ್ತನೆಯಾದ 'ಸೇವಕನೆಲೊ ನಾನು ನಿನ್ನಯ ಪಾದಸೇವೆ ನೀಡೆಲೊ ನೀನು' ಎಂಬುದು ದಾಸಕೀರ್ತನೆಗಳಲ್ಲಿ ಅನುಪಮವಾದುದು. ಹೀಗೆಯೇ ತಿರುಪತಿಯ ತಿಮ್ಮಪ್ಪನನ್ನು ಕುರಿತು ರಚಿಸಿದ ಕೀರ್ತನಕಾರರಲ್ಲಿ ಪ್ರಸನ್ನವೆಂಕಟದಾಸರ ಹೆಸರು ಮುಖ್ಯವಾದುದು. ಅವರು ಪಡೆದಿರುವ 'ಪ್ರಸನ್ವೆಂಕಟ'ಎಂಬ ಅಂಕಿತವು ಇಲ್ಲಿಯ ವೆಂಕಟೇಶನಿಂದಲೇ ಅನುಗ್ರಹೀತವಾದುದೆಂಬ ಪ್ರತೀತಿ ಇದೆ.[೨೮] ವಿಜಯದಾಸರು ಕನಕ, ಪುರಂದರರಂತೆ ತಿರುಪತಿಯನ್ನು ದರ್ಶಿಸಿದ್ದುದು ಬ್ರಹ್ಮರಥೋತ್ಸವದ ಸಂದರ್ಭದಲ್ಲಿ. ವಿಶೇಷವೆಂದರೆ, ಆ ದಿನ ರಥವು ನಡುಬೀದಿಯಲ್ಲಿ ನಿಂತು ಬಿಡುತ್ತದೆ. ಆಗ, ಆ ರಥವನ್ನು ಕುರಿತು ಅವರು ರಚಿಸಿದ 'ಸಾಗಿ ಬಾರಯ್ಯ ಭವರೋಗದ ವೈದ್ಯನೆ, ಬಾಗುವೆ ನಿನಗೆ ಚೆನ್ನಾಗಿ ಸ್ತುತಿಸಿ ಇಂದು' ಎನ್ನುವ ಕೀರ್ತನೆಯಿಂದ ನಿಂತ ರಥವು ಮುಂದೆ ಸಾಗುತ್ತದೆ. ಇದು ಅವರ ಭಕ್ತಿಪಾರಮ್ಯಕ್ಕೆ ಸಾಕ್ಷಿ. ಇವಲ್ಲದೆ ಇವರು ರಚಿಸಿದ 'ನಿನ್ನ ದರುಶನಕೆ ಬಂದವನಲ್ಲವೋ'ಮೊದಲಾದ ಕೀರ್ತನೆಗಳು ವೆಂಕಟೇಶನ ಸನ್ನಿಧಿಯಲ್ಲಿ ವಿಜಯದಾಸರು ರಚಿಸಿರುವಂತಹುದು.

ಕೀರ್ತನೆಗಳಲ್ಲಿ ಕಾಣುವ ಕ್ಷೇತ್ರದರ್ಶನಗಳಲ್ಲಿ ಬೇಲೂರಿಗೆ ಎರಡನೆಯ ಸ್ಥಾನ. ಬೇಲೂರಿನ ಚೆನ್ನಕೇಶವನಿಗೂ ಕನ್ನಡದ ದಾಸಕುಲಕ್ಕೂ ಒಂದು ರೀತಿಯ ಭಾವಶುದ್ಧಿಯ ಸಂಬಂಧ. ಹಾಗಾಗಿಯೇ ಇಲ್ಲಿಯ ದಾಸಕುಲವು ಚೆನ್ನಕೇಶವನಲ್ಲಿ ತಮ್ಮ ಅಳಲನ್ನು ತೋಡಿಕೊಂಡುದುದು. ಅಲ್ಲದೆ ಆತನೂ ಕೂಡ ಚೆನ್ನಿಗನಾಗಿ, ಚೆನ್ನಿಗರಾಯನಾಗಿ, ವೇಲಾಪುರಾಧೀಶನಾಗಿ, ಕೇಶವನಾಗಿ ಅವರಿಗೆ ಗೋಚರನಾಗಿ ಬಿಡುತ್ತಾನೆ.

ಬೇಲೂರಿನ ಚೆನ್ನಕೇಶವನ ಕುರಿತಾಗಿ ಕೀರ್ತನೆಯನ್ನು ರಚಿಸಿದ ಕನಕ, ಪುರಂದರರಂತೆ ವಾದಿರಾಜರು ಹಾಗೂ ವೈಕುಂಠದಾಸರು ಮುಖ್ಯರಾಗುತ್ತಾರೆ. ವೈಕುಂಠದಾಸರಂತೂ ಬೇಲೂರಿನಲ್ಲಿದ್ದಾಗ ತಮ್ಮ ಮಗ ಉರಗವಿಷದಿಂದ ಅಸುನೀಗಲು, 'ಏಳಿಸು ನಂಜನನ ನೀ ಬೇಗದೊಳೆಬ್ಬಿಸು ನಂಜನನ, ಬಾಳುವ ಮಗನನು ತೋಳವಿಡಿದ ಯಮನಾಳಿದೊಡೆಯ ವೇಲಾಪುರದರಸ.....' ಎಂದು ಭಗವದನುಗ್ರಹಕ್ಕಾಗಿ ಹಾಡಿದ್ದು ಬೇಲೂರಿನ ನೆಲದಲ್ಲಿ. ವೈಕುಂಠದಾಸರ ತೊಡೆಯ ಮೇಲೆ ಕೇಶವನ ಮಾಯಾಬಾಲಲೀಲೆಯನ್ನು ಕಂಡ ಉಡುಪಿಯ ಯತಿಗಳಾದ ವಾದಿರಾಜರು, 'ದಾಸೋತ್ತಮ ನೀನೆ ಶ್ರೀವೈಕುಂಠ ದಾಸೋತ್ತಮ ನೀನೆ' ಎಂದು ಹಾಡಿ ಮೈಮರೆತಿದ್ದು ಇದೇ ವೇಲಾಪುರದಲ್ಲಿ.

ಬೇಗ ಬಾರೋ ಬೇಗ ಬಾರೋ ವೇಲಾಪುರದ ಚೆನ್ನ ।
ಬೇಗ ಬಾರೋ ಬೇಗ ಬಾರೋ ನೀಲ ಮೇಘ ವರ್ಣ ॥ –ವಾದಿರಾಜರು

ಇದು ಬೇಲೂರಿನ ಗರುಡೋತ್ಸವದ ಸಂದರ್ಭದಲ್ಲಿ ವಾದಿರಾಜರಿಂದ ರಚಿತವಾದ ಕೀರ್ತನೆ.[೨೯] ಇದಲ್ಲದೆ 'ಆನಂದ ಮಯಗೆ ಚಿನ್ಮಯಗೆ' ಮೊದಲಾದ ರಚನೆಗಳು ಬೇಲೂರಿನ ಕುರಿತಾದುದು. ಇಷ್ಟೇ ಅಲ್ಲದೆ, ಪುರಂದರದಾಸರು ರಚಿಸಿದ 'ಅಳುವುದ್ಯಾತಕೊ ರಂಗ ಅತ್ತರಂಜಿಪ ಗುಮ್ಮ', 'ದೇವಕಿನಂದನ ಹರಿ ವಾಸುದೇವ'ಮೊದಲಾದ ಸಮಾಧಾನಗೊಳಿಸುವ ಕೀರ್ತನೆಗಳು, ಕನಕದಾಸರ ಮಡಿಯ ಗುಟ್ಟನ್ನು ಹೇಳಿಕೊಡುವ 'ನನ್ನವ್ವ ಕಲ್ಲಬಿಡೆ ಈ ಧೋತ್ರವ ಚೆನ್ನಾಗಿ ಒಗೆಯಬೇಕು' ಎಂಬ ಕೀರ್ತನೆಗಳೆಲ್ಲವೂ ಬೇಲೂರಿನಲ್ಲೇ ರಚಿತವಾದವುಗಳು.

ಪಂಢರಾಪುರವು ದಾಸಪರಂಪರೆಗೆ ನಾದಬ್ರಹ್ಮನ ಕ್ಷೇತ್ರ. ದಾಸಪಂಥವು ಪ್ರಬಲವಾಗುವುದರ ಮೊದಲೇ ಅಂದರೆ ಸುಮಾರು ಒಂಬತ್ತನೆಯನೆಯ ಶತಮಾನದಲ್ಲಿಯೇ ಈ ಕ್ಷೇತ್ರವು ಆಸ್ತಿಕರ ಪಾಲಿಗೆ ಮುಕ್ತಿಕ್ಷೇತ್ರವಾಗಿ ಪರಿಣಮಿಸಿತ್ತು. ಒಂಬತ್ತನೆಯ ಶತಮಾನದಲ್ಲಿದ್ದ ನರಸಿಂಹದಾಸರೆಂಬುವವರು ಪರಿವಾರ ಸಮೇತರಾಗಿ ಪಾದಾಚಾರಿಗಳಾಗಿ ಸಂಚರಿಸಿ, ಪಂಢರಾಪುರವನ್ನು ತಲುಪಿ, ತಂಬೂರಿಯನ್ನು ಮೀಟಿ, ಭಜನೆಯನ್ನು ಮಾಡಿ, ಚಂದ್ರಭಾಗಾನದಿಯಲ್ಲಿ ಅರ್ಘ್ಯಪ್ರದಾನ ಮಾಡಿ, ಪಾಂಡುರಂಗನನ್ನು ಒಲಿಸಿಕೊಂಡು ಅಚಲಾನಂದರಾಗಿ ಪ್ರಕಟವಾದುದು ಇಲ್ಲೇ. ಆದುದರಿಂದಲೇ ನಮ್ಮ ದಾಸಪಂಥದ ಮುಖ್ಯರು ಭಕ್ತಿಕೀರ್ತನವಾಹಿನಿಯನ್ನು ಪಂಢರಾಪುರದಲ್ಲಿ ಹರಿಸುವಂತಾಯಿತು. ಅಂತೆಯೇ ಭಗವಂತನ ಪರೀಕ್ಷೆಯನ್ನು ಎದುರಿಸುವಂತಾಯಿತು.

ಪುರಂದರದಾಸರು ಪಂಢರಾಪುರಕ್ಕೆ ಬಂದಾಗ ಪಾಂಡುರಂಗನಿಂದಲೇ ಪರೀಕ್ಷೆಗೆ ಒಳಗಾಗಬೇಕಾಯಿತು. ಪುರಂದರದಾಸರ ವೇಷವನ್ನು ಪಾಂಡುರಂಗನೇ ಧರಿಸಿ, ಅಲ್ಲಿಯ ವೇಶ್ಯೆಯೊಬ್ಬಳಿಗೆ ತನ್ನ ಕೈಕಡಗವನ್ನು ಕೊಟ್ಟು, ದೂರು ಮಾತ್ರ ಪುರಂದರದಾಸರಿಗೆ ಬರಿಸಿ, ಅವರಿಂದ 'ಮುಯ್ಯಕ್ಕೆ ಮುಯ್ಯಿ ತೀರಿತೋ' ಎಂಬ ಕೀರ್ತನೆಯನ್ನು ಶಿಕ್ಷೆಯನ್ನು ಸ್ವೀಕರಿಸಿಕೊಂಡು ಹಾಡುವಂತಾಗುತ್ತದೆ. ಆದರೂ ಪುರಂದರದಾಸರಿಗೆ ಪಾಂಡುರಂಗನಲ್ಲಿ ಡಿಂಗರಿಗನಾಗಿಯೇ ಉಳಿಯುವ ಹಂಬಲ. ಆ ಕುರಿತಾಗಿಯೇ ಅವರು ಡಂಗುರವನ್ನು ಸಾರಬಯಸುತ್ತಾರೆ. ಪಾಂಡುರಂಗನಲ್ಲಿ ಪುರಂದರದಾಸರು ತೋರುವ ಭಕ್ತಿಯ ಪರಾಕಾಷ್ಠೆಯು ಎಷ್ಟೆಂದರೆ, ಹರಿಯು ಮುಡಿದಿರುವ ಹೂವನ್ನು ಹರಿವಾಣದಲಿಟ್ಟುಕೊಂಡು ಚಪ್ಪಾಳೆಯೊಂದಿಗೆ ಹಾಡುತ್ತಾರೆ, ಕುಣಿಯುತ್ತಾರೆ. ಭೂಮಂಡಲಕ್ಕೆ ಪಾಂಡುರಂಗವಿಠಲನನ್ನೇ ಪರದೈವವನ್ನಾಗಿ ಕಾಣುವಲ್ಲಿ ಹರಿಸರ್ವೋತ್ತಮತ್ವವನ್ನು ಸಾರಲುಬಯಸುತ್ತಾರೆ. ಅದಕ್ಕಾಗಿಯೇ ತಮ್ಮ ಒಡಲನ್ನು ಜಾಗಟೆಯನ್ನಾಗಿ ಮಾಡುತ್ತಾರೆ. ಅದನ್ನು ಹೊಡೆಯಲು ನಾಲಗೆಯನ್ನೇ ಕೋಲನ್ನಾಗಿ ಬಳಸುತ್ತಾರೆ.

ಪಾಂಡುರಂಗನನ್ನು ಸ್ತುತಿಸಿದ ಮತ್ತೋರ್ವ ದಾಸರೆಂದರೆ ಬಾಗಲಕೋಟೆಯ ಪ್ರಸನ್ನವೆಂಕಟದಾಸರು. 'ವಿಠಲಾ ಪಿಡಿಯೆನ್ನ ಕೈಯ್ಯಾ' ಎನ್ನುವ ಮೂಲಕ ಕೀರ್ತನೆಗಳಲ್ಲಿ ಬಾಲಭಾಷೆಯನ್ನು ಹೊಂದಿಸಿ

ವಾತ್ಸಲ್ಯಭಾವವನ್ನು ತೋರಿಸಿರುವುದು ಇವರ ಹೆಚ್ಚುಗಾರಿಕೆ. ಇವರ ಕಾಲದಲ್ಲೇ ಇದ್ದ ವಿಜಯದಾಸರು ತಮ್ಮ ಸಂಚಾರದಲ್ಲಿರುವಾಗ ಪಂಢರಾಪುರಕ್ಕೆ ಬಂದು ಪಾಂಡುರಂಗನಲ್ಲಿ ವಿನಂತಿಸುವುದು ವಾಡಿಕೆ. 'ವಿಠಲಾ ನಿನ್ನ ನಂಬಿದೆ ಎನ್ನ ಕಾಯೋ', 'ಹರೇ ವಿಠಲ ಪಾಂಡುರಂಗ ಪರಿಪಾಲಯ ಕಂಸಾರೇ' ಎನ್ನುವ ಕೀರ್ತನೆಗಳು ಅವರ ರಚನೆಗಳಲ್ಲಿ ಹೆಚ್ಚಿನ ಮನ್ನಣೆಯನ್ನು ಪಡೆದವುಗಳು. ಇವರ ಶಿಷ್ಯರಾದ ಗೋಪಾಲದಾಸರು–

ಆವ ದೇಶಕೆ ಬರಲಿ ಆವ ಕ್ಷೇತ್ರ ನೋಡಲಿ ।
ಆವುದಾವುದ ಬಿಡಲಿ ಆವುದ ಜಪಿಸಲಿ ।
ಆವುದಾಡಲಿ ಆವುದಾವುದ ತೊಡಲಿ ।
ದೇವ ನೀನಲ್ಲದಿಲ್ಲ ಇದರೊಳಗೊಂದೂ ।
ಆವಲ್ಲಿಗೋ ಕಾಣೆ ನೀನು ಬರ ಹೇಳಿದ್ದು ।
ಕಾವ ಕರುಣಿ ನಮ್ಮ ಗೋಪಾಲ ವಿಠಲ ।
ದೇವ ಪಂಢರಿರಾಯ ವಿಜಯ ರಾಯರ ಪ್ರೀಯ ॥ –ಗೋಪಾಲದಾಸರು

ಎನ್ನುವ ಮೂಲಕ ಪಾಂಡುರಂಗನ ಕುರಿತಾದ ಹರಿತತ್ವ ಪ್ರತಿಪಾದನೆಯನ್ನು ಸುಳಾದಿಗಳಲ್ಲಿ ಸ್ಮರಿಸಿದವರು.

ಜಗನ್ನಾಥದಾಸರಿಗೂ ಪಂಢರಾಪುರಕ್ಕೂ ವಿಶೇಷ ಸಂಬಂಧ. ಶ್ರೀನಿವಾಸಾಚಾರ್ಯರಾಗಿದ್ದ ಇವರು ಅಲ್ಲಿಯ ಚಂದ್ರಭಾಗಾ ನದಿಯ ದಿವ್ಯಶಿಲೆಯ ಲಿಪಿ ವಿಶೇಷತೆಯಿಂದ ಜಗನ್ನಾಥದಾಸರಾಗಿ ಬದಲಾದದ್ದು ಚಾರಿತ್ರಿಕ ವಿಚಾರ. ಆವರೆಗೆ 'ಎಂದು ಕಾಂಬೆನು ಪಾಂಡುರಂಗ ಮೂರುತಿಯ, ಇಂದುಭಾಗನಿವಾಸ ನರನ ಸಾರಥಿಯ' ಎಂದು ಹಾಡುತ್ತಿದ್ದ ಇವರು ಅಂಕಿತವಾಗಿ ಸಿಕ್ಕಿದ ಶಿಲೆಯನ್ನು ಶಿರದಲ್ಲಿ ಧರಿಸಿ, ಆ ಅಂಕಿತಕ್ಕೊಂದು ಪ್ರಥಮಪದವನ್ನು ರಚಿಸಿದರು.

ಶಠ ಕೂರ್ಮ ರೂಪಿಯ ಕಿಟ ಮಾನವ ಹರಿಯ
ವಟು ಭಾರ್ಗವ ಕಾಕುತ್ಸ್ಥ ಶಠ ಕಂಸದ್ವಿಷನ ।
ನಿಟಿಲಾಂಬಕ ಸಹಾಯ್ಯ ಖಳ ಕಟಕಾರಿ ಭೀಮಾ
ತಟವಾಸ ಜಗನ್ನಾಥ ವಿಠಲ ಮೂರುತಿಯ ॥ –ಜಗನ್ನಾಥದಾಸರು

ಇದು ಜಗನ್ನಾಥದಾಸರ ಮೊದಲ ಅಂಕಿತಪದ. ಅದು ರಚಿತವಾದದ್ದು ಪಂಢರಾಪುರದಲ್ಲಿ ಎನ್ನುವುದು ಒಂದು ವಿಶೇಷವಾದರೆ, ಅವರಿಂದ ಕನ್ನಡದಲ್ಲಿ ರಚಿತವಾದ ಮೊದಲ ಕೀರ್ತನೆ ಎನ್ನುವುದು ಎರಡನೆಯ ವಿಶೇಷ. ಇಷ್ಟೇ ಅಲ್ಲದೆ 'ಕಂಡೆ ಪಂಢರಿರಾಯನ', 'ಧನ್ಯನಾದೆ ವಿಠಲನ ಕಂಡು', 'ಪಾಲಿಸು ಪಂಢರಿಪುರಿರೇಯ', 'ವಿಠಲಯ್ಯಾ ವಿಠಲಯ್ಯಾ' ಮೊದಲಾದ ಕೀರ್ತನೆಗಳು ಅವರ ಅನುಭವ ಶ್ರೀಮಂತಿಕೆಯಿಂದ ರಚನೆಯಾದವುಗಳು. ಇಲ್ಲಿ ಶಾಸ್ತ್ರಪಾಠವೂ ಇದೆ; ಶಾಸ್ತ್ರಾರ್ಥದ ನಿರೂಪಣೆಯೂ ಇದೆ. ಒಟ್ಟಿನಲ್ಲಿ ಭಕ್ತಿಯಿಂದ ಮುಕ್ತಿಗಾಗಿ ಹಂಬಲಿಸುವ ದರ್ಶನ ಕ್ಷೇತ್ರಗಳಲ್ಲಿ ಪಂಢರಾಪುರವು ಮುಖ್ಯವಾದುದು.

ಉಡುಪಿಯು ದಾಸರು ಕಂಡ ಇನ್ನೊಂದು ದರ್ಶನಕ್ಷೇತ್ರ. ಪೊಡವಿಗೊಡೆಯ ಶ್ರೀಕೃಷ್ಣನ ನೆಲೆವೀಡು. ಜೊತೆಗೆ ದಾಸಕೀರ್ತನೆಯು ಪ್ರತಿಪಾದಿಸುತ್ತ ಬಂದ ದ್ವೈತತತ್ವದ ತವರೂರು. ಉಡುಪಿಯ ಕೃಷ್ಣನು ದಾಸರನ್ನು ಕಂಡ. ದಾಸರುಗಳೆಲ್ಲ ಕೃಷ್ಣನನ್ನು ಕಂಡರು. ಹಾಗಾಗಿ ಆ ದಾಸರುಗಳೆಲ್ಲ ಕೃಷ್ಣನನ್ನುದ್ದೇಶಿಸಿ ಕೀರ್ತನೆಯನ್ನು ರಚಿಸಿದರು; ಹಾಡಿ ಕುಣಿದರು. ಇಲ್ಲಿಯ ದಾಸರುಗಳಲ್ಲಿ ಕೃಷ್ಣನನ್ನು ಕೇಳಿ ತಿಳಿದು ಹಾಡಿದ ದಾಸರುಗಳು ಕೆಲವರಾದರೆ, ಇನ್ನೂ ಕೆಲವರು ಕೃಷ್ಣನನ್ನು ನೋಡಿ ಕೀರ್ತನೆಯನ್ನು ರಚಿಸಿ ಹಾಡಿದವರು.

ಉಡುಪಿಯ ಕೃಷ್ಣನನ್ನು ಸ್ತುತಿಸಿದವರಲ್ಲಿ ವ್ಯಾಸರಾಯರು, ಪುರಂದರದಾಸರು, ಕನಕದಾಸರು, ವಾದಿರಾಜರು, ಪ್ರಸನ್ನವೆಂಕಟದಾಸರು, ವಿಜಯದಾಸರು, ಹೆಳವನಕಟ್ಟೆ ಗಿರಿಯಮ್ಮ ಮೊದಲಾದವರು ಮುಖ್ಯರು. ದಾಸಪಂಥದ ಸಂಘಟಕರೂ, ನಿರ್ಮಾತರೂ ಆದ ವ್ಯಾಸರಾಯರಂತೂ ಉಡುಪಿಯ ಕೃಷ್ಣನನ್ನು 'ರಂಗ'ನೆಂದೇ ಸಂಬೋಧಿಸಿದುದು ಹೆಚ್ಚು.

ರಂಗ ಬಂದ ಬೃಂದಾವನದಲ್ಲಿ ನಿಂದ । ಕೊಳಲಿನ ಧ್ವನಿ ಬಹು ಚೆಂದ ॥

....

ಹಡಗಿನಿಂದಲಿ ಬಂದು ಉಡುಪಿಲಿ ನೆಲೆಸಿದ । ಬಿಡದೆ ಪೂಜೆಯಗೊಂಬ ಒಡೆಯ ಶ್ರೀಕೃಷ್ಣ ॥

ಇಷ್ಟೇ ಅಲ್ಲದೆ ಉಡುಪಿಯ ಶ್ರೀಕೃಷ್ಣನನ್ನು ಕುರಿತು ಹಾಡಿದ ವ್ಯಾಸರಾಯರ ರಚನೆಗಳು ಇನ್ನೂ ಹಲವು. ಅವುಗಳಲ್ಲಿ 'ಸಿಕ್ಕಿದನೆಲೆ ಜಾಣೆ', 'ಬಾರೊ ಬೇಗ ನೀರಜಾಕ್ಷ', 'ನಿನ್ನ ಮುಗನೇನೆ ಗೋಪಿ ಗೋಪಮ್ಮ', 'ಕಡೆಗೋಲ ತಾರೆನ್ನ ಚಿನ್ನ', 'ಕಂಡೆ ಕನಸಿನಲಿ ಕಾರುಣ್ಯಮೂರುತಿ ಹರಿಯ' ಇವೆಲ್ಲವುಗಳು ವ್ಯಾಸರಾಯರು ಉಡುಪಿಕೃಷ್ಣನ ಬಗ್ಗೆ ರಚಿಸಿದ ವಾತ್ಸಲ್ಯ ಭರಿತವಾದ ಕೀರ್ತನೆಗಳು.

ಉಡುಪಿಯ ಕೃಷ್ಣನನ್ನು ಕುರಿತು ಹಲವು ಭಾಷೆಗಳಲ್ಲಿ ಕೀರ್ತನೆ ರಚಿಸಿದವರಲ್ಲಿ ಸೋದೆಮಠದ ಯತಿಗಳಾದ ವಾದಿರಾಜರು ಮುಖ್ಯರಾಗುತ್ತಾರೆ. ಕನ್ನಡ, ತುಳು, ಸಂಸ್ಕೃತ ಭಾಷಾಪ್ರಭುತ್ವವನ್ನು ಪಡೆದ ಇವರು 'ಹಯವದನ'ನೆಂಬ ಅಂಕಿತದಲ್ಲೇ ಉಡುಪಿಯ ಕೃಷ್ಣನನ್ನು ಸ್ತುತಿಸಿದವರು.

ಆವ ಕುಲವೋ ರಂಗ ಅರಿಯಲಾರದು......................................
ಹಡಗಿನಿಂದಲಿ ಬಂದನಂತೆ । ಕಡಲ ತಡಿಯಲಿ ನಿಂದನಂತೆ ।
ಒಡನೆ ಮಧ್ವರಿಗೊಲಿದನಂತೆ । ಒಡೆಯ ಹಯವದನನಂತೆ ॥ -ವಾದಿರಾಜರು

ಅವರ ಇನ್ನೊಂದು ಕೀರ್ತನೆಯಲ್ಲಿ,

ಈ ಮುದ್ದು ಕೃಷ್ಣನ ಕ್ಷಣದ ಸುಖವೆ ಸಾಕು ।
ಶ್ರೀ ಮಧ್ವ ಮುನಿಯ ಮನದೈವ ಉಡುಪಿನ ಕೃಷ್ಣನ ॥ -ವಾದಿರಾಜರು

ಇಲ್ಲೆಲ್ಲಾ ನೇರವಾಗಿಯೇ ಉಡುಪಿಯ ಪ್ರಸ್ತಾಪವನ್ನು ವಾದಿರಾಜರು ಮಾಡಿರುತ್ತಾರೆ. ಅವರ ಅದೆಷ್ಟೋ ಕೀರ್ತನೆಗಳು ಉಡುಪಿ ಕೃಷ್ಣನ ಕುರಿತಾಗಿದ್ದರೂ ಆತನನ್ನು ಹಯವದನನೆಂದೇ ಸಂಬೋಧಿಸಿರುವುದು ಇಲ್ಲಿಯ ಹೆಚ್ಚುಗಾರಿಕೆ. ಇಷ್ಟೇ ಅಲ್ಲದೆ, 'ಉಡುಪಿನ ರಂಗ ಕಲ್ಲ ಕಂಬದಿಂದೊಡೆದ ನರಸಿಂಹ', 'ಕಡುಮುದ್ದು

ಮೋಹನನಾದ ಈ ಸೊಬಗ ನಮ್ಮುಡುಪಿನ ಕೃಷ್ಣರಾಯನ', 'ಲೋಕ ಭರಿತನೋ ರಂಗಾನೇಕಚರಿತನೋ' ಮುಂತಾದ ಕೀರ್ತನೆಗಳಲ್ಲೂ ಉಡುಪಿಯ ಕೃಷ್ಣನ ಸೊಗಸನ್ನು ಸಾಕಾರಗೊಳಿಸಿದ್ದಾರೆ.

ಹೀಗೆಯೇ ಶೈವಕ್ಷೇತ್ರವಾದ ಪಂಪಾಪುರದ ಕುರಿತಾಗಿ, ಯತಿಕ್ಷೇತ್ರವಾದ ಮಂತ್ರಾಲಯದ ಕುರಿತಾಗಿಯೂ ದಾಸರ ರಚನೆಗಳು ಅಲ್ಲಲ್ಲಿ ಸಿಗಲುಸಾಧ್ಯ. ಒಟ್ಟಿನಲ್ಲಿ, ಇಂತಹ ಸಾಹಿತ್ಯಕ ರಚನೆಗಳು ಚೈತನ್ಯಪಂಥದ ಬರವಣಿಗೆಗಳಲ್ಲಿ ಕೇವಲ ಸಂಕ್ಷಿಪ್ತವಾಗುತ್ತವೆ. 'ವಾರಣಾಸೀ ಪರ್ಯನ್ತ ಸ್ವಚ್ಛನ್ದೇ ಯಾಇಬಾ ಪಥೇ.....',[೩೦] 'ಮಥುರಾರ ಸ್ವಾಮೀ ಸಬೇರ ಚರಣ ವನ್ದಿಬಾ.....'–[೩೧] ಎನ್ನುವ ರಚನೆಗಳೆಲ್ಲ ದ್ವಿಪದಿರೂಪದಲ್ಲೇ ಮುಗಿದು ಹೋಗುತ್ತದೆ. ಒಟ್ಟಿನಲ್ಲಿ ದಾಸಪಂಥದಲ್ಲಿ ಸಿಗುವ ವಿವರವಾದ ಕ್ಷೇತ್ರವರ್ಣನೆಯ ಕೀರ್ತನೆಗಳು ಚೈತನ್ಯಪಂಥದಲ್ಲಿ ಇಲ್ಲವಾಗುತ್ತದೆ.

೬.೮ : ಸಮಾಜ–ಮಹಿಳೆ ಮತ್ತು ಭಕ್ತಿ

ಮಧ್ಯಕಾಲೀನ ವೈದಿಕಧರ್ಮದ ಗೊಂದಲದಲ್ಲಿ ಹೊಸದಾದ ಆಶಯದೊಂದಿಗೆ ಹುಟ್ಟಿದ ದಾಸಪಂಥ ಹಾಗೂ ಚೈತನ್ಯಪಂಥಗಳು ಆಧ್ಯಾತ್ಮದ ಸರಳಭಕ್ತಿಗೆ ಹೆಸರಾದವು. ಈ ಅಸ್ತಿತ್ವದಲ್ಲಿಯೇ ಸಮಾಜವನ್ನು ಸ್ವಸ್ಥದೃಷ್ಟಿಯಿಂದ ಕಟ್ಟುವ ಕಾಯಕ ಕಲ್ಪನೆ ಉಭಯ ಪಂಥಗಳದ್ದೆನ್ನಬೇಕು.

ದಾಸಪಂಥ ಹಾಗೂ ಚೈತನ್ಯಪಂಥಗಳೆರಡರಲ್ಲೂ ಮನೆ, ಮಡದಿ, ಮಕ್ಕಳು, ಸಂಸಾರ ಹೀಗೆ ಲೌಕಿಕ ಬಂಧನದ ವ್ಯವಸ್ಥೆಯೊಂದು ಸರ್ವಸಮಾನ ವಿಚಾರವಾಗಿ ಅಭಿವ್ಯಕ್ತಿಗೊಳ್ಳುತ್ತದೆ. ಆದರೂ ಎರಡು ಪಂಥಗಳ ಅನುಯಾಯಿಗಳು ವಿರಾಗಿಗಳಾಗಿದ್ದು ವೈರಾಗ್ಯವನ್ನೇ ಪ್ರಚಾರ ಮಾಡುತ್ತಾರೆ. ಈ ಮಧ್ಯೆ ದಾಸಪಂಥದ ಸಾಹಿತ್ಯರಚನೆಯಲ್ಲಿ ಮಹಿಳಾಶಖೆಯೊಂದನ್ನು ನಾವು ಮುಖ್ಯವಾಗಿ ಕಾಣುತ್ತೇವೆ. ಆದರೆ ಚೈತನ್ಯಪಂಥದ ಸಾಹಿತ್ಯರಚನೆಯಲ್ಲಿ ಸ್ತ್ರೀಯರು ಪಾಲ್ಗೊಂಡಿರುವುದು ಒಂದಿಷ್ಟು ಕಡಿಮೆಯೆಂದೇ ಹೇಳಬೇಕು. ಆದರೂ ಚೈತನ್ಯಪಂಥದ ಮುನ್ನಡೆಯಲ್ಲಿ, ಅಲ್ಲಿಯ ಅನುಯಾಯಿಗಳ ಆಧ್ಯಾತ್ಮಿಕ ಸೇವೆಯಲ್ಲಿ ಸ್ತ್ರೀಯರ ಪಾತ್ರವು ಮುಖ್ಯವಾಗುವುದಂತೂ ಸತ್ಯ. ಆ ವಿಚಾರದಲ್ಲಿ ಚೈತನ್ಯರ ತಾಯಿಯಾದ ಶ್ರೀಮತಿ ಶಚೀದೇವಿಗೆ ಪ್ರಥಮಸ್ಥಾನ ಸಲ್ಲಬೇಕು.

ದಾಸಪಂಥದಲ್ಲಿ ಬರುವ ಸ್ತ್ರೀ ವರ್ಗವು ಸಾಹಿತ್ಯ ನಿರ್ಮಾಣಕ್ಕಾಗಿಯೇ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟರೆ, ಚೈತನ್ಯಪಂಥದ ಸ್ತ್ರೀಯರು ತಮ್ಮ ಗಂಡಂದಿರಿಗೆ ಅಥವಾ ಇತರ ಪೂಜ್ಯರ ಆಧ್ಯಾತ್ಮಿಕ ಜೀವನಕ್ಕೆ ಬೆಂಬಲವನ್ನು ಸೂಚಿಸಿ, ಅದಕ್ಕೆ ಪೂರಕವಾಗಿ ಸಹಕರಿಸುತ್ತಾರೆ. ಇದಕ್ಕೆ ಚೈತನ್ಯಪಂಥದ ಅನುಭಾವಿಗಳಾದ ಶ್ರೀವಾಸಠಾಕೂರರ ಪತ್ನಿಯಾದ ಮಾಲಿನಿ ಹಾಗೂ ಶಿವಾನಂದಸೇನರ ಪತ್ನಿಯ ಪಾತ್ರವು ಪ್ರಮುಖವಾಗುತ್ತದೆ. ಅಲ್ಲದೆ, ಗೌಡೀಯಪಂಥದ ಮುಖ್ಯ ಅನುಭಾವಿಗಳಲ್ಲೊಬ್ಬರಾದ ರಾಘವಪಂಡಿತರ ಸಹೋದರಿಯಾದ ದಮಯಂತಿಯು, ಜಗನ್ನಾಥಪುರಿಯಲ್ಲಿರುವ ಶ್ರೀಚೈತನ್ಯ ಮಹಾಪ್ರಭುಗಳಿಗೆ ನಾನಾ ರೀತಿಯ ತಿನಿಸುಗಳನ್ನು ಅರ್ಪಿಸಬೇಕೆಂದು ಮನಸ್ಸುಮಾಡಿ, ಆ ಬಯಕೆಯನ್ನು ಆಕೆಯು ನೆರವೇರಿಸಿಕೊಳ್ಳುತ್ತಾಳೆ. ಆಕೆ ಮಹಾಪ್ರಭುಗಳಿಗೆ

ಸಿದ್ಧಗೊಳಿಸಿದ ತಿನಿಸುಗಳನ್ನು ಚೀಲದೊಳಗೆ ಹಾಕಿದಾಗ ಆ ಚೀಲವು 'ರಾಘವೇರ ಝಾಲಿ' ಎಂಬ ಹೆಸರನ್ನು ಪಡೆಯುತ್ತದೆ. ಅಂತೆಯೇ ಮಿಠಾಯಿಗಾರ ಪರಮೇಶ್ವರನ ಪತ್ನಿ ಹಾಗೂ ಮುಕುಂದನ ತಾಯಿಯು ಕೂಡ ಇಲ್ಲಿ ಚೈತನ್ಯ ಮಹಾಪ್ರಭುಗಳಿಗೆ ಶರಣಾಗಿ ತನ್ನ ಬದುಕಲ್ಲಿ ಸಾರ್ಥಕತೆಯನ್ನು ಕಾಣುತ್ತಾಳೆ.

ಎರಡು ಪಂಥಗಳ ಕುಟುಂಬಗಳಲ್ಲಿ ಕಂಡುಬರುವ ಹೆಣ್ಣೊಬ್ಬಳು ಅಮ್ಮನಾಗಿ, ಮಗಳಾಗಿ, ಸೊಸೆಯಾಗಿ, ಅಜ್ಜಿಯಾಗಿ, ಅಕ್ಕತಂಗಿಯಾಗಿ ಶ್ರೇಷ್ಠತೆಯನ್ನು ಪಡೆದುಕೊಳ್ಳುತ್ತಾಳೆ. ಎರಡು ಪಂಥಗಳು ಜನ್ಮತಾಳುವುದರ ಮೊದಲು, ಅಲ್ಲಿಯ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀಯರ ಸ್ಥಾನಮಾನವು ತೀರಾ ನಿರ್ಲಕ್ಷ್ಯಕ್ಕೊಳಗಾಗಿರಬೇಕು. ಆ ಕಾರಣದಿಂದಲೇ ಕರ್ನಾಟಕ ಮತ್ತು ಬಂಗಾಲದ ಉಭಯ ಪಂಥಗಳು ಸ್ತ್ರೀಯರಿಗೆ ಸಾಮಾಜಿಕವಾದ ಗೌರವವನ್ನು ಕಲ್ಪಿಸಿಕೊಟ್ಟು ಮಹಿಳಾಪರವಾದ ಕಾಳಜಿಯನ್ನು ತೋರಿದವು. ಗುರೂಪದೇಶ, ಮಂತ್ರದೀಕ್ಷೆಯನ್ನಿತ್ತು, ಅಧ್ಯಾತ್ಮಿಕವಾಗಿ ಆಕೆಯನ್ನು ಗುರುತಿಸಿಕೊಳ್ಳುವಂತೆ ಮಾಡಿತು. ಈ ನೆಲೆಯಲ್ಲಿ ಕರ್ನಾಟಕದ ದಾಸಕುಲವು ಸಮಾಜದ ಹೆಣ್ಣಿನ ಒಳ್ಳೆಯ ಗುಣಗಳನ್ನು ಮೆಚ್ಚಿಕೊಂಡು ಕೆಟ್ಟಗುಣಗಳನ್ನು ದೂರಿತು. ಅಲ್ಲದೆ ಸಾಮಾಜಿಕವಾಗಿ ಆಕೆಯು ಹೇಗೆ ಪೂಜ್ಯಳಾಗಬೇಕೆಂದು ತಮ್ಮ ಸಾಹಿತ್ಯದ ಮೂಲಕ ತಿಳಿಹೇಳಿ ಎಚ್ಚರಿಸಿತು.

ಅರಿಷಿಣ ಕುಂಕುಮ ಪುಷ್ಪಾಂಜನ ವಸ್ತ್ರಾ
ಭರಣ ಭೂಷಿತರಾಗಿ ಪತಿಯೊಡನೆ
ಸರಸವಾಡುತ ಸುಖ ಹರಿಗೆ ಅರ್ಪಿತವೆಂಬ
ಹರಿದ್ದೇರಿದೆಡೆಗೆ ಕೈಮುಗಿದು ಬನ್ನಿರಿ ಎಂದು ॥ –ಜಗನ್ನಾಥದಾಸರು.

ಇಲ್ಲಿ ಜಗನ್ನಾಥದಾಸರು ಸ್ತ್ರೀ ಲಕ್ಷಣವನ್ನು ಅವರು ತೋರಿಸಿಕೊಡಲು ಮುಂದಾಗುತ್ತಾರೆ. ಅಲ್ಲದೆ ಸಂಸ್ಕಾರವನ್ನು ಉಪೇಕ್ಷಿಸಿದವಳಿಗೆ ಶಿಕ್ಷಾವಿಧಾನವನ್ನೂ ಅವರೇ ಹೇಳುತ್ತಾರೆ. ಪ್ರಾಣೇಶದಾಸರಂತೂ 'ಪ್ರತಿ ದಾನಧರ್ಮಕ್ಕೆ ಪ್ರತಿಕೂಲವಾಗದ ಸತಿಸುತರಿದ್ದರೆ ಅದೇ ಭವನ'ವೆಂದು ಹೇಳಿ, ಆಕೆಯ ಕರ್ತವ್ಯಗಳನ್ನು ಮನವರಿಕೆ ಮಾಡಿಕೊಡುತ್ತಾರೆ. ಕುಟುಂಬದ ಶಾಂತತೆಯ ನೆಲೆಯಲ್ಲಿ ಹೆಣ್ಣಿನ ಸಹನೆಯೇ ಮುಖ್ಯವಾಗಿರುವಂತಹುದೆಂದು ಕನಕದಾಸರು ಕೂಡ ಸ್ಪಷ್ಟನೆ ನೀಡುತ್ತಾರೆ.

ಚೈತನ್ಯ ಮಹಾಪ್ರಭುಗಳೇ ಹೇಳಿಕೊಳ್ಳುವಂತೆ, ಅವರಿಗೆ ಆತ್ಮೀಯ ಭಕ್ತರೆಂದರೆ ಮೂರೂವರೆ ಮಂದಿಯಂತೆ. ಅವರಲ್ಲಿ, ಮೊದಲಿಗರು, ಸ್ವರೂಪ ದಾಮೋದರ ಗೋಸ್ವಾಮಿಯವರು. ಎರಡನೆಯವರು, ರಾಮಾನಂದ ರಾಯರು. ಮೂರನೆಯವರು, ಶಿಖಿ ಮಾಹಿತಿ ಹಾಗೂ ಉಳಿದ ಅರ್ಧ ಭಕ್ತರೆಂದರೆ ಮಾಧವೀದೇವಿಯರೆಂಬ ಮಹಿಳಾಭಕ್ತರು.

ಮಾಹಿತಿರ ಭಗಿನೀ ಸೇಇ ನಾಮ ಮಾಧವೀ ದೇವೀ ।
ವೃದ್ಧಾತಪಸ್ವಿನೀ ಆರ ಪರಮಾ ವೈಷ್ಣವೀ ॥[೩]

ಇಲ್ಲಿ ಬರುವ ಶಿಖಿ ಮಾಹಿತಿ ಮತ್ತು ಮಾಧವೀದೇವಿಯರೇ ಪರಮವೈಷ್ಣವೀ ಭಕ್ತರೆನಿಸಿಕೊಳ್ಳುತ್ತಾರೆ.

'ಸ್ತ್ರೀ' ಕುರಿತಾಗಿ ಉಳಿದ ದಾಸರಿಗಿಂತ ಭಿನಾವಾದ ವ್ಯಾಖ್ಯಾನ ಪುರಂದರದಾಸರದ್ದು. ತನ್ನ ಅಧ್ಯಾತ್ಮಿಕ ನೆಲೆಗೆ ತನ್ನ ಹೆಂಡತಿಯೇ ಕಾರಣಳೆಂದು ಭಾವಿಸಿ, ಇಂತಹ ' ಹೆಂಡತಿ ಸಂತತಿ ಸಾವಿರವಾಗಲಿ' ಎಂದು ಸಮಾಜಮುಖಕ್ಕೆ ಅರುಹುತ್ತಾರೆ. 'ಹೆಂಡತಿ ನೋಡಣ್ಣಾ ಈಕೆ ಹೆಂಡತಿ ನೋಡಣ್ಣಾ' ಎಂದು ಪತ್ನಿಯ ಕುರಿತಾಗಿ ತಿಳಿಸಿ 'ಮಂಡೆ ಮುಸುಕು ತೆಗೆದು ಹಿಂಡುಜನರ ಮುಂದೆ ಬಂಡುಮಾಡಿ ಎನ್ನ ಬೈಲಿಗೆ ತರುವಳು' ಎನ್ನುವಲ್ಲಿ ಸಮಾಜದ ಕೆಟ್ಟ ಹೆಂಡತಿಯೊಬ್ಬಳ ಚಿತ್ರಣವನ್ನಿಲ್ಲಿ ಕಟ್ಟಿಬಿಡುತ್ತಾರೆ. ಇಷ್ಟೇ ಅಲ್ಲದೆ, ಅತ್ತಿಗೆಯ ಕುರಿತಾಗಿ ಗೌರವವನ್ನು ಸೂಚಿಸುವುದರಲ್ಲಿ ದಾಸಸಾಹಿತ್ಯವು ಹಿಂದೇಟು ಹಾಕಲಿಲ್ಲ. ಆ ಸಂದರ್ಭವೊಂದನ್ನು ಗುರುರಾಮ ವಿಠಲದಾಸರು ತಮ್ಮ ಸಾಂಪ್ರದಾಯಿಕ ಕೀರ್ತನೆಯಲ್ಲಿ ಹೀಗೆ ಹೇಳುತ್ತಾರೆ.

ಅತ್ತಿಗೆ ಭೋಜನ ಮಾಡೆ ಸಾವಕಾಶದಿ ನೀನು
ಮತ್ತೆ ಮತ್ತೆ ಬೇಕಾದ್ದೆಲ್ಲ ತಂದು ಬಡಿಸುವೆನು ॥[೩೩]

ಎಂಬಲ್ಲಿ ಗೌರವದ ಜೊತೆಗೆ ಮಾನವೀಯ ಕಲ್ಪನೆಯೂ ಬೆರೆತಿದೆ. ಸ್ತ್ರೀ ಸಹಜವಾದ ಭಾವದಲ್ಲಿ ನೈಜತೆಯನ್ನು ತುಂಬಿದವರಲ್ಲಿ ಹೆಳವನಕಟ್ಟೆ ಗಿರಿಯಮ್ಮ ಮುಖ್ಯಳು. ಅಲ್ಲಿ ಹೆಣ್ಣಿನ ಆಸೆಆಕಾಂಕ್ಷೆಗಳನ್ನು, ನೋವುನಲಿವುಗಳನ್ನು ಚೆನ್ನಾಗಿಯೇ ಚಿತ್ರಿಸಲು ಆಕೆ ಮುಂದಾಗುತ್ತಾಳೆ. ಗಿರಿಯಮ್ಮ ರಚಿಸಿದ 'ಸೀತಾಕಲ್ಯಾಣ' ಹಾಗೂ 'ಲವಕುಶರ ಕಾಳಗ'ದಲ್ಲಿ ಸೀತೆಯ ಅಂತಃಕರಣದಲ್ಲಾಗುವ ನೂತನ ರಸಾನುಭಾವಗಳು ಆಕೆಯ ಪಾತ್ರಚಿತ್ರ ಪ್ರಬುದ್ಧತೆಗೆ ಸಾಕ್ಷಿ. ಇಷ್ಟೆ ಅಲ್ಲದೆ ವಿವಾಹ ವಿಚಾರ, ಸೀಮಂತ, ಪತಿಪ್ರೇಮ, ಪುತ್ರವಾತ್ಸಲ್ಯ ಹೀಗೆ ಹೆಣ್ಣಿನ ಜೀವನದ ಹಲವು ಘಟ್ಟಗಳನ್ನು ಪ್ರಬುದ್ಧವಾಗಿ ರಚಿಸುವಲ್ಲಿ ಆಕೆ ಯಶಸ್ಸನ್ನು ಕಾಣುತ್ತಾಳೆ.

ಸಂಪ್ರದಾಯದ ಹೊಸ್ತಿಲಲ್ಲೇ ಇದ್ದು ಸಾಮಾಜಿಕವಾಗಿ ಧಾರ್ಮಿಕಜಾಗೃತಿಯನ್ನು ಮೂಡಿಸಿದವರಲ್ಲಿ ಹಲವಾರು ಮಹಿಳಾದಾಸರಿದ್ದಾರೆ. ಅವರಲ್ಲಿ 'ಭೀಮೇಶ ಕೃಷ್ಣ' ಅಂಕಿತದ ಹರಪನಹಳ್ಳಿ ಭೀಮವ್ವ, 'ಹೇಳವನಕಟ್ಟೆ ರಂಗ' ಅಂಕಿತದ ಹೆಳವನಕಟ್ಟೆ ಗಿರಿಯಮ್ಮ, 'ಗೋಪಾಲಕೃಷ್ಣವಿಠಲ' ಅಂಕಿತದ ಅಂಬಾಬಾಯಿ 'ರಾಮೇಶ' ಅಂಕಿತದ ಗಲಗಲಿ ಅವ್ವ, 'ನರಸಿಂಹ ವಿಠಲ' ಅಂಕಿತದ ಓರವಾಯಿ ಲಕ್ಷೀದೇವಮ್ಮ, 'ನಾಗೇಶ ಶಯನ' ಅಂಕಿತದ ಪದ್ಮಾಬಾಯಿ ಕೋವಾರ, 'ವೆಂಕಟ ವಿಠಲ' ಅಂಕಿತದ ಶಾಂತಾಬಾಯಿ ಮಸ್ಕಿ, 'ರುಕ್ಮಿಣೀಕೃಷ್ಣ' ಅಂಕಿತದ ರುಕ್ಮಿಣೀಬಾಯಿ ರೊಟ್ಟಿ, 'ಗಿರಿವೆಂಕಟೇಶ' ಅಂಕಿತದ ಚಂದೂಬಾಯಿ, 'ಲಕುಮಿಪ್ರಿಯ' ಅಂಕಿತದ ಲಕ್ಷ್ಮೀಬಾಯಿ ಆಶ್ರಿತ, 'ಸಿರಿನಾರಾಯಣ' ಅಂಕಿತದ ಗೋದಾವರಿ ಈ ಮೊದಲಾದವರು ಮುಖ್ಯರು. ಇವರಲ್ಲಿ ಒಬ್ಬೊಬ್ಬರದು ಒಂದೊಂದು ಅನುಭವ. ಕೆಲವರಿಗೆ ಪುರಾಣಜ್ಞಾನವಿದ್ದರೆ, ಇನ್ನೂ ಕೆಲವರಿಗೆ ಅಕ್ಷರಜ್ಞಾನದ ಕೊರತೆ. ಆದರೂ ಭಾವುಕತೆಯನ್ನು ಭಾಷೆಗಳಲ್ಲಿ ಹೊಂದಿಸುವ ಶಕ್ತಿಮಾತ್ರ ವಿಶಿಷ್ಟವಾದುದು.

ಸಮಾಜವನ್ನು ತಿದ್ದುವಲ್ಲಿ ಸ್ತ್ರೀ ಸಾಮರ್ಥ್ಯವನ್ನು ತಿಳಿದುಕೊಂಡ ವಿದ್ಯಾಪ್ರಸನ್ನ ತೀರ್ಥರು, ಸ್ತ್ರೀಯರ ಕುರಿತಾಗಿ ಹೀಗೆ ಬರೆಯುತ್ತಾರೆ.

ನಾರಿಯಲಿ ಮಾದರಿಯೆಂದೆನಿಸಿರಮ್ಮ
ಮೂರು ಕುಲಕೆ ಕೀರುತಿಯನು ತನ್ನಿತಮ್ಮ
ಸೇರಿದ ಪತಿಮಂದಿರವನುದ್ಧರಿಸಿರಮ್ಮ
ಬೇರೆ ಜನಕೆ ಸೋದರಿಯೆಂದರಿಯಿರಮ್ಮ
ಅಬಲೆಯರಿರಬಹುದು ದೇಹ ಶಕುತಿಯಲಿ
ಪ್ರಬಲ ಸ್ಥಾನ ನಿಮಗಿಹುದು ಸಮಾಜದಲಿ ॥ -ವಿದ್ಯಾಪ್ರಸನ್ನ ತೀರ್ಥರು

ಶ್ರೀವಿದ್ಯಾಪ್ರಸನ್ನ ತೀರ್ಥರ ಈ ರಚನೆಯಲ್ಲಿ ಆದರ್ಶ ಸ್ತ್ರೀ ಕುರಿತಾದ ಕಲ್ಪನೆಯಿದೆ. ಆಕೆಯು ಮನೆಗೆ ಮಾರಿಯಾಗದೆ ಮಾದರಿಯಾಗಬೇಕೆನ್ನುವಲ್ಲಿ ಸಾಮಾಜಿಕ ಕಾಳಜಿಯಿದೆ. ದಾಸರು ಈ ರೀತಿಯ ಬುದ್ಧಿಬೋಧನೆಯ ಪ್ರಚೋದನೆಗೆ ಅಂದಿನ ಸಮಾಜದಲ್ಲಿದ್ದ ಸ್ತ್ರೀಯರ ಕುರಿತಾದ ಸಾಮಾಜಿಕ ವ್ಯವಸ್ಥೆಯೇ ಸಾಕ್ಷಿಯಾಗಿದ್ದಿರಬಹುದು. ಸಾಮಾಜಿಕವಾಗಿ ಕಿರುಹರೆಯದ ಹೆಣ್ಣೊಬ್ಬಳನ್ನು ಮುದಿವಯಸ್ಸಿನ ವರನಿಗೆ ಮದುವೆ ಮಾಡಿಕೊಡುವ ಸಂಪ್ರದಾಯವು ಆ ಕಾಲದಲ್ಲಿ ಆಚರಣೆಯಲ್ಲಿತ್ತೆಂದು ಕೀರ್ತನಾಸಾಹಿತ್ಯದಿಂದ ಅರಿವಾಗದಿರದು. 'ಮುಪ್ಪಿನ ಗಂಡನ ಒಲ್ಲೆನೆ, ತಪ್ಪದೆ ಪಡಿಪಾಟ ಪಡಲಾರೆನವ್ವ' ಎಂಬ ಪುರಂದರದಾಸರ ಕೀರ್ತನೆಯಲ್ಲಿ ಹೆಣ್ಣುಜೀವಿಗಳಿಬ್ಬರ ಸಂಭಾಷಣೆಯು ಸೂಕ್ಷ್ಮಪರಿಸ್ಥಿತಿಯನ್ನು ವಿವರಿಸುತ್ತದೆ. ಇಷ್ಟೇ ಅಲ್ಲದೆ, ಏಕಪತ್ನೀಪದ್ಧತಿಯನ್ನು ಪುರಸ್ಕರಿಸಿದ ದಾಸರು, ಪುರುಷನೋರ್ವ ಒಂದಕ್ಕಿಂತ ಹೆಚ್ಚು ಮದುವೆಯಾದರೆ ಆತನ ಸಂಸಾರದ ಗೊಂದಲವನ್ನು ಆತನ ಬಾಯಿಂದಲೇ ಬಯಲಿಗೆಳೆಯುತ್ತಾರೆ.

ಅವಳ ಮಗ್ಗುಲೊಳಿರಲು ಇವಳ ಮಗ್ಗಲ ಕಾಟ
ಇವಳ ಮಗ್ಗುಲೊಳಿರಲು ಅವಳಕಾಟ. ।
ಅವಳಿಂದ ಸುಖವಿಲ್ಲ ಇವಳಿಂದ ಫಲವಿಲ್ಲ
ಇವರಿಬ್ಬರ ಸಂಗ ಅಭಿಮಾನ ಭಂಗ ॥ - ಪುರಂದರದಾಸರು.

ಕುಲಸತಿಯಾದರೆ ಕೂಡಿರ ಬೇಕು । ಸುಲಭದಿಂದಲಿ ಸ್ವರ್ಗ ಸೂರಾಡ ಬೇಕು
ಕಲಹಗಂಟಿ ಸತಿ ಕರ್ಕಶೆಯಾದರೆ । ಹಲವು ಪರಿಯಿಂದ ಹೊರಗಾಗಬೇಕು ॥
– ಪುರಂದರದಾಸರು

ಹೀಗೆ ಹೆಂಡಿರ ಸಂಗದಿಂದ ಉಂಟಾಗುವ ಅಬಿಮಾನಭಂಗವನ್ನು ಮತ್ತು ಕಲಹಗಂಟಿ, ಕರ್ಕಶೆಯಾದ ಹೆಂಡತಿಯಿಂದ ದೂರವಾಗಿರಬೇಕಾದ ಚಿತ್ರವನ್ನು ದಾಸರಿಲ್ಲಿ ಪ್ರಸ್ತಾಪಿಸುತ್ತಾರೆ. ಅಲ್ಲದೆ, ಕನಕದಾಸರ 'ಹೇವವಿಲ್ಲದ ಹೆಣ್ಣು ಗಜುಗ ಬೆಳೆದ ಕಣ್ಣು', 'ಮಕ್ಕಳಿಲ್ಲದ ತಾಯಿ ಕೊಳೆತ ತೆಂಗಿನಕಾಯಿ' ಮೊದಲಾದ ಪ್ರಯೋಗಗಳು ಹೆಣ್ಣಿನ ದೌರ್ಬಲ್ಯ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಪ್ರತಿನಿಧಿಸುತ್ತವೆ. ಆದರೂ ಅಂದಿನ ಕಾಲದ ಹೆಣ್ಣಿನ ದೌರ್ಬಲ್ಯಗಳನ್ನು ದಾಸಕುಲವು ಕಲಿಯುಗದ ಮಹಿಮೆಯೆಂದೇ ಹೇಳಲು ಮುಂದಾಗಿ, 'ಅತ್ತೆಯೇ ಸೊಸೆಯಾಗಿ ಸೊಸೆಯು ಅತ್ತೆಯು ಆಗಿ', 'ಗಂಡನಿಗೆ ಹೆಂಡತಿಯೆ ಗಂಡಳು ಆಗಿ', 'ಅತ್ತೆಯ ಸೊಸೆ

ಬೈವಳು, ಪುತ್ರರು ತಮ್ಮ ಹೆತ್ತತಾಯಿಯ ಬಿಡುವರು' ಎಂಬಲ್ಲಿ ಸೂಕ್ತ ಉದಾಹರಣೆಯನ್ನೀಯುತ್ತದೆ. ಪಾತಿವ್ರತ್ಯಕ್ಕೆ ಹೆಚ್ಚಿನ ಮನ್ನಣೆಯನ್ನು ನೀಡಲುಹೊರಟ ದಾಸಪಂಥವು ಆ ಕಾಲದ ಸ್ಥಿತಿಗತಿಗಳನ್ನು ಗುರುತಿಸಿ 'ಪತಿವ್ರತೆಯರೆಂಬುವರು ಶತಸಹಸ್ರಕೊಬ್ಬರು' ಎಂದು ಹೇಳಿಬಿಡುತ್ತದೆ. ಅಲ್ಲದೆ, 'ಪತಿಯಲ್ಲದವನಿಗೆ ಸಂಪನ್ನತೆಯುಂಟೆ, ಪತಿಸೇವೆಯಲ್ಲದೆ ಸತಿಗೆ ಸೇವೆಯುಂಟೆ' ಎಂಬಲ್ಲಿ ಸಮಾಜದಲ್ಲಿ ಸತಿಪತಿಗಳ ಗುರುತರ ಜವಾಬ್ದಾರಿಯನ್ನು ಎಚ್ಚರಿಸುವ ಪ್ರಯತ್ನಕ್ಕೆ ಮುಂದಾಗುತ್ತದೆ.

ಒಲಿದವಳ ಬಿಡುವುದು ಧರ್ಮವಲ್ಲ
ಚೆಲುವ ನಿನಗಾಗಿ ನಾ ಯೇಸು ಕಾಲಕೆ ತಪವಿದ್ದೆ ॥
ಕನ್ಯಾವಸ್ಥೆಯಲಿಂದ ನಿನ್ನ ಧ್ಯಾನವಲ್ಲದೆ
ಅನ್ಯ ಪುರುಷರಪೇಕ್ಷೆಮಾಡಲಿಲ್ಲ ।
ಅನ್ಯಾಯವೇನು ಆಗಲಿ ಪೋಗುವರೇನೊ
ಅನ್ಯಥಾ ಈ ನುಡಿಗೆ ನಿಜಕೆ ನಿಲ್ಲುವೆ ನಾನು ॥ –ವಿಜಯದಾಸರು.

ಇಲ್ಲಿ ಮೈಲಿಗೆಯವಳೆಂಬ ಸಂದೇಹ ಬೇಡವೆನ್ನುವಲ್ಲಿ ದೈನ್ಯಕಲ್ಪನೆ ಮೂಡಿದೆ. ಒಟ್ಟಿನಲ್ಲಿ ಸಾಮಾಜಿಕ ಸ್ವಾಸ್ಥ್ಯದಲ್ಲಿ ಸ್ತ್ರೀ ಸ್ಥಾನಮಾನವು ಪ್ರಧಾನವಾದುದೆಂಬ ಕಲ್ಪನೆಯು ದಾಸಪಂಥದ್ದು. ಆದರೆ ಚೈತನ್ಯಪಂಥದಲ್ಲಿ ಸ್ತ್ರೀ ಕುರಿತಾದ ವಿವೇಚನೆಯಿದ್ದರೂ ಅದು ಸ್ತ್ರೀಯರ ಸಾಹಿತ್ಯ ನಿರ್ಮಾಣದಲ್ಲಿ ವ್ಯಕ್ತವಾಗುವುದಿಲ್ಲ. ಅಲ್ಲಿ ಬರುವ ಸ್ತ್ರೀಯರಲ್ಲಿ ಪುರಾಣ ಸ್ತ್ರೀಯರೂ ಸೇರಿಕೊಳ್ಳುತ್ತಾರೆ. ದ್ವಾಪರದ ಸತ್ಯಭಾಮೆಯು ಶ್ರೀಲ ರೂಪ ಗೋಸ್ವಾಮಿಯವರಿಗೆ ಸತ್ಯಭಾಮಾಪುರದಲ್ಲಿ ಕನಸಲ್ಲಿ ದಿವ್ಯಸೌಂದರ್ಯವತಿಯಾಗಿ ಬಂದು ತನ್ನ ಕುರಿತಾಗಿ ನಾಟಕ ರಚಿಸುವಂತೆ ಆದೇಶಿಸುತ್ತಾಳೆ.

ಸ್ವಪ್ನದೇಖೀ ರೂಪಗೋಸಾಯಿ ಕರಿಲಾ ವಿಚಾರ ।
ಸತ್ಯಭಾಮಾರ ಆಜ್ಞಾ ಪೃಥಕ್ ನಾಟಕ ಕರಿಬಾರ ॥[೩೪]

ಚೈತನ್ಯಪಂಥದ ಹರಿನಾಮಸಂಕೀರ್ತನೆಯಲ್ಲಿ ಲೌಕಿಕದ ಆಕರ್ಷಣೆಗೊಳಗಾದ ವೇಶ್ಯೆಯೊಬ್ಬಳ ಪಾತ್ರ ಮುಖ್ಯವಾಗುತ್ತದೆ. ಚೈತನ್ಯ ಚರಿತಾಮೃತವು ಹೇಳುವಂತೆ, ರಾಮಚಂದ್ರಖಾನನಿಂದ ದುರ್ಬೋಧನೆಗೊಳಗಾದ ವೇಶ್ಯೆಯೊಬ್ಬಳು ಹರಿದಾಸ ಠಾಕೂರರ ವ್ಯಕ್ತಿತ್ವವನ್ನು ಹಾಳುಗೆಡಹಲು ಬಂದು, ತಾನೇ ಹರಿದಾಸ ಠಾಕೂರರಿಂದ ಮುಖಭಂಗಿತಳಾಗಿ, ಹರಿಸಂಕೀರ್ತನೆಗೊಳಗಾಗುತ್ತಾಳೆ.[೩೫] ಹೀಗೊಬ್ಬಳು ಲೌಕಿಕದಿಂದ ಅಲೌಕಿಕವನ್ನು ಇಷ್ಟಪಟ್ಟು ಹರಿಸಂಕೀರ್ತನೆ ನಡೆಸಿದರೆ, ಇನ್ನೂ ಕೆಲವರು ಆಗಲೇ ಪರಮಾರ್ಥವನ್ನು ಕಾಣುವ ಹೆಬ್ಬಯಕೆಯಿಂದ ಸಂಕೀರ್ತಿಸುತ್ತಿರುತ್ತಾರೆ. ಅಂತಹವರಲ್ಲೊಬ್ಬಳು ಚೈತನ್ಯ ಮಹಾಪ್ರಭುಗಳು ಯಮೇಶ್ವರ ದೇವಸ್ಥಾನಕ್ಕೆ ಹೋಗುವ ದಾರಿ ಮಧ್ಯದಲ್ಲಿ 'ಗೀತಗೋವಿಂದ'ದ ಸಾಲುಗಳನ್ನು 'ಗುಜ್ಜರೀ' ಎಂಬ ರಾಗದೊಂದಿಗೆ ಹಾಡುವವಳು. ಚೈತನ್ಯಪಂಥದ ಬೆಳವಣಿಗೆಯಲ್ಲಿ ಇಂತಹ ಮಹಿಳಾಗಾಯಕಿಯರ ಪಾತ್ರವೂ ಮುಖ್ಯವೆನಿಸುತ್ತದೆ.

ದಾಸಸಾಹಿತ್ಯವು ಸ್ತ್ರೀಯರ ಗುಣಾವಗುಣಗಳ ಬಗ್ಗೆ ಪ್ರಸ್ತಾವಿಸುತ್ತಾದರೂ, ಅದು ಕೇವಲ ಸ್ತ್ರೀ ಕೋಪದ ಕುರಿತು ಹೆಚ್ಚಿನ ಗಮನಹರಿಸುವುದಿಲ್ಲ. ಆದರೆ ಆ ಕೆಲಸವನ್ನು ಚೈತನ್ಯಸಾಹಿತ್ಯವು ಮಾಡುತ್ತದೆ. ಅಲ್ಲಿಯ ಸಾಹಿತ್ಯವು ಅವರ ಕೋಪವನ್ನು 'ಈರ್ಷ್ಯಾ' ಎಂದು ಕರೆಯುತ್ತದೆ. ಅಲ್ಲದೆ ಅಲ್ಲಿಯ ಕೋಪಿಷ್ಟ ಸ್ತ್ರೀಯರಲ್ಲಿ ಮೂರು ವರ್ಗವನ್ನು ಅದು ತೋರಿಸಿಕೊಡುತ್ತದೆ. ಅವರಲ್ಲಿ, ೧. ಶಾಂತ ಸ್ತ್ರೀ, ೨. ಚಡಪಡಿಸುವ ಸ್ತ್ರೀ ಮತ್ತು ೩. ಶಾಂತರಾಗಿಯೂ ಮತ್ತು ಚಡಪಡಿಸುತ್ತಲೂ ಇರುವ ಸ್ತ್ರೀ. ಮೊದಲನೆಯವಳು ತನ್ನ ಗಂಡನು ಹೊರಗಿನಿಂದ ಬರುತ್ತಿರುವುದನ್ನು ನೋಡಿ, ಆತನನ್ನು ಬರಮಾಡಿಕೊಳ್ಳಲು ಎದ್ದು ನಿಲ್ಲುತ್ತಾಳೆ. ತನ್ನ ಕೋಪವನ್ನು ಹೃದಯದಲ್ಲಿಟ್ಟುಕೊಂಡು ಗಂಡನಿಗೆ ಆಸನವನ್ನು ನೀಡುತ್ತಾಳೆ. ಅಲ್ಲದೆ, ಆಕೆಯ ನಡವಳಿಕೆಯು ತುಂಬ ಸರಳವಾಗಿರುತ್ತದೆ. ಎರಡನೆಯವಳು, ತನ್ನ ಕಠೋರ ಮಾತುಗಳಿಂದ ಪ್ರಿಯಕರನನ್ನು ನಿಂದಿಸುತ್ತಾಳೆ. ಮೂರನೆಯವಳಲ್ಲಿ ಮೊದಲೆರಡರ ಗುಣವೂ ಇರುತ್ತದೆ. ಅಲ್ಲದೆ, ಕೊಂಕುಮಾತುಗಳಿಂದ ವ್ಯಂಗ್ಯವಾಡುತ್ತಾಳೆ. ಇನ್ನೂ ಕೆಲವೊಮ್ಮೆ ಹೊಗಳುತ್ತಾ, ನಿಂದಿಸುತ್ತಾ ಇರುವವಳಾಗುತ್ತಾಳೆ.

ಎರಡು ಪಂಥದ ಅಧ್ಯಯನದಲ್ಲಿ ಸ್ತ್ರೀಯರ ಪಾತ್ರವು ಆಧ್ಯಾತ್ಮಿಕ ವಿಚಾರಕ್ಕೆ ಸಂಬಂಧಿಸಿದಂತೆ ಊರಿಂದ ಊರಿಗೆ ಸಂಚಾರವಾಗುತ್ತಿತ್ತು. ಅಲ್ಲಿ ನುಡಿದ ಮಾತು ಮತ್ತು ನಡೆದ ಮಾರ್ಗಗಳು ಆ ಪಂಥಗಳ ಜನಜೀವನದ ಮೇಲೆ ಪರಿಣಾಮ ಬೀರುತ್ತಿದ್ದವು. ದಾಸಪಂಥದ ಅದೆಷ್ಟೋ ಸ್ತ್ರೀಯರು ಸ್ವತಃ ಸಾಹಿತ್ಯಸಾಧನೆಯಲ್ಲಿ ಮುಳುಗಿದ್ದರೆ, ಚೈತನ್ಯಪಂಥದ ಬಹಳಷ್ಟು ಸ್ತ್ರೀಯರು ತಮ್ಮ ಗಂಡಂದಿರ ಆಧ್ಯಾತ್ಮಿಕ ಜೀವನಕ್ಕೆ ನೆರವಾದವರು. ಇನ್ನಷ್ಟು ಸ್ತ್ರೀಯರು ಅನೈತಿಕವಾಗಿ ಅಲ್ಲಿಯ ಅನುಭಾವಿಗಳಲ್ಲಿ ಪ್ರಶ್ನಿಸಿ, ಅನುಭಾವಿಯ ವೈರಾಗ್ಯದ ಪ್ರಭಾವಕ್ಕೊಳಗಾಗಿ ತಾವೂ ಕೂಡ ಅನುಭಾವಿಗಳಾಗಿ ಚೈತನ್ಯಪಂಥವನ್ನು ಬೆಳೆಸುತ್ತಾರೆ.

ಇವಿಷ್ಟು ಉಭಯ ಪಂಥಗಳ ಸಾದೃಶ್ಯವಿಚಾರ. ಇಲ್ಲಿ ಹೋಲಿಕೆಗಾಗಿ ಹುಡುಕಾಟ ನಡೆಸಿದ್ದೇನೆ. ಆದರೆ ತತ್ವಾರ್ಥ ಚಿಂತನೆ ಇನ್ನಷ್ಟು ಗಾಢವಾದಾಗ ಉಭಯ ಪಂಥಗಳ ಅನುಭಾವದಲ್ಲಿ ಹೆಣ್ಣುಭಾವವೂ ಮುಖ್ಯವಾಗುತ್ತದೆ. ಇಲ್ಲಿ ಗಂಡು ಆತ್ಮವಿದ್ದರೂ ಅದು ವಿಶ್ವಾತ್ಮನೆನಿಸುವ ಪರಮಪುರುಷನನ್ನು ಸೇರುವ ಸುಖಕ್ಕೆ ಏರಬೇಕಾದರೆ ಅದು ಹೆಣ್ಣಾಗಲೇಬೇಕು. ಇಲ್ಲಿ ವ್ಯಕ್ತವಾಗುವ ದಾಸ್ಯ, ಸಖ್ಯ, ಮಧುರ, ವಾತ್ಸಲ್ಯ ಹಾಗೂ ಶಾಂತವೆಂಬೀ ಪಂಚಭಾವಗಳ ಭಕ್ತಿಯ ಪರಿವೇಷದಲ್ಲಿ ಹೆಣ್ಣೊಬ್ಬಳ ಆಂತರಂಗಿಕ ಭಾವಗಳೇ ಹೆಚ್ಚು ಸ್ಫುಟಗೊಳ್ಳುತ್ತದೆ.

೬.೯ : ಸಾಹಿತ್ಯದಲ್ಲಿ ಛಂದಸ್ಸು

ಛಂದಸ್ಸು ಎಂದರೆ ಪದ್ಯದ ಸ್ವರೂಪವನ್ನು ಅವಲಂಬಿಸಿರುವಂತಹುದು. ಪದ್ಯದಲ್ಲಿ ನಿಯಮಬದ್ಧವಾಗಿ ಅಡಕವಾಗಿರುವ ಲಘುಗುರುಗಳ ಸಂಯೋಜನೆಯ ಸೌಂದರ್ಯವನ್ನು ಛಂದಸ್ಸು ಎಂದು ಕರೆಯಬಹುದು. ಛಂದಸ್ಸೆಂಬುದು ದೇಹಕ್ಕೆ ಚರ್ಮವಿದ್ದಂತೆ.[೬೬] ಇದು ಕವಿಯ ಆಂತರಂಗಿಕವಾದ ಭಾವವು ಅಕ್ಷರಗಳ ಆಕಾರವನ್ನು

ಪಡೆದು ಲಾಸ್ಯವಾಡುವ ರೀತಿ ಎಂದೆನಿಸುತ್ತದೆ. ಇದನ್ನೇ ಕನ್ನಡ ಛಂದಸ್ಸಿನ ಚರಿತ್ರೆಯು ಕವಿಯ ಕವಿತಾವೇಶವು ತಾನಾಗಿಯೇ ಪಡೆಯುವ ನೈಸರ್ಗಿಕ ಮೂರ್ತಿಭಾವವೆಂದು ಕರೆಯಿತು.[೩೭]

ಇಲ್ಲಿ ಪರಸ್ಪರ ಪಂಥಗಳೆರಡರ ಸಾಹಿತ್ಯದಲ್ಲಿ ವ್ಯಕ್ತವಾಗುವ ಛಂದಸ್ಸಿನಲ್ಲಿ ಬಹಳಷ್ಟು ಭಿನ್ನಾಂಶವನ್ನು ಕಾಣಲುಸಾಧ್ಯ. ಇಲ್ಲಿಯ ದಾಸಕೀರ್ತನೆಗಳಲ್ಲಿ ವ್ಯಕ್ತವಾಗುವ ವಿಭಿನ್ನ ಛಂದೋವಿಚಾರಗಳು ಚೈತನ್ಯ ಸಾಹಿತ್ಯದಲ್ಲಿ ಇಲ್ಲವಾಗುತ್ತವೆ. ಹರಿದಾಸ ಸಾಹಿತ್ಯವು ಜನಮಾನಸದಲ್ಲಿ ಅಚ್ಚಳಿಯದೆ ನಿಲ್ಲಲು ಕೀರ್ತನಾಛಂದಸ್ಸಿನ ಭಿನ್ನರೂಪಗಳೇ ಮುಖ್ಯಕಾರಣವೆನ್ನಬಹುದು. ಈ ಕುರಿತು ದೀರ್ಘಶೋಧನೆಯನ್ನು ಮಾಡಿದ ಕೃತಿಯೆಂದರೆ ಎಚ್. ಎನ್. ಮುರಳೀಧರ ಅವರ 'ತಂಬೂರಿ ಮೀಟಿದವ' ಎನ್ನಬಹುದು. ಜೊತೆಗೆ 'ಯಕ್ಷಗಾನವೇ ದಾಸರ ಪದರಚನೆಗೆ ಮೂಲ ಪ್ರೇರಕ' ಎಂಬ ಟಿ. ಕೇಶವ ಭಟ್ಟರ ಮಾತನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದು.[೩೮]

ಅಲ್ಲದೆ, ಕೀರ್ತನೆಗಳಲ್ಲಿ ಪುನರುಕ್ತಿಗಳು ಮತ್ತು ಅನುಕರಣವಾಚಕಗಳು ಅತಿ ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುತ್ತವೆ. ಪುನರುಕ್ತಿಗಳು ಕೀರ್ತನೆಗಳಲ್ಲಿ ಮಂಡಿಸಲಾಗುತ್ತಿರುವ ವಿಚಾರಸರಣಿಗೆ ಶಾಬ್ದಿಕನೆಲೆಯ ಸಮರ್ಥನೆಯನ್ನು ನೀಡಲು ಸಹಕಾರಿಯಾಗುವುದಾದರೆ, ಅನುಕರಣವಾಚಕಗಳು ಅಭಿವ್ಯಕ್ತಿಯನ್ನು ನಾಟ್ಯೀಕರಿಸಲು ನೆರವಾಗುತ್ತವೆ ಎಂಬ ಎಚ್. ಎನ್. ಮುರಳೀಧರ ಅವರ ಮಾತಿನಲ್ಲಿ ನಿಜಾಂಶವಿದೆ.[೩೯] ಆದರೆ ಇಲ್ಲಿಯ ಕೀರ್ತನಾಸಾಹಿತ್ಯದಲ್ಲಿ ಪ್ರಾಥಮಿಕವಾಗಿ ಗಮನ ಸೆಳೆಯುವುದು ಸರಳ ಸುಂದರ ವಿಭಿನ್ನವಾದ ಪ್ರಾಸಗಳ ಬಳಕೆಯಲ್ಲಿ. ಅದು ಅಲ್ಲದೆ ಆ ಕಾಲದಲ್ಲಿದ್ದ ಹಲವು ಪ್ರಾಸಗಳು ವಾಸ್ತವದಲ್ಲಿ ಕಣ್ಮರೆಯಾಗಿರುವುದು ಇದರ ವಿಶ್ಲೇಷಣೆಯಿಂದ ಅರಿವಾಗದಿರದು.

'ಪ್ರಾಸ'ವೆಂಬ ಶಬ್ದವು ಮೂಲತಃ ಸಂಸ್ಕೃತದಿಂದ ಬಂದಿರುವಂತಹುದು. ಆದರೆ ಸಂಸ್ಕೃತದಲ್ಲಿ ಪ್ರಾಸವಿಲ್ಲ. ಇದು 'ಪ್ರ'ಎಂಬ ಉಪಸರ್ಗದಿಂದ ಕೂಡಿದ 'ಅಸ್' ಎಂಬ ಧಾತುವಿನ ಭಾವ ಕೃದಂತ ರೂಪವೇ ಪ್ರಾಸವಾಗಿ ಪರಿಣಮಿಸಿದೆ. ದಾಸಕೀರ್ತನೆಗಳಲ್ಲಂತೂ ಸದೃಶ ವ್ಯಂಜನಗಳ ಪುನರಾವೃತ್ತಿಗಳೆಲ್ಲ ಪ್ರಾಸವಾಗಿ ಮೂಡಿದೆ. ಆದರೆ ಇಲ್ಲಿಯ ರಚನಾ ವಿನ್ಯಾಸಗಳು ಚೈತನ್ಯ ಪಂಥದ ರಚನೆಗಳಲ್ಲಿ ಕಾಣಲು ಸಾಧ್ಯವಿಲ್ಲ.

ಕನ್ನಡದಲ್ಲಿ ಪ್ರಾಸದ ಪ್ರಾಧಾನ್ಯತೆಯನ್ನು ತಿಳಿಸುವ ಗ್ರಂಥಗಳೆಂದರೆ ಕವಿರಾಜ ಮಾರ್ಗ, ಕವಿ ಜಿಹ್ವಾಬಂಧನ, ನಾಗವರ್ಮನ ಛಂದೋಂಬುಧಿ. ಪ್ರಾಸರೂಪವನ್ನು ಮಾನಸೋಲ್ಲಾಸದ ಕವಿಯು 'ಪ್ರಾಣಾಕ್ಷರ'ವೆಂದೇ ಕರೆದಿದ್ದಾನೆ.[೪೦] ಜಯಕೀರ್ತಿಯು ಪದ್ಯಪಾದದ ದ್ವಿತೀಯ ವ್ಯಂಜನದ ಆವರ್ತನ ಕ್ರಮವನ್ನೇ ಪ್ರಾಸವೆಂದು ಕರೆದನು. ಆದರೆ ಈ ಎಲ್ಲಾ ಲಾಕ್ಷಣಿಕರ ಛಂದೋನಿಯಮಗಳನ್ನು ದಾಸರುಗಳೆಲ್ಲಾ ಸ್ವೀಕರಿಸಿದರು. ಗುರು ಮಧ್ವಪತಿವಿಠಲರು ತಮ್ಮ 'ತಾಳಬೇಕು ತಕ್ಕ ಮೇಳಬೇಕು' ಎಂಬ ಕೀರ್ತನೆಯಲ್ಲಿ–'ಯತಿ ಪ್ರಾಸವಿರಬೇಕು, ಗತಿಗೆ ನಿಲ್ಲಿಸಬೇಕು, ರತಿಪತಿ ಪಿತನೊಳು ಅತಿ ಪ್ರೇಮವಿರಬೇಕು' ಎಂದು ಹೇಳಿಕೊಂಡಿರುವಲ್ಲಿ ಕಾವ್ಯರಾಶಿಯ ಮೇಲೆ ಯತಿಪ್ರಾಸದ ಪ್ರಾಮುಖ್ಯತೆಯನ್ನು ತಿಳಿ ಹೇಳಿದ್ದಾರೆ. ಆದರೆ ಈ ರೀತಿಯ ಛಂದಸ್ಸಿನ ಕುರಿತಾದ

ಕಾವ್ಯಸೌಂದರ್ಯವನ್ನು ಚೈತನ್ಯಪಂಥವು ತನ್ನ ರಚನೆಯಲ್ಲಿ ವಿಶೇಷವಾಗಿ ಪ್ರತಿಪಾದಿಸಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಕವಿಜಿಹ್ವಾಬಂಧನದಲ್ಲಿ ಹೇಳಲಾದ ಸಿಂಹ, ಗಜ, ವೃಷಭ, ಹಯ, ಶರಭ ಮತ್ತು ಅಜ ಪ್ರಾಸಗಳೆಂಬ ಆರು ಪ್ರಾಸಗಳನ್ನು ದಾಸಶ್ರೇಷ್ಠರು ತಮ್ಮ ರಚನೆಯಲ್ಲಿ ಕಂಡು ಕೊಂಡಿದ್ದಾರೆ. ಅಲ್ಲದೆ, ಕವಿರಾಜಮಾರ್ಗದಲ್ಲಿ ಹೇಳಲಾದ ವಿನುತ, ಶಾಂತ, ವರ್ಗ, ಸಮೀಪ, ಅನುಪ್ರಾಸ ಹಾಗೂ ಅಂತ್ಯಪ್ರಾಸಗಳಿಗೂ ದಾಸಕೀರ್ತನೆಯಲ್ಲಿ ಅವಕಾಶ ಕಲ್ಪಿತವಾಗಿದೆ. ಅಂತ್ಯಪ್ರಾಸದಲ್ಲಿ ದೊರೆಯುವ ಸರ್ವಪಾದಾಂತ್ಯ, ಉಭಯ ಪಾದಾಂತ್ಯ, ಪರ್ಯಾಯ ಪಾದಾಂತ್ಯ, ಸಮ ಪಾದಾಂತ್ಯ, ವಿಷಮ ಪಾದಾಂತ್ಯಗಳೆಂಬ ಪ್ರಾಸಗಳಲ್ಲೂ ಹರಿದಾಸರುಗಳು ಪರಿಶ್ರಮ ಪಟ್ಟಿರುವುದು ಹೆಚ್ಚಿನ ವಿಚಾರ. ಇಷ್ಟೇ ಅಲ್ಲದೆ, ಆದಿ–ಮಧ್ಯ–ಅಂತ್ಯಪ್ರಾಸ, ಆದಿ–ಅಂತ್ಯಪ್ರಾಸ, ಆದಿ–ಮಧ್ಯಪ್ರಾಸ, ವಿಶಿಷ್ಟ ಅಂತ್ಯಪ್ರಾಸ, ದ್ವ್ಯಕ್ಷರಾದಿಪ್ರಾಸ, ದ್ವ್ಯಕ್ಷರಾಂತಪ್ರಾಸ, ತ್ರ್ಯಕ್ಷರಾಂತಪ್ರಾಸ, ಒಳಪ್ರಾಸ ಹಾಗೂ ಅಂತರ್ ಅಂತ್ಯಪ್ರಾಸಗಳಲ್ಲೂ ಕೀರ್ತನಾ ಸಾಹಿತ್ಯ ವಿಜೃಂಭಿಸಿದೆ. ಆದರೆ ಇದು ಚೈತನ್ಯಪಂಥದ ರಚನೆಗಳಿಗಿಂತ ಭಿನ್ನವೆಂದೇ ಹೇಳಬೇಕು. ಅಲ್ಲಿರುವುದು ಬಂಗಾಳಿ ಭಾಷೆಯ ದ್ವಿಪದಿ ಮಾದರಿಯ ರಚನೆಗಳು. ಉದಾಹರಣೆಗಾಗಿ,

ಚೈತನ್ಯಪಂಥದ ಸಾಹಿತ್ಯದಲ್ಲಿ ಅಂತ್ಯಪ್ರಾಸ :–

ತಬೇ ಪ್ರಭು ವ್ರಜೇ ಪಾಠಇಲ ರೂಪ ಸನಾತನ ।
ಪ್ರಭು ಆಜ್ಞಾಯ ದುಇ ಭಾಇ ಆಇಲಾ ವೃಂದಾವನ ॥
ಜಗನ್ನಾಥೇ ಆನಿ ದಿಲ ಮಾಣಿಕ್ಯ ಸಿಂಹಾಸನ ।
ಕಟಕೇ ಗೋಪಾಲ–ಸೇವಾ ಕರಿಲ ಸ್ಥಾಪನ ॥

ಚೈತನ್ಯಪಂಥದ ಸಾಹಿತ್ಯದಲ್ಲಿ ಆದಿಪ್ರಾಸ :–

ಯಾಚಿತ ವೃತ್ತಿ ಪುರಿ ವಿರಕ್ತ ಉದಾಸ । ಅ
ಯಾಚಿತ ಪಾ ಇಲೇ ಖಾ'ನ, ನಹೇ ಉಪವಾಸ ॥
ಸೇಇ ಭಯೋ ರಾತ್ರಿ ಶೇಷೇ ಚಲಿಲಾ ಶ್ರೀ ಪುರಿ ।
ಸೇಇ ಖಾನೇ ಗೋಪೀನಾಥೇ ದಣ್ಡವತ್ ಕರಿ ॥[೪೧]

ಇಲ್ಲಿ ಕಾಣುವುದು ದ್ವಿಪದಿಗಳೊಂದಿಗಿರುವ ಆದಿ ಮತ್ತು ಅಂತ್ಯಪ್ರಾಸದ ಸೊಗಸು. ಒಂದು ಪಾದದಿಂದ ಇನ್ನೊಂದು ಪಾದಕ್ಕೆ ಮಾತ್ರೆಗಳ ಅಥವಾ ಅಂಶಗಣಗಳ ಸಮಾನತೆಯಲ್ಲಿ ಕೊರತೆಯಿದೆ. ಮೇಲ್ನೋಟಕ್ಕೆ ಶ್ಲೋಕ ಛಂದಸ್ಸಿಗೆ ಮಾದರಿಯಂತಿದ್ದರೂ ಅದರಲ್ಲೂ ಭೇದವಿದೆ. ದಾಸಸಾಹಿತ್ಯದಲ್ಲಿ ಆದಿಪ್ರಾಸವು ನಿಯತವಾಗಿಯೇ ಪಾಲಿಸಲ್ಪಟ್ಟಿದೆ. ಆದರೆ ಉಗಾಭೋಗಗಳು ಮತ್ತು ಸುಳಾದಿಗಳಲ್ಲಿ ಪ್ರಾಸ ಸ್ಥಾನವು ಪೂರ್ಣವಾಗಿ ಪ್ರತಿಪಾದಿತವಾಗಿಲ್ಲ.

ಕವಿಜಿಹ್ವಾಬಂಧನದ ಆಧಾರದಲ್ಲಿ,

ಸಿಂಹಪ್ರಾಸ : ಪೂರ್ವ ಸ್ವರ ಹ್ರಸ್ವವಾಗಿದ್ದು ಒಂದೇ ರೀತಿಯ ವ್ಯಂಜನವಿದ್ದರೆ ಅದು ಸಿಂಹ ಪ್ರಾಸವೆನಿಸುವುದು.

ಅಕಟಕಟ ಸಂಸಾರವನು ನೆಚ್ಚಿ ಕೆಡಬ್ಯಾಡ ।
ವಿಕಟದಲಿ ಮಾನವರು ಕೆಟ್ಟುದೆಲ್ಲರು ನಿಜ ॥ –ಶ್ರೀಪಾದರಾಯರು

ಗಜವದನ ಬೇಡುವೆ ಗೌರೀ ತನಯ ।
ತ್ರಿಜಗವಂದಿತನೆ ಸುಜನರ ಪೊರೆವನೆ ॥ –ಪುರಂದರದಾಸರು

ಗಜಪ್ರಾಸ : ಹಿಂದಿನ ಸ್ವರ ದೀರ್ಘವಾಗಿದ್ದರೆ ಅದು ಗಜ ಪ್ರಾಸವೆನಿಸುತ್ತದೆ.

ಕೇಳನೋ ಹರಿ ತಾಳನೋ ।
ತಾಳ ಮೇಳಗಳಿದ್ದು ಪ್ರೇಮವಿಲ್ಲದ ಪೂಜೆ ॥ –ಪುರಂದರದಾಸರು

ಹಯಪ್ರಾಸ : ಸಜಾತೀಯ ಸಂಯುಕ್ತಾಕ್ಷರವಿದ್ದರೆ ಅದು ಹಯ ಪ್ರಾಸವೆನಿಸುತ್ತದೆ.

ಕಲ್ಲು ಸಕ್ಕರೆ ಕೊಳ್ಳಿರೊ । ನೀವೆಲ್ಲರೂ । ಕಲ್ಲು ಸಕ್ಕರೆ ಕೊಳ್ಳಿರೊ ॥
ಕಲ್ಲು ಸಕ್ಕರೆ ಸವಿ ಬಲ್ಲವರೆ ಬಲ್ಲರು
ಫುಲ್ಲಲೋಚನ ನಮ್ಮ ಶ್ರೀ ಕೃಷ್ಣ ನಾಮವೆಂಬ ॥ –ಪುರಂದರದಾಸರು

ಅಮ್ಮ ಬಾರೆ ನಮ್ಮಮ್ಮನೆ ನೀನಮ್ಮ । ಅಮ್ಮ ಬಾರೆ ನಮ್ಮಮ್ಮನೆ ॥
....
ಒಮ್ಮೆ ದಯವೆಂಬ ಅಮ್ಮನುಣಿಸಮ್ಮಾ । ನಮ್ಮ ಕರುಣದಾ ಅಮ್ಮನುಣಿಸಮ್ಮಾ ।
ಒಮ್ಮೊಮ್ಮುಣಿಸು ನಮ್ಮಮ್ಮ ನೀನಮ್ಮಾ । ರಮ್ಮಿಸಿ ಮಹಿಪತಿ ಬಾಲಕಗ ನಿಮ್ಮಾ ॥
–ಕಾಖಂಡಕಿ ಮಹೀಪತಿ ರಾಯರು

ಶರಭಪ್ರಾಸ : ವಿಜಾತೀಯ ಸಂಯುಕ್ತಾಕ್ಷರವಿದ್ದರೆ ಅದು ಶರಭ ಪ್ರಾಸವೆನಿಸುತ್ತದೆ.

ದೃಷ್ಟಿ ತಾಕೀತೋ ಬೀದಿ ಮೆಟ್ಟ ಬ್ಯಾಡವೋ
ಸೃಷ್ಟಿಯ ನಾರಿಯರೆಲ್ಲ ಕಣ್ಣಿಟ್ಟು ಹೀರುವರೋ ನಿನ್ನ ॥ –ಶ್ರೀಪಾದರಾಜರು
ಅಜ್ಞಾನಿಗಳ ಕೂಡೆ ಅಧಿಕ ಸ್ನೇಹಕ್ಕಿಂತ
ಸುಜ್ಞಾನಿಗಳ ಕೂಡೆ ಜಗಳವೇ ಲೇಸು ॥ –ಪುರಂದರದಾಸರು

ವೃಷಭಪ್ರಾಸ : ವ್ಯಂಜನದ ಹಿಂದೆ ಅನುಸ್ವಾರ ಇದ್ದರೆ ಅದು ವೃಷಬ ಪ್ರಾಸವೆನಿಸುತ್ತದೆ.

ಬಂದದ್ದೆಲ್ಲ ಬರಲಿ ಗೋ । ವಿಂದನ ದಯ ನಮಗಿರಲಿ ॥
ಇಂದಿರೆ ರಮಣನ ಧ್ಯಾನವ ಮಾಡಲು । ಬಂದ ದುರಿತ ಬಯಲಾದುದಿಲ್ಲವೆ ॥
–ಪುರಂದರದಾಸರು

ಅಜಪ್ರಾಸ : ವ್ಯಂಜನದ ಹಿಂದೆ ವಿಸರ್ಗ ಬಂದರೆ ಅದನ್ನು ಅಜ ಪ್ರಾಸವೆಂದು ಕರೆಯುವುದು ರೂಢಿ. ಆದರೆ ಅಜ ಪ್ರಾಸದ ರಚನೆಗಳು ದಾಸಕೀರ್ತನೆಗಳಲ್ಲಿ ಲಭ್ಯವಿಲ್ಲ.

ಕವಿರಾಜಮಾರ್ಗದ ಆಧಾರದಲ್ಲಿ,

ವಿನುತಪ್ರಾಸ : ನಿರ್ದಿಷ್ಟ ಸ್ವರದಿಂದ ಕೂಡಿದ ವರ್ಣವು ವಿನುತ ಪ್ರಾಸವೆಂದೆನಿಸುವುದು.

ಕೇಳಿದ್ಯಾ ಕೌತುಕವನ್ನು ಕೇಳಿದ್ಯಾ........
ಕೇಳಿದ್ಯಾ ಕೌತುಕವನ್ನು ನಾ
ಕೇಳಿದೆ ನಿನಗಿಂತ ಮುನ್ನ ಆಹಾ
ಚಾಳಿಕಾರ ಕೃಷ್ಣ ಪೇಳದೆ ಮಥುರೆಗೆ
ಕೋಳಿ ಕೂಗದ ಮುನ್ನ ನಾಳೆ ಪಯಣವಂತೆ ॥ –ಶ್ರೀಪಾದರಾಜರು
ಓಲಗ ಸುಲಭವೋ ರಂಗಯ್ಯನ ಓಲಗ ಸುಲಭವೋ ।
ಓಲಗ ಸುಲಭವೊ ಪುಸಿಯಲ್ಲ ಕರುಣಾಲ
ವಾಲನಾದ ಕರಿರಾಜ ವರದನ ॥ –ವ್ಯಾಸರಾಯರು

ಶಾಂತಪ್ರಾಸ : ಭಿನ್ನ ಸ್ವರದಿಂದ ಕೂಡಿದ ದ್ವಿತ್ವ ಸವರ್ಣವು ಶಾಂತ ಪ್ರಾಸವೆಂದೆನಿಸುವುದು.

ಎಲ್ಲಾನು ಬಲ್ಲೆನೆಂಬುವಿರಲ್ಲ ಅವಗುಣ ಬಿಡಲಿಲ್ಲ ।
ಸೊಲ್ಲಿಗೆ ಶರಣರ ಕಥೆಗಳ ಪೇಳುತ
ಅಲ್ಲದ ನುಡಿಯಿನು ನುಡಿಯುವಿರಲ್ಲ ॥ –ಪುರಂದರದಾಸರು
ನಮ್ಮಮ್ಮ ಶಾರದೆ ಉಮಾಮಹೇಶ್ವರಿ ನಿಮ್ಮೊಳಗಿಹನ್ಯಾರಮ್ಮ ॥
ಕಮ್ಮ ಗೋಲನ ವೈರಿ ಸುತನಾದ ಸೊಂಡಿಲ
ಹೆಮ್ಮೆಯ ಗಣನಾಥನೆ ॥ –ಕನಕದಾಸರು

ವರ್ಗಪ್ರಾಸ : ವರ್ಗಾಕ್ಷರಗಳು ಪ್ರಾಸ ಸ್ಥಾನದಲ್ಲಿ ಬರುವ ಕ್ರಮಕ್ಕೆ ವರ್ಗ ಪ್ರಾಸವೆಂದು ಹೆಸರು.

ಸಕಲ ಗ್ರಹ ಬಲ ನೀನೆ ಸರಸಿಜಾಕ್ಷ ।
ನಿಖಿಲ ರಕ್ಷಕ ನೀನೆ ವಿಶ್ವ ವ್ಯಾಪಕನೆ ॥ –ಪುರಂದರದಾಸರು
ಯಾತರನೆಂದುಸುರಲಿ ಜಗ ।
ನ್ನಾಥ ಮಾಡಿದ ಒಂದು ನರ ರೂಪವಯ್ಯಾ ॥ – ಕನಕದಾಸರು

ಸಮೀಪಪ್ರಾಸ : ಪ್ರಾಸಾಕ್ಷರವು ಶ, ಷ, ಸ, ಲ, ಳ ವಾಗಿ ಉಪಯೋಗವಾದರೆ ಅದು ಸಮೀಪ ಪ್ರಾಸವೆನಿಸುವುದು.

ಕೇಶವನೊಲುಮೆಯು ಆಗುವ ತನಕ ಹರಿ । ದಾಸರೊಳಿರುತಿರು ಹೇ ಮನುಜ ॥
ಕ್ಲೇಶ ಪಾಶಂಗಳ ಹರಿದು ವಿಲಾಸದಿ । ಶ್ರೀಶನ ನುತಿಗಳ ಪೊಗಳುತ ಮನದೊಳು ॥
–ಕನಕದಾಸರು
ಈಶ ನಿನ್ನ ಚರಣ ಭಜನೆ । ಆಶೆಯಿಂದ ಮಾಡುವೆನು ।
ದೋಷ ರಾಶಿ ನಾಶ ಮಾಡು ಶ್ರೀಶ ಕೇಶವಾ ॥ –ಕನಕದಾಸರು
ಸುಲಭ ಪೂಜೆಯ ಮಾಡಿ ಬಲವಿಲ್ಲದವರು ।
ನಳಿನನಾಭನ ಪಾದ ನಳಿನ ಸೇವಕರು ॥ –ಪುರಂದರದಾಸರು

ಅನುಪ್ರಾಸ : ಯಾವುದಾದರೊಂದು ವರ್ಣವು ಪಾದ ಮಧ್ಯದಲ್ಲಿ ಹೆಚ್ಚಾಗಿ ಬಳಕೆಯಾದಾಗ ಅನುಪ್ರಾಸವು ಏರ್ಪಡುವುದು.

ದಾಸ ದಾಸರ ಮನೆಯ ದಾಸಿಯರ ಮಗ ನಾನು
ಸಾಸಿರ ನಾಮದೊಡೆಯ ರಂಗಯ್ಯನ ಮನೆಯ ॥

....

ಶಂಕುದಾಸರ ಮನೆಯ ಮಂಕು ದಾಸನು ನಾನು
ಮಂಕು ದಾಸನು ನಾನು ಮರುಳು ದಾಸ ॥

....

ಕಾಳಿ ದಾಸರ ಮನೆಯ ಕೀಳು ದಾಸನು ನಾನು
ಆಳು ದಾಸನು ನಾನು ಮೂಳ ದಾಸ ॥ –ಕನಕದಾಸರು

ಅಂತ್ಯಪ್ರಾಸ :

ಪದ್ಯದ ಕೊನೆಗೆ ಒಂದೇ ರೀತಿಯ ವ್ಯಂಜನ ಬಂದು ಸೇರುವುದಕ್ಕೆ ಅಂತ್ಯಪ್ರಾಸವೆಂದು ಕರೆಯುತ್ತಾರೆ. ಇದರಲ್ಲಿ ಸರ್ವ ಪಾದಾಂತ್ಯ,ಉಭಯ ಪಾದಾಂತ್ಯ, ಪರ್ಯಾಯ ಪಾದಾಂತ್ಯ, ಸಮ ಪಾದಾಂತ್ಯ, ವಿಷಮ ಪಾದಾಂತ್ಯ ಮೊದಲಾದ ಪ್ರಕಾರಗಳನ್ನು ಕಂಡುಕೊಳ್ಳಬಹುದು.

ಸರ್ವ ಪಾದಾಂತ್ಯಕ್ಕೆ–

ಬಾಗಿಲನು ತೆರೆದು ಸೇವೆಯನು ಕೊಡು ಹರಿಯೆ
ಕೂಗಿದರು ದನಿ ಕೇಳಲಿಲ್ಲವೇ ನರಹರಿಯೇ ॥ –ಕನಕದಾಸರು

ಪರ್ಯಾಯ ಪಾದಾಂತ್ಯಕ್ಕೆ–

ಹೇಗೆ ಸಜ್ಜನರ ಉಲ್ಲಾಸ ಹಾ । ಗ್ಹಾಗೇ ಮಹಾಮಹಿಮರಭಿಲಾಷಾ ॥
ಹೇಗೆ ಬುಧರ ಪರಿತೋಷ ಹಾ । ಗಾಗುವುದು ಪ್ರಸನ್ವೆಂಕಟೇಶಾ ॥
–ಪ್ರಸನ್ನವೆಂಕಟದಾಸರು

ಉಭಯ ಪಾದಾಂತ್ಯಕ್ಕೆ–

ಏಕಾಂತದಲ್ಲಿ ಧನದ ಗೋಷ್ಠಿ । ಲೋಕಾಂತದಿ ವೈರಾಗ್ಯದ ಗೋಷ್ಠಿ ॥
ಶ್ರೀಕಾಂತನ ಸೇವೆಗೆ ಅನುಮಾನ । ಭೂಕಾಂತನ ಸೇವೆಗೆ ಸಮ್ಮಾನ ॥
–ನರಹರಿತೀರ್ಥರು

ಮಧ್ಯ–ಅಂತ್ಯ ಪ್ರಾಸ :

ಶರಣು ಸಿದ್ಧಿ ವಿನಾಯಕ । ಶರಣು ಬುದ್ಧಿ ಪ್ರದಾಯಕ ॥

....

ನಿಟಿಲ ನೇತ್ರನ ದೇವಿ ಸುತನೆ । ನಾಗಭೂಷಣ ಪ್ರಿಯನೆ ।
ಕಟಿಕಟಾಂಗದ ಕೋಮಲಾಂಗನೆ । ಕರ್ಣ ಕುಂಡಲಧಾರನೆ ॥ –ಪುರಂದರದಾಸರು

ಆದಿ–ಮಧ್ಯ–ಅಂತ್ಯ ಪ್ರಾಸ :

ಯತಿ ಪ್ರಾಸವಿರಬೇಕು । ಗತಿಗೆ ನಿಲ್ಲಿಸಬೇಕು ।
ರತಿ ಪತಿ ಪಿತನೊಳು ಅತಿ ಪ್ರೇಮವಿರಬೇಕು ॥
ಗಳ ಶುದ್ಧವಿರಬೇಕು । ತಿಳಿದು ಪೇಳಲು ಬೇಕು ।
ಕಳವಳ ಬಿಡ ಬೇಕು । ಕಳೆ ಮುಖವಿರಬೇಕು ॥ –ಪುರಂದರದಾಸರು

ಆದಿ–ಮಧ್ಯಪ್ರಾಸ :

ಒಕ್ಕಲ ಮಾಡೆನ್ನ ಮುಕುಂದ ತಂದೆ । ಒಕ್ಕಲ ಮಾಡೆನ್ನ ॥ ಪ ॥
ಒಕ್ಕಲ ಮಾಡೆನ್ನ । ದಕ್ಕಿಸಿ ಭವದೊಳು
ಅಕ್ಕರದಲಿ ನಿಮ್ಮ । ಮಿಕ್ಕ ಪ್ರಸಾದ ನೀಡಿ ॥ –ಶ್ರೀರಾಮದಾಸರು

ವಿಶಿಷ್ಟ ಅಂತ್ಯಪ್ರಾಸ :

ಕೆಡ ಬ್ಯಾಡಲೋ ಪ್ರಾಣಿ ಕೆಡ ಬ್ಯಾಡಾ ।
ನಮ್ಮ ಕಡಲ ಶಯನನ ಭಜನೆ ಬಿಡ ಬ್ಯಾಡಾ ॥
....
ಪರದ್ರವ್ಯವನಪಹರಿಸಲಿ ಬ್ಯಾಡಾ । ಪರಸತಿಯರ ಮೋಹಕ್ಕೊಳಗಾಗ ಬ್ಯಾಡಾ ।
ದುರಿತಕಾರ್ಯಕೆ ಮನ ಕೊಡಬ್ಯಾಡಾ ।ಒಳ್ಳೆ ಪರೋಪಕಾರ ಮಾಡದೆ ಕೆಡಬ್ಯಾಡಾ ॥
–ಪುರಂದರದಾಸರು

ತೋಳು ತೋಳು ತೋಳು ರಂಗ ತೋಳನ್ನಾಡೈ । ಸ್ವಾಮಿ
ನೀಲವರ್ಣದ ಬಾಲಕೃಷ್ಣನೆ ತೋಳನ್ನಾಡೈ॥ –ಪುರಂದರದಾಸರು

ದ್ವ್ಯಕ್ಷರಾದಿಪ್ರಾಸ :

ಏಕಾಂತದಲ್ಲಿ ಧನದ ಗೋಷ್ಠಿ । ಲೋಕಾಂತದಿ ವೈರಾಗ್ಯದ ಗೋಷ್ಠಿ ॥
ಶ್ರೀಕಾಂತನ ಸೇವೆಗೆ ಅನುಮಾನ । ಭೂಕಾಂತನ ಸೇವೆಗೆ ಸುಮ್ಮಾನ ॥
–ನರಹರಿತೀರ್ಥರು

ದ್ವ್ಯಕ್ಷರಾಂತಪ್ರಾಸ :

ಕರಡಿ ಮಗಳ ತಂದನಂತೆ ಶರಧಿ ಮಗಳ ಗಂಡನಂತೆ ।
ಧರಣಿಯನ್ನು ಬೇಡಿದನಂತೆ ಎರಡೇಳು ಲೋಕದೊಡೆಯನಂತೆ ॥ –ವಾದಿರಾಜರು

ತ್ರ್ಯಕ್ಷರಾಂತಪ್ರಾಸ :

ಶ್ರೀರಂಗ ವಿಠಲನ ಮುಕುಟಕೆ ಶರಣು ॥ ಪ ॥
ಶಿರದೊಲ್ಲೊಪ್ಪುವ ನೀಲ ಕುಂತಳಕೆ ಶರಣು ॥
ಸಿರಿ ಸಹೋದರನರ್ಧದವಳಿಗೆ ಶರಣು ॥ –ಶ್ರೀಪಾದರಾಜರು

ಒಳಪ್ರಾಸ :

ಬೇಗ ಬಾರೋ ಬೇಗ ಬಾರೋ ನೀಲ ಮೇಘವರ್ಣ ।
ಬೇಗ ಬಾರೋ ಬೇಗ ಬಾರೋ ವೇಲಾಪುರದ ಚೆನ್ನ ॥
....
ಧೀರ ಉದಾರ ಗಂಭೀರ ಬೇಗ ಬಾರೋ ।
ಹಾರಾಲಂಕಾರ ರಘುವೀರ ಬೇಗ ಬಾರೋ ॥ –ವಾದಿರಾಜರು
ರಾಗಿ ತಂದೀರಾ । ಭಿಕ್ಷಕೆ । ರಾಗಿ ತಂದೀರಾ ॥
ಯೋಗ್ಯರಾಗಿ ಭೋಗ್ಯರಾಗಿ ಭಾಗ್ಯವಂತರಾಗಿ ನೀವು ॥ –ಪುರಂದರದಾಸರು

ಅಂತರ್ ಅಂತ್ಯಪ್ರಾಸ :

ಅಹುದಾದರಹುದೆನ್ನಿ ಅಲ್ಲವಾದರಲ್ಲವೆನ್ನಿ ॥
....
....

ದೇವರಿಲ್ಲದ ಗುಡಿಯು ಪಾಳು ಬಿದ್ದಂಗಡಿಯು ।
ಭಾವವಿಲ್ಲದ ಭಕುತಿ ಅದು ಕುಹಕ ಯುಕುತಿ ॥
ಹೇವವಿಲ್ಲದ ಹೆಣ್ಣು ಗಜುಗ ಬೆಳೆದ ಕಣ್ಣು ।
ಸೇವೆಯರಿಯದ ಧಣಿಯು ಕಲ್ಲಿನಾ ಖಣಿಯು ॥ –ಕನಕದಾಸರು

ವಡಿ ಅಥವಾ ವಳಿ ಪ್ರಸ್ತಾಪ

ಹರಿದಾಸ ಕೀರ್ತನೆಗಳಲ್ಲಿ ಪ್ರಾಸಕ್ಕಿರುವಷ್ಟೇ ಮಾನ್ಯತೆ 'ವಡಿ'ಗೂ ಇದೆ. ಮೂಲತಃ 'ವಡಿ' ಅಥವಾ 'ವಳಿ' ಎಂಬುದು ತೆಲುಗಿನದು. ಆಂಧ್ರನಾಡಿನಲ್ಲಿ 'ವಡಿ' ಎಂಬುದಕ್ಕೆ 'ವೇಗ' ಎಂಬರ್ಥವಿದೆಯೆಂದು 'ತೆಲುಗು ಛಂದೋ ವಿಕಾಸಮು' ಗ್ರಂಥವು ಹೇಳುತ್ತದೆ. ಪದ್ಯದ ಪಾದಾದಿಯ ಅಕ್ಷರವಾಗಲೀ, ಅದಕ್ಕೆ ಒಡಂಬಡುವ ಅಕ್ಷರವಾಗಲೀ ಪಾದ ಮಧ್ಯದಲ್ಲಿ ಯತಿ ಸ್ಥಾನದ ನಂತರ ಬರುವುದಕ್ಕೆ 'ವಡಿ' ಅಥವಾ 'ವಳಿ' ಎಂದು ಕರೆಯುತ್ತಾರೆ. ಒಟ್ಟಿನಲ್ಲಿ ಹಳಗನ್ನಡದ ಹಾದಿಯಲ್ಲಿ ಬಂದ ಈ ವಡಿಯು ಹರಿದಾಸ ಸಾಹಿತ್ಯದಲ್ಲೂ ಸರಾಗವಾಗಿಯೇ ಅಲಂಕರಿಸಿದೆ.

ಈ ವಡಿಯಲ್ಲಿ ಸ್ವರಪ್ರಧಾನ, ಸ್ವರಮೈತ್ರಿ, ಏಕವರ್ಣ, ಸ್ವರವರ್ಣ, ಸಮ್ಮಿಶ್ರ, ವರ್ಗ, ಸರಸ, ಸಂಯುಕ್ತಾಕ್ಷರ, ಅಭೇದ..... ಹೀಗೆ ಹಲವು ಪ್ರಕಾರಗಳನ್ನು ಕಾಣಲುಸಾಧ್ಯ.

ಸ್ವರಪ್ರಧಾನವಾದ ವಡಿ

ಪದಾದಿಯಲ್ಲಿ ಸ್ವರವಿದ್ದು, ಮಧ್ಯದಲ್ಲಿ ವ್ಯಂಜನದೊಂದಿಗೆ ಸೇರಿದ ಸ್ವರವಿದ್ದರೆ ಅದನ್ನು 'ಸ್ವರಪ್ರಧಾನ ವಡಿ' ಎಂದು ಕರೆಯುತ್ತಾರೆ.

ಏಕೆ ಇಂಥ ದುಡುಕು ಕೃಷ್ಣಯ್ಯ ನಿನ–
ಗೇಕೆ ಇಂಥ ದುಡುಕು ॥ –ಶ್ರೀಪಾದರಾಜರು

ಒಬ್ಬಳ ಬಸುರಿಂದಲಿ ಬಂದೆ ಮ–
ತ್ತೊಬ್ಬಳ ಕೈಯಲಿ ನೀ ಬೆಳೆದೆ ॥ –ಪುರಂದರದಾಸರು

ಏಕೆ ಮೂಕನಾದ್ಯೋ ಗುರುವೆ ನೀ–
ನ್ಯಾಕೆ ಮೂಕನಾದ್ಯೋ ॥ –ಜಗನ್ನಾಥದಾಸರು

ಸ್ವರಮೈತ್ರಿ ವಡಿ

ಸ್ವರಾಕ್ಷರಗಳಾದ ಅ, ಆ, ಐ, ಔ ಅಥವಾ ಇ, ಈ, ಋ, ೠ, ಎ, ಏ ಅಥವಾ ಉ, ಊ, ಒ, ಔ ಗಳಲ್ಲಿ ಯಾವುದಾದರೊಂದು ಗುಂಪಿಗೆ ಸೇರಿದ ಅಕ್ಷರಗಳು ಆವರ್ತನಗೊಂಡರೆ ಅದು ಸ್ವರಮೈತ್ರಿ ವಡಿ ಎನಿಸುವುದು.

ಅನಂತ ಜೀವರಿಗಿನ್ನು ಅನಾದಿ ಅನ್ನದನಾಗಿ
ಅನಿರ್ವಿಣ್ಣ ನಾಮಕನೆಂದು ಸನ್ನುತಿಸಿ ಹಿಗ್ಗುತಿಪ್ಪ ।
....

ಸರ್ವ ಜೀವ ದೇಹಾಂತಸ್ಥ ಸರ್ವ ಜಗನ್ನಾಥ ವಿಠಲ
ಸರ್ವ ರೂಪ ಸರ್ವ ನಾಮ ಸರ್ವವೇದೋದಿಪನೆಂಬ ॥ –ಜಗನ್ನಾಥದಾಸರು

ಏಕವರ್ಣವಡಿ : ಒಂದೇ ವ್ಯಂಜನವು ಪದಾರಂಭದಲ್ಲಿ ಹೆಚ್ಚಾಗಿ ರೂಪುಗೊಂಡರೆ ಏಕವರ್ಣ ವಡಿಯೆನಿಸುವುದು.

ಜೀವಾಂತರ್ಗತ ಜೀವ ನಿಯಾಮಕ ಜೀವವಿಲಕ್ಷಣ ಜೀವನದ ।
ಜೀವಾರಾಧಕ ಜೀವ ರೂಪ ರಾ ಜೀವ ಭವ ಜನಕ ಜೀವೇಶ್ವರ ತವ ॥

....

ಮಂತ್ರ ಯಂತ್ರಮಯ ಮಂತ್ರ ಬೀಜ ಮಹ
ಮಂತ್ರ ರಾಜ ಗುರು ಮಂತ್ರಧ್ವತ ।
ಮಂತ್ರಮೇಯ ಮುಹಮಂತ್ರಗಮ್ಯ ವರ
ಮಂತ್ರದೇವ ಜಗನ್ನಾಥ ವಿಠಲ ತವ ॥ –ಜಗನ್ನಾಥದಾಸರು

ಸ್ವರವರ್ಣ ಸಮ್ಮಿಶ್ರವಡಿ : ಒಂದು ಪಾದದಲ್ಲಿ ಸ್ವರವಡಿಯೂ ಮತ್ತೊಂದು ಪಾದದಲ್ಲಿ ವರ್ಣವಡಿಯೂ ಬಂದಾಗ ಅದನ್ನು 'ಸ್ವರವರ್ಣ ಸಮ್ಮಿಶ್ರವಡಿ' ಎಂದು ಕರೆಯುತ್ತಾರೆ.

ಎನಗೆ ನೀನೇ ಬಂಧು ಎಲೆಲೆ ಕರುಣಾಸಿಂಧು ।
ಧನದಾಸೆಯಾ ಬಿಡಿಸೋ ಧರ್ಮ ಮಾರ್ಗದಿ ನಡೆಸೋ ॥ –ವಾದಿರಾಜರು
ಅಟ್ಟದ ಮೇಲಣ ಅಕ್ಕಿ ತೆಗೆಯೆ ಬೇಕು ।
ಹೊಟ್ಟೆ ನೋಯುತಲಿದೆ ಹೋಗೋ ದಾಸಯ್ಯಾ ॥ –ಪುರಂದರದಾಸರು

ವರ್ಗವಡಿ : ವರ್ಗೀಯ ಅಥವಾ ಅವರ್ಗೀಯ ವ್ಯಂಜನಗಳು ಪದಾರಂಭದಲ್ಲಿ ಕಾಣಿಸಿ ಕೊಂಡರೆ ಅದನ್ನು ವರ್ಗ ಅಥವಾ ವರ್ಗೀಯ ವಡಿ ಎಂದು ಕರೆಯುತ್ತಾರೆ.

ಸರಸಿಜಾಕ್ಷನ ದಿವ್ಯ ಸಾಸಿರ ನಾಮ ಬಿಟ್ಟು
ಪರರ ವಾರ್ತೆಲ್ಯಾಸಕ್ತಿ ಪಾಮರನಾಗುವುದ್ಯಾಕೆ ॥ –ಹರಪನಹಳ್ಳಿ ಭಿಮವ್ವನವರು

ಸರಸವಡಿ : ನ–ಣ, ಶ–ಷ–ಸ, ಅ–ಯ–ಹ, ಚ–ಛ–ಜ–ಝ ಇವುಗಳಲ್ಲಿ ಯಾವುದಾದರೊಂದು ಗುಂಪಿನಲ್ಲಿರುವ ಅಕ್ಷರಗಳು ಆವರ್ತನಗೊಂಡರೆ ಅದು ಸರಸ ವಡಿ ಎನಿಸುವುದು.

ನಿಗಮದಾಸೆಗೆ ಹೋಗಿ ನೀರೊಳಗೆ ಮುಳುಗಿ ನೀ
ಸುಧೆಯ ಆಸೆಗೆ ಹೋಗಿ ಸುರರ ಕೈ ಸಿಕ್ಕು ॥ –ಹರಪನಹಳ್ಳಿ ಭೀಮವ್ವನವರು

ಸಂಯುಕ್ತಾಕ್ಷರ ವಡಿ : ಎರಡು ಅಕ್ಷರಗಳಲ್ಲಿ ಒಂದು ಒತ್ತಕ್ಷರವು ಬಂದರೆ ಸಂಯುಕ್ತಾಕ್ಷರ ವಡಿ ಎನಿಸುವುದು.

ಇಂದು (ಇನ್ದು) ನಾಳೆಂಬ ಯೋಚನೆಯ ಬೀಡಬೇಕು ।
ಇಂದ್ರಿಯ (ಇನ್ದ್ರಿಯ)ಗಳನೆಲ್ಲ ನಿಗ್ರಹಿಸ ಬೇಕು ॥ –ವಿಜಯದಾಸರು

ಕೀರ್ತನೆಗಳಲ್ಲಿ ಮಾತ್ರಾಛಂದಸ್ಸು

ಹರಿದಾಸ ಸಾಹಿತ್ಯವು ಸಂಗೀತಶಾಸ್ತ್ರದ ಚೌಕಟ್ಟಿನಲ್ಲಿ ವ್ಯವಹರಿಸುವುದರಿಂದ ಅಂಶಛಂದಸ್ಸಿನಂತೆ ಮಾತ್ರಾಛಂದಸ್ಸಿನ ಬಂಧದಲ್ಲೂ ವೈವಿಧ್ಯತೆಯನ್ನು ಸಾಧಿಸಿದೆ. ಷಟ್ಪದಿ, ದ್ವಿಪದಿ, ತ್ರಿಪದಿಗಳಲ್ಲದೆ ಇನ್ನೂ ಅನೇಕ ಭಿನ್ನರೂಪೀ ಬಂಧಗಳನ್ನು ಬಳಸಿಕೊಂಡು ಛಂದೋಸೌಂದರ್ಯವನ್ನು ಹೆಚ್ಚಿಸಿದೆ. ಆ ಕುರಿತಾದ ಒಂದಿಷ್ಟು ವಿವೇಚನೆ ಹೀಗಿದೆ.

ಆರ್ಯಾಸವಾಯಿ :

ಯಾದವ. ನೀ ಬಾ. ಯದುಕುಲ. ನಂದನ.	೪. ೪. ೪. ೪.
ಮಾಧವ. ಮಧುಸೂ. ದನ ಬಾ. ರೋ ।	೪. ೪. ೪. ಗು ।
ಸೋದರ. ಮಾವನ. ಮಧುರೆಲಿ. ಮಡುಹಿ ಯ.	೪. ೪. ೪. ೪.
ಶೋದೆಯ. ಕಂದನೆ. ನೀ ಬಾ. ರೋ ॥	೪. ೪. ೪. ಗು ॥

–ಪುರಂದರದಾಸರು

ಭೋಗಾರ್ಧ ಷಟ್ಪದಿ :

ಈಶ. ನಿನ್ನ. ಚರಣ. ಭಜನೆ.	೩. ೩. ೩. ೩.
ಆಶೆ. ಯಿಂದ. ಮಾಡು. ವೆನು	೩. ೩. ೩. ೩.
ದೋಷ. ರಾಶಿ. ನಾಶ. ಮಾಡು. ಶ್ರೀಶ. ಕೇಶ. ವಾ ।	೩. ೩. ೩. ೩. ೩. ೩. ಗು ।

–ಕನಕದಾಸರು

ಶರ ಷಟ್ಪದಿ :

ಅಂಧಕ. ನನುಜನ.	೪. ೪.
ಕಂದನ. ತಂದೆಯ.	೪. ೪.
ಕೊಂದನ. ಶಿರದಲಿ. ನಿಂದವ. ನ ।	೪. ೪. ೪. ಗು ।
ಚೆಂದದಿ. ಪಡೆದನ.	೪. ೪.
ನಂದನೆ. ಯಳನೆಲ.	೪. ೪.
ವಿಂದ ಧ. ರಿಸಿದ ಮು. ಕುಂದನಿ. ಗೆ ॥	೪. ೪. ೪. ಗು ॥

–ಕನಕದಾಸರು

ಹರಿ ನಾ. ರಾಯಣ.	೪. ೪.
ಹರಿ ನಾ.ರಾಯಣ.	೪. ೪.
ಹರಿ ನಾ. ರಾಯಣ.ಯೆನು ಮನ. ವೆ ।	೪. ೪. ೪. ಗು ।
ನಾರಾ. ಯಣ ನಾ.	೪. ೪.
ನಾಮದ. ಬೀಜವ.	೪. ೪.
ನಾರದ. ಬಿತ್ತಿದ. ಧರೆಯೊಳ. ಗೆ ॥	೪. ೪. ೪. ಗು ॥

–ಪುರಂದರದಾಸರು

ಉತ್ಸಾಹ ರಗಳೆ :

ಜನನಿ. ಜನಕ. ರಂತೆ. ಜನಾ.	೩. ೩. ೩. ೩.
ರ್ದನನು. ಸಲಹು. ತಿರಲು. ಬಿಟ್ಟು.	೩. ೩. ೩. ೩.

ಧನಿಕ. ರಮನೆ. ಮನೆಗ. ಳಲ್ಲಿ. ೩. ೩. ೩. ೩.
ಶುನಕ. ನಂತೆ. ತಿರುಗು. ವವನು. ॥ ೩. ೩. ೩. ೩.

–ಜಗನ್ನಾಥದಾಸರು

ಕಾಸು. ದುಡ್ಡು. ಚಕ್ರ. ನಾಣ್ಯ. ೩. ೩. ೩. ೩.
ವೀಸ. ವುಳಿಯ. ದಂತೆ. ಬಡ್ಡಿ. ೩. ೩. ೩. ೩.
ವಾಸಿ. ಯಿಕ್ಕಿ. ಗಂಟ. ಕಟ್ಟಿ. ೩. ೩. ೩. ೩.
ಈಸು. ಕೊಂಡು. ಸೂಸ. ದನಕ. ॥ ೩. ೩. ೩. ೩.

–ನೆಕ್ಕರೆ ಕೃಷ್ಣದಾಸರು

ಮಂದಾನಿಲ ರಗಳೆ :

ಧರಿಸಿದ. ಗಂಧವೆ. ಚರಣಕೆ. ಗಂಧವು. ೪. ೪. ೪. ೪.
ರಸಿನ. ಲಿ ಮುಡಿದ. ಪುಷ್ಪವೆ. ಮಾಲಿಕೆ. ೪. ೪. ೪. ೪.
ಸ್ಥಿರವಾ. ಗಿ ಕೂಡಿ. ದ ಸ್ನೇಹ. ಬುದ್ಧಿಯೆ. ೪. ೪. ೪. ೪.
ಆರತಿ. ಉಂಡ. ನ್ನವೆ ನೈ. ವೇದ್ಯವು. ॥ ೪. ೪. ೪. ೪.

–ವ್ಯಾಸರಾಯರು

ಲಲಿತ ರಗಳೆ :

ಮನ ಮಂದಿ. ರಕೆ ಬಂದ. ಅನುಕೂಲ. ಗೋವಿಂದ. ೫. ೫. ೫. ೫.
ತಾನೆ ತಾ. ನಾಗಿ ನಿಂ. ದ ಘನಗುರು. ಕೃಪೆಯಿಂದ. ೫. ೫. ೫. ೫.

–ಕಾಖಂಡಕಿ ಮಹೀಪತಿರಾಯರು.

ಕೀರ್ತನೆಗಳಲ್ಲಿ ಅಂಶಛಂದಸ್ಸು

ಹರಿದಾಸ ಸಾಹಿತ್ಯವು ಈ ಮೊದಲೇ ಹೇಳಿದಂತೆ ಸಂಗೀತ ಪ್ರಧಾನವಾದುದು. ಈ ನಿಟ್ಟಿನಲ್ಲಿ ಇಲ್ಲಿಯ ರಚನೆಗಳು ಆಲಾಪನೆಯ ನೆಲೆಯಲ್ಲಿ ಹ್ರಸ್ವೀಕರಣ ಮತ್ತು ದೀರ್ಘೀಕರಣಕ್ಕೊಳಗಾಗಿ ಲಯಗತಿಗೆ ಹೆಚ್ಚಿನ ಪ್ರಾಧಾನ್ಯತೆಗೆ ಒಳಗಾಗುತ್ತವೆ. ಈ ಕುರಿತಾಗಿ ಡಾ. ಎಚ್. ಎನ್. ಮುರಳೀಧರ ಅವರು, 'ಒಂದೆಡೆ ಮಾತ್ರಾಲಯಗಳನ್ನು ಒಪ್ಪಿಕೊಂಡು ಅವುಗಳನ್ನು ಮೀರುವ ಪ್ರಯತ್ನವನ್ನು ನಡೆಸಿದ್ದರೆ, ಇನ್ನೊಂದೆಡೆ ಅಂಶಲಯಗಳನ್ನು ಒಪ್ಪಿಕೊಂಡು ಅವುಗಳನ್ನು ಮೀರುವ ಯತ್ನವೂ ನಡೆದಿದೆ. ಇದು ಒಂದುಕಡೆಯಿಂದ ವೈವಿಧ್ಯವಾಗಿ ಕಂಡುಬಂದರೆ, ಇನ್ನೊಂದು ಕಡೆಯಿಂದ ಸನ್ನಿವೇಶದ ಅಗತ್ಯಗಳಿಗೆ ಅನುಗಣವಾಗಿ ಅಭಿವ್ಯಕ್ತಿಯನ್ನು ಒಗ್ಗಿಸುವ ವಿಧಾನವಾಗಿ ಕಂಡುಬರುತ್ತದೆ' ಎನ್ನುತ್ತಾರೆ.[೨] ಒಟ್ಟಿನಲ್ಲಿ ಚಿಂತನೆಗಳು ಏನೇ ಇದ್ದರು ಅಂಶ ಛಂದಸ್ಸಿನ ಹೆಣಿಕೆಯಲ್ಲಿ ದಾಸಕೀರ್ತನೆಗಳು ಗೇಯ ಪ್ರಧಾನವಾಗಿ ಮೂಡಿಬಂದಿರುವುದಂತು ಸತ್ಯವಾಗಿದೆ.

ಸೊಬಗಿನ ಸೋನೆ

ಇದರ ವಿಷಮಪಾದಗಳಲ್ಲಿ ನಾಲ್ಕು ವಿಷ್ಣುಗಣಗಳೂ, ಸಮಪಾದಗಳಲ್ಲಿ ಮೂರು ವಿಷ್ಣುಗಣಗಳೂ ಇರುತ್ತವೆ. ಅಂದರೆ, ಪೂರ್ವಾರ್ಧ ಹಾಗೂ ಉತ್ತರಾರ್ಧಗಳಲ್ಲಿ ಏಳೇಳು ವಿಷ್ಣುಗಣಗಳಿರುತ್ತವೆ.

ತೂಗಿರೆ. ರಾಯರ. ತೂಗಿರೆ. ಕೃಷ್ಣನ.	ವಿ. ವಿ. ವಿ. ವಿ.
ತೂಗಿರೆ. ಅಚ್ಯುತ. ನಂತನ.	ವಿ. ವಿ. ವಿ.
ತೂಗಿರೆ. ವರಗಿರಿ. ಯಪ್ಪ ತಿ. ಮ್ಮಪ್ಪನ.	ವಿ. ವಿ. ವಿ. ವಿ.
ತೂಗಿರೆ. ಕಾವೇರಿ. ರಂಗನ. ॥	ವಿ. ವಿ. ವಿ.

–ಗುರು ಜಗನ್ನಾಥವಿಠಲರು

ಅಂಶ ಷಟ್ಪದಿ :

ಮಾವಗೆ. ನೀ ಮತ್ತೆ.
ಮಾವನಾ. ದ್ಯೋ ರಂಗ.
ಮಾವನ. ಮಗಳನ್ನು. ಮದುವೆಯಾ. ದ್ಯೋ ।
ಭಾವಗೆ. ನೀ ಮತ್ತೆ.
ಭಾವನಾ. ದ್ಯೋ ರಂಗ.
ಭಾವಜ. ಸಖನಿಗೆ. ಭಾವನಾ. ದ್ಯೋ ॥ –ಪುರಂದರದಾಸರು

ಕಿರು ಸೀಸ ಪದ್ಯ :

ಸಂಭ್ರಮ. ದಲಿ ಒಂದು. ಹೊತ್ತು ನೇ. ಮದಲಿದ್ದು.	ವಿ. ವಿ. ವಿ. ವಿ.
ತಂಬಿಟ್ಟ. ನಾ ದೀಪ. ಹೊರಲು. ಯಾಕೆ. ।	ವಿ. ವಿ. ಬ್ರ. ಬ್ರ ।
ಕೊಂಬು ಹೋ. ತವು ಕುರಿ. ಕೋಣನಾ. ಬಲಿಗೊಂಬ.	ವಿ. ವಿ. ವಿ. ವಿ.
ಡೊಂಬಿ ದ್ಯೆ. ವವ ಭಜಿ. ಸದಿರು. ಮನವೆ. ॥	ವಿ. ವಿ. ಬ್ರ. ಬ್ರ ।

–ಕನಕದಾಸರು

ಸಾಂಗತ್ಯ :

ಮೋರೆ ಕ. ಪ್ಪಿನ ಭಾವ. ಮೊರದಗ. ಲದ ಕಿವಿ.	ವಿ. ವಿ. ವಿ. ವಿ.
ಕೋರೆದಾ. ಡೆಯವನಾ. ರಮ್ಮ ।	ವಿ. ವಿ. ಬ್ರ ।
ಮೂರು ಕ. ಣ್ಣಿನ ಸುತ. ಮುರಿದಿಟ್ಟ. ಚಂದ್ರನ.	ವಿ. ವಿ. ವಿ. ವಿ.
ಧೀರ ತಾ. ಗಣನಾಥ. ನೇ ॥	ವಿ. ವಿ. ಬ್ರ ॥

–ಕನಕದಾಸರು

ಛಂದೋವತಂಸ :

ಇಂದೆನ್ನ. ಪೂರ್ವ ಪಾ. ಪಂಗಳ. ಕಳೆದು.	ವಿ. ವಿ. ವಿ. ಬ್ರ.
ಮುಂದೆನ್ನ. ಜನ್ಮ ಸ. ಫಲವನ್ನು. ಗೈದು.	ವಿ. ವಿ. ವಿ. ಬ್ರ.
ತಂದೆ ಪು. ರಂದರ. ವಿಠಲ ನೀ. ನೊಲಿದು.	ವಿ. ವಿ. ವಿ. ಬ್ರ.
ಎಂದೆಂದಿ. ಗಾನಂದ. ಸುಖವನ್ನು. ಸುರಿದು. ॥	ವಿ. ವಿ. ವಿ. ಬ್ರ.

–ಪುರಂದರದಾಸರು

ಅಂಶ ಛಂದಸ್ಸಿನ ಹೊಸ ರಚನೆಗಳು :

ಶೋಭಾನ. ವೆನ್ನಿರೆ. ಸುರರೊಳು. ಸುಭಗನಿಗೆ.	ವಿ. ವಿ. ವಿ. ರು.
ಶೋಭಾನ. ವೆನ್ನೀ. ಸುಗುಣನಿಗೆ.	ವಿ. ಬ್ರ. ರು.

ಶೋಭಾನ. ವೆನ್ನಿರೆ. ತ್ರಿವಿಕ್ರಮ. ರಾಯನಿಗೆ. ವಿ. ವಿ. ವಿ. ರು.
ಶೋಭಾನ. ವೆನ್ನೀ. ಸುರಪ್ರಿಯಗೆ. ॥ ವಿ. ಬ್ರ. ರು ॥

–ವಾದಿರಾಜರು

ಸೂತ್ರ ಪದ್ಯ :

ಹರಿ ತಾನೇ. ಮೂರಲಿ. ಹರಗಣ. ಮುಂಬರಲು. ವಿ. ವಿ. ವಿ. ರು.
ಹರಿ ಬೊಮ್ಮ. ಹರರ. ಸಾಲೆರಡು. ವಿ. ಬ್ರ. ರು.
ಹರಿ ಬೊಮ್ಮ. ಹರರೆಲ್ಲ. ಪೂರ್ವಾರ್ಧ. ರೀತಿಯೊಳೆ. ವಿ. ವಿ. ವಿ. ರು.
ಹರಿದುತ್ತ.ರಾರ್ಧ. ತುಂಬುವರು. ॥[೪೩] ವಿ. ಬ್ರ. ರು. ॥

ದಾಸ ಸಾಹಿತ್ಯದಲ್ಲಿ ಸಾನೆಟ್ (ಸುನೀತ).

ಕನ್ನಡಕಾವ್ಯ ಪ್ರಯೋಗಶೀಲತೆಯಲ್ಲಿ ಇಂಗ್ಲೀಷಿನ ಸಾನೆಟ್ ಪದ್ಯರೂಪವು ಕನ್ನಡದಲ್ಲಿ ಸುನೀತವಾಗಿ ಪರಿಣಮಿಸಿತು. ಈ ಸುನೀತವು ಹತ್ತೊಂಬತ್ತನೆಯ ಶತಮಾನದ ಹೊಸಗನ್ನಡದ ಕಾವ್ಯದಲ್ಲಿ ಮೊದಲು ಪ್ರಯೋಗವಾಯಿತು ಎನ್ನುತ್ತಾರೆ. ಇದರ ರಚನೆಯ ಲಕ್ಷಣದಲ್ಲಿ ಪಲ್ಲವಿ ಹಾಗೂ ಅನುಪಲ್ಲವಿಗಳಿಗೆ ಸ್ಥಾನವಿಲ್ಲ. ಆದರೆ ಈ ಲಕ್ಷಣವನ್ನು ಹೊರತು ಪಡಿಸಿದರೆ ಕನಕದಾಸರ ದಶಾವತಾರಸ್ತುತಿಯೊಂದು ಪ್ರಾಚೀನ ಸುನೀತವಾಗಿ ತೋರಿಬರುತ್ತದೆ.

ಯಾದವ ಗಿರಿ ವಾಸನಹುದೋ ಶ್ರೀ ನರಸಿಂಹ
ಆದಿ ನಾರಾಯಣ ಅಚ್ಚುತನಹುದೋ ॥ ಪ ॥
ಖಳ ಸೋಮಕನ ಕೊಂದು ನೀರಲಿ ಮುಳುಗಿ ಬಂದೆ
ಇಳೆಯೊಳು ಸುರಾಸುರರ್ಯ್ತಂದು ಬೆರೆಯಲು
ಘಳಿಲನೆ ದೇವ ಜನರು (ಮುಂದೆ) ಬಂದು ನಿಲ್ಲಲು
ವ್ಯಾಳೇಶನ ಸುತ್ತಿ ಸೆಳೆವ ವೇಳೆಯಲ್ಲಿ
ಇಳಿದು ಪಾತಾಳಕ್ಕೆ ಪರುವತ ಪೋಪುದ ಕಂಡು
ನಳಿನ ನಾಭನೆ ನಿಮ್ಮ ನೆನೆಯಲಾ ಧ್ವನಿ ಕೇಳಿ
ತಿಳಿದು ಕೂರ್ಮ ರೂಪಾಗಿ ಮಂದರವನು ಹೊತ್ತು
ಉಳಿಸಿದೆ ಲೋಕವನು ಉನ್ನತ ಪರಾಕ್ರಮಿ
ಖಳ ಹಿರಣ್ಯಕ ಬಂದು ಎದುರಾರು ತನಗೆಂದು
ಇಳೆಯ ಕದ್ದೊಯ್ದು ಪೋಗುತಿರೆ ಸುರರದ ಕಂಡು
ಘಳಿಲನೆ ನಿಮ್ಮನು ಕೂಗಲಾ ಮೊರೆ ಕೇಳಿ
ತಿಳಿದು ಪಾವನ ಮೂರ್ತಿ ಆಗಿ ಪಾವಕ ಮೂರ್ತಿ
ಕಳ್ಳ ದೈತ್ಯನ ಸಂಹಾರವಾ ಮಾಡಿದೆ
ನಳಿನೋದ್ಭವನಯ್ಯಾ ಅಮರ ಚೆನ್ನಿಗರಾಯ ॥ ೧ ॥

ಈ ಕಿರ್ತನೆಯ ನಂತರದ ಚರಣಗಳಲ್ಲಿ ೧೬–೧೫ ಸಾಲುಗಳಿವೆ. ಅರ್ಥದ ಗೊಂದಲಗಳೂ ಇವೆ. ಬಾಯಿಂದ ಬಾಯಿಗೆ ಕೀರ್ತನೆಗಳು ಸಂಚರಿಸುವಾಗ ನಡೆದ ದೋಷಗಳೆಂದು ಪರಿಗಣಿಸಬಹುದು.

ದಾಸಕೀರ್ತನೆಗಳ ಛಂದೋ ವಿವೇಚನೆಯಲ್ಲಿ ಸ್ಪಷ್ಟವಾಗಿ ಗೋಚರಿಸುವ ಅಂಶವೆಂದರೆ ಛಂದೋ ವಿಭಿನ್ನಾಂಶಗಳು. ಈ ವೈವಿಧ್ಯತೆಯನ್ನು ನಾವು ಚೈತನ್ಯಸಾಹಿತ್ಯದಲ್ಲಿ ನಿರೀಕ್ಷಿಸುವಂತಿಲ್ಲ. ಆದರೂ ಅಲ್ಲಿಯ ಹುಡುಕಾಟದಲ್ಲಿ ಛಂದಸ್ಸಿನ ಭಿನ್ನತೆಯು ದಾಸಸಾಹಿತ್ಯಕ್ಕೆ ಒಂದಿಷ್ಟು ಸಮಾನವಾಗಿ ತೋರಿಬರುವುದಿದ್ದರೆ, ಅದು ಪ್ರಾಸದ ವಿಚಾರದಲ್ಲಿ. ಇಲ್ಲಿ ಅಂತ್ಯಪ್ರಾಸದ ಬಳಕೆಯು ಎಲ್ಲಾ ಕಡೆಯು ಕಂಡು ಬಂದರೆ, ಉಳಿದ ಪ್ರಾಸಗಳ ಪ್ರಯೋಗವು ಕಡಿಮೆಯೆಂದೇ ಹೇಳಬೇಕು. ಆದರೂ, ಆದಿ-ಮಧ್ಯ-ಅಂತ್ಯ ಹಾಗೂ ಮಧ್ಯಾಂತ್ಯ ಪ್ರಾಸಗಳು ಅಲ್ಲಲ್ಲಿ ಕಂಡುಬರಲು ಸಾಧ್ಯ.

ಆದಿ-ಮಧ್ಯ-ಅಂತ್ಯಪ್ರಾಸ :

ಪ್ರೇಮೀ ಭಕ್ತ ವಿಯೋಗೇ ಚಾಹೇ ದೇಹ ಛಾಡಿತೇ ।
ಪ್ರೇಮೇ ಕೃಷ್ಣ ಮಿಲೇ, ಸೇಹ ನಾ ಪಾರೇ ಮುರಿತೇ ॥ -ಚೈತನ್ಯ ಚರಿತಾಮೃತ

ಆದಿಪ್ರಾಸ ರಹಿತ ಮಧ್ಯ-ಅಂತ್ಯಪ್ರಾಸ :

ಭಕ್ತ ಗುಣ ಪ್ರಕಾಶಿತೇ, ಪ್ರಭು ಬಡ ರಂಗೇ ।
ಏಇ ಸಬ ಪ್ರಕಾಶಿತೇ ಕೈಲಾ ಏತ ಭಂಗೇ ॥ -ಚೈತನ್ಯ ಚರಿತಾಮೃತ

ಹೃದಯೇ ಧರಿಮು ತೋಮಾರ ಕಮಲ ಚರಣ ।
ನಯನೇ ದೇಖಿಮು ತೋಮಾರ ಚಾಂದವದನ ॥ -ಚೈತನ್ಯ ಚರಿತಾಮೃತ

ಹೀಗೆ, ಪ್ರಾಸ, ವಡಿ, ಅಂಶ ಮತ್ತು ಮಾತ್ರಾಗಣ ಛಂದಸ್ಸು ಇಲ್ಲಿಯ ಕೀರ್ತನೆಗಳಲ್ಲಿ ನಿಯತವಾಗಿಯೇ ನಿರೂಪಿತವಾಗಿವೆ. ಉಗಾಭೋಗ ಮತ್ತು ಸುಳಾದಿಗಳು ಈ ನೆಲೆಯಲ್ಲಿ ಹೊರತಾದವು. ಆದರೆ ಇಲ್ಲಿಯ ಕೀರ್ತನೆಗಳ ಛಂದೋಭಿನ್ನತೆಯ ಆಯ್ಕೆಯಲ್ಲಿ ಔಚಿತ್ಯವನ್ನು ಸಾದಿಸಲಾಗಿದೆ. ಅದರೆ ಇಂತಹ ಛಂದಸ್ಸಿನ ಭಿನ್ನತೆಯು ಚೈತನ್ಯಪಂಥದ ಕೃತಿಗಳಲ್ಲಿ ಹೆಚ್ಚಾಗಿ ಕಾಣಲು ಸಾಧ್ಯವಿಲ್ಲ. ಅಲ್ಲಿ ಕಾಣುವುದು ಕೇವಲ ದ್ವಿಪದಿಬಂಧಗಳು. ಈ ನೆಲೆಯಲ್ಲಿ ದಾಸಪಂಥದ ಛಂದೋವೈವಿಧ್ಯತೆಯು ಒಂದು ಪ್ರತ್ಯೇಕವಾದ ಅಧ್ಯಯನಕ್ಕೆ ದಾರಿಮಾಡಿಕೊಡುತ್ತದೆ.

೬.೧೦ : ಪ್ರಕೃತಿ ಪ್ರೇಮ ಮತ್ತು ಆರಾಧನೆ.

ದಾಸಸಾಹಿತ್ಯವು ಸಮಾಜ ಹಿತಕ್ಕೋಸ್ಕರವಾಗಿ ಪ್ರಕೃತಿಪೂಜೆಯನ್ನು ಮಾಡಲು ಮುಂದಾಗುತ್ತದೆ. ಇದರ ಹಿಂದಿರುವ ಉದ್ದೇಶವೆಂದರೆ ಸಾಮಾಜಿಕ ಕಳಕಳಿ. ಹಾಗಾಗಿ ದಾಸಪಂಥವು ಮುಂಬರುವ ಬರಗಾಲಕ್ಕೆ ವರುಣನ ಕೃಪೆಯನ್ನು ಕೇಳುತ್ತದೆ. ಭೂಕಂಪದ ಸಣ್ಣ ಸೂಚನೆಯು ತೋರಿಬಂದರೂ ಭೂದೇವಿಯನ್ನು ಪ್ರಾರ್ಥನೆಗೈಯ್ಯುತ್ತದೆ. ಸೂರ್ಯೋದಯದಿಂದ ಸೂರ್ಯಾಸ್ತ, ಸೂರ್ಯಾಸ್ತದಿಂದ ಸೂರ್ಯೋದಯದವರೆಗೂ ಪ್ರಾಣಿಪಕ್ಷಿಗಳ ನಿಸರ್ಗವಾಸವು ಏರುಪೇರಾಗದಂತೆ, ನಿಸರ್ಗವು ಭಯಮುಕ್ತವಾಗುವಂತೆ ನಿಸರ್ಗಮಾತೆಯಲ್ಲಿ ದಾಸವರೇಣ್ಯರು ಅರಿಕೆಯನ್ನು ಮಾಡಿಕೊಳ್ಳುತ್ತಾರೆ. ಆದರೆ ಇಷ್ಟು ಯಾತನಾಮಯವಾದ ನಿಸರ್ಗದ ಸ್ಥಿತಿಸ್ತುತಿಯು ಚೈತನ್ಯಪಂಥದಲ್ಲಿ ಕಾಣುವುದಿಲ್ಲ. ಅಲ್ಲಿ ವನವರ್ಣನೆ, ಪ್ರಾಣಿಪಕ್ಷಿಗಳ ವರ್ಣನೆಯು ತೋರಿಬಂದಿರುವುದು

ಕೇವಲ ವೃಂದಾವನದ ದಾರಿಯನ್ನು ಪರಿಚಯಿಸಲಿಕ್ಕೋಸ್ಕರವಾಗಿ. ಅಲ್ಲದೆ ಹೋದಲ್ಲಿ ರಾಧಾಕೃಷ್ಣರ ಸರಸಸಲ್ಲಾಪಕ್ಕೆ ಪೂರಕಾಂಶಗಳಾಗಿ.

ಚೈತನ್ಯಸಾಹಿತ್ಯಕ್ಕೆ ಸಂಬಂಧಿಸಿದಂತೆ, 'ವಿದಗ್ಧ ಮಾಧವ'ವೆಂಬ ನಾಟಕದಲ್ಲಿ ಶ್ರೀಲ ರೂಪ ಗೋಸ್ವಾಮಿಯವರು ಕೃಷ್ಣಪ್ರೇಮವನ್ನು ಸಂಕಲಿಸುವಲ್ಲಿ ಪ್ರಕೃತಿಪ್ರೇಮದ ರಮಣೀಯ ಸೊಬಗನ್ನು ಕಾಣುತ್ತಾರೆ.

ಯಃ ಕೌಮಾರ ಹರಃ ಸ ಏವ ಹಿ ವರಸ್ತಾ ಏವ ಚೈತ್ರ ಕ್ಷಪಾಸ್
ತೇ ಚೋನ್ಮೀಲಿತ ಮಾಲತೀ ಸುರಭ್ಯಃ ಪ್ರೌಢಾಃ ಕದಂಬಾನಿಲಾಃ ।
ಸಾ ಚೈವಾಸ್ಮಿ ತಥಾಪಿ ತತ್ರಸುರತ ವ್ಯಾಪಾರ ಲೀಲಾವಿಧೌ
ರೇವಾರೋಧಸಿ ವೇತಸೀ ತರುತಲೇ ಚೇತಃ ಸಮುತ್ಕಣ್ಠತೇ ॥೪೪

'ಯೌವನದಲ್ಲಿ ನನ್ನ ಹೃದಯವನ್ನು ಅಪಹರಿಸಿದವನೇ ಈಗ ಮತ್ತೆ ನನ್ನ ಸ್ವಾಮಿಯಾಗಿದ್ದಾನೆ. ಇವು ಅದೇ ಚೈತ್ರಮಾಸದ ಬೆಳದಿಂಗಳಿನ ರಾತ್ರಿಗಳು. ಮಾಲತೀಪುಷ್ಪಗಳ ಅದೇ ಸೌರಭವು ಇಲ್ಲಿದೆ. ಕದಂಬವನದಿಂದ ಅದೇ ಮಧುರವಾದ ಮಂದಮಾರುತವು ಬೀಸುತ್ತಿದೆ. ನಮ್ಮ ನಿಕಟವಾದ ಸಂಬಂಧದಲ್ಲಿ ನಾನು ಅದರದೇ ಪ್ರೇಮಿಯಾಗಿದ್ದೇನೆ. ಆದರೂ ಇಲ್ಲಿ ನನ್ನ ಮನಸ್ಸು ಸಂತುಷ್ಟವಾಗಿಲ್ಲ. ರೇವಾನದಿಯ ದಂಡೆಯ ಮೇಲಿರುವ ವೇತಸೀಮರದ ಕೆಳಗಿನ ಆ ಸ್ಥಳಕ್ಕೆ ಮರಳಿ ಹೋಗಲು ನಾನು ಕಾತರಳಾಗಿದ್ದೇನೆ. ಅದು ನನ್ನ ಆಸೆ' ಎಂಬುದಾಗಿ ನಾಟಕದ ಪ್ರಕೃತಿವರ್ಣನೆಯು ನಿಧಾನವಾಗಿ ಸಾಗುತ್ತದೆ. ಅಂದರೆ ಇಲ್ಲಿ ಗೌಡೀಯ ಸಾಹಿತ್ಯವೆನ್ನುವುದು ಕೃಷ್ಣಪ್ರೇಮಕ್ಕೆ ಪ್ರಸಿದ್ಧವಾಗುತ್ತದೆ. ಅಲ್ಲಿಯ ಕಾವ್ಯಗಳಲ್ಲೂ ಕೂಡ ಗೋಪಿಕೆಯರಲ್ಲಿರುವ ಮನಸ್ಸು ಕೃಷ್ಣವಿರಹದಲ್ಲಿ ಮತ್ತು ಪ್ರಕೃತಿಯಲ್ಲಿ ಲೀನವಾಗಿರುತ್ತದೆ.

ಚೂತ ಪ್ರಿಯಾಲ ಪನಸಾಸನ ಕೋವಿದಾರ
ಜಂಬ್ವಾರ್ಕ ಬಿಲ್ವ ಬಕುಲಾಮ್ರ ಕದಂಬ ನೀಪಾಃ ।
ಯೇ ನ್ಯೇ ಪರಾರ್ಥ ಭವಕಾ ಯಮುನೋಪಕೂಲಃ
ಶಂಸನ್ತು ಕೃಷ್ಣ ಪದವೀಂ ರಹಿತಾತ್ಮನಾಂ ನಃ ॥೪೫

'ಓ ಚೂತ ವೃಕ್ಷವೇ, ಪ್ರಿಯಾಲ ವೃಕ್ಷವೇ, ಪನಸ, ನೇರಲ ವೃಕ್ಷವೇ, ಓ ಅರ್ಕ ವೃಕ್ಷವೇ, ಓ ಬಿಲ್ವ, ಬಕುಲ, ಮಾಮರವೇ, ಓ ಕದಂಬ, ನೀಪ ವೃಕ್ಷವೇ, ಬೇರೆಯವರ ಕಲ್ಯಾಣಕ್ಕಾಗಿರುವ ಯಮುನಾದಡದ ವೃಕ್ಷವೇ ಕೃಷ್ಣನು ಎಲ್ಲಿ ಹೋಗಿರುವನೆಂದು ಹೇಳುವಿರಾ ? ನಾವು ನಮ್ಮ ಮನಸ್ಸನ್ನು ಕಳೆದುಕೊಂಡು ಮೃತರಾಗಿದ್ದೇವೆ'. ಇಲ್ಲಿ ತುಳಸೀಗಿಡದಲ್ಲಿ, ಜೇನುನೊಣಗಳಲ್ಲಿ, ಮಾಲತೀ, ಮಲ್ಲಿಕಾ ಹಾಗೂ ಯೂಥಿಕಾಪುಷ್ಪಗಳಲ್ಲಿ ಕೃಷ್ಣನ ಇರುವಿಕೆಯನ್ನು ಕೇಳುವ ರೀತಿಮಾತ್ರ ನಿಜಕ್ಕೂ ಸೊಗಸು. ಆದರೆ ದಾಸಸಾಹಿತ್ಯವು ಹೇಳುವ ಬರಗಾಲದ ಚಿತ್ರಣವು ಚೈತನ್ಯಸಾಹಿತ್ಯದಲ್ಲಿ ಕಾಣಲು ಸಿಗಿವುದಿಲ್ಲ.

ಇಲ್ಲಿಯ ಎರಡು ಪಂಥಗಳ ಹೋಲಿಕೆಯನ್ನು ಗಮನಿಸಿದರೆ, ಪ್ರಕೃತಿ ಕುರಿತಾದ ಬೇಡಿಕೆಗಳು ದಾಸಪಂಥದಲ್ಲಿ ಹೆಚ್ಚಾಗಿ ನೆರವೇರಿದೆ ಎನ್ನಬಹುದು. ಅದಕ್ಕೆ ಕಾರಣವೆಂದರೆ ದಾಸಶ್ರೇಷ್ಠರ ಸಾಮಾಜಿಕ ಕಾಳಜಿ.

ಅವರು ಸಾರ್ವತ್ರಿಕವಾದ ಸಾಮಾಜಿಕ ಸುಭಿಕ್ಷೆಯನ್ನು ಭಗವಂತನಲ್ಲಿ ಕೇಳಿಕೊಳ್ಳುತ್ತಾರೆ. ಅತಿವೃಷ್ಟಿ, ಅನಾವೃಷ್ಟಿ, ಪ್ರವಾಹ ಪ್ರಸಂಗಗಳಿಂದ ತಲ್ಲಣಗೊಳ್ಳುವ ಸಮಾಜಕ್ಕೆ ಉದ್ಧಾರದ ಬವಣೆಯನ್ನು ದಾಸಪಂಥವು ಹೊತ್ತುಕೊಳ್ಳುತ್ತದೆ. ಇದಕ್ಕೆ ಹೆಳವನಕಟ್ಟೆ ಗಿರಿಯಮ್ಮನ ಕೃತಿಯೇ ಸಾಕ್ಷಿ.

ಮಳೆಯ ದಯಮಾಡೊ ರಂಗಯ್ಯ ನಿಮ್ಮ
ಕರುಣ ತಪ್ಪಿದರೆ ಉಳಿಯದೀ ಲೋಕ ॥ –ಹೆಳವನಕಟ್ಟೆ ಗಿರಿಯಮ್ಮ

ಇದು ಹದಿನೆಂಟನೆಯ ಶತಮಾನದಲ್ಲಿ ತಲೆದೋರಿದ ಭೀಕರ ಬರಗಾಲದಲ್ಲಿ ನೀರಿಗಾಗಿ ಪ್ರಾರ್ಥನೆಯನ್ನು ಮಾಡಿದ ರೀತಿ. ಬಾಯಾರಿಕೆಯನ್ನು ತಣಿಸಿಕೊಳ್ಳಲು ಬಂದ ಪಶುಪಕ್ಷಿಗಳು ಕೆರೆತೊರೆಗಳಲ್ಲಿ ನೀರನ್ನು ಕಾಣದೆ ಕಂಗಾಲಾಗುವ ಪರಿಸ್ಥಿತಿ, ಊರನಾರಿಯರೆಲ್ಲ ಕೊಡಪಾನವನ್ನೆತ್ತಿಕ್ಕೊಂಡು ಹೋಗಿ ಗುಂಡಿಯನ್ನು ತೆಗೆದು ನೀರನ್ನು ತುಂಬಿಸಿಕೊಂಡು ತರುವ ರೀತಿ, ಅಲ್ಲದೆ ಮಳೆ ಬರುವ ಮಾಸಗಳಾದ ಜೇಷ್ಟ, ಆಷಾಢ, ಶ್ರಾವಣ ಕಳೆದು ಭಾದ್ರಪದ ಬಂದರೂ ಮಳೆಯು ಮಾತ್ರ ಬಾರದಿರುವಾಗ, ತನ್ನ ಆರಾಧ್ಯದೈವವಾದ ರಂಗನಲ್ಲಿ ಮಳೆಯನ್ನು ಅನುಗ್ರಹಿಸುವಂತೆ ಕೇಳಿಕೊಳ್ಳುವ ಗಿರಿಯಮ್ಮನ ಸಾಹಿತ್ಯರಚನೆ ಮಾತ್ರ ಮಾನವೀಯ ಅನುಕಂಪವುಳ್ಳದ್ದು. ಆದರೆ ಈ ರೀತಿಯ ಅನಾವೃಷ್ಟಿಗೆ ತೋರುವ ಅನುಕಂಪ ಸಾಹಿತ್ಯವು ಚೈತನ್ಯಪಂಥದ ಬರವಣಿಗೆಯಲ್ಲಿ ಅಭಾವ.

ಚೈತನ್ಯಪಂಥವು ಹುಟ್ಟಿಬೆಳೆಯುವ ಕಾಲದಲ್ಲಿ ಬಂಗಾಳ ಪ್ರಾಂತ್ಯವು ಬರಗಾಲದ ಭಯಕ್ಕೆ ತುತ್ತಾಗಿರಲಿಲ್ಲ. ಪ್ರಾಯಶಃ ಈ ಕಾರಣವು ಚೈತನ್ಯಸಾಹಿತ್ಯದಲ್ಲಿ ಪ್ರಕೃತಿ ಕುರಿತಾದ ಬೇಡಿಕೆಯನ್ನು ಇಲ್ಲವಾಗುವಂತೆ ಮಾಡಿದ್ದಿರಬಹುದು. ಆದರೆ, ಆ ಕಾಲದಲ್ಲಿ ಉತ್ತರಕರ್ನಾಟಕದ ಬಹುಭಾಗವು ಬರಗಾಲದ ಭೀಕರತೆಗೆ ಗುರಿಯಾಗಿರಬೇಕು. ಇದಕ್ಕೆ ಉತ್ತರಕರ್ನಾಟಕದ ಹತ್ತಾರು ಗ್ರಾಮಗಳು ಬರಗಾಲದಿಂದ ಬಳಲಿದ್ದವೆನ್ನುವುದಕ್ಕೆ ಪ್ರಾಣೇಶದಾಸರ ರಚನೆಗಳು ಸಾಕ್ಷಿಯಾಗುತ್ತವೆ.

'ಮಾರನ್ನೆಯ್ಯನೇ ಕೇಳಾ ಕಲಿ ವ್ಯಾಪ್ತಿ ಆದದ್ದು ಆರಾ ಮುಂಧೇಳಿ, ಎನ್ನುಬ್ಬಸ ಕಳಕೊಳ್ಳಲ್ಯೋ' ಎಂಬ ಸಾಹಿತ್ಯದಲ್ಲಿ, ಗುಡಿಹಾಳು, ಈಚಲಹಾಳು, ಯರಧಾಳು, ಗೋಧಾಳು, ಗೊರಬಾಳು, ಐದನಬಾಳು ಮುಂತಾದ ಮೂವತ್ತೊಂದು ಗ್ರಾಮಗಳು ಬರಗಾಲದ ತೀವ್ರತೆಗೆ ಗುರಿಯಾಗಿರುವ ವಿಚಾರವನ್ನು ಇಲ್ಲಿಯ ರಚನೆಯು ಸಮರ್ಥಿಸುತ್ತದೆ. ಬರಗಾಲದ ಪರಿಣಾಮದಿಂದ ವ್ಯವಸಾಯವನ್ನು ತೊರೆಯುವ ರೈತರು, ಕಾಯಿಪಲ್ಯೆ, ಗೆಡ್ಡೆಗೆಣಸು ಸಿಗದಿರುವಾಗ ಈಚಲು ಮರದ ಗೆಡ್ಡೆಗಳನ್ನು ಅಗೆದು ತಿನ್ನುವ ಬಡಜನರು, ಊರನ್ನು ಲೂಟಿ ಹೊಡೆಯುವ ಕಳ್ಳರು, ಶಕ್ತಿಹೀನರಾದ ಬ್ರಾಹ್ಮಣರು, ಪಾಳುಬಿದ್ದ ಮಠಮಂದಿರಗಳು ಈ ಎಲ್ಲದರ ಸ್ಥಿತಿಗತಿಗಳನ್ನು ತಮ್ಮ ಬರಗಾಲದ ವರ್ಣನೆಯಲ್ಲಿ ಹೇಳತೊಡಗುತ್ತಾರೆ. ನೆಕ್ಕೇರಿ ಕೃಷ್ಣದಾಸರಂತೂ ಸರ್ವಸಾರ ಪ್ರಣೀತವಾದ ಮಳೆಗಾಗಿ 'ಏನು ಮಾಡಲಿ ವೆಂಕಟೇಶ ಈ ಬೆಳೆಯು ಸೋನೆಯಿಲ್ಲದೆ ಉರಿದುದು' ಎಂದು ಹಲುಬುತ್ತಾರೆ. ಮಳೆಯಿಲ್ಲದೆ ಬೆಳೆಯಿಲ್ಲ, ಬೆಳೆಯಿಲ್ಲದೆ ಹೊಟ್ಟೆಗೆ ಹಿಟ್ಟಿಲ್ಲವೆಂಬಲ್ಲಿ ದಾಸರ ಸಮುದಾಯ ಚಿಂತನೆಯು ಇಲ್ಲಿ

ವ್ಯಕ್ತವಾಗುತ್ತದೆ. ಇಷ್ಟೇ ಅಲ್ಲದೆ, ದಾಸಕುಲದ ಸಾಮಾಜಿಕ ಕಾಳಜಿಗೆ ಶ್ಯಾಮಸುಂದರದಾಸರ ಕೀರ್ತನೆಗಳು ಹೆಚ್ಚು ಒತ್ತನ್ನು ನೀಡುತ್ತವೆ.

ಬಲುಕಷ್ಟ ಬರಗಾಲ ಬಂದಿತಯ್ಯ
ಕೊಲ್ಲುವ ವೈರಿ ಜನಕೆ ಬರಬಾರದಯ್ಯಾ ॥ –ಶ್ಯಾಮಸುಂದರದಾಸರು

ಇಲ್ಲಿ ಕಡುಕಷ್ಟವೆನ್ನುವುದು ತನ್ನ ವೈರಿಗೂ ಬೇಡವೆನ್ನುವ ಉದಾತ್ತವಾದ ಕಲ್ಪನೆಯು ದಾಸಕುಲದ್ದಾಗಿ ನಿಲ್ಲುತ್ತದೆ. ಆದರೆ ಇಂತಹ ಯಾವುದೇ ರೀತಿಯ ಬರಗಾಲ ವರ್ಣನೆಯು ಚೈತನ್ಯಪಂಥದಲ್ಲಿ ಸಿಗುವುದಿಲ್ಲ.

ದಾಸಸಾಹಿತ್ಯದಲ್ಲಿ ನಿಸರ್ಗ ಪ್ರೀತಿಗೆ ಇನ್ನೊಂದು ಮುಖ್ಯ ಉದಾಹರಣೆಯೆಂದರೆ, ಪ್ರಾಣಿಪಕ್ಷಿಗಳ ಸ್ತುತಿ. ಇದು ಸ್ವಲ್ಪಮಟ್ಟಿಗೆ ಚೈತನ್ಯಪಂಥದಲ್ಲೂ ಸಿಗುತ್ತದೆ. ಅದರೆ ತುಲನೆಯಲ್ಲಿ ಭಿನ್ನತೆಯಿದೆ. ಚೈತನ್ಯಪಂಥದಲ್ಲಿ ಚೈತನ್ಯರನ್ನು ಕಂಡ ಕಾಡಿನ ನಾನಾ ಜಾತಿಯ ಪ್ರಾಣಗಳು ಭಾವೋನ್ಮಾದದಿಂದ ಕುಣಿಯಲಾರಂಭಿಸುತ್ತವೆ. ಚೈತನ್ಯ ಚರಿತಾಮೃತವು ರಾಜವೇಷದಲ್ಲಿರುವ ಕೃಷ್ಣನನ್ನು ಆನೆ, ಕುದುರೆಗಳೆಲ್ಲ ಸೇರಿಕೊಂಡು, ಆತನ ಸಖ್ಯವನ್ನು ಪಡೆಯುತ್ತವೆ. ‘ರಾಜವೇಶ, ಹಾತಿ, ಘೋಡಾ, ಮನುಷ್ಯಗಹನ । ಕಾಹಾಂಗ್ ಗೋಪವೇಶ, ಕಾಹಾಂಗ್ ನಿರ್ಜನ ವೃಂದಾವನ’[1] ಎನ್ನುವ ಮೂಲಕ ಕಾಡುಪ್ರಾಣಿಗಳ ವಿವರಣೆಯೊಂದು ಬೇಗನೆ ಮುಗಿದು ಬಿಡುತ್ತದೆ. ಉಳಿದಂತೆ, ಜೀವಜಂತುಗಳ ಕುರಿತಾದ ಸಾಹಿತ್ಯ ರಚನೆಯು ಹೆಚ್ಚೇನನ್ನು ಹೇಳದೆ ಸರಳವಾಗಿಯೇ ಮುಗಿದುಬಿಡುತ್ತದೆ. ದಾಸಸಾಹಿತ್ಯವಾದರೋ ಪ್ರಾಣಿಪಕ್ಷಿಗಳ ದ್ವೇಷರಹಿತವಾದ ಜೀವನಕ್ರಮಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತವೆ. ಅಲ್ಲದೆ ಆ ಪ್ರಾಣಿಗಳ ಕೆಲವೊಂದು ನಡುವಳಿಕೆಯನ್ನು ಮಾನವನ ಆದರ್ಶಜೀವನಕ್ಕೆ ಉದಾಹರಣೆಯಾಗಿ ಸ್ವೀಕರಿಸುತ್ತಾರೆ.

ಕಾಗೆ ಕೂಗಿತಲ್ಲ । ಒಂದು । ಕಾಗೆ ಕೂಗಿತಲ್ಲ ॥
ಪಿತೃಗಳ ಕಾರ್ಯಕ್ಕೆ ಅಗತ್ಯವಾಗೋದು
ಹತವಾದವರಾಕಾಂಕ್ಷೆ ತಿಳಿಸುವುದು ।
ಅತಿ ಹೇಯ ವಸ್ತು ಕಾಗೆ ಎನಲು ಬೇಡಿ
ಹಿತವಾದ ಶಕುನವ ನುಡಿವುದೀ ಕಾಗೆ ॥ –ಪುರಂದರದಾಸರು

ಪುರಂದರದಾಸರ ಈ ರಚನೆಯಲ್ಲಿ ನಿಕೃಷ್ಟ ಜೀವಿಗೊಂದು ವಿಶೇಷಾದ್ಯತೆಯನ್ನು ನೀಡುವ ಪ್ರಯತ್ನವೊಂದನ್ನು ತೋರಿಸಿದ್ದಾರೆ. ಕಾಗೆಯೊಂದು ಮನೆಮುಂದೆ ಕುಳಿತು ಕೂಗಿದರೆ ನೆಂಟರು ಬರುತ್ತಾರೆಂಬ ಕಲ್ಪನೆ ನಮ್ಮ ಸಮಾಜದ್ದು. ಅಲ್ಲದೆ ಆಹಾರದ ಕಾಳೊಂದನ್ನು ಕಂಡರೆ ಹಂಚಿತಿನ್ನೋಣ ಎಂಬ ಕಲ್ಪನೆಯೂ ಕೂಡ ಕಾಗೆಯದ್ದೆ. ಶ್ರಾದ್ಧಕಾರ್ಯಗಳನ್ನು ಮಾಡುವಾಗ ಪಿತೃಪ್ರೀತ್ಯರ್ಥವಾಗಿ ಹೊರಗಿಟ್ಟ ಅನ್ನವನ್ನು ತಿಂದು, ಪಿತೃಗಳನ್ನು ಸಂತೃಪ್ತಿಗೊಳಿಸುವ ಕೆಲಸವೂ ಕಾಗೆಯದ್ದೆ. ಹೀಗಿರುವಾಗ ಕಾಗೆಯ ಕುರಿತಾಗಿ ಅಪಶಕುನವೆಂಬ ನಿಕೃಷ್ಟಕಲ್ಪನೆಯನ್ನು ತಮ್ಮ ಕೀರ್ತನೆಯ ಮೂಲಕವಾಗಿ ಅಲ್ಲಗಳೆಯುತ್ತಾರೆ. ಇದು ಪುರಂದರದಾಸರ ವಾಯಸಸ್ತುತಿಯಾದರೆ, ಚೈತನ್ಯಸಾಹಿತ್ಯದಲ್ಲಿ ನಾಯಿಯ ಕುರಿತು ಪ್ರಸ್ತಾಪಿಸಲಾಗುತ್ತದೆ. ಅಲ್ಲಿ

ಚೈತನ್ಯಾನುಯಾಯಿಗಳಾದ ಶಿವಾನಂದಸೇನರು ಜಗನ್ನಾಥಪುರಿಗೆ ಹೋಗುವಾಗ ತಮ್ಮೊಡನೇ ನಾಯಿಗೂ ಅವಕಾಶ ಕಲ್ಪಿಸಿಕೊಡುತ್ತಾರೆ.

ಏಕದಿನ ಏಕಸ್ಥಾನೇ ನದೀ ಪಾರ ಹೈತೇ ।
ಉಡಿಯಾ ನಾವಿಕ ಕುಕ್ಕುರ ನಾ ಚಡಾಯ ನೌಕಟೇ ॥
ಕುಕ್ಕುರ ರಹಿಲಾ ಶಿವಾನಂದ ದುಃಖಿ ಹೈಲಾ ।
ದಶಪಣ ಕಡಿದಿಯಾ ಕುಕ್ಕುರೇ ಪಾರ ಕೈಲಾ ॥[೪೭]

ಅದು ಒರಿಯಾರಾಜ್ಯದ ನದೀತೀರ. ಅಂಬಿಗನು ದೋಣಿಯನ್ನು ಹತ್ತಲು ನಾಯಿಗೆ ನಕಾರವೆತ್ತಿದಾಗ ಆತನಿಗೆ ಶಿವಾನಂದಸೇನರು ಹತ್ತುಪಣ ಕವಡೆಯನ್ನು ನೀಡಿ ಒಪ್ಪಿಸುತ್ತಾರೆ. ನಂತರದಲ್ಲಿ, ಶ್ರೀಚೈತನ್ಯ ಮಹಾಪ್ರಭುಗಳಿಂದ ನಾಯಿಗೂ ಅನುಗ್ರಹವಾಗಿ ಮೋಕ್ಷವನ್ನು ಪಡೆಯುತ್ತದೆ. ಈ ಘಟನೆಯು ದಾಸಪಂಥದಲ್ಲಿ ವಾದಿರಾಜರಿಂದ ಅನುಗ್ರಹವನ್ನು ಪಡೆಯುವ ಇಲಿಯ ವಿಚಾರವೊಂದನ್ನು ನೆನಪಿಸುತ್ತದೆ.

ದಾಸಸಾಹಿತ್ಯದಲ್ಲಿ ವಾದಿರಾಜರು ಮಾಡಿದ ಗಿಣಿಚರಿತೆಯ ಸೊಗಸು ಸಾಹಿತ್ಯಮೌಲ್ಯವನ್ನು ಹೆಚ್ಚಿಸುತ್ತಾ ಹೋಗುತ್ತದೆ. ಇಲ್ಲಿಯ ಗಿಣಿಯು ಕೇವಲ ಗಿಣಿಯಲ್ಲ. ಅದಕ್ಕೊಂದು ತತ್ವಾರ್ಥವನ್ನು ಹೊದಿಸುತ್ತಾರೆ.

ಗಿಣಿಯೆ ನಿನಗೇನು ಬೇಕದನೀವೆ ಹಯವದನ
ನೆನಿಪ ಹರಿಯನು ಕರೆತಾರೆ ಹರಿಯೇ ॥

ಈ ಅಪೂರ್ವ ಚಿಂತನೆಯ ಗಿಣಿಯು ಅವರ ಪಾಲಿಗೆ ಮೂರು ಬಣ್ಣದ ಕೊರಳ ತಿರಿಯುಳ್ಳ ಗಿಣಿ, ಪಚ್ಚೆಯ ಬಣ್ಣದ ಗರಿಯ ಸಿರಿಯುಳ್ಳ ಗಿಣಿ, ಕಾಮನಿಗೆ ರಥವಾಗಿ, ಹರಿಯ ವಾಹನವಾದ ಗರುಡನ ಕುಲದಲ್ಲಿ ಉದ್ಭವಿಸಿದ ಗಿಣಿ, ಮಧುರಮಾತಿನ ಗಿಣಿ, ಗಗನದೆಡೆ ನೋಡುವ ಗಿಣಿ.....ಹೀಗೆ ಗಿಣಿಯನ್ನು ಹೊಗಳಿ, ಅಂತಹ ಗಿಣಿಯೊಂದಿಗೆ ಆಗಸದಲ್ಲಿರುವ ಹರಿಯನ್ನು ತಂದುಕೊಡೆಂದು ಕೇಳಿಕೊಳ್ಳುತ್ತಾರೆ. ಜೊತೆಗೆ, ಬೇಡಿದುದೆಲ್ಲವನ್ನು ಕೊಡುವ ಗಿಣಿಯೆಂಬಲ್ಲಿ ಹೊಸ ಹೊಗಳಿಕೆಯನ್ನು ಮೂಡಿಸುತ್ತಾರೆ.

ಚೈತನ್ಯಪಂಥದಲ್ಲಿ ಪಕ್ಷಿಗಳ ವಿವರವು ಒಂದಿಷ್ಟು ಸಿಗುವುದಿದ್ದರೆ ಅದು ಕುಲಿಯಾಗ್ರಾಮದ ವನವರ್ಣನೆಯಲ್ಲಿ, ಚೈತನ್ಯರು ವೃಂದಾವನಕ್ಕೆ ಹೊರಟಿರುವ ಸನ್ನಿವೇಶದಲ್ಲಿ.

ರತ್ನ ಬಾನ್ಧಾ ಘಾಟ, ತಾಹೇ ಪ್ರಪುಲ್ಲ ಕಮಲ ।
ನಾನಾ ಪಕ್ಷಿ ಕೋಲಾಹಲ ಸುಧಾ ಸಮಜಲ ॥[೪೮]

ಇಲ್ಲಿಯ ವಿಶೇಷವೆಂದರೆ, ಪಕ್ಷಿಗಳ ಕಲರವಕ್ಕೆ ಸ್ವಲ್ಪಮಾತ್ರ ಆದ್ಯತೆಯನ್ನು ಕೊಟ್ಟು, ಪ್ರಕೃತಿಯ ಇತರ ವಿವರಗಳೇ ಹೆಚ್ಚಾಗಿ ವರ್ಣಿತವಾಗಿದೆ. ಸರೋವರಗಳು, ಆಭರಣಗಳಿಂದ ಅಲಂಕೃತವಾದ ಮಣಿಕಲ್ಲುಗಳಿಂದ ಕೂಡಿದ ಸ್ನಾನಘಟ್ಟ, ಸರೋವರದಲ್ಲಿ ಅರಳಿರುವ ಕಮಲಪುಷ್ಪ ಮೊದಲಾದವುಗಳನ್ನು ವರ್ಣಿಸುವ ಆತುರದಲ್ಲಿ ಪಕ್ಷಿಗಳ ಕಲರವಕ್ಕೆ ಪ್ರಾಮುಖ್ಯತೆ ಕಡಿಮೆಯಾಗಿ ತೋರುತ್ತದೆ.

ದಾಸಸಾಹಿತ್ಯವು ಕೋಳಿಯ ಕೂಗಿಗೂ ವಿಶೇಷಾರ್ಥವನ್ನು ಕಲ್ಪಿಸಿಬಿಡುತ್ತದೆ. ಆ ಕುರಿತಾದ ವಿಶ್ಲೇಷಣೆಯೊಂದು ಪುರಂದರದಾಸರ ರಚನೆಯಲ್ಲಿ ಸಿಗುತ್ತದೆ.

ಕೋಳಿ ಕೂಗಿತಲ್ಲಾ ಲಕ್ಷ್ಮೀ
ಲೋಲನಲ್ಲದೆ ಅನ್ಯರಾರಿಲ್ಲವೆಂದು ॥ –ಪುರಂದರದಾಸರು

ಇಲ್ಲಿ, ಕೋಳಿಯು ಮೊದಲ ಜಾವದಲ್ಲಿ ಮುಕುಂದನೆಂದೂ. ಎರಡನೆಯ ಜಾವದಲ್ಲಿ ವೆಂಕಟಾದ್ರಿಯ ಒಡೆಯನೆಂದೂ, ಮೂರನೆಯ ಜಾವದಲ್ಲಿ ಮುರಾರಿಯೆಂದೂ, ನಾಲ್ಕನೆಯ ಜಾವದಲ್ಲಿ ನಾರಾಯಣನೆಂದೂ, ಐದರಲ್ಲಿ ಅನಂತನೆಂದೂ, ಆರರಲ್ಲಿ ಅಳಗಾದ್ರಿವಾಸನೆಂದೂ, ಏಳರಲ್ಲಿ ಕಾಶಿಯ ಬಿಂದುಮಾಧವನೆಂದೂ ಹಾಗೂ ಎಂಟರಲ್ಲಿ ಪುರಂದರ ವಿಠಲನೆಂದೂ ತನ್ನ ರೆಕ್ಕೆಯನ್ನು ಪಸರಿಸಿ ಲೋಕಕ್ಕೆ ಸಾರುತ್ತದೆಂದು ದಾಸರಿಲ್ಲಿ ವ್ಯಾಖ್ಯಾನಿಸುತ್ತಾರೆ.[೪೯]

ಕುಲಕಸುಬಾದ ಕುರಿಕಾಯಕವನ್ನು ಅಭಿಮಾನದಿಂದ ಹೇಳಹೊರಟ ಕನಕದಾಸರು ಹಲವು ವಿಧದ ಪ್ರಾಣಿಗಳ ಹೆಸರನ್ನಿಲ್ಲಿ ಪ್ರಸ್ತಾಪಿಸುತ್ತಾರೆ.

ಅಷ್ಟಮದ ಮತ್ಸರಗಳೆಂಬ ಟಗರುಗಳು
ದೃಷ್ಟಿ ಜೀವಾತ್ಮನೆಂಬಂತೆ ಆಡು
ಸೃಷ್ಟಿ ಸಿದ್ಧ ಪ್ರಸಿದ್ಧವೆಂತೆಂಬ ಹೋತಗಳು

ಈ ಮೂಲಕವಾಗಿ ಜೀವನದ ಸತ್ಯಸಂದೇಶವನ್ನು ಸಮಾಜದ ಮುಖಕ್ಕೆ ತಿಳಿಸಿಕೊಡುವುದು ದಾಸರ ಧ್ಯೇಯವಾಗಿರುತ್ತದೆ. ಮೋಹನದಾಸರು, 'ತುರುಕರಿಲ್ಲದ ಊರೊಳು ಇರಬಾರದು, ತುರುಕರು ಜಗದೊಳು ಪರಮಶ್ರೇಷ್ಠ ಕಾಣೋ' ಎಂಬಲ್ಲಿ 'ತುರುಕರು' ಎಂಬ ಶಬ್ದಕ್ಕೆ 'ಆಕಳಕರು' ಎಂದು ಅರ್ಥಮಹಿಮೆಯನ್ನು ಕೊಟ್ಟಿದ್ದಾರೆ. ಅಲ್ಲದೆ ಸಮಾಜಕ್ಕೆ ಗೋಮಯ ಹಾಗೂ ಗೋಮೂತ್ರದ ಪಾವಿತ್ರ್ಯತೆಯನ್ನು ಸಾರುವ ಉದ್ದೇಶ ದಾಸರದ್ದು. ಅಂತೆಯೇ, ತುರುಕರುವಿನ ಕೂದಲನ್ನು ಮುತ್ತೈದೆಯೊಬ್ಬಳು ತನ್ನ ತುರುಬಿಗೆ ಸಿಕ್ಕಿಸಿಕೊಂಡರೆ, ಆಕೆಯ ಕುಂಕುಮಭಾಗ್ಯ ದೀರ್ಘವಾಗಿ ಉಳಿಯುವುದೆಂಬ ನಂಬಿಕೆಯನ್ನು ಸಮಾಜದ ಮುಖಕ್ಕೆ ತಿಳಿಸಿಕೊಡುತ್ತಾರೆ. ಹೀಗೆ ದಾಸಪಂಥದಿಂದ ನಿರಂತರವಾಗಿ ಗೋಪೂಜೆಯು ನೆರವೇರುತ್ತದೆ. ಚೈತನ್ಯಪಂಥದಲ್ಲೂ ಗೋವಿನ ಕುರಿತಾದ ಪೂಜ್ಯಭಾವನೆಯು ವ್ಯಕ್ತವಾಗುತ್ತದೆ. ಅವರು ವಿಧರ್ಮೀಯರಿಗೂ ಕೂಡ ಗೋವಿನ ಕುರಿತು ಮಾತೃಸ್ಥಾನವನ್ನು ಕಲ್ಪಿಸಿಕೊಟ್ಟು, ಅವರನ್ನು ಹರಿನಾಮ ಸಂಕೀರ್ತನೆಯ ಚಳುವಳಿಗೆ ಪಾಲ್ಗೊಳ್ಳುವಂತೆ ಮಾಡುತ್ತಾರೆ.

ದಾಸಶ್ರೇಷ್ಠರಿಗೆ ಭಗವಂತನು ಕೇವಲ ಗೋಮುಖದಲ್ಲಿ ಮಾತ್ರ ಗೋಚರಿಸಲಿಲ್ಲ. ವಾದಿರಾಜರಿಗೆ ಕುದುರೆಯ ರೂಪದಿಂದ, ಶ್ರೀಪಾದರಾಜರಿಗೆ ಭ್ರಮರದ ರೂಪದಿಂದ, ರಾಮದಾಸರಿಗೆ ನಾಯಿಯ ರೂಪದಿಂದ ಭಗವಂತನು ತೋರಿಬಂದ. ಏನಿದ್ದರೂ ಇವೆಲ್ಲವು ಪಕ್ಷಿ, ಪ್ರಾಣಿ, ಹಾಗೂ ಪ್ರಕೃತಿಯ ಆರಾಧನೆಗಾಗಿ ನಡೆದಿರುವಂತಹುದು. ಆದರೆ ದಾಸಪಂಥವು ಬರಗಾಲದ ನೆವವೊಡ್ಡಿ ಇಳೆಗಾಗಿ ಮಳೆಯನ್ನು ಪ್ರಾರ್ಥಿಸಿ, ಒಣಗಿದ ನೆಲವನ್ನು ಹಸನುಮಾಡುವ ಕಲ್ಪನೆ ನಿಸರ್ಗಪ್ರೇಮವೂ ಹೌದು; ನಿಸರ್ಗಭಕ್ತಿಯೂ ಹೌದು.

ದಾಸಪಂಥದ ನಿಸರ್ಗಪ್ರೀತಿಯ ದಿವ್ಯಸಾಕ್ಷಾತ್ಕಾರವಾಗುವುದು ತುಳಸಿಯ ಪೂಜೆಯಲ್ಲಿ. ಸುರಾಸುರರು ಹಾಲ್ಗಡಲನ್ನು ಕಡೆದಾಗ ಅಮೃತಕಲಶವು ಹೊರಬಂದಿತು. ಶ್ರೀಮನ್ನಾರಾಯಣನು ಈ ಕಲಶವನ್ನು ಕೈಗೆತ್ತಿಕೊಂಡಾಗ ಆತನ ಕಣ್ಣುಗಳಿಂದ ಆನಂದಭಾಷ್ಪಗಳು ಆ ಅಮೃತದ ಕಲಶಕ್ಕೆ ಬೀಳಲಾಗಿ ಸಣ್ಣಗಿಡವೊಂದು ಹುಟ್ಟಿಕೊಂಡಿತು. ಅದುವೇ ತುಳಸೀಗಿಡವೆಂದು ಪ್ರಸಿದ್ಧಿಯನ್ನು ಪಡೆದುಕೊಂಡಿತು. ಮುಂದಕ್ಕೆ ಈ ಗಿಡವು ಕೇವಲ ಪೌರಾಣಿಕ ಕಥೆಯಾಗಿರದೆ, ಔಷಧಿಯಾಗಿ, ಶುದ್ಧಗಾಳಿ ಸೇವನೆಯಾಗಿ, ವೈಜ್ಞಾನಿಕವಾಗಿಯೂ ಮುಖ್ಯವಾಯಿತು. ಈ ಎಲ್ಲಾ ದೃಷ್ಟಿಯನ್ನಿರಿಸಿಕೊಂಡು ವಿಜಯದಾಸರು,

ತುಳಸಿ ಇಲ್ಲದ ಸದನ ಹೊಲೆ ಮಾದಿಗರ ಸದನ
ತುಳಸಿ ಇಲ್ಲದ ಬೀದಿ ನರಕಕೆಳಸುವ ಹಾದಿ
ತುಳಸಿ ಇಲ್ಲದ ತೀರ್ಥವೆಂದಿಗಿದ್ದರು ವ್ಯರ್ಥ
.... ॥ –ವಿಜಯದಾಸರು

ಎಂದರು. ಪ್ರಸನ್ನವೆಂಕಟದಾಸರು, 'ಸಾಮಾನ್ಯವಲ್ಲ ತುಳಸಿಯ ವನವ ಸೋಂಕಿ ಬಂದಾ ಮರುತದಿಂದ ದೇಶ ಗ್ರಾಮಗಳು ಪಾವನವು' ಎಂಬುದಾಗಿ ತುಳಸೀಮಹಾತ್ಮೆಯನ್ನು ವರ್ಣಿಸಲು ಮುಂದಾಗುತ್ತಾರೆ.

ಒಟ್ಟಿನಲ್ಲಿ ಮುಂಬರುವ ಪ್ರಾಕೃತಿಕ ವೈಪರೀತ್ಯಗಳನ್ನು ಭಗವದ್‌ಪ್ರಾರ್ಥನೆಯಿಂದ ತಪ್ಪಿಸಿಕೊಂಡು, ಭಗವಂತನಿಂದ ನಿರ್ಮಿತವಾದ ನಿಸರ್ಗವನ್ನು ಪೂಜಿಸಿಕೊಂಡು ಜೀವನವನ್ನು ಸ್ವೀಕರಿಸಬೇಕೆಂಬುದು ದಾಸಕುಲದ ನಿಲುವು. ಈ ಎಲ್ಲಾ ಭಾವನೆಗಳು ಚೈತನ್ಯಪಂಥದಲ್ಲಿ ಪ್ರತ್ಯಕ್ಷವಾಗಿ ತೋರಿದುದಕ್ಕಿಂತ ಹೆಚ್ಚಾಗಿ ಪರೋಕ್ಷವಾಗಿಯೂ, ಇನ್ನೂ ಕೆಲವೆಡೆ ಸಂಕ್ಷಿಪ್ತವಾಗಿಯೂ ತೋರಿಬಂದುದನ್ನು ಗಮನಿಸಬಹುದು.

೬.೧೧ : ಸಮಾಧಿ ಸಂಸ್ಕಾರಗಳು

ಭಾರತೀಯ ಸಂನ್ಯಾಸಪರಂಪರೆಯಲ್ಲಿ ಇಹಲೋಕವನ್ನು ತ್ಯಜಿಸಿದ ಸನ್ಯಾಸಿಗಳನ್ನು ಅಗ್ನಿಸ್ಪರ್ಶದ ಮೂಲಕ ಅಂತ್ಯಸಂಸ್ಕಾರವನ್ನು ಮಾಡುವ ಪದ್ಧತಿಯಿಲ್ಲ. ಅದೇನಿದ್ದರೂ ಭೂಸಮಾಧಿ ಮಾತ್ರ. ಆ ಸಮಾಧಿಯಲ್ಲಿಯೇ ವೃಂದಾವನವನ್ನು ನಿರ್ಮಿಸಿ, ಅದನ್ನೇ ಪ್ರಾರ್ಥನಾಕೇಂದ್ರವನ್ನಾಗಿ ಕಂಡುಕೊಳ್ಳುವ ಪೂಜ್ಯಕಲ್ಪನೆ ನಮ್ಮ ಭಕ್ತಸಮೂಹದ್ದು. ಈ ವಿಚಾರವನ್ನು ಬಂಗಾಳದ ಚೈತನ್ಯಪಂಥಾನುಯಾಯಿಗಳಿಗೂ ಮತ್ತು ಕರ್ನಾಟಕದ ದಾಸಪಂಥಾನುಯಾಯಿಗಳಿಗೂ ಹೋಲಿಸಿ ನೋಡಿದರೆ, ದಾಸಪಂಥದಲ್ಲಿ ಸಮಾಧಿಯೆಂಬ ಪದಬಳಕೆಯ ಬದಲು ಕಟ್ಟೆ, ಬೃಂದಾವನ ಇತ್ಯಾದಿಯಾಗಿ ಬಳಕೆಯಾಗಿದೆ. ಇದಕ್ಕೆ ವಿಜಯದಾಸರ ಕಟ್ಟೆ, ಮೋಹನದಾಸರ ಕಟ್ಟೆ, ವ್ಯಾಸರಾಯ, ವಾದಿರಾಜ, ರಾಘವೇಂದ್ರತೀರ್ಥರ ಬೃಂದಾವನಗಳೇ ಮುಖ್ಯ ಉದಾಹರಣೆಗಳು. ಆದರೂ ಚೈತನ್ಯಪರಂಪರೆಯಲ್ಲಿ ಸಿಗುವಷ್ಟು ಸಮಾಧಿಗಳ ವಿವರ ದಾಸಪಂಥದಲ್ಲಿ ಸಿಗುವುದಿಲ್ಲ. ದಾಸಪಂಥಕ್ಕೆ ಸಂಬಂಧಿಸಿದಂತೆ, ಯತಿಗಳಾದ ಶ್ರೀವಾದಿರಾಜರು ಮತ್ತು ಶ್ರೀರಾಘವೇಂದ್ರ ತೀರ್ಥರು ಸಶರೀರವಾಗಿ ವೃಂದಾವನ ಪ್ರವೇಶಮಾಡಿದ ವಿಚಾರಕ್ಕೆ ಸಮಾನವಾಗಿ ಚೈತನ್ಯಪಂಥದಲ್ಲೂ ಉದಾಹರಣೆಗಳಿಲ್ಲ. ಆದರೆ ಚೈತನ್ಯಪಂಥದಲ್ಲಿ

ಸಿಗುವ ಸಮಾಧಿಗಳ ಅಧ್ಯಯನವೇ ಬಹಳ ಹಿರಿದಾದ ವ್ಯಾಪ್ತಿಯನ್ನು ಪಡೆಯುತ್ತದೆ. ಈ ನೆಲೆಯಲ್ಲಿ ಚೈತನ್ಯಪಂಥಾನುಯಾಯಿಗಳ ಕೆಲವೊಂದು ಸಮಾಧಿಗಳ ವಿವರಣೆಯನ್ನು ಮಾತ್ರ ಇಲ್ಲಿ ಸ್ವೀಕರಿಸಲಾಗಿದೆ.

ಮಧುಪಂಡಿತ ಸಮಾಧಿ

ಮಧುಪಂಡಿತರು ಗದಾಧರಪಂಡಿತರ ಅನುಯಾಯಿಗಳಾಗಿದ್ದವರು. ಇವರ ಸಮಾಧಿಯು ವೃಂದವಾನದ ಬಳಿಯಿರುವ ಗೋಪಿನಾಥ ದೇವಾಲಯದ ಪಕ್ಕದಲ್ಲಿದೆ.

ಜೀವ, ರೂಪ, ಭೂಗರ್ಭ ಹಾಗೂ ಇತರ ಗೋಸ್ವಾಮಿಗಳ ಸಮಾಧಿಗಳು

ಸೇವಾಕುಂಜದಿಂದ ಸುಮಾರು ೨೦೦ ಮೀಟರ್ ದೂರದಲ್ಲಿರುವ, ಹಾಗೂ ಜೀವ ಗೋಸ್ವಾಮಿಗಳಿಂದ ಸ್ಥಾಪನೆಗೊಳಗಾದ ರಾಧಾದಾಮೋದರ ದೇವಾಲಯದ ಪಕ್ಕದಲ್ಲೇ ಈ ಮೂವರು ಗೋಸ್ವಾಮಿಗಳ ಸಮಾಧಿಯಿದೆ. ೧೫೪೨ ರಲ್ಲಿ ಗೋಪಾಲಭಟ್ಟ ಗೋಸ್ವಾಮಿಗಳಿಂದ ಪ್ರತಿಷ್ಠಾಪನೆಗೊಂಡ ರಾಧಾರಮಣ ದೇವಾಲಯದ ಪಕ್ಕದಲ್ಲಿಯೇ ಗೋಪಾಲ ಭಟ್ಟ ಗೋಸ್ವಾಮಿಗಳ ಸಮಾಧಿಯೂ ಇದೆ. ಇಷ್ಟೇ ಅಲ್ಲದೆ, ವೃಂದಾವನದ ಏಳು ಮುಖ್ಯ ದೇವಾಲಯಗಳಲ್ಲಿ ಒಂದಾದ ರಾಧಾಶ್ಯಾಮಸುಂದರ ದೇವಾಲಯದ ಅರ್ಚಕರಾಗಿದ್ದ ಶ್ಯಾಮಾನಂದಪಂಡಿತರ ಸಮಾಧಿಯು ಇದೇ ದೇವಾಲಯುದ ಬಳಿಯಿದೆ. ಇಲ್ಲಿಯೇ ಹತ್ತಿರದಲ್ಲಿ ರಾಧಾಕೃಷ್ಣರು ನೃತ್ಯ ಹಾಗೂ ಪ್ರಣಯಲೀಲೆಗಳ ಬಳಿಕ ವಿಶ್ರಾಂತಿ ಪಡೆಯುತ್ತಿದ್ದರೆಂದು ಹೇಳಲಾಗುವ 'ನಿಧಿವನ'ದ ಪ್ರವೇಶದ್ವಾರದ ಪಕ್ಕದಲ್ಲೇ ಹರಿದಾಸ ಗೋಸ್ವಾಮಿಗಳ ಸಮಾಧಿಯೂ ಇದೆ.

ಚಾಂದ್‌ಖಾಜಿಯ ಸಮಾಧಿ :

ಶ್ರೀ ಚೈತನ್ಯ ಮಹಾಪ್ರಭುಗಳ ಲೀಲೆಗಳಲ್ಲಿ ಚಾಂದ್‌ಖಾಜಿಯದು ಒಂದು ಪ್ರಮುಖ ಪಾತ್ರವಾಗಿರುವುದರಿಂದ, ಚಾಂದ್‌ಖಾಜಿಯ ಸಮಾಧಿಯು ಬಂಗಾಳದ ಚರಿತ್ರೆಯಲ್ಲಿ ಒಂದು ಪ್ರೇಕ್ಷಣೀಯ ಸ್ಥಳವಾಗಿದೆ. ಇದು, ಯೋಗಪೀಠದಿಂದ ಒಂದು ಕಿ.ಮೀ ದೂರದಲ್ಲಿದ್ದರೆ, ಇಸ್ಕಾನ್ ದೇವಾಲಯದಿಂದ ಮೂರೂವರೆ ಕಿ.ಮೀ. ದೂರದಲ್ಲಿದೆ. ರಸ್ತೆಯ ಎಡಕ್ಕಿರುವ ಈ ಸಮಾಧಿಯು, ಯೋಗಪೀಠದ ಬಳಿಕ ಸಿಗುವ ಮೊದಲ ಹಳ್ಳಿಯ ಮಧ್ಯದಲ್ಲಿದೆ. ವಿಶೇಷವೆಂದರೆ, ಈ ಸಮಾಧಿಯು ಶಿಲೆಯಿಂದ ನಿರ್ಮಾಣವಾಗಿದ್ದು, ಈ ಶಿಲಾಮಧ್ಯದಿಂದ ಎರಡು ಮರಗಳು ಬೆಳೆದು ನಿಂತಿವೆ. ಒಂದನೆಯದು ಚಂಪಕವೃಕ್ಷ (ಸಂಪಿಗೆಮರ)ವಾದರೆ, ಇನ್ನೊಂದು ಅದನ್ನು ಆವರಿಸಿಕೊಂಡು ಬೆಳೆದಿರುವ ಬೇವಿನಮರ. ಐನೂರು ವರ್ಷಗಳಷ್ಟು ಹಳೆಯದೆಂದು ಹೇಳಾಲಾಗುವ ಈ ಸಂಪಿಗೆಮರವನ್ನೇ ಚಾಂದ್‌ಖಾಜಿಯೆಂದು ಭಕ್ತರು ಪರಿಗಣಿಸುತ್ತಾರೆ. ಅದನ್ನು ಸುತ್ತಿಕೂಂಡು ಬೆಳೆದಿರುವ ಬೇವಿನಮರವನ್ನು ನಿತ್ಯಾನಂದಪ್ರಭುಗಳೆಂದು ಭಕ್ತರು ಹೇಳುತ್ತಾರೆ. ಸಂಪಿಗೆಮರದ ಕಾಂಡವು ಟೊಳ್ಳಾಗಿದ್ದರೂ, ವರ್ಷವಿಡೀ ಹೂವನ್ನು ಬಿಡುತ್ತಿರುತ್ತದೆ.

ಚಾಂದ್‌ಖಾಜಿಯ ಸಮಾಧಿಯಿರುವ ಹಳ್ಳಿಯನ್ನು ಚಾಂದ್‌ಖಾಜಿಯ ಹಳ್ಳಿಯೆಂದೇ ಕರೆಯುತ್ತಾರೆ. ಭಕ್ತರ ಪ್ರಕಾರ ಈ ಹಳ್ಳಿಯು ಮಧುರೆಯಿಂದ ಬೇರೆಯಲ್ಲ. ಹಾಗಾಗಿ ಇದು ಭಕ್ತಿಕೇಂದ್ರ. ನವದ್ವೀಪದ ಮಾಹಾತ್ಮೆಯ

ಪ್ರಕಾರ, ಈ ಸಮಾಧಿಯನ್ನು ನೋಡುವವರು ವೃದ್ಧಾಪ್ಯ ಮತ್ತು ಸಾವಿನಿಂದ ಮುಕ್ತರಾಗುತ್ತಾರೆ. ವಿಶೇಷವೆಂದರೆ, ಭಕ್ತರು ಚಾಂದ್‌ಖಾಜಿಯನ್ನು ಕೃಷ್ಣಲೀಲೆಯ ಕಾಲದ ಕಂಸನೆಂದೂ, ಹುಸೇನ್‌ಷಾನನ್ನು ಜರಾಸಂಧನೆಂದೂ ಪರಿಗಣಿಸುತ್ತಾರೆ. ಶ್ರೀಕೃಷ್ಣನಲ್ಲಿ ದ್ವೇಷವನ್ನು ಕಟ್ಟಿಕೊಂಡ ಕಂಸನು, ಕೃಷ್ಣನಿಂದಲೇ ಕೊಲ್ಲಲ್ಪಟ್ಟು ಮುಕ್ತನಾದರೆ, ಇಲ್ಲಿ ಅದೇ ಕಂಸನಾದ ಖಾಜಿಯು ಗೌರಾಂಗದೇವನಲ್ಲಿ ತಪ್ಪನ್ನೆಸಗಿ, ಗೌರಾಂಗದೇವನಿಂದ ಕೃಷ್ಣಪ್ರೇಮದ ಪರಮಸವಿಯ ಔನ್ನತ್ಯವನ್ನು ಪಡೆಯುತ್ತಾನೆಂಬುದು ಅಲ್ಲಿಯ ಜನನಂಬಿಕೆ.

ಶ್ರೀಲ ಪ್ರಭುಪಾದರ ಸಮಾಧಿ

ಚೈತನ್ಯ ಪಂಥಾನುಯಾಯಿಗಳ ಸಮಾಧಿಯನ್ನು ಗಮನಿಸಿದರೆ ಈ ಸಮಾಧಿಯು ಇತ್ತೀಚಿನದು. ವೃಂದಾವನದ ಶ್ರೀಕೃಷ್ಣ ಬಲರಾಮ ಮಂದಿರದ ಎದುರು ಅಮೃತ ಶಿಲೆಯಿಂದ ನಿರ್ಮಿಸಲಾದ, ಇಸ್ಕಾನ್ ಸಂಸ್ಥಾಪನಾಚಾರ್ಯ ಶ್ರೀಲ ಪ್ರಭುಪಾದರ ಭವ್ಯಸಮಾಧಿಯು ಬಲು ಆಕರ್ಷಣೀಯ. ಈ ಸಮಾಧಿಯ ಮೇಲೆ ಪ್ರಭುಪಾದರ ಒಂದು ವಿಗ್ರಹ ಸ್ಥಾಪಿಸಲಾಗಿದೆ. ಪ್ರತೀವರ್ಷ ಕಾರ್ತಿಕಮಾಸದಲ್ಲಿ ಪ್ರಭುಪಾದರ ತೀರೋಭಾವ ಮತ್ತು ಜನ್ಮಾಷ್ಟಮಿಯಂದು ಆವಿರ್ಭಾವ ಕಾರ್ಯಕ್ರಮವನ್ನು ಇಲ್ಲಿಯೇ ಆಚರಿಸಲಾಗುತ್ತದೆ.

ಒಟ್ಟಿನಲ್ಲಿ ಸಮಾಧಿ ಅಥವಾ ವೃಂದಾವನವೆಂಬಂತಹ ಸಂಸ್ಕಾರವು ಎರಡು ಪಂಥಗಳಲ್ಲಿ ಸಮಾನವಾಗಿ ಕಂಡು ಕೊಂಡು ಬಂದಿಲ್ಲ. ಆದರೆ ದಾಸಪಂಥದಲ್ಲಿ ಕೆಲವೊಂದು ಅನುಭಾವಿಗಳು ಅದೃಶ್ಯರಾಗಿ ಹೋದರೆನ್ನಲಾಗುತ್ತಿದೆ. ಆದರೂ ಉಳಿದವರ ಸಮಾಧಿಯಾದರೂ ಗೋಚರವಾಗಬೇಕಿತ್ತು. ಆದರೆ ಅದೆಲ್ಲವು ಅಸ್ಪಷ್ಟವಾಗುತ್ತದೆ. ದಾಸಪಂಥಕ್ಕೆ ಅನ್ವಯಿಸುವಂತೆ, ವೃಂದಾವನವನ್ನು ಸಶರೀರವಾಗಿ ಪ್ರವೇಶಿಸಿದ ವಿವರವು ಚೈತನ್ಯಪಂಥದಲ್ಲಿ ನೋಡಲು ಸಿಗುವುದಿಲ್ಲ. ಒಟ್ಟಿನಲ್ಲಿ, ಸಮಾಧಿ ಸಂಸ್ಕಾರವೆನ್ನುವುದಕ್ಕೆ ಹೆಚ್ಚಿನ ಉದಾಹರಣೆಗಳು ಸಿಗುವುದು ಮಾತ್ರ ಚೈತನ್ಯಪಂಥದಲ್ಲಿ ಎನ್ನಬೇಕು.

೬.೧೨ : ಭಾಷೆ ಮತ್ತು ಸಾಹಿತ್ಯ

ಕರ್ನಾಟಕದ ಹರಿದಾಸ ಕೀರ್ತನೆಗಳ ಭಾಷೆ ಮತ್ತು ಸಾಹಿತ್ಯವನ್ನು ಚೈತನ್ಯಪಂಥದ ಸಾಹಿತ್ಯಕ್ಕೆ ಹೋಲಿಸಿದರೆ ಸಾಮ್ಯ ಮತ್ತು ಭಿನ್ನತೆಯು ಮಿಶ್ರವಾಗಿ ಕಾಣುತ್ತದೆ. ಹರಿದಾಸ ಸಾಹಿತ್ಯದಲ್ಲಿ ಭಾಷೆ ಮತ್ತು ಸಾಹಿತ್ಯ ವೈವಿಧ್ಯಮಯ. ಕೀರ್ತನೆಗಳಲ್ಲಿ ಅಡಗಿರುವ ಸಾಹಿತ್ಯಕ ಭಾಷೆಯನ್ನು ವಿಶ್ಲೇಷಿಸುವುದು ತೊಡಕಿನ ಕೆಲಸವಾದರೂ ಅಧ್ಯಯನದ ನೆಲೆಯಲ್ಲಿ ಅನಿವಾರ್ಯವೆನಿಸುತ್ತದೆ. ದಾಸಸಾಹಿತ್ಯದಲ್ಲಿ ಬಳಕೆಯಾಗಿರುವ ಶಬ್ದರಾಶಿಗಳಲ್ಲಿ ಹೊಸಗನ್ನಡ ಶಬ್ದರೂಪಗಳೊಂದಿಗೆ ನಡುಗನ್ನಡದ ಶಬ್ದರೂಪಗಳು ಪ್ರಯೋಗವಾದುದರಿಂದ ಅದು ಅಧ್ಯಯನಾಸಕ್ತಿಯನ್ನು ಹೆಚ್ಚಿಸುತ್ತದೆ. ಇದಕ್ಕೆ ಕಾರಣವೆಂದರೆ ದಾಸಪಂಥದಲ್ಲಿ ಕಾಣುವ ಹೆಚ್ಚಿನ ದಾಸರುಗಳು ಹದಿನೈದನೆಯ ಶತಮಾನದಿಂದ ಹದಿನೆಂಟನೆಯ ಶತಮಾನದ ತನಕ ಕಾಣಿಸಿಕೊಂಡವರು.

ಚೈತನ್ಯಪಂಥದಲ್ಲಿ ಚೈತನ್ಯರ ಆವಿರ್ಭಾವಕ್ಕಿಂತ ಮೊದಲೇ ರಾಧಾಕೃಷ್ಣರಿಗೆ ಸಂಬಂಧಿಸಿದಂತೆ ಪರಿಣಾಮಕಾರಿಯಾದ ಸಾಹಿತ್ಯ ನಿರ್ಮಾಣವಾಗಿತ್ತು. ಈ ಪಂಥದ ಅನುಯಾಯಿಗಳಲ್ಲೊಬ್ಬರಾದ ಕುಲೀನ

ಗ್ರಾಮದ ಗುಣರಾಜಖಾನ್ ಎಂಬವರು 'ಶ್ರೀಕೃಷ್ಣ ವಿಜಯ' ಎಂಬ ಪದ್ಯಕೃತಿಯನ್ನು ಬಂಗಾಳೀಭಾಷೆಯಲ್ಲಿ ಬರೆದಿದ್ದಾರೆ ಎಂದು ಚೈತನ್ಯ ಚರಿತಾಮೃತವು ಹೇಳುತ್ತದೆ.[೩೦] ಇದರ ರಚನೆಯು ಶಕಾಬ್ದ ೧೩೯೫ (ಕ್ರಿ. ಶ. ೧೪೭೩)ರಲ್ಲಿ ಆಯಿತೆಂದು, ಬಂಗಾಳೀಭಾಷೆಯ ಮೊದಲ ಪದ್ಯಕೃತಿಯೆಂದು ಹೇಳಲಾಗುತ್ತಿದೆ. ಇದಲ್ಲದೆ, ಬಂಗಾಳ ಸಾಹಿತ್ಯದಲ್ಲಿ ವಿದ್ಯಾಪತಿ, ಜಯದೇವ ಹಾಗೂ ಚಂಡೀದಾಸರೆಂಬೀ ಕವಿಗಳ ಗ್ರಂಥಗಳು ಹೆಚ್ಚಿನ ಪ್ರಭಾವ ಬೀರಿದವುಗಳು. ಅವರೆಲ್ಲರ ಸಾಹಿತ್ಯವೂ ರಾಧಾಕೃಷ್ಣರ ಪ್ರೇಮಲೀಲೆಗಳ ಕುರಿತಂತೆಯೇ ನಿರ್ಮಾಣವಾಗಿತ್ತು. ಅಲ್ಲದೆ ಅವರೆಲ್ಲರ ರಚನೆಗಳಲ್ಲಿ ಛಂದಸ್ಸಿಗೆ ಹೆಚ್ಚಿನ ಆದ್ಯತೆಯಿಲ್ಲದಿದ್ದರೂ ಅಲಂಕಾರ ಮತ್ತು ಭಾವುಕತೆಗೆ ಹೆಚ್ಚಿನ ಪ್ರಾಮುಖ್ಯವನ್ನು ನೀಡಲಾಗಿತ್ತು. ಚೈತನ್ಯ ಚರಿತಾಮೃತದಲ್ಲಿ ಬರುವ 'ಶ್ರೀರಾಧಾಯಾಃ ಪ್ರಣಯ ಮಹಿಮಾ....... ಭಾವಾಢ್ಯಃ ಸಮಜನಿ ಶಚೀಗರ್ಭಸಿನ್ಧೌ ಹರೀನ್ದುಃ'[೩೧] ಚೈತನ್ಯರು ಶಚೀದೇವಿಯ ಗರ್ಭದಲ್ಲಿ ಜನಿಸುವ ಸಂದರ್ಭವನ್ನು 'ಶರಧಿಯಿಂದ ಚಂದ್ರನು ಉದಯಿಸಿದ ಹಾಗೆ' ಎನ್ನುವಲ್ಲಿ ನಿರೂಪಿತವಾಗಿರುವ ಅಲಂಕಾರಿಕ ಕಾವ್ಯಾರ್ಥವು ಈ ಮೇಲಿನ ಮಾತನ್ನು ಪುಷ್ಟೀಕರಿಸುತ್ತದೆ.

ಕನ್ನಡಸಾಹಿತ್ಯದಂತೆಯೇ ಬಂಗಾಳಸಾಹಿತ್ಯದಲ್ಲೂ ವ್ಯಾಕರಣಕ್ಕೆ ಆದ್ಯತೆಯಿತ್ತು. ಅಲ್ಲಿ 'ಪಂಜೀಟೀಕಾ' ಎಂಬುದು ಪ್ರಸಿದ್ಧವಾದ ವ್ಯಾಕರಣಗ್ರಂಥವಾಗಿತ್ತು. ಈ ಗ್ರಂಥವನ್ನು ಚೈತನ್ಯ ಮಹಾಪ್ರಭುಗಳು ಸ್ಪಷ್ಟವಾಗಿ ವ್ಯಾಖ್ಯಾನಿಸಿದ್ದಾರೆಂದು ಚೈತನ್ಯ ಚರಿತಾಮೃತದ ಆದಿಲೀಲೆಯ ೧೫ ನೆಯ ಅಧ್ಯಾಯವು ಹೇಳುತ್ತದೆ. ಅಂತೆಯೇ, ಕನ್ನಡದ ದಾಸವರೇಣ್ಯರಿಗೆ ವ್ಯಾಕರಣದ ಕುರಿತಾಗಿ ಅನುಭವವಿದ್ದಿತ್ತೆಂಬುದಕ್ಕೆ ಅವರು ರಚಿಸಿದ ಕೀರ್ತನೆಗಳೇ ಸಾಕ್ಷಿಯಾಗುತ್ತವೆ. ಅಲ್ಲದೆ ಅವರ ಕೀರ್ತನೆಗಳಲ್ಲಿ ತೋರುವ ಭಾಷಾಪ್ರಯೋಗ ಮತ್ತು ವ್ಯಾಕರಣ ವಿಚಾರಗಳು ಹೆಚ್ಚಿನ ಅಧ್ಯಯನಕ್ಕೂ ಯೋಗ್ಯವಾಗುತ್ತವೆ. ಆ ಕುರಿತಾಗಿ ಒಂದಿಷ್ಟು ಗಮನಿಸುವುದಾದರೆ,

೧. ಸ್ವರಾಂತವಾದ ವ್ಯಂಜನಾಂತ ಪದಗಳು

ಸ್ವರಾಂತ		ವ್ಯಂಜನಾಂತ	
ಉ	>	ನ	(ನಾನು, ನೀನು)
ಉ	>	ಣ	(ಕಣ್ಣು, ಹೆಣ್ಣು)
ಉ	>	ಲ	(ಕಾಲು, ಪಾಲು)
ಉ	>	ಳ	(ತಾಳು, ಬಾಳು)
ಉ	>	ರ	(ಉಸಿರು, ಮೊಸರು)

೨. ಅನುಸ್ವಾರದ ಪದಗಳು ಅನುಸ್ವಾರ ರಹಿತ ಪದಗಳಾಗುತ್ತವೆ.

ಅನುಸ್ವಾರಪದಗಳು		ಅನುಸ್ವಾರ ರಹಿತಪದಗಳು
ತೋಂಟ	>	ತೋಟ
ತುರುಂಬು	>	ತುರುಬು

ಮುಸುಂಕು > ಮುಸುಕು

ಸೆರಂಗು > ಸೆರಗು

೩. 'ಪ'ಕಾರ ಶಬ್ದಗಳು 'ಹ'ಕಾರ ಶಬ್ದಗಳಾಗುತ್ತವೆ.

ಪಕ್ಕಿ > ಹಕ್ಕಿ

ಪೊಳೆ > ಹೊಳೆ

ಪೊತ್ತು > ಹೊತ್ತು

೪. 'ಎ'ಕಾರ ಪದಗಳು 'ಯ'ಕಾರಗಳಾಗುತ್ತವೆ.

ಕಂಡಿರೆ > ಕಂಡಿರ್‍ಯಾ

ತಂದಿರೆ > ತಂದಿರ್‍ಯಾ

೫. ಸಂಸ್ಕೃತದ ಮಹಾಪ್ರಾಣಾಕ್ಷರಗಳು ಅಲ್ಪಪ್ರಾಣಾಕ್ಷರಗಳಾಗುತ್ತವೆ.

ಘೂಕ > ಗೂಗೆ

ಢಕ್ಕೆ > ಡಕ್ಕೆ

ರೂಢಿ > ರೂಡಿ

೬. ಸಜಾತೀಯ ದ್ವಿತ್ವಾಕ್ಷರಗಳು

ಘನ್ನ (ಘನ್ನ ಮಹಿಮ)

ಶ್ರೀಧರನ್ನ (ಶ್ರೀಧರನ್ನ ಸೇವೆಗೆ)

ವಿಠಲನ್ನ (ಪುರಂದರ ವಿಠಲನ್ನ)

೭. ತತ್ಸಮಗಳು ತದ್ಭವಗಳಾಗುತ್ತವೆ.

ಲಕ್ಷ್ಮೀ > ಲಕುಮಿ (ಏನು ಧನ್ಯಳೋ ಲಕುಮಿ)

ಬ್ರಹ್ಮ > ಬೊಮ್ಮ (ಬೊಮ್ಮ ಮೂರುತಿ ಪಾದಕಮಲವ ಭಜಿಸಿ)

೮. ಸಂಖ್ಯಾವಾಚಕಗಳು.

ಸಾಮಾನ್ಯವಾಗಿ ದಾಸಕೀರ್ತನೆಗಳಲ್ಲಿ ಛಪ್ಪನ್ನ, ಬತ್ತೀಸು, ತೆತ್ತೀಸು ಶಬ್ದಗಳು ಹೇರಳವಾಗಿ ಬಳಕೆಯಾಗಿವೆ. ಇಷ್ಟೇ ಅಲ್ಲದೆ,

ಐದು ಮಂದಿ ಭಾವನವರು ಐದು ಮೈದುನರು ಕೂಡಿ
ಐದು ಪರಿ ತಾನಾಗಿ ಮೂವತ್ತೈದು ಕತ್ತಲೆಕೋಣೆ
ಗೈದುವಂತೆ ಮಾಡುವರು ಐದು ತಂದು ಬೆಚ್ಚಿಸುವರು
ಐದನೆ ಬೊಕ್ಕಸದ ಮನೆಯಲ್ಲಿದೆಯೋ ನಾ ಕಾಣೆ ॥ –ಶ್ರೀ ಗೋಪಾಲದಾಸರು

ಇಂತಹ ರಚನೆಗಳು ದಾಸಕೀರ್ತನೆಗಳಲ್ಲಿ ಕಾಣಸಿಗುವಂತಹ ವ್ಯಾಕರಣ ವಿಚಾರಗಳು. ಇಂತಹ ವಿಚಾರಗಳು ಚೈತನ್ಯಪಂಥದಲ್ಲಿ ಅಭಾವವೆಂದು ಹೇಳಲಿಕ್ಕಾಗುವುದಿಲ್ಲ. ಯಾಕೆಂದರೆ ಚೈತನ್ಯ ಮಹಾಪ್ರಭುಗಳೇ ಸ್ವಭಾವತಃ ವ್ಯಾಕರಣ ತಜ್ಞರಾಗಿದ್ದು, ಕಾಶ್ಮೀರೀ ಪಂಡಿತರ ಗಂಗಾಸ್ತುತಿಯಲ್ಲಿರುವ ಕಾವ್ಯಾರ್ಥ ಚಿಂತನೆಯನ್ನು ಮಾಡಿ, ಅಲ್ಲಿರುವ ವ್ಯಾಕರಣ ಹಾಗೂ ಛಂದಸ್ಸಿನ ದೋಷವನ್ನು ಎತ್ತಿಹಿಡಿಯುತ್ತಾರೆ.

ಮಹತ್ತ್ವಂ ಗಂಗಾಯಾಃ ಸತತಮ್ ಇದಮ್ ಆಭಾತಿ ನಿತರಾಂ
ಯದ್ ಏಷಾ ಶ್ರೀವಿಷ್ಣೋಶ್ಚರಣ ಕಮಲೋತ್ಪತ್ತಿ ಸುಭಗಾ ।
ದ್ವಿತೀಯ ಶ್ರೀಲಕ್ಷ್ಮೀರ್ ಇವ ಸುರ ನರೈರ್ ಅರ್ಚ್ಯ ಚರಣಾ
ಭವಾನೀ–ಭರ್ತುರ್ ಯಾ ಶಿರಸಿ ವಿಭವತಿ ಅದ್ಭುತ ಗುಣಾ ॥ –ಚೈತನ್ಯ ಚರಿತಾಮೃತ.

(ಗಂಗಾಮಾತೆಯ ಗರಿಮೆ ಎಂದೆಂದಿಗೂ ಇರುತ್ತದೆ. ಆಕೆ ಅತ್ಯಂತ ಧನ್ಯಳು. ಏಕೆಂದರೆ ಆಕೆ ಭಗವಾನ್ ವಿಷ್ಣುವಿನ ಪಾದಾರವಿಂದಗಳಲ್ಲಿ ಹುಟ್ಟಿದವಳು. ಆಕೆ ದ್ವಿತೀಯ ಲಕ್ಷ್ಮಿಯಾದ್ದರಿಂದಲೇ ಆಕೆಯು ಸುರರಿಂದಲೂ ಮಾನವರಿಂದಲೂ ಆರಾಧಿಸಲ್ಪಡುತ್ತಾಳೆ. ಅದ್ಭುತ ಗುಣಸಂಪನ್ನೆಯಾದ್ದರಿಂದ ಆಕೆ ಶಿವನ ತಲೆಯನ್ನು ಅಲಂಕರಿಸಿದ್ದಾಳೆ)

ಇಲ್ಲಿಯ ರಚನೆಯಲ್ಲಿರುವ ದೋಷವನ್ನು ಚೈತನ್ಯರು ಎತ್ತಿಹಿಡಿದು ಕಾಶ್ಮೀರಿ ಪಂಡಿತರಿಗೆ ಮನವರಿಕೆ ಮಾಡುತ್ತಾರೆ. ಆದರೂ ಇಲ್ಲಿರುವ ಅನುಪ್ರಾಸದ ವೈಖರಿ, ಉಪಮಾನಾಲಂಕಾರದ ನಿದರ್ಶನಗಳನ್ನು ಎತ್ತಿ ಹಿಡಿಯುತ್ತಾರೆ. ಅವರು ಹೇಳುವಂತೆ, ಕೊನೆಯ ಸಾಲಿನಲ್ಲಿ 'ಭ' ಎಂಬ ಅಕ್ಷರವು ಪುನರಾವೃತ್ತಿಯಾಗುವುದರಿಂದ ಅನುಪ್ರಾಸವು ಮೂಡಿಬರುತ್ತದೆ. 'ಲಕ್ಷ್ಮೀರ್ ಇವ' ಹಾಗೂ 'ವಿಷ್ಣೋಶ್ಚರಣ ಕಮಲೋತ್ಪತ್ತಿಃ' ಎಂಬ ರಚನೆಗಳು ಉಪಮಾನಾಲಂಕಾರದ ಮಾದರಿಗಳಾಗುತ್ತವೆ. ಆದರೆ, ಅವು ರೂಪಕದಂತೆ ಮೆರೆಯುತ್ತವೆ. ಗಂಗೆ ಎಂಬುದು ನೀರು. ಲಕ್ಷ್ಮೀ ಎಂದರೆ ಐಶ್ವರ್ಯದ ಅಧಿದೇವತೆ. ನೀರು ಮತ್ತು ವ್ಯಕ್ತಿಯು ಒಂದೇ ಅಲ್ಲ. ಆ ಹೋಲಿಕೆಯನ್ನು ಒಂದೇ ರೀತಿಯಾಗಿ ಅರ್ಥವಿಸಿದ್ದು ರೂಪಕಾಲಂಕಾರದ ಸೃಷ್ಟಿಗೆ ಕಾರಣವಾಗುತ್ತದೆ. 'ಮಹತ್ತ್ವಂ ಗಂಗಾಯಾಃ' ಎಂದು ಆರಂಭವಾಗುವ ಈ ಶ್ಲೋಕದಲ್ಲಿ ಐದು ಅಲಂಕಾರ ಲಕ್ಷಣಗಳು ಹಾಗೂ ಐದು ದೋಷಗಳೂ ಇವೆ. ಆ ಐದು ದೋಷಗಳನ್ನು 'ಅವಿಮೃಷ್ಟ, ವಿಧೇಯಾಂಶ, ವಿರುದ್ಧಮತಿ, ಪುನರುಕ್ತಿ ಮತ್ತು ಭಗ್ನಕ್ರಮ'ವೆಂಬುದಾಗಿ ಗುರುತಿಸುತ್ತಾರೆ.

ಇಲ್ಲಿ 'ವಿಮೃಷ್ಟ' ಅಂದರೆ ಶುದ್ಧವಾದದ್ದು. 'ವಿಧೇಯಾಂಶ'ವೆಂದರೆ ಆಖ್ಯಾತ. ವಾಕ್ಯರಚನೆಯಲ್ಲಿ ಕರ್ತೃಪದವನ್ನು ಮೊದಲು ಹೇಳಿ, ಅದರ ಕುರಿತು ಆಖ್ಯಾತವನ್ನು ಆಮೇಲೆ ಹೇಳಬೇಕು. ಅಂದರೆ 'ಈತ ಪಂಡಿತ' ಎಂದು ಹೇಳಿದರೆ ಸರಿ. ಅದರ ಬದಲು 'ಪಂಡಿತ ಈತ' ಎನ್ನುವುದು ಸರಿಯಾದ ಕ್ರಮವಲ್ಲ. ಇಂತಹ ಸರಿಯಲ್ಲದ ಕ್ರಮವನ್ನು 'ಅವಿಮೃಷ್ಟ ವಿಧೇಯಾಂಶ ದೋಷ' ಅಂದರೆ 'ಅಶುದ್ಧ ವಾಕ್ಯರಚನಾದೋಷ' ವೆಂದು ಕರೆಯುತ್ತಾರೆ. ಈ ಶ್ಲೋಕದ ವಸ್ತುವೆನ್ನುವುದು ಗಂಗೆಯ ಪ್ರಶಂಸೆ. ಆದ್ದರಿಂದ ಇದಂ (ಈ) ಎಂಬ ಪದವನ್ನು ಪ್ರಶಂಸೆಯಾದ ನಂತರ ಪ್ರಯೋಗಿಸುವುದಕ್ಕಿಂತ ಮೊದಲೇ ಪ್ರಯೋಗಿಸಬೇಕಿತ್ತು ಎಂಬುದು ಚೈತನ್ಯ ಮಹಾಪ್ರಭುಗಳ ವಾದ.

ಎರಡನೆಯ ದೋಷವೆಂದರೆ, 'ದ್ವಿತೀಯ-ಶ್ರೀ-ಲಕ್ಷ್ಮೀರ್ ಇವ' ಎಂಬುದು. ಇಲ್ಲಿ 'ದ್ವಿತೀಯ' ಎಂಬ ಪದವು 'ವಿಧೇಯ'ವಾಗುತ್ತದೆ. 'ದ್ವಿತೀಯ-ಶ್ರೀ-ಲಕ್ಷ್ಮೀರ್' ಎಂಬ ಸಮಸ್ತ ಪದವನ್ನು ರಚಿಸುವಾಗ ವಿಧೇಯವನ್ನು ಮೊದಲು ಹೇಳುವುದು ಮುಖ್ಯ ದೋಷವಾಗಿ ಪರಿಣಮಿಸುತ್ತದೆ.

ಮೂರನೆಯದು, 'ಭವಾನೀ-ಭರ್ತುಃ'. ಇದು ವಿರುದ್ಧಮತಿ ಅಥವಾ ವಿರುದ್ಧ ಭಾವನೆಯಾಗುತ್ತದೆ. 'ಭವಾನೀ' ಎಂಬುದು 'ಭವ'(ಶಿವ)ನ ಪತ್ನಿಯನ್ನು ಸೂಚಿಸುತ್ತದೆ. ಅಂದರೆ 'ಭವಾನೀ' ಎಂಬುದು 'ಶಿವನ ಪತ್ನಿ' ಎಂದರ್ಥೈಸಿ, 'ಭರ್ತಾ' ಅಂದರೆ 'ಪತಿ' ಎಂಬ ಪದವನ್ನು ಪುನಃ ಸೇರಿಸುವುದರಿಂದ 'ಶಿವನ ಹೆಂಡತಿಯ ಗಂಡ' ಎಂದಾಗುತ್ತದೆ. ಅಂದರೆ ಶಿವನ ಹೆಂಡತಿಗೆ ಇನ್ನೊಬ್ಬ ಗಂಡನಿರಬೇಕೆಂಬ ಅರ್ಥವೊಂದು ಮೂಡುತ್ತದೆ. ಹಾಗಾಗಿ ಇದೊಂದು ಅಸಂಬದ್ಧವಾದ ರಚನೆಯಾಗುತ್ತದೆ.

ಪುನರುಕ್ತಿಯೆಂಬುದಿಲ್ಲಿ ನಾಲ್ಕನೆಯ ದೋಷವಾಗಿ ಪರಿಣಮಿಸುತ್ತದೆ. ಇಲ್ಲಿ 'ವಿಭವತಿ' (ಕಂಗೊಳಿಸುತ್ತಿದ್ದಾಳೆ) ಎಂಬ ಕ್ರಿಯಾಪದದಿಂದ ಮುಕ್ತಾಯವಾಗಬೇಕಿದ್ದ ವಾಕ್ಯವು ಅನಗತ್ಯವಾದ 'ಅದ್ಭುತ ಗುಣಾ'(ಅದ್ಭುತಗುಣದಿಂದ ಕೂಡಿದವಳು) ಎಂಬ ವಿಶೇಷಣದ ಮೂಲಕವಾಗಿ ಕೊನೆಯಾಗುತ್ತದೆ. ಐದನೆಯದು, 'ಭಗ್ನ-ಕ್ರಮ'ವೆಂಬ ಕ್ರಮಭಂಗ ದೋಷ. ಅನುಪ್ರಾಸದ ದೋಷವು ಮುಂದುವರಿಯದೆ ಇದ್ದು ಒಂದು ಪಾದಕ್ಕೆ ಮಾತ್ರ ಸೀಮಿತಗೊಳ್ಳುತ್ತದೆ. ಒಟ್ಟಿನಲ್ಲಿ ಇಲ್ಲಿ ವ್ಯಾಕರಣ ಮೀಮಾಂಸೆಯೇ ಎದ್ದುತೋರುತ್ತದೆ.

ದಾಸಸಾಹಿತ್ಯದಲ್ಲಿ ತೋರಿಬರುವ ಅನ್ಯಭಾಷೆಯ ಪ್ರಭಾವವು ಅನ್ಯಸಮಾಜದ ಹಿತಚಿಂತನೆಯಿಂದ ರಚಿತವಾದವುಗಳು. ಅಂತಹ ಚಿಂತನೆಯು ಗೌಡೀಯಸಾಹಿತ್ಯದಲ್ಲೂ ನಡೆದಿದೆ ಎನ್ನುವುದಕ್ಕೆ ಅಲ್ಲಿಯ ಸಂಕೀರ್ತನೆಯಲ್ಲಿ ಬಳಸಿಕೊಂಡ ಒರಿಯಾ ಭಾಷೆಯ 'ಜಗಮೋಹನ ಪರಿ ಮುಣ್ಡಾ ಯಾ'[೨೩] ಹಾಡಿನ ಸಾಲೊಂದು ಆಧಾರವಾಗಿ ನಿಲ್ಲುತ್ತದೆ.

ಸಾಹಿತ್ಯದಲ್ಲಿ ಪದವಿಶೇಷತೆಯಾಗಿ ದ್ವಯಾರ್ಥವನ್ನು ಬಿಂಬಿಸುವ ಶಬ್ದಗಳು ಪರಸ್ಪರ ಪಂಥಗಳ ಸಾಹಿತ್ಯದಲ್ಲಿ ಅಲ್ಲಲ್ಲಿ ರಚನೆಗೊಂಡಿವೆ. ಮೇಲ್ನೋಟದಲ್ಲಿ ಸರಳವಾಗಿ ಕಾಣುವ, ಒಳಗೆ ಗೂಢಾರ್ಥವೇ ತುಂಬಿರುವ ಪದಪ್ರಯೋಗಗಳು ಇಲ್ಲಿ ವಿಶೇಷತೆಯನ್ನು ಪಡೆಯುತ್ತವೆ. ದಾಸಸಾಹಿತ್ಯದಲ್ಲಿ 'ಪರಮಪುರುಷ ನೀನೆಲ್ಲಿಕಾಯಿ', 'ತುರುಕರು ಕರೆದರೆ ಉಣಬಹುದಣ್ಣ' ಮುಂತಾದ ಕೀರ್ತನೆಗಳು ಇದಕ್ಕೆ ಮುಖ್ಯ ಉದಾಹರಣೆಗಳು. ಗೌಡೀಯ ಸಾಹಿತ್ಯದಲ್ಲೂ 'ಮಹಾಪ್ರೇಮೇ ಭಕ್ತ ಕಹೇ, 'ಹಾ ರಾಮ, ಹಾ ರಾಮ, ಯವನೇರ ಭಾಗ್ಯದೇಖ, ಲಯ ಸೇಇ ನಾಮ'[೨೪] ಎಂಬಂತೆ ಗೂಢಾರ್ಥವನ್ನು ಬಿಂಬಿಸುವ ಸಾಹಿತ್ಯವು ತನ್ನ ವೈಶಿಷ್ಟ್ಯವನ್ನು ಪಡೆದುಕೊಳ್ಳುತ್ತದೆ. ಇಲ್ಲಿ ದೇವ್ರೋನ್ಮಾದದಲ್ಲಿರುವ ಓರ್ವ ಅಂತರಂಗ ಭಕ್ತಪ್ರೇಮಿಯು 'ಹಾ ರಾಮ'ನೆಂದು ಕೂಗಿದರೆ, ಯವನನೊಬ್ಬ 'ಹಾರಾಮ ಹಾರಾಮ'ನೆಂದು ಕೂಗುತ್ತಾನೆ. ಇಲ್ಲಿ ಯವನರಿಗೆ

'ಹಾರಾಮ' ಎಂದರೆ 'ಜುಗುಪ್ಸೆ ಹುಟ್ಟಿಸುವ' ಎಂದರ್ಥ. ಆದರೆ ಹೇಳುವ ರೀತಿಯಲ್ಲಿ ಭೇದವಿಲ್ಲ. ಹಾಗಾಗಿ ಎರಡು ಕಡೆಯಲ್ಲಿ ಪರಮಪುರುಷನನ್ನೇ ಹಾತೊರೆಯುವಂತಿದೆ. ಒಟ್ಟಿನಲ್ಲಿ ಎಲ್ಲಿ ಬೇಕಾದರೂ ಯಾರು ಬೇಕಾದರೂ ಈ ಪದವನ್ನು ಹೇಳಬಹುದಾದುದರಿಂದ ಪದದ ಶಕ್ತಿವಿಶೇಷತೆಯನ್ನು ನಾವಿಲ್ಲಿ ಮನಗಾಣಬಹುದು.

ಒಟ್ಟಿನಲ್ಲಿ ಸಮಾನ ಪಂಥಗಳ ಸಾಹಿತ್ಯಕೃಷಿಯು ಸಾಮಾಜಿಕವಾಗಿ ಸ್ಪಂಧಿಸಿದ್ದರೂ ಒಂದೊಂದರ ವಿಶೇಷತೆಯಲ್ಲಿ ಭಿನ್ನತೆಯನ್ನು ಕಾಣುತ್ತೇವೆ. ಇಲ್ಲಿ ವೈವಿಧ್ಯವೂ ಇದೆ. ಏಕತೆಯೂ ಇದೆ.

ದೇಸೀ ಚೆಲುವು

ದಾಸಸಾಹಿತ್ಯದಲ್ಲಿ ಸಿಗುವ ಜನಪದ ಅಂಶಗಳ ಕುರಿತು ಈಗಾಗಲೇ ಪ್ರೊ. ಎ. ವಿ. ನಾವಡ, ಆರ್. ಸುನಂದಮ್ಮ, ಎಸ್. ಎಸ್. ಅಂಗಡಿ ಮೊದಲಾದ ವಿದ್ವಾಂಸರು ಕೆಲಸ ಮಾಡಿದ್ದಾರೆ. ದಾಸಕೀರ್ತನೆಗಳ ಗುಣಮಟ್ಟದಲ್ಲಿ ಶಿಷ್ಟ ಪರಂಪರೆಯನ್ನು ನೋಡುತ್ತೇವೆ. ಆದರೆ ಆ ಸಾಹಿತ್ಯವು ಜನಸಾಮಾನ್ಯರನ್ನು ತಲುಪಬೇಕೆಂಬ ನೆಲೆಯಲ್ಲಿ ಜನಪದ ಶಬ್ದ ಸಂಪತ್ತನ್ನು ಸೂರೆಗೊಳ್ಳುತ್ತದೆ. ಆದರೆ ಈ ರೀತಿಯ ಜನಪದ ಸೊಗಡಿನ ಸಾಹಿತ್ಯ ರಚನೆಯು ಚೈತನ್ಯಪಂಥದಲ್ಲಿ ವಿಶೇಷವಾಗಿ ವಿಜೃಂಭಿಸಿಲ್ಲ. ಚೈತನಪಂಥವು ಕೃಷ್ಣನನ್ನು 'ಕಾನ' ಎಂಬ ಗ್ರಾಮ್ಯ ಹೆಸರಿನಿಂದ ಕರೆದರೂ ಉಳಿದ ದೇವರುಗಳನ್ನು ಜಾನಪದೀಯವಾಗಿ ಉಲ್ಲೇಖಿಸಿಲ್ಲ. ಆದರೆ ದಾಸಪಂಥವು ಹೇಳುವ ಶಿಷ್ಟದೇವರುಗಳಾದ ಬ್ರಹ್ಮ, ಹನುಮಂತ, ಲಕ್ಷ್ಮೀ, ಕೃಷ್ಣ ಮೊದಲಾದವರುಗಳೆಲ್ಲ ಸಂದರ್ಭಾನುಸಾರವಾಗಿ ಬೊಮ್ಮ, ಹನುಮ, ಲಕುಮಿ, ಕಿಟ್ಟಣ್ಣ ಎಂಬ ಹೆಸರಿನಿಂದ ಗ್ರಾಮೀಣ ಜನರ ಬಾಯಲ್ಲಿ ಕುಣಿಯುತ್ತಾರೆ.

ದಾಸಪಂಥವು ಜನಪದ ಸಂಸ್ಕೃತಿಯನ್ನು ಒಪ್ಪಿಕೊಳ್ಳಲು ಮುಖ್ಯವಾಗಿ ಎರಡು ಕಾರಣಗಳು ತೋರುತ್ತವೆ. ಒಂದನೆಯದಾಗಿ– ವೇದ ಪುರಾಣಗಳ ವಿಷಯವನ್ನು ತಮ್ಮ ರಚನೆಗಳ ಮೂಲಕವಾಗಿ ಗ್ರಾಮೀಣ ಜನತೆಗೆ ತಿಳಿಸುವ ಉದ್ದೇಶವಾದರೆ, ಎರಡನೆಯದಾಗಿ– ದಾಸಕುಲದಲ್ಲಿ ಕನಕರನ್ನೊಳಗೊಂಡಂತೆ ಕೆಲವು ದಾಸರು ಜನಪದ ಸಮುದಾಯದಿಂದಲೇ ಬಂದವರಾಗಿದ್ದರು. ಇವರುಗಳೆಲ್ಲ ಅಲ್ಲಲ್ಲಿ ಕೀಳುದೈವಗಳನ್ನು ಟೀಕಿಸುತ್ತಾ ಬಂದಿದ್ದರೂ ಕುಲಮೂಲ ಸಂಸ್ಕಾರ ಹಾಗೂ ಕುಲಪದ್ಧತಿಗಳನ್ನು ಒಪ್ಪಿಕೊಂಡು ಬಂದಿರುವುದು ವಿಶೇಷವೆನಿಸುತ್ತದೆ. ಪ್ರತಿಯೊಂದು ಪಂಗಡಕ್ಕೂ ಕುಲಸಂಸ್ಕಾರ, ಆಚರಣಾಪದ್ಧತಿ ಮತ್ತು ಮನೆದೇವರುಗಳಿರುತ್ತಾರೆಂಬುದನ್ನು ನಂಬಿಕೊಂಡು ಬಂದಂತಹ ಕನಕದಾಸರೂ ಕೂಡ 'ನಾವು ಕುರುಬರು ನಮ್ಮಪ್ಪ ಬೀರಪ್ಪ'ವೆನ್ನುವ ಮೂಲಕ ದೇಸೀ ಶೈಲಿಗೆ ಒಳಗಾಗುತ್ತಾರೆ.

ಚೈತನ್ಯಪಂಥಕ್ಕೆ ಸಾಮಾಜಿಕ ಕಾಳಜಿ ಇದ್ದರೂ, ಅದರ ಜನಪದ ಸಾಹಿತ್ಯದ ಮೂಲಕವಾದ ಸ್ಪಂದನ ಅಷ್ಟಕ್ಕಷ್ಟೇ ಎಂದು ಹೇಳಬೇಕು. ಈಗಾಗಲೇ ಹೇಳಿದಂತೆ, ದಾಸಪಂಥವು ಗ್ರಾಮೀಣ ಜನತೆಗೆ ಪುರಾಣಕಥೆಗಳನ್ನು

ಕೀರ್ತನೆಗಳ ಮೂಲಕವಾಗಿ ಹೇಳಲು ಹೊರಡುತ್ತದೆ. ಗೂಢವಾದ ವಿಚಾರವನ್ನು ಸರಳವಾಗಿ ಹೇಳುವ ಉದ್ದೇಶದಿಂದ ಶಿಷ್ಟ ಸಾಹಿತ್ಯವನ್ನು ಬಿಟ್ಟು ದೇಸೀ ಸಾಹಿತ್ಯವನ್ನು ಅದು ಸ್ವೀಕರಿಸಿಕೊಳ್ಳುತ್ತದೆ.

ಕೈಕಾಲಿಲ್ಲದೆ ಆಡ್ದಾ
ಮೈಮೇಲ್ ಭಾರವ ಪೊತ್ತು ನೋಡ್ದಾ
ಕೋರೆಯಲಿ ತಿವಿದು ಹತ ಮಾಡ್ದಾ –ಕನಕದಾಸರು

ಡೊಂಕಾದ ಮುದುಕಿಯ ಕೂಡಿ ಮಾವನ
ಬಿಂಕವ ಮುರಿದು ಕುಣಿದಾನ್ ಮ್ಯಾ –ಕನಕದಾಸರು

ಕೋಲು ಕೋಲೆನ್ನ........
ತಮನ ಕೊಂದನ ಕೋಲೆ ಕಮಠನಾದನ ಕೋಲೆ
ಕ್ಷಮೆಯನೆತ್ತಿದನ ಕೋಲೆ ಕೋಲು –ಪುರಂದರದಾಸರು

ಏನಣ್ಣ ನಿನಗೇನಣ್ಣ
ಗೂನಣ್ಣ ಬಲು ಗೂನಣ್ಣ
ಗಿರಿಯ ಹ್ಯಾಂಗೆ ನೀ ಹೊತ್ಯಣ್ಣ –ಪುರಂದರದಾಸರು

ಇಲ್ಲಿ ಜನಪದಶೈಲಿಯೊಂದಿಗೆ ಪೌರಾಣಿಕ ಕಥೆಯಿದೆ. ಜನಸಮುದಾಯಕ್ಕೆ ಪುರಾಣದ ಪರಿಚಯವನ್ನು ಮಾಡಿಕೊಡುವ ಉದ್ದೇಶವು ದಾಸಪಂಥಕ್ಕಿದ್ದಿರಬೇಕು. ಆದರೆ ಚೈತನ್ಯಸಾಹಿತ್ಯದಲ್ಲಿ ಇಂತಹ ಸರಳಸಾಹಿತ್ಯದ ರಚನೆಗೆ ಹೆಚ್ಚಾದ ಆಸ್ಪದ ಸಿಕ್ಕಿದಂತೆ ತೋರುವುದಿಲ್ಲ.

೬.೧೩ : ಸಂಸಾರ ನಿಂದನೆ

ದಾಸಪಂಥವು ದೈವಸಾಕ್ಷಾತ್ಕಾರಕ್ಕೆ ಸಂಸ್ಕಾರರಹಿತ ಸಂಸಾರವನ್ನು ಮೂದಲಿಸಲು ಮುಂದಾಯಿತು. ಅದು ಶೀಲವಂತನಾಗದ, ಹರಿಕಥೆಯನ್ನು ಕೇಳದ, ಆಳಾಗಿ ಅರಸಂಗೆ ಕೇಡು ಬಗೆಯುವ, ಪರಸ್ತ್ರೀಯನ್ನು ಬಯಸುವ ಸಂಸಾರಿಯನ್ನು ನಿಂದಿಸಿತು. ಅಂದರೆ ಮೋಕ್ಷ ಸಿದ್ಧಿಯನ್ನು ಬಯಸುವ ಮನುಕುಲಕ್ಕೆ, ಸಂಸಾರಕ್ಕೆ ಮಾತ್ರ ಪ್ರಶಂಸೆಯನ್ನು ಕೊಟ್ಟಿತು. ಚೈತನ್ಯಪಂಥಕ್ಕೆ ಶೀಲವಂತ ಸಮಾಜವನ್ನು ಕಟ್ಟುವ ಕಾಯಕವನ್ನು ಹೊತ್ತಿದ್ದರೂ ಅದು ಸಂಸಾರವನ್ನು ನಿಂದಿಸಲು ಮುಂದಾಗಲಿಲ್ಲ. ಅದರ ಉದ್ದೇಶ ಸಮಾಜದಲ್ಲಿ ಧಾರ್ಮಿಕ ಸಂಸ್ಕಾರವನ್ನು ನೆಲೆಗೊಳಿಸುವುದಾಗಿತ್ತು. ಆದರೆ ಸಂಸಾರ ನಿಂದನೆ ಮತ್ತು ನಶ್ವರತೆಯನ್ನು ದಾಸಪಂಥವು ಒತ್ತಿಹೇಳಿತು. ದಾಸರುಗಳ ಈ ತೀಕ್ಷ್ಣನಿಂದನೆಗೆ ಅಂದಿನ ಸಮಾಜದ ಸ್ತ್ರೀಯು ಮುಖ್ಯಕಾರಣಳಾಗಿ ನಿಲ್ಲುತ್ತಾಳೆ. 'ಹೆಣ್ಣು ಹೇಗಿರಬೇಕೆಂದರೆ ಹಣ್ಣಿನಂತೆ ಲಕ್ಷಣವಾಗಿರಬೇಕು, ಬಾಳಹಣ್ಣಿನ ರುಚಿಯಂತೆ ಗುಣವಿರಬೇಕು' ಎಂಬುದು ದಾಸಕುಲದ ತೀರ್ಮಾನ. ಈ ದೃಷ್ಟಿಯಿಂದಲೇ ಶ್ರೀಪಾದರಾಯರು 'ಅಕಟಕಟ ಸಂಸಾರವನು ನೆಚ್ಚಿಕೆಡಬ್ಯಾಡ, ವಿಕಟದಲಿ ಮಾನವರು ಕೆಟ್ಟರೆಲ್ಲರು ನಿಜ'ವೆಂದು, ವ್ಯಾಸರಾಯುರು, 'ಜರೆಬಂದು ಜರೆವರು ಸತಿಸುತರು' ಎಂದು, ವಾದಿರಾಜರು 'ಬಿಟ್ಟು ಬನ್ನಿರೋ ಸಂಸಾರದ್ಧಂಬಲವ' ಎಂದು ರಚಿಸಿಹಾಡಿದರು.

ದಾಸರು ಸ್ತ್ರೀಯರ ಕುರಿತಾಗಿ ವಿಮರ್ಶಿಸುತ್ತಾರೆ. ಕೆಲವೊಮ್ಮೆ ನಿಂದಿಸುತ್ತಾರೆ. ಆದರೆ ಚೈತನ್ಯಪಂಥದಲ್ಲಿ ಸ್ತ್ರೀಯರ ಗುಣಗಾನವಿದೆ. ಅಲ್ಲಿ ನಿಂದನೆಗೆ ಅವಕಾಶವಿಲ್ಲ. ಆ ಸಾಹಿತ್ಯವು ಲೌಕಿಕದ ನಿಸ್ಸಾರತೆಯನ್ನು ಅಲ್ಲಲ್ಲಿ ಹೇಳುತ್ತದೆ. ಅಲ್ಲಿ ಪಾರಮಾರ್ಥಿಕವನ್ನು ಪಡೆಯಲು ಲೌಕಿಕದಲ್ಲಿ ಮಾಡುವ ಧಾರ್ಮಿಕ ವಿಧಿವಿಧಾನಗಳಲ್ಲಿ ಸತಿಪತಿಗಳಿಬ್ಬರೂ ಅನ್ಯೋನ್ಯವಾಗಿ ಸಹಕರಿಸಿಕೊಳ್ಳುತ್ತಾರೆ.

ಪ್ರಥಮೇ ಪಾಕ ಕರಿಯಾಥೇನ ಆಚಾರ್ಯಾಣಿ ।
ವಿಷ್ಣು ಸಮರ್ಪಣ ಕೈಲ ಆಚಾರ್ಯ ಆಪನಿ ॥[೩೪]

ಇದು ಚೈತನ್ಯಪಂಥದಲ್ಲಿ ಬರುವ ಆದರ್ಶ ಗೃಹಸ್ಥನ ಜೀವನಚಿತ್ರಣ. ದಾಸಪಂಥದಲ್ಲಿ ತೋರುವ ಸಾಂಸಾರಿಕ ತೊಡಕು ಚೈತನ್ಯಪಂಥದಲ್ಲಿಲ್ಲ. ಚೈತನ್ಯಪಂಥದಲ್ಲಿ ಬರುವ ಅದ್ವೈತ ಆಚಾರ್ಯರು ಭಗವದಾರಾಧನೆಗೆ ತೊಡಗುವಾಗ ಅವರ ಧರ್ಮಪತ್ನಿಯು ಪೂಜಾನೈವೇದ್ಯದ ಸಿದ್ಧತೆಗೆ ಸಹಕರಿಸುತ್ತಾಳೆ. ಅಂತೆಯೇ ಅಲ್ಲಿ ಇನ್ನಷ್ಟು ಸ್ತ್ರೀಯರು ಅವರವರ ಗಂಡಂದಿರ ಆಧ್ಯಾತ್ಮಿಕ ಸಾಧನೆಯಲ್ಲಿ ಸಹಕಾರವನ್ನು ನೀಡುತ್ತಾರೆ. ಇಂತಹ ಆರೋಗ್ಯ ಪೂರ್ಣವಾದ ಸಾಂಸಾರಿಕ ಕಲ್ಪನೆಯು ದಾಸಪಂಥದಲ್ಲಿ ಕಡಿಮೆಯೆಂದೇ ಹೇಳಬೇಕು.

ಚೈತನ್ಯಪಂಥದಲ್ಲಿ ಭಗವದಾರಾಧನೆಗೆ ಸಂಸಾರ ತೊಡಕಾಗುವುದಿಲ್ಲ. ಆದರೆ ದಾಸಪಂಥವು ಅಲ್ಲಲ್ಲಿ ಸಂಸಾರಿಯನ್ನು ಎಚ್ಚರಿಸುತ್ತಾ ಬಂದಿರುವುದನ್ನು ಕಾಣುತ್ತೇವೆ. ಈ ನೆಲೆಯಲ್ಲಿ ಕೆಲವೊಂದು ಉದಾಹರಣೆಗಳನ್ನಿಲ್ಲಿ ಗಮನಿಸಬಹುದು.

ಏನು ಭ್ರಮೆ ಮನುಜರಿಗೆ....
ನನ್ನ ಮನೆ ನನ್ನ ಸತಿ ನನ್ನ ಸುತರೆಂದೆನಿಸಿ
ಹೊನ್ನುಗಳ ಗಳಿಸಿ ಹೆಚ್ಚಾಗಿ ಹೋರ್‍ಯಾಡಿ
ಸಣ್ಣವರ ಮದುವೆ ಸಂಭ್ರಮದಿ ಮಾಡುವೆನೆಂದು
ಅನ್ನ ಮೊದಲು ಕಾಣದೆ ಅಂತರ ಪಿಶಾಚಿಯಂತೆ ॥ –ಶ್ರೀಪಾದರಾಯರು

ಸಂಸಾರವೆಂಬ ಮಾರಿಗೆ ಸಿಲುಕಿದೆ......
ಬಲಿಗಾಯತವಾದ ಕುರಿ ಮೆಲುವಂತೆ ಹೆಡ
ತಲೆ ಮೃತ್ಯುವನರಿಯದೆ ಮತ್ತನಾಗಿಪ್ಪೆ ॥ –ವ್ಯಾಸರಾಯರು

ಈಗಲೋ ಇನ್ನಾéವಾಗಲೋ.......
ಹೆಣ್ಣು ಹೊನ್ನಿನಾಸೆ ಬಿಡದು ಪುಣ್ಯಕ್ಕೆ ಮನವೊಡಂಬಡದು
ನಿನ್ನ ವಾರ್ತೆಯ ಕರ್ಣ ಕೇಳದು ಅನ್ಯ ವಾರ್ತೆಗೆ ಹೊತ್ತು ಸಾಲದು –ವಾದಿರಾಜರು

ಇಬ್ಬರ್‍ಹೆಂಡರ ಸುಖವ ಇಂದು ಕಂಡೆನಯ್ಯ
ಅಬ್ಬಬ್ಬ ಎಂದಿಗೂ ಸಾಕು ಸಾಕಯ್ಯ –ಪುರಂದರದಾಸರು

ಒಟ್ಟಿನಲ್ಲಿ ಇಲ್ಲಿಯ ದಾಸರ ಹಂಬಲವೆಂದರೆ, ಐಹಿಕ ಭೋಗಭಾಗ್ಯಗಳನ್ನು ಪಡೆಯುವ ಸಮಾಜದ ಜನತೆಗೆ ಶಾಶ್ವತ ಸಿದ್ಧಿಯನ್ನು ತೋರಿಸಿಕೊಡುವುದು. ಅಲ್ಲದೆ ಅದು ಕೇವಲ ಭಕ್ತಿ ಮತ್ತು ಧರ್ಮಮಾರ್ಗಗಳಿಂದ ಮಾತ್ರ

ಸಾಧ್ಯವೆನ್ನುವ ಅರಿವನ್ನು ಅದರ ಜೊತೆಗೆ ಮೂಡಿಸುವುದಾಗಿದೆ. ಹೀಗೆ ಚೈತನ್ಯಪಂಥವು ನಿಂದಿಸದಿರುವ ಸಂಸಾರವನ್ನು ದಾಸಪಂಥವು ಒಂದಿಷ್ಟು ನಿಂದಿಸಲು ಮುಂದಾಗುತ್ತದೆ.

೬.೧೪ : ಉಡುಗೆ-ತೊಡುಗೆಗಳು

ಜನಸಮುದಾಯದ ಉಡುಗೆ ತೊಡುಗೆಗಳು ಆಯಾಯ ಪ್ರಾದೇಶಿಕ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ಪ್ರಾಚೀನಕಾಲದಿಂದ ಹಿಡಿದು ಈವರೆಗೂ ಉಡುಗೆ ತೊಡುಗೆಗಳ ವಿನ್ಯಾಸಗಳನ್ನು ಹುಡುಕುವ ಪ್ರಯತ್ನವು ಸಾಹಿತ್ಯಾಧಾರಿತವಾಗಿ ನಡೆದುಕೊಂಡು ಬಂದಿವೆ. ಇಲ್ಲಿ ದಾಸರು ಕೀರ್ತನೆಗಳ ಮೂಲಕ ಹೇಳುವ ಉಡುಪುಗಳ ವಿನ್ಯಾಸ, ಪ್ರಸಾಧನಾದಿ ಆಭರಣಗಳು ಆ ಕಾಲದ ಜನಬದುಕಿನ ಕನ್ನಡಿಯಾಗಿದೆ. ಹೀಗೆ ಅಧ್ಯಯನದಿಂದ ಆಯಾಯ ಕಾಲದ ಸಂಸ್ಕೃತಿಯ ಪರಿಚಯವನ್ನು, ವಸ್ತ್ರಾಭರಣಾದಿ ವಿನ್ಯಾಸವನ್ನು ತಿಳಿದುಕೊಂಡು ಬಂದ ನಾವೆಲ್ಲರು ದಾಸಯುಗದ ಉಡುಗೆ ತೊಡುಗೆಗಳ ಸಂಸ್ಕೃತಿಯನ್ನು ಕೀರ್ತನೆಗಳ ಅಧ್ಯಯನದಿಂದ ತಿಳಿದುಕೊಳ್ಳಬಹುದಾಗಿದೆ.

ಚೈತನ್ಯಪಂಥಕ್ಕೆ ಹೋಲಿಸಿದರೆ ದಾಸಪಂಥದ ಸಾಹಿತ್ಯದಲ್ಲಿ ಸಿಗುವ ಉಡುಗೆ ತೊಡುಗೆಗಳ ವಿಚಾರವು ಕಡಿಮೆ ಏನಲ್ಲ. ಬಾಲಕೃಷ್ಣನ ಅಲಂಕಾರ, ಗೋಪಿಕೆಯ ಶೃಂಗಾರ, ತುಂಟಾಟ ಹಾಗೂ ಸೀರೆ, ಬೆಣ್ಣೆಗಳ ಕಳ್ಳತನದಲ್ಲಿ ಉಡುಗೆ ತೊಡುಗೆಗಳ ವರ್ಣನೆಯು ಸಾಕಷ್ಟಿವೆ. ಈ ಕುರಿತು ತುಲನಾತ್ಮಕವಾಗಿ ವಿವೇಚಿಸಿದರೆ ಚೈತನ್ಯಪಂಥವು ದಾಸಪಂಥಕ್ಕಿಂತ ಸ್ವಲ್ಪಮಟ್ಟಿಗೆ ಹಿಂದೆ ಸರಿಯುತ್ತದೆ.

> ಉಡುಗೆ ಪೀತಾಂಬರ ನಡುವೆ ಹೊನ್ನುಡುದಾರ
> ಕಡಗ ಕಂಕಣವಿಟ್ಟವನಾರಮ್ಮ ।
> ....
> ಶಂಖ ಚಕ್ರವು ಗದೆ ಪದ್ಮ ಕೈಯೊಳಗಿಟ್ಟ
> ಲಂಕರಿಸುವನಿವನಾರಮ್ಮ ।
> ಕಂಬು ಕಂಧರ ಕರ್ಣಾಲಂಬಿತ ಕುಂಡಲ
> ಅಂಬುಜ ಮುಖದವನಾರೆ ಪೇಳಮ್ಮ ॥ -ಪುರಂದರದಾಸರು

ದಾಸರೆಲ್ಲರು ಅಲಂಕರಿಸುವ ಉಡುಗೆಯಲ್ಲಿ ಸಾಮ್ಯತೆಯಿದೆ. ಮಸ್ತಕಕ್ಕೆ ಮಾಣಿಕ್ಯ ಕಿರೀಟ, ಲಲಾಟಕ್ಕೆ ಕಸ್ತೂರಿ ತಿಲಕ, ಕೊರಳಿಗೆ ಚಿಗುರು ತುಳಸಿಯ ವನಮಾಲೆ, ಹೊನ್ನುಂಗುರದ ಬೆರಳು, ನಾಭಿಯ ತಾವರೆ, ಕಡಗ, ಗಗ್ಗರಗಳನ್ನೆಲ್ಲ ಸಾಮಾನ್ಯವಾಗಿ ಎಲ್ಲಾ ದಾಸರುಗಳು ತಮ್ಮ ರಚನೆಗೆ ಸೂಕ್ತವಾಗುವಂತೆ ಹೊಂದಿಸಿಕೊಂಡಿದ್ದಾರೆ. ಇದೆಲ್ಲ ಒಂದು ರೀತಿಯಲ್ಲಿ ಮಕ್ಕಳಾಲಂಕಾರ. ಇದಕ್ಕಿಂತಲೂ ಮುಖ್ಯವಾಗಿ ದಾಸಪಂಥವು ಸ್ತ್ರೀಯರ ಅಲಂಕಾರ, ಸಂಸ್ಕೃತಿಯನ್ನು ಬಿಂಬಿಸುವ ತಾಂಬೂಲದುಪಚಾರಕ್ಕೆ ಸಂಬಂಧಿಸಿದ ಅಲಂಕಾರಗಳನ್ನು ಹೇಳಲು ಮುಂದಾಗುತ್ತದೆ. ಆದರೆ ದೇಶೀಯ ಸಂಸ್ಕೃತಿಯನ್ನು ಉಡುಗೆ ತೊಡುಗೆಗಳ ಮೂಲಕವಾಗಿ ಜನಮಾನಸಕ್ಕೆ ತಲುಪಿಸುವ ಕೆಲಸ ದಾಸಪಂಥವು ನಿರ್ವಹಿಸಿದಷ್ಟು ಚೆನ್ನಾಗಿ ಚೈತನ್ಯಪಂಥವು ನಿರ್ವಹಿಸಿಲ್ಲವೆಂದೆನಿಸುತ್ತದೆ.

ಬಂಗಾರವಿಡೆ ಬಾರೆ.....
ಮುತ್ತೈದೆತನವೆಂಬ ಮುಖದಲಿ ಕುಂಕುಮದ
ಕತ್ತುರಿಯ ಬೊಟ್ಟನಿಡೆ ನಿನ್ನ ಫಣೆಗೆ ।
ಹೆತ್ತವರ ಕುಲಕೆ ಕುಂದು ಬಾರದ ಹಾಗೆ
ಮುತ್ತಿನ ಮೂಗುತಿಯನಿಡೆ ॥

ಇದು ಮುತ್ತೈದೆಗೆ ಪುರಂದರದಾಸರು ಹೇಳುವ ಕಿವಿಮಾತು. ಮುತ್ತೈದೆಗೆ ಮುಖ್ಯವಾಗಿ ಬೇಕಾಗುವ ಹಣೆಯ ಕುಂಕುಮ, ಮೂಗಿಗೆ ಮುತ್ತಿನ ಮೂಗುತಿ, ಕೈಗಳಿಗೆ ಗಾಜಿನ ಬಳೆಗಳನ್ನು ಧರಿಸುವ ಮೂಲಕ ಹೆತ್ತವರ ಕುಲಕ್ಕೆ ಕುಂದನ್ನು ತಾರದಂತೆ ಮುತ್ತೈದೆಯನ್ನು ಎಚ್ಚರಿಸುತ್ತಾರೆ.

ತಾಂಬೂಲವ ಕೊಳ್ಳೋ........
ಸಂಪಿಗೆಣ್ಣೆ ಅತ್ತರು ಚಂದನದೆಣ್ಣೆ
ಈ ಪರಿ ಪರಿ ವಿಧ ಪರಿಮಳದ ಎಣ್ಣೆ ।
ಕೆಂಪು ಕೇಸರಿ ಗಂಧ ಕಸ್ತೂರಿಯು
ಚಂಪಕ ಮೊದಲಾದ ಪುಷ್ಪವ ಮುಡಿಯೋ ॥

ಇಲ್ಲಿ ತಾಂಬೂಲಾದ್ಯುಪಚಾರದ ಸಂಸ್ಕಾರವನ್ನು ಹೇಗೆ ಮಾಡಬೇಕೆಂದು ದಾಸಕುಲವು ಸಮಾಜಮುಖಕ್ಕೆ ತಿಳಿಹೇಳಲು ಮುಂದಾಗುತ್ತದೆ. ಇಂತಹ ಔಪಚಾರಿಕ ಸಂಸ್ಕಾರವನ್ನು ಚೈತನ್ಯಪಂಥದ ಅನುಭಾವಿಗಳು ತಮ್ಮ ಬದುಕಿನಲ್ಲಿ ಸ್ವೀಕರಿಸಿದ್ದಿದೆ. ಭಗವಂತನನ್ನು ಶ್ರೀಗಂಧ ಚಂದನದಲ್ಲಿ ಲೇಪಿಸಿ ಅಲಂಕರಿಸಿದ್ದಿದೆ. ಆದರೆ ಸಾಹಿತ್ಯರೂಪದಲ್ಲಿ ಸಮಾಜಮುಖಕ್ಕೆ ಹೇಳುವ ಪ್ರಯತ್ನದಲ್ಲಿ ಮಾತ್ರ ಸ್ವಲ್ಪ ಹಿಂದುಳಿದಂತೆ ಕಾಣುತ್ತದೆ.

೬.೧೫ : ಶಾಪ ಮತ್ತು ಆತ್ಮಹತ್ಯೆ

ದಕ್ಷಿಣೋತ್ತರವಾಗಿ ಹಬ್ಬಿದ ಚೈತನ್ಯ ಹಾಗೂ ದಾಸಪಂಥಗಳ ಸಾಹಿತ್ಯದಲ್ಲಿ ಶಾಪವಿಚಾರವೊಂದು ವಿರಳವಾದರೂ ಒಂದೆರಡು ಕಡೆ ಗೋಚರವಾಗಲು ಸಾಧ್ಯ. ದಾಸಪಂಥದಲ್ಲಿ ಶ್ರೀನಿವಾಸಾಚಾರ್ಯರನ್ನು ಬ್ರಹ್ಮರಕ್ಕಸನಾಗೆಂದು ಶಪಿಸಿ, ಅನಂತರದಲ್ಲಿ ಆ ಬ್ರಹ್ಮರಕ್ಕಸನಿಗೆ ಭೂತರಾಜನಾಗೆಂದು ಅನುಗ್ರಹಿಸಿದ ವಾದಿರಾಜರ ಶಾಪ ಪ್ರಸಂಗವೊಂದನ್ನು ಬಿಟ್ಟರೆ, ಅಲ್ಲಿ ಮತ್ತೆ ಇಂತಹ ಸನ್ನಿವೇಶಗಳು ನಿರ್ಮಾಣವಾಗುವುದಿಲ್ಲ. ಆದರೆ ಚೈತನ್ಯಪಂಥದಲ್ಲಿ ಶಪಿಸುವ ಘಟನೆಗಳು ಒಂದೆರಡು ಬಾರಿ ತೋರಿಬಂದು ದಾಸಪಂಥವನ್ನು ಅನುಸರಿಸುವಂತೆ ಕಾಣುತ್ತದೆ.

ಚೈತನ್ಯಪಂಥದಲ್ಲಿ ಚೈತನ್ಯರ ಲೀಲೆಗೆ ಸಂಬಂಧಿಸಿದಂತೆ, ಅಲ್ಲಿ ಬರುವ ಬಾಲೆಯರಿಗೆ ನಿಮ್ಮ ಕೈಯಲ್ಲಿರುವ ನೈವೇದ್ಯವನ್ನು ನನಗರ್ಪಿಸದಿದ್ದರೆ ನಾಲ್ವರು ಹೆಂಡತಿಯರುಳ್ಳ ಮುದುಕ ಗಂಡನು ನಿಮಗೆ ಸಿಗಲೆಂದು ಬಾಲಚೈತನ್ಯನು ಶಾಪದ ಭಯವನ್ನು ಇಲ್ಲಿ ಹುಟ್ಟಿಸುತ್ತಾನೆ. ತರುವಾಯ ಆ ಬಾಲೆಯರೆಲ್ಲ ಬರುವ ಶಾಪಕ್ಕಾಗಿ ಹೆದರಿ ತಮ್ಮಲ್ಲಿದ್ದ ನೈವೇದ್ಯವನ್ನು ಚೈತನ್ಯನಿಗೆ ಅರ್ಪಿಸಿಬಿಡುತ್ತಾರೆ.

ಚೈತನ್ಯಪಂಥದಲ್ಲಿ ಬರುವ ಇನ್ನೊಂದು ಶಾಪಪ್ರಸಂಗವೆಂದರೆ, ಶಿವಾನಂದಸೇನರು ಕುಟುಂಬ ಹಾಗೂ ಬಂಗಾಲದ ಭಕ್ತರೊಂದಿಗೆ ಜಗನ್ನಾಥಪುರಿಗೆ ಹೊರಟಿರುವ ಸಂದರ್ಭ. ಅಲ್ಲಿ ಶಿವಾನಂದಸೇನರು ನಿತ್ಯಾನಂದಪ್ರಭುಗಳಿಗೆ ಸರಿಯಾದ ತಂಗುವ ವ್ಯವಸ್ಥೆಯನ್ನು ಮಾಡಿಲ್ಲದಿರುವಾಗ, ಹಸಿವಿನಿಂದ ಕಂಗಾಲಾಗಿದ್ದ ನಿತ್ಯಾನಂದಪ್ರಭುಗಳಿಂದ ಶಾಪಕ್ಕೊಳಗಾಗುತ್ತಾರೆ.

ತಿನ ಪುತ್ರ ಮರುಕ ಶಿವಾರ ಏಖನ ನಾ ಆಇಲ ।
ಭೋಖೇ ಮರಿ'ಗೇನು, ಮೋರೇ ವಾಸಾ ನಾ ದೇಓಯಾಇಲ ॥[೫೫]

ನಿತ್ಯಾನಂದಪ್ರಭುಗಳೇ ಎನ್ನುವಂತೆ, 'ಶಿವಾನಂದಸೇನರು ನನಗೆ ತಂಗುವ ವ್ಯವಸ್ಥೆಯನ್ನು ಮಾಡಿಲ್ಲ. ನಾನು ಹಸಿವಿನಿಂದ ಸಾಯುತ್ತಿದ್ದೇನೆ. ಅವರು ಬಂದಿಲ್ಲವಾದ್ದರಿಂದ ಅವರ ಮೂವರು ಗಂಡುಮಕ್ಕಳು ಸಾಯಲಿ' ಎಂದು ಶಪಿಸುತ್ತಾರೆ. ಆತ್ಮಾವಲೋಕನವನ್ನು ಮಾಡಿಕೊಂಡ ಶಿವಾನಂದಸೇನರು ತನ್ನಿಂದಾದ ತಪ್ಪಿಗಾಗಿ ತಾವೇ ದುಃಖಿಸುತ್ತಾರೆ. ಹೀಗೆ ಶಾಪಕ್ಕೆ ಸಂಬಂಧಿಸಿದ ವಿಚಾರವು ಪರಸ್ಪರ ಪಂಥಗಳಲ್ಲಿ ಇಷ್ಟು ಮಾತ್ರ ನೆರವೇರಿದೆ. ಆದರೆ, ಆತ್ಮಹತ್ಯೆ ಎನ್ನುವ ಸ್ವ-ದೇಹಹತ್ಯೆಯ ವಿಚಾರವಾಗಿ ದಾಸಂಥವು ಮೌನವನ್ನು ತಳೆಯುತ್ತದೆ.

ಚೈತನ್ಯಪಂಥವು ದಾಸಪಂಥಕ್ಕಿಂತ ಹೆಚ್ಚು ಬಿನ್ನತೆಯನ್ನು ಸಾಧಿಸುವುದು ಅದರ ಆಚರಣೆಗಳಿಂದ. ಅದು ತಪ್ಪು ಮಾಡಿದವರನ್ನು ಒಪ್ಪಿಕೊಳ್ಳದೆ ಮೌನವಾಗಿಯೇ ಶಿಕ್ಷಿಸುತ್ತದೆ. ಚೈತನ್ಯಪಂಥದಲ್ಲಿ ಬರುವ ಕಿರಿಯಹರಿದಾಸನೆಂಬ ಅನುಯಾಯಿಯು ಚೈತನ್ಯ ಮಹಾಪ್ರಭುಗಳ ಅವಕೃಪೆಗೆ ಪಾತ್ರನಾಗುತ್ತಾನೆ. ಕಿರಿಯಹರಿದಾಸನು ತನ್ನ ತಪ್ಪನ್ನು ಮನ್ನಿಸುವಂತೆ ಚೈತನ್ಯ ಮಹಾಪ್ರಭುಗಳಲ್ಲಿ ಬೇಡಿಕೊಂಡರೂ ಅದು ನಿರರ್ಥಕವಾಗುತ್ತದೆ. ಕೊನೆಯಲ್ಲಿ ತನ್ನ ತಪ್ಪಿಗಾಗಿ ತಾನೇ ನದಿನೀರಿಗೆ ಹಾರಿ ಪ್ರಾಣವನ್ನು ಕಳೆದುಕೊಳ್ಳುತ್ತಾನೆ.

ಇಂತಹ ಇನ್ನೊಂದು ಘಟನೆಯು ಸನಾತನ ಗೋಸ್ವಾಮಿಗಳಿಗೆ ಸಂಬಂಧಿಸಿದುದು. ಅವರೊಮ್ಮೆ ತಮ್ಮ ದೇಹದ ಚರ್ಮತುರಿಕೆಗೆ ನೊಂದು ಜಗನ್ನಾಥಪುರಿಯ ರಥೋತ್ಸವದ ಸಂದರ್ಭದಲ್ಲಿ ರಥಚಕ್ರಕ್ಕೆ ತಲೆಕೊಟ್ಟು ದೇಹತ್ಯಾಗವನ್ನು ಮಾಡುವ ನಿರ್ಧಾರವನ್ನು ಕೈಗೊಳ್ಳುತ್ತಾರೆ. ಆದರೆ ಇದನ್ನು ಅರಿತ ಚೈತನ್ಯರು ಸನಾತನರ ಅಜ್ಞಾನವನ್ನು ಕಳೆಯುತ್ತಾರೆ. ಅವರೆನ್ನುವಂತೆ,

ಮಹಾಪ್ರಭುರ ಆಗೇ, ಆರ ದೇಖಿ ಜಗನ್ನಾಥ ।
ರಥೇ ದೇಹ ಛಾಡಿಮು, ಏಇ ಪರಮ ಪುರುಷಾರ್ಥ ॥[೫೬]

ಎಂದು ತತ್ವಾರ್ಥದ ಪ್ರತಿಪಾದನೆಗೆ ಮುಂದಾಗುತ್ತಾರೆ. ಅವರ ಪ್ರಕಾರ, 'ಸನಾತನರ ಆತ್ಮಹತ್ಯೆಯ ಪ್ರಯತ್ನ ಅಜ್ಞಾನದ ಫಲ. ಆತ್ಮಹತ್ಯೆಯಿಂದ ಭಗವತ್ಪ್ರೇಮ ಉಂಟಾಗುವುದಿಲ್ಲ. ನೀವು ಈಗಾಗಲೇ ಜೀವ ಮತ್ತು ದೇಹವನ್ನು ನನ್ನ ಸೇವೆಗೆ ಮುಡಿಪಾಗಿಟ್ಟಿದ್ದೀರಿ. ಆದ್ದರಿಂದ ನಿಮ್ಮ ಶರೀರ ನಿಮಗೆ ಸೇರಿದ್ದಲ್ಲ. ನಿಮಗೆ ಆತ್ಮಹತ್ಯೆಯನ್ನು ಮಾಡಿಕೊಳ್ಳುವ ಯಾವ ಹಕ್ಕು ಇಲ್ಲ. ನಿಮ್ಮ ದೇಹದ ಮೂಲಕ ನಾನು ಭಕ್ತಿಸೇವೆಗಳನ್ನು ಮಾಡಬೇಕಿದೆ' ಎನ್ನುತ್ತಾರೆ.[೫೭]

ದೇಹತ್ಯಾಗೇ ಕೃಷ್ಣನಾ ಪಾಈ ಪಾಇಯೇ ಭಜನೇ ।
ಕೃಷ್ಣ ಪ್ರಾಪ್ತ್ಯೆರ ಉಪಾಯ ಕೋನ ನಾಹಿ ಭಕ್ತಿ ವಿನೇ ॥[೫೮]

'ದೇಹತ್ಯಾಗದಿಂದ ಕೃಷ್ಣನು ಸಿಗುವುದಿಲ್ಲ. ಕೃಷ್ಣನು ಭಕ್ತಿಸೇವೆಯಿಂದ ಮಾತ್ರ ಸಿಗುತ್ತಾನೆ' ಎನ್ನುವಲ್ಲಿ ಚೈತನ್ಯರ ತತ್ವಚಿಂತನೆಯೊಂದು ಇಲ್ಲಿ ಹರಿಯುತ್ತದೆ.

ಶ್ರೀಚೈತನ್ಯ ಮಹಾಪ್ರಭುಗಳ ಅಂತರಂಗ ಭಕ್ತರಲ್ಲಿ ಒಬ್ಬರಾಗಿದ್ದ ರಘುನಾಥದಾಸ ಗೋಸ್ವಾಮಿಯವರು ಚೈತನ್ಯರ ಎಲ್ಲಾ ಚಟುವಟಿಕೆಗಳನ್ನು ಸ್ವರೂಪದಾಮೋದರ ಗೋಸ್ವಾಮಿಗಳಿಂದ ಕೇಳಿಪಡೆದುಕೊಳ್ಳುತ್ತಿದ್ದವರು. ಶ್ರೀಚೈತನ್ಯ ಮಹಾಪ್ರಭುಗಳು ಮತ್ತು ಸ್ವರೂಪದಾಮೋದರ ಗೋಸ್ವಾಮಿಗಳಿಬ್ಬರು ಇಹಲೋಕವನ್ನು ತ್ಯಜಿಸಿದ ಮೇಲೆ, ಅವರ ಅಗಲಿಕೆಯ ನೋವನ್ನು ತಾಳಲಾರದೆ ವೃಂದಾವನಕ್ಕೆ ಪ್ರಯಾಣವನ್ನು ಬೆಳೆಸಿ ಗೋವರ್ಧನಗಿರಿಯ ಮೇಲಿನಿಂದ ಕೆಳಗೆ ಬಿದ್ದು ಆತ್ಮಹತ್ಯೆಯನ್ನು ಮಾಡಿಕೊಳ್ಳಲು ನಿರ್ಧರಿಸುತ್ತಾರೆ. ಆದರೆ ಆ ನಿರ್ಧಾರವನ್ನು ರೂಪ ಹಾಗೂ ಸನಾತನ ಗೋಸ್ವಾಮಿಗಳು ತಪ್ಪಿಸಿಬಿಡುತ್ತಾರೆ. ಆದರೆ ಇಂತಹ ಘಟನೆಗಳು ದಾಸಸಾಹಿತ್ಯದಲ್ಲಿ ಸಿಗಲುಸಾಧ್ಯವಿಲ್ಲ. ಅಲ್ಲಿ ಸಾವೆನ್ನುವ ವಿಚಾರ ಮೂಡಿಬಂದರೂ ಅದು ಸ್ವ-ದೇಹಹತ್ಯೆಯಾಗಿರುವುದಿಲ್ಲ.

೬.೧೬ : ಜನ್ಮ ಜಾತಕ ಹಾಗೂ ಲೋಕನಿರ್ಯಾಣ ದಾಖಲೆಗಳು

ಚೈತನ್ಯಪಂಥದಲ್ಲಿ ದಾಸಸಾಹಿತ್ಯದಂತೆಯೇ ಜ್ಯೋತಿಷ್ಯ ವಿಚಾರವು ತೋರಿಬರುತ್ತದೆ. ಚೈತನ್ಯಪಂಥದ ಭಕ್ತಿಸಿದ್ಧಾಂತ ಸರಸ್ವತೀ ಠಾಕೂರರು ಅವರ ಪೂರ್ವಾಶ್ರಮದಲ್ಲಿ ದೊಡ್ಡ ಜ್ಯೋತಿಷಿಯಾಗಿದ್ದರೆಂದು ಚರಿತಾಮೃತವು ಸಾರುತ್ತದೆ. ಅಂತೆಯೇ ಚೈತನ್ಯರ ತಾತನಾದ ನೀಲಾಂಬರ ಚಕ್ರವರ್ತಿಗಳು ಆ ಕಾಲದ ದೊಡ್ಡ ಜ್ಯೋತಿಷಿಗಳೆಂದು ಚೈತನ್ಯ ಚರಿತಾಮೃತವು ಹೇಳುತ್ತದೆ. ಜ್ಯೋತಿಷ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆ, ಚೈತನ್ಯರ ಜನ್ಮಜಾತಕವೂ ಕೂಡ ಅವರಿಂದಲೇ ಸಿದ್ಧಗೊಳ್ಳುತ್ತದೆ. ಚೈತನ್ಯ ಚರಿತಾಮೃತವು ಹೇಳುವಂತೆ,

ಚೌದ್ಧ ಶತ ಸಾತ ಶಕೇ ಮಾಸ ಯೇ ಫಾಲ್ಗುನ ।
ಪೌರ್ಣಮಾಸೀರ ಸನ್ಧ್ಯಾಕಾಲೇ ಹೈಲೇ ಶುಭಕ್ಷಣ ॥[೫೯]

(ಚೌದ್ಧ ಶತ ಸಾತ ಶಕೆ ಅಂದರೆ ಶಕ ಯುಗದ ೧೪೦೭ (ಕ್ರಿ.ಶ. ೧೪೦೬) ಫಾಲ್ಗುಣ ಮಾಸದಲ್ಲಿ (ಫೆಬ್ರುವರಿ-ಮಾರ್ಚ್) ಪೂರ್ಣಿಮೆಯ ಸಂಜೆ ಇಚ್ಛಿತ ಶುಭ ಘಳಿಗೆ ಬಂದಿತು)

ಸಿಂಹರಾಶಿ ಸಿಂಹಲಗ್ನ ಉಚ್ಚ ಗ್ರಹಗಣ ।
ಷಡ್ವರ್ಗ ಅಷ್ಟವರ್ಗ ಸರ್ವ ಸುಲಕ್ಷಣ ॥[೬೦]

ಚೈತನ್ಯ ಚರಿತಾಮೃತವು ಸಾದರ ಪಡಿಸುವಂತೆ ಚೈತನ್ಯರ ಜಾತಕವು ಶಕ ವರುಷ ೧೪೦೭/೧೦/೨೨/೨೮/೪೫. ಅಂದರೆ, ಶಕಯುಗದ ಒಂದುಸಾವಿರದ ನಾಲ್ಕುನೂರ ಏಳು ವರ್ಷಗಳು ಆಗಲೇ ಕಳೆದುಹೋಗಿವೆ. ಅಂದರೆ ಆಗ ನಡೆಯುತ್ತಿದ್ದುದು ೧೪೦೮ ನೆಯ ವರ್ಷ. ಆ ವರ್ಷದ ೧೦ ತಿಂಗಳುಗಳು ಆಗಲೇ ಕಳೆದಿದ್ದವು. ಅಂದರೆ ೧೧ ನೇ ತಿಂಗಳು ನಡೆಯುತ್ತಿತ್ತು. ಫಾಲ್ಗುಣಮಾಸದಲ್ಲೂ ೨೨ ದಿನಗಳು ಸರಿದು ೨೩ ನೇ ದಿನ ಆಗಿತ್ತು. ೨೮ ಘಟಿಕಾ (೧೧ ತಾಸು, ೧೨ ನಿಮಿಷಗಳು) ಹಾಗೂ ಸೂರ್ಯೋದಯ ಆದ

ಸಮಯುದಿಂದ ೪೫ ಘಲಗಳು (೧೮ ನಿಮಿಷಗಳು) ಕಳೆದಿದ್ದವು. ಅಂದರೆ ಆಗಲೇ ಸೂರ್ಯಾಸ್ತ ಮುಗಿದಿತ್ತೆಂದು ಕೃತಿಯು ಸಾರುತ್ತದೆ.

ನೀಲಾಂಬರ ಚಕ್ರವರ್ತಿಗಳು ಮಗುವಾಗಿದ್ದ ಚೈತನ್ಯರ ಅಂಗಾಲುಗಳ ಮೇಲಿದ್ದ ಗುರುತುಗಳಿಗೂ ಜ್ಯೋತಿಷ್ಯವನ್ನು ನಿರ್ಧರಿಸುತ್ತಾರೆ. ಅವರ ಪ್ರಕಾರ ಮಗುವಿನ ದೇಹದ ಮೇಲೆ ಮೂವತ್ತೆರಡು ಲಕ್ಷಣಗಳು ಕಂಡುಬಂದರೆ ಅವನು ಮಹಾಪುರುಷನಾಗುತ್ತಾನೆ ಎಂದರ್ಥವಿಸುತ್ತಾರೆ.

ಪಞ್ಚ ದೀರ್ಘ ಪಞ್ಚ ಸೂಕ್ಷ್ಮಃ ಸಪ್ತರಕ್ತಃ ಶಡುನ್ನತಃ ।
ತ್ರಿ ಹ್ರಸ್ವ ಪೃಥು ಗಂಭೀರೋ ದ್ವಾತ್ರಿಂಶ ಲಕ್ಷಣೋ ಮಹಾನ್ ॥[೬೧]

ಇಲ್ಲಿಯ ಜ್ಯೋತಿಷ್ಯವು ಮಹಾಪುರುಷನಲ್ಲಿ ೩೨ ಲಕ್ಷಣಗಳನ್ನು ಹೇಳುತ್ತದೆ. ಅಂತಹ ಮಹಾಪುರುಷನ ದೇಹದ ಐದು ಭಾಗಗಳು ದೊಡ್ಡದಾಗಿರುತ್ತವೆ (ಮೂಗು, ಬಾಹುಗಳು, ಗದ್ದ, ಕಣ್ಣುಗಳು ಹಾಗೂ ಮಂಡಿಗಳು). ಐದು ಸೂಕ್ಷ್ಮ ರೀತಿಯವು (ಚರ್ಮ, ಬೆರಳ ತುದಿಗಳು, ಹಲ್ಲುಗಳು, ಮೈಮೇಲಿನ ರೋಮಗಳು ಹಾಗೂ ತಲೆಕೂದಲು). ಏಳು ಭಾಗಗಳು ರಕ್ತವರ್ಣದವು (ಕಣ್ಣುಗಳು, ಅಂಗಾಲುಗಳು, ಅಂಗೈಗಳು, ಬಾಯಿ, ತಾಲು, ಉಗುರುಗಳು ಹಾಗೂ ತುಟಿಗಳು). ಆರು ಉಬ್ಬು ಭಾಗಗಳು (ಎದೆ, ಭುಜಗಳು, ಉಗುರುಗಳು, ನಡು ಹಾಗೂ ಬಾಯಿ). ಮೂರು ಸಣ್ಣವು (ಕುತ್ತಿಗೆ, ತೊಡೆಗಳು ಹಾಗೂ ಪುರುಷ ಜನನೇಂದ್ರಿಯ). ಮೂರು ವಿಶಾಲವಾದವು (ನಡು, ಹಣೆ ಹಾಗೂ ಎದೆ). ಗಂಭೀರ ಅವಯವಗಳು (ಹೊಕ್ಕುಳು, ಕಂಠ ಹಾಗೂ ದೇಹದ ಒಟ್ಟು ನಿಲುವು). ಇವು ಜ್ಯೋತಿಷ್ಯ ಶಾಸ್ತ್ರ ಹೇಳುವ ಮಹಾಪುರುಷನ ೩೨ ಲಕ್ಷಣಗಳು. ಆದರೆ ಇಷ್ಟು ಸೂಕ್ಷ್ಮವಾದ ಜ್ಯೋತಿಷ್ಯ ವಿವೇಚನೆಯು ದಾಸಸಾಹಿತ್ಯದಲ್ಲಿ ಸ್ವಲ್ಪ ಕಡಿಮೆಯೆಂದೇ ಹೇಳಬೇಕು.

ದಾಸಪಂಥವೂ ಕೂಡ ಜ್ಯೋತಿಷ್ಯಶಾಸ್ತ್ರವನ್ನು ಮರೆಯುವುದಿಲ್ಲ. ಅಲ್ಲಿ ಹರಿಸರ್ವೋತ್ತಮತ್ವವನ್ನು ಸಾರಲು ಹೊರಟ ಹರಿದಾಸರು 'ಸಕಲಗ್ರಹ ಬಲನೀನೆ' ಎಂದು ಹೇಳಲು ಹೊರಡುತ್ತಾರೆ. ಆದರೆ ಅಲ್ಲಿ ಇಂತಹ ಜನ್ಮಜಾತಕದ ವಿಚಾರ ಅಸ್ಪಷ್ಟ. ಆದರೆ ಅಲ್ಲಿಯ ಅನುಭಾವಿಗಳ ಲೋಕನಿರ್ಗಮನದ ವಿಚಾರವು ಅಲ್ಲಲ್ಲಿ ಗೋಚರವಾಗುತ್ತದೆ. ಈ ವಿಚಾರಕ್ಕೆ ಸಂಬಂಧಿಸಿದಂತೆ, ಮೊದಲ ಉದಾಹರಣೆಯೆಂದರೆ ವ್ಯಾಸರಾಯರದ್ದು. ಅವರು ಶಾಲಿವಾಹನ ಶಕ ೧೪೬೧ ನೆಯ ವಿಳಂಬಿ ಸಂವತ್ಸರದ ಫಾಲ್ಗುಣ ಬಹುಳ ಚತುರ್ಥಿಯಂದು ದೇವರ ಪೂಜೆಮಾಡಿ, 'ಪುಟ್ಟಿ ನಾ ಭುವಿಯೊಳಗೆ ಬಹುದಿನ ಕಳೆಯಿತೋ ಪುಟ್ಟದಂತೆ ಮಾಡೋ ಸೃಷ್ಟೀಶ ಸಿರಿಕೃಷ್ಣ' ಎಂದು ಹಾಡುತ್ತಾ ಪದ್ಮಾಸೀನರಾಗಿ ಕುಳಿತು ಹರಿಸ್ಮರಣೆಯಲ್ಲೇ ಪರಮಾರ್ಥಕ್ಕೆ ಹೊರಟುಬಿಡುತ್ತಾರೆ. ಆಗಲೇ ಪುರಂದರದಾಸರು,

ಚಿತ್ತೈಸಿದ ವ್ಯಾಸರಾಯ ಚಿತ್ತಜನೈಯನ ಸಭೆಗೆ
ಮುಕ್ತ ಮುತ್ತೈದೆಯರೆಲ್ಲ ರತ್ನದಾರುತಿಯೆತ್ತೆ ॥
ವಿಳಂಬಿ ವತ್ಸರ ವಿಜಯನಗರದಲ್ಲಿ ಫಾಲ್ಗುಣ ಕೃಷ್ಣ ಚತುರ್ಥಿ ಸ್ಥಿರವಾರದಿ ।
ಬೆಳಗೊಪ್ಪ ಜಾವದಲಿ ಕುಳಿತ ಪದ್ಮಾಸನದಿ ನಳಿನಾಕ್ಷ ನಾರಾಯಣನೆಂದು ಕೈಮುಗಿದು ॥

ಎನ್ನುವ ಮೂಲಕ ಹರಿಪಾದಗೈದ ಪಂಚಾಂಗ ಶ್ರವಣವನ್ನು ಮಾಡುತ್ತಾರೆ. ಎರಡನೆಯ ಉದಾಹರಣೆಯೆಂದರೆ, ಪುರಂದರದಾಸರದ್ದು. ಶಾಲಿವಾಹನ ಶಕ ೧೪೮೬ ನೆಯ ರಕ್ತಾಕ್ಷಿ ಸಂವತ್ಸರದ ಪುಷ್ಯ ಬಹುಳ ಅಮಾವಾಸ್ಯೆ (ಕ್ರಿ. ಶ. ೧೫೬೪) ಶನಿವಾರದ ದಿನದಲ್ಲಿ ಪುರಂದರದಾಸರು ಇಹಲೋಕವನ್ನು ನಿರ್ಗಮಿಸಿದರೆಂದು ಅವರ ಪುತ್ರರಾದ ಮಧ್ವಪತಿದಾಸರ ಕೀರ್ತನೆಯೊಂದು ಹೇಳುತ್ತದೆ.

ತೆರಳಿದರು ಪುರಂದರದಾಸರಾಯರು
ತೆರಳಿದರು ಭೇರಿ ದುಂದುಭಿ ಮೊರೆಯುತ್ತಲಿರೆ
ಪುರಂದರದಾಸರು ನಿಜ ವೈಕುಂಠಕ್ಕೆ
....
ರಕ್ತಾಕ್ಷಿ ಸಂವತ್ಸರ ಪುಷ್ಯ ಬಹುಳ
ದತಿಶಯದಮವಾಸ್ಯ ಮಂದವಾರ ॥

ಜಗನ್ನಾಥದಾಸರ ನಿರ್ಯಾಣವು ಶಾಲಿವಾಹನ ಶಕ ೧೭೩೧ ಶುಕ್ಲ ಸಂವತ್ಸರದ ಭಾದ್ರಪದ ಶುದ್ಧ ನವಮಿಯಂದು ಆಗುತ್ತದೆ. ಗೋಪಾಲದಾಸರು ವಿಜಯದಾಸರ ಆಜ್ಞೆಯಂತೆ ತಿರುಪತಿಯಲ್ಲಿ ಜಗನ್ನಾಥದಾಸರಿಗೆ ನಲುವತ್ತು ವರ್ಷ ಆಯುರ್ದಾನ ಮಾಡಿದ ಅವಧಿಯು ಇಲ್ಲಿಗೆ ಮುಗಿಯುತ್ತದೆ. ಅಂದರೆ ಅವರು ಎಂಬತ್ತೆರಡು ವರ್ಷದ ತನಕ ಬಾಳಿದರು. ಅವರ ನಿರ್ಗಮನವನ್ನು ಕರ್ಜಗೀದಾಸರು ಹೀಗೆ ಹೇಳುತ್ತಾರೆ.

ತೆರಳಿದರು ಶ್ರೀಜಗನ್ನಾಥ ದಾಸಾರ್ಯರು
ಶಿರಿಪತಿಯ ಸ್ಮರಿಸಿ ಹರಿಪುರಕೆ ಹರುಷದಲಿ
ವರ ಶುಕ್ಲ ವತ್ಸರದ ಭಾದ್ರಪದ ಸಿತಪಕ್ಷ
ಹರಿವಾರ ನವಮಿಯಲ್ಲಿ......

ಹೀಗೆ ದಾಸಕುಲದಲ್ಲಿ ಅನೇಕರ ನಿರ್ಯಾಣದ ವಿಚಾರವು ಅವರೊಂದಿಗಿದ್ದ ಇತರ ದಾಸರುಗಳ ಸಾಹಿತ್ಯದಿಂದ ತಿಳಿದುಬರುತ್ತದೆ. ಆದರೆ ದಾಸಕುಲದ ಜನ್ಮವಿಚಾರಕ್ಕೆ ಸಂಬಂಧಿಸಿದಂತೆ ಜಾತಕಾದಿ ವಿಚಾರಗಳು ದಾಸಸಾಹಿತ್ಯದಲ್ಲಿ ಸಿಗುವುದು ಕಷ್ಟ. ಚೈತನ್ಯಸಾಹಿತ್ಯದಲ್ಲಾದರೆ ಈ ವಿಷಯಕ್ಕೆ ಸಂಬಂಧಿಸಿದಂತೆ ಬಹಳಷ್ಟಲ್ಲದಿದ್ದರೂ ಚೈತನ್ಯರನ್ನು ಸೇರಿಸಿಕೊಂಡು ಒಂದೆರಡು ಉದಾಹರಣೆಗಳನ್ನು ಗಮನಿಸಬಹುದೆನ್ನಲಾಗಿದೆ.

****

ಒಟ್ಟಿನಲ್ಲಿ ಎರಡು ಪಂಥಗಳ ಮುಖ್ಯಕಾಯಕ ಕೃಷ್ಣಪ್ರಜ್ಞೆಯನ್ನು ಬಿತ್ತುವುದಾದರೂ ಅವುಗಳಲ್ಲಿ ತೋರುವ ತಾತ್ವಿಕ ವ್ಯತ್ಯಾಸಗಳು ಹೆಚ್ಚಿನ ವಿಶ್ಲೇಷಣೆಗೆ ದಾರಿಮಾಡಿಕೊಟ್ಟಿದೆ. ಅವುಗಳಲ್ಲಿ ಪಂಚತತ್ತ್ವ ಪರಿಕಲ್ಪನೆ, ಕೃಷ್ಣ ಅವತಾರಿಯಲ್ಲಯೆಂಬ ನಿಲುವು, ರಾಧಾಮಾಧವ ಪ್ರೇಮ, ದೇವೋನ್ಮಾದ ಮೊದಲಾದವುಗಳೆಲ್ಲ ಚೈತನ್ಯಪಂಥವು ಕಂಡುಕೊಂಡ ಹೊಸ ಆಲೋಚನೆಗಳು. ಸಾಹಿತ್ಯದಲ್ಲಿ ಪುರಾಣಕಥೆ ಮತ್ತು ಪ್ರಹೇಳಿಕೆಗಳು, ಕ್ಷೇತ್ರದರ್ಶನ ಕೀರ್ತನೆಗಳು, ಸಮಾಜ–ಮಹಿಳೆ ಮತ್ತು ಭಕ್ತಿ, ಕೀರ್ತನೆಗಳಲ್ಲಿ ಛಂಧಸ್ಸು, ಪ್ರಕೃತಿಪ್ರೇಮ ಮತ್ತು ಆರಾಧನೆ, ಸಮಾಧಿ ಸಂಸ್ಕಾರಗಳು, ಭಾಷೆ ಮತ್ತು ಸಾಹಿತ್ಯ, ಸಂಸಾರ ನಿಂದನೆ, ಉಡುಗೆ–ತೊಡುಗೆಗಳು, ಶಾಪ

ಮತ್ತು ಆತ್ಮಹತ್ಯೆ, ಮತ್ತು ಜನ್ಮಜಾತಕ ಹಾಗೂ ಲೋಕನಿರ್ಯಾಣ ದಾಖಲೆಗಳೆಲ್ಲ ಒಂದು ಪಂಥದಲ್ಲಿ ಮುಖ್ಯವಸ್ತುವಾಗಿ ಕಂಡುಬಂದರೆ, ಇನ್ನೊಂದರಲ್ಲಿ ಕಡೆಗಣಿಸಲ್ಪಟ್ಟು ಅಥವಾ ಸ್ವಲ್ಪಮಾತ್ರ ಗೋಚರವಾಗಿ ಕಂಡು ಬರುತ್ತದೆ. ಆದರೂ ಆ ಎರಡು ಪಂಥಗಳ ಆಂತರಿಕ ವಿಚಾರದಲ್ಲಿ ತಾತ್ವಿಕ ಸೌಂದರ್ಯವನ್ನು ಮುಖ್ಯವಾಗಿ ಕಾಣುತ್ತೇವೆ. ಒಟ್ಟಿನಲ್ಲಿ ಪರಸ್ಪರ ಪಂಥಗಳಲ್ಲಿ ಕಾಣುವ ವೈದೃಶ್ಯಾಂಶಗಳು ತೌಲನಿಕ ವಿವೇಚನೆಯಲ್ಲಿ ಮುಖ್ಯವಾಗುತ್ತದೆ.

****

ಅಧ್ಯಾಯ ೬ : ಅಡಿ ಟಿಪ್ಪಣಿಗಳು

೧. ಶ್ರೀ ಕರ್ನಾಟಕ ಭಕ್ತವಿಜಯ. ಪುಟ ಸಂ–೧೫೯.

೨. ಶ್ರೀ ಕರ್ನಾಟಕ ಭಕ್ತವಿಜಯ, ಪುಟ ಸಂ– ೧೩೩.

ಆಕಾಮಾವ್ಯೈ ಕೋನ ಸ್ನಾತಃ ? (ಆ = ಆಷಾಢ, ಕಾ = ಕಾರ್ತೀಕ, ಮ = ಮಾಘ, ವೈ = ವೈಶಾಖ.
ಈ ತಿಂಗಳುಗಳಲ್ಲಿ ಯಾರು ಸ್ನಾನ ಮಾಡುವುದಿಲ್ಲ? ಬ್ರಹ್ಮರಕ್ಕಸನ ಒಗಟಿನ ಪ್ರಶ್ನೆ)
ರಂಢಾಪುತ್ರ ! ತ್ವಂ ನ ಸ್ನಾತಃ (ರಂಡಾಪುತ್ರ ಮಾತ್ರ ಸ್ನಾನ ಮಾಡುವುದಿಲ್ಲ. ಇದು ಶ್ರೀವಾದಿರಾಜರ ಉತ್ತರ)

೩. ಶ್ರೀ ಚೈತನ್ಯ ಚರಿತಾಮೃತ, ಅಧ್ಯಾಯ ೧, ಪುಟ ಸಂ–೯೭.

ಜಗಾಯ್ ಮತ್ತು ಮಾದಾಯ್ ಸಹೋದರರಿಬ್ಬರಿಗೆ ಚೈತನ್ಯ ಪ್ರಭುಗಳಿಂದ ಕ್ಷಮಾದಾನ ವಿಚಾರ.

೪. ಶ್ರೀಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೦೭, ಶ್ಲೋಕ ೦೪, ಪುಟ ಸಂ–೫೬೧.

೫. ಶ್ರೀಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೦೭, ಶ್ಲೋಕ ೦೫, ಪುಟ ಸಂ–೫೬೩.

೬. ಭಗವದ್ಗೀತಾ–ಯಥಾರೂಪ, ಅಧ್ಯಾಯ ೧೧, ಶ್ಲೋಕ ೪೧, ೪೨, ಪುಟ ಸಂ–೫೪೦.

೭. ಬ್ರಹ್ಮವೈವರ್ತ ಪುರಾಣ, ಪ್ರಕೃತಿಖಂಡ, ಅನುವಾದ: ಬಿ.ಎಸ್. ಕೃಷ್ಣಪ್ಪ, ಪುಟ ಸಂ–೧೮.

೮. ದಾಸಸಾಹಿತ್ಯ ದರ್ಶನ, ಪುಟ ಸಂ–೭.

೯. ಶ್ರೀಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೦೪, ಶ್ಲೋಕ ೨೩೦, ಪುಟ ಸಂ–೩೨೯.

೧೦. ಸಂಸ್ಕೃತ ಮೂಲ ಶ್ರೀಚೈತನ್ಯ ಚರಿತಾಮೃತ, ಶ್ರೀಲ ಕೃಷ್ಣದಾಸ ಕವಿರಾಜ ಗೋಸ್ವಾಮಿಗಳ ರಚನೆ.

೧೧. ಶ್ರೀಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೦೪, ಶ್ಲೋಕ ೧೬೪, ಪುಟ ಸಂ–೨೯೯.

೧೨. ಶ್ರೀಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೦೪, ಶ್ಲೋಕ ೧೬೯, ಪುಟ ಸಂ–೩೦೧.

೧೩. ಶ್ರೀ ಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೦೪, ಶ್ಲೋಕ ೧೯೬, ಪುಟ ಸಂ–೩೧೪.

೧೪. ಶ್ರೀಮದ್ಭಾಗವತ ಮಹಾಪುರಾಣಂ, ಅಧ್ಯಾಯ–೧೦, ೧೩, ೨೦, ಪುಟ ಸಂ–೧೭೫.

೧೫. ವೇದಾಂತ ದರ್ಶನ, ಪುಟ ಸಂ–೨೯೫.

೧೬. ರಾಧಾಸಹಸ್ರನಾಮ ಸ್ತೋತ್ರ, ೫೯. ಪುಟ ಸಂ–೦೯

೧೭. ಶ್ರೀಮದ್ಭಾಗವತ ಮಹಾಪುರಾಣಂ, ದಶಮ ಸ್ಕಂಧ, ಅಧ್ಯಾಯ ೩೦, ಶ್ಲೋಕ ೨೮. ಪುಟ ಸಂ–೨೫೫.

೧೮. ಉಜ್ವಲ ನೀಲಮಣಿ, ರಾಧಾಪ್ರಕರಣ–೧೧–೧೫/ ಚೈತನ್ಯ ಶಿಕ್ಷಾಮೃತ, ಪುಟ ಸಂ–೨೯೬.

೧೯. ಶ್ರೀಕೃಷ್ಣ ಕಥೆಯ ಉಗಮ ಮತ್ತು ವಿಕಾಸ, ಪ್ರವೇಶ, ಪುಟ ಸಂ–೨೨.

ಇವರ ಪೂರ್ಣ ಹೆಸರು ಅಬ್ದುಲ್‌ರಹೀಮ್(ಕ್ರಿ.ಶ.೧೫೫೬–೧೬೨೬). ಇವರ ವಿದ್ವತ್ತು ಮತ್ತು ಶೂರತನಕ್ಕೆ ಮೊಗಲ್‌ಸಾಮ್ರಾಟನಿಂದ 'ಖಾನಾಖಾನಾ'ವೆಂಬ ಬಿರುದು ದೊರಕಿತ್ತು. ಮೂಲತಃ ತುರ್ಕಿ ದೇಶದವರು.

೨೦. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೧೭, ಶ್ಲೋಕ ೧೪೪, ಪುಟ ಸಂ–೭೦.

೨೧. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೧೨, ಶ್ಲೋಕ ೧೧೫, ಪುಟ ಸಂ–೪೮

೨೨. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೧೩, ಶ್ಲೋಕ ೧೬೫, ಪುಟ ಸಂ–೧೭೭

೨೩. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೧೭, ಶ್ಲೋಕ ೩೭, ಪುಟ ಸಂ–೧೭.

೨೪. ಶ್ರೀ ಚೈತನ್ಯ ಚರಿತಾಮೃತ, ಅಧ್ಯಾಯ ೧, ಶ್ಲೋಕ ೧೦೩, ಪುಟ ಸಂ–೫೯.

೨೫. ಅನುಭಾವ : ಸಾಂಸ್ಕ ತಿಕ ಸಮಸ್ಯೆ ಮತ್ತು ಹುಡುಕಾಟ, ಪುಟ ಸಂ–೬೮.

೨೬. ಶ್ರೀ ಚೈತನ್ಯ ಚರಿತಾಮೃತ, ಅಧ್ಯಾಯ ೧, ಶ್ಲೋಕ ೧೦೩, ಪುಟ ಸಂ–೫೯.

೨೭. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೨೦, ಶ್ಲೋಕ ೨೧೫/೨೧೬/೨೧೭, ಪುಟ ಸಂ–೧೨೧.

೨೮. ಸಾವಿರಾರು ಕೀರ್ತನೆಗಳು. ಪುಟ ಸಂ–೫೧೪

೨೯. ಕರ್ನಾಟಕ ಭಕ್ತವಿಜಯ, ಪುಟ ಸಂ–೧೪೩.

ಈ ಪದದ ಸೊಬಗಿಗೆ ಅಲ್ಲಿದ್ದ ವೈಕುಂಠದಾಸರೂ ಕೂಡ ವಾದಿರಾಜರಿಗೆರಗಿ ನರ್ತನಕ್ಕೆ ಇಳಿದರೆಂಬುದು ಪ್ರತೀತಿ.

೩೦. ಶ್ರೀ ಚೈತನ್ಯ ಚರಿತಾಮೃತ, ಅಂತ್ಯಲೀಲಾ, ಅಧ್ಯಾಯ ೧೩, ಶ್ಲೋಕ ೩೪, ಪುಟ ಸಂ–೨೩೧.

೩೧. ಶ್ರೀ ಚೈತನ್ಯ ಚರಿತಾಮೃತ, ಅಂತ್ಯಲೀಲಾ, ಅಧ್ಯಾಯ ೧೩, ಶ್ಲೋಕ ೩೬, ಪುಟ ಸಂ–೨೩೨.

೩೨. ಶ್ರೀ ಚೈತನ್ಯ ಚರಿತಾಮೃತ, ಅಂತ್ಯಲೀಲಾ, ಅಧ್ಯಾಯ ೭, ಶ್ಲೋಕ ೧೦೪, ಪುಟ ಸಂ–೧೪೮.

೩೩. ಗುರುರಾಮವಿಠಲರ ಕೀರ್ತನೆಗಳು. ಸಂ: ಅನಂತಪದ್ಮನಾಭ ರಾವ್, ಸಂಪುಟ ೩೪,೨೦೦೩. ಪುಟ–೨೬೭.

೩೪. ಶ್ರೀ ಚೈತನ್ಯ ಚರಿತಾಮೃತ, ಅಂತ್ಯಲೀಲಾ, ಅಧ್ಯಾಯ ೧, ಶ್ಲೋಕ ೪೩, ಪುಟ ಸಂ–೧೯.

೩೫. ಶ್ರೀ ಚೈತನ್ಯ ಚರಿತಾಮೃತ, ಅಂತ್ಯಲೀಲಾ, ಅಧ್ಯಾಯ ೭, ಪುಟ ಸಂ–೨೩೫.

೩೬. ಯಕ್ಷಗಾನ ಛಂದಸ್ಸು–ಒಂದು ಅಧ್ಯಯನ, ಪುಟ ಸಂ–೧೨.

೩೭. ಕನ್ನಡ ಛಂದಸ್ಸಿನ ಚರಿತ್ರೆ, ಸಂಪುಟ ೧, ಪುಟ ಸಂ–೧೯.

೩೮. ಆಶುವೈಭವ, ಪುಟ ಸಂ–೧೩೩.

೩೯ ತಂಬೂರಿ ಮೀಟಿದವ, ಪುಟ ಸಂ–೧೫೦.

೪೦. ಮಾನಸೋಲ್ಲಾಸ–ಪದ್ಯ ೨೮೧, (ದ್ವಿತೀಯಾಕ್ಷರಂ ಪಾದೇ ಪ್ರಾಣಾಕ್ಷರ ಮಿತಿ ಸ್ಮೃತಂ)

೪೧. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೪, ಶ್ಲೋಕ ೧೪೨, ಪುಟ ಸಂ–೩೫೭.

೪೨. ತಂಬೂರಿ ಮೀಟಿದವ, ಪುಟ ಸಂ–೧೭೯.

೪೩. ದಾಸಕೀರ್ತನ ರಚನಾಸೂತ್ರಗಳು (ಅಪ್ರಕಟಿತ ಕೃತಿ)

೪೪. ಶ್ರೀ ಚೈತನ್ಯ ಚರಿತಾಮೃತ, ಅಂತ್ಯಲೀಲಾ, ಅಧ್ಯಾಯ ೧, ಶ್ಲೋಕ ೭೮, ಪುಟ ಸಂ–೩೨.

೪೫. ಶ್ರೀ ಚೈತನ್ಯ ಚರಿತಾಮೃತ, ಅಂತ್ಯಲೀಲಾ, ಅಧ್ಯಾಯ ೧೫, ಶ್ಲೋಕ ೩೨, ಪುಟ ಸಂ–೩೪೩.

೪೬. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೧, ಶ್ಲೋಕ ೭೯, ಪುಟ ಸಂ–೪೬.

೪೭. ಶ್ರೀ ಚೈತನ್ಯ ಚರಿತಾಮೃತ, ಅಂತ್ಯಲೀಲಾ, ಅಧ್ಯಾಯ ೧, ಶ್ಲೋಕ ೧೮/೧೯, ಪುಟ ಸಂ–೦೮.

೪೮. ಶ್ರೀಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೧, ಶ್ಲೋಕ ೧೫೮, ಪುಟ ಸಂ–೮೧.

೪೯. ಪುರಂದರದಾಸರ ಕೀರ್ತನೆಗಳು, ಸಂಪುಟ–೩, ಪುಟ ಸಂ–೧೭೯.

೫೦. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೧೫, ಪು ಸಂ–೩೩೬.

೫೧. ಶ್ರೀ ಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೦೪, ಶ್ಲೋಕ ೨೩೦, ಪುಟ ಸಂ–೩೨೯.

೫೨. ಶ್ರೀ ಚೈತನ್ಯ ಚರಿತಾಮೃತ, ಅಂತ್ಯಲೀಲಾ, ಅಧ್ಯಾಯ ೧೦, ಶ್ಲೋಕ ೬೮, ಪುಟ ಸಂ–೮೪.

೫೩. ಶ್ರೀ ಚೈತನ್ಯ ಚರಿತಾಮೃತ, ಅಂತ್ಯಲೀಲಾ, ಅಧ್ಯಾಯ ೩, ಶ್ಲೋಕ ೫೪, ಪುಟ ಸಂ–೨೦೧.

೫೪. ಶ್ರೀ ಚೈತನ್ಯ ಚರಿತಾಮೃತ, ಮಧ್ಯಲೀಲಾ, ಅಧ್ಯಾಯ ೩, ಶ್ಲೋಕ ೪, ಪುಟ ಸಂ–೨೧೭.

೫೫. ಶ್ರೀ ಚೈತನ್ಯ ಚರಿತಾಮೃತ, ಅಂತ್ಯಲೀಲಾ, ಅಧ್ಯಾಯ ೧೨, ಶ್ಲೋಕ ೨೦, ಪುಟ ಸಂ–೧೭೦.

೫೬. ಶ್ರೀ ಚೈತನ್ಯ ಚರಿತಾಮೃತ, ಅಂತ್ಯಲೀಲಾ, ಅಧ್ಯಾಯ ೪, ಶ್ಲೋಕ ೧೨, ಪುಟ ಸಂ–೩೦೪.

೫೭. ಶ್ರೀ ಚೈತನ್ಯ ಚರಿತಾಮೃತ, ಅಂತ್ಯಲೀಲಾ, ಅಧ್ಯಾಯ ೪, ಪುಟ ಸಂ–೨೯೯.

೫೮. ಶ್ರೀ ಚೈತನ್ಯ ಚರಿತಾಮೃತ, ಅಂತ್ಯಲೀಲಾ, ಅಧ್ಯಾಯ ೪, ಶ್ಲೋಕ ೫೬, ಪುಟ ಸಂ–೩೧೯.

೫೯. ಶ್ರೀ ಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೧೩, ಶ್ಲೋಕ ೮೯, ಪುಟ ಸಂ–೩೪೮.

೬೦. ಶ್ರೀ ಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೧೩, ಶ್ಲೋಕ ೯೦, ಪುಟ ಸಂ–೩೪೯.

೬೧. ಶ್ರೀ ಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೧೪, ಶ್ಲೋಕ ೧೫, ಪುಟ ಸಂ–೩೮೫.

****

ಅಧ್ಯಾಯ : ೬

ಸಮಾಪನ

ಈ ಸಮಾಪನದಲ್ಲಿ ಹಿಂದಿನ ಅಧ್ಯಾಯಗಳ ಆಶಯಗಳನ್ನು ಪುನರುಕ್ತಿಗೊಳಿಸಲು ನಾನು ಹೋಗುವುದಿಲ್ಲ. ನನ್ನ ಶೋಧನೆಯ ಕೊನೆಯಲ್ಲಿ ನಾನು ಗ್ರಹಿಸಲ್ಪಟ್ಟ ವಿಚಾರವನ್ನು ಹೇಳಲು ಮುಂದಾಗುತ್ತೇನೆ. ಹಾಗಾಗಿ ಇದು ದಾಸಪಂಥ ಮತ್ತು ಚೈತನ್ಯಪಂಥಗಳ ತೌಲನಿಕ ಅಧ್ಯಯನದಲ್ಲಿ ಕಂಡುಕೊಂಡ ಫಲಾಫಲಗಳ ಒಟ್ಟು ಚಿಂತನವಾಗುತ್ತದೆ. ಸಾಧುಸಂತರು ಕಂಡುಕೊಂಡ ತಾತ್ವಿಕತೆಯ ವೈಯುಕ್ತಿಕ ಹಾಗೂ ಸಾಮಾಜಿಕವಾದ ಯೋಚನೆಯಾಗುತ್ತದೆ. ತಮ್ಮ ಸಾಮರ್ಥ್ಯದಲ್ಲಿ ಪರಮಾರ್ಥದ ವಿಚಾರವನ್ನು ದೇಶದ ಹೆಚ್ಚಿನ ಭೂಭಾಗಕ್ಕೆ ತಿಳಿಸಿ ಸ್ವಸ್ಥಸಮಾಜವನ್ನು ಕಟ್ಟಲುಹೊರಟ ಕಾಯಕವು ಎದ್ದುತೋರುತ್ತದೆ.

೬.೧ : ದಾಸ ಪಂಥ ಮತ್ತು ಚೈತನ್ಯ ಪಂಥಗಳು ದಕ್ಷಿಣೋತ್ತರ ಭಾರತವನ್ನು ಬೆಸೆದವುಗಳು.

ದಾಸಪಂಥ ಮತ್ತು ಚೈತನ್ಯಪಂಥಗಳು ಮೂಲತಃ ವೈಷ್ಣವಪಂಥಗಳಾಗಿದ್ದರೂ ಮಧ್ವಾಚಾರ್ಯ ಮತ್ತು ಚೈತನ್ಯರ ಮೊದಲೇ ವಿಷ್ಣುಭಕ್ತಿಯನ್ನು ಶಂಕರರು ಒಪ್ಪಿಕೊಂಡಿದ್ದರು. ಶಂಕರರದು ಜ್ಞಾನಮಾರ್ಗವಾದರೂ ಭಕ್ತಿಮಾರ್ಗವನ್ನು ತ್ಯಜಿಸಿದವರಲ್ಲವೆಂದು ಅವರ 'ಭಜ ಗೋವಿಂದಂ' ಕೃತಿಯು ಹೇಳುತ್ತದೆ. ತಮ್ಮ 'ಬ್ರಹ್ಮಸೂತ್ರ ಭಾಷ್ಯ'ದಲ್ಲೂ ಕೂಡ ವಿಷ್ಣುಭಕ್ತಿಯಿಂದ ಮಾತ್ರ ಸಾಧಕನೋರ್ವನಿಗೆ ಬಾಳಬಂಧನದಿಂದ ಬಿಡುಗಡೆಯು ಸಾಧ್ಯವೆಂಬ ಪಂಚರಾತ್ರದ ಮಾತನ್ನು ಒಪ್ಪಿಕೊಳ್ಳುತ್ತೇನೆಂದು ಅವರೇ ಹೇಳುತ್ತಾರೆ. ಆದರೆ ವಾಸ್ತವದ ಜಗತ್ತಿನಲ್ಲಿ ಅವರ ಅದ್ವೈತವನ್ನು ಮಾತ್ರ ಪಂಡಿತವರ್ಗವು ಸ್ವೀಕರಿಸಿತು. ಅವರ ಭಕ್ತಿಸಾಹಿತ್ಯವು ಸಾಮಾನ್ಯವರ್ಗಕ್ಕೆ ಮಾತ್ರ ಮೀಸಲಾಯಿತು. ಅವರೊಳಗಿನ ವಿಷ್ಣುಭಕ್ತಿ ಅವರೊಳಗಲ್ಲೇ ಇತ್ತು. ವಿಶೇಷವಿಚಿತ್ರವೆಂದರೆ ಭಕ್ತಿಮಾರ್ಗವನ್ನು ಹಿಡಿದ ರಾಮಾನುಜಾಚಾರ್ಯರಿಗೂ ಅವರ ತಾಯ್ನಾಡಿನಲ್ಲಿ ವಿರೋಧವು ಕಂಡುಬಂದು ಕರ್ನಾಟಕದ ಮೇಲುಕೋಟೆಗೆ ಬಂದರು. ಶಂಕರರೂ ತಾಯ್ನಾಡಿನ ವಿರೋಧವನ್ನು ಕಂಡು ಕರ್ನಾಟಕದ ಶೃಂಗೇರಿಗೆ ಬಂದರು. ಹಾಗಾಗಿ ಭಕ್ತಿಪಂಥದ ಅದರಲ್ಲೂ ವಿಷ್ಣುಭಕ್ತಿಯ ರೂಪವೊಂದು ಕರ್ನಾಟಕದಲ್ಲಿ ಬಹುಕಾಲದ ಮೊದಲೇ ಹುಟ್ಟಿಕೊಂಡಿತ್ತೆಂದು ನಾವು ಭಾವಿಸಿಕೊಳ್ಳಬೇಕಾಗುತ್ತದೆ.

ದಾಸಪಂಥ ಮತ್ತು ಚೈತನ್ಯಪಂಥಗಳು ಭಾರತೀಯ ಪಂಥಗಳು. ಒಂದು ದಕ್ಷಿಣದಲ್ಲಿ ಹುಟ್ಟಿದರೆ, ಇನ್ನೊಂದು ಉತ್ತರದಲ್ಲಿ ಹುಟ್ಟಿತು. ಅಷ್ಟೇ ಅಲ್ಲದೆ ದಕ್ಷಿಣದಲ್ಲಿ ಹುಟ್ಟಿದ ಪಂಥವು ಉತ್ತರಕ್ಕೆ ಹರಿಯಿತು. ಉತ್ತರದಲ್ಲಿ ಹುಟ್ಟಿದ ಪಂಥವು ದಕ್ಷಿಣಕ್ಕೆ ಹರಿಯಿತು. ಕೈಯಲ್ಲಿ ತಾಳವನ್ನು ಹಿಡಿದು, ಕಾಲಿಗೆ ಗೆಜ್ಜೆಯನ್ನು ಕಟ್ಟಿ, ಹರಿಭಕ್ತಿಸಾರವೆಂಬ ಮೂಲತತ್ವವನ್ನು ಬಿತ್ತರಿಸಿತು. ಆದರೆ ಉತ್ತರದ ಚೈತನ್ಯಪಂಥವು ದಕ್ಷಿಣಕ್ಕೆ ಬರುವ ಕೆಲವು ಶತಮಾನಗಳ ಹಿಂದೆಯೇ ಶ್ರೀಮಧ್ವಾಚಾರ್ಯರು ಬಂಗಾಲದ ಅರಸನಾಗಿದ್ದ ಧನೂಜ್‌ರಾಯ್ ಎಂಬಾತನಿಗೆ ತಮ್ಮ ಧರ್ಮವನ್ನುಪದೇಶಿಸಿ ಆ ರಾಜ್ಯದಲ್ಲಿ ತಮ್ಮ ಪಂಥದ ಪ್ರತಿಷ್ಠಾಪನೆಯನ್ನು ಮಾಡಿದ್ದರು.[೧] ಅದೇನೇ

ಇದ್ದರೂ ೧೪-೧೫ ನೆಯ ಶತಮಾನದ ವೇಳೆಗೆ ಈ ಎರಡು ಪಂಥಗಳು ತಾತ್ವಿಕವಾಗಿ ಬೆಳೆದು, ಭಾರತದ ದಕ್ಷಿಣೋತ್ತರ ಭಾಗಗಳನ್ನು ಭಕ್ತಿಯ ಮೂಲಕವಾಗಿ ಬೆಸೆದಿರುವ ರೀತಿಮಾತ್ರ ಅಸಾಧಾರಣವಾದುದು.

ಎರಡು ಪಂಥಗಳು ದಕ್ಷಿಣೋತ್ತರಭಾರತವನ್ನು ಬೆಸೆಯುವಲ್ಲಿ ಹೆಚ್ಚು ಸಹಕಾರಿಯಾದದ್ದು, ಆಯಾಯ ಪಂಥಾನುಯಾಯಿಗಳ ತೀರ್ಥಕ್ಷೇತ್ರ ಪರ್ಯಟಣೆ. ಇದಕ್ಕೆ ಮುಕ್ತಿಯನ್ನು ಪಡೆಯುವ ವೈಯುಕ್ತಿಕ ಬಯಕೆ ಒಂದೆಡೆಯಾದರೆ, ಇನ್ನೊಂದು ಸಾರ್ವತ್ರಿಕವಾದ ಹಿತದೃಷ್ಟಿಯಿಂದ ನೆಮ್ಮದಿಯ ಸಮಾಜವನ್ನು ಕಟ್ಟುವ ಮನಸ್ಸು ಅನುಯಾಯಿಗಳದ್ದು. ಆದುದರಿಂದ ಇಲ್ಲಿಯ ಸಂತಶ್ರೇಷ್ಠರು ತಮ್ಮ ತತ್ವಸಿದ್ಧಾಂತದ ಪ್ರಚಾರಕ್ಕಾಗಿ ದಕ್ಷಿಣೋತ್ತರ ರಾಜ್ಯಗಳನ್ನು ತೀರ್ಥಯಾತ್ರೆಯ ಮೂಲಕ ಸಂಚರಿಸುತ್ತಾರೆ. ಅಲ್ಲಲ್ಲಿ ಜನಮನ್ನಣೆಗೂ ಪಾತ್ರರಾಗುತ್ತಾರೆ. ಈ ನೆಲೆಯಲ್ಲಿ ಉತ್ತರದಿಂದ ದಕ್ಷಿಣಕ್ಕೆ ಬಂದ ಚೈತನ್ಯರು, ಪಕ್ಷಧರಮಿಶ್ರರು, ಹಾಗೂ ಉತ್ತರದ ದೆಹಲಿ, ಒರಿಸ್ಸಾದ ಕಡೆಗೆ ತೆರಳಿದ ದಕ್ಷಿಣದವರಾದ ನರಹರಿತೀರ್ಥರು, ವ್ಯಾಸರಾಯರು, ವಾದಿರಾಜರು ಹಾಗೂ ಪುರಂದರದಾಸರು ಮುಖ್ಯರಾಗುತ್ತಾರೆ. ವಾದಿರಾಜರಂತೂ ಮೂರುಬಾರಿ ಭರತಖಂಡದ ಪರ್ಯಟನೆಯನ್ನು ಮಾಡುತ್ತಾರೆ. ಪುರಂದರದಾಸರು ಕೇದಾರದಿಂದ ರಾಮೇಶ್ವರದ ಪರಿಯಂತರ ಎಲ್ಲ ತೀರ್ಥಕ್ಷೇತ್ರಗಳನ್ನು ದರ್ಶಿಸಿ, ಮಹಿಮೆಗಳ, ಸ್ಥಳಪುರಾಣಗಳ ಸಹಿತವಾಗಿ ೧,೨೫,೦೦೦ ಕೀರ್ತನೆಗಳನ್ನು ರಚಿಸಿ ಮಾನ್ಯರಾಗುತ್ತಾರೆ.[೨]

ಶ್ರೀಚೈತನ್ಯ ಮಹಾಪ್ರಭುಗಳು ಹರಿ ಸಂಕೀರ್ತನೆಯನ್ನು ಸಾರಲು ದಕ್ಷಿಣಭಾರತದ ಯಾತ್ರೆಯನ್ನು ಕೈಗೊಂಡ ಕಾಲದಲ್ಲಿ ಸ್ಪಷ್ಟತೆಯು ಉಳಿದಿಲ್ಲ. ಆದರೂ ಆ ಕಾಲಮಾನವು ಉಡುಪಿಯ ವಾದಿರಾಜ(೧೪೮೦)ರ ಕಾಲಕ್ಕೆ ಹತ್ತಿರ ಇರಬಹುದೆಂದು ಭಾವಿಸಬೇಕಾಗುತ್ತದೆ. ದಕ್ಷಿಣಭಾರತಕ್ಕೆ ಬಂದ ಇವರು ಪಂಢರಾಪುರ, ಕೂರ್ಮಕ್ಷೇತ್ರ, ಅಹೋಬಲಕ್ಷೇತ್ರ, ವೃದ್ಧಾಚಲಮ್(ವೃದ್ಧಕಾಶಿ–ಅರ್ಕಾಟಜಿಲ್ಲೆಯ ಮಣಿಮುಖನದಿಯ ದಂಡೆಯ ಮೇಲಿದೆ), ತಿರುಪತಿ–ತಿರುಮಲ ದೇವಸ್ಥಾನ, ಪಾನಕನರಸಿಂಹ ದೇವಾಲಯ (ಇದು ವಿಜಯವಾಡದಿಂದ ಏಳು ಮೈಲು ದೂರದಲ್ಲಿರುವ ಮಂಗಲಗಿರಿ ಬೆಟ್ಟದಲ್ಲಿದೆ), ವಿಷ್ಣುಕಂಚಿ, ಕಾಳಹಸ್ತಿ, ಚಂಗಲಪೇಟೆಯಿಂದ ೯ ಮೈಲು ದೂರದಲ್ಲಿರುವ ಪಕ್ಷಿತೀರ್ಥದ ಶಿವದೇವಾಲಯ, ವೃದ್ಧಕೋಲಮ್‌ನ ಶ್ವೇತವರಾಹ ದೇವಾಲಯ, ತಂಜಾವೂರಿನಿಂದ ಈಶಾನ್ಯಕ್ಕೆ ೪೮ ಮೈಲುಗಳ ದೂರದಲ್ಲಿರುವ ಶಿಯಾಲಿ ಭೈರವಿ ದೇವಾಲಯ, ಶ್ರೀರಂಗದ ರಂಗನಾಥ ದೇವಾಲಯ, ರಾಮೇಶ್ವರ ಮತ್ತು ಧನುಷ್ಕೋಟಿ ಕ್ಷೇತ್ರಗಳು, ಮಲ್ಲಾರದೇಶ (ದಕ್ಷಿಣಕನ್ನಡ, ಕೊಡಗು, ಕೊಚ್ಚಿನ್‌ಪ್ರಾಂತ್ಯಗಳು), ಶೃಂಗೇರಿ, ಉಡುಪಿ, ಗೋಕರ್ಣ, ಕೊಲ್ಲಾಪುರ ಹಾಗೂ ಪಂಢರಾಪುರಕ್ಕೆ ಭೇಟಿಯಿತ್ತು ಸಂಕೀರ್ತನೆಯನ್ನು ನಡೆಸುತ್ತಾರೆ. ಒಟ್ಟಿನಲ್ಲಿ ಉತ್ತರ ಭಾರತದಿಂದ ಬಂದ ಸಂಕೀರ್ತನವೆಂಬ ಭಕ್ತಿರಸಾಮೃತವು ದಕ್ಷಿಣಭಾರತದ ಮೂಲೆ ಮೂಲೆಗೂ ಹರಿಯುತ್ತದೆ.

ದಕ್ಷಿಣದ ದಾಸಪಂಥವೂ ಕೂಡ ಉತ್ತರದ ತೀರ್ಥಕ್ಷೇತ್ರ ಹಾಗೂ ವಿದ್ಯಾಪೀಠಗಳನ್ನು ದರ್ಶಿಸುತ್ತದೆ. ಇದಕ್ಕೆ ಉತ್ತರದ ದೇಶಾಟನದಲ್ಲಿದ್ದ ವ್ಯಾಸತೀರ್ಥರು ತರ್ಕಪಂಡಿತನಾದ ಪಕ್ಷಧರಮಿಶ್ರನೆಂಬವನನ್ನು ತರ್ಕವಾಕ್ಯಾರ್ಥದಲ್ಲಿ ಸೋಲಿಸಿ, ಭಾಗವತಧರ್ಮವನ್ನು ಸೇರುವಂತೆ ಮಾಡಿದ ಚಾರಿತ್ರಿಕ ವಿಚಾರವೇ ಸಾಕ್ಷಿ.

ಇಲ್ಲಿ ಕಾಶಿ, ನವದ್ವೀಪ ಮೊದಲಾದ ವಿದ್ಯಾಪೀಠಗಳನ್ನು ವ್ಯಾಸರಾಯರು ಸಂದರ್ಶಿಸಿದರೆ, ಪಕ್ಷಧರಮಿಶ್ರನು ದಕ್ಷಿಣದೇಶದ ಸಂಚಾರವನ್ನು ಸ್ವೀಕರಿಸಿಕೊಂಡು ಮುಳಬಾಗಿಲಿಗೆ ಬರುತ್ತಾನೆ. ಇದು ದಕ್ಷಿಣೋತ್ತರದ ಉತ್ತಮಬಾಂಧವ್ಯಕ್ಕೆ ಮುಖ್ಯ ನಿದರ್ಶನವಾಗುತ್ತದೆ.

ಹಿಂದೂಧರ್ಮದ ಧಾರ್ಮಿಕ ಭಾವನೆಗಳಿಗೆ ಪ್ರಾಚೀನದಿಂದಲೂ ಇತರ ಧರ್ಮೀಯರಿಂದ ಅಡ್ಡಿಯಾಗುತ್ತಿತ್ತು. ಅದೆಷ್ಟೋ ಇತರ ಧರ್ಮದ ದೊರೆಗಳು ಹಿಂದೂಸಂತರನ್ನು ಪರೀಕ್ಷಿಸಿ, ಸೋತು, ನಂತರದಲ್ಲಿ ಹಿಂದೂಧರ್ಮದ ವಿಶೇಷತೆಗೆ ಮಾರುಹೋಗಿ, ಧರ್ಮನಿಷ್ಠರಾದ ಸಾಧುಸಂತರನ್ನು ಸಂಮ್ಮಾನಿಸಿದ್ದೂ ಇದೆ. ಇಂತಹ ಉಲ್ಲೇಖಗಳಿಗೆ ಬಂಗಾಳದ ಚೈತನ್ಯಪಂಥ ಮತ್ತು ಕರ್ನಾಟಕದ ದಾಸಪಂಥಗಳು ಮುಖ್ಯವಾದ ಉದಾಹರಣೆಗಳಾಗುತ್ತವೆ. ಇಲ್ಲಿ ಎರಡು ಪಂಥಗಳ ಚಾರಿತ್ರಿಕ ಅಧ್ಯಯನದಲ್ಲಿ ಮುಸಲ್ಮಾನ ದೊರೆಗಳು ಹಿಂದೂಸಂಸ್ಕೃತಿಯನ್ನು ಪುರಸ್ಕರಿಸಿದ ವಿಚಾರಗಳು ಸಿಗುತ್ತವೆ. ಬಂಗಾಳದ ಖಾಜಿ ದೊರೆಯು ಚೈತನ್ಯಪಂಥದ ಸಂಕೀರ್ತನಾಸಂಪ್ರದಾಯಕ್ಕೆ ಒಳಗಾಗಿ, ಹಿಂದೂಧರ್ಮಕ್ಕೆ ಪ್ರವೇಶಿಸಿದ್ದು, ಅಂತೆಯೇ ವ್ಯಾಸರಾಯರ ಖ್ಯಾತಿಯನ್ನು ಗಮನಿಸಿದ ಬಿಜಾಪುರದ ಅದಿಲ್‌ಷಾಹಿ ದೊರೆಯು ವಿಜಯನಗರದ ಅರಸರಿಗೆ ಮರ್ಯಾದೆಯನ್ನು ಕಳುಹಿಸುವಾಗ ವ್ಯಾಸರಾಯರಿಗೂ ಪ್ರತ್ಯೇಕವಾಗಿ, ಒಂಟೆಯ ಮೇಲೆ ಬಿರುದಾವಳಿಗಳನ್ನು, ಹಸಿರುಛತ್ರಿಯನ್ನೂ ವಂದನಾಪೂರ್ವಕವಾಗಿ ಸಮರ್ಪಿಸಿದ್ದು ದಕ್ಷಿಣೋತ್ತರದ ಸಾಧುಸಂತರಿಗೆ ಸಿಕ್ಕಿದ ಗೌರವವೆಂದು ಭಾವಿಸಿಕೊಳ್ಳಬೇಕಾಗುತ್ತದೆ. ಈ ಸಂದರ್ಭದಲ್ಲಿ ದೆಹಲಿಯರಸ ಬಾಬರ್‌ನಿಂದ ವ್ಯಾಸರಾಯರಿಗೆ ಸಿಕ್ಕಿದ ಮರ್ಯಾದೆಯನ್ನು ಹಾಗೂ ನರಹರಿತೀರ್ಥರಿಗೆ ಒರಿಸ್ಸಾದ ರಾಜ ಗಜಪತಿ ಅರಸರಿಂದ ಸಿಕ್ಕಿದ ಸನ್ಮಾನವನ್ನು ಮರೆಯುವಂತಿಲ್ಲ.

ಇಂತಹ ವಿಚಾರವನ್ನು ಮೆಲುಕು ಹಾಕುವಾಗ ವಾದಿರಾಜರ ಉತ್ತರಭಾರತದ ತೀರ್ಥಕ್ಷೇತ್ರಗಳ ಸಂದರ್ಶನದಲ್ಲಿ ಅಯೋಧ್ಯೆ ಮತ್ತು ಹುಮಾಯೂನನ ಘಟನೆಯೊಂದನ್ನು ನೆನಪಿಸಲೇ ಬೇಕಾಗುತ್ತದೆ. ವಾದಿರಾಜರು ಅಯೋಧ್ಯೆಯ ರಾಮನ ಭಗ್ನಾಲಯದ ಸಮೀಪ ಮಣ್ಣಿನಡಿ ಹೂತುಹೋದ ಗರುಡ ಮತ್ತು ಮುಖ್ಯಪ್ರಾಣರ ಸುಂದರ ಎರಡು ವಿಗ್ರಹಗಳು ಅನಾಥಪ್ರಜ್ಞೆಯಲ್ಲಿ ಗೋಚರವಾಗಲು, ಅದನ್ನು ಉಡುಪಿಯ ಶ್ರೀಕೃಷ್ಣ ಮಠದಲ್ಲಿ ಪ್ರತಿಷ್ಠಾಪಿಸಲು ವಸ್ತ್ರದಲ್ಲಿ ಸುತ್ತಿ ಕೈಗೆತ್ತಿಕೊಳ್ಳುತ್ತಾರೆ. ದೆಹಲಿಯರಸ ಹುಮಾಯೂನನಿಗೆ ಆತನ ಬೇಹುಗಾರರು, ಸಂನ್ಯಾಸಿಯೊಬ್ಬರು ನಿಧಿ ಅಪಹರಿಸುತ್ತಿರುವರೆಂದು ಸುಳ್ಳುವದಂತಿಯನ್ನು ನೀಡಲು, ಸ್ವತಃ ಹುಮಾಯೂನನೇ ಬಂದು ವಾದಿರಾಜರನ್ನು ಅವಮಾನಿಸಿ ಗೌಪ್ಯನಿಧಿಯನ್ನು ತೋರಿಸುವಂತೆ ಆಜ್ಞಾಪಿಸುತ್ತಾನೆ. ವಾದಿರಾಜರು ಶಿಲಾವಿಗ್ರಹಗಳನ್ನು ತೋರಿಸಿದಾಗ ದೆಹಲಿಯರಸ ಅವಮಾನ ಹಾಗೂ ಪಶ್ಚಾತ್ತಾಪಕ್ಕೊಳಗಾಗುತ್ತಾನೆ. ತನ್ನ ಅಕೃತ್ಯಕ್ಕೆ ಕ್ಷಮೆಯನ್ನು ಯಾಚಿಸಿದ ಹುಮಾಯೂನನಿಗೆ 'ನಿನ್ನ ದಾರ್ಷ್ಟ್ಯ ಹಾಗೂ ಅಹಂಕಾರಕ್ಕಾಗಿ ರಾಜ್ಯಭ್ರಷ್ಟನಾಗು, ಆದರೆ ಪಶ್ಚಾತ್ತಾಪವನ್ನು ನೀನು ಪಟ್ಟಿರುವುದರಿಂದ ಮತ್ತೆ ರಾಜ್ಯಲಕ್ಷ್ಮಿಯು ನಿನಗೊಲಿಯುತ್ತಾಳೆ' ಎಂದು ಶಪಿಸಿ ಮತ್ತೆ ಅನುಗ್ರಹಿಸುತ್ತಾರೆ. ಹುಮಾಯೂನನು ಮತ್ತೆ

ಭಕ್ತಿಪೂರ್ವಕ ಕಾಣಿಕೆಯನ್ನು ಸ್ವೀಕರಿಸಲು ಒತ್ತಾಯಿಸಿದಾಗ ವಾದಿರಾಜರು, 'ಹಿಂದೂ ಮುಸ್ಲಿಮರನ್ನು ಸಾಮರಸ್ಯದಿಂದ ಕಾಣುವ ಪುತ್ರಸಂತಾನ ನಿನಗಾಗಲಿ, ಅವನು ಸುಭಿಕ್ಷೆಯಿಂದ ರಾಜ್ಯವಾಳಲಿ' ಎಂದು ಅನುಗ್ರಹಿಸುತ್ತಾರೆ. ಈ ಘಟನೆಯೊಂದು ಮೊದಲಿಗೆ ಉತ್ತರದ ಕಡೆಯವರಿಂದ ದಕ್ಷಿಣದವರಿಗೆ ಅವಮಾನವಾದರೂ ಅನಂತರದಲ್ಲಿ ದಕ್ಷಿಣದವರನ್ನು ಸಾಮರಸ್ಯದಿಂದ ಕಾಣುತ್ತದೆ. ಇದರಿಂದ ದಕ್ಷಿಣೋತ್ತರ ಭಾರತದ ಸಂಬಂಧವು ಇನ್ನಷ್ಟು ವೃದ್ಧಿಸುವಂತಾಗುತ್ತದೆ.

ವ್ಯಾಸರಾಯರ ಸಮಕಾಲೀನರಾದ ಶ್ರೀವೈಕುಂಠದಾಸರ ಭಕ್ತಿಸ್ವರೂಪಕ್ಕೂ ಹಾಗೂ ಬಂಗಾಳದ ಶ್ರೀಚೈತನ್ಯ ಪ್ರಭುಪಾದರ ಭಕ್ತಿಸ್ವರೂಪಕ್ಕೂ ಬಹಳಷ್ಟು ಸಾಮ್ಯತೆಯನ್ನು ಕಾಣುತ್ತೇವೆ. ಶ್ರೀಚೈತನ್ಯರಂತೆ ಶ್ರೀವೈಕುಂಠದಾಸರಿಗೂ ಭಗವಂತನ ಕುರಿತಾದ ಪ್ರೇಮಭಕ್ತಿಯ ಹಸಿವಿದೆ. ಅವರಿಗೆ "ನಾನು ಕೇಶವನನ್ನು ಕಾಣಬೇಕು, ಕೇಶವನೊಡನೆ ಸಖನಂತೆ, ಸೇವಕನಂತೆ, ಶಿಷ್ಯನಂತೆ ನಲಿದಾಡಬೇಕು" ಎಂಬಲ್ಲಿ ಗೌಡೀಯ ಪಂಥದ ಭಾವುಕತೆಯೊಂದು ದಾಸಪಂಥದಲ್ಲೂ ಕಾಣುವಂತಾಗುತ್ತದೆ. ವೈಕುಂಠದಾಸರ ಮಗನಾದ ನಂಜುಂಡನು ಬೇಲೂರಿನ ಫೌಜುದಾರ (ಇಂದಿನ ಡೆಪ್ಯುಟಿ ಕಮಿಷನರ್‌ಗೆ ಸಮಾನವಾದ ವೃತ್ತಿ)ನಾಗಿ ಕೆಲಸ ನಿರ್ವಹಿಸಿಕೊಂಡಿದ್ದ.[೩] ಆದರೂ ದಾಸನಾಗಿದ್ದುಕೊಂಡು ಭಜನಾಪದ್ಧತಿಯನ್ನು ಆಚರಣೆಯಲ್ಲಿಟ್ಟು ಕೊಂಡಿದ್ದ. ಇದೇ ರೀತಿಯ ಲೌಕಿಕವೃತ್ತಿ ಜೀವನವನ್ನು ಚೈತನ್ಯಪಂಥದ ಶ್ರೀರಮಾನಂದರಾಯರಲ್ಲೂ ಕಾಣುತ್ತೇವೆ. ಅವರು ಗೋದಾವರೀತೀರದ ವಿದ್ಯಾನಗರಿಯ ರಾಜ್ಯಪಾಲ ಹುದ್ದೆಯನ್ನು ಅಲಂಕರಿಸಿದ್ದರೂ ಅಚಿಂತ್ಯಾತತ್ವವನ್ನು ಮೈಗೂಡಿಸಿಕೊಳ್ಳುತ್ತಾರೆ. ಅಂತೆಯೇ ದಬೀರ್‌ಖಾಸ್ ಮತ್ತು ಸಾಕರಮಲ್ಲಿಕ್ (ರೂಪ ಹಾಗೂ ಸನಾತನ ಗೋಸ್ವಾಮಿಗಳು)ಎಂಬವರು ಮಹಮ್ಮದೀಯ ಸರಕಾರದ ಆಡಳಿತದಲ್ಲಿ ಕೆಲಸವನ್ನು ನಿರ್ವಹಿಸುತ್ತಿದ್ದರೂ ಚೈತನ್ಯರ ಪ್ರಭಾವಕ್ಕೊಳಗಾಗಿ ಹರಿಸಂಕೀರ್ತನಾಚಳುವಳಿಗೆ ಒಳಗಾಗಿರುವುದು ವಿಶೇಷವೆನಿಸುತ್ತದೆ. ಆದರೆ ಅದಕ್ಕಿಂತಲೂ ಮುಖ್ಯವಾಗಿ ಆ ಇಬ್ಬರು ಬ್ರಾಹ್ಮಣ ಸಹೋದರರು ಕರ್ನಾಟಕದವರಾಗಿದ್ದುಕೊಂಡು ದೂರದ ಚೈತನ್ಯಪಂಥವನ್ನು ಸೇರಿದ್ದು, ಹಾಗೂ ಪರ್ಷಿಯನ್, ಅರೇಬಿಕ್ ಹಾಗೂ ಸಂಸ್ಕೃತ ಭಾಷೆಗಳಲ್ಲಿ ಪ್ರಭುತ್ವವನ್ನು ಪಡೆದ ವಿಚಾರಗಳು ದಕ್ಷಿಣೋತ್ತರ ಭಾರತದ ಸಂಬಂಧವನ್ನು ಬೆಸೆಯುವಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯುತ್ತದೆ.[೪]

ದಕ್ಷಿಣಭಾರತದ ಸಂಬಂಧವನ್ನು ಚೈತನ್ಯಪಂಥವು ಬೆಳೆಸಿದುದರಿಂದ, ದಕ್ಷಿಣದವರಿಗೆ ರಾಧೆಯ ಪರಿಚಯವಾತ್ತದೆ. ಆದರೆ ಆಕೆಯನ್ನು ದಾಸಸಾಹಿತ್ಯದಲ್ಲಿ ಬಳಸಿಕೊಂಡ ಉಲ್ಲೇಖಗಳು ಕೇವಲ ಎರಡು ಕೀರ್ತನೆಗಳಲ್ಲಿ ಮಾತ್ರವೆಂದೇ ಹೇಳಬೇಕು. ಹಾಗಾಗಿ ರಾಧಾಸಂಪ್ರದಾಯವೊಂದು ಉತ್ತರದವರಿಗೆ ಮಾತ್ರ ಮೀಸಲಾಗುತ್ತದೆ. ಬಂಗಾಳ ಹಾಗೂ ಉತ್ಕಲಗಳ ಕಡೆ ರಾಧಾಕೃಷ್ಣರ ಮಧುರ ಶೃಂಗಾರವೇ ಅಲ್ಲಿಯ ಭಕ್ತಿಗೆ ಮೂಲ ಸ್ಫೂರ್ತಿಯಾಗುತ್ತದೆ.

ರಾಧೆಯನ್ನು ಕಾಣದ ದಕ್ಷಿಣದವರಿಗೆ ಕೃಷ್ಣನ ಬಾಲ್ಯದ ಗೆಳತಿಯಾದ ನೀಳಾದೇವಿಯು ಮುಖ್ಯಳಾಗುತ್ತಾಳೆ. ದಾಸಕೀರ್ತನೆಗಳು ನೀಳೆಯ ಹೆಸರನ್ನು ಹೇಳದಿದ್ದರೂ ಆಕೆಯೇ ಕೃಷ್ಣನ ರಾಸಲೀಲೆಗೆ

ಮುಖ್ಯಳಾಗುತ್ತಾಳೆ. ಭಾಗವತವೂ ಕೂಡ ನೀಳಾದೇವಿಯನ್ನು ಉಲ್ಲೇಖಿಸುತ್ತದೆ. ಆದರೆ ಅಲ್ಲಿ ರಾಧೆಯ ಸುಳಿವು ವಿಶೇಷವಾಗಿಲ್ಲವೆಂದು ಹೇಳಬೇಕು. ಅಲ್ಲದೆ ಮಧ್ವಾಚಾರ್ಯರು, ರಾಮಾನುಜಾಚಾರ್ಯರು ನೀಳಾದೇವಿಯನ್ನು ಉಲ್ಲೇಖಿಸುತ್ತಾರೆಯೇ ಹೊರತು ರಾಧೆಯನ್ನಲ್ಲ. ಒಟ್ಟಿನಲ್ಲಿ ದಕ್ಷಿಣದ ನೀಳಾದೇವಿಯು ಉತ್ತರದ ಚೈತನ್ಯಪಂಥದವರ ಪಾಲಿಗೆ ರಾಧೆಯಾಗಿ ಆರಾಧನಗೊಂಡಳೆಂದು ಭಾವಿಸಿಕೊಳ್ಳಬೇಕಾಗುತ್ತದೆ."

ಸಂಗೀತದ ನೆಲೆಯಲ್ಲಿ ಎರಡು ಪಂಥಗಳನ್ನು ವಿಶ್ಲೇಷಿಸಿದರೆ ದಾಸಸಾಹಿತ್ಯದ ಪ್ರಭಾವ ಹೆಚ್ಚೆಂದೇ ಹೇಳಬೇಕು. ಕಾರಣವೆಂದರೆ ಒಂದನೆಯದಾಗಿ, ದಾಸಸಾಹಿತ್ಯದ ರಾಗತಾಳ ಹಾಗೂ ಛಂದೋವೈವಿಧ್ಯಗಳು ಹಲವಾದರೆ, ಎರಡನೆಯದಾಗಿ ಸ್ವತಃ ದಾಸರುಗಳು ಛಂದೋಮೀಮಾಂಸಕರು ಹಾಗೂ ಸಂಗೀತಜ್ಞಾನವುಳ್ಳವರೂ ಆಗಿದ್ದದ್ದು ವಿಶೇಷ. ಈ ನಿಟ್ಟಿನಲ್ಲಿ ಚೈತನ್ಯಸಾಹಿತ್ಯ ಸ್ವಲ್ಪಮಟ್ಟಿಗೆ ಹಿಂದೆ ಸರಿಯುತ್ತದೆ. ದಾಸಪಂಥವು ಸಂಗೀತಕಲೆಗೆ ನೀಡಿದ ದೊಡ್ಡ ಕೊಡುಗೆಯೆಂದರೆ ಪುರಂದರದಾಸರು. ಸರಳವರಸೆ ಮತ್ತು ಜಂಟಿವರಸೆಗಳೆಂಬ ಸಪ್ತಸ್ವರಗಳಿಗೆ ಸಪ್ತತಾಳಗಳ ಅಭ್ಯಾಸ ಪಾಠಗಳನ್ನು ಪ್ರಾರಂಭ ಮಾಡಿದುದೇ ಪುರಂದರದಾಸರು. ಇವರು ರಚಿಸಿದ 'ಲಂಬೋದರ ಲಕುಮಿಕರ', 'ಕೆರೆಯ ನೀರನು ಕೆರೆಗೆಚೆಲ್ಲಿ' ಕೀರ್ತನೆಗಳು ಸಂಗೀತಲೋಕಕ್ಕೆ ಪ್ರವೇಶದ್ವಾರವಾಗಿ ಪರಿಣಮಿಸಿತು. ಆದುದರಿಂದಲೇ ಪುರಂದರದಾಸರು ಕರ್ನಾಟಕಸಂಗೀತದ ಪಿತಾಮಹರಾದರು. ತ್ಯಾಗರಾಜರಂತಹ ಗಾನಮೂರ್ತಿಗಳಿಗೆ ಅವರ ತಾಯಿಯು ಹಾಡುತ್ತಿದ್ದ ಪುರಂದರದಾಸರ ದೇವರನಾಮಗಳೇ ಸ್ಫೂರ್ತಿದಾಯಕವಾದುದೆಂದು ತ್ಯಾಗರಾಜರ ಇತಿಹಾಸವು ತಿಳಿಸುತ್ತದೆ. ಪುರಂದರದಾಸರ ಸಂಗೀತವಿದ್ವತ್ತು ಕೇವಲ ದಕ್ಷಿಣಭಾರತಕ್ಕಲ್ಲದೆ ಉತ್ತರಕ್ಕೂ ಹರಿಯುತ್ತದೆ. ಉತ್ತರಭಾರತದ ಸಂಗೀತಾಧ್ಯಯನಾಕಾಂಕ್ಷಿಗಳು ಕರ್ನಾಟಕಸಂಗೀತವನ್ನು ಇಷ್ಟಪಡುವಂತಾಗುತ್ತದೆ. ಒಟ್ಟಿನಲ್ಲಿ ದಕ್ಷಿಣದ ಸಂಗೀತಕಲೆಯನ್ನು ಉತ್ತರಭಾರತವು ಸ್ವೀಕರಿಸಿಕೊಂಡ ವಿಚಾರವೊಂದು ಎರಡು ದಿಕ್ಕುಗಳನ್ನು ಸೌಹಾರ್ದತೆಯ ಮೂಲಕ ಬೆಸೆಯುವಲ್ಲಿ ಯಶಸ್ಸಾಗುತ್ತದೆ.

೭.೨ : ಭಾರತೀಯ ಭಕ್ತಿ ಚಳುವಳಿಯ ಎರಡು ಕಣ್ಣುಗಳು

ಭಾರತದ ಭಕ್ತಿಚಳುವಳಿಯಲ್ಲಿ ಅನುಭಾವಿಗಳ ತಾತ್ವಿಕ ಹೋರಾಟವು ಹಿಂದಿನಿಂದ ಬಂದಿರುವಂತಹುದು. ಮಹಾಪುರುಷರ ಉದಯ, ಧರ್ಮಜಾಗೃತಿಗಳೆನ್ನುವಂತಹುದು ಭಾರತೀಯ ನೆಲದಗುಣ. ಕಾಶ್ಮೀರದ ಲಲ್ಲೇಶ್ವರಿ, ಅಸ್ಸಾಮಿನ ಶಂಕರದೇವ, ಉತ್ಕಲದ ಜಗನ್ನಾಥದಾಸ, ಪಂಜಾಬಿನ ಗುರುನಾನಕ್, ರಾಜಸ್ಥಾನದ ಮೀರಾಬಾಯಿ, ಉತ್ತರ ಪ್ರದೇಶದ ಕಬೀರ, ತುಳಸೀದಾಸ, ಮಹಾರಾಷ್ಟ್ರದ ನಾಮದೇವ ಗುಜರಾತಿನ ವಲ್ಲಭಾಚಾರ್ಯ(ಇವರು ಮೂಲತಃ ಆಂಧ್ರದವರು), ಆಂಧ್ರದ ಅನ್ನಮಾಚಾರ್ಯ ಇವರುಗಳೆಲ್ಲ ಭಾರತೀಯ ಧರ್ಮಜಾಗೃತಿಗೆ ಕಾರಣರಾದ ವೈಷ್ಣವ ಸಂತರುಗಳೆನ್ನುವುದು ಮೆಚ್ಚಬೇಕಾದ ವಿಚಾರ. ಆದರೂ ಕರ್ನಾಟಕದ ದಾಸಪಂಥ ಮತ್ತು ಬಂಗಾಳದ ಚೈತನ್ಯಪಂಥಗಳು ವೈಷ್ಣವಪಂಥಗಳೆನಿಸಿ, ದೇಶದ ಉದ್ದಗಲದಲ್ಲಿ

ಮೂಡಿಸಿದ ಧಾರ್ಮಿಕ ಹಾಗೂ ತತ್ವಯುಕ್ತಕ್ರಾಂತಿ ಮಾತ್ರ ಅಚ್ಚರಿಯನ್ನುಂಟು ಮಾಡುವವು. ಭಾರತೀಯ ಭಕ್ತಿಚಳುವಳಿಯ ಸಮಗ್ರಚಿತ್ರದಲ್ಲಿ ಈ ಎರಡು ಪಂಥಗಳು ಎರಡು ಕಣ್ಣುಗಳಂತೆ ಗೋಚರಿಸಲ್ಪಡುವವು.

ತೌಲನಿಕ ಅಧ್ಯಯನಕ್ಕೆ ಸ್ವೀಕರಿಸಿಕೊಂಡ ಎರಡು ಪಂಥಗಳು ಕೂಡ ಅನ್ಯಧರ್ಮೀಯರನ್ನು ಹರಿಸಂಕೀರ್ತನೆಗೆ ಒಲಿಸಿಕೊಳ್ಳುವಂತೆ ಮಾಡುತ್ತದೆ. ಇದಕ್ಕೆ ಚೈತನ್ಯಪಂಥದಲ್ಲಿ ಬರುವ ಶ್ರೀಹರಿದಾಸ ಠಾಕೂರರು ಮತ್ತು ದಾಸಪಂಥದಲ್ಲಿ ಬರುವ ರಾಮದಾಸರು ನಿದರ್ಶನರಾಗುತ್ತಾರೆ. ಹರಿದಾಸ ಠಾಕೂರರು ಮುಸಲ್ಮಾನ ಕುಟುಂಬದಲ್ಲಿ ಹುಟ್ಟಿದವರು. ಹರೇಕೃಷ್ಣ ಮಂತ್ರದ ಆಕರ್ಷಣೆಯಿಂದಾಗಿ ಚೈತನ್ಯಾನುಯಾಯಿಗಳಾಗಿ, ಶ್ರೀಚೈತನ್ಯರಿಂದಲೇ 'ನಾಮಾಚಾರ್ಯ'ರೆಂದು ಕರೆಸಿಕೊಂಡವರು. ಅಂತೆಯೇ ದಾಸಪಂಥಕ್ಕೆ ಅನ್ವಯಿಸಿದಂತೆ, ಮಹಮ್ಮದೀಯ ಸಮುದಾಯದ ಬಡೇಸಾಹೇಬರು ಕೂಡ ಶ್ರೀರಾಮಾವಧೂತರ ಸಂಸರ್ಗದಿಂದ ಶ್ರೀರಾಮದಾಸರಾಗಿ ಕೀರ್ತನೆಗಳನ್ನು ರಚಿಸುವಲ್ಲಿ ಯಶಸ್ವಿಯಾಗುತ್ತಾರೆ.

ಈ ನೆಲೆಯಲ್ಲಿ ಎರಡು ಪಂಥಗಳು ಕೂಡ ಜಾತಿ, ಕುಲ, ಮಡಿ, ಕಂದಾಚಾರಗಳಿಂದ ದೂರವಿದ್ದು ಹೊಸದಾದ ರೀತಿಯಲ್ಲಿ ಹರಿಮಯವೆನಿಸುವ ವಾತಾವರಣವನ್ನು ನಿರ್ಮಿಸಿಬಿಡುತ್ತವೆ. ಭಗವದ್ಗೀತೆಯ 'ಚಾತುರ್ವರ್ಣ್ಯಮ್ ಮಯಾ ಸೃಷ್ಟ್ಯಮ್ ಗುಣಕರ್ಮ ವಿಭಾಗಶಃ'ವೆಂಬಂತೆ ಗುಣ ಮತ್ತು ಕರ್ಮಗಳಿಂದ ನಾವು ವ್ಯಕ್ತಿಯನ್ನು ನಿರ್ಧರಿಸಬೇಕೆಂಬ ಹೇಳಿಕೆಯನ್ನು ಸರ್ವಸಮಾನವಾಗಿ ಎರಡೂ ಪಂಥಗಳು ಸ್ವೀಕರಿಸಿಕೊಂಡಂತಿದೆ. ಪ್ರಾಯಶಃ ಹೊಸಕಾಲಕ್ಕೆ ಇಂತಹ ಮೌಲ್ಯಾಧಾರಿತವಾದ ಸಿದ್ಧಾಂತಗಳು ಇನ್ನೂ ಹೊಸಹೊಸ ಮಾದರಿಯಲ್ಲಿ ಅಧ್ಯಯನ ಅನ್ವೇಷಣೆಗಳಿಗೆ ಅವಕಾಶವನ್ನು ನಿರ್ಮಿಸಿಕೊಡುತ್ತವೆ. ಈ ನೆಲೆಯಲ್ಲಿ ಚೈತನ್ಯ ಹಾಗೂ ದಾಸಪಂಥಗಳೆರಡನ್ನು ಭಾರತೀಯ ಭಕ್ತಿಚಳುವಳಿಯ ಎರಡು ಕಣ್ಣುಗಳೆಂದೇ ವ್ಯಾಖ್ಯಾನಿಸಬೇಕಾಗುತ್ತದೆ.

೭.೩ : ಮುಂದಿನ ಸಂಶೋಧನೆಯ ಸಾಧ್ಯತೆಗಳು

ದಾಸಪಂಥ ಹಾಗೂ ಚೈತನ್ಯಪಂಥಗಳು ಅಧ್ಯಯನ ದೃಷ್ಟಿಯಲ್ಲಿ ಬಹಳ ವಿಶಾಲವಾದ ವಿಷಯಗಳು. ನಾನು ಅಧ್ಯಯನಾಕಾಂಕ್ಷೆಯಿಂದ ಆಮೂಲಾಗ್ರವಾಗಿ ಸಂಶೋಧಿಸಬೇಕೆಂದು ಹೊರಟರೂ ಅದು ಕೊನೆಯನ್ನು ಮುಟ್ಟಲು ಸಾಧ್ಯವಾಗದೆಯೇ ಹೋಗುತ್ತದೆ. ಈ ನೆಲೆಯಲ್ಲಿ ಹೆಚ್ಚಿನ ಅಧ್ಯಯನಾಕಾಂಕ್ಷಿಗಳಿಗೆ ಎರಡು ಪಂಥಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಅನ್ವೇಷಣೆಯಲ್ಲಿ ಅವಕಾಶವಿದೆ. ಪ್ರಸ್ತುತದಲ್ಲಿ ಈ ಉಭಯ ಪಂಥಗಳ ತೌಲನಿಕ ಅಧ್ಯಯನವನ್ನು ನಡೆಸಿರುವ ನನಗೆ, ಆ ಪಂಥಗಳ ಆಂತರಿಕ ವೈಚಾರಿಕತೆಗೆ ಸಂಬಂಧಿಸಿದಂತೆ ಈ ಕೆಳಗೆ ಸೂಚಿಸಿರುವ ವಿಷಯಗಳಲ್ಲಿ ಇನ್ನೂ ಹೆಚ್ಚಿನ ಅನ್ವೇಷಣೆಯನ್ನು ಮಾಡಬಹುದಾಗಿದೆ. ಅವುಗಳಲ್ಲಿ,

೧. ದಾಸಪಂಥ ಮತ್ತು ಚೈತನ್ಯಪಂಥ–ತತ್ವಾರ್ಥ ಚಿಂತನೆ

೨. ದಾಸಪಂಥ ಮತ್ತು ಚೈತನ್ಯಪಂಥ–ಸಮಾಜ ಅಧ್ಯಯನ

೩. ದಾಸಪಂಥ ಮತ್ತು ಚೈತನ್ಯಪಂಥ–ಛಂದಸ್ಸು ಮತ್ತು ವ್ಯಾಕರಣ ಅಧ್ಯಯನಗಳು

೪. ದಾಸಪಂಥ ಮತ್ತು ಚೈತನ್ಯಪಂಥ–ಸಂಕೀರ್ತನೆ ಮತ್ತು ಹರಿಸರ್ವೋತ್ತಮತ್ವ

೫. ದಾಸಪಂಥ ಮತ್ತು ಚೈತನ್ಯಪಂಥ–ಪವಾಡಗಳು ಮತ್ತು ತಾತ್ವಿಕತೆ

೬. ದಾಸಪಂಥ ಮತ್ತು ಚೈತನ್ಯಪಂಥ–ಶರಣಾಗತಿ ಮತ್ತು ಭಕ್ತಿಸೇವೆಗಳು.

ಇವುಗಳಲ್ಲದೆ, ಆಧ್ಯಾತ್ಮಿಕ ಜಿಜ್ಞಾಸುಗಳಿಗೆ ಇಲ್ಲಿ ಇನ್ನೂ ಹಲವು ರೀತಿಯ ಭಿನ್ನವಿಚಾರಗಳು ತೋರಿಬರಲು ಅವಕಾಶವಿದೆ. ಈ ನೆಲೆಯಲ್ಲಿ, ಮುಂದಿನ ದಿನಗಳಲ್ಲಿ ಇಂತಹ ತಾತ್ವಿಕವಿಚಾರಕ್ಕೆ ಸಂಬಂಧಿಸಿದಂತೆ ಅನೇಕ ಸಂಶೋಧನಾಧ್ಯಯನಗಳು ಮೂಡಿಬರಲಿ ಹಾಗೂ ಇನ್ನೂ ಅನೇಕ ಅಧ್ಯಯನಾಕಾಂಕ್ಷಿಗಳು ಮೂಡಿಬರಲೆಂದು ಈ ಮಹಾಪ್ರಬಂಧದ ಕೊನೆಯಲ್ಲಿ ಆಶಿಸುತ್ತೇನೆ.

****

ಅಧ್ಯಾಯ: ೬. ಅಡಿಟಿಪ್ಪಣಿ

೧. ಶ್ರೀಕರ್ಣಾಟ ಭಕ್ತ ವಿಜಯ, ಪುಟ ಸಂ–೬೪.

೨. ಶ್ರೀಕರ್ಣಾಟ ಭಕ್ತ ವಿಜಯ, ಪುಟ ಸಂ–೧೮೮

೩. ಶ್ರೀಕರ್ಣಾಟ ಭಕ್ತ ವಿಜಯ, ಪುಟ ಸಂ–೨೩೦

೪. ಚೈತನ್ಯ ಚರಿತಾಮೃತ, ಆದಿಲೀಲಾ, ಅಧ್ಯಾಯ ೧೦, ಪುಟ ೧೫೬.

ಚೈತನ್ಯಪಂಥದಲ್ಲಿ ಬರುವ ಸನಾತನ, ರೂಪ ಹಾಗೂ ವಲ್ಲಭ ಗೋಸ್ವಾಮಿಯವರು ಮೂಲತಃ ಕರ್ನಾಟಕದವರೆಂಬುದು ಮುಖ್ಯ ವಿಚಾರ. ಕರ್ನಾಟಕದಲ್ಲಿ ಇವರ ವಂಶವೃಕ್ಷದ ಪ್ರಾಚೀನತೆಯನ್ನು ಹನ್ನೆರಡನೆಯ ಶತಮಾನದಿಂದ ಗಮನಿಸಬಹುದಾಗಿದೆ. ಕರ್ನಾಟಕದಲ್ಲಿದ್ದ ಸರ್ವಜ್ಞನೆಂಬ ಭಾರದ್ವಾಜ ಗೋತ್ರದ ಶ್ರೀಮಂತ ಬ್ರಾಹ್ಮಣ ಸದ್ಗೃಹಸ್ಥನಿಗೆ ಅನಿರುದ್ಧೇರ ರೂಪೇಶ್ವರ ಮತ್ತು ಹರಿಹರ ಎಂಬ ಇಬ್ಬರು ಪುತ್ರರಿದ್ದು, ಅವರು ರಾಜ್ಯವನ್ನು ಕಳೆದುಕೊಂಡು ಪ್ರಸ್ಥಭೂಮಿಯಲ್ಲಿ ವಾಸಿಸಿದರು. ರೂಪೇಶ್ವರರ ಪುತ್ರರಾದ ಪದ್ಮನಾಭರು ಕಾಲಾನಂತರದಲ್ಲಿ ಬಂಗಾಳದ ಗಂಗಾನದಿಯ ತೀರಪ್ರದೇಶವಾದ ನೈಹಾಟಿಗೆ ವಲಸೆ ಹೋದರು. ಅಲ್ಲಿ ಅವರು ಐವರು ಪುತ್ರರನ್ನು ಪಡೆದರು. ಆ ಐವರಲ್ಲಿ ಕೊನೆಯವರು ಮುಕುಂದ ಎಂಬವರು. ಇವರ ಪುತ್ರ ಕುಮಾರದೇವ. ಇವರೇ ರೂಪ, ಸನಾತನ ಹಾಗೂ ವಲ್ಲಭರ ತಂದೆ. ಕುಮಾರದೇವರು ಪೂರ್ವ ಬಂಗಾಳದ ಬಾಕ್ಲಾಚಂದ್ರ ದ್ವೀಪದ ಸರಹದ್ದಿನಲ್ಲಿರುವ ಫತೇಯಾಬಾದ್ ಎಂಬ ಸ್ಥಳದಲ್ಲಿ ಜೀವಿಸುತ್ತಿದ್ದರು. ಅವರ ಅನೇಕ ಪುತ್ರರಲ್ಲಿ ಮೂವರು ವೈಷ್ಣವ ಪಂಥವನ್ನು ಅವಲಂಬಿಸಿದರು. ಕಾಲಾನಂತರದಲ್ಲಿ ರೂಪ, ಸನಾತನ ಹಾಗೂ ವಲ್ಲಭರು ಬಂಗಾಳದ ಮಲಡಹ್ ಜಿಲ್ಲೆಯ ರಾಮಕೇಲಿ ಎಂಬ ಹಳ್ಳಿಗೆ ಬಂದರು. ಈ ಹಳ್ಳಿಯಲ್ಲಿಯೇ ಶ್ರೀವಲ್ಲಭರಿಗೆ ಶ್ರೀಲ ಜೀವ ಗೋಸ್ವಾಮಿಯವರು ಮಗನಾಗಿ ಜನಿಸಿದರು. ಮುಂದಿನ ದಿನಗಳಲ್ಲಿ ಈ ಮೂವರೂ ಅಲ್ಲಿಯ ಮುಸ್ಲಿಮರ ಸರಕಾರದಲ್ಲಿ ಸೇವೆಯಲ್ಲಿ ತೊಡಗಿದ್ದುದರಿಂದ ಮುಲ್ಲಿಕ್ (ಮಲ್ಲಿಕ್) ಎಂಬ ಹೆಸರನ್ನು ಪಡೆದರು. ಚೈತನ್ಯ ಮಹಾಪ್ರಭುಗಳ ದರ್ಶನದ ನಂತರದಲ್ಲಿ ತಮ್ಮ ಸರ್ಕಾರದ ಸೇವೆಗೆ ರಾಜೀನಾಮೆಯನ್ನು ನೀಡಿದರು.

೫. ಭಕ್ತಿ ಭಾರತೀ, ಪುಟ ಸಂ–೨೪

*****

ಅನುಬಂಧಗಳು

೧ : ಪಂಥಗಳೆರಡರ ಚಿತ್ರ ದಾಖಲೆಗಳು

ಭಕ್ತಿಪರಂಪರೆ

ದಾಸಪರಂಪರೆ

ಚೈತನ್ಯಪರಂಪರೆ

ದೇಶೀಯ ಹಾಗೂ ವಿದೇಶೀ ಕೃಷ್ಣ ದೇವಾಲಯಗಳು

ಸಾರ್ವಜನಿಕ ಆಡಳಿತದಲ್ಲಿ ಸಂತರು

ಸಾಮಾಜಿಕ ಕೃಷಿ – ಇನ್ನೂ ಮೊದಲಾದವು.

೨ : ಪರಾಮರ್ಶನ ಗ್ರಂಥಗಳು ಮತ್ತು ಲೇಖನಗಳು

ಕನ್ನಡ ಗ್ರಂಥಗಳು

ಮರಾಠಿ ಹಾಗೂ ಹಿಂದಿ ಗ್ರಂಥಗಳು

ಆಂಗ್ಲ ಭಾಷಾ ಗ್ರಂಥಗಳು

ವಾರಪತ್ರಿಕೆಗಳು


ಮಾಸಪತ್ರಿಕೆಗಳು

****


ಅನುಬಂಧ ೧ : ಪಂಥಗಳೆರಡರ ಚಿತ್ರ ದಾಖಲೆಗಳು: ಭಕ್ತಿಮಾರ್ಗ



ಚತುರ್ಮುಖ ಬ್ರಹ್ಮ



ನಾರದಮುನಿ



ವ್ಯಾಸ ಮಹರ್ಷಿ



ಮಧ್ವಾಚಾರ್ಯ



ಚೈತನ್ಯ ಮಹಾಪ್ರಭು

ಗುರು ಪರಂಪರೆ (ಚೈತನ್ಯಪಂಥ)



ಶ್ರೀಲ ಜಗನ್ನಾಥದಾಸ ಬಾಬಾಜಿ




ಶ್ರೀಲ ಭಕ್ತಿವಿನೋದ ಠಾಕೂರ



ಶ್ರೀಲಗೌರಕಿಶೋರಬಾಬಾಜಿ



ಶ್ರೀಲ ಭಕ್ತಿಸಿದ್ಧಾಂತ ಠಾಕೂರ



ಶ್ರೀಲ ಭಕ್ತಿವೇದಾಂತ ಪ್ರಭುಪಾದ

ದಾಸಪಂಥ (ವ್ಯಾಸಕೂಟ)



ಶ್ರೀ ಶ್ರೀ ಶ್ರೀಪಾದರಾಯರು



ಶ್ರೀ ಶ್ರೀ ವ್ಯಾಸರಾಯರು



ಶ್ರೀ ಶ್ರೀ ವಾದಿರಾಜರು



ಶ್ರೀ ಶ್ರೀ ರಾಘವೇಂದ್ರ ತೀರ್ಥರು

ದಾಸಕೂಟ



ಪುರಂದರದಾಸರು



ಕನಕದಾಸರು




ವಿಜಯದಾಸರು



ಗೋಪಾಲದಾಸರು



ಜಗನ್ನಾಥದಾಸರು




ಜಗನ್ನಾಥದಾಸರ ತಂಬೂರಿ



ಪ್ರಸನ್ನವೆಂಕಟದಾಸರು



ರಾಮದಾಸರು



ಪ್ರಾಣೇಶದಾಸರು



ವಿಜಯ ರಾಮಚಂದ್ರವಿಠಲದಾಸರು



ಗುರುಗೋವಿಂದವಿಠಲ ದಾಸರು



ಅಸ್ಕಿಹಾಳ ಗೋವಿಂದದಾಸರು



ಹರಪ್ಪನಹಳ್ಳಿ ಭೀಮವ್ವ



ಗುರು ಜಗನ್ನಾಥದಾಸರು

ಶ್ರೀ ಚೈತನ್ಯ –ಹಸ್ತ, ಪಾದ ಲಕ್ಷಣ






ಪಂಚ ತತ್ತ್ವ





(ಪಂಚತತ್ತ್ವ – ಶ್ರೀ ಚೈತನ್ಯ , ನಿತ್ಯಾನಂದ , ಅದ್ವೈತ , ಗಧಾದರ ಮತ್ತು ಶ್ರೀ ವಾಸ)

ಶ್ರೀ ಚೈತನ್ಯ ಜನ್ಮ ಕುಂಡಲಿ




महाप्रभु-श्रीगौरांग जन्म-कुण्डली

[illegible]	[illegible]	१८
१५	१६	४
३१	०	०
०	०	२३

शाके मुनि व्योम-युगेन्द्र-गण्ये
पुण्ये तथा फाल्गुण पौर्णमास्याम।
त्रैलोक्य-भाग्योदय-पुण्यकीर्तिः
प्रभुः शचीमन्दिरमाविरासीत्।।

शकनरपतेरतीताब्दा १४०७ फाल्गुणस्य त्रयोविंशति वासरेसिंहलग्ने राहुग्रस्तनिशाकरे उत्तरफाल्गुन्यां सिंहराशौ चन्द्रे श्रीमद्वृन्दावन पुरन्दरः पुरन्दर शचीमन्दिरमाविरासीत् इति। (१६ फरवरी सन् १४८६ शनिवार)




ಶ್ರೀ ಚೈತನ್ಯ ಜನ್ಮಸ್ಥಳ (ನಿಂಬಾವೃಕ್ಷ)




ಷಡ್‌ಗೋಸ್ವಾಮಿಗಳು




(ಶ್ರೀಲ ರೂಪ, ಸನಾತನ, ಜೀವ, ಗೋಪಾಲ ಭಟ್ಟ, ರಘುನಾಥ, ಭಟ್ಟರಘುನಾಥ ಗೋಸ್ವಾಮಿಗಳು)



ಶ್ರೀಲ ರೂಪ ಗೋಸ್ವಾಮಿ




ಶ್ರೀಲ ಸನಾತನ ಗೋಸ್ವಾಮಿ



ಶ್ರೀಲ ಜೀವ ಗೋಸ್ವಾಮಿ



ಶ್ರೀಲ ಗೋಪಾಲಭಟ್ಟ ಗೋಸ್ವಾಮಿ




ಶ್ರೀಲ ರಘುನಾಥ ಗೋಸ್ವಾಮಿ

ದಕ್ಷಿಣಭಾರತದ ಮುಕ್ತಿಕ್ಷೇತ್ರಗಳು

ಕಾಂಚಾಣ ಬ್ರಹ್ಮ (ತಿರುಪತಿ)ಕ್ಷೇತ್ರ





ನಾದಬ್ರಹ್ಮ (ಪಂಢರಾಪುರ) ಕ್ಷೇತ್ರ






ವಾರಿಯಾತ್ರೆ



ವಿಟ್ಠಲ–ರುಕುಮಾಯಿ

ಅನ್ನಬ್ರಹ್ಮ (ಉಡುಪಿ)ಕ್ಷೇತ್ರ







ಕನಕನ ಕಿಂಡಿ

ಬೇಲೂರು ಚೆನ್ನಕೇಶವ ಕ್ಷೇತ್ರ





ಹಂಪಿವಿಜಯವಿಠಲದೇವಸ್ಥಾನ





ಪುರಂದರದಾಸರ ಶಿಲಾಪ್ರತಿಮೆ





ಪುರಂದರದಾಸರ ಮಂಟಪ

ಗೌಡೀಯ ಸಂತರ ಸಮಾಧಿಗಳು



ಸನಾತನ ಗೋಸ್ವಾಮಿಗಳ ಸಮಾಧಿ



ರೂಪ ಗೋಸ್ವಾಮಿಗಳ ಸಮಾಧಿ



ಜೀವ ಗೋಸ್ವಾಮಿಗಳ ಸಮಾಧಿ



ನರೋತ್ತಮರದಾಸರ ಸಮಾಧಿ



ಗೌರೀದಾಸಪಂಡಿತ ಸಮಾಧಿ



ಭಕ್ತಿಸಿದ್ಧಾಂತಸರಸ್ವತಿ ಸಮಾಧಿ



ಹರಿದಾಸ ಠಾಕೂರರ ಸಮಾಧಿ





ಶ್ರೀಲ ಪ್ರಭುಪಾದರ ಸಮಾಧಿ

ದಾಸಪಂಥ–ಬೃಂದಾವನಗಳು







ಶ್ರೀ ಪಾದರಾಯರ ಬೃಂದಾವನ , ಮುಳಬಾಗಿಲು



ಶ್ರೀ ವ್ಯಾಸರಾಯರ ಬೃಂದಾವನ




ನವಬೃಂದಾವನ, ಹಂಪಿ



ಪಂಚ ಬೃಂದಾವನ ,ಸೋದೆ



ಶ್ರೀ ರಾಘವೇಂದ್ರಸ್ವಾಮಿಗಳ ಬೃಂದಾವನ



ಮಹೀಪತಿದಾಸರ ಬೃಂದಾವನ



ರಾಘವೇಂದ್ರ ಸ್ವಾಮಿಗಳ ಪಾದುಕ






ಶ್ರೀವಿಜಯದಾಸಕಟ್ಟೆ



ಮೋಹನದಾಸರ ಕಟ್ಟೆ



Tyagaraja's statue on the Samadhi

ತ್ಯಾಗರಾಜರ ಸಮಾಧಿ



ಗೋಪಾಲದಾಸರ ಮುನೆ




ಪ್ರಸನ್ನವೆಂಕಟದಾಸರ ಮನೆ



ಪ್ರಸನ್ನವೆಂಕಟದಾಸರ ಚೇಪಲಿ



ಪ್ರಸನ್ನವೆಂಕಟದಾಸರ ಗೋಪಾಲಬುಟ್ಟಿ



ಪ್ರಸನ್ನವೆಂಕಟದಾಸರ ತಂಬೂರಿ

ಭಾರತದ ಇಸ್ಕಾನ್ ದೇವಾಲಯಗಳು



ಇಸ್ಕಾನ್, ಮಾಯಾಪುರ




ಇಸ್ಕಾನ್, ಸೂರತ್



ಇಸ್ಕಾನ್, ಬೆಂಗಳೂರು



ಇಸ್ಕಾನ್, ದೆಹಲಿ



ಇಸ್ಕಾನ್, ವೃಂದಾವನ



ಇಸ್ಕಾನ್, ಉಜ್ಜೈನಿ



ಇಸ್ಕಾನ್, ವಡೋದರ



ಇಸ್ಕಾನ್, ಮುಂಬಯಿ



ಇಸ್ಕಾನ್, ಹೈದರಾಬಾದ್



ಇಸ್ಕಾನ್, ತಿರುಪತಿ



ಇಸ್ಕಾನ್ ಮಣಿಪುರ



ಇಸ್ಕಾನ್, ಆರವಾಡೆ

ವಿದೇಶೀ ಇಸ್ಕಾನ್ ದೇವಾಲಯಗಳು



ಇಸ್ಕಾನ್, ಸೌತ್‌ಆಫ್ರಿಕಾ




ಇಸ್ಕಾನ್, ಬೆಲ್ಜಿಯಮ್

ಉತ್ತರಭಾರತದ ರಾಧಾಕೃಷ್ಣ ಪರಿಕಲ್ಪನೆ





ರಾಧಾಕೃಷ್ಣ, ಸಿಡ್ನಿ



ರಾಧಾಕೃಷ್ಣ, ಫಿಲಿಡೆಲ್ಫಿಯಾ



ಶಾಮ ಕುಂಡ



ಪವಿತ್ರ ಯಮುನೆ

ಸಾರ್ವಜನಿಕ ಆಡಳಿತದಲ್ಲಿ ಭಕ್ತಿ ಪಂಥ



ಪುರಂದರದಾಸರು



ಸ್ವಾಮಿ ಪ್ರಭುಪಾದ



ಸಂತ ತುಕಾರಾಮ



ಅನ್ನಮಾಚಾರ್ಯ



ತ್ಯಾಗರಾಜ

ಇಸ್ಕಾನ್‌ನ ಸಾಮಾಜಿಕ ಕಳಕಳಿಯಲ್ಲಿ – ಕೃಷಿ













ಅನುಬಂಧ : ೨

ಪರಾಮರ್ಶನ ಗ್ರಂಥಗಳು ಮತ್ತು ಲೇಖನಗಳು

- ಅಂಗಡಿ, ಎಸ್.ಎಸ್.
  ದಾಸ ಸಾಹಿತ್ಯ ಶಬ್ದ ಶಿಲ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರ-೨೦೦೫.
- ಇಂದುಬಾಯಿ. ಟಿ. ಕೆ.
  ಶ್ರೀಪ್ರಸನ್ನವೆಂಕಟದಾಸರ ಭಾಗವತ : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪ್ರ-೧೯೮೭.
- ಈಶ್ವರಚಂದ್ರ
  ಆತ್ಮ ಸಾಕ್ಷಾತ್ಕಾರ ವಿಜ್ಞಾನ (ಕನ್ನಡಾನುವಾದ), ಭಕ್ತಿವೇದಾಂತ ಬುಕ್ ಟ್ರಸ್ಟ್. ಇಸ್ಕಾನ್, ಬೆಂಗಳೂರು, ಪ್ರ-೧೯೮೬.
- ಈಶ್ವರಚಂದ್ರ
  ಪ್ರಭುಪಾದ-ನವಯುಗದ ಆಚಾರ್ಯ, ಪ್ರಕಾಶಕರು : ಭಕ್ತಿವೇದಾಂತ ಬುಕ್ ಟ್ರಸ್ಟ್. ಇಸ್ಕಾನ್, ಬೆಂಗಳೂರು, ಪ್ರ-೨೦೦೦.
- ಎಚ್ಚೆಸ್ಕೆ
  ದಾಸಸಾಹಿತ್ಯ ದರ್ಶನ, ಸಮಗ್ರ ಸಾಹಿತ್ಯದ ಪ್ರಥಮ ಗ್ರಂಥ, ಮಂಗಳ ಭಾರತಿ ಪ್ರಕಾಶನ, ಮೈಸೂರು, ಪ್ರ-೧೯೮೪.
- ಕೃಷ್ಣಪ್ಪ. ಬಿ.ಎಸ್.
  ಬ್ರಹ್ಮವೈವರ್ತಪುರಾಣ, ಪ್ರಕೃತಿಖಂಡ(ಅನುವಾದ) ಶ್ರೀಜಯಚಾಮರಾಜೇಂದ್ರ ಗ್ರಂಥರತ್ನಮಾಲಾ, ಮೈಸೂರು, ೧೯೪೯.
- ಕೃಷ್ಣದಾಸ ಕವಿರಾಜ ಗೋಸ್ವಾಮಿ.
  ಶ್ರೀಚೈತನ್ಯ ಚರಿತಾಮೃತ (ಆದಿಲೀಲಾ, ಮಧ್ಯಲೀಲಾ ಮತ್ತು ಅಂತ್ಯಲೀಲಾ-೯ ಸಂಪುಟಗಳು: ಭಕ್ತಿವೇದಾಂತ ಬುಕ್ ಟ್ರಸ್ಟ್. ಇಸ್ಕಾನ್, ಬೆಂಗಳೂರು, ಪ್ರ-೨೦೦೭.
- ಕೇಶವದಾಸರು, ಬೇಲೂರು
  ಶ್ರೀಕರ್ಣಾಟ ಭಕ್ತವಿಜಯ, ನವಭಾರತೀ ಪ್ರಕಾಶನ, ಸರಸ್ವತೀಪುರಂ, ಮೈಸೂರು, ಮುದ್ರಣ-೨೦೦೭.
- ಗೀತಾಚಾರ್ಯ. ನಾ.
  ಶ್ರೀವೈಷ್ಣವ ಹರಿದಾಸ ಸಾಹಿತ್ಯ : ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜ ಪೇಟೆ, ಬೆಂಗಳೂರು, ಪ್ರ-೨೦೦೭.
- ಗೋಪಿನಾಥ್. ಎಂ. ಕೆ.
  ಕಾವನಾರು ಕೃಷ್ಣನಲ್ಲದೆ.. (ಕನ್ನಡಾನುವಾದ): ಭಕ್ತಿವೇದಾಂತ ಬುಕ್ ಟ್ರಸ್ಟ್. ಇಸ್ಕಾನ್, ಬೆಂಗಳೂರು, ಪ್ರ-೨೦೦೬.
- ಗೋಕುಲನಾಥ. ಕೆ.
  ಶ್ರೀ ವ್ಯಾಸರಾಯರು-ಜೀವನ ಮತ್ತು ಕೃತಿಗಳ ಸಮೀಕ್ಷೆ, ಪ್ರಕಾಶಕರು : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರ-೨೦೦೨.

- ಗೋಪಿನಾಥ್. ಎಂ. ಕೆ.
  ವೇದಾಂತ ದರ್ಶನ–ಶ್ರೀಚೈತನ್ಯ ಶಿಕ್ಷಾಮೃತ, (ಕನ್ನಡಾನುವಾದ), ಪ್ರಕಾಶಕರು : ಭಕ್ತಿವೇದಾಂತ ಬುಕ್ ಟ್ರಸ್ಟ್. ಇಸ್ಕಾನ್, ಬೆಂಗಳೂರು, ಪ್ರ–೨೦೦೧.
- ಚಂದ್ರ ಪೂಜಾರಿ. ಎಂ.
  ಸಮಾಜ ಸಂಶೋಧನೆ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರ–೨೦೦೫.
- ತಿಪ್ಪೇರುದ್ರಸ್ವಾಮಿ. ಹೆಚ್.
  ಕರ್ನಾಟಕ ಸಂಸ್ಕೃತಿ ಸಮೀಕ್ಷೆ : ಪ್ರಕಾಶಕರು: ಡಿ.ವಿ.ಕೆ.ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು, ಪ್ರ–೨೦೧೦.
- ದೇಬಿಪ್ರಾಸಾದ ಚಟ್ಟೋಪಾಧ್ಯಾಯ
  ಭಾರತೀಯ ದರ್ಶನಗಳು, ಪ್ರಕಾಶಕರು : ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಕ್ರೆಸೆಂಟ್ ರಸ್ತೆ, ಬೆಂಗಳೂರು, ಪ್ರ–೧೯೯೪.
- ದೇಶ ಕುಲಕರ್ಣಿ.
  ಜೀವದ ಮೂಲ ಜೀವ, (ಕನ್ನಡಾನುವಾದ), ಪ್ರಕಾಶಕರು: ಭಕ್ತಿವೇದಾಂತ ಬುಕ್ ಟ್ರಸ್ಟ್. ಇಸ್ಕಾನ್, ಬೆಂಗಳೂರು, ಮುದ್ರಣ–೨೦೦೬.
- ನರಸಿಂಹಾಚಾರ್ಯ. ರಾ.
  ಶಾಸನ ಪದ್ಯ ಮಂಜರಿ, ನಂ ೨೪೬, ರಾ. ನರಸಿಂಹಾಚಾರ್ಯ, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು,–೧೯೭೫.
- ನಾವಡ. ಎ.ವಿ. ಮತ್ತು ಡಾ. ಗಾಯತ್ರಿ ನಾವಡ
  ಸಾವಿರಾರು ಕೀರ್ತನೆಗಳು, ಪ್ರಕಾಶಕರು : ಅಂಕಿತ ಪುಸ್ತಕ, ಗಾಂಧಿ ಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು, ಪ್ರ–೨೦೦೨.
- ನಾವಡ. ಎ. ವಿ.
  ಅರಿವಿನ ಕುರುಹು, ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಮೈಸೂರು, ೨೦೦೮.
- ನಾಗರತ್ನ ಟಿ.ಎನ್.
  ಶ್ರೀ ವಾದಿರಾಜರ ದೀರ್ಘ ಕೃತಿಗಳು : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪ್ರ–೧೯೮೭.
- ನಾಗರತ್ನ ಟಿ.ಎನ್.
  ಶ್ರೀರಾಮದಾಸರ ಕೃತಿಗಳು : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪ್ರ–೧೯೮೭.
- ನಾಗರಾಜ. ಡಿ. ಆರ್.
  ಶಕ್ತಿ ಶಾರದೆಯ ಮೇಳ, ಪ್ರಕಾಶಕರು : ಅಕ್ಷರ ಪ್ರಕಾಶನ, ಹೆಗ್ಗೋಡು(ಸಾಗರ)ಕರ್ನಾಟಕ ರಾಜ್ಯ. ಪ್ರ– ೨೦೦೮.
- ನಾರಾಯಣಾಚಾರ್ಯ. ಕೆ.ಎಸ್.
  ಭಾರತೀಯ ಇತಿಹಾಸ ಪುರಾಣಗಳು, ಸಾಹಿತ್ಯ ಪ್ರಕಾಶನ, ಕೊಪ್ಪೀಕರ್ ಬೀದಿ, ಹುಬ್ಬಳ್ಳಿ, ಪ್ರ–೨೦೦೫.

- ನಾಗರತ್ನ. ಟಿ.ಎನ್.
  ಶ್ರೀಜಗನ್ನಾಥದಾಸರ ಕೃತಿಗಳು, ಪ್ರಸಾರಾಂಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪ್ರ-೧೯೮೭.
- ನಾಗರಾಜ. ಡಿ. ಆರ್.
  ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ, ಪ್ರಕಾಶಕರು : ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ಕರ್ನಾಟಕ, ಪ್ರ- ೨೦೦೬.
- ನಾಗರಾಜಾಚಾರ್ಯ. ಜಿ.ಪಿ.
  ದ್ವೈತ ಸಿದ್ಧಾಂತದಲ್ಲಿ ತಾರತಮ್ಯ, ಪ್ರಕಾಶಕರು : ಕಾವಿನಕಲ್ ಮಠ ಟ್ರಸ್ಟ್, ಪರಶುವಾಕ್ಕಂ, ಚೆನ್ನೈ ಪ್ರ-೨೦೦೬.
- ಪದ್ಮನಾಭ ಶರ್ಮ ಟಿ. ಎಸ್.
  ಮುಕುಂದಮಾಲಾ ಸ್ತೋತ್ರ, ಗಣೇಶ ಪ್ರಕಾಶನ ಪಬ್ಲಿಕೇಷನ್ಸ್, ಬೆಂಗಳೂರು. ಪ್ರ-೨೦೦೯.
- ಪಾಲಾಕ್ಷ
  ಭಾರತದ ಇತಿಹಾಸ, ಶಶಿ ಪ್ರಕಾಶನ, ತಿಪಟೂರು, ಪ್ರ-೧೯೯೨.
- ಪುಟ್ಟಸ್ವಾಮಯ್ಯ.ಬಿ.
  ಶಿವಮಹಿಮ್ನ ಸ್ತೋತ್ರ, ಸಂ: ಸ್ನೇಹಾ ಪಬ್ಲಿಷಿಂಗ್ ಹೌಸ್, ಬೆಂಗಳೂರು, ಪ್ರ-೨೦೧೧
- ಪ್ರಧಾನ ಗುರುದತ್ತ
  ಶ್ರಿ ಕೃಷ್ಣ ಕಥೆಯ ಉಗಮ ಮತ್ತು ವಿಕಾಸ- ಸಂ. ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು, ಪ್ರ-೧೯೯೦.
- ಪ್ರತಾಪಚಂದ್ರ ಶೆಟ್ಟಿ ಹಳ್ನಾಡ್ ಮತ್ತು ಡಾ.ಬಿ.ಶಿವರಾಮ ಶೆಟ್ಟಿ.
  ಕನಕ ಚಿಂತನ : ಕನಕದಾಸ ಸಂಶೋಧನಾ ಕೇಂದ್ರ, ಮಂಗಳೂರು ವಿಶ್ವವಿದ್ಯಾಲಯ, ಮಂಗಳ ಗಂಗೋತ್ರಿ, ಮಂಗಳೂರು, ಪ್ರ-೨೦೧೦.
- ಪ್ರಭುಸ್ವಾಮಿಮಠ. ಸಿ.ವಿ.
  ಬಸವಣ್ಣನವರ ವಚನಗಳ ಸಾಹಿತ್ಯಕ ಅಧ್ಯಯನ, ಅಕ್ಷರ ಪ್ರಕಾಶನ, ಹೆಗ್ಗೋಡು(ಸಾಗರ) ಕರ್ನಾಟಕ, ಪ್ರ-೧೯೯೬.
- ಬನ್ನಂಜೆ ಗೋವಿಂದಾಚಾರ್ಯ
  ಕನಕೋಪನಿಷತ್ತು, ಪ್ರಕಾಶಕರು : ಕನಕದಾಸ ಅಧ್ಯಯನ ಸಂಶೋಧನಾ ಪೀಠ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ, ಪ್ರ-೨೦೦೮.
- ಬನ್ನಂಜೆ ಗೋವಿಂದಾಚಾರ್ಯ.
  ಉಡುಪಿಯ ಕೃಷ್ಣ ದಾಸರು ಕಂಡಂತೆ, ಪ್ರಕಾಶಕರು : ಪರ್ಯಾಯ ಪ್ರಕಾಶನ, ಶ್ರೀ ಅದಮಾರು ಮಠ, ಉಡುಪಿ, ಪ್ರ-೧೯೮೯.
- ಬಸವರಾಜ ಕಲ್ಗುಡಿ.
  ಅನುಭಾವ: ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ. ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು. ಪ್ರ-೧೯೯೭.

- ಬಸವರಾಜ ಸಬರದ.
  ಪುರಂದರದಾಸರ ಕೀರ್ತನೆಗಳು, ಸಂಪುಟ–೩ : ಸಂ. ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪ್ರ–೨೦೦೩.
- ಬಸವರಾಜ ಸಬರದ.
  ಪುರಂದರದಾಸರ ಆಯ್ದ ಕೀರ್ತನೆಗಳು, ಸ್ನೇಹಾ ಪ್ರಿಂಟರ್ಸ್, ವಿಜಯನಗರ, ಬೆಂಗಳೂರು, ೨೦೦೨.
- ಬಸವರಾಜು.ಎಲ್.
  ಅಲ್ಲಮಪ್ರಭುವಿನ ವಚನಗಳು, ಗೀತಾ ಬುಕ್‌ಹೌಸ್, ಮೈಸೂರು, ಪ್ರ–೨೦೧೨.
- ಬಸವರಾಜು.ಎಲ್.
  ಬಸವಣ್ಣನ ವಚನಗಳು, ಗೀತಾ ಬುಕ್‌ಹೌಸ್, ಮೈಸೂರು, ಪ್ರ–೨೦೧೨.
- ಬಸವರಾಜು.ಎಲ್.
  ಅಕ್ಕನ ವಚನಗಳು, ಗೀತಾ ಬುಕ್‌ಹೌಸ್, ಮೈಸೂರು, ಪ್ರ–೨೦೧೨.
- ಬಾಲಕೃಷ್ಣ ಭಾರದ್ವಾಜ. ಕಬ್ಬಿನಾಲೆ
  ಕೀರ್ತನ ಛಂದೋಂಬುದಿ (ಅಪ್ರಕಟಿತ)
- ಬೆನಗಲ್ ರಾಮರಾವ್, ಪಾನ್ಯಂ ಸುಂದರ ಶಾಸ್ತ್ರಿ.
  ಪುರಾಣನಾಮ ಚೂಡಾಮಣಿ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು, ಪ್ರ–೨೦೦೩.
- ಭದ್ರಗಿರಿ ಅಚ್ಯುತದಾಸರು
  ಶ್ರೀಹರಿಕಥಾಮೃತ ಸಿಂಧು (ಸಂಪುಟ–೧,೨,೩)ಶ್ರೀಸುಧೀಂದ್ರ ಪ್ರಕಾಶನ, ೮ ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು, ಪ್ರ–೧೯೯೨.
- ಭದ್ರಗಿರಿ ಅಚ್ಯುತದಾಸರು
  ಗೀತಾರ್ಥ ಚಿಂತನೆ : ಪ್ರಕಾಶಕರು ಶ್ರೀಸುಧೀಂದ್ರ ಪಬ್ಲಿಕೇಷನ್, ೮ ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು, ಪ್ರ–೨೦೦೪.
- ಮಲ್ಲೇಪುರಂ ಜಿ. ವೆಂಕಟೇಶ
  ತೌಲನಿಕ ಸಾಹಿತ್ಯಾಧ್ಯಯನ, ಪ್ರಕಾಶನ: ತ.ವೆಂ ಸ್ಮಾರಕ ಗ್ರಂಥಮಾಲೆ, ಮೈಸೂರು, ಪ್ರ–೨೦೦೮.
- ಮುರಳೀಧರ ಎಚ್. ಎನ್.
  ತಂಬೂರಿ ಮೀಟಿದವ.....,ಅಂಕಿತ ಪುಸ್ತಕ, ಬಸವನಗುಡಿ, ಬೆಂಗಳೂರು, ಪ್ರ–೨೦೦೫.
- ಮುರಳೀಧರ ಎಚ್. ಎನ್.
  ಈ ಪರಿಯ ಸೊಬಗು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಪ್ರ–೨೦೧೦.
- ರಹಮತ್ ತರೀಕೆರೆ
  ಕನ್ನಡ ಸಂಶೋಧನೆ : ತಾತ್ವಿಕ ವಿಚಾರ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರ–೨೦೦೭.
- ರಹಮತ್ ತರೀಕೆರೆ
  ಕರ್ನಾಟಕದ ನಾಥಪಂಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪ್ರ–೨೦೦೬.

- ರಾಮಚಂದ್ರ ರಾವ್. ಸಾ. ಕೃ
  ಪೂರ್ಣಪ್ರಜ್ಞ ಪ್ರಶಸ್ತಿ, ಗೀತಾ ಬುಕ್ ಹೌಸ್, ಮೈಸೂರು, ೧೯೬೮.
- ರಾಮಚಂದ್ರ ರಾವ್. ಸಾ. ಕೃ
  ಪುರುಷಸೂಕ್ತ, ಸಾತ್ವಿಕ್ ಪಬ್ಲಿಕೇಷನ್ಸ್, ಬೆಂಗಳೂರು. ಪ್ರ-೨೦೦೩.
- ರಾಮಲಿಂಗಪ್ಪ ಟಿ. ಬೇಗೂರು
  ತೌಲನಿಕ ಸಾಹಿತ್ಯ, ಪ್ರಕಾಶಕರು : ಅಧ್ಯಯನ ಮಂಡಲ, ಬಸವನಗುಡಿ, ಬೆಂಗಳೂರು, ಪ್ರ-೨೦೦೮.
- ರಾಮಚಂದ್ರ ಶಾಸ್ತ್ರೀ, ಗುಂಜೂರು.
  ಶ್ರೀದುರ್ಗಾಸಪ್ತಶತೀ, ಶ್ರೀನಿಧಿ ಪಬ್ಲಿಕೇಶನ್ಸ್, ಬೆಂಗಳೂರು, ಪ್ರ-೧೯೯೯.
- ರಂಗನಾಥ ರಾಮಚಂದ್ರ ದಿವಾಕರ.
  ವಚನಶಾಸ್ತ್ರರಹಸ್ಯ, ಪ್ರಕಾಶಕರು : ಅಧ್ಯಾತ್ಮ ಕಾರ್ಯಾಲಯ, ಹುಬ್ಬಳ್ಳಿ, ಪ್ರ-೧೯೩೬.
- ಲಕ್ಷ್ಮೀನಾರಾಯಣ ಭಟ್ಟ, ಎನ್. ಎಸ್. ಮತ್ತು ಕನ್ನಡಾನುವಾದ ಮಂಡಳಿ
  ಶ್ರೀಮದ್ಭಾಗವತಮ್, ಪ್ರಕಾಶಕರು : ಭಕ್ತಿವೇದಾಂತ ಬುಕ್ ಟ್ರಸ್ಟ್. ಇಸ್ಕಾನ್, ಬೆಂಗಳೂರು, ಪ್ರ-೧೯೯೬.
- ಲಕ್ಷ್ಮಣದಾಸ ವೇಲಣಕರ್,
  ಶ್ರೀಮದ್ಭಾಗವತ ಮಹಾಪುರಾಣಂ, ಗೀತಾ ಪ್ರೆಸ್, ಗೋರಕಪುರ, ಪ್ರ-೨೦೦೬.
- ವರದರಾಜ ರಾವ್,
  ಹರಿದಾಸ ಸಾಹಿತ್ಯ ಸಾರ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಪ್ರ-೧೯೮೬.
- ವಸಂತ ಭಾರದ್ವಾಜ. ಕಬ್ಬಿನಾಲೆ
  ಪಳಂತುಳು ಕಾವ್ಯ, ಮಧುಮತಿ ಪ್ರಕಾಶನ, ೨೦೦೧.
- ವಸಂತ ಭಾರದ್ವಾಜ ಕಬ್ಬಿನಾಲೆ,
  ಯಕ್ಷಗಾನ ಛಂದಸ್ಸು-ಒಂದು ಅಧ್ಯಯನ, ಜಾನಪದ ರಂಗಕಲೆಗಳ ಅಧ್ಯಯನ, ಉಡುಪಿ, ೧೯೯೮.
- ವಾಸುದೇವ ಅಗ್ನಿಹೋತ್ರಿ
  ಆನ್ವಯಿಕ ದಾಸಸಾಹಿತ್ಯ, ಸಂಸ್ಕೃತಿ ಪ್ರಕಾಶನ,ವಾಹಿನಿ ವಿಹಾರ, ಬಸವನಗರ, ಸೇಡಂ, ಗುಲ್ಬರ್ಗಾಜಿಲ್ಲೆ, ಪ್ರ-೨೦೦೫.
- ವೆಂಕಟರಾಜ ಪುಣಿಚಿತ್ತಾಯ
  ವಿಷ್ಣುತುಂಗನ ಶ್ರೀಭಾಗವತೋ, ಪ್ರಕಾಶಕರು, ಮಂಗಳಗಂಗೋತ್ರಿ, ಮಂಗಳೂರು, ಪ್ರ-೧೯೮೪.
- ಶೇಷ ನವರತ್ನ
  ಋಗ್ವೇದ ಒಂದು ಅಧ್ಯಯನ, ಸಮಾಜ ಪುಸ್ತಕಾಲಯ, ಧಾರವಾಡ, ಪ್ರ-೨೦೦೧.
- ಶೇಷ ನವರತ್ನ
  ಅಥರ್ವವೇದ, ಸಮಾಜ ಪುಸ್ತಕಾಲಯ, ಧಾರವಾಡ, ಪ್ರ-೨೦೦೩.
- ಶೇಷಗಿರಿ ರಾವ್. ಎಲ್. ಎಸ್.
  ಶ್ರೀಭಗವದ್ಗೀತಾ ಯಥಾರೂಪ(ಕನ್ನಡಾನುವಾದ), ಪ್ರಕಾಶಕರು : ಭಕ್ತಿವೇದಾಂತ ಬುಕ್ ಟ್ರಸ್ಟ್. ಇಸ್ಕಾನ್, ಬೆಂಗಳೂರು, ಪ್ರ-೨೦೦೬.

- ಶೇಷಗಿರಿ ರಾವ್, ಎಲ್. ಎಸ್
  ಕೃಷ್ಣ–ದೇವೋತ್ತಮ ಪರಮಪುರುಷ (ಕನ್ನಡಾನುವಾದ), ಪ್ರಕಾಶಕರು: ಭಕ್ತಿವೇದಾಂತ ಬುಕ್ ಟ್ರಸ್ಟ್. ಇಸ್ಕಾನ್, ಬೆಂಗಳೂರು, ಪ್ರ–೧೯೯೯.
- ಶೇಷಗಿರಿ ರಾವ್, ಎಲ್.ಎಸ್.
  ಹರಿನಾಮವ ನೆನೆದರೆ...,(ಕನ್ನಡಾನುವಾದ),ಪ್ರಕಾಶಕರು:ಭಕ್ತಿವೇದಾಂತ ಬುಕ್‌ಟ್ರಸ್ಟ್.ಇಸ್ಕಾನ್,ಬೆಂಗಳೂರು,ಪ್ರ–೨೦೦೬.
- ಶ್ರೀನಿವಾಸಾಚಾರ್ಯ ಮಾನಕರಿ
  ಹರಿದಾಸಸಾಹಿತ್ಯ–ಶ್ರೀಮದ್ಭಾಗವತ: ಋಣ ಮತ್ತು ವೃದ್ಧಿ, ಪ್ರಕಾಶಕರು: ರಾಜಾ. ಎಸ್. ರಾಜಗೋಪಾಲಾಚಾರ್ಯ, ಶ್ರೀರಾಘವೇಂದ್ರ ಸ್ವಾಮಿಗಳವರ ಮಠ, ಮಂತ್ರಾಲಯ, ಪ್ರ–೨೦೦೬.
- ಶ್ರೀಧರ್. ಬಿ. ವಿ.
  ಶ್ರೀ ರೂಪ ಗೋಸ್ವಾಮಿಯವರ ಶ್ರೀ ಉಪದೇಶಾಮೃತ, ಪ್ರಕಾಶಕರು : ಭಕ್ತಿವೇದಾಂತ ಬುಕ್ ಟ್ರಸ್ಟ್. ಇಸ್ಕಾನ್, ಬೆಂಗಳೂರು, ಮುದ್ರಣ–೧೯೯೮.
- ಸಮಗ್ರ ದಾಸಸಾಹಿತ್ಯ (೧ ರಿಂದ ೩೫ ಸಂಪುಟಗಳು)
  ಸಂ: ವಿವಿಧ ವಿದ್ವಾಂಸರು, ಕನ್ನದ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ಪ್ರ–೨೦೦೩.
- ಸತ್ಯನಾರಾಯಣ. ರಾ.
  ಪುಂಡರೀಕಮಾಲಾ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು. ಪ್ರ–೧೯೮೯.
- ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮೀಜಿ
  ಮುಂಡಕೋಪನಿತ್ತು, ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ, ಪ್ರ–೨೦೦೯.
- ಸದಾಶಿವ ಕಲ್ಕೂರ ಕೂರಾಡಿ,
  ಆಶುವೈಭವ, ಯಕ್ಷಗಾನ ಕಲಾರಂಗ, ಉಡುಪಿ, ೧೯೮೯.
- ಸ್ವಾಮಿ ಹರ್ಷಾನಂದ
  ದೇವರ್ಷಿ ನಾರದರ ಭಕ್ತಿಸೂತ್ರಗಳು, ಶ್ರೀರಾಮಕೃಷ್ಣಾಶ್ರಮ, ಯಾದಗಿರಿ, ಮೈಸೂರು, ಪ್ರ–೨೦೦೦.
- ಸಿ.ಪಿ.ಕೆ.
  ಕನ್ನಡ ಛಂದಸ್ಸಿನ ಚರಿತ್ರೆ, ಸಂಪುಟ ೧, ಕನ್ನಡ ಅಧ್ಯಯನ ಸಂಸ್ಥೆ,ಮೈಸೂರು
  ವಿ.ನಿಲಯ,ಮೈಸೂರು,೧೯೮೦.
- ಸುರೇಶ್ ನಾಗಲಮಡಿಕೆ.
  ಮುತ್ತುಬಂದಿದೆಕೇರಿಗೆ–ಕನಕದಾಸರು:ಸಾಂಸ್ಕೃತಿಕ ಅಧ್ಯಯನ, ಶ್ರೀನಿವಾಸ ಪ್ರಕಾಶನ,ಬೆಂಗಳೂರು,ಪ್ರ–೨೦೧೧
- ಸಂತೋಷ ಕುಮಾರ ಗುಲ್ವಾಡಿ, ನಿ. ಮುರಾರಿ ಬಲ್ಲಾಳ.
  ಭಕ್ತಿಭಾರತೀ (ಸ್ವತಂತ್ರ ಭಾರತದ ಸ್ವರ್ಣೋತ್ಸವ ಕಾಣಿಕೆ) ಸಂಗೀತ ಸಭಾ ಉಡುಪಿ, ರಾಷ್ಟ್ರೀಯ ಪುರಂದರ ಉತ್ಸವ, ಉಡುಪಿ, ಪ್ರ–೧೯೯೭.

- ಹನುಮಂತ ರಾವ್. ಜಿ.
  ಋಗ್ವೇದ ಸೂಕ್ತಗಳು, ಡಿ.ವಿ.ಕೆ. ಪಬ್ಲಿಕೇಷನ್ಸ್, ಮೈಸೂರು, ಪ್ರ–೨೦೦೪.
- ಹಾ.ಮಾ.ನಾಯಕ
  ಕನ್ನಡ ಸಾಹಿತ್ಯ ಚರಿತ್ರೆ, ಪ್ರಸಾರಾಂಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು, ಪ್ರ–೧೯೭೯.
- ಹೊಸಕೆರೆ ಚಿದಂಬರಯ್ಯ.
  ವೇದಾಂತದ ರೂಪ ರೇಖೆ (ಬ್ರಹ್ಮ–ಜೀವ–ಜಗತ್ತು), ಪ್ರಕಾಶಕರು : ಅದ್ವೈತ ವೇದಾಂತ ಪ್ರಕಾಶನ, ಸಿ. ರಾಮರಾವ್,ನಂ.೧೫, ೩ನೇ ಎ ಮುಖ್ಯರಸ್ತೆ, ಜಯನಗರ, ಬೆಂಗಳೂರು, ಪ್ರ–?(ನಮೂದಿಸಿಲ್ಲ).

ಪರಾಮರ್ಷಿತ ಪತ್ರಿಕೆಗಳು

ವಾರ ಪತ್ರಿಕೆಗಳು

- ತರಂಗ, ಸಪ್ಟೆಂಬರ್ ೫. ೨೦೦೨,
- ತರಂಗ, ಜನವರಿ ೧೯. ೨೦೧೨.

ಭಕ್ತಿವೇದಾಂತ ದರ್ಶನ: ಸುವರ್ಣ ಕರ್ನಾಟಕ ವಿಶೇಷ ಸಂಚಿಕೆ

- ಏಪ್ರಿಲ್ ೨೦೦೯. ಭಕ್ತಿವೇದಾಂತ ಬುಕ್ ಟ್ರಸ್ಟ್. ಇಸ್ಕಾನ್, ಬೆಂಗಳೂರು.

ಮಾಸ ಪತ್ರಿಕೆಗಳು

- ಭಕ್ತಿವೇದಾಂತ ದರ್ಶನ ಮಾಸ ಪತ್ರಿಕೆ–ಸಪ್ಟೆಂಬರ್/ನವೆಂಬರ್/ದಶಂಬರ್–೨೦೦೩,
- ಭಕ್ತಿವೇದಾಂತ ದರ್ಶನ ಮಾಸ ಪತ್ರಿಕೆ–ಅಗಸ್ಟ್/ಸಪ್ಟೆಂಬರ್/ನವೆಂಬರ್–೨೦೦೫,
- ಭಕ್ತಿವೇದಾಂತ ದರ್ಶನ ಮಾಸ ಪತ್ರಿಕೆ–ಜನವರಿ–೨೦೦೬,
- ಭಕ್ತಿವೇದಾಂತ ದರ್ಶನ ಮಾಸ ಪತ್ರಿಕೆ–ಜನವರಿ/ಅಕ್ಟೋಬರ್/ನವೆಂಬರ್/ದಶಂಬರ್ ೨೦೦೭,
- ಭಕ್ತಿವೇದಾಂತ ದರ್ಶನ ಮಾಸ ಪತ್ರಿಕೆ–ಜನವರಿ/ಮಾರ್ಚ್/ಜೂನ್/ಜುಲೈ ೨೦೦೮,
- ಭಕ್ತಿವೇದಾಂತ ದರ್ಶನ ಮಾಸ ಪತ್ರಿಕೆ–ದಶಂಬರ ೨೦೦೯,
- ಭಕ್ತಿವೇದಾಂತ ದರ್ಶನ ಮಾಸ ಪತ್ರಿಕೆ–ಜನವರಿ/ಫೆಬ್ರವರಿ/ದಶಂಬರ ೨೦೧೦,

ಮರಾಠಿ/ಹಿಂದಿ ಪರಾಮರ್ಶಿತ ಗ್ರಂಥಗಳು

- ಕೇಲಕರ. ರ. ಶಾ.
  ಮರಾಠೀ_ ಹಿಂದೀ ಕೃಷ್ಣ ಕಾವ್ಯ ಕಾ ತುಲನಾತ್ಮಕ ಅಧ್ಯಯನ, ಅಕ್ಷರ ಪ್ರಕಾಶನ, ದೆಹಲಿ,೧೯೯೬.
- ಶಾಲಿನಿ ಚಾವಡೆಕರ,
  ಸಂತ ಬಹಿಣಾಬಾಯಿಚಾ ಗಾಥಾ, ಕಾಂಟಿನೆಂಟಲ್ ಪ್ರಕಾಶನ, ಪುಣೆ, ಪ್ರ–೨೦೦೩.
- ಶ್ರೀ ಸಕಲ ಸಂತವಾಣಿ
  ಗೀತಾಪ್ರೆಸ್. ಗೋರಖಪುರ, ಪ್ರ–೨೦೦೮.

ಆಂಗ್ಲ ಭಾಷಾಕೃತಿ ಮತ್ತು ಲೇಖನಗಳು

- Das Gupta. S.N.
  A History of Indian philosophy,Vol-1, Cambridge, 1992.
- Epigraphia Indica, (vol-14), Publications: Director, Office of Director General Archiological servey of India, 1917& 1918.
- Panchamukhi. R.S.
  Karnatak Inscriptions (vol 1 Badami No.2) Kannada Reserch Institute, Dharwar, 1941 & 1951.
- Radhakrishnan S.
  Indian Philosophy, Volume 1, Allen & Unwin, London, 1923.
- Swami Tapasyananda .
  Sri Nimbaarka (His Life, Religeon & Philosophy) Sri Ramakrishna Math, Mylapore, Madras-04.-1992
- Swami Tapasyananda.
  Sri Vallabhacarya (His Life, Religeon & Philosophy) Sri Ramakrishna Math, Mylapore, Madras-04. -1992.
- The Cultural Heritage of India. Vol-1-4, Institute of Calture, Culcutta, 1958.

****